# ಕರ್ನಾಟಕ ವಿಧಾನ ಪರಿಷತ್ತು

## ಮಂಗಳವಾರ, 27ನೇ ಮಾರ್ಚ್ 2012

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ. ಹೆಚ್. ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

# 1. ಪ್ರಶ್ನೋತ್ತರ

## ರಾಷ್ಟ್ರೀಯ ಮೀನುಗಾರಿಕೆ ಮಹಾಮಂಡಳದಿಂದ ರಾಜ್ಯಗಳಿಗೆ ಬಂದ ಅನುದಾನದ ಬಗ್ಗೆ

**127; ಶ್ರೀ ಆರ್.ವಿ. ವೆಂಕಟೇಶ್ (ವಿಧಾನಸಭೆಯಿಂದ ಚುನಾಯಿತರಾದವರು)**

ಅ) ರಾಷ್ಟ್ರೀಯ ಮೀನುಗಾರಿಕೆ ಮಹಾಮಂಡಳದಿಂದ ರಾಜ್ಯಕ್ಕೆ ಕಳೆದ 5 ವರ್ಷಗಳಿಂದ ಎಷ್ಟು ಅನುದಾನ ಬಿಡುಗಡೆಯಾಗಿದೆ;

ಆ) ಈ ಅನುದಾನವು ಯಾವ ಯಾವ ಯೋಜನೆಗಳಿಗೆ ಉಪಯೋಗವಾಗಿದೆ? (ಜಿಲ್ಲಾವಾರು ಹಾಗೂ ವರ್ಷವಾರು ವಿವರಗಳನ್ನು ನೀಡುವುದು)

**ಶ್ರೀ ಆನಂದ ವಸಂತ ಅಸ್ನೋಟಿಕರ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):**

ಅ) ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯಿಂದ ರಾಜ್ಯಕ್ಕೆ ಕಳೆದ 5 ವರ್ಷಗಳಿಂದ ಒಟ್ಟು ರೂ. **3838.104** ಲಕ್ಷ ಅನುದಾನ ಬಿಡುಗಡೆಯಾಗಿದ್ದು, ವಿವರ ಈ ಕೆಳಗಿನಂತಿದೆ:

| **ವರ್ಷ** | **ಅನುದಾನ (ರೂ. ಲಕ್ಷ)** |
|---|---|
| 2007–08 | 225.57 |
| 2008–09 | 626.69 |
| 2009–10 | 1208.81 |
| 2010–11 | 1378.78 |
| 2011–12 (ಫೆಬ್ರವರಿ–2012 ರ ಅಂತ್ಯದವರೆಗೆ) | 398.254 |

**ಆ)** ಯೋಜನೆಗಳಿಗೆ ಉಪಯೋಗಿಸಿದ ಜಿಲ್ಲಾವಾರು ಹಾಗೂ ವರ್ಷವಾರು ಅನುದಾನದ ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ.

**ಅನುಬಂಧ**

**ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯಿಂದ ಕಳೆದ 5 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರಗಳು**

| **ವರ್ಷ** | **ಯೋಜನೆ** | **ಜಿಲ್ಲೆ (ವೆಚ್ಚ ರೂ.ಲಕ್ಷಗಳಲ್ಲಿ)** | **ಒಟ್ಟು ವೆಚ್ಚ (ರೂ.ಲಕ್ಷ)** |
|---|---|---|---|
| 2007–08 | ಮೀನು ಕೃಷಿಕೊಳ ನಿರ್ಮಾಣಕ್ಕೆ ಸಹಾಯಧನ | ಬಳ್ಳಾರಿ (25.32) ಮತ್ತು ರಾಯಚೂರು (15.32) ಜಿಲ್ಲೆಗಳು | 40.64 |
| | ಜಲಾಶಯ ಅಭಿವೃದ್ಧಿ ಯೋಜನೆ | ಚಿತ್ರದುರ್ಗ (20.63), ಶಿವಮೊಗ್ಗ (7.48), ತುಮಕೂರು (19.16), ಬೆಳಗಾವಿ (24.14), ಮೈಸೂರು (7.92), ಚಾಮರಾಜನಗರ (10.80), ಮಂಡ್ಯ (5.13), ರಾಮನಗರ (3.11), ಹಾಸನ (6.06), ದಾವಣಗೆರೆ (6.28), ರಾಯಚೂರು (2.89) | 113.60 |
| | ಕರಾವಳಿ ಜಲಕೃಷಿಯಲ್ಲಿ ತರಬೇತಿ | ಉಡುಪಿ (2.6175) | 2.6175 |
| | | **ಒಟ್ಟು** | **156.8575** |

| | | | |
|---|---|---|---|
| 2008–09 | ಮೀನು ಕೃಷಿಕೊಳ ನಿರ್ಮಾಣಕ್ಕೆ ಸಹಾಯಧನ | ಬಳ್ಳಾರಿ (27.20) ಮತ್ತು ರಾಯಚೂರು (10.42) | 37.62 |
| | ಕರಾವಳಿ ಜಲಕೃಷಿಯಲ್ಲಿ ತರಬೇತಿ | ಉಡುಪಿ (2.59) | 2.590 |
| | ಕಾರವಾರ ಮೀನುಗಾರಿಕೆ ಬಂದರು ನವೀಕರಣ | ಉತ್ತರ ಕನ್ನಡ (115.37) | 115.37 |
| | ಜಲಾಶಯ ಅಭಿವೃದ್ಧಿ ಯೋಜನೆ | ಚಿಕ್ಕಮಗಳೂರು (31.1), ಚಿತ್ರದುರ್ಗ (16.21), ಶಿವಮೊಗ್ಗ (132.48), ತುಮಕೂರು (45.14), ಬೆಳಗಾವಿ (40.9), ಮೈಸೂರು (15.58), ಮಂಡ್ಯ (22.07), ಹಾಸನ (28.11), ದಾವಣಗೆರೆ (14.66), ಹಾವೇರಿ (3.69), ಗದಗ (1.8), ಬಿಜಾಪುರ (60.04), ಬಾಗಲಕೋಟೆ (5.49), ಬಳ್ಳಾರಿ (22.77), ಬೀದರ್ (31.07) | 471.11 |
| | | **ಒಟ್ಟು** | **626.69** |

| | | | |
|---|---|---|---|
| 2009–10 | ಮೀನು ಕೃಷಿಕೊಳ ನಿರ್ಮಾಣಕ್ಕೆ ಸಹಾಯಧನ | ಬಳ್ಳಾರಿ (41.82), ರಾಯಚೂರು (91.54), ಶಿವಮೊಗ್ಗ (4.29), ಬೀದರ್ (2.42), ಬಾಗಲಕೋಟೆ (5.69), ತುಮಕೂರು (2.21), ಗುಲ್ಬರ್ಗಾ (2.45), ಚಿತ್ರದುರ್ಗ (2.35), ಚಾಮರಾಜನಗರ (2.18), ಬೆಳಗಾವಿ (2.17), ದಾವಣಗೆರೆ (1.56), ಕಾರವಾರ (1.41), ರಾಮನಗರ (1.05), ಚಿಕ್ಕಬಳ್ಳಾಪುರ (0.67), ಮೈಸೂರು (0.28) | 162.09 |
| | ಜಲಾಶಯ ಅಭಿವೃದ್ಧಿ ಯೋಜನೆ | ಚಿಕ್ಕಮಗಳೂರು (40.52) ಚಿತ್ರದುರ್ಗ (7.98) ಶಿವಮೊಗ್ಗ (82.11), ತುಮಕೂರು(17.9), ಉತ್ತರಕನ್ನಡ (4.49), ಬೆಳಗಾವಿ(5.45), ಮೈಸೂರು(13.98), ಮಂಡ್ಯ(2.00), ಗುಲ್ಬರ್ಗಾ(39.08), ದಾವಣಗೆರೆ(7.93), ರಾಮನಗರ(7.97), ಬಳ್ಳಾರಿ(24.1), ಬೀದರ್(21.45), ಚಾಮರಾಜನಗರ (2.00), ಕೋಲಾರ (2.06), | 416.56 |

| | | | |
|---|---|---|---|
| | | ಧಾರವಾಡ (5.06),<br>ಚಿಕ್ಕಬಳ್ಳಾಪುರ (1.00),<br>ರಾಯಚೂರು (1.49). | |
| | ಮೀನುಮಾರುಕಟ್ಟೆಗಳ ನಿರ್ಮಾಣಕ್ಕೆ ಸಹಾಯ | ಉಡುಪಿ (256.66),<br>ದಕ್ಷಿಣಕನ್ನಡ (124.84)<br>ಉತ್ತರಕನ್ನಡ (162.01)<br>ಬೆಳಗಾವಿ (5.45)<br>ಮೈಸೂರು (13.08)<br>ಮಂಡ್ಯ (2.00)<br>ಗುಲ್ಬರ್ಗಾ (39.08)<br>ದಾವಣಗೆರೆ (7.93)<br>ಹಾಸನ (12.99)<br>ಬಿಜಾಪುರ (117)<br>ರಾಮನಗರ (7.97)<br>ಬಳ್ಳಾರಿ (24.1)<br>ಬೀದರ್ (21.45)<br>ಚಾಮರಾಜನಗರ (2.00)<br>ಕೋಲಾರ (2.06)<br>ಧಾರವಾಡ (5.06)<br>ಚಿಕ್ಕಬಳ್ಳಾಪುರ (1.00)<br>ರಾಯಚೂರು (1.49) | 543.51 |
| | ಕರಾವಳಿ ಜಲಕೃಷಿಯಲ್ಲಿ ತರಬೇತಿ | ಉಡುಪಿ | 1.04 |
| | ಹೊನ್ನಾವರ ಮೀನುಗಾರಿಕೆ ಬಂದರು | ಉತ್ತರ ಕನ್ನಡ | 348.79 |

| | | | |
|---|---|---|---|
| | ನವೀಕರಣ | | |
| | ಮೀನುಕೃಷಿ ತರಬೇತಿ | ಶಿವಮೊಗ್ಗ | 0.79 |
| | ಮೀನುಮರಿ ಕೇಂದ್ರಗಳ ನವೀಕರಣ (ಕೆ.ಸಿ.ಎಫ್., ಮೈಸೂರು) | ಮೈಸೂರು | 32.07 |
| 2010–11 | ಮೀನುಕೃಷಿ ತರಬೇತಿ | ಶಿವಮೊಗ್ಗ (0.87)<br>ತುಮಕೂರು (0.44)<br>ಬೆಂಗಳೂರು (0.44)<br>ಕೋಲಾರ (0.44)<br>ರಾಯಚೂರು (0.87)<br>ಬಳ್ಳಾರಿ (0.87)<br>ಮೈಸೂರು (0.87)<br>ಹಾಸನ (0.44)<br>ಮಂಡ್ಯ (0.44)<br>ಚಿಕ್ಕಮಗಳೂರು (0.44)<br>ಬೆಳಗಾವಿ (0.44)<br>ಧಾರವಾಡ (0.43) | |
| | ಜಲಾಶಯ ಅಭಿವೃದ್ಧಿ ಯೋಜನೆ | ಬೆಂಗಳೂರು ನಗರ(16.80), ಬೆಂಗಳೂರು ಗ್ರಾಂ. (0.75), ಬೆಳಗಾವಿ (48), ಬಳ್ಳಾರಿ (30.45), ಬೀದರ್ (23.72), ಬಿಜಾಪುರ (84.76), ಚಾಮರಾಜನಗರ (10.35), ಚಿಕ್ಕಬಳ್ಳಾಪುರ (13.43), ಚಿಕ್ಕಮಗಳೂರು | |

| | | | |
|---|---|---|---|
| | | (52.49), ಚಿತ್ರದುರ್ಗ (98.70), ದಾವಣಗೆರೆ (29.50), ಧಾರವಾಡ (1.31), ಗದಗ (1.99), ಗುಲ್ಬರ್ಗಾ (16.48), ಹಾಸನ (43.21), ಹಾವೇರಿ (10.75), ಕೊಡಗು (10.48), ಕೋಲಾರ (13.41), ಕೊಪ್ಪಳ (14.55), ಮಂಡ್ಯ (22.48), ಮೈಸೂರು (13.57), ರಾಯಚೂರು (14.31), ರಾಮನಗರ (9.04), ಶಿವಮೊಗ್ಗ (89.71), ತುಮಕೂರು (99), ಉತ್ತರಕನ್ನಡ (23.58), ಯಾದಗಿರಿ (10.46) | |
| | ಮೀನು ಮಾರುಕಟ್ಟೆಗಳ ನಿರ್ಮಾಣಕ್ಕೆ ಸಹಾಯ | ಉಡುಪಿ (256.66), ದಕ್ಷಿಣ ಕನ್ನಡ (124.84), ಉತ್ತರ ಕನ್ನಡ (162.01) | |
| | ಮತ್ಸ್ಯಮೇಳ ಆಯೋಜನೆ | ಬೆಂಗಳೂರು | 25.00 |
| | | **ಒಟ್ಟು** | **1378.78** |
| 2011–12 | ಜಲಾಶಯ ಅಭಿವೃದ್ಧಿ ಯೋಜನೆ | ಬೆಂಗಳೂರು ನಗರ (7.00), ಬೆಳಗಾವಿ (17.71), ಬಳ್ಳಾರಿ (2.57), ಬೀದರ್ (7.09), ಬಿಜಾಪುರ (27.50), ಚಿಕ್ಕಬಳ್ಳಾಪುರ (1.15), | 234.574 |

| | | | |
|---|---|---|---|
| | | ಚಿಕ್ಕಮಗಳೂರು (15.50), ಚಿತ್ರದುರ್ಗ (10.80), ದಾವಣಗೆರೆ (7.43), ಗುಲ್ಬರ್ಗಾ (6.08), ಹಾಸನ (12.78), ಕೊಡಗು (4.70), ಮಂಡ್ಯ (40.08), ಮೈಸೂರು (7.07), ಶಿವಮೊಗ್ಗ (39.50), ತುಮಕೂರು (14.304), ಉತ್ತರಕನ್ನಡ (10.19), ಕೊಪ್ಪಳ (3.12) | |
| | ಮೀನು ಮಾರಾಟ ಮಳಿಗೆ ಸಹಾಯಧನ | ಬೆಂಗಳೂರು (2.50), ದಕ್ಷಿಣ ಕನ್ನಡ (1.47) | 3.97 |
| | ಮೀನುಮಾರುಕಟ್ಟೆಗಳ ನಿರ್ಮಾಣಕ್ಕೆ ಸಹಾಯಧನ | ಮಂಡ್ಯ | 45.00 |
| | ಪಂಗೇಶಿಯಸ್ ತಳಿ ಮೀನು ಕೃಷಿಗೆ ಸಹಾಯಧನ | ಬಳ್ಳಾರಿ | 97.96 |
| | ಮೀನುಮರಿ ಕೇಂದ್ರ ನಿರ್ಮಾಣ (ಕೃ.ವಿ.ವಿ., ರಾಯಚೂರು) | ರಾಯಚೂರು | 15.75 |
| | ಅಲಂಕಾರಿಕ ಮೀನುಕೃಷಿಗೆ ಸಹಾಯಧನ | ಚಿಕ್ಕಬಳ್ಳಾಪುರ | 1.00 |
| | | **ಒಟ್ಟು** | **398.254** |

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ರಾಷ್ಟ್ರೀಯ ಮೀನುಗಾರಿಕೆ ಮಹಾಮಂಡಳಿ ರಾಜ್ಯಕ್ಕೆ ಕಳೆದ ಐದು ವರ್ಷಗಳಿಂದ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ ಎಂದು ಕೇಳಿರುವಂತಹ ಪ್ರಶ್ನೆಗೆ 3,838.104 ಲಕ್ಷ ರೂಪಾಯಿಗಳೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಉತ್ತರದಲ್ಲಿ ನೋಡಿದಾಗ ಆ ಹಣದ ಮೊತ್ತದಲ್ಲಿ ಬಹುತೇಕದಷ್ಟು ಎಲ್ಲಾ ಜಿಲ್ಲೆಗಳಲ್ಲಿ ಜಲಾಶಯಗಳ ಅಭಿವೃದ್ಧಿ ಯೋಜನೆಗೆ ಉಪಯೋಗಿಸಿ ಕೊಂಡಿರುವುದನ್ನು ತೋರಿಸಿದ್ದಾರೆ. ಜಲಾಶಯ ಅಭಿವೃದ್ಧಿ ಯೋಜನೆ ಏನೆಂದು ಸಚಿವರು ಹೇಳಬೇಕು. ಇಷ್ಟೊಂದು ಮೊತ್ತವನ್ನು ಬರೀ ಜಲಾಶಯ ಅಭಿವೃದ್ಧಿಗೆ ಉಪಯೋಗಿಸಿರುವುದರಿಂದ ಏನು ಲಾಭವಾಗಿದೆ, ಮೀನುಗಾರಿಕೆಗೆ ಏನು ಲಾಭವಾಗಿದೆ, ಮತ್ತೆ ಜನರಿಗೆ ಏನು ಲಾಭವಾಗಿದೆ ಎನ್ನುವುದನ್ನೂ ಕೂಡ ಹೇಳಬೇಕು, ಹಾಗೂ ನಮ್ಮ ರಾಜ್ಯದಲ್ಲಿ 300 ಕಿಲೋ ಮೀಟರ್‌ನಷ್ಟು ಕರಾವಳಿ ಪ್ರದೇಶ ಇದೆ ಜೊತೆಗೆ 5,60,000 ಎಕರೆಯಷ್ಟು ಒಳನಾಡು ನೀರು ಪ್ರದೇಶ ಇದೆ. ಇದರಲ್ಲಿ ಯಾವ ರೀತಿಯಾಗಿ ಕಾರ್ಯಕ್ರಮಗಳನ್ನು ಇಲಾಖೆಯಿಂದ ಹಾಕಿಕೊಂಡಿದ್ದಾರೆ. ಜೊತೆಗೆ ಈ ವರ್ಷದ ಬಜೆಟ್‌ನಲ್ಲಿಯೂ ಸಹ ಸಾಕಷ್ಟು ಹಣವನ್ನು ಕೂಡ ಇದಕ್ಕೆ ಬಿಡುಗಡೆ ಮಾಡಿರುವುದನ್ನು ಕೂಡ ತೋರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇದರ ಜೊತೆಗೆ ಬಜೆಟ್‌ನಲ್ಲಿ ಹೇಳಿರತಕ್ಕಂತಹ ಹಣವನ್ನು ಯಾವ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕು ಎನ್ನುವುದು ಒಂದು, ಮತ್ತೆ ನಮ್ಮ ರಾಜ್ಯದಲ್ಲಿ ಪೌಷ್ಠಿಕಾಂಶದ ಕೊರತೆಯಿಂದ ಮಹಿಳೆಯರು ಮತ್ತು ಮಕ್ಕಳು ಎಲ್ಲಾ ನರಳುತ್ತಿರುವಂತಹ ಹಿನ್ನೆಲೆಯಲ್ಲಿ ಮೀನುಗಾರಿಕೆಗೆ ಹೆಚ್ಚು ಒತ್ತು ಕೊಟ್ಟರೆ ಪೌಷ್ಠಿಕಾಂಶದ ಒಂದು ಸಮಸ್ಯೆ ಕೂಡ ಪರಿಹಾರವಾಗುತ್ತದೆ. ಮೀನು ಉತ್ಪಾದನೆಯನ್ನು ಮಾಡುವಂತಹ ಬಹುತೇಕ ರಾಜ್ಯಗಳಲ್ಲಿ ಮೀನನ್ನು ಒಂದು ಮಾಂಸಾಹಾರಿಯನ್ನಾಗಿ ನೋಡುವುದಿಲ್ಲ. ಅದನ್ನು ಸಸ್ಯಹಾರಿಯನ್ನಾಗಿಯೇ ನೋಡುತ್ತಾರೆ. ಆದ್ದರಿಂದ ಮೀನಿನಲ್ಲಿ ಅಧಿಕ ಪೌಷ್ಠಿಕಾಂಶಗಳು ಇರತಕ್ಕಂಥದ್ದು, ಮಕ್ಕಳಿಗಾಗಲಿ, ಸ್ತ್ರೀಯರಿಗಾಗಲಿ ಇವತ್ತು ಸರ್ಕಾರದಿಂದ ಊಟವನ್ನು ಒದಗಿಸುತ್ತಿದ್ದೇವೆ, ಅದರ ಜೊತೆಯಲ್ಲಿ

ಪ್ಯಾಕೇಜ್ ಆಗಿ ಇದನ್ನು ಕೊಡುವುದಕ್ಕಾಗುತ್ತದೆಯೇ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಬಂದರು ಮತ್ತು ಮೀನುಗಾರಿಗೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, ರಾಷ್ಟ್ರೀಯ ಮೀನುಗಾರಿಕೆಯ ಒಂದು ಸರ್ವತೋಮುಖ ಅಭಿವೃದ್ಧಿಗೋಸ್ಕರವಾಗಿ ಈ ರಾಷ್ಟ್ರೀಯ ಮೀನುಗಾರಿಕೆ ಮಹಾ ಮಂಡಳ 2006–07ನೇ ಸಾಲಿನಲ್ಲಿ ಹೈದರಾಬಾದ್ ಕೇಂದ್ರವಾಗಿ ಪ್ರಾರಂಭವಾಯಿತು. ಅದರ ಮೂಲ ಉದ್ದೇಶ ಮೀನುಗಾರಿಕೆ ಉತ್ಪಾದನೆಯ ಗುಣಮಟ್ಟವು ಮೀನುಗಾರಿಕೆಯಲ್ಲಿ ಹೆಚ್ಚಾಗಬೇಕು. ಮೀನುಗಾರರಿಗೆ ಉದ್ಯೋಗದ ಅವಕಾಶ ಹೆಚ್ಚೆಚ್ಚು ಆಗಬೇಕೆಂಬ ಉದ್ದೇಶದಿಂದ ಪ್ರಾರಂಭವಾಗಿ 2006–07ನೇ ಸಾಲಿನಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಮಹಾ ಮಂಡಳ ಕೆಲಸ ಕಾರ್ಯಗಳನ್ನು ಮಾಡುತ್ತಿದೆ. ಇದರಲ್ಲಿ ವಿಶೇಷವಾಗಿ ಸಮುದ್ರದಲ್ಲಿ ಮೀನುಗಾರಿಕೆಯನ್ನು ನಡೆಸುವಂಥದ್ದು ಕರಾವಳಿಯ ಮೂರು ಜಿಲ್ಲೆಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಇದ್ದೇ ಇದೆ. ಅದರ ಜೊತೆಯಲ್ಲಿ ಬೇರೆ ಬೇರೆ ಜಲಾಶಯಗಳಿವೆ. ನಾವು ವಿದ್ಯುತ್ ಉತ್ಪಾದನೆಯನ್ನು ಮಾಡುವಂತಹ ಘಟಕಗಳಿರಬಹುದು, ಬೇರೆ ಬೇರೆ ನೀರಾವರಿ ಘಟಕಗಳಿರಬಹುದು ಜಲಾಶಯಗಳಿದೆ. ನಾವು ಜಲ ಸಂಗ್ರಹಗಳನ್ನು ಯಾವ್ಯಾವ ಉದ್ದೇಶ ಗಳಿಗಾಗಿ ಮಾಡಿರುತ್ತೇವೆಯೋ ಅಲ್ಲಿಯೂ ಮೀನುಗಾರಿಕೆಯನ್ನು ಉತ್ಪಾದಿಸುವಂತಹ ಚಟುವಟಿಕೆಗಳನ್ನು ಪ್ರೋತ್ಸಾಹಿಸುವಂತಹ ಒಂದು ಚಟುವಟಿಕೆ ಇದೆ. ಮತ್ತೆ ಕೆರೆಗಳು ಕೊಳಗಳು ಈ ರೀತಿ ಬೇರೆ ಬೇರೆ ಎಲ್ಲವೂ ದೊಡ್ಡ ಪ್ರಮಾಣದಲ್ಲಿ ಇದ್ದೇ ಇದೆ. ಹಾಗಾಗಿ ಮೀನುಗಾರಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಇನ್ನಷ್ಟು ಹೆಚ್ಚು ಉದ್ಯೋಗಗಳನ್ನು ಸ್ವಾವಲಂಬಿಯನ್ನಾಗಿ ನಡೆಸುವುದಕ್ಕೆ ಬೇಕಾಗಿರುವಂತಹ ಮಹಾ ಮಂಡಳದ ಈ ಯೋಜನೆಗೆ ಬಹಳ ಪರಿಣಾಮಕಾರಿಯಾಗಿ ನಮ್ಮ ರಾಜ್ಯದಲ್ಲಿ ಬೆಳೆದಿದೆ. ಈಗಂತೂ ಈ ಜಲಾಶಯಗಳಿಗೆ ಮೀನುಗಾರರು 160 ಮೀನು ಕೃಷಿಯನ್ನು ಮಾಡುವಂಥವರು ಅವರ ಹೆಸರುಗಳನ್ನು ಇದರಲ್ಲಿ ನೋಂದಾಯಿಸಿಕೊಂಡು

ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಕಳೆದ ವರ್ಷ ನಮಗೆ 8 ಕೋಟಿ ರೂಪಾಯಿಗಳ ಹಣವನ್ನು ಎನ್‌ಎಫ್‌ಡಿಬಿ ಯಿಂದ ಬಂದಿತ್ತು. ನಾನು ಇನ್ನು ಹೆಚ್ಚಿನ ಹಣವನ್ನು ನಿರೀಕ್ಷೆ ಮಾಡಿದ್ದೆವು. ಈ ವರ್ಷವಂತೂ ನಮಗೆ 2.5 ಕೋಟಿ ರೂಪಾಯಿಗಳು ಮಾತ್ರ ಹಣ ಬಂದಿದೆ. ಹಾಗಾಗಿ ಇದರಲ್ಲಿ ಸ್ವಲ್ಪ ತೊಂದರೆಯಾಗಿದೆ. ಆದರೂ ಸಹಾ ರಾಜ್ಯ ಸರ್ಕಾರ ಸುಮಾರು 1.40 ಕೋಟಿ ರೂಪಾಯಿಗಳನ್ನು ತನ್ನ ಅನುದಾನದಲ್ಲಿ ಈ ಚಟುವಟಿಕೆಗಳಿಗೆ ಪ್ರೋತ್ಸಾಹಿಸುವುದರ ಮೂಲಕ ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿರು ವವರಿಗೆ ಪ್ರೋತ್ಸಾಹ ಕೊಡುವಂತಹ ಚಟುವಟಿಕೆಯನ್ನು ನಾವು ಮಾಡುತ್ತಿದ್ದೇವೆ. ಹಾಗಾಗಿ ಇದು ಬಹಳ ಒಳ್ಳೆಯ ರೀತಿಯಲ್ಲಿ ನಡೆಯುತ್ತಿದೆ. ಸಾಕಷ್ಟು ಆದಾಯ ಕೂಡ ಇದರಿಂದ ನಮಗೆ ಬರುತ್ತಿದೆ. ಒಳ್ಳೆಯ ಉದ್ಯೋಗಗಳು ಕೂಡ ಸಾಕಷ್ಟು ಹೆಚ್ಚಾಗಿದೆ. ನೀರಿನ ಸದ್ಬಳಕೆಯನ್ನು ಮಾಡಿಕೊಳ್ಳುವುದಕ್ಕೆ ಬೇರೆ ಬೇರೆ ರೀತಿಯಲ್ಲಿ ನಾವು ಮುಂದಾಗಿ ಅನೇಕರಿಗೆ ಉದ್ಯೋಗಾವಕಾಶಗಳು ಹೆಚ್ಚಿರುವುದನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆಯನ್ನು ಏನು ಕೇಳಿದ್ದಾರೆಂದರೆ ಆ ಮೂರು ಜಿಲ್ಲೆಗಳಲ್ಲಿ ಬೇರೆ ಬೇರೆ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವಂಥದ್ದರ ಬಗ್ಗೆ ಇದೆ. ಅದು ನೇರವಾಗಿ ಈ ವಿಷಯಕ್ಕೆ ಸಂಬಂಧಪಟ್ಟಿರುವಂಥದ್ದಲ್ಲ. ಆದರೆ ಅಲ್ಲಿಯ ಮೀನುಗಾರರಿಗೆ ಬೇಕಾಗಿರುವಂತಹ ಹೂಳೆತ್ತುವಂತಹ ವಿಷಯಗಳು ಇರಬಹುದು ಅಥವಾ dedging ಆ ಕೆಲಸಗಳು ಇರಬಹುದು. ಅಥವಾ ನಾವು ಕಾರ್‌ಲ್ಯಾಂಡ್ ಎಂದು ಹೇಳುತ್ತೇವೆ. ಆ ಕಾರ್ಲ್ಯಾಂಡ್ ಕಟ್ಟುವಂತಹ ವಿಷಯ ಇರಬಹುದು, ಚಿಕ್ಕ ಚಿಕ್ಕ ದೋಣಿಗಳನ್ನು ಇಟ್ಟುಕೊಂಡು ತೆಗೆದುಕೊಂಡು ಹೋಗಿ ಮೀನು ಹಿಡಿಯುವಂಥದ್ದಕ್ಕೆ ಬಂದರ್ ರೀತಿಯಲ್ಲಿ ಚಿಕ್ಕದಾಗಿ ಮಾಡಿರುತ್ತೇವೆ. ಇದಕ್ಕೆ ಜಟ್ಟಿ ಎಂದು ಹೇಳುತ್ತೇವೆ. ಆ ಕೆಲಸವನ್ನು ಮಾಡುವಂಥದ್ದು ಇರಬಹುದು. ಇದರೊಳಗೆ ಎಲ್ಲಾ ಸರ್ಕಾರ ಸಾಕಷ್ಟು ಹಣದ ಸಹಾಯವನ್ನು ಮಾಡಿದೆ. ಅಲ್ಲಿರುವಂತಹ ಮೀನುಗಾರಿಕೆ ರಸ್ತೆಗಳ ಅಭಿವೃದ್ಧಿಗೋಸ್ಕರವಾಗಿಯೂ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟಿದೆ. ಮತ್ಸ್ಯಾಗಾರರಿಗೆ ಮನೆಗಳನ್ನು ದೊಡ್ಡ ಪ್ರಮಾಣದಲ್ಲಿ ಕೊಟ್ಟಿದ್ದೇವೆ. ಮತ್ಸ್ಯ

ಆಶ್ರಯ ಮನೆ ಎಂದೇ ಪ್ರತ್ಯೇಕವಾಗಿದೆ. ಹಾಗಾಗಿ ಮೀನುಗಾರರ ಮತ್ತು ಮೀನುಗಾರಿಕಾ ಪ್ರದೇಶಾಭಿವೃದ್ಧಿಗೆ ಸಾಕಷ್ಟು ಸರ್ಕಾರದ ಯೋಜನೆಗಳಿವೆ. ಮೀನು ಮಾರಾಟ ಮಾಡುವಂತಹ ಮಹಿಳೆಯರಿಗೆ ಅನೇಕ ಸೌಲಭ್ಯಗಳನ್ನು ಕೊಡುವುದರ ಮೂಲಕ ಪ್ರೋತ್ಸಾಹಿಸುತ್ತಿದ್ದೇವೆ. ನಬಾರ್ಡ್ ಇತ್ಯಾದಿ ಯೋಜನೆಯಲ್ಲಿ ಮೀನು ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸುವಂತಹ ಯೋಜನೆಗಳನ್ನು ಮಾಡಿದ್ದೇವೆ. ಹಾಗಾಗಿ ನಮ್ಮ ರಾಷ್ಟ್ರೀಯ ಮೀನುಗಾರಿಕಾ ಮಹಾ ಮಂಡಳಿಯಿಂದಲೂ ನಡೆಯುತ್ತಿದೆ. ಇಲಾಖಾ ವತಿಯಿಂದಲೂ ನಡೆಯುತ್ತಿದೆ. ಕೇಂದ್ರ ಸರ್ಕಾರ ನಿರೀಕ್ಷಿತ ಹಣವನ್ನು ಕೊಡದೇ ಹೋದರೂ ರಾಜ್ಯ ಸರ್ಕಾರವಾಗಿ ಇದಕ್ಕೆ ಹೆಚ್ಚಿನ ಹಣವನ್ನು ಹಾಕಿ ಕೆಲಸವನ್ನು ಮಾಡುತ್ತಿದ್ದೇವೆ.

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಮೀನುಗಾರರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರ ಬಗ್ಗೆ ಹೇಳಿದ್ದಾರೆ. ಮೀನು ಮರಿಗಳ ಸಾಕಾಣಿಕೆ ಬಗ್ಗೆ ನಮ್ಮ ರಾಜ್ಯದಲ್ಲಿ ಸರಿಯಾದ ಒಂದು ವ್ಯವಸ್ಥೆ ಇಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಸರಿಯಾದಂತಹ ರೀತಿಯಲ್ಲಿ ಮೀನು ಮರಿಗಳನ್ನು ಸಾಕಾಣಿಕೆಯನ್ನು ಮಾಡಿದಾಗ ಮೀನುಗಾರಿಕೆಗೆ ಸಾಕಷ್ಟು ಲಾಭವಾಗುತ್ತದೆ. ಇವತ್ತು ನಮ್ಮ ರಾಜ್ಯದವರು ಮೀನು ಮರಿಗಳನ್ನು ಬೇರೆ ರಾಜ್ಯಗಳಿಂದ ತಂದು ಇಲ್ಲಿ ಕೆರೆಗಳಲ್ಲಿ ಮತ್ತು ಹೊಂಡಗಳಲ್ಲಿ ತಂದು ಬಿಟ್ಟು ಸಾಕುತ್ತಿದ್ದಾರೆ. ನಮಗ್ಯಾರಿಗೂ ಪ್ರೋತ್ಸಾಹ ಸಿಗುತ್ತಿಲ್ಲ ಎನ್ನುವಂತಹ ಕೂಗು ಇರುವುದರಿಂದ ನಾನು ಕೇಳಿದ್ದು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ವಿವರಗಳನ್ನು ಹೇಳುವುದಾದರೆ 160 ಮೀನು ಕೃಷಿಯನ್ನು ಮಾಡುವಂಥವರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ 116 ಮೀನು ಕೃಷಿಯಲ್ಲಿ ತೊಡಗಿಕೊಂಡಿರುವವರು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ ಮೊದಲು ಕೇವಲ 90 ಜನರು ಮಾತ್ರ ಇದ್ದರೂ ಈಗ 160 ಜನರಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿಯೇ 70 ಕೃಷಿಕರಿಂದ ಸುಮಾರು 1.5 ಲಕ್ಷ ಮೀನು ಮರಿಗಳನ್ನು ಬೇರೆ ಬೇರೆ ರೀತಿಯಿಂದ ಖರೀದಿ ಮಾಡಿದ್ದಾರೆ ಸಾಕಾಣಿಕೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಹಾಗಾಗಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ನಮಗೆ ಆದಾಯ ಕೂಡ ಬರುತ್ತಿದೆ. ಈ ಚಟುವಟಿಕೆಯಲ್ಲಿ ಸ್ವಾವಲಂಬಿಗಳಾಗಿ ಹೆಚ್ಚು ಹೆಚ್ಚು ಉದ್ಯೋಗವನ್ನು ನಡೆಸುವುದಕ್ಕೆ ಮುಂದೆ ಬರುತ್ತಿದ್ದಾರೆ ಎನ್ನುವುದು ಈ ಅಂಕಿ ಸಂಖ್ಯೆಗಳಿಂದಲೇ ಗೊತ್ತಾಗುತ್ತದೆ ಗುಣಮಟ್ಟದ ಮೀನು ಮರಿಗಳನ್ನು ನಮ್ಮ ಹೈದರಾಬಾದ್ ಸಂಸ್ಥೆ ಮತ್ತು ಬೇರೆ ಬೇರೆ ಕಡೆಯಲ್ಲಿ ಮಾಡುತ್ತಿದ್ದೇವೆ. ತಮಗೂ ಗೊತ್ತಿರುವಂತೆ ಬೇರೆ ಬೇರೆ ರಾಜ್ಯಗಳಿಂದ ಮೀನು ಮರಿಗಳನ್ನು ಅಲ್ಲೆಲ್ಲ ಬೆಳೆಸಿ ಮೀನುಗಾರಿಕೆಯಲ್ಲಿ ತೊಡಗಿಕೊಂಡಿರುವವರಿಗೆ ಕೊಡುತ್ತಿದ್ದೇವೆ. ಹಾಗಾಗಿ ನಾವು ಎಲ್ಲಾ ರೀತಿಯ ಪ್ರಯತ್ನವನ್ನು, ಪ್ರೋತ್ಸಾಹವನ್ನು ಸರ್ಕಾರದಿಂದ ಮಾಡುತ್ತಿದ್ದೇವೆ. ತಮ್ಮಲ್ಲಿ ಇನ್ನು ಯಾವುದಾದರು ನಿಶ್ಚಿತವಾದಂತಹ ಸಲಹೆಗಳಿದ್ದರೆ ಅದನ್ನು ಸಹಾ ಮಾನ್ಯ ಸಚಿವರ ಜೊತೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಮಾತನಾಡಿ. ಆ ಸಲಹೆಯನ್ನು ಕೂಡ ಅನುಷ್ಠಾನಗೊಳಿಸುವುದಕ್ಕೆ ನಾವು ಬದ್ಧರಿದ್ದೇವೆ.

**ಶ್ರೀ ಕೆ.ವಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಆರ್.ವಿ.ವೆಂಕಟೇಶ್‌ರವರು ಮಾತನಾಡಿರುವಂಥದ್ದು ಸರಿ ಇದೆ. ಈಗ ಹೊರ ರಾಜ್ಯಗಳಿಂದ ಮೀನು ಮರಿಗಳು ನಮ್ಮ ಕರ್ನಾಟಕಕ್ಕೆ ಬರುತ್ತಿರುವಂಥದ್ದು ಬಹಳ ದೊಡ್ಡ ಸಮಸ್ಯೆ ಇದೆ. ಈಗ ನಮ್ಮ ಲೆಕ್ಕ ಕರ್ನಾಟಕದ್ದು. ಇವತ್ತಿನ ದಿವಸ ಶಿವಮೊಗ್ಗ ಜಿಲ್ಲೆಯ ಲೆಕ್ಕದಲ್ಲಿ ಆಂಧ್ರ ಪ್ರದೇಶದಿಂದ ಬಂದಿರುವಂತಹ ಮೀನು ಮರಿ ಮಾರಾಟ ಆಗಿರುವಂತಹ ಸಂಗತಿಯು ಸಹ ಇದೆ. ಅಲ್ಲಿಂದ 35 ಪೈಸೆಗೆ ಒಂದು ಮೀನು ಮರಿ ಬರುತ್ತಿದೆ. ಅದಕ್ಕೆ ಸರ್ಕಾರ ಕೊಡುತ್ತಿರುವಂಥ ಸಹಾಯಧನ ಒಂದು ರೂಪಾಯಿ. 65 ಪೈಸೆ ಏನಿದೆ ಇದು ಎಲ್ಲಿಗೆ ಹೋಗುತ್ತಿದೆ, ಯಾರಿಗೆ ಲಾಭ ಸಿಗುತ್ತಿದೆ ಎನ್ನುವುದು ತಿಳಿಯುತ್ತಿಲ್ಲ. ಹಾಗಾಗಿ ಇದರ ಪೂರ್ಣ ಲಾಭ ಸಿಗಬೇಕು ಎನ್ನುವುದಾದರೆ ಇಲಾಖೆ ಕಡೆಯಿಂದ ಸರಿಯಾದಂತಹ ವ್ಯವಸ್ಥೆ

ಆಗಬೇಕಾದಂತಹ ಅವಶ್ಯಕತೆ ಇದೆ. ಆ ನಿಟ್ಟಿನಲ್ಲಿ ಸರ್ಕಾರ ಯಾವ ರೀತಿಯಾಗಿ ಯೋಜನೆ ಮಾಡುತ್ತಿದೆ ಎಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಬಯಸುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಷ್ಟ್ರೀಯ ಮೀನುಗಾರಿಕಾ ಮಹಾ ಮಂಡಲದ ವತಿಯಿಂದ ನಾವು ಇದೂವರೆವಿಗೆ ಯಾವ ಯಾವ ರೀತಿ ಕೆಲಸ ಕಾರ್ಯಗಳನ್ನು ನಡೆಸುತ್ತಿದ್ದೇವೆ, ಮತ್ತು ಸರ್ಕಾರದ ವತಿಯಿಂದ ಮೀನುಗಾರಿಕೆ ಇಲಾಖೆಗೆ ಯಾವ ಯಾವ ರೀತಿ ಪ್ರೋತ್ಸಾಹ ಮಾಡುತ್ತಿದ್ದೇವೆ ಎಂಬ ವಿಷಯವನ್ನು ಹೇಳಿದೆ. ಮೀನುಗಾರಿಕೆಯ ಖರೀದಿಯಲ್ಲಿ ಮತ್ತು ಅದನ್ನು ಮಾರಾಟ ಮಾಡುವ ವಿಷಯದಲ್ಲಿ ವ್ಯತ್ಯಾಸಗಳು ಹಾಗು ಗೊಂದಲಗಳನ್ನು ಮಾನ್ಯ ಸದಸ್ಯರು ಉಲ್ಲೇಖ ಮಾಡಿದ್ದಾರೆ. ಈ ವಿಷಯದಲ್ಲಿ ಪೂರ್ಣ ವಿವರಗಳು ನನ್ನ ಬಳಿ ಇಲ್ಲದೆ ಇರುವುದರಿಂದ ಹೆಚ್ಚಿನ ಮಾಹಿತಿಗಳನ್ನು ನಾವು ಸಚಿವರ ಜೊತೆಯಲ್ಲಿ ಹಾಗೂ ತಮ್ಮಗಳ ಅಭಿಪ್ರಾಯವನ್ನು ತೆಗೆದುಕೊಂಡು ಮಾತುಕತೆಯನ್ನು ಮಾಡಿ ಯಾವುದೇ ರೀತಿಯಲ್ಲಿ ಮೀನುಗಾರ ಹಿತಕ್ಕೆ ಧಕ್ಕೆ ಆಗದೆ ಇರುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಮುಂದಾಗುತ್ತದೆಂದು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮೀನುಗಾರಿಕಾ ಸಚಿವರು ಬಹುತೇಕ ಬರುವುದೇ ಇಲ್ಲ. ಅವರ ಪ್ರಶ್ನೆ ಇದ್ದಾಗಲೂ ಸಹ ಅವರು ಬರುವುದಿಲ್ಲ. ಅವರ ಪ್ರಶ್ನೆಗೂ ಮಾನ್ಯ ಕಾಗೇರಿಯವರೇ ಉತ್ತರ ಕೊಡುತ್ತಾರೆ. ಅವರಿಗೆ ಅವರ ಖಾತೆಯ ಜವಾಬ್ದಾರಿಯನ್ನು ನೋಡಿಕೊಳ್ಳುವುದಕ್ಕೆ ಅವರಿಗೆ ಸಮಯ ಇರುವುದಿಲ್ಲ. ಈ ರೀತಿ ಇರುವಾಗ ಬೇರೆ ಖಾತೆಯ ಕೆಲಸವನ್ನು ಅವರು ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮೀನುಗಾರಿಕಾ ಸಚಿವರು ಎಲ್ಲಿಗೆ ಹೋಗಿದ್ದಾರೆ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ಮೀನು ತಿಂದ ಮೇಲೆ ರುಚಿ ಹೇಗಿದೆ ಎಂದು ಹೇಳಬೇಕು. ನಾನು ಪ್ರಶ್ನೆಗೆ ಉತ್ತರ ಹೇಳಿದ ಮೇಲೆ ಈ ರೀತಿ ಕೇಳಿದರೆ ಹೇಗೆ?

**ಶ್ರೀಮತಿ ಮೋಟಮ್ಮ:-** ಸಂಬಂಧಪಟ್ಟಂತಹ ಸಚಿವರು ಸದನದಲ್ಲಿ ಇಲ್ಲದೆ ಇರುವಂತಹ ಸಮಯದಲ್ಲಿ ಸಭಾ ನಾಯಕರು ಉತ್ತರ ಕೊಡಬಹುದು ಎಂದು ತಿಳಿಸಿದ್ದಾರೆ. ಆದರೆ ಸಚಿವರು ಎಲ್ಲಿಗೆ ಹೋಗಿದ್ದಾರೆ ಎಂಬುದು ಬೇಕಲ್ಲ. ಒಬ್ಬೊಬ್ಬರಿಗೂ ಏನಾಗುತ್ತಿದೆ ಎಂದು ತಿಳಿಯುತ್ತಿಲ್ಲ. ಇನ್ನೂ ಏನಾದರು ರೆಸಾರ್ಟ್‌ನಲ್ಲಿಯೇ ಕುಳಿತುಕೊಂಡಿದ್ದಾರೆಯೆ, ಅಥವಾ ವಾಪಸ್ಸು ಬಂದಿದ್ದಾರೆಯೇ ಎಂಬುದು ನಮಗೆ ತಿಳಿಯಬೇಕಲ್ಲವೆ. ಪ್ರಶ್ನೆ ಇದ್ದಾಗ ಈ ರೀತಿ ಮಾಡಬಹುದುದೆ?

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ಮೀನುಗಾರಿಕಾ ಸಚಿವರು ಯಾರು ಎಂಬುದನ್ನು ತಿಳಿಸಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀ ಆನಂದ ಅಸ್ನೋಟಿಕರ್ ರವರು ಸದನದಲ್ಲಿ ಇಲ್ಲದೆ ಇರುವಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅವರ ಪರವಾಗಿ ನಾನು ಸರ್ಕಾರದಿಂದ ಉತ್ತರ ಕೊಟ್ಟಿದ್ದೇನೆ. ಅವರು ಮಾನ್ಯ ಸಭಾಪತಿಯವರಿಗೆ ಪತ್ರವನ್ನು ಕೊಟ್ಟು ಅವರ ಅನುಮತಿಯನ್ನು ಪಡೆದಿದ್ದಾರೆ. ಇಂತಹ ಸಂದರ್ಭಗಳು ಉದ್ಭವ ಆಗಬಾರದು ಎನ್ನುವಂಥದ್ದು ಇಡೀ ಸದನದ ಅಭಿಪ್ರಾಯ. ನಿನ್ನೆ ತಾನೆ ಈ ವಿಷಯವನ್ನು ಮಾನ್ಯ ಸಭಾಪತಿಯವರು ಪ್ರಸ್ತಾಪಿಸಿ ಸರ್ಕಾರಕ್ಕೂ ಸಹ ಹೇಳಿದ್ದಾರೆ. ನಾವು ಎಷ್ಟು ಗಂಭೀರವಾಗಿ ಗಮನಿಸುತ್ತೇವೆಂದರೆ, ನಿನ್ನೆ ದಿವಸ ಮಾನ್ಯ ಸಭಾಪತಿಯವರು ಹೇಳಿದ ನಂತರ ಮಾನ್ಯ ಉಮೇಶ್ ಕತ್ತಿಯವರು ಇಲ್ಲಿ ಬಂದು ಕುಳಿತುಕೊಂಡಿದ್ದಾರೆ ನೋಡಿ. ನಾವು ಇಷ್ಟು ಆರೋಗ್ಯಕರವಾದ ಹಿನ್ನೆಲೆಯಲ್ಲಿ ತೆಗೆದುಕೊಂಡಿದ್ದೇವೆ.

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಮಾನ್ಯ ಉಮೇಶ್‌ಕತ್ತಿಯವರ ಆರೋಗ್ಯ ಸರಿ ಇರಲಿಲ್ಲ. ಸುಮಾರು ಹದಿನೈದರಿಂದ ಇಪ್ಪತ್ತು ಸಲ vomit ಮಾಡಿಕೊಂಡಿದ್ದಾರೆ. Treatment ತೆಗೆದುಕೊಂಡಿದ್ದಾರೆ. ಆದರೂ ಸಹ ಇವತ್ತು ಬಂದು ಇಲ್ಲಿ ಕುಳಿತುಕೊಂಡಿದ್ದಾರೆ.

**ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶಾಶ್ವತ ನೀರಿನ ಸೌಲಭ್ಯ ಒದಗಿಸುವ ಬಗ್ಗೆ**

**78(17); ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬೇಸಿಗೆಯಲ್ಲಿ ನೀರಿನ ಅಭಾವ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಭಾಗದ ಜನರಿಗೆ ಶಾಶ್ವತವಾಗಿ ನೀರಿನ ಸೌಲಭ್ಯ ಒದಗಿಸುವ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಂಡಿರುತ್ತದೆ;

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ (ನೆಲಮಂಗಲ, ಮಾಗಡಿ, ದೇವನಹಳ್ಳಿ, ಚಿಕ್ಕಬಳ್ಳಾಪುರ, ಕನಕಪುರ) ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಬರ ನೀಗಿಸುವ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಂಡಿರುತ್ತದೆ. (ತಾಲ್ಲೂಕುವಾರು ವಿವರ ನೀಡುವುದು)?

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):**

ಅ) ಬಂದಿದೆ.

ಆ) ನೀರಿನ ಲಭ್ಯತೆ ಹಾಗೂ ಆರ್ಥಿಕ ಮತ್ತು ತಾಂತ್ರಿಕ ಕಾರ್ಯ ಸಿಂಧುತ್ವ ಆಧರಿಸಿ ಶಾಶ್ವತ ಹಾಗೂ ಸುರಕ್ಷಿತ ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಬರ ನೀಗಿಸಲು ಕೈಗೊಂಡಿರುವ ತುರ್ತು ಕ್ರಮಗಳ ತಾಲ್ಲೂಕುವಾರು

ವಿವರಗಳನ್ನು ಅನುಬಂಧ(1)ರಲ್ಲಿ ನೀಡಿದೆ. ಇದಲ್ಲದೆ, ಪ್ರಸಕ್ತ ಸಾಲಿನಲ್ಲಿ 268 ಸಮಸ್ಯಾತ್ಮಕ ಗ್ರಾಮೀಣ ಜನವಸತಿಗಳಿಗೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ರೂ.20.00 ಕೋಟಿ ಅಂದಾಜಿನ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

**ಅನುಬಂಧ–1**

**ಪ್ರಶ್ನೆ ಸಂಖ್ಯೆ: 78(17)**

ದಿನಾಂಕ: 16.03.2012ರಲ್ಲಿ ಹೊಸಕೋಟೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಇತರೆ ತಾಲ್ಲೂಕುಗಳ ಕುಡಿಯುವ ನೀರಿನ ತೀವ್ರ ಸಮಸ್ಯೆಗಳನ್ನು ಬಗೆಹರಿಸಲು ರೂ.200.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳು ಪ್ರಗತಿಯಲ್ಲಿವೆ.

1. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿ ಟಾಸ್ಕ್‌ಫೋರ್ಸ್ ಅಡಿಯಲ್ಲಿ ರೂ.75.00 ಲಕ್ಷಗಳನ್ನು ಹಾಗೂ ವಿಶೇಷ ಅನುದಾನದಡಿ ರೂ.150.00 ಲಕ್ಷಗಳು ಫೆಬ್ರವರಿ ಹಾಗೂ ಮಾರ್ಚ್–2012ರಲ್ಲಿ ಬಿಡುಗಡೆಯಾಗಿ ಬರ ಪ್ರದೇಶಗಳಲ್ಲಿ ಹೊಸದಾಗಿ ಕೊಳವೆ ಬಾವಿಗಳ ಕೊರೆಯುವಿಕೆ/ಪೈಪ್‌ಲೈನ್ ವಿಸ್ತರಣೆ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.
2. ತಾತ್ಕಾಲಿಕವಾಗಿ ದೇವನಹಳ್ಳಿಯ 18 ಗ್ರಾಮಗಳಿಗೆ ನೆಲಮಂಗಲದ 16 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಖಾಸಗಿ ಕೊಳವೆ ಬಾವಿಗಳಿಂದ ದೇವನಹಳಿಯ 2 ಗ್ರಾಮಗಳಲ್ಲಿ ಹಾಗೂ ನೆಲಮಂಗಲದ 3 ಗ್ರಾಮಗಳಲ್ಲಿ ಹೆಚ್ಚುವರಿ ಪೈಪ್‌ಲೈನ್ ಅಳವಡಿಸಿ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ.

3. ದೇವನಹಳ್ಳಿ ತಾಲ್ಲೂಕು ಬರಪೀಡಿತ ಪ್ರದೇಶವೆಂದು ಈಗಾಗಲೇ ಘೋಷಣೆಯಾಗಿದ್ದು, ಜಿಲ್ಲಾಧಿಕಾರಿಗಳು ರೂ.10.00 ಲಕ್ಷಗಳನ್ನು ಕುಡಿಯುವ ನೀರಿನ ಪುನಃಶ್ಚೇತನ ಕಾಮಗಾರಿಗಳಿಗೆ ರೀಡ್ರಿಲಿಂಗ್/ಪೈಪ್‌ಲೈನ್ ದುರಸ್ಥಿ) ಇತ್ಯಾದಿಗಳಿಗೆ ನೀಡಿರುತ್ತಾರೆ. ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೇವಲ ನಮ್ಮ ಸಮಾಧಾನಕ್ಕಾಗಿ ಒದಗಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬೇಸಿಗೆಯಲ್ಲಿ ನೀರಿನ ಅಭಾವ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದರ ಜೊತೆಯಲ್ಲಿ ಕೆಲವು ವಿಷಯಗಳನ್ನು ಸೇರಿಸಿದ್ದಾರೆ. ಏನೆಂದರೆ, ದೇವನಹಳ್ಳಿ ತಾಲ್ಲೂಕು ಬರಪೀಡಿತ ಪ್ರದೇಶವೆಂದು ಈಗಾಗಲೇ ಘೋಷಣೆಯಾಗಿದ್ದು, ಜಿಲ್ಲಾಧಿಕಾರಿಗಳು ರೂ.10.00 ಲಕ್ಷಗಳನ್ನು ಕುಡಿಯುವ ನೀರಿನ ಪುನಃಶ್ಚೇತನ ಕಾಮಗಾರಿಗಳಿಗೆ (ರೀಡ್ರಿಲ್ಲಿಂಗ್/ ಪೈಪ್‌ಲೈನ್ ದುರಸ್ಥಿ) ಇತ್ಯಾದಿಗಳಿಗೆ ನೀಡಿರುತ್ತಾರೆ. ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಹತ್ತು ಲಕ್ಷ ರೂಪಾಯಿಗಳನ್ನು ಎಷ್ಟು ಗ್ರಾಮಗಳಿಗೆ ಕೊಡಬಹುದು ಅದು ಬರಪೀಡಿತ ಪ್ರದೇಶಗಳಿಗೆ ಎಷ್ಟರ ಮಟ್ಟಿಗೆ ಸೌಕರ್ಯ ಒದಗಿಸಬಹುದು ಎಂದು ಮಾನ್ಯ ಸಚಿವರೆ ಅದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈಗಾಗಲೇ ನಮ್ಮ ನೆಲಮಂಗಲ ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆಗಳಲ್ಲಿ ಇರುವಂತಹ ಹಳ್ಳಿಗಳಲ್ಲಿ ಶೇಕಡ 50ರಷ್ಟು ನೀರಿನ ಸಮಸ್ಯೆ ಇದೆ. ಜಿಲ್ಲಾ ಪಂಚಾಯಿತಿಗೆ ಅನುದಾನವನ್ನು ಸ್ವಲ್ಪ ಮಟ್ಟಿಗೆ ಕೊಡುತ್ತಾರೆ, ಅವರು ಒಂದು ಗ್ರಾಮಕ್ಕೆ ಮಾಡುತ್ತಾರೆ, ಹತ್ತು ಗ್ರಾಮಗಳಲ್ಲಿ ಅದನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಾಲದಕ್ಕೆ ಡಿ.ಸಿ.ಯವರಿಗೆ ಕಳೆದ ವರ್ಷ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಡಿ.ಸಿ. ಅವರ ಬಳಿ ನಮ್ಮ ಸಮಸ್ಯೆ ತೆಗೆದುಕೊಂಡು ಹೋದರೆ ಟ್ಯಾಂಕರ್‌ನಲ್ಲಿ ನೀರು ಹೊಡೆಸುವುದಕ್ಕೆ ಮಾತ್ರ

ಕೊಡುತ್ತೇನೆಂದು ಹೇಳುತ್ತಾರೆ. ಆ ಟ್ಯಾಂಕರ್‌ನಲ್ಲಿ ಅದರ ಅಕೌಂಟಬಿಲಿಟಿ ಎಲ್ಲಿ ಇರುತ್ತದೆ ಎಂಬುದು ಗೊತ್ತಿಲ್ಲ. ಆದರೆ ಇಲ್ಲಿ ಹೇಳುತ್ತಾರೆ ನಾವು ಪೈಪ್‌ಲೈನ್, ಡ್ರಿಲ್ಲಿಂಗ್‌ಗೆ ಕೊಡುತ್ತೇವೆಂದು ಹೇಳುತ್ತಾರೆ. ಹತ್ತು ಲಕ್ಷ ರೂಪಾಯಿಗಳಲ್ಲಿ ಎಷ್ಟು ಗ್ರಾಮಗಳಲ್ಲಿ ಡ್ರಿಲ್ಲಿಂಗ್ ಮಾಡಬಹುದು, ಪೈಪ್‌ಲೈನ್ ಹಾಕಬಹುದು ಎಂಬುದನ್ನು ತಾವು ನಿಜವಾಗಿಯೂ ಅರ್ಥೈಸಿಕೊಳ್ಳಬೇಕು. ಸರ್ಕಾರ ದೇವನಹಳ್ಳಿಯನ್ನು ಬರಪೀಡಿತ ಜಿಲ್ಲೆ ಎಂದು ಏನು ಘೋಷಣೆ ಮಾಡಿದೆ, ಅದಕ್ಕೆ ಅನುದಾನವನ್ನು ಸುಮಾರು ಎರಡು–ಮೂರು ಕೋಟಿ ರೂಪಾಯಿಗಳಷ್ಟು ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ಕೊಟ್ಟು ರೀ–ಡ್ರಿಲ್ಲಿಂಗ್ ಮಾಡುವುದಾಗಬಹುದು, ಅಥವಾ ಹೊಸ ಡ್ರಿಲ್ಲಿಂಗ್ ಮಾಡುವುದಾಗಬಹುದು. ಆ ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟ ಮಾತ್ರಕ್ಕೆ ಆ ಸಮಸ್ಯೆ ಬಗೆಹರಿಯುವುದಿಲ್ಲ. ಹೊಸಕೋಟೆ ಮತ್ತು ದೇವನಹಳ್ಳಿಯಲ್ಲಿ ಒಂದು ಸಾವಿರದ ಇನ್ನೂರ ಅಡಿಗೆ ಹೋದರೂ ಸಹ ನೀರು ಸಿಗುವುದಿಲ್ಲ. ನೀರು ಸಿಕ್ಕಿದರೂ ಸಹ ಅದು ಫ್ಲೋರೈಡ್ ವಾಟರ್ ಅಥವಾ ಕುಡಿಯುವುದಕ್ಕೆ ಆಗದೆ ಇರುವಂತಹ ನೀರು ಸಿಗುತ್ತದೆ. ಇದರ ಬಗ್ಗೆ ನಿಜವಾದ ಕಳಕಳಿ ಇದ್ದರೆ ಮುತುವರ್ಜಿ ವಹಿಸಿ ಈ ಸದನದಲ್ಲಿಯೇ ನಮಗೆ ಹೇಳಬೇಕು, ಜಿಲ್ಲಾಧಿಕಾರಿಯವರಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಅಥವಾ ಜಿಲ್ಲಾ ಪಂಚಾಯತಿ ಸಿ.ಇ.ಓ. ಗಳಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಏಕೆಂದರೆ ನೆಲಮಂಗಲದಲ್ಲಿಯೇ ಸುಮಾರು 50 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಆ ಗ್ರಾಮಗಳಿಗೆ ಟ್ಯಾಂಕರ್ ಮುಖಾಂತರ ನೀರನ್ನು ಹೊಡೆಸುತ್ತೇವೆಂದು ಹೇಳುತ್ತಾರೆ. ಆದರೆ ಆ ಟ್ಯಾಂಕರ್‌ನವರು ನೀರನ್ನು ಹೊಡೆಯುವುದಿಲ್ಲ. ಏಕೆಂದರೆ, ಜಿಲ್ಲಾಧಿಕಾರಿಗಳಿಗೆ ಆ ಬಿಲ್ ಹೋಗಿ ಬರಬೇಕಾದರೆ ಆರು ತಿಂಗಳು, ಎಂಟು ತಿಂಗಳಾದರೂ ಬರುವುದಿಲ್ಲ. ಸರಿಯಾಗಿ ಹಣ ಪಾವತಿ ಆಗುತ್ತಿಲ್ಲ, ಆದುದರಿಂದ ಸಮಸ್ಯೆ ಬಗೆಹರಿಯುತ್ತಿಲ್ಲ. ಹಾಗಾಗಿ ಜನರು ಊರೂರುಗಳಿಗೆ ಎತ್ತಿನ ಗಾಡಿಯಲ್ಲಿ, ಅಥವಾ ಟ್ರಾಕ್ಟರ್‌ಗಳನ್ನು ತೆಗೆದುಕೊಂಡು ಹೋಗಿ ನೀರಿಗಾಗಿ ಅಲೆದಾಡುತ್ತಾರೆ. ಆದುದರಿಂದ ಇದರ ಬಗ್ಗೆ ಸರ್ಕಾರ ಹೆಚ್ಚಿನ ಕಾಳಜಿಯನ್ನು ವಹಿಸಿ ಇನ್ನು ಎರಡು ತಿಂಗಳ

ಒಳಗಾಗಿ ಈ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಿ ಜಿಲ್ಲಾಧಿಕಾರಿಯವರಿಗೆ ಅಥವಾ C.E.O, ಅವರಿಗೆ Special Grant release ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣಪ್ಪನವರು ಬಹಳ ಮುಖ್ಯವಾದಂತಹ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿಯೂ ಬೆಂಗಳೂರು ಗ್ರಾಮಂತರ ಜಿಲ್ಲೆಯ ಬಗ್ಗೆ ಅದರಲ್ಲೂ ಬೇಸಿಗೆ ಸಂದರ್ಭದಲ್ಲಿ ನೀರಿನ ಅಭಾವ ಇನ್ನೂ ಹೆಚ್ಚಾಗುತ್ತದೆ. ಆದಕಾರಣ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳಿದ್ದಾರೆ. ಅವರ ಹೇಳಿರುವಂತಹ ಮಾತನ್ನು ನಾನು ಸಹ ಒಪ್ಪುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಹೇಳಿರುವಂತಹ ವಿಷಯಗಳಲ್ಲಿ ಒಂದು ಮುಖ್ಯವಾದಂತಹ ಅಂಶವನ್ನು ನಾನು ಗಮನಿಸಿದ್ದೇನೆ. ಏನೆಂದರೆ, ಸರ್ಕಾರ ನೀರಿನ ಟ್ಯಾಂಕರ್‌ಗೆ ವ್ಯವಸ್ಥೆ ಮಾಡುತ್ತದೆ. ಟ್ಯಾಂಕರ್‌ನವರು ನೀರು ಹಾಕಿದರೆ ಅವರಿಗೆ ಹಣವನ್ನು ಕೊಡುವುದಕ್ಕೆ ಡಿ.ಸಿ. ಕಛೇರಿಯಲ್ಲಿ ತಿಂಗಳುಗಟ್ಟಲೇ ನಿಧಾನ ಮಾಡುತ್ತಾರೆ, ಹಾಗಾಗಿ ಟ್ಯಾಂಕರ್‌ನವರು ನೀರು ತರುವುದಿಲ್ಲ. ಆದಕಾರಣ ಸರ್ಕಾರ ಡಿ.ಸಿ. ಕಛೇರಿಗೆ ಕೂಡಲೆ ಸೂಚನೆ ಕೊಟ್ಟು ವಾರಕ್ಕೆ ಒಂದು ಸಲ ಅಥವಾ ಹದಿನೈದು ದಿವಸಕ್ಕೊಮ್ಮೆ ಬಿಲ್ ಪೇಮೆಂಟ್ ಆಗುವಂತೆ ಕ್ರಮ ತೆಗೆದುಕೊಂಡರೆ ಅವರ ಸಮಸ್ಯೆ ಸಧ್ಯಕ್ಕೆ ಪರಿಹಾರವಾಗುತ್ತದೆ.

**ಶ್ರೀ ಜಗದೀಶ್ ಶೆಟ್ಟರ್:–** ಸನ್ಮಾನ್ಯ ಸಭಾಪತಿಯವರೇ, ಬೇರೆ ಬೇರೆ ಯೋಜನೆಗಳಲ್ಲಿ 268 ಸಮಸ್ಯಾತ್ಮಕ ಗ್ರಾಮಗಳಲ್ಲಿ ಸುಮಾರು 20.00 ಕೋಟಿ ರೂಗಳಿಗೆ Action Plan ರೆಡಿ ಮಾಡಿ ಅದು ರೆಗ್ಯುಲರ್ ಆಗಿ ನಡೆಯುತ್ತಿದೆ. ಆದರೆ ಸರ್ಕಾರ ತಕ್ಷಣ ಬೇಸಿಗೆ ಸಂದರ್ಭದಲ್ಲಿ ಕೈಗೊಳ್ಳಬೇಕಾಗಿರುವಂತಹ ಕಾರ್ಯಕ್ರಮಕ್ಕೆ ಈ ಮಧ್ಯದಲ್ಲಿ ದೇವನಹಳ್ಳಿ ತಾಲ್ಲೂಕಿಗೆ ಟಾಸ್ಕ್‌ಫೋರ್ಸ್ ಕಮಿಟಿಯನ್ನು ಮಾಡಿ ಅದಕ್ಕೆ ಈಗಾಗಲೇ 75.00 ಲಕ್ಷ ರೂಗಳನ್ನು ಕೊಟ್ಟಿದ್ದೇವೆ. ಇನ್ನೊಂದು ವಿಶೇಷ ಅನುದಾನವೆಂದು ಹೇಳಿ, 150.00 ಲಕ್ಷ ರೂ ಅಂದರೆ ಒಂದೂವರೆ ಕೋಟಿ ರೂಪಾಯಿಗಳನ್ನು ಫೆಬ್ರವರಿ–ಮಾರ್ಚಿ

ತಿಂಗಳಿನಲ್ಲಿ ಬಿಡುಗಡೆ ಮಾಡಿದ್ದೇವೆ. ಕೆಲಸ ನಡೆಯುತ್ತಿದೆ. ಈಗ ಮಾನ್ಯ ಸದಸ್ಯರು ಹತ್ತು ಲಕ್ಷ ರೂಪಾಯಿ ಬಗ್ಗೆ ಏನು ಹೇಳಿದರು, ಆ ಹಣವನ್ನು ಕೇವಲ ರೀ–ಡ್ರಿಲ್ಲಿಂಗ್ ಮತ್ತು ಪೈಪ್‌ಲೈನ್ ದುರಸ್ಥಿ ಸಲುವಾಗಿ ಕೊಟ್ಟಿರುವುದೇ ಹೊರತು ನೀರು ಕೊಡುವುದಕ್ಕೆ ಅಲ್ಲ. ಮೊದಲು 75.00 ಲಕ್ಷ ರೂ.ಗಳನ್ನು ಟಾಸ್ಕ್‌ಫೋರ್ಸ್ ಕಮಿಟಿಗೆ ಕೊಟ್ಟಿದ್ದೆವು, ಈಗ ಪುನಃ ಒಂದೂವರೆ ಕೋಟಿ ರೂಪಾಯಿಗಳನ್ನು ವಿಶೇಷ ಅನುದಾನವಾಗಿ ಕೊಟ್ಟಿದ್ದೇವೆ. ಟ್ಯಾಂಕರ್ ಮುಖಾಂತರ ದೇವನಹಳ್ಳಿಯಲ್ಲಿ 18 ಗ್ರಾಮಗಳಿಗೆ ಮತ್ತು ನೆಲಮಂಗಲದ 16 ಗ್ರಾಮಗಳಿಗೆ ಟ್ಯಾಂಕರ್ ಮುಖಾಂತರ ನೀರು ಸರಬರಾಜು ಮಾಡುತ್ತಿದ್ದೇವೆ. ಟ್ಯಾಂಕರ್‌ಗಳಿಗೆ ಸರಿಯಾಗಿ ಪೇಮೇಂಟ್ ಆಗುತ್ತಿಲ್ಲ ಎಂಬ ವಿಷಯವನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ, ಮಾನ್ಯ ಸಭಾಪತಿಯವರೇ, ತಾವು ಸಹ ನನ್ನ ಗಮನಕ್ಕೆ ತಂದಿದ್ದೀರಿ. ಆ ರೀತಿ ಯಾವುದೂ ಡಿಲೇ ಆಗದ ರೀತಿಯಲ್ಲಿ ನೋಡಿಕೊಳ್ಳಲಾಗುವುದು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಟ್ಯಾಂಕರ್ ಮುಖಾಂತರ ಕೊಡುವುದಕ್ಕೆ ಮಾತ್ರ ದಾರಿ ಇದೆಯೇ ಹೊರತು ಬೇರೆ ದಾರಿ ಯಾವುದೂ ಇಲ್ಲ. ಅಲ್ಲದೆ ಖಾಸಗಿ ಬೋರ್‌ವೆಲ್ ಅವರ ಮೇಲೆಯೂ ಸಹ ಸರ್ಕಾರ ಡಿಪೆಂಡ್ ಆಗಿದೆ. ಅವರ ಮುಖಾಂತರ ಸಹ ನಾವು ನೀರನ್ನು ತೆಗೆದುಕೊಳ್ಳುತ್ತಿದ್ದೇವೆ. ಈಗಾಗಿ ಎಲ್ಲಾ ರೀತಿಯಾದಂತಹ ಉಪ ಕ್ರಮವನ್ನು ತೆಗೆದುಕೊಂಡಿದ್ದೇವೆ, ಎಲ್ಲಾದರು ಪೇಮೆಂಟ್‌ನಲ್ಲಿ delay ಆಗುವುದಾದರೆ ಇನ್ನು ಮುಂದೆ ಅದನ್ನು ಸರಿಪಡಿಸುವಂತಹ ಕೆಲಸ ಮಾಡುತ್ತೇವೆ. ಮಾನ್ಯ ಕೃಷ್ಣಪ್ಪವರು ಇನ್ನು ಹೆಚ್ಚಿನ ರೀತಿಯಲ್ಲಿ ಅನುದಾನ ಬಿಡುಗಡೆ ಮಾಡುವ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ, ಒಂದು ಕಡೆ C.R.F., ಮುಖಾಂತರ ಅದನ್ನು ರೆವಿನ್ಯೂ ಇಲಾಖೆ ಡಿ.ಸಿ.ಯವರ ಮುಖಾಂತರ ಪೈಪ್‌ಲೈನ್ ಮತ್ತೊಂದು ಹಾಕುವುದಕ್ಕೆ ಅಲ್ಲಿಂದ ಹಣವನ್ನು ಕೊಡುತ್ತಾರೆ, ಇನ್ನು ಬೋರ್‌ವೆಲ್ ಹಾಕುವುದಕ್ಕೆ ಮತ್ತೊಂದಕ್ಕೆ ನಾವು ನಮ್ಮ ಟಾಸ್ಕ್‌ಫೋರ್ಸ್ ಮುಖಾಂತರ ಕೊಡುತ್ತೇವೆ. ಇನ್ನು ಅಲ್ಲಿ ಇರುವಂತಹ requirement ಗೆ ಇನ್ನು ಹೆಚ್ಚಿನ ಅನುದಾನ ಕೊಡುವಂಥದ್ದರ ಬಗ್ಗೆ ಸರ್ಕಾರ ಗಮನಿಸುತ್ತದೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಶ್ರೀ ಪಟೇಲ್ ಶಿವರಾಂ:-** ಮಾನ್ಯ ಸಭಾಪತಿಯವರೇ, ನಾವು ಈ ಬಗ್ಗೆ ಬಹಳ ಸಲ ಪ್ರಶ್ನೆಯನ್ನು ಕೇಳಿದ್ದೇವೆ, ಜಿಲ್ಲಾ ಪಂಚಾಯಿತಿಯಿಂದ ಬೋರ್‌ವೆಲ್‌ಗಳನ್ನು ಹಾಕುತ್ತಿಲ್ಲ.

**ಸಭಾಪತಿಯವರು:-** ಯಾರು ಏನು ಮಾತನಾಡುವುದಕ್ಕೂ ಸಾಧ್ಯವಿಲ್ಲ. ನೀವು ಹೇಳುತ್ತಿರುವಂತಹ ವಿಷಯದ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಸದನದಲ್ಲಿ ಸಭಾಪತಿಯವರ ಸ್ಥಾನದಲ್ಲಿ ಯಾರು ಕುಳಿತುಕೊಂಡಿರುತ್ತಾರೋ ಅವರ ಅಪ್ಪಣೆ ಪಡೆದು, ನಂತರ ಮಾತನಾಡಿದರೆ ಸಭೆ ಚೆನ್ನಾಗಿರುತ್ತದೆ. ತಾವು ಒಂದು ವಿಷಯವನ್ನು ದಯಮಾಡಿ ಗಮನಿಸಿ. ತಾವು ವಿಷಯವನ್ನು ನನ್ನ ಗಮನಕ್ಕೆ ತಂದು, ನಾನು ಒಪ್ಪಿದ ಮೇಲೆ ಮಾತನಾಡಬೇಕಲ್ಲವೆ? ಇಲ್ಲದೆ ಹೋದರೆ ಹೇಗೆ ಸರಿಯಾಗುತ್ತದೆ? ಈಗ ಮಾನ್ಯ ನೀರಾವರಿಯವರು ನಿಂತಿದ್ದಾರೆ, ಅವರ ಹೆಸರನ್ನು ನಾನು ಕರೆದಿದ್ದೇನೆ. ನೀರಾವರಿ ಬಗ್ಗೆ, ಬರದ ಬಗ್ಗೆ ಚರ್ಚೆ ಮಾಡುವಂತಹ ಸಮಯದಲ್ಲಿ ಮಾತನಾಡಿ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಸಮಸ್ಯಾತ್ಮಕ ಹಳ್ಳಿಗಳು ಕೇವಲ ಬೆಂಗಳೂರು ಗ್ರಾಮಾಂತರದಲ್ಲಿ ಮಾತ್ರವಲ್ಲ, ಮಲೆನಾಡು ಪ್ರದೇಶಗಳಾದಂತಹ ಕೊಡಗು, ಚಿಕ್ಕಮಗಳೂರು ಎಲ್ಲಾ ಕಡೆಗಳಲ್ಲಿಯೂ ಇದೆ. ಆದರೆ ಸರ್ಕಾರ ಇದರ ಬಗ್ಗೆ ಯಾವ ರೀತಿಯಾದಂತಹ ಕ್ರಮಗಳನ್ನು ತೆಗೆದುಕೊಂಡಿದೆ? ಸರ್ಕಾರ ಶಾಶ್ವತವಾದಂತಹ ಕುಡಿಯುವ ನೀರಿನ ಯೋಜನೆಯನ್ನು ಮಾಡಬಹುದುದಲ್ಲವೆ? ನಮ್ಮ ಕಡೆ ಹಳ್ಳ, ತೊರೆ ಮುಂತಾದ ಕಡೆಗಳಲ್ಲಿ ನೀರು ಸಿಗುತ್ತದೆ. ಅದಕ್ಕೆ ಒಂದು ಶಾಶ್ವತವಾದಂತಹ ಪರಿಹಾರವನ್ನು ಮಾಡಿ. ಈ ರೀತಿ ಪ್ರತೀ ವರ್ಷ ಸಮಸ್ಯಾತ್ಮಕ ಹಳ್ಳಿಗಳು ಎಂದು ಹೇಳಿ ಯಾವಾಗಲೂ ಉತ್ತರವನ್ನು ಕೊಡುತ್ತೀರಿ. ಈ ವಿಷಯ ಹಿಂದೆಯೂ ಸಹ ಪ್ರಸ್ತಾಪವಾಗಿದೆ. ಆದಕಾರಣ ಶಾಶ್ವತವಾದಂತಹ ಕುಡಿಯುವ ನೀರಿಗೆ ಒಂದು ಯೋಜನೆಯನ್ನು ಮಾಡಬೇಕು. ಏಕೆಂದರೆ, ಈಗ ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆಯಲ್ಲಿ ಹಣ ಬರುತ್ತದೆ. ಅದರ ಜೊತೆಗೆ ಸರ್ಕಾರ ಹಾಗೂ ಜಿಲ್ಲಾ ಪಂಚಾಯತಿ ವತಿಯಿಂದ ಹಣವನ್ನು ಒದಗಿಸಿ ಆ ತಾಲ್ಲೂಕಿಗೆ ಒಂದು ದೊಡ್ಡ water

supply scheme ಮಾಡಿದರೆ enroute ಸುಮಾರು 20 ಹಳ್ಳಿಗಳನ್ನು ಕವರ್ ಮಾಡಬಹುದು. ಆ ರೀತಿ ಮಾಡುವುದಕ್ಕೆ ಏಕೆ ಪ್ರಯತ್ನ ಮಾಡಬಾರದು ಎಂಬುದು ನನ್ನ ಪ್ರಶ್ನೆ.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಸಹ ಆ ಪ್ರಯತ್ನದಲ್ಲಿಯೇ ಇದ್ದೇವೆ. ಒಂದು, ತಾತ್ಕಾಲಿಕವಾಗಿ ತಕ್ಷಣ ಬೋರ್‌ವೆಲ್ ಹಾಕಿಸುವುದು, ಮತ್ತೊಂದು ತುರ್ತಾಗಿ ಏನು ಮಾಡಬೇಕು ಅದನ್ನು ಮಾಡುತ್ತಿದ್ದೇವೆ. ಆದರೆ ಶಾಶ್ವತ ಕುಡಿಯುವ ನೀರಿನ ಪರಿಹಾರ ಏನಿದೆ ಅದಕ್ಕೂ ಸಹ ನಾವು ಬಹಳ ಮಹತ್ವ ಕೊಡುತ್ತಿದ್ದೇವೆ. ಈಗಾಗಲೇ 300 multi-village schemes ಚಾಲ್ತಿಯಲ್ಲಿದೆ. ಅದರಲ್ಲಿ 100 already complete ಮಾಡಿದ್ದೇವೆ. 200 process ನಲ್ಲಿದೆ, ಇತ್ತೀಚೆಗೆ ನಡೆದ ಸಭೆಯಲ್ಲಿ ರೂ.1,200.00 ಕೋಟಿ ಅಷ್ಟು cost ಇರುವಂಥ multi-village schemes ಅನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಅದು ಪ್ರೊಸೆಸ್‌ನಲ್ಲಿದೆ. ಈಗೇನು surface water source ಏನಿದೆ, ಅಂದರೆ canal ಮುಖಾಂತರ ಕೆರೆಗಳ ಮುಖಾಂತರ, ನದಿ ಮೂಲದಿಂದ ಖಾಯಂ ಆದಂತಹ ಒಂದು ಶಾಶ್ವತ ಕುಡಿಯುವ ನೀರಿನ ಯೋಜನೆಗಳಿಗೆ ಆದಷ್ಟು ಚಾಲನೆ ಕೊಡುತ್ತಿದ್ದೇವೆ. ಮಹತ್ವ ಕೊಡುತ್ತಿದ್ದೇವೆ. ಅದಕ್ಕೆ ಬೇಕಾದಂತಹ ವಿವರಣೆಯನ್ನು ಸಹ ತಮಗೆ ಒದಗಿಸಿಕೊಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ನೀರಾವರಿಯವರೆ ನಿಮ್ಮ ಪ್ರಶ್ನೆಗೆ ಸಮಯವನ್ನು ಕೇಳಿದ್ದಾರೆ. ಮಾನ್ಯ ಸದಸ್ಯರು ತಾಲ್ಲೂಕುವಾರು ವಿವರಣೆಯನ್ನು ಕೇಳಿದ್ದಾರೆ. ಅದಕ್ಕಾಗಿ ನಮಗೆ ಸ್ವಲ್ಪ ಸಮಯವಬೇಕಾಗುತ್ತದೆ ಎಂದು ಮಾನ್ಯ ಮಂತ್ರಿಗಳು ಕೇಳಿದ್ದಾರೆ. ಆದ್ದರಿಂದ ನಿಮ್ಮ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ. ನಂತರ ನಿಮ್ಮ ಪ್ರಶ್ನೆಗೆ ಉತ್ತರವನ್ನು ಕಳುಹಿಸಿ ಕೊಡಲು ತಿಳಿಸಲಾಗುತ್ತದೆ.

**ಶ್ರೀ ಎಚ್.ಸಿ.ನೀರಾವರಿ:-** ಮಾನ್ಯ ಸಭಾಪತಿಗಳೆ, ಮಾತನಾಡಲು ನನಗೆ ಒಂದು ನಿಮಿಷ ಸಮಯವನ್ನು ಕೊಡಬೇಕು.

**ಸಭಾಪತಿಯವರು:-** ಪ್ರಶ್ನೆ ಬಗ್ಗೆ ಬೇಡ. ವಿಷಯದ ಬಗ್ಗೆ ಹೇಳಿ.

**ಶ್ರೀ ಎಚ್.ಸಿ. ನೀರಾವರಿ:-** ಮಾನ್ಯ ಸಭಾಪತಿಗಳೆ, ನನ್ನ ಪ್ರಶ್ನೆ ಬಹಳ ಸರಳವಾಗಿದೆ. ಕೃಷಿ ಬಜೆಟ್‌ನ್ನು ಮಂಡಿಸುವುದು ನಿಜ. ಹಣ ಎಷ್ಟು ಇದೆ ಎನ್ನುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಎಷ್ಟು ಖರ್ಚಾಗಿದೆ ಎನ್ನುವುದು ಗೊತ್ತು. ಆದರೂ ಏನೊ ದುರುದ್ದೇಶದಿಂದ ಉತ್ತರ ಕೊಡುವುದನ್ನು ಮುಂದಕ್ಕೆ ಹಾಕುತ್ತಿದ್ದಾರೆ. ಅಧಿವೇಶನ ನಡೆಯುವುದು ಇನ್ನು ಮೂರು ದಿನಗಳು ಮಾತ್ರ. ನಾಳೆ ನನಗೆ ಉತ್ತರವನ್ನು ಕೊಡಿಸುತ್ತೀರಾ?

**ಸಭಾಪತಿಯವರು:-** ನಾಳೆ ಆಗುವುದಿಲ್ಲ. ಮಂತ್ರಿಗಳು ಒಂದು ವಾರ ಸಮಯವನ್ನು ಕೇಳಿದ್ದಾರೆ.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಗಳೆ, ನನಗೆ ಒಂದು ವಿಷಯವನ್ನು ಇಲ್ಲಿ ತಿಳಿಸಬೇಕು. ತಾಲ್ಲೂಕುವಾರು ಮಾಹಿತಿ ನನ್ನ ಹತ್ತಿರ ಇಲ್ಲ ಅದಕ್ಕಾಗಿ ಸಮಯವನ್ನು ಕೊಡಬೇಕು ಎಂದು ಮಾನ್ಯ ಮಂತ್ರಿಗಳು ಕೇಳಿದ್ದಾರೆ. ಜನವರಿ ಕೊನೆಯವರಿಗೆ ಅಧಿಕೃತವಾಗಿ ಸರ್ಕಾರದ ವತಿಯಿಂದ, ಅವರ ಕಾರ್ಯದರ್ಶಿಗಳ ಮುಖಾಂತರ, ಮಂಜೂರಾದ ಹಣವೆಷ್ಟು, ಬಿಡುಗಡೆಯಾದ ಹಣವೆಷ್ಟು, ಖರ್ಚಾದ ಹಣವೆಷ್ಟು ಎನ್ನುವ ಅಧಿಕೃತವಾದ ವರದಿಯನ್ನು ಸರ್ಕಾರದ ವತಿಯಿಂದಲೇ ಕೊಟ್ಟಿದ್ದಾರೆ. ಈಗ ಮಾಹಿತಿ ಎಲ್ಲ ಎನ್ನುವುದಾದರೆ ಅದನ್ನು ಸದನದಲ್ಲಿ ಏಕೆ ಮಂಡಿಸಬಾರದು? ಅಧಿಕೃತವಾದ ವರದಿಯನ್ನು ಸರ್ಕಾರದಿಂದಲೇ ಕೊಟ್ಟಿರುತ್ತಾರೆ. ಈಗ ಉತ್ತರ ಹೇಳಲು ತಯಾರಿಲ್ಲ ಎಂದರೆ ಏನು ಕಾರಣ ಎನ್ನುವುದನ್ನು ಹೇಳಬೇಕಾಗುತ್ತದೆ. ದಯಮಾಡಿ ಈ ರೀತಿ ಸದನವನ್ನು ತಪ್ಪು ದಾರಿಗೆ ಎಳೆಯುವಂತಹ ಪ್ರಯತ್ನವನ್ನು ಯಾವ ಮಂತ್ರಿಗಳು ಮಾಡಬಾರದು. ಇರುವಂತಹ ಮಾಹಿತಿಯನ್ನು ಕೊಡಲಿ. ಇನ್ನು ಎರಡು-ಮೂರು ದಿನಗಳಾದ ಮೇಲೆ

ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗುತ್ತದೆ. ಪ್ರಶ್ನೆ ಚರ್ಚೆಯಾಗದಿದ್ದರೆ ಉಪಪ್ರಶ್ನೆಗೆ ಅವಕಾಶವಿರುವುದಿಲ್ಲ. ಕೃಷಿ ಬಜೆಟ್‌ನಲ್ಲಿ ಏನು ಇದೆ ಎನ್ನುವ ಬಗ್ಗೆ ಪೂರ್ತಿ ಮಾಹಿತಿ ದೊರೆಯದಿದ್ದರು ಸಹ ಈ ಪ್ರಶ್ನೆ ಮೂಲಕ ಸ್ವಲ್ಪವಾದರು ಮಾಹಿತಿಯನ್ನು ಪಡೆಯಬಹುದು. ಈ ರೀತಿಯ ವರ್ತನೆಗೆ ಸರ್ಕಾರದ ವತಿಯಿಂದ, ಮಂತ್ರಿಗಳ ವತಿಯಿಂದ ಖಂಡಿತವಾಗಿ ಆಗಲು ತಾವು ಬಿಡಬಾರದು. ಏಕೆಂದರೆ ಇನ್ನು ಮುಂದೆ ಉತ್ತರ ಕೇಳಲು ನಮಗೆ ಅವಕಾಶವಿಲ್ಲ. ಅಧಿಕೃತವಾಗಿ ಪತ್ರದ ಮೂಲಕ ಇದನ್ನು ನಿಮಗೆ ಕಳುಹಿಸಲಾಗಿದೆ. ಇದು ಹಕ್ಕುಚ್ಯುತಿಯ ಪ್ರಶ್ನೆಯು ಆಗುತ್ತದೆ. ಅವರು ಕೊಟ್ಟಿರುವಂತಹ ಮಾಹಿತಿಯನ್ನು ಅಧಿಕೃತವಾಗಿ ತಮಗೆ ಕಳುಹಿಸಿ, ಹಕ್ಕುಚ್ಯುತಿ ಮಂಡನೆಗೂ ಕೂಡ ನಾವು ತಮ್ಮ ಅನುಮತಿಯನ್ನು ಕೇಳುತ್ತೇವೆ.

**ಸಭಾಪತಿಯವರು:–** ಮಂತ್ರಿಗಳೆ ತಾವು ಏನಾದರು ಹೇಳುತ್ತೀರಾ?

**ಶ್ರೀ ಉಮೇಶ ಕತ್ತಿ:–** ಮಾನ್ಯ ಸಭಾಪತಿಗಳೆ, ಅವರು ಕೇಳಿರುವ ಪ್ರಶ್ನೆಯನ್ನು ಕೂಲಂಕೂಷ ನೋಡಿದರೆ, 2011–12ನೇ ಸಾಲಿನ ಕೃಷಿ ಬಜೆಟ್‌ಗೆ ಒಟ್ಟು ಒದಗಿಸಿದ ಹಣವೆಷ್ಟು ಎಂದು, ಕೃಷಿ ಬಜೆಟ್‌ನಲ್ಲಿ 11 ಇಲಾಖೆಗಳು ಬರುತ್ತವೆ. ಅದಕ್ಕೆ ಸಂಬಂಧಪಟ್ಟ ಇಲಾಖೆಯಿಂದ ಉತ್ತರವನ್ನು ತರಿಸಿಕೊಳ್ಳಬೇಕು.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಗಳೇ, 11 ಇಲಾಖೆಗಳು ಬಂದರೂ ಕೂಡ, ಕೃಷಿ ಸಚಿವರಿಗೆ ನೇರವಾಗಿ ಕೇಳಿರುವ ಪ್ರಶ್ನೆ ಅವರ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾತ್ರ. ತೋಟಗಾರಿಕೆ ಬಗ್ಗೆ ಇದ್ದರೆ, ಪಶುಸಂಗೋಪನೆ ಇಲಾಖೆಗೆ ಸಂಬಂಧಪಟ್ಟಿದ್ದರೆ ಸಂಬಂಧಪಟ್ಟ ಮಂತ್ರಿಗಳನ್ನು ಕೇಳುತ್ತೇವೆ. ನಾವು ಬರಿ ಕೃಷಿಗೆ ಸಂಬಂಧಪಟ್ಟ ಪ್ರಶ್ನೆಯನ್ನು ಕೇಳಲಾಗಿದೆ, ಆದರೂ ತಪ್ಪಿಸಿಕೊಳ್ಳಲು ಈ ರೀತಿ ಉತ್ತರವನ್ನು ಕೊಡುತ್ತಿದ್ದಾರೆ.

**ಶ್ರೀ ಉಮೇಶ ಕತ್ತಿ:–** ಮಾನ್ಯ ಸಭಾಪತಿಗಳೆ, ಜಿಲ್ಲಾವಾರು, ತಾಲ್ಲೂಕುವಾರು ವಿವರಣೆಯನ್ನು ಕೇಳಿದ್ದಾರೆ. ತಾವು ಅನುಮತಿ ಕೊಟ್ಟರೆ ಎರಡು ದಿನಗಳಲ್ಲಿ ಜಿಲ್ಲಾವಾರು ಮಾಹಿತಿಯನ್ನು ಕೊಡಲು ಸಾಧ್ಯವಿದೆ. ತಾಲ್ಲೂಕುವಾರು ವಿವರಣೆ ಬೇಕು ಎಂದರೆ, ಮಾಹಿತಿಯನ್ನು ತರಿಸಿಕೊಳ್ಳಬೇಕಾಗುತ್ತದೆ, ಅದಕ್ಕೆ ಸಮಯ ಬೇಕಾಗುತ್ತದೆ. ಅದರ ಬಗ್ಗೆ ತಾವು ತೀರ್ಮಾನ ತೆಗೆದುಕೊಳ್ಳಬೇಕು. ಕೃಷಿ ಬಜೆಟ್ ಬಗ್ಗೆ ಗಮನವನ್ನು ಸೆಳೆದಿದ್ದಾರೆ. ಕೃಷಿ ಬಜೆಟ್ ಮಂಡನೆ ಮಾಡಿದವರು ರಾಜ್ಯದ ಹಣಕಾಸಿನ ಮಂತ್ರಿಗಳು, ಆದ್ದರಿಂದ ಕೃಷಿ ಬಜೆಟ್ ಬಗ್ಗೆ ಮಾಹಿತಿ ಕೇಳಿದ್ದರಿಂದ ಮಾಹಿತಿಯನ್ನು ಕ್ರೋಢೀಕರಣ ಮಾಡಿ ಕೊಡಬೇಕು ಎಂದು ಸಮಯವನ್ನು ಕೇಳಲಾಗಿದೆ. ಕೃಷಿಗೆ ಸಿಮೀತವಾಗಿ ಉತ್ತರ ಬೇಕು ಎನ್ನುವುದಾದರೆ ನಾನು ಮಾಹಿತಿಯನ್ನು ತರಿಸಿ ಕೊಡಲು ಸಾಧ್ಯವಿದೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಆದಷ್ಟು ಬೇಗ ಉತ್ತರವನ್ನು ಸಂಗ್ರಹ ಮಾಡಿ, ಸದನ ನಡೆಯುತ್ತಿದ್ದರೆ ಸದನದಲ್ಲಿ ಇಲ್ಲದಿದ್ದರೆ ಸದಸ್ಯರಿಗೆ ಉತ್ತರ ಮುಟ್ಟಿಸುವ ವ್ಯವಸ್ಥೆಯನ್ನು ಮಾಡಿ.

**ಶ್ರೀ ಎಚ್.ಸಿ.ನೀರಾವರಿ:–** ಮಾನ್ಯ ಸಭಾಪತಿಗಳೆ, ಅವರ ಇಲಾಖೆಗೆ ಸಂಬಂಧಪಟ್ಟ ಹಾಗೆ ಎರಡು ದಿನಗಳಲ್ಲಿ ಮಾಹಿತಿಯನ್ನು ಸಂಗ್ರಹ ಮಾಡಿ ಉತ್ತರವನ್ನು ಕೊಡುತ್ತೇವೆ ಎಂದು ಮಂತ್ರಿಗಳು ಹೇಳಿದ್ದಾರೆ, ಹಾಗೆ ಮಾಡಲಿ.

**ಸಭಾಪತಿಯವರು:–** ಜಿಲ್ಲಾವಾರು ಮಾಹಿತಿ ಕೊಡುತ್ತೇವೆ ಎಂದು ಹೇಳಿದ್ದಾರೆ, ಕೊಡುತ್ತಾರೆ.

**ಗುಲ್ಬರ್ಗಾ ಜಿಲ್ಲೆಯಲ್ಲಿ ಅಬಕಾರಿ ಇಲಾಖೆಗೆ ಮಂಜೂರಾದ ಹುದ್ದೆಗಳ ಬಗ್ಗೆ**

**136; ಶ್ರೀ ಅಲ್ಲಮ ಪ್ರಭು ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಅಬಕಾರಿ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು? (ಹುದ್ದೆವಾರು ಮಾಹಿತಿ ನೀಡುವುದು);

ಆ) ಇವುಗಳಲ್ಲಿ ಭರ್ತಿಯಾಗಿರುವ ಹುದ್ದೆಗಳು ಎಷ್ಟು; ಖಾಲಿ ಇರುವ ಹುದ್ದೆಗಳು ಎಷ್ಟು; ಭರ್ತಿಗಾಗಿ ಕೈಗೊಂಡ ಕ್ರಮಗಳೇನು;

ಇ) ಅಧಿಕ ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಇರುವುದರಿಂದ ಕಳ್ಳಭಟ್ಟಿ ಹಾಗೂ ಅಕ್ರಮ ಸೇಂದಿ ಮಾರಾಟ ಪ್ರಕರಣಗಳನ್ನು ಪತ್ತೆ ಹಚ್ಚಲು ತೊಂದರೆಯಾಗುತ್ತಿದೆಯೇ;

ಈ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯನ್ನು ಕಳ್ಳಭಟ್ಟಿ ಮುಕ್ತ ಜಿಲ್ಲೆಯನ್ನಾಗಿ ಪರಿವರ್ತಿಸುವುದಕ್ಕೆ ಸರ್ಕಾರ ನಿಗಧಿಪಡಿಸಿದ ಅವಧಿ ಎಷ್ಟು ?

**ಶ್ರೀ ಎಂ.ಪಿ.ರೇಣುಕಾಚಾರ್ಯ (ಅಬಕಾರಿ ಸಚಿವರು):**

ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅಬಕಾರಿ ಇಲಾಖೆಗೆ ಸಂಬಂಧಪಟ್ಟಂತೆ ವಿವಿಧ ವೃಂದಗಳ ಒಟ್ಟು ಮಂಜೂರಾದ ಹುದ್ದೆಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ಜಿಲ್ಲೆಯ ಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ |
|---|---|---|
| 1. | ಗುಲ್ಬರ್ಗಾ | 146 |
| 2. | ಯಾದಗಿರಿ | 72 |

ಹುದ್ದೆವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮಂಜೂರಾದ ಹುದ್ದೆಗಳ ಬಾಬ್ತು, ಭರ್ತಿ ಮಾಡಲಾದ ಮತ್ತು ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಜಿಲ್ಲೆಯ ಹೆಸರು | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|
| 1. | ಗುಲ್ಬರ್ಗಾ | 102 | 44 |
| 2. | ಯಾದಗಿರಿ | 44 | 28 |

ಖಾಲಿ ಇರುವ ವಿವಿಧ ವೃಂದದ ಹುದ್ದೆಗಳನ್ನು ನೇಮಕಾತಿ, ಬಡ್ತಿ ಮತ್ತು ವರ್ಗಾವಣಾ ಸಮಯದಲ್ಲಿ ಆದ್ಯತೆಯ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಖಾಲಿ ಇರುವ ಹುದ್ದೆಗಳಿಗೆ ಹೆಚ್ಚುವರಿ ಪ್ರಭಾರ ವ್ಯವಸ್ಥೆ ಮಾಡಲಾಗಿದ್ದು, ದಿನನಿತ್ಯದ ಕಾರ್ಯ ಚಟುವಟಿಕೆಗಳಿಗೆ ತೊಂದರೆ ಯಾಗದಂತೆ ಕ್ರಮವಹಿಸಬೇಕಾಗಿದೆ.

ಇ) ಕಾರ್ಯನಿರ್ವಾಹಕ ಸಿಬ್ಬಂದಿಗಳ ಕೊರತೆ ಇದ್ದು, ಆದಾಗ್ಯೂ ಕಳ್ಳಭಟ್ಟಿ ಹಾಗೂ ಅಕ್ರಮ ಸೇಂದಿ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲಾಗುತ್ತಿದೆ. ಏಪ್ರಿಲ್-2011 ರಿಂದ ಇದುವರೆಗೆ ಈ ಎರಡು ಜಿಲ್ಲೆಗಳಲ್ಲಿ 2564 ಲೀ. ಕಳ್ಳಭಟ್ಟಿ ಸಾರಾಯಿ, 18,790 ಲೀ. ಬೆಲ್ಲದ ಕೊಳೆಯನ್ನು ನಾಶಪಡಿಸಲಾಗಿರುತ್ತದೆ. ನೆರೆಯ ಆಂಧ್ರದಿಂದ ಸೇಂದಿ ಅಕ್ರಮ ಸಾಗಾಣಿಕೆ ಸಮಸ್ಯೆ ಇದ್ದು, ಇದೇ ಅವಧಿಯಲ್ಲಿ 9291 ಲೀ. ಸೇಂದಿ, 658.5 ಕೆ.ಜಿ. ಸೇಂದಿಗೆ ಬಳಸುವ ಕ್ಲೋರೋ ಹೈಡ್ರೇಟ್ ಜಪ್ತು ಮಾಡಲಾಗಿದ್ದು, 155 ಪ್ರಕರಣ ದಾಖಲಿಸಿ 65 ವ್ಯಕ್ತಿಗಳನ್ನು ಬಂಧಿಸಲಾಗಿದೆ.

ಈ) ಇಡೀ ರಾಜ್ಯವನ್ನು ಕಳ್ಳಭಟ್ಟಿ ಮುಕ್ತವಾಗಿಸಲು ಇಲಾಖೆಯು ಯೋಜಿಸಿದ್ದು, ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ. ಈ ಸಮಸ್ಯೆಯನ್ನು ಪೂರ್ಣವಾಗಿ ನಿಯಂತ್ರಿಸಲು ಪ್ರತಿ ಜಿಲ್ಲೆಯಲ್ಲಿರುವ ಕಳ್ಳಭಟ್ಟಿ ಕೇಂದ್ರಗಳನ್ನು ಪತ್ತೆಹಚ್ಚಿ ಸಣ್ಣ, ಮಧ್ಯಮ ಹಾಗೂ ದೊಡ್ಡ

ಕೇಂದ್ರಗಳೆಂದು ಗುರುತಿಸಲಾಗಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಏಪ್ರಿಲ್–2011 ರ ಅಂತ್ಯಕ್ಕೆ 37 ಸಣ್ಣ, 34 ಮಧ್ಯಮ ಹಾಗೂ 5 ದೊಡ್ಡ ಕಳ್ಳಭಟ್ಟಿ ಕೇಂದ್ರಗಳು ಜಾಗೃತ(ಆಕ್ಟೀವ್)ವಾಗಿದ್ದವು, ಇದೇ ರೀತಿ ಯಾದಗಿರಿ ಜಿಲ್ಲೆಯಲ್ಲಿ ಏಪ್ರಿಲ್–2011 ಅಂತ್ಯಕ್ಕೆ 19 ಸಣ್ಣ, 20 ಮಧ್ಯಮ ಹಾಗೂ 10 ದೊಡ್ಡ ಕೇಂದ್ರಗಳು ಜಾಗೃತವಾಗಿದ್ದವು. ಈ ಸಮಸ್ಯೆಯನ್ನು ಪೂರ್ಣವಾಗಿ ತೊಡೆದು ಹಾಕುವ ಮೊದಲ ಹೆಜ್ಜೆಯಾಗಿ ಜನರಲ್ಲಿ ಜಾಗೃತಿ ಮೂಡಿಸುವ “ಗ್ರಾಮ ಸಭೆ” ಕಾರ್ಯಕ್ರಮ ಪ್ರಾರಂಭಿಸಲಾಯಿತು. ಸ್ತ್ರೀ ಶಕ್ತಿ ಸಂಘಗಳು, ಪಂಚಾಯತಿಯ ಚುನಾಯಿತ ಪ್ರತಿನಿಧಿಗಳು, ಯುವಕರನ್ನು ಒಂದುಗೂಡಿಸಿ ಸಭೆ ನಡೆಸುವುದನ್ನು ಕಡ್ಡಾಯಗೊಳಿಸಲಾಗಿದೆ. ಪ್ರತಿ ಕಳ್ಳಭಟ್ಟಿ ಕೇಂದ್ರದ, ಸಾಮಾಜಿಕ ಭೌಗೋಳಿಕ ಹಾಗೂ ಆರ್ಥಿಕ ಸ್ಥಿತಿಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ, ಕಂದಾಯ, ಪೋಲೀಸ್, ಅರಣ್ಯ, ಗ್ರಾಮೀಣಾಭಿವೃದ್ಧಿ ಇಲಾಖೆಗಳ ಸಹಕಾರ ದೊಂದಿಗೆ ಕಳ್ಳಭಟ್ಟಿ ನಿರ್ಮೂಲನೆಗೊಳಿಸುವ ದಿಶೆಯಲ್ಲಿ ಪ್ರಗತಿ ಸಾಧಿಸಲಾಗಿದೆ. ಈ ಅವಧಿಯಲ್ಲಿ ಈ ಎರಡು ಜಿಲ್ಲೆಗಳಲ್ಲಿ 52 ಸಣ್ಣ, 48 ಮಧ್ಯಮ ಹಾಗೂ 10 ದೊಡ್ಡ ಕೇಂದ್ರಗಳನ್ನು ನಿರ್ಮೂಲನೆ ಗೊಳಿಸಲಾಗಿದ್ದು ಈ ಎರಡು ಜಿಲ್ಲೆಗಳಲ್ಲಿ ಹಾಲಿ 06 ಸಣ್ಣ, 08 ಮಧ್ಯಮ ಹಾಗೂ 01 ದೊಡ್ಡ ಕೇಂದ್ರಗಳು ಮಾತ್ರ ಬಾಕಿ ಉಳಿದಿರುತ್ತವೆ. ನಿರಂತರ ಗಸ್ತು, ಹಳೇ ಆರೋಪಿಗಳ ಮೇಲೆ ನಿಗಾ ಜಾರಿ ಮತ್ತು ತನಿಖಾ ಕೌಶಲ್ಯ ಹೆಚ್ಚಳ ಇತ್ಯಾದಿ ಕಾರ್ಯ ವಿಧಾನಗಳನ್ನು ರೂಪಿಸಿ ರಾಜ್ಯದಾದ್ಯಂತ ಅನುಷ್ಠಾನಗೊಳಿಸುವ ಮೂಲಕ ಗುರಿ ತಲುಪಲಾಗುತ್ತಿದೆ.

## ಅನುಬಂಧ

## ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಅಬಕಾರಿ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ, ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ, ಖಾಲಿ ಇರುವ ಹುದ್ದೆಗಳ ಸಂಖ್ಯೆ

| ಕ್ರಮ ಸಂ. | ಹುದ್ದೆಗಳು | ಗುಲ್ಬರ್ಗಾ ಜಿಲ್ಲೆ | | | ಯಾದಗಿರಿ ಜಿಲ್ಲೆ | | |
|---|---|---|---|---|---|---|---|
| | | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
| 1. | ಅಬಕಾರಿ ಜಂಟಿ ಆಯುಕ್ತರು ವಿಭಾಗೀಯ ಮಟ್ಟದ ಹುದ್ದೆ (ಕೇಂದ್ರ ಸ್ಥಾನ, ಗುಲ್ಬರ್ಗಾ) | 01 | – | 01 | – | – | – |
| 2. | ಅಬಕಾರಿ ಉಪ ಆಯುಕ್ತರು | 01 | – | 01 | 01 | 01 | – |
| 3. | ಅಬಕಾರಿ ಅಧೀಕ್ಷಕರು | 02 | – | 02 | – | – | – |
| 4. | ಅಬಕಾರಿ ಉಪ ಅಧೀಕ್ಷಕರು | 03 | 01 | 02 | 01 | 01 | – |

| | | | | | | | |
|---|---|---|---|---|---|---|---|
| 5. | ಅಬಕಾರಿ ನಿರೀಕ್ಷಕರು | 10 | 10 | – | 06 | 05 | 01 |
| 6. | ಕಛೇರಿ ಅಧೀಕ್ಷಕರು | 01 | 01 | – | 01 | 0 | 01 |
| 7. | ಅಬಕಾರಿ ಉಪ ನಿರೀಕ್ಷಕರು | 20 | 05 | 15 | 8 | 2 | 6 |
| 8. | ಪ್ರಥಮ ದರ್ಜೆ ಸಹಾಯಕರು | 05 | 05 | – | 02 | 02 | – |
| 9. | ಶೀಘ್ರಲಿಪಿಗಾರರು | 02 | 02 | – | 01 | 01 | – |
| 10. | ದ್ವಿತೀಯ ದರ್ಜೆ ಸಹಾಯಕರು | 12 | 12 | – | 05 | 05 | – |
| 11. | ಅಬಕಾರಿ ಹಿರಿಯ ರಕ್ಷಕರು | 12 | 07 | 05 | 05 | 05 | – |
| 12. | ಅಬಕಾರಿ ರಕ್ಷಕರು | 67 | 58 | 09 | 33 | 19 | 14 |
| 13. | ವಾಹನ ಚಾಲಕರು | 10 | 01 | 09 | 07 | 02 | 05 |
| 14. | ಬೆರಳಚ್ಚುಗಾರರು | – | – | – | 01 | 01 | – |
| 15. | ಗ್ರೂಪ್–ಡಿ ನೌಕರರು | – | – | – | 01 | – | 01 |
| | **ಒಟ್ಟು** | **140** | **102** | **44** | **72** | **44** | **28** |

## ರಸ್ತೆ ಕಾಮಗಾರಿಗಳ ಬಗ್ಗೆ

**153; ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರು)**

ಅ) 2009 ರಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ರಸ್ತೆ ಕಾಮಗಾರಿಗಳಿಗೆ ವೆಚ್ಚ ಮಾಡಿದ ಹಣವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು);

ಆ) ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಇಲಾಖೆಯವತಿಯಿಂದ ಅಭಿವೃದ್ಧಿ ಮಾಡಲು ಉದ್ದೇಶಿಸಿರುವ ರಸ್ತೆಗಳು ಮತ್ತು ಸೇತುವೆಗಳು ಯಾವುವು; (ತಾಲ್ಲೂಕುವಾರು ವಿವರ ನೀಡುವುದು)

ಇ) ಕೊಪ್ಪಳ ಜಿಲ್ಲೆ ಯಲಬುರ್ಗ ತಾಲ್ಲೂಕಿನ ವ್ಯಾಪ್ತಿಯಲ್ಲಿ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)**

ಅ) ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧ–1ರಲ್ಲಿ ವಿವರಿಸಿದೆ.

ಆ) ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧ–2ರಲ್ಲಿ ವಿವರಿಸಿದೆ. ಹಾಗೂ ಎಲ್ಲಾ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಇ) ಯಲಬುರ್ಗಾ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಬಹಳಷ್ಟು ರಸ್ತೆಗಳು ಹಾಳಾಗಿದ್ದು, ವಾಹನ ಸಂಚಾರಕ್ಕೆ ಅಡಚಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮಳೆಗಾಲದ ನಂತರ ಯಲಬುರ್ಗಾ ತಾಲ್ಲೂಕಿನ ಬಹಳಷ್ಟು ರಸ್ತೆಗಳು ಹಾಳಾಗಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದ ಕಾರಣ ರಸ್ತೆಯ ತಗ್ಗುಗುಂಡಿಗಳನ್ನು ಮುಚ್ಚಿ ಗಿಡಗಂಟಿಗಳನ್ನು ಸ್ವಚ್ಛಗೊಳಿಸಿ, ಶೋಲ್ಡರ್ಸ್‌ಗಳ ದುರಸ್ತಿ ಇತ್ಯಾದಿ ನಿರ್ವಹಣೆ ಕೆಲಸಗಳನ್ನು

ಕೈಗೆತ್ತಿಕೊಂಡು ಫೆಬ್ರವರಿ–2012ರ ಅಂತ್ಯದೊಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿತ್ತು. ಅದರಂತೆ ದುರಸ್ತಿ ಹಾಗೂ ನಿರ್ವಹಣೆ ಕಾಮಗಾರಿಗಳನ್ನು 31–03–2012ರೊಳಗಾಗಿ ಪೂರ್ಣಗೊಳಿಸಿ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಲು ಎಲ್ಲಾ ಕ್ರಮ ಕೈಗೊಳ್ಳಲಾಗಿದೆ.

# ಅನುಬಂಧ–1

## 2008 ರಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆವತಿಯಿಂದ ವಿವಿದ ಲೆಕ್ಕ ಶೀರ್ಷಿಕೆಗಳಲ್ಲಿ ರಸ್ತೆ ಕಾಮಗಾರಿಗಳಿಗೆ ವೆಚ್ಚ ಮಾಡಿದ ವಿವರ

| ಕ್ರ. ಸಂ. | ಲೆಕ್ಕ ಶೀರ್ಷಿಕೆ | 2008–09 | | | | | 2009–10 | | | | | 2010–11 | | | | | 2011–12 | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ಗಂಗಾವತಿ | ಕನಕಗಿರಿ | ಕೊಪ್ಪಳ | ಕುಷ್ಟಗಿ | ಯಲಬುರ್ಗಾ | ಗಂಗಾವತಿ | ಕನಕಗಿರಿ | ಕೊಪ್ಪಳ | ಕುಷ್ಟಗಿ | ಯಲಬುರ್ಗಾ | ಗಂಗಾವತಿ | ಕನಕಗಿರಿ | ಕೊಪ್ಪಳ | ಕುಷ್ಟಗಿ | ಯಲಬುರ್ಗಾ | ಗಂಗಾವತಿ | ಕನಕಗಿರಿ | ಕೊಪ್ಪಳ | ಕುಷ್ಟಗಿ | ಯಲಬುರ್ಗಾ |
| 1 | 5054–ORF | 79.00 | 28.00 | 521.75 | 260.86 | 143.89 | 233.40 | 288.23 | 973.34 | 339.03 | 244.40 | 318.00 | 212.55 | 237.38 | 40.78 | 292.14 | 235.53 | 106.75 | 183.91 | 108.37 | 99.10 |
| 2 | 5054–ಸುವರ್ಣ | –– | –– | –– | –– | –– | 35.94 | 53.40 | 192.76 | 98.06 | 89.62 | 1.53 | –– | 14.32 | 11.43 | 4.50 | 33.68 | 14.93 | 39.60 | 20.30 | 59.64 |
| 3 | 5054–SH–ನವೀಕರಣ | –– | –– | –– | –– | –– | –– | –– | –– | –– | –– | 38.38 | 0.40 | 0.30 | 109.22 | –– | 163.94 | 36.98 | 140.39 | 98.63 | 68.51 |
| 4 | 5054–ನಂಜುಂಡಪ್ಪ | 33.84 | 28.63 | 94.30 | 182.86 | 178.56 | 54.65 | 37.95 | 206.52 | 388.55 | 304.65 | 43.48 | 6.29 | 36.03 | 132.43 | 70.56 | 44.38 | 16.93 | 49.60 | 37.80 | 62.00 |
| 5 | 5054–SCP | 18.24 | 17.80 | 18.24 | 18.20 | 18.43 | 48.71 | 16.12 | 70.48 | 39.74 | 19.00 | 14.32 | 59.65 | 41.24 | 16.23 | 36.15 | 96.30 | 63.94 | 83.96 | 76.30 | 109.32 |
| 6 | 5054–TSP | 2.93 | 5.83 | 1.87 | 5.32 | 2.57 | 25.88 | 12.35 | 24.85 | 12.32 | 20.95 | 30.87 | 53.49 | 17.53 | 25.61 | 37.77 | 30.96 | 13.68 | 30.60 | 17.86 | 57.18 |
| 7 | 5054–ನಬಾರ್ಡ್ | 174.00 | 78.00 | 88.97 | 130.84 | 85.29 | 136.92 | 13.37 | 10.00 | 52.00 | –– | –– | –– | –– | –– | –– | 126.30 | 101.96 | 100.30 | 128.69 | 134.36 |
| 8 | 5054–CRF | –– | –– | –– | –– | –– | –– | –– | –– | –– | 25.00 | 64.51 | 97.20 | 491.35 | 0.57 | 144.88 | 136.90 | –– | 240.60 | 98.00 | 143.50 |
| 9 | 13ನೇ ಹಣಕಾಸು | –– | –– | –– | –– | –– | –– | –– | –– | –– | –– | –– | –– | –– | –– | –– | 60.30 | 38.69 | 40.70 | 39.68 | 72.76 |

| | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| **10** | 3054–SH | -- | -- | -- | -- | -- | -- | -- | -- | -- | -- | -- | -- | -- | -- | -- | 29.60 | 27.95 | 29.00 | 26.89 | 31.73 |
| **11** | 0354–ಯೋಜನೇತರ | -- | -- | -- | -- | -- | -- | -- | -- | -- | -- | -- | -- | -- | -- | -- | 109.60 | 100.96 | 116.80 | 109.00 | 110.59 |
| | | **308.01** | **156.26** | **725.13** | **598.08** | **428.74** | **535.40** | **421.42** | **1477.95** | **924.70** | **703.63** | **511.09** | **429.58** | **838.15** | **336.27** | **586.00** | **1067.49** | **522.77** | **1055.46** | **761.52** | **948.69** |

## ಅನುಬಂಧ-2

## 2011-12ನೇ ಪ್ರಸಕ್ತ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ

## ಅಭಿವೃದ್ಧಿ ಮಾಡಲು ಉದ್ದೇಶಿಸಿರುವ ರಸ್ತೆ ಮತ್ತು ಸೇತುವೆಗಳ ವಿವರ

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ-153(ಆ)ಕ್ಕೆ ಉತ್ತರಿಸುವುದು

| ಕ್ರ. ಸಂ. | ಲೆಕ್ಕ ಶೀರ್ಷಿಕೆ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | 2 | 3 |
| | **ಲೆಕ್ಕ ಶೀರ್ಷಿಕೆ : 5054 ಇತರೆ ರಸ್ತೆ ನಿರ್ಮಾಣ ಕಾಮಗಾರಿಗಳು** | |
| 1 | ಕೊಪ್ಪಳ ತಾಲೂಕಿನ ಹೊಸಗೊಂಡಬಾಳ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 2 | ಕೊಪ್ಪಳ ತಾಲೂಕಿನ ಹೊಸಗೊಂಡಬಾಳ ಗ್ರಾಮದ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 3 | ಕೊಪ್ಪಳ ತಾಲೂಕಿನ ಕುಣಿಕೇರಿ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 4 | ಕೊಪ್ಪಳ ತಾಲೂಕಿನ ಕುಣಿಕೇರಿ ಗ್ರಾಮದ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 5 | ಕೊಪ್ಪಳ ತಾಲೂಕಿನ ಹಿರೇಬಗನಾಳ (ಗವಿ ಮಠದ ಹತ್ತಿರ) ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 6 | ಕೊಪ್ಪಳ ತಾಲೂಕಿನ ಹಿರೇಬಗನಾಳ (ಗವಿ ಮಠದ ಹತ್ತಿರ) ಗ್ರಾಮದ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 7 | ಕೊಪ್ಪಳ ತಾಲೂಕಿನ ಕಾಸನಕಂಡಿ ಗ್ರಾಮದಲ್ಲಿ (ವೀರಣ್ಣ ದೇವಸ್ಥಾನದ ಹತ್ತಿರ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |

| | | |
|---|---|---|
| 8 | ಕೊಪ್ಪಳ ತಾಲೂಕಿನ ಕಾಸನಕಂಡಿ ಗ್ರಾಮದಲ್ಲಿ (ವೀರಣ್ಣ ದೇವಸ್ಥಾನದ ಹತ್ತಿರ) ಗ್ರಾಮದ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 9 | ಕೊಪ್ಪಳ ತಾಲೂಕಿನ ಅಗಳಕೇರಾ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 10 | ಕೊಪ್ಪಳ ತಾಲೂಕಿನ ಅಗಳಕೇರಾ ಗ್ರಾಮದ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 11 | ಕೊಪ್ಪಳ ತಾಲೂಕಿನ ಕೇರಹಳ್ಳಿ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 12 | ಕೊಪ್ಪಳ ತಾಲೂಕಿನ ಕೇರಹಳ್ಳಿ ಗ್ರಾಮದ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 13 | ಕೊಪ್ಪಳ ತಾಲೂಕಿನ ಕರ್ಕಿಹಳ್ಳಿ ಗ್ರಾಮದಲ್ಲಿ (ಪತ್ರೇಶ್ವರ ದೇವಸ್ಥಾನದ ಹತ್ತಿರ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 14 | ಕೊಪ್ಪಳ ತಾಲೂಕಿನ ಕರ್ಕಿಹಳ್ಳಿ ಗ್ರಾಮದಲ್ಲಿ (ಪತ್ರೇಶ್ವರ ದೇವಸ್ಥಾನದ ಹತ್ತಿರ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 15 | ಕೊಪ್ಪಳ ತಾಲೂಕಿನ ಗಳದಳ್ಳಿ ಗ್ರಾಮದಲ್ಲಿ (ಸಂಜೀವರಾಯ ದೇವಸ್ಥಾನ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 16 | ಕೊಪ್ಪಳ ತಾಲೂಕಿನ ಗಳದಳ್ಳಿ ಗ್ರಾಮದಲ್ಲಿ (ಸಂಜೀವರಾಯ ದೇವಸ್ಥಾನ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 17 | ಕೊಪ್ಪಳ ತಾಲೂಕಿನ ಶಿವಪೂರ ಗ್ರಾಮದಲ್ಲಿ (ಮಾರ್ಕಂಡೇಶ್ವರ ದೇವಸ್ಥಾನದ ಹತ್ತಿರ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 18 | ಕೊಪ್ಪಳ ತಾಲೂಕಿನ ಶಿವಪೂರ ಗ್ರಾಮದಲ್ಲಿ (ಮಾರ್ಕಂಡೇಶ್ವರ ದೇವಸ್ಥಾನದ ಹತ್ತಿರ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |

| | | |
|---|---|---|
| 19 | ಕೊಪ್ಪಳ ತಾಲೂಕಿನ ಗಿಣಿಗೇರಾ ಗ್ರಾಮದಲ್ಲಿ (ಪಿಡಬ್ಲ್ಯೂಡಿ ಹತ್ತಿರ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 20 | ಕೊಪ್ಪಳ ತಾಲೂಕಿನ ಗಿಣಿಗೇರಾ ಗ್ರಾಮದಲ್ಲಿ (ಪಿಡಬ್ಲ್ಯೂಡಿ ಹತ್ತಿರ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 21 | ಕೊಪ್ಪಳ ತಾಲೂಕಿನ ಕವಲೂರ ಗ್ರಾಮದಲ್ಲಿ (ಪಂಚಲಿಂಗೇಶ್ವರ ದೇವಸ್ಥಾನದ ಹತ್ತಿರ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 22 | ಕೊಪ್ಪಳ ತಾಲೂಕಿನ ಕವಲೂರ ಗ್ರಾಮದಲ್ಲಿ (ಪಂಚಲಿಂಗೇಶ್ವರ ದೇವಸ್ಥಾನದ ಹತ್ತಿರ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 23 | ಕೊಪ್ಪಳ ತಾಲೂಕಿನ ಹಟ್ಟಿ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 24 | ಕೊಪ್ಪಳ ತಾಲೂಕಿನ ಹಟ್ಟಿ ಗ್ರಾಮದಲ್ಲಿ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 25 | ಕೊಪ್ಪಳ ತಾಲೂಕಿನ ನೆಲೋಗಿಪುರ ಗ್ರಾಮದಲ್ಲಿ (ಮಾರುತ್ತೇಶ್ವರ ದೇವಸ್ಥಾನ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 26 | ಕೊಪ್ಪಳ ತಾಲೂಕಿನ ನೆಲೋಗಿಪುರ ಗ್ರಾಮದಲ್ಲಿ (ಮಾರುತ್ತೇಶ್ವರ ದೇವಸ್ಥಾನ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 27 | ಕೊಪ್ಪಳ ತಾಲೂಕಿನ ಹಂದ್ರಾಳ ಗ್ರಾಮದಲ್ಲಿ (ಫಕೀರೇಶ್ವರ ದೇವಸ್ಥಾನ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 28 | ಕೊಪ್ಪಳ ತಾಲೂಕಿನ ಹಂದ್ರಾಳ ಗ್ರಾಮದಲ್ಲಿ (ಫಕೀರೇಶ್ವರ ದೇವಸ್ಥಾನ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ | 2.25 |
| 29 | ಕೊಪ್ಪಳ ತಾಲೂಕಿನ ವದಗನಾಳ ಗ್ರಾಮದಲ್ಲಿ (ಹಮಿಗೇಶ್ವರ ದೇವಸ್ಥಾನ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 30 | ಕೊಪ್ಪಳ ತಾಲೂಕಿನ ವದಗನಾಳ ಗ್ರಾಮದಲ್ಲಿ (ಹಮಿಗೇಶ್ವರ ದೇವಸ್ಥಾನ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ | 2.25 |

| | | |
|---|---|---|
| | ಬುನಾದಿ ಕಾಮಗಾರಿ | |
| 31 | ಕೊಪ್ಪಳ ತಾಲೂಕಿನ ಬೇಳೂರು ಗ್ರಾಮದಲ್ಲಿ (ಬೆಟ್ಟದೇಶ್ವರ ದೇವಸ್ಥಾನ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 32 | ಕೊಪ್ಪಳ ತಾಲೂಕಿನ ಬೇಳೂರು ಗ್ರಾಮದಲ್ಲಿ (ಬೆಟ್ಟದೇಶ್ವರ ದೇವಸ್ಥಾನ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 33 | ಕೊಪ್ಪಳ ತಾಲೂಕಿನ ಯತ್ನಟ್ಟಿ ಗ್ರಾಮದಲ್ಲಿ (ಬಸವೇಶ್ವರ ದೇವಸ್ಥಾನ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 34 | ಕೊಪ್ಪಳ ತಾಲೂಕಿನ ಯತ್ನಟ್ಟಿ ಗ್ರಾಮದಲ್ಲಿ (ಬಸವೇಶ್ವರ ದೇವಸ್ಥಾನ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 35 | ಕೊಪ್ಪಳ ತಾಲೂಕಿನ ಓಜನಳ್ಳಿ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 36 | ಕೊಪ್ಪಳ ತಾಲೂಕಿನ ಓಜನಳ್ಳಿ ಗ್ರಾಮದಲ್ಲಿ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 37 | ಕೊಪ್ಪಳ ತಾಲೂಕಿನ ಗಿಣಿಗೇರಾ ಗ್ರಾಮದಲ್ಲಿ (ದ್ಯಾಮವ್ವನ ದೇವಸ್ಥಾನ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 38 | ಕೊಪ್ಪಳ ತಾಲೂಕಿನ ಗಿಣಿಗೇರಾ ಗ್ರಾಮದಲ್ಲಿ (ದ್ಯಾಮವ್ವನ ದೇವಸ್ಥಾನ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 39 | ಕೊಪ್ಪಳ ತಾಲೂಕಿನ ಹಲಗೇರಾ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 40 | ಕೊಪ್ಪಳ ತಾಲೂಕಿನ ಹಲಗೇರಾ ಗ್ರಾಮದಲ್ಲಿ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 41 | ಕೊಪ್ಪಳ ತಾಲೂಕಿನ ಗೊಂಡಬಾಳ (ಕರೇಮ್ಮನ ದೇವಸ್ಥಾನ) ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 42 | ಕೊಪ್ಪಳ ತಾಲೂಕಿನ ಗೊಂಡಬಾಳ (ಕರೇಮ್ಮನ ದೇವಸ್ಥಾನ) ಗ್ರಾಮದಲ್ಲಿ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |

| | | |
|---|---|---|
| 43 | ಕೊಪ್ಪಳ ತಾಲೂಕಿನ ಮುದ್ದಾಬಳ್ಳಿ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 44 | ಕೊಪ್ಪಳ ತಾಲೂಕಿನ ಮುದ್ದಾಬಳ್ಳಿ ಗ್ರಾಮದಲ್ಲಿ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 45 | ಕೊಪ್ಪಳ ತಾಲೂಕಿನ ಹನುಮನಳ್ಳಿ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 46 | ಕೊಪ್ಪಳ ತಾಲೂಕಿನ ಹನುಮನಳ್ಳಿ ಗ್ರಾಮದಲ್ಲಿ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 47 | ಕೊಪ್ಪಳ ತಾಲೂಕಿನ ಟಣಕನಕಲ್ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 48 | ಕೊಪ್ಪಳ ತಾಲೂಕಿನ ಟಣಕನಕಲ್ ಗ್ರಾಮದಲ್ಲಿ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 49 | ಕೊಪ್ಪಳ ತಾಲೂಕಿನ ಹೈದರ್ ನಗರ ತಾಂಡಾ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 50 | ಕೊಪ್ಪಳ ತಾಲೂಕಿನ ಹೈದರ್ ನಗರ ತಾಂಡಾ ಗ್ರಾಮದಲ್ಲಿ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 51 | ಕೊಪ್ಪಳ ತಾಲೂಕಿನ ಕುಣಿಕೇರಿ ತಾಂಡಾ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 52 | ಕೊಪ್ಪಳ ತಾಲೂಕಿನ ಕುಣಿಕೇರಿ ತಾಂಡಾ ಗ್ರಾಮದಲ್ಲಿ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 53 | ಕೊಪ್ಪಳ ತಾಲೂಕಿನ ಕೊಪ್ಪಳ ಗ್ರಾಮದಲ್ಲಿ (ಗವಿ ಮಠದ ಗುಡ್ಡದ ಮೇಲೆ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 54 | ಕೊಪ್ಪಳ ತಾಲೂಕಿನ ಕೊಪ್ಪಳ ಗ್ರಾಮದಲ್ಲಿ (ಗವಿ ಮಠದ ಗುಡ್ಡದ ಮೇಲೆ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 55 | ಕೊಪ್ಪಳ ತಾಲೂಕಿನ ಕೊಪ್ಪಳ ಗ್ರಾಮದಲ್ಲಿ (ಮರಿಶಾಚಿತವೀರ ಕಲ್ಯಾಣ ಮಂಟಪದ ಹತ್ತಿರ) 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |

| | | |
|---|---|---|
| 56 | ಕೊಪ್ಪಳ ತಾಲೂಕಿನ ಕೊಪ್ಪಳ ಗ್ರಾಮದಲ್ಲಿ (ಮರಿಶಾಚಿತವೀರ ಕಲ್ಯಾಣ ಮಂಟಪದ ಹತ್ತಿರ) ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 57 | ಕೊಪ್ಪಳ ತಾಲೂಕಿನ ಮೈನಳ್ಳಿ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 58 | ಕೊಪ್ಪಳ ತಾಲೂಕಿನ ಮೈನಳ್ಳಿ ಗ್ರಾಮದಲ್ಲಿ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 59 | ಕೊಪ್ಪಳ ತಾಲೂಕಿನ ಡಂಬ್ರಳ್ಳಿ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 60 | ಕೊಪ್ಪಳ ತಾಲೂಕಿನ ಡಂಬ್ರಳ್ಳಿ ಗ್ರಾಮದಲ್ಲಿ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 61 | ಕೊಪ್ಪಳ ತಾಲೂಕಿನ ದದೇಗಲ್ ಗ್ರಾಮದಲ್ಲಿ 16 ಮೀಟರ್ ಹೈಮಾಸ್ಟ್ ದೀಪ ಅಳವಡಿಸುವುದು. | 4.00 |
| 62 | ಕೊಪ್ಪಳ ತಾಲೂಕಿನ ದದೇಗಲ್ ಗ್ರಾಮದಲ್ಲಿ ಹೈಮಾಸ್ಟ್ ದೀಪದ ಜೇಸ್ಕಾಂ ಠೇವಣಿ ಹಾಗೂ ಬುನಾದಿ ಕಾಮಗಾರಿ. | 2.25 |
| 63 | ಕೊಪ್ಪಳ ತಾಲೂಕಿನ ಗಿಣಿಗೇರಾ ಗ್ರಾಮ ಪರಿಮಿತಿಯಲ್ಲಿ (ಲೋಇ ರಸ್ತೆಗಳ) ಚರಂಡಿ ನಿರ್ಮಾಣ ಹಾಗೂ ರಸ್ತೆ ಅಭಿವೃದ್ಧಿ ಪಡಿಸುವುದು. | 75.00 |
| 64 | ಕೊಪ್ಪಳ ತಾಲೂಕಿನ ದದೇಗಲ್–ಹಿರೇಸಿಂದೋಗಿ ರಸ್ತೆ ಕಿಮೀ 0.00 ರಿಂದ 7.03 ರವರೆಗೆ ಅಭಿವೃದ್ಧಿ ಹಾಗೂ ಡಾಂಬರೀಕರಣ | 370.00 |
| 65 | ಕೊಪ್ಪಳ ತಾಲೂಕಿನ ಗೊಂಡಬಾಳ–ಚಿಕ್ಕಸಿಂದೋಗಿ ರಸ್ತೆ ಕಿಮೀ 0.00 ರಿಂದ 5.20 ರವರೆಗೆ ಅಭಿವೃದ್ಧಿ ಹಾಗೂ ಡಾಂಬರೀಕರಣ | 225.00 |
| 66 | ಕೊಪ್ಪಳ ಜಿಲ್ಲೆ ಕೊಪ್ಪಳ ತಾಲೂಕಿನ ಕೊಪ್ಪಳ–ಕಿನ್ನಾಳ ರಸ್ತೆ ಕಿಮೀ 0.00 ರಿಂದ 2.00 ರವರೆಗೆ ಅಗಲೀಕರಣ, ಅಭಿವೃದ್ಧಿ ಹಾಗೂ ಡಾಂಬರೀಕರಣ. | 150.00 |
| 67 | ಕೊಪ್ಪಳ ತಾಲೂಕಿನ ಕೊಪ್ಪಳ–ಕಿನ್ನಾಳ ರಸ್ತೆ ಕಿಮೀ 2.00 ರಿಂದ 11.00 ರವರೆಗೆ (ಆಯ್ದ ಭಾಗಗಳಲ್ಲಿ) ಅಗಲೀಕರಣ, ಅಭಿವೃದ್ಧಿ ಹಾಗೂ ಡಾಂಬರೀಕರಣ | 250.00 |

| | | |
|---|---|---|
| 68 | ಕೊಪ್ಪಳ ತಾಲೂಕಿನ ಕೊಪ್ಪಳ-ಕಿನ್ನಾಳ ರಸ್ತೆಯಿಂದ ಭಾಗ್ಯನಗರ ರೇಲ್ವೆ ಗೇಟ್‌ವರೆಗೆ ರಸ್ತೆ ಕಿಮೀ 2.40 ರಿಂದ 3.00 ರವರೆಗೆ ಅಭಿವೃದ್ಧಿ ಹಾಗೂ ಡಾಂಬರೀಕರಣ. | 50.00 |
| 69 | ಕೊಪ್ಪಳ ಜಿಲ್ಲೆ ಕೊಪ್ಪಳ ತಾಲೂಕಿನ ಕೊಪ್ಪಳ-ಭಾಗ್ಯನಗರ-ಓಜನಹಳ್ಳಿ ರಸ್ತೆಯಿಂದ ಕೊಪ್ಪಳ-ಕ್ಯಾದಿಗುಪ್ಪಾ (ಎಸ್‌ಎಚ್-36) ರವರೆಗೆ ಕಿಮೀ 0.00 ರಿಂದ 5.70 ರವರೆಗೆ ಅಭಿವೃದ್ಧಿ ಹಾಗೂ ಡಾಂಬರೀಕರಣ. | 60.00 |
| 70 | ಕೊಪ್ಪಳ ತಾಲೂಕಿನ ಹಿರೇಸಿಂದೋಗಿ-ತಿಗರಿ ರಸ್ತೆ ಕಿಮೀ 0.00 ರಿಂದ 15.80 ರವರೆಗೆ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ. | 260.00 |
| 71 | ಕೊಪ್ಪಳ ಜಿಲ್ಲೆ ಕೊಪ್ಪಳ ತಾಲೂಕಿನ ಅಳವಂಡಿ-ನೀರಲಗಿ ರಸ್ತೆ ಕಿಮೀ 3.80 ರಿಂದ 11.00 ರವರೆಗೆ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ. | 95.00 |
| 72 | ಕೊಪ್ಪಳ ತಾಲೂಕಿನ ಹೊಸಳ್ಳಿ-ಕೊಪ್ಪಳ ರಸ್ತೆ (ವ್ಹಾಯಾ: ಹಿರೇಕಾಸನಕಂಡಿ-ಅಲ್ಲಾನಗರ-ಹಾಲವರ್ತಿ) ರಸ್ತೆ ಕಿಮೀ 0.00 ರಿಂದ 9.00 ರವರೆಗೆ ರಸ್ತೆ ಅಭಿವೃದ್ಧಿಪಡಿಸುವುದು, ಅಗಲೀಕರಣ ಹಾಗೂ ಡಾಂಬರೀಕರಣ. | 240.00 |
| 73 | ಕೊಪ್ಪಳ ತಾಲೂಕಿನ ಹೊಸಳ್ಳಿ-ಕೊಪ್ಪಳ ರಸ್ತೆ (ವ್ಹಾಯಾ: ಹಿರೇಕಾಸನಕಂಡಿ-ಅಲ್ಲಾನಗರ-ಹಾಲವರ್ತಿ) ರಸ್ತೆ ಕಿಮೀ 10.00 ರಿಂದ 19.00 ರವರೆಗೆ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ. | 240.00 |
| 74 | ಕೊಪ್ಪಳ ತಾಲೂಕಿನ ಬಿಸರಳ್ಳಿ-ಹಂದ್ರಾಳ-ವದಗನಾಳ ರಸ್ತೆ ಕಿಮೀ 0.00 ರಿಂದ 11.75 ರವರೆಗೆ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ. | 240.00 |
| 75 | ಕೊಪ್ಪಳ ಜಿಲ್ಲೆ ಕೊಪ್ಪಳ ತಾಲೂಕಿನ ಅಗಳಕೇರಾ-ಬೂದಗುಂಪಾ ರಸ್ತೆ ಕಿಮೀ 0.00 ರಿಂದ 3.40 ರವರೆಗೆ ಅಭಿವೃದ್ಧಿ ಹಾಗೂ ಡಾಂಬರೀಕರಣ. | 175.00 |
| 76 | ಕೊಪ್ಪಳ ಜಿಲ್ಲೆ ಕೊಪ್ಪಳ ತಾಲೂಕಿನ ಕವಲೂರು-ಬನ್ನಿಕೊಪ್ಪ ರಸ್ತೆ ಕಿಮೀ 0.00 ರಿಂದ 6.80 ರವರೆಗೆ (ಆಯ್ದ ಭಾಗಗಳಲ್ಲಿ) ಅಗಲೀಕರಣ ಹಾಗೂ ಮರುಡಾಂಬರೀಕರಣ. | 90.00 |

| | | |
|---|---|---|
| 77 | ಕೊಪ್ಪಳ ತಾಲೂಕಿನ ಕವಲೂರು–ಮುರ್ಲಾಪೂರ ರಸ್ತೆ ಕಿಮೀ 4.00 ರ ಹತ್ತಿರದ ಸೇತುವೆಯ ಎರಡೂ ಬದಿ ಅಪ್ರೋಚ್ ನಿರ್ಮಾಣ | 50.00 |
| 78 | ಕೊಪ್ಪಳ ತಾಲೂಕಿನ ಬಸಾಪೂರದಿಂದ ಭೀಮನೂರ ವ್ಹಾಯಾ: ಕುಟಗನಹಳ್ಳಿ ರಸ್ತೆ ಕಿಮೀ 0.00 ರಿಂದ 4.00 ರವರೆಗೆ ಅಭಿವೃದ್ಧಿ ಹಾಗೂ ಡಾಂಬರೀಕರಣ. | 50.00 |
| 79 | ಕೊಪ್ಪಳ ಜಿಲ್ಲೆ ಕೊಪ್ಪಳ ತಾಲೂಕಿನ ಕೊಪ್ಪಳ–ಕಿನ್ನಾಳದಿಂದ ಎಸ್‌ಎಚ್–23 ರಸ್ತೆ ಕಿಮೀ 0.00 ರಿಂದ 8.00 ರವರೆಗೆ ಅಭಿವೃದ್ಧಿ ಹಾಗೂ ಡಾಂಬರೀಕರಣ (ಆಯ್ದ ಭಾಗಗಳಲ್ಲಿ) | 50.00 |
| 80 | ಕೊಪ್ಪಳ ತಾಲೂಕಿನ ಗಿಣಗೇರಾ–ಗೊಂಡಬಾಳ ರಸ್ತೆ ಕಿಮೀ 0.00 ರಿಂದ 10.00 ರವರೆಗೆ ಅಭಿವೃದ್ಧಿ ಹಾಗೂ ಡಾಂಬರೀಕರಣ. | 445.00 |
| 81 | ಯಲಬುರ್ಗಾ ತಾಲೂಕಿನ ಮುಧೋಳ–ದ್ಯಾಂಪುರ ರಸ್ತೆ ಕಿಮೀ 3.00 ರಿಂದ 14.00 ಹಾಗೂ ಕಿಮೀ 22.00 ರೊಂದ 27.00 ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣೆ ಹಾಗೂ ಡಾಂಬರೀಕರಣ. | 200.00 |
| 82 | ಯಲಬುರ್ಗಾ ತಾಲೂಕಿನ ಕವಲೂರು–ಮಂಗಳೂರು ರಸ್ತೆ ಕಿಮೀ 16.00 ರಿಂದ 24.00 ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣೆ ಹಾಗೂ ಡಾಂಬರೀಕರಣ. | 100.00 |
| 83 | ಯಲಬುರ್ಗಾ ತಾಲೂಕಿನ ಯರೇಹಂಚಿನಾಳ–ನರೇಗಲ್ ರಸ್ತೆ ಕಿಮೀ. 10.00 ರಿಂದ ತಾಲೂಕು ಸರಹದ್ದುವರೆಗೆ ರಸ್ತೆ ಸುಧಾರಣೆ ಹಾಗೂ ಡಾಂಬರೀಕರಣ. | 50.00 |
| 84 | ಯಲಬುರ್ಗಾ ತಾಲೂಕಿನ ಮಂಡಲಗೇರಿ–ಯರೇಹಂಚಿನಾಳ ರಸ್ತೆ ಕಿಮೀ. 0.00 ರಿಂದ 19.00 ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣೆ ಹಾಗೂ ಡಾಂಬರೀಕರಣ. | 150.00 |
| 85 | ಯಲಬುಗಾ ತಾಲೂಕಿನ ಕಕ್ಕಿಹಳ್ಳಿ–ಮುರಡಿ ವ್ಹಾಯಾ: ಬಳಗೇರಾ–ಮಂಗಳೂರು ರಸ್ತೆ ಕಿಮೀ. 20.00 ರಿಂದ 26.00 ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣೆ ಹಾಗೂ ಡಾಂಬರೀಕರಣ. | 50.00 |

| | | |
|---|---|---|
| 86 | ಯಲಬುರ್ಗಾ ತಾಲೂಕಿನ ಕುದರಿಕೊಟಗಿ–ಗುಟ್ಟಾಳ ರಸ್ತೆ ಕಿಮೀ. 00.00 ರಿಂದ 20.00 ರವರೆಗೆ ಆಯ್ದ ಭಾಗಗಳ್ಲಲಿ ರಸ್ತೆ ಸುಧಾರಣೆ ಹಾಗೂ ಡಾಂಬರೀಕರಣ. | 100.00 |
| 87 | ಯಲಬುಗಾ ತಾಲೂಕಿನ ಶಿರೂರು–ಕಿನ್ನಾಳ ರಸ್ತೆ ಕಿಮೀ. 0.00 ರಿಂದ 8.50 ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣೆ ಹಾಗೂ ಡಾಂಬರೀಕರಣ. | 50.00 |
| 88 | ಯಲಬುರ್ಗಾ ತಾಲೂಕಿನ ಯಲಬುರ್ಗಾ–ಗಜೇಂದ್ರಗಡ ರಸ್ತೆ ಕಿಮೀ. 1.00 ರಿಂದ 6.00 ರವರೆಗೆ ರಸ್ತೆ ಸುಧಾರಣೆ ಹಾಗೂ ಡಾಂಬರೀಕರಣ. | 40.00 |
| 89 | ಯಲಬುರ್ಗಾ ವಿ.ಸ.ಕ್ಷೇತ್ರದ ರಸ್ತೆ ಕಾಮಗಾರಿಗಳು | 200.00 |
| 90 | ಯಲಬುರ್ಗಾ ತಾಲೂಕಿನ ಮನ್ನಾಪುರ–ಸೊಂಪೂರ ರಸ್ತೆ ಕಿಮೀ. 0.00 ರಿಂದ 11.00 ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣೆ ಹಾಗೂ ಡಾಂಬರೀಕರಣ. | 60.00 |
| 91 | ಕುಷ್ಟಗಿ ತಾಲೂಕಿನ ಗರ್ಜನಾಳ ಕ್ರಾಸ್‌ದಿಂದ ಬಾಗಲಕೋಟಿ ಜಿಲ್ಲಾ ಗಡಿ ರಸ್ತೆ ಕಿಮೀ. 3.00 ರಿಂದ 9.00 ಹಾಗೂ 55.00 ರಿಂದ 64..00 ರಲ್ಲಿ ಅಭಿವೃದ್ಧಿ ಹಾಗೂ ಡಾಂಬರೀಕರಣ. | 175.00 |
| 92 | ಕುಷ್ಟಗಿ ತಾಲೂಕಿನ ತಾವರಗೇರಾ–ಮುದೇನೂರ ರಸ್ತೆ ಕಿಮೀ. 0.00 ರಿಂದ 17.80 ರವರೆಗೆ ಮರು ಡಾಂಬರೀಕರಣ. | 135.00 |
| 93 | ಕುಷ್ಟಗಿ ತಾಲೂಕಿನ ಎನ್‌ಹೆಚ್–13 ಕುರುಬನಾಳ ಕ್ರಾಸ್‌ದಿಂದ ಸಿಂಧನೂರ–ಹೆಮ್ಮಡಗಾ ರಸ್ತೆ ವ್ಹಾಯಾ: ನೆರೆಬೆಂಚಿ–ಶಾಖಾಪೂರ–ಹಿರೇಬನ್ನಿಗೋಳ ಕಿಮೀ. 0.00 ರಿಂದ 5.00 ಹಾಗೂ 9.00 ರಿಂದ 11.00 ರವರೆಗೆ ಅಭಿವೃದ್ಧಿ ಹಾಗೂ ಡಾಂಬರೀಕರಣ. | 60.00 |
| 94 | ಕುಷ್ಟಗಿ ತಾಲೂಕಿನ ಎನ್‌ಹೆಚ್–29 ಕಿಲ್ಲಾರಹಟ್ಟಿ ತಾಂಡಾ ಕ್ರಾಸ್‌ದಿಂದ ಕಿಡದಗಾರ ವರೆಗೆ ಕಿಮೀ. 0.00 ರಿಂದ 5.50 ರವರೆಗೆ ಅಭಿವೃದ್ಧಿ ಹಾಗೂ ಡಾಂಬರೀಕರಣ. | 50.00 |
| 95 | ಕುಷ್ಟಗಿ ತಾಲೂಕಿನ ಜಾಲಿಹಾಳ–ಬಸಾಪೂರ ರಸ್ತೆ ಕಿಮೀ. 0.00 ರಿಂದ 1.50 ಹಾಗೂ 7.00 ರಿಂದ 10.50 ರವರೆಗೆ ಅಭಿವೃದ್ಧಿ ಹಾಗೂ ಡಾಂಬರೀಕರಣ. | 60.00 |

| | | |
|---|---|---|
| 96 | ಕುಷ್ಟಗಿ ಪಟ್ಟದಕಲ್ಲು–ಮಾಲಗತ್ತಿ ರಸ್ತೆ ನಿರ್ಮಾಣ, ಕುಷ್ಟಗಿ ಪಟ್ಟದಕಲ್ಲು ಕಿ.ಮೀ. 34.00 ರಿಂದ 38.00 ರವರೆಗೆ, ಗರ್ಜನಾಳ ಬಾಗಲಕೋಟೆ ಜಿಲ್ಲಾ ಗಡಿ ರಸ್ತೆ ಕಿ.ಮೀ. 30.00 ದಿಂದ 36.00 ರವರೆಗೆ ರಸ್ತೆ ಸುಧಾರಣೆ ಮತ್ತು ಡಾಂಬರೀಕರಣ (3–ಕಾಮಗಾರಿಗಳು) | 175.00 |
| 97 | ಕೊಪ್ಪಳ ತಾಲೂಕಿನ ಇರಕಲ್‌ಗಡಾ–ಮುಸ್ಲಾಪೂರ ರಸ್ತೆ ಕಿಮೀ. 0.00 ರಿಂದ 6.50 ರವರೆಗೆ ಅಗಲೀಕರಣ ಹಾಗೂ ಡಾಂಬರೀಕರಣ. | 200.00 |
| 98 | ಗಂಗಾವತಿ ತಾಲೂಕಿನ ಮುಸಲಾಪೂರ–ವೆಂಕಟಗಿರಿ ರಸ್ತೆ ಕಿಮೀ. 0.00 ರಿಂದ 16.00 ರಲ್ಲಿ ಮರು ಡಾಂಬರೀಕರಣ ಮತ್ತು ಸುಧಾರಣೆ. | 190.00 |
| 99 | ಗಂಗಾವತಿ ತಾಲೂಕಿನ ಗಡ್ಡಿ–ಉಡಮಕಲ್–ಅರ್ಹಾಳ ರಸ್ತೆ ಕಿಮೀ. 0.00 ರಿಂದ 6.50 ರಲ್ಲಿ ಮರು ಡಾಂಬರೀಕರಣ ಮತ್ತು ಸುಧಾರಣೆ. | 180.00 |
| 100 | ಗಂಗಾವತಿ ತಾಲೂಕಿನ ಚಿಕ್ಕರಾಂಪೂರ–ಸಣಾಪುರ ರಸ್ತೆ ಕಿಮೀ. 1.50 ರಿಂದ 8.50 ರಲ್ಲಿ ಮರು ಡಾಂಬರೀಕರಣ ಮತ್ತು ಸುಧಾರಣೆ. | 150.00 |
| 101 | ಗಂಗಾವತಿ ತಾಲೂಕಿನ ಆರ್‌ಜಿ ರಸ್ತೆಯಿಂದ ಬಂಡ್ರಾಳ ರಸ್ತೆ ಸುಧಾರಣೆ. | 80.00 |
| 102 | ಗಂಗಾವತಿ ಸಿದ್ದಿಕೇರಿ ಬಸಾಪಟ್ಟಣ ರಸ್ತೆ ಆಯ್ದ ಭಾಗಗಳಲ್ಲಿ ಬಲಾಭಿವೃದ್ಧಿ ಹಾಗೂ ಡಾಂಬರೀಕರಣ. | 75.00 |
| 103 | ಜೆ ಎ ಎಂ ರಸ್ತೆಯಿಂದ ಪಾಟೀಲ್ ದವಾಖಾನೆದ ಬಳ್ಳಾರಿ ಬುಕ್ ಡಿಪೋ ಮಾರ್ಗವಾಗಿ ಸಿದ್ದಿಕೇರಿದ ಬಸಾಪಟ್ಟಣ ರಸ್ತೆಗೆ ಸೇರುವ ರಸ್ತೆ 0.00 ರಿಂದ 0.50 ರವರೆಗೆ ಸುಧಾರಣೆ ಮತ್ತು ಡಾಂಬರೀಕರಣ. | 25.00 |
| 104 | ಗಂಗಾವತಿ ಆನೆಗೊಂದಿ ಮುನಿರಾಬಾದ್ ರಸ್ತೆಯಿಂದ ಗುಂಡಮ್ಮ ಕ್ಯಾಂಪ್ ರಸ್ತೆ 0.00 ರಿಂದ 0.50 ರವರೆಗೆ ಸುಧಾರಣೆ ಹಾಗೂ ಡಾಂಬರೀಕರಣ. | 25.00 |
| 105 | ಗಂಗಾವತಿ ಸಿದ್ದಿಕೇರಿ ರಸ್ತೆಯಿಂದ ವಾಲ್ಮೀಕಿ ವೃತ್ತ ಸುಣಗಾರ ಓಣಿ ಲಕ್ಷ್ಮೀ ಕ್ಯಾಂಪ್ ಮಾರ್ಗವಾಗಿ ಗೌಳಿ ನಗರಕ್ಕೆ ಸೇರುವ ರಸ್ತೆ | 50.00 |

| | | |
|---|---|---|
| | 0.00 ರಿಂದ 1.50 ರವರೆಗೆ ಸುಧಾರಣೆ ಹಾಗೂ ಡಾಂಬರೀಕರಣ. | |
| 106 | ವಿರೂಪಾಪುರ ಜುಲೈನಗರ ಕಿ.ಮೀ. 1.00 ರಿಂದ 2.20 ರವರೆಗೆ ಸುಧಾರಣೆ ಹಾಗೂ ಡಾಂಬರೀಕರಣ. | 50.00 |
| 107 | ಎಲ್ ಕೆ ರಸ್ತೆಯಿಂದ ಬಸವಣ್ಣ ವೃತ್ತದ ಅಂಬೇಡ್ಕರ್ ವೃತ್ತದ ಕೃಷ್ಣದೇವರಾಯ ವೃತ್ತ ಮಾರ್ಗವಾಗಿ ಶ್ರೀರಾಮನಗರ ಗಂಗಾವತಿ ರಸ್ತೆ ಕಿ.ಮೀ. 20.50 ರಲ್ಲಿ ಸೇರುವ ರಸ್ತೆ 0.00 ರಿಂದ 2.20 ರವರೆಗೆ ಆಯ್ದಭಾಗಗಳ ಸುಧಾರಣೆ ಹಾಗೂ ಡಾಂಬರೀಕರಣ. | 40.00 |
| 108 | ಗಂಗಾವತಿ ತಾಲೂಕಿನ ಆರ್‌ಜಿ ರಸ್ತೆಯಿಂದ ಬರಗೂರ–ಮರಳಿ ವ್ಹಾಯಾ: ಮುಷ್ಟೂರು ರಸ್ತೆ ಆಯ್ದ ಭಾಗಗಳಲ್ಲಿ ಸುಧಾರಣೆ ಹಾಗೂ ಮರು ಡಾಂಬರೀಕರಣ. | 250.00 |
| 109 | ಗಂಗಾವತಿ ತಾಲೂಕಿನ ಹಣವಾಳ–ಜೀರಾಳು ಗಾಂಧಿನಗರ ರಸ್ತೆ ಕಿಮೀ. 0.00 ರಿಂದ 9.00 ರಲ್ಲಿ ಆಯ್ದ ಭಾಗಗಳಲ್ಲಿ ಸುಧಾರಣೆ ಹಾಗೂ ಮರು ಡಾಂಬರೀಕರಣ. | 200.00 |
| | **ಕೊಪ್ಪಳ ಜಿಲ್ಲೆಯ ಒಟ್ಟು:** | **6478.75** |
| | **NABARD-XVII WORKS** | |
| 1 | Impts. to Tanakanakal-Kutuganahalli road via: Hanamanahalli in Koppal Taluka | 85.00 |
| 2 | Impts. To Basapur-Bhimanur via: Kutuganahalli road in Koppal taluka. | 75.00 |
| 3 | Impts. to Arashinakeri-Chikkabommanahal in Koppal Taluka. | 65.00 |
| 4 | Impts. to Kesarahatti-Murkumbi road in Gangavathi taluka. | 125.00 |
| 5 | Impts. to Hanaval-Jiral road in Gangavathi taluka. | 75.00 |
| 6 | Impts. to Siragumpi-Mentageri road in Kushtagi taluka. | 80.00 |
| 7 | Impts. to Hirehanchinal-Naregal road in Yelburga taluka. | 150.00 |
| | **Koppal Dist. Total:** | **655.00** |

**ಶ್ರೀ ವಿ.ಆರ್.ಸುದರ್ಶನ್ (ಅಲ್ಲಮ ಪ್ರಭು ಪಾಟೀಲ್‌ರವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮಾನ್ಯ ನಾಣಯ್ಯನವರು ಏನೋ ಹೇಳುತ್ತಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಅಲ್ಲಿ–ಇಲ್ಲಿ ಇಡಬೇಡಿ ನಮಗೆ ಕಳುಹಿಸಿ ಕೊಡಿ ಎಂದು ಕೇಳುತ್ತಿದ್ದಾರೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಗಳೆ, ಅಲ್ಲಿ–ಇಲ್ಲಿ ಏಕೆ ಇಡುತ್ತೀರಿ? ಒಳ್ಳೆಯ ಬಾಟಲಿಗಳಿದ್ದರೆ ನಮಗೆ ಕಳುಹಿಸಿ ಕೊಡಿ ಎಂದು ಕೇಳುವಷ್ಟರಲ್ಲಿ ಮತ್ತಿಕಟ್ಟಿಯವರು ಏನೋ ಹೇಳಿಬಿಟ್ಟರು.

**ಶ್ರೀ ವಿ.ಆರ್.ಸುದರ್ಶನ್:–** ಮಾನ್ಯ ಸಭಾಪತಿಗಳೆ, ಗುಲ್ಬರ್ಗಾ, ಬೀದರ್ ಜಿಲ್ಲೆಗಳು border ನಲ್ಲಿ ಬರುತ್ತವೆ. ನಾನು ಸರ್ಕಾರಕ್ಕೆ ಹೇಳುವುದು ಏನು ಎಂದರೆ, ಗುಲ್ಬರ್ಗಾ, ಯಾದಗಿರಿಯಲ್ಲಿ ಏನು ಪರಿಸ್ಥಿತಿ ಇದೆ, ಅದೇ ಪರಿಸ್ಥಿತಿ ಅನೇಕ ಜಿಲ್ಲೆಗಳಲ್ಲಿ ಇದೆ. ಕಳ್ಳಭಟ್ಟಿ, ಅಕ್ರಮದಂಧೆ ನಡೆದುಕೊಂಡು ಹೋಗುತ್ತಿದೆ. ಇದು ಮಂತ್ರಿಗಳ ಗಮನದಲ್ಲಿಯೂ ಇದೆ. ಆದ್ದರಿಂದ ಅಕ್ಕ–ಪಕ್ಕದ ರಾಜ್ಯಗಳ ಜೊತೆಯಲ್ಲಿ ಒಂದು ಸಭೆಯನ್ನು ಮಾಡಿ, ಆಂಧ್ರಪ್ರದೇಶ, ಮಹಾರಾಷ್ಟ್ರ, ಕೇರಳ ರಾಜ್ಯಗಳ ಗೃಹ ಸಚಿವರ ಜೊತೆ ಚರ್ಚೆ ಮಾಡಿ, ನಿಮ್ಮ ಹಂತದಲ್ಲಿ ಆಗದಿದ್ದರೂ ಮಾನ್ಯ ಮುಖ್ಯಮಂತ್ರಿಗಳ ಹಂತದಲ್ಲಿ ಒಂದು ಸಭೆಯನ್ನು ಮಾಡಲು ಪ್ರಯತ್ನ ಮಾಡಬೇಕು. ಸರ್ಕಾರದಿಂದ ಮಾತ್ರ ಈ ಕೆಲಸವನ್ನು ಮಾಡಲು ಆಗುವುದಿಲ್ಲ. ಜನರಲ್ಲಿಯೂ ಅದರ ಬಗ್ಗೆ ತಿಳುವಳಿಕೆ ಇರಬೇಕಾಗುತ್ತದೆ. It is a social menace. ಇದೊಂದು ಅನಿಷ್ಟ ಪದ್ಧತಿ. ಅನಾರೋಗ್ಯಕರವಾದ ಸಮಾಜ ನಿರ್ಮಾಣ ಇವತ್ತು ಹೆಚ್ಚಾಗುತ್ತಿದೆ. ಇಲಾಖೆಯಲ್ಲಿ investigative skills ಗಳ ಕೊರತೆ ಇದೆ. ಅದನ್ನು ಹೇಗೆ ಹೆಚ್ಚು ಮಾಡಬೇಕು ಎನ್ನುವ ಬಗ್ಗೆ ಯೋಚನೆ ಮಾಡಬೇಕು. ಇದಕ್ಕಿಂತ ಹೆಚ್ಚಾಗಿ ಇಚ್ಛಾಶಕ್ತಿಯ ಕೊರತೆ ಇದೆ. ನಾನಾ ಕಾರಣಗಳಿಂದ collusion ಇದೆ. ನಿಮ್ಮ ಮತ್ತು ಗೃಹ ಇಲಾಖೆಯ ಸಹಕಾರವಿಲ್ಲದೆ ಹೋದರೆ ಈ ಅಕ್ರಮ ದಂಧೆ, ಕಳ್ಳಭಟ್ಟಿ ತಡೆಯಲು ಸಾಧ್ಯವಿಲ್ಲ. ಅಲ್ಲದೆ ರಾಜಕೀಯ ಬೆಂಬಲವಿಲ್ಲದೆ ಇಷ್ಟು ದೊಡ್ಡ ಅಕ್ರಮ ದಂಧೆ ನಡೆದುಕೊಂಡು ಹೋಗಲು

ಸಾಧ್ಯವಿಲ್ಲ. ಇದನ್ನು ಸರಿಪಡಿಸಲು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದಕ್ಕೆ ಉತ್ತರವನ್ನು ಹೇಳಬೇಕು.

**ಶ್ರೀ ಎಂ.ಪಿ.ರೇಣುಕಾಚಾರ್ಯ:-** ಮಾನ್ಯ ಸಭಾಪತಿಗಳೆ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಬಾರ್ಡರ್ ಜಿಲ್ಲೆಗಳಾದ ಗುಲ್ಬರ್ಗಾ, ಯಾದಗಿರಿ, ಬೀದರ್, ಕಾರವಾರ ಅನೇಕ ಜಿಲ್ಲೆಗಳಲ್ಲಿ ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಹುದ್ದೆಗಳಿಗೆ ನಮ್ಮ ಇಲಾಖೆಯಲ್ಲಿ ಬೇರೆ-ಬೇರೆ ಕಡೆ ಇರುವಂತಹ ಅಧಿಕಾರಿಗಳನ್ನು ಅಲ್ಲಿ ಪ್ರಭಾರಿಗಳಾಗಿ ನೇಮಕ ಮಾಡಿ, ಕಳ್ಳಭಟ್ಟಿ ಮಾಡುವವರನ್ನು ಹಿಡುಯುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಾಗಲೆ ಗೋವಾದಿಂದ ಬರುವ ಮಧ್ಯವನ್ನು ತಡೆಯುವಂತೆ ಅಲ್ಲಿಯ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಆಂಧ್ರ, ಕೇರಳಾ, ಮಹಾರಾಷ್ಟ್ರ ರಾಜ್ಯಗಳ ಅಬಕಾರಿ ಸಚಿವರ ಜೊತೆ ಚರ್ಚೆ ಮಾಡಲು ಅವರ ಸಮಯವನ್ನು ಕೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಕಳ್ಳಭಟ್ಟಿ ದಂಧೆ ಸಾಕಷ್ಟು ನಡೆಯುತ್ತಿತ್ತು. ಈಗ ಅದಕ್ಕೆ ಸಾಕಷ್ಟು ಕಡಿವಾಣವನ್ನು ಹಾಕಲಾಗಿದೆ. ಇಲಾಖಾಧಿಕಾರಿಗಳ ಸಹಕಾರದಿಂದ ಈ ಕೆಲಸವನ್ನು ಮಾಡುತ್ತಿದ್ದೇನೆ. ನಾನು ಅಬಕಾರಿ ಇಲಾಖೆಯ ಸಚಿವನಾದ ಮೇಲೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಎಲ್ಲಿ ಕಳ್ಳಭಟ್ಟಿ ದಂಧೆ ನಡೆಯುತ್ತಿದೆ ಅಂತಹ ಸ್ಥಳಗಳ ಮೇಲೆ ದಾಳಿ ಮಾಡಿದ್ದೇವೆ. ಈಗ ಅದನ್ನು ಸಾಕಷ್ಟು ನಿಯಂತ್ರಣಕ್ಕೆ ತಂದಿದ್ದೇವೆ. ಪಕ್ಕದ ರಾಜ್ಯವಾದ ಆಂಧ್ರದಿಂದ ಬರುತ್ತಿದ್ದ ಸಾರಾಯಿಯನ್ನು ತಡೆಹಿಡಿದಿದ್ದೇವೆ. ಪ್ರಾಮಾಣಿಕ ವಾಗಿ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದರ ಬಗಗೆ ಜನರಲ್ಲಿ ಜಾಗೃತಿ ತರಲು ವಿಶೇಷವಾಗಿ ನಮ್ಮ ಅಬಕಾರಿ ಇಲಾಖೆಯಲ್ಲಿ ಗ್ರಾಮಸಭೆಗಳನ್ನು ಮಾಡಿದ್ದೇವೆ. ಸ್ತ್ರೀಶಕ್ತಿ ಗುಂಪುಗಳ ಮುಖಾಂತರ ಸ್ಥಳೀಯವಾಗಿ ನಮ್ಮ ಅಧಿಕಾರಿಗಳು ಅವರ ಜೊತೆಯಲ್ಲಿ ಭಾಗವಹಿಸಿ, ಚರ್ಚೆ ಮಾಡಿ, ಟಾಂಟಾಂ ಹೊಡೆಸಲಾಯಿತು. ಒಂದು action plan ಮಾಡಿದ್ದೆವು. ಕಳೆದ ವರ್ಷ ನಾನು ಸಚಿವನಾದಾಗ 1900 ಹೆಚ್ಚು ಕಳ್ಳಭಟ್ಟಿ ಕೇಂದ್ರಗಳಿದ್ದವು. ಈಗ ಕೇವಲ 400

ಕೇಂದ್ರಗಳು ಮಾತ್ರ ಬಾಕಿ ಇವೆ. ಕರ್ನಾಟಕ ರಾಜ್ಯವನ್ನು ಕಳ್ಳಭಟ್ಟಿ ಮುಕ್ತ ರಾಜ್ಯವನ್ನಾಗಿ ಮಾಡಬೇಕೆಂದು ನಾನು ಈಗಾಗಲೇ ಸಂಕಲ್ಪ ಮಾಡಿದ್ದೇನೆ. ನಮ್ಮ ಅಧಿಕಾರಿಗಳ ಸಹಾಯದಿಂದ ಖಂಡಿತವಾಗಿ ಈ ಅನಿಷ್ಟ ಪದ್ಧತಿಯನ್ನು ತಡೆಹಿಡಿಯಲು ಪ್ರಯತ್ನ ಮಾಡುತ್ತೇನೆ.

**ಸಭಾಪತಿಯವರು :** ಧನ್ಯವಾದಗಳು.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:–** ಮಾನ್ಯ ಸಭಾಪತಿಗಳೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದಂತೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಯಿತು, ಟೆಂಡರ್ ಪ್ರಕ್ರಿಯೆ ನಡೆದಿದೆ ಎಂದು ಹೇಳಿದ್ದಾರೆ. ನಾನು ಮಾನ್ಯ ಮಂತ್ರಿಯವರನ್ನು ವಿನಂತಿಸುವುದೇನೆಂದರೆ, ನಾವು ಮಳೆಗಾಲದ ನಂತರ ಬಹಳ ದಿನಗಳನ್ನು ಕಳೆದಿದ್ದು, ಮೊದಲೆ ಹಾಳಾಗಿರುವ ರಸ್ತೆಗಳಲ್ಲಿ ಓಡಾಡಲು ತೊಂದರೆ ಇರುವ ವಿಷಯವನ್ನು ಅವರ ಉತ್ತರದಿಂದಲೇ ತಿಳಿದುಕೊಂಡಿದ್ದೇವೆ. ಉಳಿದ ರಾಜ್ಯ ಹೆದ್ದಾರಿ ಮತ್ತು ಜಿಲ್ಲೆಯ ಮುಖ್ಯ ರಸ್ತೆಗಳನ್ನು ಆದಷ್ಟು ಬೇಗ ಮಾಡಿಕೊಡಬೇಕು. ಜೊತೆಗೆ 2006ರಲ್ಲಿ ಕೈಗೊಂಡ ಸೇತುವೆಗಳು ಪೂರ್ಣಗೊಂಡು ಕನೆಕ್ಟಿಂಗ್ ರಸ್ತೆಗಳು ಇಲ್ಲದೇ ಜನರಿಗೆ ದೊರಕದ ಪರಿಸ್ಥಿತಿಯಲ್ಲಿ ಇದೆ. ಅಧಿಕಾರಿಗಳು ಮಂತ್ರಿಯವರ ಗಮನಕ್ಕೆ ತಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಕೊಪ್ಪಳದ ಯಲ್ಬುರ್ಗ ತಾಲ್ಲೂಕಿನ ಮಂಗಳೂರು–ಶಿರೂರ್ ರಸ್ತೆಯಲ್ಲಿರುವ ಕೆಆರ್‌ಡಿಸಿಎಲ್ ಸೇತುವೆ ಸುಮಾರು 3 ಕೋಟಿ ರೂಪಯಿಗಳಿಂದ ಕಟ್ಟಿದ್ದು, ಇಲ್ಲಿಯವರೆವಿಗೂ ಜನರಿಗೆ ಉಪಯೋಗ ಆಗಿಲ್ಲ. ಇದರ ಬಗ್ಗೆ ಗಮನಹರಿಸಿ ಜನರಿಗೆ ಬೇಗ ಒದಗಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಸಿ.ಎಂ. ಉದಾಸಿ:–** ಮಾನ್ಯ ಸಭಾಪತಿಯವರೇ, ಈಗಾಗಲೆ Appendix-A ನಲ್ಲಿ ಬಂದಿರತಕ್ಕಂತಹ 64 ಕೋಟಿ ರೂಪಾಯಿಗಳ ಕೆಲಸದ ಟೆಂಡರ್ ಕರೆಯಲಾಗಿದೆ. ನಬಾರ್ಡ್‌ದಿಂದಾಗುವ 6.55 ಕೋಟಿ ರೂಪಾಯಿಗಳ ರಸ್ತೆಗಳಿಗೂ ಸಹ ಟೆಂಡರ್ ಕರೆದು ಕೆಲಸ ನಿರ್ವಹಣೆ ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಮಾನ್ಯ ಸದಸ್ಯರು ಕೆಲಸ ಬೇಗ ಪ್ರಾರಂಭವಾಗಬೇಕೆಂದು ತಿಳಿಸಿದ್ದಾರೆ. ಮಳೆಗಾಲದ ಮುನ್ನ ಎಲ್ಲಾ ಕಡೆ

ಕೆಲಸ ಪ್ರಾರಂಭವಾಗುತ್ತದೆ ಎನ್ನುವ ಭರವಸೆಯನ್ನು ನಾನು ಇಟ್ಟುಕೊಂಡಿದ್ದು, ಇನ್ನೊಂದು ತಿಂಗಳಲ್ಲಿ ಎಲ್ಲಾ ಕಡೆ ಕೆಲಸ ಪ್ರಾರಂಭವಾಗುತ್ತದೆಂಬ ಭರವಸೆ ಇದೆ. ಕೆಆರ್‌ಡಿಸಿಎಲ್ ಸೇತುವೆಯ ಸಂಪರ್ಕ ರಸ್ತೆಯ ಬಗ್ಗೆ ಗಮನಕ್ಕೆ ತಂದಿದ್ದು, ಅತಿ ಶೀಘ್ರದಲ್ಲಿ ಮಾಡಿಸಿಕೊಡುತ್ತೇನೆ.

**ಚಾಮರಾಜನಗರ ಜಿಲ್ಲೆಯಲ್ಲಿನ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಿರುವ ಬಗ್ಗೆ**

**102; ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಕಳೆದ 3 ವರ್ಷಗಳಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿನ ಯಾವ ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. (ತಾಲ್ಲೂಕುವಾರು ವಿವರ ನೀಡುವುದು);

ಆ) ಒದಗಿಸಿದ ಅನುದಾನದ ಮೊತ್ತ ಎಷ್ಟು (ಪೂರ್ಣಗೊಂಡ ಕಾಮಗಾರಿಗಳ ವಿವರ ಒದಗಿಸುವುದು);

ಇ) ಜಿಲ್ಲೆಯಲ್ಲಿನ ತೀವ್ರ ಮಳೆ ಅಭಾವದಿಂದಾಗಿ ಕುಡಿಯುವ ನೀರಿನ ಪೂರೈಕೆಗಾಗಿ ಯೋಜನೆಗಳನ್ನು ರೂಪಿಸಲಾಗಿದೆಯೇ, ಹೌದಾದಲ್ಲಿ, ಕೈಗೊಳ್ಳುವ ಕಾಮಗಾರಿಗಳ ವಿವರ ಹಾಗೂ ಒದಗಿಸುವ ಅನುದಾನದ ವಿವರ ನೀಡುವುದು?

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

ಅ) ಅನುಬಂಧ-1 ರಲ್ಲಿ ನೀಡಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಚಾಮರಾಜನಗರ ಜಿಲ್ಲೆಗೆ ಕುಡಿಯುವ ನೀರಿನ ಬಾಬ್ತಿಗಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆಯಾಗಿದ್ದು, ವೆಚ್ಚ ಭರಿಸಲಾಗಿದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವರ್ಷ | ಬಿಡುಗಡೆಯಾದ ಅನುದಾನ | ಭರಿಸಿರುವ ವೆಚ್ಚ |
|---|---|---|---|
| 1 | 2008–09 | 1206.21 | 1206.21 |
| 2 | 2009–10 | 655.70 | 655.51 |
| 3 | 2010–11 | 1581.39 | 1382.26 |

ಇ) ಕುಡಿಯುವ ನೀರಿಗೆ ತೀರ ಸಮಸ್ಯೆ ಇರುವ ಗ್ರಾಮಗಳನ್ನು ಗುರುತಿಸಲಾಗಿದ್ದು, ಜಿಲ್ಲಾಧಿಕಾರಿಗಳ ವತಿಯಿಂದ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಅವಶ್ಯವಿರುವಂತೆ ಯೋಜನೆಗಳಿಗೆ ಅನುಮೋದನೆ ಪಡೆದು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕ್ರಮ ವಹಿಸಲಾಗಿದೆ.

# ಅನುಬಂಧ–1

Zilla Panchayath, Chamarajanagar

P.R.E. Division: Chamarajanagar

**Details of Water Supply Scheme carried out in Chamarajanagara District From 2008 To 2011**

| Sl. No. | Taluk | Grama Panchayath | Name of work | Scheme | Estimated cost | DR No. & Sanctioned Year | Remarks |
|---|---|---|---|---|---|---|---|
| 1 | Ch-nagar | Alur | Alur village New Extension Uppar Nayaka and Veshwakarma Street M.W.S. Scheme Extra Pipe line and Cistern fixing | MWS | 3.00 | 1568/08-09 | |
| 2 | Ch-nagar | Alur | M.W.S. Scheme at Alur village Lingayath street and School | MWS | 4.00 | 773/09-10 | |
| 3 | Ch-nagar | Venkaihanachatra | Ankansettipura village Quarters near M.W.S. Scheme | MWS | 5.00 | 2257/08-09 | |

| | | | | | | | |
|---|---|---|---|---|---|---|---|
| 4 | Ch-nagar | Arakalavadi | Arakalavadi village S.C.Street M.W.S. Scheme | MWS | 3.930 | 1754/08-09 | |
| 5 | Ch-nagar | Heggotara | B.Mallyanapura village M.W.S. | MWS | 4.22 | 1752/08-09 | |
| 6 | Ch-nagar | Udigala | Badagalapura village M.W.S. Scheme | MWS | 4.950 | 1122/08-09 | |
| 7 | Ch-nagar | Doddamole | Bayadamudalu village M.W.S. Scheme | MWS | 4.000 | 1153/08-09 | |
| 8 | Ch-nagar | Bhogapura | Bhogapura village M.W.S. Scheme | MWS | 4.370 | 1082/08-09 | |
| 9 | Ch-nagar | Honnahalli | Bokepura village M.W.S. Scheme | MWS | 4.300 | 2134/08-09 | |
| 10 | Ch-nagar | Chandakavadi | M.W.S. Scheme to Chandakavadi village Lakshmi deve extension and Bus stop near | MWS | 5.000 | 2015/08-09 | |
| 11 | Ch-nagar | Chandakavadi | M.W.S. Scheme to Chandakavadi village Lakshmi deve extension and Bus stop near | MWS | 5.000 | 2015/08-09 | |

| | | | | | | | |
|---|---|---|---|---|---|---|---|
| 12 | Ch-nagar | Masanapura | Chatipura and Masanapura village M.W.S.S. Scheme extra pipe line and cistern fixing | MWS | 4.200 | 1575/08-09 | |
| 13 | Ch-nagar | Venkaihanachatra | Chikamole village Extra cistern and pipe line | MWS | 3.000 | 1154/08-09 | |
| 14 | Ch-nagar | Udigala | Chikkakempehundi village M.W.S. | MWS | 4.500 | 1121/08-09 | |
| 15 | Ch-nagar | Hebbasur | Dadadahalli village Kuruba street & Bhovi Street and other street M.W.S. | MWS | 3.000 | 2230/07-08 | |
| 16 | Ch-nagar | Doddamola | M.W.S. Scheme to Doddamole village new extension | MWS | 4.60 | 1152/08-09 | |
| 17 | Ch-nagar | Gulipura | Gulipura village Nayaka and Lingayath street M.W.S. Extra pipe line and cistern fixing | MWS | 4.50 | 1573/08-09 | |
| 18 | Ch-nagar | Harave | Halepura village M.W.S. Scheme extra cistern and pipe line | MWS | 3.50 | 2231/07-08 | |

| | | | | | | | |
|---|---|---|---|---|---|---|---|
| 19 | Ch-nagar | Madapura | Handarakalli village M.W.S. Scheme Revival (S.C.Street and Chirstian street extra cistern fixing) | MWS | 3.650 | 1089/08-09 | |
| 20 | Ch-nagar | Haradana halli | M.W.S. Scheme at Haradanahalli village Nayaka street | MWS | 4.00 | 1150/08-09 | |
| 21 | Ch-nagar | Harave | Harave village S.C.Street and S.T.Street P.U.Student hostel near M.W.S. Scheme | MWS | 4.00 | 501/07-08 | |
| 22 | Ch-nagar | Harave | Harave village S.C.Street M.W.S. Scheme | MWS | 4.760 | 3329/07-08 | |
| 23 | Ch-nagar | Honganur | M.W.S. Scheme at Honganur village Nayaka street | MWS | 5.00 | 1574/08-09 | |
| 24 | Ch-nagar | Honganur | M.W.S Scheme to Honganur Village | MWS | 4.900 | 240/08-09 | |
| 25 | Ch-nagar | Honnahalli | Honnahalli village S.C.Street M.W.S. Street | MWS | 4.310 | 2136/08-09 | |

| | | | | | | | |
|---|---|---|---|---|---|---|---|
| 26 | Ch-nagar | Jyothigowda napura | M.W.S. Scheme to Jyothigowdanapura village | MWS | 4.050 | 1260/08-09 | |
| 27 | Ch-nagar | Jyothigowda napura | M.W.S.Scheme to Jyothigowdanapura village | MWS | 4.82 | 856/08-09 | |
| 28 | Ch-nagar | Bhogapura | M.W.S. Scheme to Jyothigowdana pura village Lingatath street and other street | MWS | 4.40 | 1087/08-09 | |
| 29 | Ch-nagar | Kagalavadi | K.Mukkahalli village M.W.S. Scheme | MWS | 5.000 | 1696/08-09 | |
| 30 | Ch-nagar | Nanjadevanapura | Kalanahundi village M.W.S. Scheme | MWS | 4.00 | 1578/07-08 | |
| 31 | Ch-nagar | Kulagana | Kalpura village M.W.S. Scheme | MWS | 4.980 | 1750/08-09 | |
| 32 | Ch-nagar | Bhogapura | Kasthur village M.W.S. Scheme | MWS | 4.330 | 1085/08-09 | |
| 33 | Ch-nagar | Santhemara halli | Kavudavadi village M.W.S. Scheme Revival | MWS | 3.00 | 1671/07-08 | |

| | | | | | | | |
|---|---|---|---|---|---|---|---|
| 34 | Ch-nagar | Kulaguna | Kebbepura village M.W.S. Scheme | MWS | 3.49 | 2225/07-08 | |
| 35 | Ch-nagar | Sagade | Kengaki village other community street M.W.S. Scheme | MWS | 4.24 | 898/08-09 | |
| 36 | Ch-nagar | Madapura | Keragasur village M.W.S. Scheme | MWS | 4.200 | 1091/08-09 | |
| 37 | Ch-nagar | Mukadahalli | Kerehalli village M.W.S. Scheme | MWS | 4.72 | 901/08-09 | |
| 38 | Ch-nagar | Yaraganahalli | Kilegre village S.C.Street and other Street M.W.S. Scheme fixing | MWS | 5.000 | 2131/08-09 | |
| 39 | Ch-nagar | Yaraganahalli | Kilegere village Lingayath Street M.W.S. Extra cistern and Pipe line fixing | MWS | 2.400 | 2130/08-09 | |
| 40 | Ch-nagar | Bisalavadi | Kodiugane village M.W.S. Scheme Revival | MWS | 5.000 | 1562/08-09 | |
| 41 | Ch-nagar | Gulipura | Kotamballi village M.W.S. Scheme | MWS | 4.950 | 925/08-09 | |

| | | | | | | | |
|---|---|---|---|---|---|---|---|
| 42 | Ch-nagar | Kothalavadi | Kothalavadi village M.W.S. | MWS | 4.980 | 1124/08-09 | |
| 43 | Ch-nagar | Kothalavadi | Kothalavadi village M.W.S. | MWS | 4.980 | 1124/08-09 | |
| 44 | Ch-nagar | Kulaguna | Kulagana village M.W.S. Scheme | MWS | 3.50 | 2048/06-07 | |
| 45 | Ch-nagar | Arakalavadi | Linganapura village M.W.S. Scheme | MWS | 5.000 | 1567/08-09 | |
| 46 | Ch-nagar | Mangala | Mangaladhahosur village pipe line | MWS | 4.380 | 2301/07-08 | |
| 47 | Ch-nagar | Maleyur | Maleyur village M.W.S. Scheme | MWS | 5.00 | 1105/08-09 | |
| 48 | Ch-nagar | Shivapura | Mallyanapura village near Karivaraswamy temple M.W.S. Scheme Revival (Pillover work) | MWS | 4.950 | 853/09-10 | |
| 49 | Ch-nagar | Badanaguppe | Mariyaladahundi village M.W.S. Revival | MWS | 5.000 | 1250/08-09 | |

| | | | | | | | |
|---|---|---|---|---|---|---|---|
| 50 | Ch-nagar | Madapura | Masagapura village M.W.S. Scheme | MWS | 4.20 | 1092/08-09 | |
| 51 | Ch-nagar | Heggotara | Megalahundi village M.W.S. Scheme | MWS | 5.00 | 1104/08-09 | |
| 52 | Ch-nagar | Arakalavadi | Mudalahosahalli village M.W.S. Scheme | MWS | 5.000 | 1566/08-09 | |
| 53 | Ch-nagar | Kulagana | Mudanakudu village Siddeshwara Temple near Hand pump to Lingayath street Old cistern water supply and Construction of New cistern M.W.S. Scheme | MWS | 4.60 | 1745/08-09 | |
| 54 | Ch-nagar | Mukadahalli | Mukkadahalli village M.W.S Scheme | MWS | 4.300 | 899/08-09 | |
| 55 | Ch-nagar | Nagavalli | Nagavalli village Nayaka and uppar street M.W.S Scheme | MWS | 4.70 | 851/08-09 | |
| 56 | Ch-nagar | Nagavalli | M.W.S Scheme at Nagavalli village Muslim street | MWS | 3.000 | 462/07-08 | |

| | | | | | | | |
|---|---|---|---|---|---|---|---|
| 57 | Ch-nagar | Jyothigowda napura | M.W.S Scheme at Nallumole village | MWS | 3.00 | 2829/07-08 | |
| 58 | Ch-nagar | Jyothigowda napura | M.W.S Scheme at Nallur village | MWS | 3.800 | 2020/08-09 | |
| 59 | Ch-nagar | Heggaotara | Pannedhahundi village New extension M.W.S Scheme | MWS | 4.90 | 896/08-09 | |
| 60 | Ch-nagar | Punajanur | Punajanur Gate near M.W.S Scheme | MWS | 4.900 | 1158/08-09 | |
| 61 | Ch-nagar | Kagalavadi | Redhamballi village M.W.S Scheme extra pipe line and Motor fixing at Honganur road | MWS | 4.400 | 2023/08-09 | |
| 62 | Ch-nagar | Santhemara halli | Santhamarahalli village M.W.S Scheme | MWS | 4.00 | 680/07-08 | |
| 63 | Ch-nagar | Bhogapura | M.W.S Scheme to Sappaihanapura village | MWS | 4.12 | 1088/08-09 | |
| 64 | Ch-nagar | Saragur | M.W.S Scheme to Saragur Village | MWS | 3.500 | 165/08-09 | |

| | | | | | | | |
|---|---|---|---|---|---|---|---|
| 65 | Ch-nagar | Attugulipura | Siddaihanapura village M.W.S Scheme | MWS | 5.000 | 2352/08-09 | |
| 66 | Ch-nagar | Haradana halli | M.W.S Scheme at Siddalinganapura village S.C. Street and Uppar street | MWS | 4.100 | 965/08-09 | |
| 67 | Ch-nagar | Town | Karivadaswamy Temple near M.W.S Scheme | MWS | 5.00 | 502/07-08 | |
| 68 | Ch-nagar | Udigala | Udigala village New Extension M.W.S Scheme | MWS | 4.700 | 1119/08-09 | |
| 69 | Ch-nagar | Udigala | Udigala village Old Extension M.W.S Scheme | MWS | 4.300 | 1120/08-09 | |
| 70 | Ch-nagar | Kothalavadi | Uganedehundi village M.W.S Scheme | MWS | 4.500 | 1126/08-09 | |
| 71 | Ch-nagar | Venkaihanachatra | V.C.Hosur village M.W.S Scheme | MWS | 4.630 | 2258/08-09 | |
| 72 | Ch-nagar | Honnahalli | Vadagalapura village in M.W.S. Scheme Electrification | MWS | 3.500 | 2061/08-09 | |

| | | | | | | | |
|---|---|---|---|---|---|---|---|
| 73 | Ch-nagar | Yaraganahalli | Yanaganahalli village Nayaka street M.W.S. Scheme | MWS | 5.000 | 2157/08-09 | |
| 74 | Gundupet | Annuru | MWS scheme to Annur village | MWS | 5.00 | 1546/08-09 | |
| 75 | Gundupet | Annuru | MWS scheme to Annukeri village | MWS | 5.00 | 1545/08-09 | |
| 76 | Gundlupet | Mangala | Providing MWSS to Bandipura village | MWS | 6.000 | 1380/08-09 | |
| 77 | Gundlupet | Beemanabeedu | MWS scheme to Beemanabeedu village | MWS | 5.000 | 1534/08-09 | |
| 78 | Gundlupet | Agathagowdanahalli | Revival to PWS/MWS scheme to Bendagalli village | MWS | 4.95 | 1425/08-09 | |
| 79 | Gundlupet | Agathagowdanahally | Providing MWSS to Bendagally village | MWS | 4.950 | 1425/08-09 | |
| 80 | Gundlupet | Raghavapura | Revival for MWS in Bethadamadahalli village | MWS | 5.000 | 1972/08-09 | |

| | | | | | | | |
|---|---|---|---|---|---|---|---|
| 81 | Gundlupet | Annuru | Revival to PWS/MWS scheme to Bethahally village | MWS | 7.000 | 1558/08-09 | |
| 82 | Gundlupet | Shindanapura | MWS Revival to Bethahally village | MWS | 7.000 | 1558/08-09 | |
| 83 | Gundlupet | Berambadi | MWS scheme to Channamallipura village | MWS | 3.500 | 1629/07-08 | |
| 84 | Gundlupet | Bannithalapura | Revival to PWS/MWS scheme to Chikkathupura village | MWS | 4.50 | 1556/08-09 | |
| 85 | Gundlupet | Bannitalapura | Providing MWSS to Chikkathuppuru village | MWS | 4.500 | 1556/08-09 | |
| 86 | Gundlupet | Alathur | MWS scheme to Desipura village | MWS | 3.500 | 1623/07-08 | |
| 87 | Gundlupet | Shindanapura | Revival to PWS/MWS scheme to Chikkathuppur village | MWS | 6.30 | 1554/08-09 | |
| 88 | Gundlupet | Agathagowdanahalli | MWS scheme to Heggadahalli village | MWS | 5.00 | 1421/08-09 | |

| | | | | | | | |
|---|---|---|---|---|---|---|---|
| 89 | Gundlupet | Horeyala | MWS scheme to Horeyala village | MWS | 5.000 | 1406/08-09 | |
| 90 | Gundlupet | Hundipura | Revival to MWS scheme to Hullepura village | MWS | 4.00 | 1388/08-09 | |
| 91 | Gundlupet | bannithalapura | Revival to PWS/MWS scheme to Ingalavadi village | MWS | 8.20 | 1549/08-09 | |
| 92 | Gundlupet | Kabballi | MWS scheme to Kabballi village | MWS | 6.000 | 1547/08-09 | |
| 93 | Gundlupet | Kabballi | Revival to MWS scheme to Kabballi village | MWS | 5.00 | 2590/08-09 | |
| 94 | Gundlupet | Shindanapura | Providing MWSS to Kaggala village | MWS | 7.000 | 1550/08-09 | |
| 95 | Gundlupet | Kelsuru | Revival to MWS scheme to Kaggala village | MWS | 7.00 | 1550/08-09 | |
| 96 | Gundlupet | Kabballi | Revival to PWS/MWS scheme to Kallahally village | MWS | 6.200 | 1557/08-09 | |

| | | | | | | | |
|---|---|---|---|---|---|---|---|
| 97 | Gundlupet | Kodasoge | MWS Revival to Karakala madahally village | MWS | 3.000 | 1979/08-09 | |
| 98 | Gundlupet | Kelsuru | Revival to Old MWS scheme to Kelsipura village | MWS | 3.000 | 1926/08-09 | |
| 99 | Gundlupet | Kelsuru | Revival to PWS/MWS scheme to Kelsur village | MWS | 8.20 | 1559/08-09 | |
| 100 | Gundlupet | Bannitalapura | Providing MWSS to Kilagere village | MWS | 5.000 | 1426/08-09 | |
| 101 | Gundlupet | Bannithalapura | MWS scheme to Kilagere village | MWS | 5.00 | 1426/08-09 | |
| 102 | Gundlupet | Berambadi | MWS scheme to Koothanur village | MWS | 5.000 | 1535/08-09 | |
| 103 | Gundlupet | Bommanahalli | MWS scheme to Kundakere village | MWS | 5.00 | 2441/08-09 | |
| 104 | Gundlupet | Berambadi | Providing additional cistern & pipe line to MWS scheme in Lakkipura village | MWS | 5.000 | 1532/08-09 | |

| | | | | | | | |
|---|---|---|---|---|---|---|---|
| 105 | Gundlupet | Berambadi | MWS scheme to Maddur village | MWS | 3.50 | 1629/08-09 | |
| 106 | Gundlupet | Beemanabeedu | MWS scheme to Mallaianapura village | MWS | 5.000 | 1537/08-09 | |
| 107 | Gundlupet | Kelasuru | Providing Majar and MWS to Mallammanahundi village | MWS | 7.550 | 1924/08-09 | |
| 108 | Gundlupet | Alathur | MWS scheme to Manchalli village | MWS | 5.00 | 2353/08-09 | |
| 109 | Gundlupet | Padaguru | Providing MWSS to Muduguru village | MWS | 5.000 | 1540/08-09 | |
| 110 | Gundlupet | Bargi | MWS scheme to N.Rachaiah colony village | MWS | 3.500 | 1624/07-08 | |
| 111 | Gundlupet | Bargi | MWS scheme to Nagapatna villave | MWS | 4.40 | 1968/08-09 | |
| 112 | Gundlupet | Padagur | MWS scheme to Padagur village | MWS | 5.000 | 1542/08-09 | |
| 113 | Gundlupet | Horeyala | MWS scheme to Rangupura village | MWS | 5.00 | 1408/08-09 | |

| | | | | | | | |
|---|---|---|---|---|---|---|---|
| 114 | Gundlupet | Shindanapura | Revival to MWS scheme to Shindanapura village | MWS | 7.00 | 1422/08-09 | |
| 115 | Gundlupet | Shivapura | MWS scheme to Shivapura village | MWS | 5.00 | 1389/08-09 | |
| 116 | Gundlupet | Kodasoge | MWS scheme to Somanapura village | MWS | 4.150 | 3014/07-08 | |
| 117 | Gundlupet | Terakanambi | MWS scheme Terakanambi hundi village | MWS | 5.000 | /08-09 | |
| 118 | Gundlupet | Bargi | MWS scheme to Thenkalahundi village | MWS | 3.500 | 1627/07-08 | |
| 119 | Gundlupet | Kotekere | MWS scheme to Vanakanapura village | MWS | 4.50 | 2199/08-09 | |
| 120 | Gundlupet | Kotekere | Providing MWSS to Vanakanapura village | MWS | 4.500 | 2199/07-08 | |
| 121 | Gundlupet | Kelasuru | MWS Revival to Yedahundi village | MWS | 3.400 | 1553/08-09 | |
| 122 | Kollegala | Sathegala | New MWS Scheme at Agrahara | M.W.S | 4.500 | 2279/08-09 | |

| | | | | | | | |
|---|---|---|---|---|---|---|---|
| 123 | Kollegala | Tagarapura | New MWS Scheme Alahally Near at Kuruba Street | M.W.S | 5.000 | 1047/08-09 | |
| 124 | Kollegala | Managalli | New MWS Scheme At Anagallidoddi | M.W.S | 4.300 | 1985/08-09 | |
| 125 | Kollegala | Hoogyam | New MWS Scheme At Hanchipalya | M.W.S | 5.000 | 1858/08-09 | |
| 126 | Kollegala | Sathegala | New MWS Scheme At Anjaneyapura | M.W.S | 4.500 | 2284/08-09 | |
| 127 | Kollegala | Dhanagere | Additional Pipeline & pump At Arunapura | M.W.S | 3.500 | 2277/08-09 | |
| 128 | Kollegala | Ponnachi | New MWS Scheme near at Girijana Caloni in Asthuru (T.S.P) | M.W.S | 5.000 | 1856/08-09 | |
| 129 | Kollegala | Ellemala | New MWS Scheme At B.M.Hally | M.W.S | 4.950 | 1399/08-09 | |
| 130 | Kollegala | Lokkanahalli | New MWS Scheme in Boodipadaga | M.W.S | 5.000 | 1195/08-09 | |

| | | | | | | | |
|---|---|---|---|---|---|---|---|
| 131 | Kollegala | Singanalluru | Additional Pipeline & Singal Phase At Boodabalu | M.W.S | 4.400 | 1606/08-09 | |
| 132 | Kollegala | Dhanagere | Additional Pipeline & Cisten in Cheluvanahalli | M.W.S | 3.500 | 2278/08-09 | |
| 133 | Kollegala | Kannuru | New MWS Scheme in Chennalinganahalli | M.W.S | 5.000 | 2267/08-09 | |
| 134 | Kollegala | Hoogyam | New MWS Scheme in Chennegowdanadoddi | M.W.S | 5.000 | 1857/08-09 | |
| 135 | Kollegala | Chikkalluru | New MWS Scheme near at Temple in Chikkalluru | M.W.S | 5.000 | 1218/08-09 | |
| 136 | Kollegala | Managalli | New MWS Scheme in Chinchalli | M.W.S | 4.600 | 1358/08-09 | |
| 137 | Kollegala | Managalli | New MWS Scheme in Chunchalakatte | M.W.S | 4.000 | 1498/08-09 | |
| 138 | Kollegala | Dhanagera | New MWS Scheme in Dhanagera (S.C.P) | M.W.S | 4.500 | 2906/2007-08 | |
| 139 | Kollegala | Dhanagere | New MWS Scheme in Dhanagere | M.W.S | 5.500 | 1634/08-09 | |

| | | | | | | | |
|---|---|---|---|---|---|---|---|
| 140 | Kollegala | Doddindhuvadi | New MWS Scheme near at Nayaka Street &Muslim Street, Settara street in Doddindhuvadi | M.W.S | 3.200 | 956/08-09 | |
| 141 | Kollegala | Doddinduvadi | MWS Revival Near At Temple (Kanakagiri) in Doddinduvadi village | M.W.S | 3.000 | 2608/2007-08 | |
| 142 | Kollegala | Ramapura | New MWS Scheme in Gejjalanatha | M.W.S | 5.000 | 1453/08-09 | |
| 143 | Kollegala | Singanalluru | MWS Revival (Kanchagalli) in gundal village | M.W.S | 3.000 | 2684/2007-08 | |
| 144 | Kollegala | Bandalli | New MWS Scheme in Halagapura | M.W.S | 4.000 | 1419/08-09 | |
| 145 | Kollegala | Hondarabalu | New MWS Scheme Neat at Muneswara Temple in Hitthalagudda | M.W.S | 3.000 | 131/08-09 | |
| 146 | Kollegala | Vadeyarapalya | New MWS Scheme At Honnameti | M.W.S | 5.000 | 1208/08-09 | |

| | | | | | | | |
|---|---|---|---|---|---|---|---|
| 147 | Kollegala | Hondarabalu | Additional Pipe line & Cisten in Hondarabalu | M.W.S | 4.500 | 2900/2007-08 | |
| 148 | Kollegala | Hutthuru | New MWS Scheme Near at New site in Hutthuru | M.W.S | 3.000 | 2684/2006-07 | |
| 149 | Kollegala | P.G. Palya | New MWS Scheme in Jeerigegadde (T.S.P) | M.W.S | 4.000 | 1202/08-09 | |
| 150 | Kollegala | M.M.Hills | New MWS Scheme At Kadahole | M.W.S | 5.000 | 1859/08-09 | |
| 151 | Kollegala | Ellemala | New MWS Scheme in Kaduveeranayakanadoddi | M.W.S | 5.000 | 1397/08-09 | |
| 152 | Kollegala | Singanalluru | Additional Pipeline & Cisten in Kanchagalli | M.W.S | 4.000 | 1605/08-09 | |
| 153 | Kollegala | Hutthuru | New MWS Scheme in Kanmaladoddi | M.W.S | 4.000 | 2083/07-08 | |
| 154 | Kollegala | Kannuru | New MWS Scheme Near at S.C. Street in Kannuru (S.C.P) | M.W.S | 4.750 | 1992/08-09 | |
| 155 | Kollegala | Kannuru | New MWS Scheme in Kempaiahndoddi (S.C.P) | M.W.S | 5.000 | 2269/08-09 | |

| | | | | | | | |
|---|---|---|---|---|---|---|---|
| 156 | Kollegala | Ellemala | New MWS Scheme in Kenchaiahndoddi | M.W.S | 5.000 | 1931/08-09 | |
| 157 | Kollegala | Kunagalli | Additional Cisten & Pipeline in Kunagalli | M.W.S | 3.500 | 1049/08-09 | |
| 158 | Kollegala | Kunthooru | New MWS Scheme Near at Girijana Street in Kunthooru (T.S.P) | M.W.S | 3.000 | 130/08-09 | |
| 159 | Kollegala | Hondarabalu | New MWS Scheme Kurubanakatte | M.W.S | 5.000 | 978/08-09 | |
| 160 | Kollegala | Ajjipura | New MWS Scheme in Kurubaradoddi | M.W.S | 5.000 | 1451/08-09 | |
| 161 | Kollegala | Kuratti hosuru | New MWS Scheme in L.P.S Project | M.W.S | 5.000 | 2380/08-09 | |
| 162 | Kollegala | Lokkanahalli | New MWS Scheme Near at S.C street (S.C.P) in Lokkanahalli | M.W.S | 4.000 | 2078/07-08 | |
| 163 | Kollegala | Lokkanahalli | New MWS Scheme Near at uppara street (S.C.P) in Lokkanahalli | M.W.S | 4.000 | 2079/07-08 | |

| | | | | | | | |
|---|---|---|---|---|---|---|---|
| 164 | Kollegala | M.M. Hills | New MWS Scheme near at Keeran hola haleyuru main road in M.M. Hills | M.W.S | 4.000 | 2635/2007-08 | |
| 165 | Kollegala | M.M. Hills | New MWS Scheme near at Keeran hola haleyuru main road in M.M. Hills | M.W.S | 3.000 | 1032/2007-08 | |
| 166 | Kollegala | P.G. Palya | New MWS Scheme in Maliganatha (T.S.P) | M.W.S | 5.000 | 1209/08-09 | |
| 167 | Kollegala | Mangala | New MWS Scheme Near at S.C. Street in Mangala (S.C.P) | M.W.S | 5.000 | | |
| 168 | Kollegala | Mangala | New MWS Scheme At Mukegowdanadoddi | M.W.S | 5.000 | 1450/08-09 | |
| 169 | Kollegala | P.G. Palya | Drilling of bore well with hand pump in Mysoorappanadoddi (S.C.P) | M.W.S | 4.500 | 1210/08-09 | |
| 170 | Kollegala | P. G. Palya | New MWS Scheme Near at Kurubar Street & Crishenin P.G. Palya | M.W.S | 3.000 | 2687/2006-07 | |

| | | | | | | | |
|---|---|---|---|---|---|---|---|
| 171 | Kollegala | Suleripalya | New MWS Scheme in Pachedoddi | M.W.S | 5.000 | 1449/08-09 | |
| 172 | Kollegala | Playa | New MWS Scheme near at Nayakara Street in Palya (T.S.P) | M.W.S | 4.300 | 1685/08-09 | |
| 173 | Kollegala | Thellanuru | Additional Pipeline & Cisten in Rachappaginagara | M.W.S | 3.200 | 1604/08-09 | |
| 174 | Kollegala | Sathegala | New MWS Scheme in Sathegala | M.W.S | 5.000 | 1639/08-09 | |
| 175 | Kollegala | Sathegala | New MWS Scheme in Shanthinagara | M.W.S | 5.000 | 1497/08-09 | |
| 176 | Kollegala | Sathegala | New MWS Scheme (Darga) in Shivanasamudra | M.W.S | 5.000 | 825/08-09 | |
| 177 | Kollegala | Sathegala | New MWS Scheme At Shivapura | M.W.S | 3.000 | 1991/08-09 | |
| 178 | Kollegala | Singanalluru | New MWS Scheme near at Bus stand in Singanalluru (S.C.P) | M.W.S | 4.500 | 958/08-09 | |

| | | | | | | | |
|---|---|---|---|---|---|---|---|
| 179 | Kollegala | Hondarabalu | Additional Pipeline & Cisten in Soligaradoddi | M.W.S | 2.000 | 2282/08-09 | |
| 180 | Kollegala | Hoogyam | New MWS Scheme At Sulekobe | M.W.S | 5.000 | 2098/08-09 | |
| 181 | Kollegala | P. G. Palya | New MWS Scheme (Mavatthuru) in Uddatti | M.W.S | 4.000 | 2085/07-08 | |
| 182 | Kollegala | Shagya | MWS revival At Vinayakanadoddi | M.W.S | 4.600 | 1692/08-09 | |
| 183 | Kollegala | Ellemala | New MWS Scheme in Vysampalya | M.W.S | 4.500 | 1398/08-09 | |
| 184 | Yalandur | Duggahatty | MWS in Avalkandalli village | MWS | 4.500 | 1058/08-09 | |
| 185 | Yalandur | Agara | MWS in Agara village | MWS | 4.500 | 1243/08-09 | |
| 186 | Yalandur | Agara | MWS in Agara village | MWS | 4.500 | 1243/08-09 | |
| 187 | Yalandur | Ambale | Revival of MWS in Ambale village | MWS | 3.00 | 2317/08-09 | |
| 188 | Yalandur | Gowdahalli | MWS in Bannisarige village | MWS | 3.000 | 2297/08-09 | |

| | | | | | | | |
|---|---|---|---|---|---|---|---|
| 189 | Yalandur | Kesthur | MWS in Basapura village | MWS | 4.000 | 1240/08-09 | |
| 190 | Yalandur | Duggahatty | MWS in Duyamkandalli village | MWS | 4.500 | 1059/08-09 | |
| 191 | Yalandur | Gowdahalli | MWS in Gowdahalli village | MWS | 4.500 | 1235/08-09 | |
| 192 | Yalandur | Gowdally | MWS in Gowdahalli Village | MWS | 4.500 | 1235/08-09 | |
| 193 | Yalandur | Gumbally | Revival of MWS in Adijambava street of Gumballi village | MWS | 3.50 | 2121/07-08 | |
| 194 | Yalandur | Kesthur | MWS in Kesthur village | MWS | 4.500 | 1239/08-09 | |
| 195 | Yalandur | Kesthur | MWS in Kesthur village | MWS | 4.500 | 1239/08-09 | |
| 196 | Yalandur | Agara | MWS in Kinakanahally village | MWS | 3.500 | 1247/08-09 | |
| 197 | Yalandur | Madduru | MWS in Madduru village | MWS | 4.75 | 1242/08-09 | |
| 198 | Yalandur | Gowdally | MWS in Malarapalya village | MWS | 4.500 | 1236/08-09 | |

| | | | | | | | |
|---|---|---|---|---|---|---|---|
| 199 | Yalandur | Gowdahalli | MWS in Malarapalya village | MWS | 4.500 | 1236/08-09 | |
| 200 | Yalandur | Mambally | MWS in Mambally village | MWS | 4.50 | 1245/08-09 | |
| 201 | Yalandur | Mambally | MWS in Mambally village | MWS | 4.500 | 1246/08-09 | |
| 202 | Yalandur | Gowdahalli | Additional Cistern near Anjaneya temple of Vaddagere village | MWS | 4.700 | 137/08-09 | |
| 203 | Yalandur | Ambale | MWS in Y.K.Mole village | MWS | 5.000 | 1712/08-09 | |
| 204 | Yalandur | Yaragambally | MWS in Yaragambally village | MWS | 5.00 | 1070/08-09 | |
| 205 | Yalandur | Yeragamballi | MWS in Yaragambally village | MWS | 5.00 | 1070/08-09 | |
| 206 | Yalandur | Yeragamballi | MWS in Yeragamballi village | MWS | 5.000 | 1069/08-09 | |
| 207 | Yalandur | Yeriyur | MWS in Yeriyur village | MWS | 5.000 | 1063/08-09 | |
| 208 | Yalandur | Yeriyur | MWS in Yeriyur village | MWS | 5.00 | 1711/08-09 | |

**ಶ್ರೀ ಕೆ. ಆರ್. ಮಲ್ಲಿಕಾರ್ಜುನಪ್ಪ:-** ಮಾನ್ಯ ಸಭಾಪತಿಯವರೇ, ಚಾಮರಾಜನಗರ ಜಿಲ್ಲೆ ಅತ್ಯಂತ ಬರಪೀಡಿತ ಜಿಲ್ಲೆಯಾಗಿದ್ದು, ಮೂರ್ನಾಲ್ಕು ವರ್ಷಗಳಿಂದ ಮಳೆ ಅಂತರಜಲ ಕುಸಿದಿದೆ. ಇದಲ್ಲದೇ ಅನುದಾನದಿಂದ ಒಂದಿಪ್ಪತ್ತು ಬೋರ್‌ವೆಲ್‌ಗಳನ್ನು ಕೊರೆಸಿದರೂ ನೀರು ಬರದಂತಹ ಸಂಕಷ್ಟದಲ್ಲಿದ್ದಾರೆ. 2011-12ನೇ ಬಜೆಟ್‌ನಲ್ಲಿ 299 ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆ ಎಂದು 212 ಕೋಟಿ ರೂಪಾಯಿಗಳನ್ನು ಕೊಡಲಾಗಿತ್ತು. ಇದನ್ನು 2012-13ರಲ್ಲಿಯೂ ಪ್ರಸ್ತಾಪಿಸಿದ್ದರೂ, ಈ ಕಾರ್ಯ ಏನಾಗಿದೆ ಎಂಬ ಬಗ್ಗೆ ಅಧಿಕಾರಿಗಳು ಮಾಹಿತಿ ಕೊಡುತ್ತಿಲ್ಲ. ಜೊತೆಗೆ 299 ಹಳ್ಳಿಗಳಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಪೂರಕವಾದಂತಹ ಕೆಲಸ ಪ್ರಾರಂಭವಾಗಿದೆಯೆ? ಅದರ ಟೆಂಡರ್ ಆಗಿದೆಯೇ ಅಥವಾ ಯಾವಾಗ ಟೆಂಡರ್ ಕರೆದು ಯಾವಾಗ ಮುಗಿಸುತ್ತಾರೆ. ಈ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಬೇಕು.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವ ವಿಷಯದಲ್ಲಿ ಸತ್ಯತೆ ಇದೆ. ಏಕೆಂದರೆ ಚಾಮರಾಜನಗರದಲ್ಲಿ ಅಂತರಜಲ ಕುಸಿದು ನೀರಿನ ಬವಣೆ ಅನುಭವಿಸುತ್ತಿರುವುದನ್ನು ನೋಡುತ್ತಿದ್ದೇನೆ. ಕೊಳವೆ ಬಾವಿಗಳ ಮೇಲೆ ಅವಲಂಬನೆ ಆಗಿರುವುದನ್ನು ನೋಡಿದ್ದೇವೆ. ನಾನು ಹಿಂದೆ ಕಂದಾಯ ಸಚಿವನಾಗಿದ್ದಾಗ ಭೇಟಿ ನೀಡಿದ್ದೇನು ಮತ್ತು ಗ್ರಾಮೀಣಾಭಿವೃದ್ಧಿ ಸಚಿವನಾದ ಮೇಲೂ ಅಲ್ಲಿ review meeting ಮಾಡಿದ್ದೇನೆ. ಅಲ್ಲಿಯ ಪರಿಸ್ಥಿತಿಯನ್ನು ಸ್ವತಃ ಅರ್ಥಮಾಡಿಕೊಂಡಿದ್ದೇನೆ. ಹೀಗಾಗಿ ಅಲ್ಲಿನ ಜಿಲ್ಲಾ ಪಂಚಾಯತ್ ಸದಸ್ಯರ ಜೊತೆ ಮತ್ತು ಶಾಸಕರ ಜೊತೆ ಮಾತನಾಡುವಾಗ ಶಾಶ್ವತ ಕುಡಿಯುವ ನೀರನ್ನು ಒದಗಿಸುವ ಯೋಜನೆಯನ್ನು ಜಾರಿಗೆ ತರಬೇಕೆಂಬ ದಿಕ್ಕಿನತ್ತ ಹೋಗುತ್ತಿದ್ದೇವೆ. ಇದು ಕೇವಲ ತಾತ್ಕಾಲಿಕವಾಗಿರದೇ ಶಾಶ್ವತವಾಗಿರಬೇಕು ಮತ್ತು ನದಿ ಮೂಲಗಳಿಂದ ನೀರನ್ನು ಒದಗಿಸುವ ವ್ಯವಸ್ಥೆ ಆಗಬೇಕು. ಈಗಾಗಲೇ ಎರಡು ಯೋಜನೆಗಳಿಗೆ ಚಾಲನೆ ನೀಡಿದ್ದು, ಚಾಮರಾಜನಗದ 166 ಜನ ವಸತಿಗಳಿಗೆ ಕಬಿನಿ ನೀರಿನ ಮೂಲವನ್ನು

ಆಧರಿಸಿ ಶುದ್ಧ ಮತ್ತು ಶಾಶ್ವತ ಕುಡಿಯುವ ನೀರನ್ನು ಒದಗಿಸುವ 145 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿದ್ದೇವೆ. ಎರಡನೆಯಾಗಿ ಗುಂಡ್ಲುಪೇಟೆ ತಾಲ್ಲೂಕಿನ 131 ಜನ ವಸತಿಗಳಿಗೆ ಕಬಿನಿ ನೀರಿನ ಮೂಲವನ್ನು ಆಧರಿಸಿ ಶುದ್ಧ ಮತ್ತು ಶಾಶ್ವತ ಕುಡಿಯುವ ನೀರನ್ನು ಒದಗಿಸುವ 115 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿದ್ದೇವೆ. ಅದಕ್ಕೆ ಸಚಿವ ಸಂಪುಟದಲ್ಲಿ ಒಪ್ಪಿಗೆ ದೊರೆತಿದ್ದು, ಟೆಂಡರ್ ಕರೆಯುವ ಪ್ರಕ್ರಿಯೆ ನಡೆದಿದ್ದು, ಸಮಯದ ಲಿಮಿಟ್ ಕೇಳಿದ್ದಾರೆ. ಇನ್ನು ಮೂರ್‍ನಾಲ್ಕು ತಿಂಗಳಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಮುಗಿಸಿ, ಮೂರ್‍ನಾಲ್ಕು ತಿಂಗಳ ನಂತರ ಯೋಜನೆಗೆ ಚಾಲನೆ ಕೊಡುವ ಕೆಲಸ ಮಾಡುತ್ತೇವೆ. ಆ ಯೋಜನೆ ಪ್ರಾರಂಭವಾದರೆ 400–500 ಗ್ರಾಮಗಳಿಗೆ ಹೆಚ್ಚಿನ ರೀತಿಯ ಪರಿಹಾರ ಸಿಗಲು ಸಾಧ್ಯತೆ ಇದೆ. ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ.

**ಸ್ಥಳೀಯ ಸಂಸ್ಥೆಗಳ ಸುಧಾರಣೆಗಳ ಕುರಿತು**

**76 ಹಾಗೂ 144; ಶ್ರೀ ವಿ.ಆರ್. ಸುದರ್ಶನ್ (ವಿಧಾನ ಸಭೆಯಿಂದ ಚುನಾಯಿತರು) ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಕ್ಷೇತ್ರ)**

**ಅ)** ಆಡಳಿತ ಹಾಗೂ ಅಭಿವೃದ್ಧಿ ದೃಷ್ಟಿಯಿಂದ, ರಾಜ್ಯದಲ್ಲಿರುವ ಗ್ರಾಮ ಪಂಚಾಯತಿಗಳ ಅಧ್ಯಕ್ಷರ ಆಯ್ಕೆಯನ್ನು ನೇರವಾಗಿ ಜನರಿಂದಲೇ ಆಯ್ಕೆ ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ;

**ಆ)** ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು (ವಿವರ ಒದಗಿಸುವುದು);

**ಇ)** ಪದೇ ಪದೇ ಗ್ರಾಮ ಪಂಚಾಯತ್ ಅಧ್ಯಕ್ಷರ ಬದಲಾವಣೆಯಿಂದ ಆಡಳಿತಾತ್ಮಕ ತೊಂದರೆಯುಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಈ)** ತಾಲ್ಲೂಕು ಪಂಚಾಯಿತಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಆಯಾ ತಾಲ್ಲೂಕಿನ ಶಾಸಕರನ್ನು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರನ್ನಾಗಿ

ಹಾಗೂ ವಿಧಾನ ಪರಿಷತ್ತಿನ ಸದಸ್ಯರನ್ನು ಮತ್ತು ಗ್ರಾಮ ಪಂಚಾಯತಿ ಅಧ್ಯಕ್ಷರನ್ನು ತಾಲ್ಲೂಕು ಪಂಚಾಯತಿಯ ಸದಸ್ಯರನ್ನಾಗಿ ನೇಮಿಸುವ ಮೂಲಕ ಆಡಳಿತ/ಅಭಿವೃದ್ಧಿ ದೃಷ್ಟಿಯಿಂದ ಮತ್ತು ಸಾಮಾಜಿಕ ಸಾಮರಸ್ಯ ಸಾಧಿಸುವ ಕುರಿತು ಸರ್ಕಾರವು ಚಿಂತನೆ ಮಾಡಿದೆಯೇ?

**ಉ)** ಈ ದೃಷ್ಟಿಕೋನದಿಂಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು);

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ & ಪಂ. ರಾಜ್ ಸಚಿವರು)**

**ಅ)** ಆಡಳಿತ ಹಾಗೂ ಅಭಿವೃದ್ಧಿ ದೃಷ್ಟಿಯಿಂದ, ರಾಜ್ಯದಲ್ಲಿರುವ ಗ್ರಾಮ ಪಂಚಾಯತಿಗಳ ಅಧ್ಯಕ್ಷರ ಆಯ್ಕೆಯನ್ನು ನೇರವಾಗಿ ಜನರಿಂದಲೇ ಆಯ್ಕೆ ಮಾಡುವ ಆಲೋಚನೆ ಸರ್ಕಾರದ ಪರಿಶೀಲನೆಯಲ್ಲಿದೆ.

**ಆ)** ಗ್ರಾಮ ಪಂಚಾಯತ್ ಅಧ್ಯಕ್ಷರ ಹುದ್ದೆಗೆ ನೇರ ಚುನಾವಣೆಯನ್ನು ನಡೆಸುವ ಬಗ್ಗೆ ಸಾಧಕ ಬಾಧಕಗಳ ಬಗ್ಗೆ ವಿಶ್ಲೇಷಿಸಿ ವರದಿ ನೀಡಲು ಧಾರವಾಡದ ಸೆಂಟರ್ ಫಾರ್ ಮಲ್ಟಿ ಡಿಸೆಪ್ಲಿನರಿ ರಿಸರ್ಚ್ ಇವರಿಗೆ ವಹಿಸಲಾಗಿದೆ. ವರದಿ ನೀಡಿದ ನಂತರ ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಕ್ರಮ ವಹಿಸಲಾಗುವುದು.

ಇ) ಹೌದು.

**ಈ)** ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 138 ರಂತೆ ತಾಲ್ಲೂಕು ಪಂಚಾಯತಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಆಯಾ ತಾಲ್ಲೂಕಿನ ಶಾಸಕರನ್ನು ತಾಲ್ಲೂಕು ಪಂಚಾಯತಿ ಅಧ್ಯಕ್ಷರನ್ನಾಗಿ ನೇಮಿಸಲು ಅವಕಾಶವಿರುವುದಿಲ್ಲ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 120 ರಲ್ಲಿ ತಾಲ್ಲೂಕು ಪಂಚಾಯತಿ ರಚನೆ ಬಗ್ಗೆ ವಿವರಿಸಲಾಗಿದೆ. ತಾಲ್ಲೂಕಿನಲ್ಲಿ ಮತದಾರರಾಗಿ ನೋಂದಾಯಿತರಾಗಿರುವ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರು ಹಾಗೂ ತಾಲ್ಲೂಕು ಪಂಚಾಯತಿ

ಅಧ್ಯಕ್ಷನು ಚೀಟಿ ಎತ್ತುವ ಮೂಲಕ ನಿರ್ಧರಿಸುವಂತೆ ಒಂದು ವರ್ಷ ಅವಧಿಗೆ, ಸರದಿಯ ಪ್ರಕಾರ ತಾಲ್ಲೂಕಿನ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳ ಸಂಖ್ಯೆಯ ಐದನೆಯ ಒಂದರಷ್ಟು ಅಧ್ಯಕ್ಷರುಗಳನ್ನು ತಾಲ್ಲೂಕು ಪಂಚಾಯತ್ ಸದಸ್ಯರಾಗಿ ನೇಮಿಸಲು ಅವಕಾಶ ಕಲ್ಪಿಸಲಾಗಿದೆ.

ಉ) ಈ ದೃಷ್ಟಿಕೋನವಿಲ್ಲದಿರುವುದರಿಂದ ಸರ್ಕಾರದಿಂದ ಕ್ರಮ ಕೈಗೊಳ್ಳುವುದಿಲ್ಲ.

**ಶ್ರೀ ವಿ.ಆರ್.ಸುದರ್ಶನ:–** ಮಾನ್ಯ ಸಭಾಪತಿಯವರೇ, ಮಾನ್ಯ ಜಗದೀಶ ಶೆಟ್ಟರ್‌ರವರು ಸಭಾಧ್ಯಕ್ಷರಾಗಿ ಕೆಲಸ ಮಾಡಿದ್ದು, parliamentary democracy ಯನ್ನು ನಾವು ಅಳವಡಿಸಿಕೊಂಡಿದ್ದು, ನಮ್ಮದು presidential form of government ಅಲ್ಲ. ರಾಷ್ಟ್ರಾಧ್ಯಕ್ಷರು ಹಾಗೂ ಪ್ರಧಾನ ಮಂತ್ರಿಗಳನ್ನು ನೇರವಾಗಿ ಆಯ್ಕೆ ಮಾಡುವ ಪದ್ಧತಿ ನಮ್ಮಲ್ಲಿ ಇಲ್ಲ. ಕೆಲವು ರಾಜ್ಯಗಳಲ್ಲಿ ವಿಶೇಷವಾಗಿ ತಮಿಳುನಾಡಿನಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರನ್ನು ನೇರವಾಗಿ ಆಯ್ಕೆ ಮಾಡುವ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಹಳ್ಳಿಗಾಡುಗಳಲ್ಲಿ ಗ್ರಾಮಪಂಚಾಯತಿ ಅಧ್ಯಕ್ಷರ ಅವಧಿ, ಅಲ್ಲಿ ನಡೆಯುವ ಚಟುವಟಿಕೆಗಳ ಬಗ್ಗೆ ಕೆಲವು ಸಮಸ್ಯೆಗಳು ಇವೆ. ಸಾಮಾಜಿಕ ವಾತಾವರಣವೇ ಅದ್ವಾನ ಆಗಿರುವುದು ನಿಜ. ಆದರೆ ಅದಕ್ಕೆ ಪರಿಹಾರವನ್ನು ರಾಜಕೀಯ ಪಕ್ಷಗಳು ಮತ್ತು ಕಾನೂನಿನಲ್ಲಿ ಹುಡುಕಬೇಕಾಗುತ್ತದೆ. ಆ ದೃಷ್ಟಿಯಿಂದ ಈ ರಾಜ್ಯದಲ್ಲಿ three tier ವ್ಯವಸ್ಥೆಯನ್ನು ತೆಗೆದುಹಾಕಿ, ಗ್ರಾಮ ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ವ್ಯವಸ್ಥೆಗಳನ್ನು ಉಳಿಸಿಕೊಳ್ಳಬೇಕು. ಗ್ರಾಮ ಪಂಚಾಯತಿಗಳು ಪಕ್ಷಾತೀತವಾಗಿ ಇರಬೇಕೆಂದು ಮಾತನಾಡಿದರೂ, ಪಕ್ಷದ ಆಧಾರದ ಮೇಲೆ ಚಟುವಟಿಕೆಗಳು ನಡೆಯುತ್ತಿವೆ. ಕನಿಷ್ಟ ರಾಜಕೀಯ ಪಕ್ಷಗಳು ಒಂದು ಸದಸ್ಯತ್ವವನ್ನು ಪಡೆದುಕೊಂಡರೆ ಗ್ರಾಮ ಪಂಚಾಯತಿಗಳಿಗೆ ಮಾರ್ಗದರ್ಶನ ಮಾಡಲು ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಗ್ರಾಮ ಪಂಚಾಯತಿ ಗಳಲ್ಲಿ party based ಚುನಾವಣೆ ನಡೆಸಿ. ತಾಲ್ಲೂಕು ಪಂಚಾಯತಿಗಳನ್ನು ರದ್ದು ಮಾಡಿ, ಸ್ಥಳೀಯ ವಿಧಾನ ಸಭಾ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡಿ,

ಎಲ್ಲಾ ಗ್ರಾಮ ಪಂಚಾಯತಿ ಅಧ್ಯಕ್ಷರನ್ನು ಸದಸ್ಯರನ್ನಾಗಿ ಮಾಡಿ ಜಿಲ್ಲಾ ಪಂಚಾಯತಿ ವ್ಯವಸ್ಥೆಯನ್ನು ಬಲಪಡಿಸಿದರೆ, ಆಡಳಿತ ವಿಕೇಂದ್ರೀಕರಣವನ್ನು ಬಲಪಡಿಸಲು ಸಾಧ್ಯವಾಗುತ್ತದೆ. ಅದಕ್ಕೆ ಕೆಲವು ಕಾನೂನಿನ ತಿದ್ದುಪಡಿಗಳನ್ನು ರಾಜ್ಯ ಸರ್ಕಾರವು ತರಬೇಕಾಗುತ್ತದೆ. ಇನ್ನೂ 3 ವರ್ಷಗಳ ಸಮಯಾವಕಾಶವಿದ್ದು, ಇವತ್ತಿನಿಂದ ಪ್ರಯತ್ನಪಟ್ಟರೆ ಮತ್ತು ಅಗತ್ಯ ಬಿದ್ದರೆ ಸಂಸತ್ತಿನ ಬೇಕಾದ ತಿದ್ದುಪಡಿ ಮಾಡಲು ಅನುಮತಿಯನ್ನು ಪಡೆಯಬಹುದು. ಇದಕ್ಕೆ ಕೇಂದ್ರ ಸರ್ಕಾರದ ಜೊತೆ ವ್ಯವಹಾರ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಆಡಳಿತ ವಿಕೇಂದ್ರೀಕರಣ ನಗೆಪಾಟಲಿನ ಸ್ಥಿತಿಗೆ ಹೋಗಿದೆ. ಮಾನ್ಯ ನಸೀರ್ ಸಾಬ್‌ರ ಪ್ರಯತ್ನ, ಶ್ರೀ ರಾಮಕೃಷ್ಣ ಹೆಗಡೆಯವರ ಪ್ರಯತ್ನ, ಶ್ರೀಯುತ ನರಸಿಂಹರಾಯರ ಪ್ರಯತ್ನ ಹಾಗೂ ಶ್ರೀ ರಾಜೀವ್ ಗಾಂಧಿಯವರ ಸದುದ್ದೇಶದಿಂದ ಇಡೀ ದೇಶದಲ್ಲಿಯೇ ಕರ್ನಾಟಕದಲ್ಲಿ ಆಡಳಿತ ವಿಕೇಂದ್ರೀಕರಣದ ವ್ಯವಸ್ಥೆ ಆಗಬೇಕೆಂದು ಸಂವಿಧಾನಕ್ಕೆ 73 ಮತ್ತು 74ನೇ ತಿದ್ದುಪಡಿಯನ್ನು ತಂದರು. ಆದರೆ ಅದನ್ನು ಬಲಪಡಿಸಲು ಅವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಬರೀ ಕಾನೂನಿನ ಪ್ರಕಾರ ಚುನಾವಣೆ ನಡೆದಿದೆ. ಇವತ್ತು ಅಪಹಾಸ್ಯ ಮತ್ತು ನಗೆಪಾಟಲಿಗೆ ಈಡಾಗಿದೆ. ಅದರ ಕತ್ತು ಹಿಸುಕುವ ಪ್ರಯತ್ನ ನಡೆಯುತ್ತಿದೆ. ಅವರಿಗೆ ಸಿಗಬೇಕಾದ ಅಧಿಕಾರಿ ಅವರ ರಾಜಕೀಯ ಕಾರಣಗಳಿಂದ ಸಿಗುತ್ತಿಲ್ಲ. ಇದಕ್ಕೆ ಏನಾದರೂ ಅರ್ಥ ಇದೆಯೇ?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ.....

**ಸಭಾಪತಿಯವರು:-** ಪ್ರಶ್ನೆ ಕೇಳಿದವರು ಮಾತನಾಡಲಿ, ನಾನು ಸಭೆ ನಡೆಸಬೇಕು. ನಂತರ ನೋಡೋಣ.

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯತಿ ಅಧ್ಯಕ್ಷರ ಬದಲವಣೆಯಿಂದ ಆಡಳಿತಾತ್ಮಕ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ಇದನ್ನು ಗಮನಿಸಬೇಕು. ಮಾನ್ಯ ಸಚಿವರು 'ಒಂದು ತಿಂಗಳ

ಹಿಂದೆ ಇದು ನನ್ನ ಗಮನಕ್ಕೆ ಬಂದಿದ್ದು, ನೇರವಾಗಿ ಅಧ್ಯಕ್ಷರನ್ನು ಆಯ್ಕೆ ಮಾಡುವ ವಿಚಾರದಲ್ಲಿ ಸರ್ಕಾರ ಗಮನಹರಿಸುತ್ತಿದೆ' ಎಂದು ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಇಂತಹ ತೊಂದರೆಗಳನ್ನು ನಿವಾರಣೆ ಮಾಡಬೇಕು. ನಾವು ಇವತ್ತು ರೊಟೇಷನ್ ಪದ್ಧತಿಯಲ್ಲಿದ್ದು, 20 ತಿಂಗಳು ಅಧ್ಯಕ್ಷರನ್ನು ಬದಲಾವಣೆ ಮಾಡುವ ಮತ್ತು ಸಮಾಜದ ವಿವಿಧ ವರ್ಗಗಳಿಗೆ ಆ ಸ್ಥಾನ ಕೊಡುವ ವ್ಯವಸ್ಥೆಯಲ್ಲಿ ನಾವಿದ್ದೇವೆ. ಆದರೆ ಈ ಬದಲಾವಣೆಯಿಂದ ಯಾವುದೇ ತೊಂದರೆ ಆಗದೇ ಪಂಚಾಯತಿ ಅಧ್ಯಕ್ಷರನ್ನು ನೇರವಾಗಿ ಆಯ್ಕೆ ಮಾಡುವ ವ್ಯವಸ್ಥೆ ಮಹಾರಾಷ್ಟ್ರದ ನಗರ ಸಭೆಗಳಲ್ಲಿ ಇದೆ. ಇದನ್ನು ಯಾವ ರೀತಿ ಕರ್ನಾಟಕದಲ್ಲಿ ಅನುಷ್ಠಾನಗೊಳಿಸಬಹುದೆಂದು ಕೇಳಬಯಸುತ್ತೇನೆ.

**ಶ್ರಿ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ.....

**ಸಭಾಪತಿಯವರು:–** ಈ ಪ್ರಶ್ನೆ ಬಹಳ ಗಂಭೀರವಾಗಿದ್ದು, ಸ್ಥಳೀಯ ಸಂಸ್ಥೆಗಳಿಂದ ಬಂದಿರುವ 25 ಜನರಿದ್ದು, ಗ್ರಾಮೀಣಾಭಿವೃದ್ಧಿಗಾಗಿ ಪ್ರತ್ಯೇಕ ಸಮಿತಿಯನ್ನು ಮಾಡಿದ್ದು, ಆ ಸಮಿತಿಯಲ್ಲಿ ಚರ್ಚೆ ಮಾಡಿ, ಸದನದಲ್ಲಿ ನೋಟೀಸ್ ಕೊಟ್ಟು ಅರ್ಧ ಗಂಟೆ ಅಥವಾ ಒಂದು ಗಂಟೆಯ ಚರ್ಚೆಗೆ ತನ್ನಿ. ಆಗ ಎಲ್ಲರೂ ಮಾತನಾಡಿ. ಆದರೆ ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡುತ್ತೇನೆ ಎಂದರೆ ಹೇಗೆ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸುದರ್ಶನ್‌ರವರು ತಾಲ್ಲೂಕು ಪಂಚಾಯತಿಯನ್ನು ರದ್ದು ಮಾಡುವ ಬಗ್ಗೆ ತಿಳಿಸಿದ್ದು, ನಾನೊಬ್ಬ ಸ್ಥಳೀಯ ಸಂಸ್ಥೆಗಳಿಂದ 3ನೇ ಬಾರಿ ಆಯ್ಕೆಯಾಗಿರುವ ಜವಾಬ್ದಾರಿ ಸದಸ್ಯನಾಗಿದ್ದು, ಅದು ಸರಿಯಲ್ಲ ಎಂದು ಕಡತದಲ್ಲಿ ಹೋಗುವ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ತಾವು ಅದಕ್ಕೆ ಅವಕಾಶ ಕಲ್ಪಿಸಬೇಕೆಂದು ವಿನಂತಿಸಿದ್ದೆ. ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಸದನದಲ್ಲಿ ಸುಮ್ಮನೆ ಕುಳಿತಿದ್ದೀರಿ ಎಂದು ಜನ ಕೇಳಿದರೆ ನಾನೇನು ಉತ್ತರ ಕೊಡಲಿ? ನನ್ನ ಸಹಾಯಕ್ಕೆ ಬರಬೇಕು.

**ಸಭಾಪತಿಯವರು:–** ನಿಮ್ಮಿಬ್ಬರಲ್ಲಿ ಭಿನ್ನಾಭಿಪ್ರಾಯ ಇದ್ದರೆ ಏನು ಮಾಡುವುದು? ಒಂದು ನೋಟೀಸ್ ಕೊಡಿ, ಅವಕಾಶ ಕೊಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ನೋಟೀಸ್ ಕೊಡುವುದು ನಂತರದ ವಿಷಯ. ಅದು ನನಗೂ ಗೊತ್ತಿದೆ. ನಾನು ಇಲ್ಲಿಗೆ ಬಂದು 14 ವರ್ಷ ಆಗಿದೆ. ಆದರೂ ಕಡತದಲ್ಲಿ ಹೋಗಬೇಕು. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿ ಸದಸ್ಯರು ಗೊಂದಲ ಏಳುವ ಸ್ಥಿತಿ ಉಂಟಾಗುತ್ತದೆ. ಅದು ಸರಿಯಲ್ಲ. ಆದ್ದರಿಂದ ತಾಲ್ಲೂಕು ಪಂಚಾಯತಿಗಳನ್ನು ಬಲವರ್ಧನೆ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಜಗದೀಶ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆಲ್ಲರೂ ಪ್ರಶ್ನೆಯನ್ನು ಕೇಳಿದ್ದು, ಇದರ ಬಗ್ಗೆ ಅಧ್ಯಯನ ಮಾಡಲು ನಾನು ಒಂದು ಸಮಿತಿಯನ್ನು ನೇಮಿಸಿದ್ದೇನೆ. ಗ್ರಾಮ ಪಂಚಾಯತಿ ಅಧ್ಯಕ್ಷರ ಅವಧಿ 30 ತಿಂಗಳಾಗಿದ್ದು, ನಾನು ಪ್ರವಾಸ ಮಾಡಿದ ಸಂದರ್ಭದಲ್ಲಿ ಬೇರೆ ಬೇರೆ ಭಾವನೆಗಳನ್ನು ತಿಳಿದುಕೊಂಡ ಸಂದರ್ಭದಲ್ಲಿ 30 ತಿಂಗಳುಗಳಿಂದ 10–15 ತಿಂಗಳುಗಳಿಗೊಮ್ಮೆ ಅವಿಶ್ವಾಸ ನಿರ್ಣಯ ತಂದು ಹೊಸ ಅಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ ಸದಸ್ಯರನ್ನು ಪ್ರವಾಸ ಕರೆದುಕೊಂಡು ಹೋಗುವುದು ನಡೆಯುತ್ತಿದೆ. ಇದರಿಂದ administration collapse ಆಗುತ್ತಿದೆ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಮುಖ್ಯಮಂತ್ರಿಗಳು ಅಧಿಕಾರವಧಿ 20–20 ತಿಂಗಳು ಮಾಡಿಕೊಂಡು ಮಾಡಿದ್ದಾರೆ, ಇನ್ನು ಗ್ರಾಮ ಪಂಚಾಯತಿಗಳಲ್ಲಿ ಆದರೆ ಏನು?

**ಶ್ರೀ ಜಗದೀಶ ಶೆಟ್ಟರ್:–** ಇರಲಿ ಬಿಡಿ, ಚರ್ಚೆ ಮಾಡೋಣ. ಸರಿಯಲ್ಲ ಎಂದರೆ ಬಿಡೋಣ. ಚರ್ಚೆಗೆ ವಿಷಯವನ್ನು ಬಿಡುತ್ತಿದ್ದೇನೆ. ಬೇರೆ ರಾಜ್ಯದಲ್ಲಿ ಇದರ ಪ್ರಯೋಗ ಆಗಿದ್ದು, ಇದರಿಂದ ಒಳ್ಳೆಯದು ಆಗಿದೆ ಎಂದು ತಿಳಿದು ಬಂದಿದೆ. ಆದ್ದರಿಂದ ತಕ್ಷಣವೇ ತಿದ್ದುಪಡಿ ತರುತ್ತಿಲ್ಲ. ಅದನ್ನು ಅಧ್ಯಯನ ಮಾಡಲು Centre for Multi-Disciplinary Research ಎನ್ನುವ ಸಂಸ್ಥೆಗೆ ವಹಿಸಿದ್ದು, ಅದರ ವರದಿಯನ್ನು ಮುಂದಿಸುತ್ತೇನೆ. ಅದು

ಸರಿ ಎನಿಸಿದರೆ ತಿದ್ದುಪಡಿ ತಂದು ಅಧಿಕಾರ ಕೊಡೋಣ, ಇಲ್ಲದಿದ್ದರೆ ಬೇಡ. ಚರ್ಚೆ ಮಾಡಿ ಮಾಡೋಣ. ಆದರೆ ಮಾನ್ಯ ಸುದರ್ಶನ್‌ರವರು ಎಲ್ಲದ್ದಕ್ಕೂ ರಾಜಕೀಯ ಹುಡುಕುತ್ತಾರೆ. ಅಧಿಕಾರ ವಿಕೇಂದ್ರೀಕರಣಕ್ಕೆ ಧಕ್ಕೆ ಕೊಡುತ್ತಿದ್ದೀರಿ. ಕತ್ತು ಹಿಸುಕುತ್ತಿದ್ದೀರಿ ಎಂದೆಲ್ಲ ಹೇಳಿದರು. ಅವರು ಚರ್ಚೆ ಮಾಡಿ ಏನು ಮಾಡೋಣ ಎಂದು ಸಲಹೆ ಕೊಡಲಿ. 6 ಲಕ್ಷ ರೂಪಾಯಿಗಳಿದ್ದ ಗ್ರಾಂಟ್ ಅನ್ನು ಎಂಟತ್ತು ಲಕ್ಷ ರೂಪಾಯಿಗಳಿಗೆ ಜಾಸ್ತಿ ಮಾಡಿದ್ದೇವೆ. ಜಿಲ್ಲಾ ಪಂಚಾಯತಿಗಳಿಗೆ ಹೋದ ಸಾರಿ ಒಂದು ಕೋಟಿ ರೂಪಾಯಿಗಳನ್ನು ನೀಡಿದ್ದು, ಈ ಸಾರಿ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಗ್ರಾಂಟ್ ಜಾಸ್ತಿ ಮಾಡುತ್ತಿದ್ದೇವೆ. ಗ್ರಾಮ ಪಂಚಾಯತಿಗಳಿಗೆ ಕೊಡಬೇಕಾದ ಅಧಿಕಾರವನ್ನು ಕಿಂಚಿತ್ತೂ ಕಡಿಮೆ ಮಾಡಿಲ್ಲ. ಆ ಅಧಿಕಾರ ಅವರ ಕಾಲದಲ್ಲಿಯೇ ಸ್ವಲ್ಪ ಕಡಿಮೆ ಆಗಿದ್ದು, ನಮ್ಮ ಕಾಲದಲ್ಲಿ ಏನೂ ಆಗಿಲ್ಲ. ಸುಮ್ಮನೆ ಎಲ್ಲದ್ದಕ್ಕೂ ರಾಜಕೀಯವಾಗಿ ಮಾತನಾಡಬಾರದು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಕೊಡಲಿ ಪೆಟ್ಟು ಹಾಕಿದವರು ಅವರು.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಇಷ್ಟೆಲ್ಲಾ ಮಾತನಾಡುವ ಅವಶ್ಯಕತೆ ಇಲ್ಲ. ಈಗಾಗಲೇ ಮಾನ್ಯ ಸಭಾಪತಿಯವರು ತಿಳಿಸಿದಂತೆ, ಈ ಸದನ ಹಾಗೂ ಕೆಳಮನೆಯ ಸದಸ್ಯರನ್ನೊಳಗೊಂಡ ಒಂದು ಸಮಿತಿ ಇದ್ದು, ಅದರಲ್ಲಿ ಚರ್ಚೆ ಮಾಡೋಣ. ಯಾರೂ ರಾಜಕೀಯ ಮಾಡುವುದು ಬೇಡ.

**ಶ್ರೀ ವಿ.ಆರ್.ಸುದರ್ಶನ್:-** ನಾನು ರಾಜಕೀಯವಾಗಿ ಹೇಳಿಲ್ಲ, analytical ಆಗಿ ಹೇಳಿದ್ದೇನೆ. ಅವರು ಸಂಪೂರ್ಣ ಸಮಯ ಕೊಡುತ್ತಿರುವುದು.

**ಶ್ರೀ ಜಗದೀಶ ಶೆಟ್ಟರ್:-** ಶಾಸಕರನ್ನು ತಾಲ್ಲೂಕು ಪಂಚಾಯತಿ ಸದಸ್ಯರನ್ನಾಗಿ ಮಾಡಬೇಕೆಂದು ಹೇಳುತ್ತಿದ್ದಾರೆ. ಅಂದರೆ ಅವರ ಉದ್ದೇಶ ಏನು? ಅದು ಅಧಿಕಾರ ವಿಕೇಂದ್ರೀಕರಣ ವಿರುದ್ಧ ಅಲ್ಲವೇ? ಆ ಪ್ರಶ್ನೆಯ

ಉದ್ದೇಶ ಏನಿದೆ? ಶಾಸಕರನ್ನು ತಾಲ್ಲೂಕು ಪಂಚಾಯತಿಗೆ ಕಳುಹಿಸಬೇಕೆಂದು ಇದೆ.

**(ಗೊಂದಲ)**

**ಶ್ರೀ ವಿ.ಆರ್.ಸುದರ್ಶನ್:–** ನಾನು ರದ್ದು ಮಾಡಿ ಎಂದು ಹೇಳಲಿಲ್ಲ. ಅವರು ರಾಜಕಾರಣ ಮಾಡುತ್ತಿದ್ದಾರೆ. ಎರಡು ವ್ಯವಸ್ಥೆಗಳು ಜಾರಿಗೆ ಬಂದಾಗ ಆಡಳಿತ ವಿಕೇಂದ್ರಿಕರಣ ಹೆಚ್ಚು ಪ್ರಯೋಜನಕ್ಕೆ ಬರುತ್ತದೆ ಎಂದು ಹೇಳಿದ್ದೇನೆ. ಪ್ರಶ್ನೆಯನ್ನು ಅರ್ಥಮಾಡಿಕೊಳ್ಳದೇ ಏನೇನೋ ಹೇಳಬಾರದು.

**(ಗೊಂದಲ)**

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ಸತ್ಯವಾಗಿ ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಇಲ್ಲ. ಆದರೆ ಅವರೆಲ್ಲರೂ ಒಟ್ಟಾರೆ ಸೇರಿಕೊಂಡು decentralization of corruption ಅನ್ನು ಚೆನ್ನಾಗಿ ಮಾಡುತ್ತಿದ್ದಾರೆ ಎಂದು ಎಲ್ಲರಿಗೂ ಗೊತ್ತಿದೆ. ಅದರಲ್ಲಿ ರಾಜಕೀಯ ಇಲ್ಲ.

**ಧಾರವಾಡ–ಸವದತ್ತಿ ರಸ್ತೆ ದುರಸ್ತಿ ಬಗ್ಗೆ**

**50; ಶ್ರೀ ಮಾನೆ ಶ್ರೀನಿವಾಸ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಧಾರವಾಡ ಸವದತ್ತಿ ರಸ್ತೆಯನ್ನು ದುರಸ್ತಿಗೊಳಿಸಲು ಕಳೆದ ಆರು ವರ್ಷಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಯಾವ ಯಾವ ಯೋಜನೆಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆ?

**ಆ)** ಧಾರವಾಡ ಸವದತ್ತಿ ರಸ್ತೆಯನ್ನು ಎಷ್ಟು ಕಿ.ಮೀ. ದುರಸ್ತಿಗೊಳಿಸಿದೆ, ಇದನ್ನು ಪ್ರತಿ ಆರು ತಿಂಗಳಿಗೊಮ್ಮೆ ರಿಪೇರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಕ್ರಮ ತೆಗೆದುಕೊಂಡ ಬಗ್ಗೆ ವಿವರ ನೀಡುವುದು?

ಇ) ಈ ರಸ್ತೆಯನ್ನು ನಿರ್ಮಿಸಲು ಮತ್ತೆ ಯಾವುದಾದರು ಯೋಜನೆಯಡಿ ಕ್ರೀಯಾ ಯೋಜನೆ ಮಾಡಲಾಗಿದೆಯೇ?

**ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು)**

ಅ) ಧಾರವಾಡ-ಸವದತ್ತಿ ರಸ್ತೆಯ ಸುಧಾರಣೆಗಾಗಿ ಕಳೆದ ಆರು ವರ್ಷಗಳಲ್ಲಿ ಲೆಕ್ಕ ಶೀರ್ಷಿಕೆ 5054 – ಇತರೆ ರಸ್ತೆ ನಿರ್ಮಾಣ ದಡಿಯಲ್ಲಿ ಹಾಗೂ ಪ್ರಕೃತಿ ವಿಕೋಪ ಪರಿಹಾರ ನಿಧಿ ಯೋಜನೆ ಅಡಿ ಒಟ್ಟು ರೂ.1318.82 ಲಕ್ಷಗಳ ಮೊತ್ತ ಬಿಡುಗಡೆಯಾಗಿದೆ.

ಆ) ಈ ರಸ್ತೆಯನ್ನು ಪ್ರತಿ ಆರು ತಿಂಗಳಿಗೊಮ್ಮೆ ದುರಸ್ತಿ ಮಾಡಲಾಗುತ್ತಿಲ್ಲ. ಧಾರವಾಡ-ಸವದತ್ತಿ ರಸ್ತೆಯ ಒಟ್ಟು 36.94 ಕಿ.ಮೀ. ಉದ್ದ ದುರಸ್ತಿಗೊಳಿಸಿದೆ. ರಸ್ತೆ ಸ್ಥಿತಿಗೆ ಅನುಗುಣವಾಗಿ ಹಾಗೂ ಕಾಲಕಾಲಕ್ಕೆ ಬಿಡುಗಡೆಯಾದ ಅನುದಾನಕ್ಕೆ ತಕ್ಕಂತೆ ರಸ್ತೆ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಇ) ಈ ರಸ್ತೆಯನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲು ಕೆಶಿಪ್-2 ಯೋಜನೆ ಅಡಿಯಲ್ಲಿ ಕಾಮಗಾರಿ ಅನುಮೋದನೆ ಗೊಂಡಿರುತ್ತದೆ. ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು ಪ್ರಗತಿಯಲ್ಲಿದೆ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರ ಕ್ಷೇತ್ರ) (ಶ್ರೀ ಶ್ರೀನಿವಾಸ ವಿ. ಮಾನೆ ಅವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಧಾರವಾಡ-ಸವದತ್ತಿ ರಸ್ತೆಯು ಮೇಲಿಂದ ಮೇಲೆ ಹದಗೆಟ್ಟಿರುವುದರಿಂದ ದುರಸ್ತಿ ಮಾಡುವ ಅನಿವಾರ್ಯತೆ ಬರುತ್ತಿದೆ. ಶಾಶ್ವತವಾಗಿ ಈ ರಸ್ತೆಯನ್ನು ಅಭಿವೃದ್ಧಿ ಮಾಡಬೇಕೆಂದು ಕೆಶಿಪ್-2ರ ಯೋಜನೆಯಲ್ಲಿ ತೆಗೆದುಕೊಂಡಿದ್ದೇವೆ ಎಂದು ಉತ್ತರ ನೀಡಿದ್ದಾರೆ. ಇದಕ್ಕೆ ಯಾವಾಗ ಮತ್ತು ಒಟ್ಟು ಎಷ್ಟು ಅಂದಾಜು ವೆಚ್ಚಕ್ಕೆ ಅನುಮೋದನೆ ನೀಡಿದ್ದಾರೆ? ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಿ, ಯಾವಾಗ ಮುಗಿಸುತ್ತಾರೆ ಎಂದು ಕೇಳಬಯಸುತ್ತೇನೆ.

**ಶ್ರೀ ಸಿ.ಎಂ. ಉದಾಸಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರದಲ್ಲಿ ತಿಳಿಸಿದ್ದು, 38.1/2 ಕಿಲೋಮೀಟರ್ ರಸ್ತೆಯನ್ನು ಕೆಶಿಪ್-2ರ ಯೋಜನೆಯಲ್ಲಿ ಟೆಂಡರ್ ಕರೆದು ಏಜನ್ಸಿ ಫಿಕ್ಸ್ ಮಾಡಿದ್ದು, ಶ್ರೀ ರೆಡ್ಡಿ ವೀರಣ್ಣ ಎಂಬ ಗುತ್ತಿಗೆದಾರರು ಕೆಲಸ ಪ್ರಾರಂಭಿಸಿದ್ದಾರೆ. ಈ ಕೆಲಸ 84.48 ಕೋಟಿ ರೂಪಾಯಿಗಳಿಗೆ ನೀಡಿದ್ದು, ಅದರ ನಿರ್ವಹಣೆಯನ್ನು ಗುತ್ತಿಗೆದಾರರೇ ಮಾಡಿಕೊಳ್ಳಬೇಕು ಹಾಗೂ ಎರಡೂವರೆ ವರ್ಷಗಳಲ್ಲಿ ಆ ಕೆಲಸವನ್ನು ಮುಗಿಸುತ್ತಾರೆ ಎಂಬ ಭರವಸೆ ಇಟ್ಟುಕೊಂಡಿದ್ದೇನೆ ಈಗಾಗಲೇ ಕೆಲಸ ಪ್ರಾರಂಭವಾಗಿದ್ದು, ಎರಡೂವರೆ ವರ್ಷಗಳಲ್ಲಿ ಕೆಲಸ ಮುಗಿಸಲು ಅವಕಾಶ ಇದೆ.

**ಕೊಡಗು ಜಿಲ್ಲೆಯ ರಸ್ತೆಗಳ ದುರಸ್ತಿ ಬಗ್ಗೆ**

**15; ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಕೊಡಗು ಜಿಲ್ಲೆಯಲ್ಲಿರುವ 8 ರಾಜ್ಯ ಹೆದ್ದಾರಿಗಳ ಪೈಕಿ ಎಷ್ಟು ರಸ್ತೆಗಳು ಹಾಳಾಗಿವೆ? (ವಿವರ ನೀಡುವುದು)

**ಆ)** ಹಾಳಾಗಿರುವ ಈ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಸರಕಾರವು ತೆಗೆದುಕೊಂಡ ಕ್ರಮಗಳೇನು; ರಸ್ತೆವಾರು ಪ್ರತ್ಯೇಕ ವಿವರ ನೀಡುವುದು;

**ಇ)** ಕೊಡಗು ಜಿಲ್ಲೆಯಲ್ಲಿರುವ 71 ಜಿಲ್ಲಾ ಮುಖ್ಯ ರಸ್ತೆಗಳ ಪೈಕಿ ಹಾಳಾಗಿರುವ ರಸ್ತೆಗಳು ಯಾವುವು;

**ಈ)** ಹಾಳಾಗಿರುವ ಈ ಜಿಲ್ಲಾ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು? (ರಸ್ತೆವಾರು ಪ್ರತ್ಯೇಕ ವಿವರ ನೀಡುವದು);

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)**

**ಅ)** ಕೊಡಗು ಜಿಲ್ಲೆಯಲ್ಲಿ ಒಟ್ಟು 8 ರಾಜ್ಯ ಹೆದ್ದಾರಿಗಳ ಉದ್ದ 538.00 ಕಿಮೀ. ಇದ್ದು, ಇದರ ಪೈಕಿ 7 ರಾಜ್ಯ ಹೆದ್ದಾರಿಗಳ ಆಯ್ದುಭಾಗಗಳಲ್ಲಿ ರಸ್ತೆ ಮೇಲ್ಮೈ ಹಾಳಾಗಿದ್ದು, ಹಾಳಾದ ಆಯ್ದುಭಾಗಗಳ

ಅಭಿವೃದ್ಧಿಪಡಿಸಲು ಹಾಗೂ ಗುಂಡಿ ಮುಚ್ಚಲು ಕ್ರಮ ಕೈಗೊಳ್ಳಲಾಗಿದೆ. ಉಳಿದ ಒಂದು ರಸ್ತೆಯಾದ ಮೈಸೂರು–ಬಂಟ್ವಾಳ ರಸ್ತೆ (ರಾಜ್ಯ ಹೆದ್ದಾರಿ–88) ಅಭಿವೃದ್ಧಿ ಕಾಮಗಾರಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆ.ಆರ್.ಡಿ.ಸಿ.ಎಲ್) ವತಿಯಿಂದ ಕೈಗೆತ್ತಿಕೊಳ್ಳಲಾಗಿದ್ದು, ಮರು ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿ ರುತ್ತದೆ. (ವಿವರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ).

ಆ) ಕೊಡಗು ಜಿಲ್ಲೆಯ ಲೋಕೋಪಯೋಗಿ ಇಲಾಖೆ, ವ್ಯಾಪ್ತಿಯಲ್ಲಿನ 8 ರಾಜ್ಯ ಹೆದ್ದಾರಿಗಳಲ್ಲಿ 7 ರಾಜ್ಯ ಹೆದ್ದಾರಿಗಳ ಒಟ್ಟು 151.91 ಕಿಮೀ ಉದ್ದದ ರಸ್ತೆಯನ್ನು ರೂ.2963.14 ಲಕ್ಷಗಳ ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಉಳಿದಂತೆ 339.91 ಕಿಮೀ ಉದ್ದದ ರಸ್ತೆಯನ್ನು ರೂ.261.10 ಲಕ್ಷಗಳ ಮೊತ್ತದಲ್ಲಿ ಗುಂಡಿ ಮುಚ್ಚಿ ಸುಗಮ ವಾಹನ ಸಂಚಾರಕ್ಕೆ ಯೋಗ್ಯವನ್ನಾಗಿಡಲಾಗಿದೆ. (ವಿವರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ).

ಇ) ಕೊಡಗು ಜಿಲ್ಲೆಯಲ್ಲಿ ಒಟ್ಟು 71 ಜಿಲ್ಲಾ ಮುಖ್ಯ ರಸ್ತೆಗಳ ಪೈಕಿ 67 ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಅಭಿವೃದ್ಧಿ ಹಾಗೂ ಗುಂಡಿ ಮುಚ್ಚಿ ಸುಗಮ ವಾಹನ ಸಂಚಾರಕ್ಕೆ ಯೋಗ್ಯವನ್ನಾಗಿಡಲಾಗಿದೆ. ಉಳಿದಂತೆ 4 ರಸ್ತೆಗಳು ಈಗಾಗಲೇ ಸುಸ್ಥಿತಿಯಲ್ಲಿರುತ್ತದೆ. (ವಿವರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ).

ಈ) ಕೊಡಗು ಜಿಲ್ಲೆಯ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಒಟ್ಟು 71 ಜಿಲ್ಲಾ ಮುಖ್ಯ ರಸ್ತೆಗಳ ಪೈಕಿ 67 ಜಿಲ್ಲಾ ಮುಖ್ಯ ರಸ್ತೆಗಳ ಒಟ್ಟು 254.10 ಕಿಮೀ ಉದ್ದದ ರಸ್ತೆಯನ್ನು ರೂ.3635.00 ಲಕ್ಷಗಳ ಮೊತ್ತದಲ್ಲಿ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಉಳಿದಂತೆ 576.83 ಕಿಮೀ ಉದ್ದದ ರಸ್ತೆಯನ್ನು ರೂ.143.28 ಲಕ್ಷಗಳ ಮೊತ್ತದಲ್ಲಿ ಗುಂಡಿ ಮುಚ್ಚಿ ಸುಗಮ ವಾಹನ ಸಂಚಾರಕ್ಕೆ ಯೋಗ್ಯ ವನ್ನಾಗಿಡಲಾಗಿದೆ. (ವಿವರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ).

**ಶ್ರೀ ಟಿ. ಜಾನ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಇದರಲ್ಲಿ ಎಲ್ಲಾ ಕೆಲಸಗಳು ಕೈಗೊಳ್ಳಲಾಗಿದೆ ಮತ್ತು ಉಳಿದಂತೆ 339.91 ಕಿ.ಮೀ. ಉದ್ದದ ರಸ್ತೆಯನ್ನು ರೂ261.10 ಲಕ್ಷಗಳ ಮೊತ್ತದಲ್ಲಿ ಗುಂಡಿ ಮುಚ್ಚಿ ಸುಗಮವಾದ ವಾಹನ ಸಂಚಾರಕ್ಕೆ ಯೋಗ್ಯವನ್ನಾಗಿ ಇಡಲಾಗಿದೆ. ಆದರೆ ಕೊಡಗು ಜಿಲ್ಲೆಯಲ್ಲಿ ಸುಗಮವಾದ ಯಾವ ರಸ್ತೆಗಳು ಇಲ್ಲ. ಮೈಸೂರು-ಬಂಟ್ವಾಳ-ಮಡಿಕೇರಿ ರಸ್ತೆ ಬಿಟ್ಟರೆ ಯಾವ ರಸ್ತೆಗಳು ಸುಗಮವಾಗಿ ಇಲ್ಲ. ಬೇರೆ ಎಲ್ಲಾ ರಸ್ತೆಗಳಲ್ಲಿ ಗುಂಡಿಗಳು ಇದ್ದು ವಾಹನ ಓಡಾಡಲು ಯೋಗ್ಯವಾಗಿಲ್ಲ. ಮಾನ್ಯ ಸಚಿವರು ಎಲ್ಲಾ ವಿವರಗಳನ್ನು ಅನುಬಂಧ-1 ಮತ್ತು 2 ರಲ್ಲಿ ನೀಡಿದೆ ಎಂದು ತಿಳಿಸಿದ್ದು, ಅನುಬಂಧ ನನಗೆ ಬಂದಿಲ್ಲ.

**ಶ್ರೀ ಸಿ.ಎಂ. ಉದಾಸಿ:-** ಅನುಬಂಧ ಒದಗಿಸಿದ್ದೇನೆ.

**ಸಭಾಪತಿಯವರು:-** ನಮಗೆ ಕೊಟ್ಟಿರುವ ಉತ್ತರದಲ್ಲಿ ಇಲ್ಲ, ಮಿಸ್ ಆಗಿರಬಹುದು ನೋಡಿ.

**ಶ್ರೀ ಸಿ.ಎಂ. ಉದಾಸಿ:-** ಕೊಟ್ಟಿದ್ದೇವೆ.

**ಸಭಾಪತಿಯವರು:-** ಪಿನ್ ಮಾಡುವಾಗ ವ್ಯತ್ಯಾಸ ಆಗಿರಬಹುದು ನೋಡಿ.

**ಶ್ರೀ ಸಿ.ಎಂ. ಉದಾಸಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಅನುಬಂಧದ ಪ್ರತಿಯನ್ನು ಕೊಡುತ್ತೇವೆ. ಈಗಾಗಲೇ ನಾವು ಪ್ರತಿಯನ್ನು ಒದಗಿಸಿದ್ದೇವೆ ಎನ್ನುವುದು ನಮ್ಮ ದಾಖಲೆಯಲ್ಲಿದೆ. ಅದನ್ನು ಪರಿಶೀಲನೆ ಮಾಡಲಿಕ್ಕೆ ನಮ್ಮ ಇಲಾಖಾ ಅಧಿಕಾರಿಗಳಿಗೆ ಸೂಚಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಜಾನ್‌ರವರೆ, ನಿಮಗೆ ಒದಗಿಸಿರುವ ಉತ್ತರದ ಕೊನೆಯಲ್ಲಿ ಅನುಬಂಧ ಇರಬಹುದು ನೋಡಿ.

**ಶ್ರೀ ಟಿ. ಜಾನ್:-** ಮಾನ್ಯ ಸಭಾಪತಿಯವರೇ, ದಿನಾಂಕ: 18.1.2011ರಲ್ಲಿ ನಾನು ಈ ಬಗ್ಗೆ ಪ್ರಶ್ನೆಯನ್ನು ಕೇಳಿದಾಗಲೂ ಸಹ ಸರ್ಕಾರ

ಇದೇ ಉತ್ತರವನ್ನು ಕೊಟ್ಟಿದೆ. ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿವೆ. ಶೀಘ್ರದಲ್ಲಿಯೇ ಪೂರ್ಣಗೊಳಿಸಲಾಗುವುದು ಎಂದು ಹೇಳಿದ್ದಾರೆ. ಅದಾದ ನಂತರ ದಿನಾಂಕ:31.1.2012ರಲ್ಲಿ ಇನ್ನೊಂದು ಪ್ರಶ್ನೆಯನ್ನು ಕೇಳಿದಾಗ ಅದರಲ್ಲಿಯೂ ಕೂಡ ಗುಂಡಿ ಮುಚ್ಚಿ ರಸ್ತೆಗಳನ್ನು ಸಂಚಾರಕ್ಕೆ ಯೋಗ್ಯವಾಗಿಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ. ನಾನು ಎರಡು ವರ್ಷಗಳಿಂದ ಕೇಳುತ್ತಿದ್ದೇನೆ. ಕ್ರಮ ಕೈಗೊಳ್ಳಲಾಗಿದೆಯೇ ಹೊರತು ಯಾವ ಕೆಲಸವೂ ಕೂಡ ಪೂರ್ಣಗೊಂಡು ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗಿದೆ ಎಂದು ಸನ್ಮಾನ್ಯ ಸಚಿವರಿಂದ ನನಗೆ ಉತ್ತರ ಬರಲಿಲ್ಲ. ಕೊಡಗು ಜಲ್ಲೆ ಬಹಳ ಚಿಕ್ಕ ಜಿಲ್ಲೆ. ಈ ಜಿಲ್ಲೆಯಲ್ಲಿರತಕ್ಕಂಥ ರಸ್ತೆಗಳನ್ನು ದಯಮಾಡಿ ಸರ್ಕಾರ ಸರಿಪಡಿಸಬೇಕು. ಇನ್ನೊಂದೆರಡು ತಿಂಗಳಿನಲ್ಲಿ ಮಳೆಗಾಲ ಪ್ರಾರಭವಾಗುತ್ತದೆ. ಆನಂತರ ಮಳೆಗಾಲದಲ್ಲಿ ಕೆಲಸ ಮಾಡುವುದಕ್ಕಾಗುದಿಲ್ಲ. ಅದು ಒಂದು ಕಾರಣವನ್ನು ಹೇಳಲಿಕ್ಕೆ ಸರ್ಕಾರಕ್ಕೆ ಸಿಗುತ್ತದೆ. ಆದುದರಿಂದ ಈ ಒಂದು ಕೆಲಸಗಳನ್ನು ಸರ್ಕಾರ ಯಾವಾಗ ಪೂರ್ಣಗೊಳಿಸುತ್ತದೆ? ಇನ್ನೊಂದು ವಿಚಾರವೆಂದರೆ, ನಮ್ಮ ಮಡಿಕೇರಿಯ ಮೂರ್ನಾಡು ರಸ್ತೆಯಲ್ಲಿ ಒಂದು ಜಾಗದಲ್ಲಿ ಕಳೆದ ಮಳೆಗಾಲದಲ್ಲಿ ಒಂದು ರಸ್ತೆ ಬಿದ್ದು ಹೋಗಿತ್ತು. ಈಗ ಈ ಮಳೆಗಾಲದಲ್ಲಿ ಆ ರಸ್ತೆ ಪುನಃ ಬಿದ್ದು ಆ ರಸ್ತೆ broke ಆಗಬಹುದು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಸರ್ಕಾರ ಆ ಕೆಲಸವನ್ನು ಸಹ ಬೇಗ ಮುಗಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಎಂ. ಉದಾಸಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಟಿ. ಜಾನ್‌ರವರಿಗೆ ಅನುಬಂಧದ ಪ್ರತಿಯನ್ನು ಲಗತ್ತಿಸಿ ಕೊಡಲಾಗಿದೆ. ಅದನ್ನು ಅವರ ಗಮನಕ್ಕೆ ತರಲು ನಾನು ಬಯಸುತ್ತಿದ್ದೇನೆ. ಅಲ್ಲಿ ಕೊಡಗು ಪ್ಯಾಕೇಜ್‌ನ 7 ರಸ್ತೆಗಳಿಗೆ 30 ಕೋಟಿ ರೂಪಾಯಿಗಳ ಟೆಂಡರ್‌ನ್ನು ಕರೆದು ಏಜೆನ್ಸಿಯನ್ನು ಫಿಕ್ಸ್ ಮಾಡಲಾಗಿದೆ. ಇನ್ನು 39 ಕೋಟಿ ರೂಪಾಯಿಗಳಿಗೆ Appendix-A ನಲ್ಲಿ ಬಂದಿರುವಂಥ ರಸ್ತೆಗಳಿಗೂ ಸಹಿತ ಈಗ ಟೆಂಡರ್ ಕರೆಯಲಾಗಿದ್ದು ಆ ಕೆಲಸವೂ ಸಹ ಪ್ರಾರಂಭವಾಗುತ್ತದೆ.

ಅದರ ಜೊತೆಗೆ ಈ ವರ್ಷದ ಬಜೆಟ್‌ನಲ್ಲಿ 75 ಕೋಟಿ ರೂಪಾಯಿಗಳ ಪ್ಯಾಕೇಜ್ ಸಹಿತ.....

**ಸಭಾಪತಿಯವರು:–** ಮಾನ್ಯ ಸಚಿವರೆ, ತಾವು ಅದನ್ನು ಹೇಳಲಿಲ್ಲವೆಂದು ಅವರು ಅದನ್ನು ಕೇಳುತ್ತಿದ್ದಾರೆ. ನಾನು ಸಹ ಅದನ್ನು ಕೇಳಬೇಕೆಂದು ಇದ್ದೆ. ಕೊಡಗು ರಸ್ತೆ ಅಭಿವೃದ್ಧಿಗಾಗಿ 75 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಾ. ಬಹುಶಃ ಮಾನ್ಯ ಜಾನ್‌ರವರಿಗೆ ಇರುವ ಆಸೆ ಎಂದರೆ ಆ 75 ಕೋಟಿ ರೂಪಾಯಿಗಳನ್ನು ಪೂರ್ತಿಯಾಗಿ ಬೇಗ ಬಿಡುಗಡೆ ಮಾಡಿ ರಸ್ತೆಗಳನ್ನು ಸರಿಪಡಿಸಬೇಕೆಂಬುದು. ಅದರ ಬಗ್ಗೆ ತಾವು ಹೇಳಿಬಿಟ್ಟರೆ ಅವರಿಗೆ ಸ್ವಲ್ಪ ಸಮಾಧಾನವಾಗುತ್ತದೆ.

**ಶ್ರೀ ಟಿ. ಜಾನ್:–** ಮಾನ್ಯ ಸಭಾಪತಿಯವರೇ, ಎರಡು ವರ್ಷಗಳಲ್ಲಿ ಮೂರು ಸಾರಿ ಪ್ರಶ್ನೆಯನ್ನು ಕೇಳಿದಾಗಲೂ "ಕೆಲಸ ಪ್ರಾರಂಭವಾಗುತ್ತದೆ" ಎಂದು ಹೇಳಿದ್ದಾರೆ.

**ಶ್ರೀ ಸಿ.ಎಂ. ಉದಾಸಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನನ್ನ ಉತ್ತರ ಮುಗಿದ ನಂತರ ಹೇಳಲಿ. ಈಗ 30 ಕೋಟಿ ರೂಪಾಯಿಗಳ ಪ್ಯಾಕೇಜ್‌ನಲ್ಲಿ 7 ರಸ್ತೆಗಳಿಗೆ ಟೆಂಡರ್‌ನ್ನು ಕರೆದು ಏಜೆನ್ಸಿಯನ್ನು ಫಿಕ್ಸ್ ಮಾಡುವ ಕೆಲಸವಾಗಿದೆ. ಇನ್ನು 39 ಕೋಟಿ ರೂಪಾಯಿ.....

**ಶ್ರೀ ಸಂದೇಶ್ ನಾಗರಾಜ್:–** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸವೂ ಸಹ ಒಂದು ಕಾರ್ ಬಿದ್ದಿದೆ. ಕೆಲಸ ಆಗಿಲ್ಲ. ಇನ್ನು ನಾನು ಅವರಿಗೆ ಪ್ರಶ್ನೆಯನ್ನು ಕೇಳುವುದಿಲ್ಲ.

**ಸಭಾಪತಿಯವರು:–** ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳಿದ್ದಾರೆ.

**ಶ್ರೀ ಸಂದೇಶ್ ನಾಗರಾಜ್:–** ಮಾನ್ಯ ಸಭಾಪತಿಯವರೇ, ಅಲ್ಲಿ ಒಂದು ಕೆಲಸವೂ ಆಗುವುದಿಲ್ಲ. ಕೇವಲ ಅವರು ಹೇಳುವುದು, ನಾವು ಕೇಳುವುದು ಅಷ್ಟೇ ಆಗುತ್ತಿದೆ.

**ಶ್ರೀ ಸಿ.ಎಂ. ಉದಾಸಿ:–** ಮಾನ್ಯ ಸಭಾಪತಿಯವರೇ, ಈಗ 30 ಕೋಟಿ ರೂಪಾಯಿಗಳ ಪ್ಯಾಕೇಜ್‌ಗೆ ಟೆಂಡರ್ ಕರೆದು ಏಜೆನ್ಸಿಯನ್ನು ನಿಗದಿಗೊಳಿಸಲಾಗಿದೆ. ಇನ್ನು 39 ಕೋಟಿ ರೂಪಾಯಿಗಳ ಕೆಲಸಕ್ಕೆ ಟೆಂಡರ್ ಕರೆಯುತ್ತಿದ್ದಾರೆ. ಟೆಂಡರ್ ಕರೆದ ನಂತರ ಅದಕ್ಕೆ ಏಜೆನ್ಸಿಯನ್ನು ನಿಗದಿಗೊಳಿಸಲಾಗುತ್ತದೆ. ಅದರ ಜೊತೆಗೆ ಈ ವರ್ಷ ಪುನಃ 75 ಕೋಟಿ ರೂಪಾಯಿಗಳು ಪ್ಯಾಕೇಜ್‌ನಲ್ಲಿ ಬಂದಿದೆ. ಎಲ್ಲೆಲ್ಲಿ ಗುಂಡಿಗಳನ್ನು ಮುಚ್ಚಿ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಕೆಲಸ ಮಾಡಲಾಗಿದೆ ಎನ್ನುವುದನ್ನು ಅವರ ಗಮನಕ್ಕೆ ತರಲು ನಾನು ಬಯಸುತ್ತಿದ್ದೇನೆ. ಕೊಡಗಿನಲ್ಲಿ ಅವರು ಹೇಳುತ್ತಿರುವ ರಸ್ತೆಯಲ್ಲಿ ಆಗಿರುವಂಥ ಒಂದು ಘಟನೆ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದಾರೆ. ಅದನ್ನು ಇಲಾಖಾ ಅಧಿಕಾರಿಗಳ ಗಮನಕ್ಕೆ ತಂದು ಸರಿಪಡಿಸುವಂಥ ಕೆಲಸವನ್ನು ಅತಿ ಶೀಘ್ರದಲ್ಲಿ ಮಾಡುತ್ತೇವೆ.

**ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳಿಲ್ಲದಿರುವ ಬಗ್ಗೆ**

**159; ಶ್ರೀ ಮತ್ತಿಕಟ್ಟೆ ವೀರಣ್ಣ**

**ಅ)** ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯಗಳಿಲ್ಲದೆ ಪರಿಸರ ಮಾಲಿನ್ಯ ಉಂಟಾಗುತ್ತಿದ್ದು ಸರ್ಕಾರದ ಜಲ ನಿರ್ಮಲ ಯೋಜನೆಯ ಅನುಷ್ಠಾನಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

**ಆ)** ಹಾಗಿದ್ದಲ್ಲಿ, ಪ್ರತಿ ಮನೆಗೂ ಶೌಚಾಲಯ ಒದಗಿಸಿ. ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದೇ ;

**ಇ)** ಹತ್ತಿರವಿರುವ ಐದಾರು ಹಳ್ಳಿಗಳಿಗೆ ಪರಿಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಖಾಸಗಿಯವರ ಸಹಭಾಗಿತ್ವದಲ್ಲಿ ಯೋಜನೆಯನ್ನು ರೂಪಿಸಲಾಗುವುದೇ ?

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

**ಅ)** ಗ್ರಾಮೀಣ ಪ್ರದೇಶಗಳ್ಲಲಿ ಶೌಚಾಲಯಗಳಿಲ್ಲದೆ ಪರಿಸರ ಮಾಲಿನ್ಯ ಉಂಟಾಗಿ ಜಲ ನಿರ್ಮಲ ಯೋಜನೆಯ ಅನುಷ್ಠಾನಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

**ಆ)** ಅಕ್ಟೋಬರ್ 2, 2005 ರಿಂದ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ರಾಜ್ಯದಲ್ಲಿ ಜಾರಿಗೊಳಿಸಿದ್ದು, ಈ ಯೋಜನೆಯಡಿ ಬಡತನರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಶೌಚಾಲಯ ನಿರ್ಮಿಸಲು ಪ್ರೋತ್ಸಾಹಧನ ನೀಡಿ, ಪ್ರತಿ ಕುಟುಂಬ ಶೌಚಾಲಯ ಹೊಂದಲು ಕ್ರಮವಹಿಸಲಾಗುತ್ತಿದೆ. ಮುಂದುವರೆದು ಬಡತನ ರೇಖೆಗಿಂತ ಮೇಲ್ಪಟ್ಟದ ಕುಟುಂಬಗಳಿಗೂ ಸಹ ಶೌಚಾಲಯ ಹೊಂದಲು ಸರ್ಕಾರದಿಂದ ವಿವಿಧ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಶುದ್ಧ ಕುಡಿಯುವ ನೀರನ್ನು ಒದಗಿಸಲು ಜಲ ನಿರ್ಮಲ ಯೋಜನೆ, ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

**ಇ)** ಶುದ್ಧ ಕುಡಿಯುವ ನೀರಿನ ಯೋಜನೆಗಳನ್ನು ಖಾಸಗಿಯವರ ಸಹಭಾಗಿತ್ವದಲ್ಲಿ ಜಲ ನಿರ್ಮಲ ಯೋಜನೆಯ ಅನುಷ್ಠಾನ ಗೊಳ್ಳುತ್ತಿರುವ ಜಿಲ್ಲೆಗಳ ವ್ಯಾಪ್ತಿಯಲ್ಲಿ ರೂಪಿಸಿರುವುದಿಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರದಲ್ಲಿ "ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳಿಲ್ಲದೆ ಪರಿಸರ ಮಾಲಿನ್ಯ ಉಂಟಾಗಿ ಜಲ ನಿರ್ಮಲ ಯೋಜನೆಯ ಅನುಷ್ಠಾನಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ." ಎಂದು ಹೇಳಿದ್ದಾರೆ. ನಾನು ತಮ್ಮ ಮೂಲಕ ಇಷ್ಟನ್ನು ಮಾತ್ರ ಹೇಳುತ್ತೇನೆ. ಬಹಳಷ್ಟು ಹಳ್ಳಿಗಳಲ್ಲಿ ಇವತ್ತಿನ ದಿವಸ ಶೌಚಾಲಯಗಳಿಲ್ಲದೆ ಜನರು ಬಹಳ

ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಯಾರು ಬಡತನದ ರೇಖೆಗಿಂತ ಕೆಳಗಿದ್ದಾರೆ ಅವರ ಇಲಾಖೆಯ ಮೂಲಕ ಅವರು ಶೌಚಾಲಯವನ್ನು ಕಟ್ಟಿಕೊಳ್ಳಲು 9,000 ರೂಪಾಯಿಗಳನ್ನು ಸರ್ಕಾರ ಕೊಡುತ್ತಿದೆ. ಅದನ್ನು ಹೆಚ್ಚಿನ ಆದ್ಯತೆಯ ಮೇಲೆ ಮಾಡತಕ್ಕಂಥ ಅವಶ್ಯಕತೆ ಇದೆ ಎನ್ನುವುದನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಅದರ ಜೊತೆಗೆ ಇವತ್ತು ಹಳ್ಳಿಗಳಲ್ಲಿ ಬಹಳ ತೊಂದರೆ ಇದೆ. ಅಲ್ಲಿ ಸರ್ಕಾರ ಸಾಮೂಹಿಕ ಶೌಚಾಲಯಗಳನ್ನು ಮಾಡಬೇಕು ಮತ್ತು ಅವು ಸರಿಯಾಗಿ ನಡೆಯಬೇಕಾದರೆ ಅಲ್ಲಿಗೆ ನೀರಿನ ವ್ಯವಸ್ಥೆಯನ್ನು ಸಹ ಕಲ್ಪಿಸಬೇಕು. ಆ ದೃಷ್ಟಿಯಿಂದ ಸರ್ಕಾರ ಯಾವ ರೀತಿಯ ಕ್ರಮವನ್ನು ಕೈಗೊಳ್ಳುತ್ತದೆ ಎಂಬುದನ್ನು ತಿಳಿಸಬೇಕು.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಸನ್ಮಾನ್ಯ ವೀರಣ್ಣ ಮತ್ತಿಕಟ್ಟಿಯವರು sanitation ಬಗ್ಗೆ ಬಹಳ ಮಹತ್ವದ ಪ್ರಶ್ನೆಯನ್ನು ಕೇಳಿದ್ದಾರೆ. ನಮ್ಮ ಒಟ್ಟು ಗುರಿ ರಾಜ್ಯದಲ್ಲಿ 58 ಲಕ್ಷ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕೆಂದು ಇತ್ತು. ಕಳೆದ ಐದು ವರ್ಷಗಳಿಂದ ಈ ಒಂದು ಕಾರ್ಯಕ್ರಮ ನಡೆಯುತ್ತಿದೆ. 58 ಲಕ್ಷ ಗುರಿ ಇಟ್ಟುಕೊಂಡು ಇಲ್ಲಿಯವರೆಗೆ 41 ಲಕ್ಷ ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದೇವೆ. ಈ ವರ್ಷ ನಮ್ಮ ಗುರಿ 6 ಲಕ್ಷ ಇತ್ತು. ಈ ವರ್ಷ ಇಲ್ಲಿಯವರೆವಿಗೂ ನಾವು 402 ಲಕ್ಷ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದೇವೆ. ಆದರೆ ಜನರಲ್ಲಿ ಇನ್ನು ತಿಳುವಳಿಕೆ ಬರಬೇಕಾಗಿದೆ. ಉತ್ತರ ಕರ್ನಾಟಕದ ಭಾಗದಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮತ್ತು ಇನ್ನು ಕೆಲವು ಜಿಲ್ಲೆಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಳ್ಳುವ ಬಗ್ಗೆ ಜನರಿಗೆ ಇನ್ನು ತಿಳುವಳಿಕೆ ಬರಬೇಕಾಗಿದೆ. ಏಕೆಂದರೆ ನಮ್ಮ ಜನರಿಗೆ ಮೊಬೈಲ್ ತೆಗೆದುಕೊಳ್ಳಲಿಕ್ಕೆ ಹಣವಿದೆ. ಆದರೆ ಶೌಚಾಲಯಗಳನ್ನು ನಿರ್ಮಾಣ ಮಾಡಲಿಕ್ಕೆ ಹಣವಿಲ್ಲ ಎಂಬುದು ಜನರ mentality ಆಗಿದೆ. ಈಗ 9,000 ಅಲ್ಲ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸೇರಿ 3,700 ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತೇವೆ. ಕೆಲವು ಸಂಘ–ಸಂಸ್ಥೆಗಳನ್ನು ಸಹ ನಾವು ಅಪ್ರೋಚ್ ಮಾಡುತ್ತಿದ್ದೇವೆ. ಅವರು ಸಹ

2,000–3,000 ರೂಪಾಯಿಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ. TATA Marcopolo ನವರು ನಮ್ಮ ಧಾರವಾಡ ತಾಲ್ಲೂಕಿನಲ್ಲಿ ಪ್ರತಿಯೊಂದು ಶೌಚಾಲಯಗಳ ನಿರ್ಮಾಣಕ್ಕಾಗಿ 2,000 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಫಲಾನುಭವಿಗಳು ಸಹ ಹಣವನ್ನು ಭರಿಸಬೇಕಾಗುತ್ತದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಇನ್‌ಫೋಸಿಸ್ ಸಂಸ್ಥೆಯವರು ಒಂದುಂದು ಶೌಚಾಲಯಕ್ಕೆ 10,000 ರೂಪಾಯಿಗಳನ್ನು ಕೊಡಲಿಕ್ಕೆ ಮುಂದೆ ಬಂದಿದ್ದಾರೆ. ಈಗಾಗಲೇ ನಿರ್ಮಾಣ ಕಾರ್ಯವನ್ನು ಪ್ರಾರಂಭ ಮಾಡಿದ್ದಾರೆ. 10,000 ಶೌಚಾಲಯಗಳನ್ನು ನಿರ್ಮಾಣ ಮಾಡಲು ಅವರು ಮುಂದೆ ಬಂದಿದ್ದಾರೆ. ಈ ರೀತಿ ಬೇರೆ ಬೇರೆ ಸಂಘ–ಸಂಸ್ಥೆಗಳ ಸಹಾಯವನ್ನು ಸಹ ನಾವು ತೆಗೆದುಕೊಳ್ಳುತ್ತಿದ್ದೇವೆ. ನಮ್ಮ ಸರ್ಕಾರದಿಂದ ತಿಳುವಳಿಕೆ ನೀಡಿ ಎಷ್ಟು ಮಾಡಬೇಕೋ ಅದನ್ನು ಸಹ ನಾವು ಮಾಡುತ್ತಿದ್ದೇವೆ.

**ಶ್ರೀ ಯಂ.ಸಿ. ನಾಣಯ್ಯ:–** ಕರ್ನಾಟಕ ರಾಜ್ಯದಲ್ಲಿ ಒಟ್ಟು ಸುಮಾರು 1,00,70,000 ಕುಟುಂಬಗಳಿವೆ. ಇದರಲ್ಲಿ ಎಷ್ಟು households ಗೆ ಶೌಚಾಲಯವಿಲ್ಲ ಎನ್ನುವುದನ್ನು ಸರ್ವೇ ಮಾಡಿದ್ದೀರಾ?

**SRI. JAGADEESH SHETTAR**: More than 60%....

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಮಾನ್ಯ ಜೈರಾಮ್ ರಮೇಶ್‌ರವರು ಹೇಳಿದ ಮಾತುಗಳನ್ನು ಮಾನ್ಯ ಸಚಿವರು ಹೇಳಿದರು. More than 67%. ಆಗ ಅವರು ಹೇಳಿದರು, all these 50 to 60% of the households which have no toilets, they have got mobiles ಎಂದು ಅವರು ಹೇಳಿರತಕ್ಕಂಥ ಮಾತುಗಳು. In Karnataka, it is more than about 65% of the households have no toilets.

**ಶ್ರೀ ಜಗದೀಶ್ ಶೆಟ್ಟರ್:–** ಕರ್ನಾಟಕದಲ್ಲಿ ಶೇಕಡ 50ಕ್ಕಿಂತ ಹೆಚ್ಚು ಇದೆ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಾವು ಇಲ್ಲಯವರೆವಿಗೂ evaluation ಮಾಡಿಲ್ಲ. ನಾವು ಶೌಚಾಲಯಗಳ

ನಿರ್ಮಾಣಕ್ಕೆ ಬೇಕಾದಷ್ಟು ಹಣವನ್ನು ಬಹಳ ವರ್ಷಗಳಿಂದ ಕೊಡುತ್ತಾ ಬಂದಿದ್ದೇವೆ. ಎಷ್ಟು ವರ್ಷಗಳಿಂದ ನಾವು ಶೌಚಾಲಯವನ್ನು ನಿರ್ಮಾಣ ಮಾಡಬೇಕೆಂದು ಹಣವನ್ನು ಕೊಡುತ್ತಾ ಬಂದಿದ್ದೇವೆ? For the last ten years, ನಾವು ಕೊಟ್ಟಿರತಕ್ಕಂಥ ಹಣವನ್ನು ಲೆಕ್ಕ ಹಾಕಿ. ಹಾಗಾದರೆ ಶೌಚಾಲಯಗಳು ಏನಾಯಿತು? ಎಲ್ಲರೂ ಬಯಲು ಪ್ರದೇಶಗಳಿಗೆ ಹೋಗತಕ್ಕಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ದಯವಿಟ್ಟು evaluation ಮಾಡಿ, survey ಮಾಡಿ update information ಕೊಡಿ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ನಾವು ಈಗಾಗಲೇ ಕಾರ್ಯಗತಿ ಮಾಡಿದ್ದೇವೆ. ಕಳೆದ ಹತ್ತಾರು ವರ್ಷಗಳಿಂದ ನಾವು ಶೌಚಾಲಯಗಳನ್ನು ನಿರ್ಮಾಣ ಮಾಡುತ್ತಾ ಬಂದಿದ್ದೇವೆ. ಕೆಲವು ಕಡೆ ಶೌಚಾಲಯಗಳನ್ನು ನಿರ್ಮಾಣ ಮಾಡುತ್ತಾರೆ. ನಂತರ ಅದನ್ನು ಗೋಡಾನುಗಳಾಗಿ ಪರಿವರ್ತನೆ ಮಾಡುತ್ತಾರೆ. ಅಲ್ಲಿ ಸಾಮಾನುಗಳನ್ನು ಇಡುತ್ತಾರೆ. ಅವರು ಶೌಚಾಲಯವನ್ನೇ ಬಳಕೆ ಮಾಡುವುದಿಲ್ಲ. ಹೀಗಾಗಿ ಶೌಚಾಲಯಗಳನ್ನು ಗೋಡಾನುಗಳಾಗಿ ಮಾಡಿದ್ದಾರೆ. ಹೀಗಾಗಿ ನಮ್ಮ ಇಲಾಖೆಯಿಂದ ಈಗಾಗಲೇ ಸರ್ವೇ ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ. ನಾವು ಕೇವಲ ಸರ್ಕಾರದ ಅಂಕಿ-ಅಂಶಗಳ ಮೇಲೆ ಮಾತ್ರವಲ್ಲ, ನಮ್ಮ ಅಧಿಕಾರಿಗಳು ನೀಡುವ ಅಂಕಿ-ಅಂಶಗಳು ಮಾತ್ರ ಅಲ್ಲ. Field ನಲ್ಲಿ ಎಷ್ಟು ಶೌಚಾಲಯಗಳಿವೆ ಎನ್ನುವಂಥಾದ್ದನ್ನು ನಾವು ಸರ್ವೇ ಮಾಡುತ್ತಿದ್ದೇವೆ. ಅದರ ಮೇಲೆ ಮುಂದೆ ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬುದನ್ನು ನಾವು ವಿಚಾರ ಮಾಡುತ್ತಿದ್ದೇವೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-**ಮಾನ್ಯ ಸಭಾಪತಿಯವರೇ, ಅದರ ಜೊತೆಗೆ ಎರಡನೆಯ ವಿಚಾರ ಏನೆಂದರೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಎಲ್ಲಾ ಹಳ್ಳಿಗಳಿಗೂ ಹಂತ ಹಂತವಾಗಿ ಮಾಡಬೇಕೆಂದು ಇದೆ. ಅದರ ಬಗ್ಗೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ ಎನ್ನುವುದರ ಬಗ್ಗೆ ಹೇಳಬೇಕು. ಮಾನ್ಯ ಸಚಿವರು ಶೌಚಾಲಯಗಳನ್ನು ಗೋಡಾನುಗಳಾಗಿ ಪರಿವರ್ತಿಸಿದ್ದಾರೆ

ಎಂದು ಹೇಳಿದರು. ಅದು ಏಕೆ ಹಾಗಾಗುತ್ತದೆಂದರೆ, ಅವರಿಗೆ ನೀರಿನ ವ್ಯವಸ್ಥೆ ಇರುವುದಿಲ್ಲ. ಶೌಚಾಲಯದಲ್ಲಿ ಬಳಸಲು ನೀರು ಬೇಕಲ್ಲ. ನೀರಿನ ಬಳಕೆ ಸರಿಯಾಗಿ ಆಗಲಿಲ್ಲವೆಂದರೆ ಅಲ್ಲಿ ವಾಸನೆ ಬರುತ್ತದೆ, ತೊಂದರೆಯಾಗುತ್ತದೆ. ಆ ಒಂದು ದೃಷ್ಟಿಯಿಂದ ಶೌಚಾಲಯಗಳು ಗೋಡಾನುಗಳಾಗಿ ಪರಿವರ್ತನೆಯಾಗಿದೆ. ಹಿಂದಿನ ರಾಷ್ಟ್ರಾಧ್ಯಕ್ಷರಾದ ಶ್ರೀ ಅಬ್ದುಲ್ ಕಲಾಂರವರು 'ಪುರ' ಎನ್ನುವ ಒಂದು ಪರಿಕಲ್ಪನೆಯನ್ನು ಕೊಟ್ಟಿದ್ದಾರೆ. ನಗರಸಭೆಗಳಲ್ಲಿ ಇರತಕ್ಕಂಥ ಮೂಲಭೂತ ಅನುಕೂಲತೆಗಳು ಹಳ್ಳಿಯ ಜನರಿಗೆ ದೊರೆಯಬೇಕು ಅಂದಾಗ ಈ migration problem ಕಡಿಮೆಯಾಗುತ್ತದೆ. ಅದರ ಜೊತೆಗೆ ಅಲ್ಲಿ ಉದ್ಯೋಗಗಳನ್ನು ಸೃಷ್ಟಿ ಮಾಡಬೇಕು. ಈ ಎರಡು ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳಬೇಕು. ನಾವು ಇಲ್ಲಿ ರಾಜಕೀಯವನ್ನು ಮಾಡುತ್ತಿಲ್ಲ. ಕ್ರಿಯಾಶೀಲವಾಗಿ, constructive ಆಗಿ ರಾಜ್ಯದ ಹಿತದೃಷ್ಟಿಯಿಂದ ಕೆಲಸವನ್ನು ಮಾಡಬೇಕು. ಆ ದೃಷ್ಟಿಯಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿರಬೇಕೆನ್ನುವುದು ನಮ್ಮ ಒಂದು ಆಸೆಯಾಗಿದೆ. ಇದರ ಬಗ್ಗೆ ಏನು ಮಾಡುತ್ತಾರೆಂದು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೋ ಅದರಂತೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೇವೆ. ನಾವೇನು ರೂ. 3700.00 ಗಳನ್ನು ಸಬ್ಸಿಡಿ ಕೊಡುತ್ತಿದ್ದೇವೆಯೋ ಅದು ಕೇವಲ ಬಿಪಿಎಲ್ ಕುಟುಂಬದವರಿಗೆ ಮಾತ್ರ ಇದೆ. ಆದರೆ ಈಗ ಎಪಿಎಲ್ ಕುಟುಂಬದವರಿಗೂ ಸಬ್ಸಿಡಿ ನೀಡುವುದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವುದಕ್ಕೆ ಆದ್ಯತೆ ಕೊಡುತ್ತಿದ್ದೇವೆ. ಕಾಮನ್ ಶೌಚಾಲಯ ಏನಿದೆ ಅದನ್ನು ಮೇನ್‌ಟೇನ್ ಮಾಡುವುದಕ್ಕಾಗುವುದಿಲ್ಲ. ಹಾಗಾಗಿ ನಾವು ಪ್ರತ್ಯೇಕವಾಗಿಯೇ ಶೌಚಾಲಯ ನಿರ್ಮಿಸಿ ಕೊಡುವಂತಹ ಕೆಲಸ ಮಾಡುತ್ತಿದ್ದೇವೆ. ಈ ನಿಟ್ಟಿನಲ್ಲಿ ಕೆಲವು ಜಿಲ್ಲೆಗಳಲ್ಲಿ ಪೈಲಟ್ ಪ್ರಾಜೆಕ್ಟ್‌ಗಳನ್ನು ಹಾಕಿಕೊಂಡಿದ್ದೇವೆ.

## ಕರ್ನಾಟಕ ಆಗ್ರೋ ಇಂಡಸ್ಟ್ರೀಸ ಕಾರ್ಪೋರೇಷನ್‌ಗೆ ಆಗಿರುವ ನಷ್ಟವನ್ನು ವಸೂಲು ಮಾಡುವ ಬಗ್ಗೆ

### 07; ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

ಅ) ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ಗೆ ಆಗಿರುವ ಒಟ್ಟು ನಷ್ಟ ಎಷ್ಟು?

ಆ) ಈ ನಷ್ಟಕ್ಕೆ ಕಾರಣರಾದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಇಲ್ಲಿಯವರೆಗೆ ಒಟ್ಟು ವಸೂಲಾದ ಮೊತ್ತವೆಷ್ಟು?

ಈ) ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು?

### ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು)

**ಅ)** ದಿನಾಂಕ: 31–03–2004ರ ವಾರ್ಷಿಕ ವರದಿಯ ಪ್ರಕಾರ ನಿಗಮಕ್ಕಾಗಿರುವ ಒಟ್ಟು ನಷ್ಟ 148.97 ಕೋಟಿ ಆಗಿದ್ದು, ದಿನಾಂಕ:31–03–2011ರ ಅಂತ್ಯಕ್ಕೆ ಒಟ್ಟು ಸಂಚಿತ ನಷ್ಟ ರೂ.201.61 ಕೋಟಿ ಆಗಿರುತ್ತದೆ.

**ಆ)**

1) ಮೇಲ್ಕಂಡ ನಷ್ಟದ ಮೊತ್ತದಲ್ಲಿ ನಿಗಮದ ಅಧಿಕಾರಿ/ನೌಕರರ ಅವ್ಯವಹಾರದಿಂದ ರೂ. 141.30 ಲಕ್ಷಗಳ ನಷ್ಟವುಂಟಾಗಿದ್ದು ಸದರಿ ನಷ್ಟಕ್ಕೆ ಕಾರಣರಾದ ನಿಗಮದ ಅಧಿಕಾರಿ/ನೌಕರರ ವಿರುದ್ಧ ನಿಗಮದ ಸೇವಾ ನಿಯಮಗಳನ್ವಯ ವಿಚಾರಣೆಯನ್ನು ನಡೆಸಿ, ಆರೋಪ ಸಾಬಿತಾದ 9 ಅಧಿಕಾರಿ/ನೌಕರರ ವೇತನ ಮುಂಬಡ್ತಿಗಳನ್ನು ತಡೆ ಹಿಡಿಯಲಾಗಿದೆ ಮತ್ತು ರೂ.14.79 ಲಕ್ಷಗಳನ್ನು ಅವರಿಗೆ ಪಾವತಿಸಬೇಕಾದ ಸವಲತ್ತುಗಳಿಂದ ವಸೂಲು ಮಾಡಲಾಗಿದೆ.

2) 8 ಅಧಿಕಾರಿ/ನೌಕರರನ್ನು ನಿಗಮದ ಸೇವೆಯಿಂದ ವಜಾಗೊಳಿಸಲಾಗಿದೆ. ಅವರಿಂದ ನಿಗಮಕ್ಕಾಗಿರುವ ನಷ್ಟದ ಮೊತ್ತ ರೂ.80.45 ಲಕ್ಷಗಳನ್ನು ಅವರಿಂದ ವಸೂಲು ಮಾಡಲು ದಾವೆಗಳನ್ನು ಹೂಡಲಾಗಿದೆ.

3) ಇತರೆ ವಿಚಾರಣೆ ಬಾಕಿ ಇರುವ ಪ್ರಕರಣಗಳಲ್ಲಿ ವಿಚಾರಣೆಗಳು ಪ್ರಗತಿಯಲ್ಲಿದ್ದು ವಿಚಾರಣೆಯ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಒಟ್ಟು ಮೊತ್ತವು ರೂ.14.79 ಲಕ್ಷಗಳು.

**ಈ)** ಸಂಬಂಧಪಟ್ಟ ಅಧಿಕಾರಿ/ನೌಕರರಿಗೆ ಸಲ್ಲಬೇಕಾಗಿದ್ದ ನಿವೃತ್ತಿ ಸೌಲಭ್ಯಗಳಿಂದ ನಷ್ಟದ ಹಣ ರೂ.14.79 ಲಕ್ಷಗಳನ್ನು ವಸೂಲು ಮಾಡುವುದರ ಜೊತೆಗೆ 8 ಅಧಿಕಾರಿ/ನೌಕರರನ್ನು ಸೇವೆಯಿಂದ ವಜಾ ಮಾಡಲಾಯಿತು ಮತ್ತು ರೂ.80.45 ಲಕ್ಷಗಳನ್ನು ಅವರಿಂದ ವಸೂಲು ಮಾಡಲು ದಾವೆಗಳನ್ನು ಹೂಡಲಾಗಿದೆ, ಹಾಗೂ 09 ಅಧಿಕಾರಿ/ನೌಕರರುಗಳ ವೇತನ, ಮುಂಬಡ್ತಿ ನಿಲುಗಡೆ/ವೇತನದಲ್ಲಿ ಕಡಿತ ಇತ್ಯಾದಿ ಶಿಸ್ತು ಕ್ರಮಗಳನ್ನು ಜರುಗಿಸಲಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೇ, ನನ್ನ ಪ್ರಶ್ನೆಗೆ ಲಿಖಿತದ ಮೂಲಕ ಕೊಟ್ಟಿರುವ ಉತ್ತರದ ಪ್ರತಿಯನ್ನು ದಯವಿಟ್ಟು ನೋಡಬೇಕು. ಅದರಲ್ಲಿ ಏನೂ ಕಾಣಿಸುತ್ತಿಲ್ಲ. ಜೆರಾಕ್ಸ್ ಮಾಡಿ ಪ್ರತಿಳನ್ನು ಕೊಟ್ಟಿದ್ದಾರೆ. ಇದರಲ್ಲಿ ನನಗೇನೂ ಗೊತ್ತಾಗುತ್ತಿಲ್ಲ.

**ಸಭಾಪತಿಯವರು:-** ಈ ಪ್ರತಿಯ ಮುಂಭಾಗದ ಪುಟವನ್ನು ಓದಬಹುದು. ಆದರೆ, ಹಿಂಭಾಗದಲ್ಲಿರುವ ಅಕ್ಷರಗಳನ್ನು ಓದಲಾಗುತ್ತಿಲ್ಲ. ಆಯಿತು, ನಿಮಗೆ ಬೇರೊಂದು ಕಾಪಿಯನ್ನು ಒದಗಿಸಿ ಕೊಡುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ:-** ದಯವಿಟ್ಟು ಈ ರೀತಿ ಆಗದ ಹಾಗೆ ನೋಡಿಕೊಳ್ಳಿ.

ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ಗೆ ಒಟ್ಟು ರೂ.351 ಕೋಟಿ ನಷ್ಟವಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ಯಾರು ಕಾರಣವೆಂದು ಕೇಳಿದರೆ, ಇದಕ್ಕೆ ಅಧಿಕಾರಿಗಳು ಕಾರಣರಾಗಿದ್ದು ಇವರಲ್ಲಿ ಕೆಲವರು ನಿವೃತ್ತರಾಗಿದ್ದಾರೆ ಮತ್ತು ಇನ್ನೂ ಕೆಲವು ಜನ ಸೇವೆಯಲ್ಲಿದ್ದಾರೆ ಎಂದು ತಿಳಿಸಿದ್ದಾರೆ. 14 ಲಕ್ಷ 79 ಸಾವಿರ ರೂಪಾಯಿಗಳನ್ನು ವಸೂಲು ಮಾಡಿದ್ದೇವೆ ಎಂದು ಹೇಳಿದ್ದಾರೆ. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ನಷ್ಟವಾಗಲು ಕಾರಣರ್ಯಾರು ಎಂದು ಸರಿಯಾಗಿ ಹೇಳಿಲ್ಲ. ಅಲ್ಲದೇ ನಷ್ಟವಾಗಿರುವ ರೂ.351 ಕೋಟಿಗಳಲ್ಲಿ ಕೇವಲ ಸುಮಾರು 14 ಲಕ್ಷ ರೂಪಾಯಿಗಳನ್ನು ವಸೂಲು ಮಾಡಲಾಗಿದೆ ಎಂದು ಹೇಳಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಷ್ಟಕ್ಕೆ ಕಾರಣರಾದವರ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಕುರಿತ ಸಂಪೂರ್ಣವಾದ ಮಾಹಿತಯನ್ನು ಸದನಕ್ಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಉಮೇಶ್ ವಿ. ಕತ್ತಿ:-** ಮಾನ್ಯ ಸಭಾಪತಿಗಳೇ, 1967ರಲ್ಲಿ ಈ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಪ್ರಾರಂಭವಾಯಿತು. ಕೇಂದ್ರ ಸರಕಾರದ ಶೇಕಡ 49 ಮತ್ತು ರಾಜ್ಯ ಸರ್ಕಾರದ ಶೇಕಡ 51ರ ಬಂಡವಾಳದಿಂದ ಪ್ರಾರಂಭವಾಯಿತು. 2001ರಲ್ಲಿ ಕೇಂದ್ರ ಸರ್ಕಾರದ ಶೇಕಡ 49 ಪ್ರಮಾಣವನ್ನು ಹಿಂದಿರುಗಿಸಿದ ಮೇಲೆ ಅಲ್ಲಿಂದ ಇಲ್ಲಿಯವರೆಗೆ ಈ ರೀತಿ ತೊಂದರೆಯಾಗಿ ನಷ್ಟವಾಗಿರುವಂಥದ್ದು ನಿಜ. ರಾಜ್ಯ ಸರ್ಕಾರ 2004ರ ವರೆಗೆ ಬಡ್ಡಿಯೂ ಸೇರಿದಂತೆ ರೂ.97,86,89,262.00 ಗಳನ್ನು ಕೊಟ್ಟತ್ತು. ಬೇರೆ ಸಾಲಗಳು ಮತ್ತು ಹೊಣೆಗಾರಿಕೆಗಳು ಸುಮಾರು 42 ಕೋಟಿ 44 ಲಕ್ಷ ರೂಪಾಯಿಗಳು, ಬೇರೆ ಟ್ರೇಡರ್ಸ್‌ಗಳಿಂದ ಮೆಟಿರಿಯಲ್ ಕೊಂಡುಕೊಂಡಿರುವಂಥದ್ದು ಇತ್ಯಾದಿ ಒಟ್ಟು 148.97 ಕೋಟಿ ರೂಪಾಯಿಗಳ ನಷ್ಟವಾಗಿ, ಬಡ್ಡಿಯೂ ಕೂಡಿ 201.61 ಕೋಟಿ ರೂಪಾಯಿಗಳು ನಷ್ಟವಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಏನು ಸುಮಾರು 1 ಕೋಟಿ 41 ಲಕ್ಷ ರೂಪಾಯಿಗಳ ನಷ್ಟವಾಗಿತ್ತೋ ಅದರಲ್ಲಿ ಸುಮಾರು 14 ಲಕ್ಷ ರೂಪಾಯಿಗಳನ್ನು ವಸೂಲು ಮಾಡಲಾಗಿದೆ. ಮತ್ತೆ, ಇನ್ನೂ 80.45

ಲಕ್ಷ ರೂಪಾಯಿಗಳನ್ನು ವಸೂಲಿ ಮಾಡಲು ದಾವೆಗಳನ್ನು ಹೂಡಲಾಗಿದ್ದು ಅದು ಕೋರ್ಟಿನಿಂದ ಇತ್ಯರ್ಥವಾಗಿ ಬರಬೇಕಾಗಿದೆ. ಹೆಚ್ಚು ಕಡಿಮೆ ಸುಮಾರು 3 ಲಕ್ಷ ರೂಪಾಯಿಗಳ ವಸೂಲಾತಿಗಾಗಿ ಕ್ರಮ ಕೈಗೊಂಡಿದ್ದೇವೆ. ಉಳಿದಂತಹ ಸುಮಾರು 41 ಲಕ್ಷ ರೂಪಾಯಿಗಳಷ್ಟು ಮೊತ್ತವನ್ನು ವಸೂಲು ಮಾಡಬೇಕಿದೆ. ಸುಮಾರು 141 ಲಕ್ಷ ರೂಪಾಯಿಗಳು ಏನು ಹಾನಿಯಾಗಿದೆಯೋ ಅದು 1969 ರಿಂದ ಇಲ್ಲಿಯವರೆಗೆ ಹಂತ ಹಂತವಾಗಿ ಆಗಿರುವಂಥದ್ದು. ಅದರ ಸಂಪೂರ್ಣ ಮಾಹಿತಿಯನ್ನು ತರಿಸಿ ಒದಗಿಸುವ ವ್ಯವಸ್ಥೆ ಮಾಡಿಸುತ್ತೇನೆ.

**ಶ್ರಿ ಬಸವರಾಜ ಹೊರಟ್ಟಿ:–** ಈ ಸಂಸ್ಥೆ ಎಷ್ಟು ಎಕರೆ ಜಾಗದಲ್ಲಿತ್ತು, ಯಾರ ಸ್ವಾಧೀನದಲ್ಲಿದೆ, ಅಲ್ಲಿದ್ದ ಕಚೇರಿಗಳು ಏನಾದವು ಎನ್ನುದರ ಬಗ್ಗೆ ಸದನಕ್ಕೆ ಮಾಹಿತಿ ಕೊಡಿ.

**ಶ್ರೀ ಉಮೇಶ್ ವಿ. ಕತ್ತಿ:–** ಮಾನ್ಯ ಸಭಾಪತಿಗಳೇ, ಆ ಸಂಸ್ಥೆ ಬೆಂಗಳೂರಿನ ಹೆಬ್ಬಾಳದಲ್ಲಿ ಒಟ್ಟು 14 ಎಕರೆ 2 ಗುಂಟೆ ಜಾಗ ಹೊಂದಿತ್ತು. ಈಗಾಗಲೇ ಸರ್ಕಾರ ಅದನ್ನು ತನ್ನ ಹತೋಟಿಗೆ ತೆಗೆದುಕೊಂಡು ಅದರಲ್ಲಿ ಮಂತ್ರಿಗಳಿಗೆ ಮತ್ತು ನ್ಯಾಯಾಧೀಶರಿಗೆ ಮನೆ ಕಟ್ಟಿ ಕೊಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸರ್ಕಾರಕ್ಕೇನು ರೂ.90 ಕೋಟಿಗಳನ್ನು ಕೊಡಬೇಕಾಗಿತ್ತೋ ಅದಕ್ಕೆ ಸರಿದೂಗಿಸುವ ಕೆಲಸ ನಡೆಯುತ್ತಿದೆ. ಮಾನ್ಯ ಸಭಾಪತಿಗಳೇ, ಈ ಜಾಗ ಈಗ ಸರ್ಕಾರದ ಅಧೀನದಲ್ಲಿದೆ.

**ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು–ಕೊಡಿಗೇಹಳ್ಳಿ ರಸ್ತೆ ದುರಸ್ತಿ**

**138; ಡಾ: ದೊಡ್ಡರಂಗೇಗೌಡ (ನಾಮನಿರ್ದೇಶನ ಹೊಂದಿದವರು)**

ಅ) ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಬಿದನೂರುನಿಂದ ತುಮಕುರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಕೊಡಿಗೇಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಸುಮಾರು 20–25 ವರ್ಷಗಳಿಂದ ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಸುದೀರ್ಘ ಇಷ್ಟು ವರ್ಷಗಳಿಂದ ರಸ್ತೆ ರಿಪೇರಿ ಮಾಡದಿರಲು ಕಾರಣಗಳೇನು;

ಇ) ಈ ವರ್ಷವಾದರೂ ಸರ್ಕಾರ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು);

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)**

ಅ) ಚಿಕ್ಕಬಳ್ಳಾಪುರ ಜಿಲ್ಲೆ – ಗೌರಬಿದನೂರು ತಾಲ್ಲೂಕು ಕೇಂದ್ರದಿಂದ ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕಿನ ಕೊಡಿಗೇನಹಳ್ಳಿ ಹೋಬಳಿ ಕೇಂದ್ರಕ್ಕೆ ಬರುವ ರಸ್ತೆ ಭಾಗಶಃ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಚಿಕ್ಕಬಳ್ಳಾಪುರ ವಿಭಾಗದ ವ್ಯಾಪ್ತಿಯಲ್ಲಿನ ಗೌರಿಬಿದನೂರು ಉಪವಿಭಾಗಕ್ಕೆ ಬರುವ ಕೋಟಾಲದಿಣ್ಣೆಯಿಂದ ಹಂಪಸಂದ್ರ ರಸ್ತೆಯ 8.00 ಕಿಮೀ ಉದ್ದವಿದ್ದು, ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಡಾಂಬರು ಮೇಲ್ಮೈನಿಂದ ಕೂಡಿರುತ್ತದೆ ಇದನ್ನು 13ನೇ ಹಣಕಾಸು ಯೋಜನೆ ಅಡಿ ರೂ.1.00 ಲಕ್ಷ ಮೊತ್ತದಲ್ಲಿ ಗುಂಡಿ ಮುಚ್ಚುವ ಕಾಮಗಾರಿಯನ್ನು ನಿರ್ವಹಿಸಿದ್ದು, ಇದನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿರಸಲಾಗಿದೆ.

ತುಮಕೂರು ವಿಭಾಗದ ಮಧುಗಿರಿ ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ ಮಿಡಿಗೇಶಿ–ಚಂದನೂರು ಜಿಲ್ಲಾ ಮುಖ್ಯ ರಸ್ತೆಯಲ್ಲಿನ ಸರಪಳಿ 38.00 ರಿಂದ 47.70 ಕಿ.ಮೀ.ವರೆಗಿನ ರಸ್ತೆ ಅಂದರೆ ಮಧುಗಿರಿ ತಾಲ್ಲೂಕು ಕೊಡಿಗೇನಹಳ್ಳಿಯಿಂದ ಗೌರಿಬಿದನೂರು ತಾಲ್ಲೂಕು ಗಡಿವರೆಗಿನ ರಸ್ತೆಯಲ್ಲಿ 9.70 ಕಿಮೀ. ಉದ್ದಕ್ಕೆ ಡಾಂಬರಿನಿಂದ ಗುಂಡಿ ಮುಚ್ಚುವ ಕಾಮಗಾರಿಯನ್ನು ರೂ.5.00 ಲಕ್ಷ 13ನೇ ಹಣಕಾಸು ಯೋಜನೆಯ ಅನುದಾನದಲ್ಲಿ ನಿರ್ವಹಿಸಲಾಗಿದ್ದು, ರಸ್ತೆಯನ್ನು ಸುಗಮ ವಾಹನ ಸಂಚಾರಕ್ಕೆ ಯೋಗ್ಯವನ್ನಾಗಿರಿಸಿದೆ.

ಇ) ಚಿಕ್ಕಬಳ್ಳಾಪುರ ಜಿಲ್ಲೆಯ ವಿಭಾಗಕ್ಕೆ ಸಂಬಂಧಿಸಿದಂತೆ ಗೌರಿಬಿದನೂರು ತಾಲ್ಲೂಕು ಗಡಿವರೆಗೆ ರಸ್ತೆಯು ಸುಸ್ಥಿತಿಯಲ್ಲಿರುತ್ತದೆ.

ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಮಿಡಿಗೇಶ-ಚಂದನೂರು ರಸ್ತೆಯ ಸರಪಳಿ 0.00 ಯಿಂದ 47.70 ಕಿ.ಮೀ. ವರೆಗೆ ಇರುವ ಜಿಲ್ಲಾ ಮುಖ್ಯ ರಸ್ತೆಯಲ್ಲಿ ಬರುವ ಮಧುಗಿರಿ ತಾಲ್ಲುಕು ಕೊಡಿಗೇನಹಳ್ಳಿಯಿಂದ ಗೌರಿಬಿದನೂರು ತಾಲ್ಲೂಕು ಗಡಿವರೆಗಿನ ರಸ್ತೆಯಲ್ಲಿ 9.70 ಕಿ.ಮೀ. ಅಭಿವೃದ್ಧಿ ಕಾಮಗಾರಿಯನ್ನು ರೂ.5.00 ಲಕ್ಷ ಮೊತ್ತಕ್ಕೆ 13ನೇ ಹಣಕಾಸು ಯೋಜನೆಯ ಅನುದಾನದಲ್ಲಿ ನಿರ್ವಹಿಸಲಾಗಿದೆ.

**ಡಾ: ದೊಡ್ಡರಂಗೇಗೌಡ:-** ಮಾನ್ಯ ಸಭಾಪತಿಗಳೇ, ನಾನು ಕೇಳಿರುವಂತಹ ಪ್ರಶ್ನೆಗಳಿಗೆ ಮಾಮೂಲಿ ಉತ್ತರಗಳು ಬಂದಿವೆ. ನಮ್ಮ ಲೋಕೋಪಯೋಗಿ ಸಚಿವರ ಬಗ್ಗೆ ನನಗೆ ಅಪಾರವಾದಂತಹ ಗೌರವ ಇದೆ, ಅವರು ಹಿರಿಯರು, ಅನುಭವಿಗಳು. ನಮ್ಮ ಲೋಕೋಪಯೋಗಿ ಸಚಿವರು ಒಂದು ಸಲ ಗೌರಿಬಿದನೂರಿನ ಕಡೆಗೆ ಬಂದರೆ ಅಲ್ಲಿನ ರಸ್ತೆಗಳ ಪರಿಸ್ಥಿತಿ ಹೇಗಿದೆ ಎನ್ನುವುದು ಗೊತ್ತಾಗುತ್ತದೆ. ಮಾನ್ಯ ಸಚಿವರು ತಾವು ಕೊಟ್ಟಿರುವ ಉತ್ತರದಲ್ಲಿ ರಸ್ತೆಗಳ ವಸ್ತು ಸ್ಥಿತಿ ಏನಿದೆ ಎನ್ನುವುದನ್ನು ಒಪ್ಪಿಕೊಂಡುಬಿಟ್ಟಿದ್ದಾರೆ. ಮಾನ್ಯ ಸಭಾಪತಿಗಳೇ, ತಾವು ಎಲ್ಲಾ ಸದಸ್ಯರಿಗೆ ಐ-ಪಾಡ್ ಕೊಟ್ಟಿದ್ದೀರಿ. ಅದೇರೀತಿ ಒಂದೊಂದು ಸೆನ್ಸಿಟಿವ್ ಕ್ಯಾಮೆರಾಗಳನ್ನು ಕೊಟ್ಟರೆ, ನಾವು ಪ್ರಶ್ನೆ ಹಾಕುವುದರ ಜೊತೆಗೆ ಕೆಟ್ಟು ಹೋಗಿರುವ ರಸ್ತೆಗಳ ಚಿತ್ರೀಕರಣ ಮಾಡಿಕೊಂಡು ಬಂದು ತಮಗೆ ಒದಗಿಸುತ್ತೇವೆ.

**ಸಭಾಪತಿಯವರು:-** ಐ-ಪಾಡ್‌ನಲ್ಲೂ ಕ್ಯಾಮೆರಾ ಇದೆ. ಅದರಲ್ಲಿ ಚಿತ್ರೀಕರಣವನ್ನೂ ಮಾಡಬಹುದು.

**ಡಾ: ದೊಡ್ಡರಂಗೇಗೌಡ:-** ರಸ್ತೆಗಳ ಚಿತ್ರೀಕರಣ ಮಾಡಿ ವಸ್ತುಸ್ಥಿತಿ ಏನಿದೆ ಎಂಬುದನ್ನು ತೋರಿಸಬೇಕಾದ ಸ್ಥಿತಿ ಇದೆ. ಗೌರಿಬಿದನೂರು, ಕೋಟಾಲದಿಣ್ಣೆ, ಬ್ಯಾಲ್ಯಾ, ಹಂಪಸಂಸ್ರ, ಕಲಿದೇವರಪುರ, ಶ್ರಾವಂದನಹಳ್ಳಿ, ಕೊಡಿಗೇನಹಳ್ಳಿ ಈ ಕಡೆ ಒಂದು ಸಲ ಬಂದರೆ ಅಲ್ಲಿನ ರಸ್ತೆಗಳ ವಸ್ತುಸ್ಥಿತಿ ಗೊತ್ತಾಗುತ್ತದೆ. ಅಲ್ಲಿ ಪ್ರಯಾಣ ಮಾಡಿದರೆ ನಮ್ಮ ಬೆನ್ನು-ಮುಳೆಗಳು ಮುರಿದು ಹೋಗುತ್ತವೆ. ವಾಸ್ತವ ಸತ್ಯಕ್ಕೆ ದೂರವಾದ ಉತ್ತರಗಳನ್ನು ನಾನು

ಲಿಖಿತ ಉತ್ತರದಲ್ಲಿ ನೋಡುತ್ತಿದ್ದೇನೆ. ನಾನು ಇತ್ತೀಚೆಗೆ ಕೊಡಿಗೇನಹಳ್ಳಿಯ ಸುತ್ತಮುತ್ತ ಓಡಾಡಿಕೊಂಡು ಬಂದಿದ್ದೇನೆ. ಗುಂಡಿ ಮುಚ್ಚಿರುವುದು ವಾಸ್ತವ ಸತ್ಯಕ್ಕೆ ದೂರವಾದುದು ಅಥವಾ ಒಂದು ವೇಳೆ ಗುಂಡಿ ಮುಚ್ಚಿದ್ದರೂ ಮತ್ತೆ ಗುಂಡಿ ಬೀಳುವ ಸ್ಥಿತಿಗೆ ಹೋಗಿರಬಹುದೇನೋ ಎಂಬ ಬಗ್ಗೆ ಸದನದ ಗಮನಸೆಳೆಯಬಯಸುತ್ತೇನೆ. ಇದರ ಬಗ್ಗೆ ಇನ್ನೆಷ್ಟು ಹೇಳಿದರೂ ಕೂಡ ಪ್ರಯೋಜನ ಇಲ್ಲ ಎಂದೆನಿಸುತ್ತದೆ. ಮಧುಗಿರಿ ತಾಲ್ಲೂಕಿನ ಕೊಡಿಗೇನಹಳ್ಳಿ ಮುಂತಾದವುಗಳ ಕಡೆ ನಮ್ಮ ರೈತರು ಹೂವು-ಹಣ್ಣುಗಳನ್ನಾಗಲಿ, ತರಕಾರಿಗಳನ್ನಾಗಲಿ ತರಬೇಕಾದರೆ ಒಳ್ಳೆಯ ರಸ್ತೆಗಳು ಬೇಕು. ಆ ರಸ್ತೆಗಳೇ ಸರಿಯಿಲ್ಲದಿದ್ದರೆ ನಾವೆಷ್ಟು ಯೋಜನೆಗಳನ್ನು ಹಾಕಿದರೂ ಏನು ಪ್ರಯೋಜನವಾಗುವುದಿಲ್ಲ. ಆಡಳಿತ ಪಕ್ಷದ ಒಬ್ಬ ವ್ಯಕ್ತಿಯಾಗಿ ಕೂಡ ನಾನು ಈ ಮಾತುಗಳನ್ನು ಹೇಳಿದಾಗ ಮಾನ್ಯ ಸಚಿವರು ಇದು ತಪ್ಪೆಂದು ಪರಿಭಾವಿಸಬಾರದು. ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದೇ ಮುಖ್ಯ ಉದ್ದೇಶ ಆಗಬೇಕು ಎನ್ನುವುದು ನನ್ನ ನಿಜವಾದ ಇಂಗಿತವಾಗಿದೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಈ ಗುಂಡಿ ಮುಚ್ಚುವ ಕೆಲಸಕಾರ್ಯಗಳಿಂದ ಇಲಾಖೆಯ ಅಧಿಕಾರಿಗಳಿಗೆ ಆಗುವ ಲಾಭ ಎಷ್ಟು ಎನ್ನುವುದನ್ನು ಹೇಳಿ. . .

**ಶ್ರೀ ಸಿ.ಎಂ. ಉದಾಸಿ:-** ಈ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಆಗುತ್ತದೆಯೇ? ಈ ಪ್ರಶ್ನೆಗೆ ಉತ್ತರ ನಿಮಗೆ ಹೇಳುವುದಕ್ಕೆ ಆಗುತ್ತದೆಯೇ?

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಚಿವರೇ ನಿಮಗೆ ಇದರ ಬಗ್ಗೆ ಮಾಹಿತಿ ಇದ್ದರೆ ಅದನ್ನು ಸದನಕ್ಕೆ ತಿಳಿಸಿ ಎಂದು ಮಾನ್ಯ ಸದಸ್ಯರು ಕೇಳಿತ್ತಿದ್ದಾರೆ ಅಷ್ಟೆ.

**ಸಭಾಪತಿಯವರು:-** ಈಗ ದಯವಿಟ್ಟು ವಿಷಯಕ್ಕೆ ಬನ್ನಿ . . .

**ಶ್ರೀ ಸಿ.ಎಂ. ಉದಾಸಿ:-** ಮಾನ್ಯ ಸಭಾಪತಿಗಳೇ, ಮಾನ್ಯ ದೊಡ್ಡರಂಗೇಗೌಡರ ಕೋರಿಕೆಯಂತೆ ಅವರ ಕ್ಷೇತ್ರಕ್ಕೆ ಹೋಗಿಬರುತ್ತೇನೆ. ನನಗೆ ಗೊತ್ತಿರುವ ಹಾಗೆ ಮಾನ್ಯ ಸದಸ್ಯರ ಬೇಡಿಕೆ ಇರುವುದು

ಶ್ರಾವಂದನಹಳ್ಳಿಯಿಂದ ಹಂಪಸಂದ್ರಕ್ಕೆ ಬರಬೇಕಾದ ರಸ್ತೆ ಚಂದನಪುರಕ್ಕೆ ಹೋಗದೇ ಹಂಪಸಂದ್ರದ ಮಾರ್ಗವಾಗಿ ಬರಬೇಕು ಎನ್ನುವ ಅಪೇಕ್ಷೆ ಇದೆ. ಈ ರಸ್ತೆ ನಮ್ಮ ಇಲಾಖೆಗೆ ಬರುವುದಿಲ್ಲ. ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಮಾನ್ಯ ಸದಸ್ಯರು ಚರ್ಚೆ ಮಾಡಿರುವಂತಹ ಸಂಭಾಷಣೆಯಿಂದ ಗೊತ್ತಾದ ಮಾತುಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಜಿಲ್ಲಾ ಪರಿಷತ್ತಿನ ರಸ್ತೆಯಾಗಿದೆ. ಆ ರಸ್ತೆಯಲ್ಲಿ ವಾಹನಗಳ ಓಡಾಟ ಆಗುತ್ತಿರುವುದರಿಂದ ಆ ರಸ್ತೆ ಕೆಟ್ಟಿದೆ ಎನ್ನುವುದನ್ನು ನಮ್ಮ ಗಮನಕ್ಕೆ ತರುವಂತಹ ಕೆಲಸ ಮಾಡಿದ್ದಾರೆ. ಅದನ್ನು ಅಪ್‌ಗ್ರೇಡ್ ಮಾಡಿ, ನಮ್ಮ ಇಲಾಖೆಗೆ ತೆಗೆದುಕೊಂಡು ಕೆಲಸ ಮಾಡಬೇಕಾದ ಅವಶ್ಯಕತೆ ಇದೆ ಎನ್ನುವುದನ್ನೂ ಸಹಿತ ಅವರ ಗಮನಕ್ಕೆ ತರಬಯಸುತ್ತೇನೆ. ಒಂದು ಸಲ ನಾನು ಆ ಸ್ಥಳಕ್ಕೆ ಭೇಟಿಯಾಗಿ ಮಾನ್ಯ ಸದಸ್ಯರ ವಿಚಾರಗಳನ್ನು ತಿಳಿದುಕೊಂಡು ಅವುಗಳನ್ನು ಸರಿಪಡಿಸುವ ಕೆಲಸ ಮಾಡುತ್ತೇನೆ ಎಂದು ಭರವಸೆ ಕೊಡಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರ 143ನೇ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ. ಆದಷ್ಟು ಬೇಗ ಉತ್ತರವನ್ನು ಕೊಡುವುದಕ್ಕೆ ಮಾನ್ಯ ಸಚಿವರಿಗೆ ಹೇಳುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಸದನ ಮುಗಿಯುವುದರೊಳಗೆ ಉತ್ತರವನ್ನು ಕೊಡಿಸಿದರೆ ಚೆನ್ನಾಗಿರುತ್ತದೆ.

**ಸಭಾಪತಿಯವರು:–**ಮಾನ್ಯ ಸಚಿವರಿಗೆ ಹೇಳಿ ಉತ್ತರ ಕೊಡಿಸುವ ಪ್ರಯತ್ನ ಮಾಡುತ್ತೇನೆ.

## ಮದ್ದೂರು ತಾಲ್ಲೂಕು ಗೊಲ್ಲರದೊಡ್ಡಿ ಗ್ರಮದಲ್ಲಿರುವ ಕುಡಿಯುವ ನೀರಿನ ಯೋಜನೆಯ ಪುನಶ್ಚೇತನದ ಬಗ್ಗೆ

**26; ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

ಅ) ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಕೊಪ್ಪ ಹೋಬಳಿಯ ಗೊಲ್ಲರದೊಡ್ಡಿ ಗ್ರಾಮದಲ್ಲಿರುವ ಕುಡಿಯುವ ನೀರಿನ ಯೋಜನೆಯು ನಿಷ್ಕ್ರಿಯಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಯೋಜನೆಯನ್ನು ಪುನಃಶ್ಚೇತನಗೊಳಿಸಲು ಜಿಲ್ಲಾ ಪಂಚಾಯಿತಿಗೆ ಕ್ರಮವಹಿಸಲು ತಿಳಿಸಲಾಗಿದೆಯೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ದಿನಾಂಕ: 04–03–2011 ರಲ್ಲಿ ಉತ್ತರಿಸಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಆ) ಈ ಯೋಜನೆಯನ್ನು ಖುದ್ದಾಗಿ ಪರಿಶೀಲಿಸಿ ಬೇಟಿ ನೀಡುತ್ತೇನೆಂದು ಮಾನ್ಯ ಸಚಿವರು ತಿಳಿಸಿದ್ದು, ಈ ಸ್ಥಳಕ್ಕೆ ಮಾನ್ಯ ಸಚಿವರು ಬೇಟಿ ನೀಡಿದ ದಿನಾಂಕ, ಕೈಗೊಂಡ ಕ್ರಮಗಳ ವಿವರಗಳನ್ನು ನೀಡುವುದು;

ಇ) ಈ ಯೋಜನೆಯನ್ನು ಪುನಃಶ್ಚೇತನಗೊಳಿಸದೆ ಇದ್ದಲ್ಲಿ ಯಾವಾಗ ಪುನಃಶ್ಚೇತನಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದು? (ವಿವರ ನೀಡುವುದು);

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

ಅ) ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಕೊಪ್ಪ ಹೋಬಳಿಯ ಗೊಲ್ಲರದೊಡ್ಡಿ ಗ್ರಾಮದಲ್ಲಿ ನಿಷ್ಕ್ರೀಯಗೊಂಡಿರುವ ಕುಡಿಯುವ ನೀರಿನ ಯೋಜನೆ ಪುನಃಶ್ಚೇತನಗೊಳಿಸಲು 2 ಪರ್ಯಾಯ ಪ್ರಸ್ತಾವನೆಗಳನ್ನು ಸಿದ್ಧಪಡಿಸಲಾಗಿದೆ.

1) ಗೊಲ್ಲರದೊಡ್ಡಿ ಗ್ರಾಮದಲ್ಲಿರುವ ಕುಡಿಯುವ ನೀರು ಸರಬರಾಜು ಯೋಜನೆಯ ಶುದ್ಧೀಕರಣ ಘಟಕದ

ಪರಿಮಿತಿಯಲ್ಲಿ ಅಗತ್ಯವಿರುವ ಕೊಳವೆ ಬಾವಿಗಳನ್ನು ಕೊರೆದು, ಕೊಳವೆ ಬಾವಿಯ ನೀರನ್ನು ಹಾಲಿ ಇರುವ ನೀರು ಪೂರೈಕೆ ಯೋಜನೆಯ ವ್ಯವಸ್ಥೆ ಮುಖೇನ ಗ್ರಾಮಗಳಲ್ಲಿರುವ ಓ.ಹೆಚ್.ಟಿ.ಗಳಿಗೆ ಸಂಪರ್ಕ ಕಲ್ಪಿಸಲು, ರೂ.56.00 ಲಕ್ಷ ಅಂದಾಜಿನ ಯೋಜನೆ, ಹಾಗೂ

**2)** ಶಿಂಷಾನದಿ ಜಲಮೂಲ ಆಧಾರಿತ ರೂ. 95.00 ಲಕ್ಷ ಅಂದಾಜು ಮೊತ್ತದ ಯೋಜನೆ.

**ಆ)** ದಿನಾಂಕ: 07–10–2011ರಂದು ಮಂಡ್ಯ ಜಿಲ್ಲೆಗೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಪ್ರಶ್ನಿತ ಯೋಜನೆಯನ್ನು ಪುನಃಶ್ಚೇತನಗೊಳಿಸಲು ಜಿಲ್ಲಾ ಪಂಚಾಯಿತಿಗೆ ನಿರ್ದೇಶಿಸಿದೆ.

ಇ) ಅನುದಾನ ಲಭ್ಯತೆ ಆಧರಿಸಿ, 2012–13ರ ಸಾಲಿನಲ್ಲಿ ಸದರಿ ಯೋಜನೆಯ ಪುನಶ್ಚೇತನ ಕಾಮಗಾರಿಯನ್ನು ಅಳವಡಿಸಲು ಪರಿಶೀಲಿಸಲಾಗುವುದು.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನೇನೋ ತಯಾರು ಮಾಡಿ ಕೊಟ್ಟುಬಿಟ್ಟಿದ್ದಾರೆ. ಮಾನ್ಯ ಸಚಿವರು ಮಂಡ್ಯಕ್ಕೆ ಭೇಟಿ ಕೊಟ್ಟಾಗ ನಾನೇ ಖುದ್ದಾಗಿ ಭೇಟಿ ಮಾಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇನೆಂದು ಹೇಳಿದರು. ಸುಮಾರು ಐದೂವರೆ ತಿಂಗಳಾಗಿದೆ. ಅಲ್ಲಿಗೆ ಭೇಟಿ ಕೂಡ ಕೊಟ್ಟಿಲ್ಲ. ಇವರು 'ಯೋಜನೆಗಳನ್ನು ಪರಿಶೀಲಿಸಲಾಗುವುದು' ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಏಕೆ ಈ ರೀತಿಯ ಉತ್ತರಗಳನ್ನು ಕೊಡುತ್ತಿದ್ದಾರೆಂದು ನಮಗೆ ಅರ್ಥವಾಗುತ್ತಿಲ್ಲ. ಸದ್ಯಕ್ಕೆ ಕುಡಿಯುವ ನೀರು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿಬಿಟ್ಟರೆ ಬದಲಿ ವ್ಯವಸ್ಥೆಯನ್ನೇನಾದರೂ ಜನರು ಮಾಡಿಕೊಳ್ಳುತ್ತಾರೆ. ಕೊಡುತ್ತೇನೆ, ಕೊಡುತ್ತೇನೆ ಎಂದು ಹೇಳಿಬಿಟ್ಟರೆ ಈಗ ನಾವು ಕೂಡ ಮುಖ ತೋರಿಸುವುದಕ್ಕೆ ಆಗುವುದಿಲ್ಲ. ನನಗೆ ಸ್ಪಷ್ಟವಾಗಿ ಆಗುತ್ತದೆಯೋ ಇಲ್ಲವೋ ಎಂದು ಅಷ್ಟನ್ನು ನೇರವಾಗಿ ಹೇಳಿಬಿಟ್ಟರೆ ಸಾಕು. ಇವರು ಕೊಡುತ್ತೇವೆಂದು

ಹೇಳುವುದು ಬೇಡಾ, ಕೊಡುವುದಿಲ್ಲ ಎಂದು ಹೇಳುವುದು ಬೇಡಾ ಈ ಉತ್ತರವನ್ನು ತೆಗೆದುಕೊಂಡು ಹೋಗಿ ಜನರಿಗೆ ಏನು ಉತ್ತರ ಹೇಳಲಿ? ಸುಮಾರು ಎಷ್ಟು ವರ್ಷಗಳಿಂದ ಈ ಯೋಜನೆ ಕಾಯುತ್ತಿದೆ? ಅವರೇನು ಹೇಳುತ್ತಾರೆಂದರೆ, ಅನುದಾನ ಲಭ್ಯತೆ ಆಧರಿಸಿ 2012–13ರ ಸಾಲಿನಲ್ಲಿ ಸದರಿ ಯೋಜನೆಯ ಪುನಶ್ಚೇತನ ಕಾಮಗಾರಿಯನ್ನು ಅಳವಡಿಸಲು ಪರಿಶೀಲಿಸಲಾಗುವುದು ಎಂದು ಉತ್ತರದಲ್ಲಿ ಹೇಳಿದ್ದಾರೆ. ಕುಡಿಯುವ ನೀರಿಗೆ ಪರಿಶೀಲಿಸಬೇಕೆ? ಇದು ಆಗುತ್ತದೆಯೋ ಆಗುವುದಿಲ್ಲವೋ ಎಂದು ಮಾನ್ಯ ಸಚಿವರು ನನಗೆ ಹೇಳಬೇಕು.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ರಾಮಕೃಷ್ಣರವರು ಕುಡಿಯುವ ನೀರಿನ ವಿಚಾರವಾಗಿ ಬಹಳ ಗಂಭೀರವಾಗಿ ಹೇಳಿದ್ದಾರೆ. ಹಿಂದೆ ನಾನು ಮಂಡ್ಯ ಜಿಲ್ಲಾ ಪಂಚಾಯತಿಯ ರಿವ್ಯೂ ಮೀಟಿಂಗ್‌ಗೆ ಹೋದಾಗ ಕೂಡ ಅವರು ನನ್ನ ಗಮನಕ್ಕೆ ತೆಗೆದುಕೊಂಡು ಬಂದರು. ಇದು ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. ಅದಕ್ಕಾಗಿ ನಾನು ಅಲ್ಲಿ ನಿರ್ದೇಶನ ಕೊಟ್ಟ ಪ್ರಕಾರ ಈಗಾಗಲೇ ಈ ಎರಡು ಯೋಜನೆಗಳನ್ನು ನಾವು ಮಾಡಿದ್ದೇವೆ. ಒಂದನೇಯದು, ಗೊಲ್ಲರದೊಡ್ಡಿ ಗ್ರಾಮಕ್ಕೆ ಸಂಬಂಧಪಟ್ಟಂತೆ 56 ಲಕ್ಷ ರೂಪಾಯಿಗಳ ಯೋಜನೆಯನ್ನು ತಯಾರಿ ಮಾಡಿದ್ದೇವೆ. ಎರಡನೆಯದು, ಶಿಂಷಾನದಿ ಜಲಮೂಲ ಆಧಾರಿತ 95 ಲಕ್ಷ ರೂಪಾಯಿಗಳ ಯೋಜನೆಯನ್ನು ಮಾಡಿದ್ದೇವೆ. ಆಗುತ್ತದೆಯೋ ಇಲ್ಲವೋ ಎಂದು ಸ್ಪಷ್ಟವಾಗಿ ಹೇಳಿ ಎಂದು ಮಾನ್ಯ ಸದಸ್ಯರು ಹೇಳಿದರು. ನಾನು ಮಾಡಿಸಿಕೊಡುತ್ತೇನೆ. ಮಾಡಿಸಿ ಕೊಡುವಂತಹ ಜವಾಬ್ದಾರಿ ನನ್ನದು. ಆದಷ್ಟು ಬೇಗ ಇದನ್ನು ಅಪ್ರೂವಲ್‌ಗೆ ಕೊಟ್ಟು ಕಾರ್ಯಾಚರಣೆ ಮಾಡುವಂತಹ ಕೆಲಸವನ್ನು ನಾನು ಮಾಡುತ್ತೇನೆ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನಾನು ಕೇಳಿಕೊಳ್ಳುವುದೇನೆಂದರೆ, 56 ಲಕ್ಷ ಮತ್ತು 95 ಲಕ್ಷ ರೂಪಾಯಿಗಳ ಯೋಜನೆ ಎಂದು ಹೇಳಿದ್ದಾರಲ್ಲಾ ಆ ಯೋಜನೆ ಎಲ್ಲಿ ತಯಾರಾಗಿದೆ, ಅದರ ಪೇಪರ್‌ನ್ನು ನನಗೆ ಕೊಡುತ್ತಾರೆಯೇ?

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯಲ್ಲಿ ಈಗಾಗಲೇ ಯೋಜನೆ ಮಾಡಿ ಕಳುಹಿಸಿದ್ದಾರೆ. ಅದರ ವಿವರಗಳನ್ನು ನಿಮಗೆ ಕೊಡಿಸುತ್ತೇನೆ.

**ಶ್ರೀ ಬಿ. ರಾಮಕೃಷ್ಣ:–** ದಯವಿಟ್ಟು ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ. ಆ ಯೋಜನೆ ಇದುವರೆಗೂ ತಯಾರಾಗಿಲ್ಲ. ಇದು ಏಕೆ ಬೇಕು?

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಆ ಯೋಜನೆಯನ್ನು ನಾವು ತಯಾರು ಮಾಡಿದ್ದೇವೆ. ನಾನು ಮಾಡಿಸಿಕೊಡುತ್ತೇನೆ. ಅವರು ಇನ್ನೂ ಅದರಲ್ಲಿ ಏನಾದರೂ ಸೇರಿಸಬೇಕೆಂದರೆ ಸೇರಿಸಲು. ಆ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ನಿವಾರಣೆ ಮಾಡುವ ಸಲುವಾಗಿ ಇನ್ನೂ ಅವರು ಏನು ಸಲಹೆ ಕೊಡುತ್ತಾರೆಯೋ ಕೊಡಲಿ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಬಗ್ಗೆ ನಾನು ಒಳ್ಳೆಯ ಗೌರವ ಇಟ್ಟುಕೊಂಡಿದ್ದೇನೆ. ಸ್ವಲ್ಪ ನೇರವಾಗಿ ಸ್ಪಷ್ಟವಾಗಿ ಉತ್ತರ ಸಿಗಲಿ ಎಂದು ಕೇಳುತ್ತಿದ್ದೇನೆ. ಇನ್ನೂ ಯೋಜನೆ ತಯಾರಾಗಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರು ಮಾಡುತ್ತೇವೆಂದು ಹೇಳಿದ್ದಾರೆ. ನೋಡೋಣ. ಈಗ ಪ್ರಶ್ನೋತ್ತರ ಅವಧಿ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೇ, ನನ್ನದು ಒಂದು ಪ್ರಶ್ನೆ ಇದೆ.

**ಸಭಾಪತಿಯವರು:–** ದಯವಿಟ್ಟು ನನ್ನನ್ನು ಕ್ಷಮಿಸಬೇಕು. ನಾನು ಬೆಳಿಗ್ಗೆ 11.00 ಗಂಟೆಯಿಂದ ಇಲ್ಲೇ ಕುಳಿತುಕೊಂಡಿದ್ದೇನೆ. ಹತ್ತು ಬಾರಿ ತಾವು ತಡವಾಗಿ ಬಂದು ನನ್ನ ಪ್ರಶ್ನೆಯನ್ನು ತೆಗೆದುಕೊಳ್ಳಿ ಎಂದು ಕೇಳಿದರೆ ಅದು ಧರ್ಮವಲ್ಲ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ದಿನಾಂಕ: 27ನೇ ಮಾರ್ಚ್ 2012ರ ಸಮೂಹ 2 ರ ಲಿಖಿತ ಮೂಲಕ ಉತ್ತಿರುಸಿವ ಒಟ್ಟು 48 ಪ್ರಶ್ನೆಗಳ ಪೈಕಿ 32 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**2008–09ನೇ ಸಾಲಿನ ವಿಧಾನಸಭಾ ಕ್ಷೇತ್ರವಾರು ಖರ್ಚು ಮಾಡಿದ ಅನುದಾನದ ಬಗ್ಗೆ**

**05; ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)**

**ಅ)** 2008–09ನೇ ಸಾಲಿನಿಂದ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ವಿಧಾನಸಭಾ ಕ್ಷೇತ್ರವಾರು ಖರ್ಚು ಮಾಡಿದ ಅನುದಾನ ಎಷ್ಟು?

**ಆ)** ಈ ಅನುದಾನ ಒದಗಿಸುವಲ್ಲಿ ತಾರತಮ್ಯ ನೀತಿಯನ್ನು ಅನುಸರಿಸಿರುವುದು ನಿಜವೇ?

**ಇ)** ಕೆಲವು ವಿಧಾನಸಭಾ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ಒದಗಿಸಲು ಕಾರಣಗಳೇನು?

**ಈ)** ಕಡಿಮೆ ಅನುದಾನ ಪಡೆದ ವಿಧಾನಸಭಾ ಕ್ಷೇತ್ರಗಳಿಗೆ ಮುಂಬರುವ ದಿನಗಳಲ್ಲಿ ಹೆಚ್ಚಿನ ಅನುದಾನ ಒದಗಿಸಲು ಸರ್ಕಾರ ಉದ್ದೇಶಿಸಿದೆಯೆ?

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)**

**ಅ)** ರಾಜ್ಯದಲ್ಲಿ 2008–09ನೇ ಸಾಲಿನಿಂದ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ವಿಧಾನಸಭಾ ಕ್ಷೇತ್ರವಾರು ಖರ್ಚು ಮಾಡಿದ ಅನುದಾನದ ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗಿದೆ.

**ಆ)** ಇಲ್ಲ.

**ಇ)** ರಾಜ್ಯದಲ್ಲಿನ ರಸ್ತೆಗಳ ಉದ್ದ, ಸ್ಥಿತಿಗತಿ, ಕ್ಷೇತ್ರವಾಗು ವಿಸ್ತೀರ್ಣವಾರು ಹಾಗೂ ಆಯಾ ಕ್ಷೇತ್ರದ ಮಣ್ಣಿನಗುಣವನ್ನು ಆಧರಿಸಿ ಅನುದಾನವನ್ನು

ಹಂಚಿಕೆ ಮಾಡಲಾಗುತ್ತಿದೆ. ಆದ್ದರಿಂದ ಕೆಲವು ಕ್ಷೇತ್ರಗಳ ಅನುದಾನವು ಹೆಚ್ಚಾಗಿ ಹಂಚಿಕೆಯಾಗಿರುತ್ತದೆ.

**ಈ)** ಆರ್ಥಿಕ ಇಲಾಖೆಯಿಂದ ಒದಗಿಸುವ ಅನುದಾನವನ್ನು ಆಧರಿಸಿ ರಾಜ್ಯದಲ್ಲಿನ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಹಾಗೂ ರಸ್ತೆಯ ವಾಸ್ತವಾಂಶವನ್ನು ಗಮನದಲ್ಲಿಟ್ಟುಕೊಂಡು ಹೆಚ್ಚಿನ ಅನುದಾನವನ್ನು ಒದಗಿಸಲು ಕ್ರಮ ಕೈ ಗೊಳ್ಳಲಾಗುವುದು.

**ಉದ್ಯೋಗ ಖಾತ್ರಿ ಯೋಜನೆಯಡಿ ತಪ್ಪು ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ಕಯಗೊಳ್ಳುವ ಬಗ್ಗೆ**

**03; ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)**

**ಅ)** ರಾಜ್ಯದಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಇಲ್ಲಿಯವರೆಗೆ ಎಷ್ಟು ಅಧಿಕಾರಿಗಳ ವಿರುದ್ಧ ದೂರುಗಳು ದಾಖಲಾಗಿವೆ.

**ಆ)** ಈ ದೂರುಗಳನ್ನು ಸರಕಾರ ತನಿಖೆ ಮಾಡಿಸಿದೆಯೇ;

ಇ) ಹಾಗಿದ್ದಲ್ಲಿ, ವಿಚಾರಣೆಯಲ್ಲಿ ತಪ್ಪಿತಸ್ಥರೆಂದು ಕಂಡು ಬಂದ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು?

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

**ಅ)** ರಾಜ್ಯದಲ್ಲಿ ಯೋಜನೆಯಡಿ ಇಲ್ಲಿಯವರೆಗೆ ಒಟ್ಟು 540 ಜನ ಅಧಿಕಾರಿಗಳ ವಿರುದ್ಧ ದೂರುಗಳು ದಾಖಲಿಸಲಾಗಿದೆ.

**ಆ)** ಹೌದು.

ಇ) ಯೋಜನೆಯಡಿ ತಪ್ಪಿತಸ್ಥರ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲಾಗಿರುತ್ತದೆ ಅದರಲ್ಲಿ

**1.** ಅಮಾನತ್ತು ಪ್ರಕರಣಗಳು – 209

**2.** ಇಲಾಖೆ ವಿಚಾರಣೆ ಪ್ರಕರಣಗಳು – 204

**3.** ಕ್ರಿಮಿನಲ್ ಕೇಸ್ ಪ್ರಕರಣಗಳು – 139

**ಹುಬ್ಬಳ್ಳಿಯ ರಾಷ್ಟ್ರೀಯ ಹೆದ್ದಾರಿ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆಯನ್ನು ಭರ್ತಿ ಮಾಡುಬ ಬಗ್ಗೆ**

**06; ಶ್ರೀ ಬಸವರಾಜ್ ಹೊರಟ್ಟಿ (ಶಿಕ್ಷಕರ ಕ್ಷೇತ್ರ)**

**ಅ)** ಹುಬ್ಬಳ್ಳಿಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ವಿಭಾಗ ಕಚೇರಿ ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆ ಯಾವ ದಿನಾಂಕದಿಂದ ಖಾಲಿ ಇದೆ.

**ಆ)** ಈ ಹುದ್ದೆಗೆ ಅರ್ಹ ಕಾರ್ಯನಿರ್ವಾಹಕ ಅಭಿಯಂತರರನ್ನು ಭರ್ತಿ ಮಾಡದೇ ಇರಲು ಕಾರಣಗಳೇನು?

**ಇ)** ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ಕಾರ್ಯನಿರ್ವಾಹಕ ಅಭಿಯಂತರರು ಲಭ್ಯವಿಲ್ಲವೆ, ಅಥವ ಯಾರೂ ಈ ಸ್ಥಾನಕ್ಕೆ ಬರಲು ಇಚ್ಛಿಸುತ್ತಿಲ್ಲವೇ;

**ಈ)** ಈ ಹುದ್ದೆಗೆ ಅರ್ಹ ಕಾರ್ಯನಿರ್ವಾಹಕ ಅಭಿಯಂತರರನ್ನು ಯಾವ ದಿನಾಂಕದೊಳಗೆ ಭರ್ತಿ ಮಾಡಲಾಗುವುದು?

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)**

**ಅ)** ಸರ್ಕಾರದ ಅಧಿಸೂಚನೆ ಸಂ: ಲೋಇ 187 ಸೇಎಸು 2011, ದಿನಾಂಕ: 31–5–2011 ರಲ್ಲಿ ಶ್ರೀ ಎಂ.ಎ.ಶೇಜುವಾಡಕರ್, ಕಾರ್ಯನಿರ್ವಾಹಕ ಇಂಜಿನಿಯರ್, ಇವರನ್ನು ರಾಷ್ಟ್ರೀಯ ಹೆದ್ದಾರಿ ವಿಭಾಗ, ಹುಬ್ಬಳ್ಳಿ, ಇಲ್ಲಿನ ಖಾಲಿ ಹುದ್ದೆಗೆ ನೇಮಿಸಿದ್ದು ದಿನಾಂಕ:9–6–2011 ರಂದು ವರದಿ ಮಾಡಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

**ಆ)** ಉದ್ಭವಿಸುವುದಿಲ್ಲ.

**ಇ)** ಉದ್ಭವಿಸುವುದಿಲ್ಲ.

**ಈ)** ಉದ್ಭವಿಸುವುದಿಲ್ಲ.

**ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ**

**41; ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಕಳೆದ 3 ವರ್ಷಗಳಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಯಾವ ಯಾವ ರಾಜ್ಯ ಹೆದ್ಧಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದದರ್ಜೆಗೇರಿಸಲು ಸರ್ಕಾರಕ್ಕೆ ಪ್ರಸ್ತಾವನೆಗಲನ್ನು ಸಲ್ಲಿಸಲಾಗಿದೆ.

**ಆ)** ಈ ಪ್ರಸ್ತಾವನೆಗಳಿಗೆ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರ ಈ ಜಿಲ್ಲೆಗಳ ಯಾವ ಯಾವ ರಸ್ತೆಗಳನ್ನು ಅನುಮೋದಿಸಿದೆ; ಈ ಹೆದ್ದಾರಿಗಳನ್ನು ನಿರ್ಮಾಣ ಮಾಡಲು ಕೇಂಧ್ರ ಸರ್ಕಾರ ನೀಡಿರುವ ಅನುದಾನವೆಷ್ಟು;

**ಇ)** ಈ ಹೆದ್ದಾರಿ ರಸ್ತೆ ನಿರ್ಮಾಣಕ್ಕಾಗಿ ಈ 2 ಜಿಲ್ಲೆಗಳಿಗೆ ರಾಜ್ಯ ಸರ್ಕಾರ ನೀಡಿರುವ ಅನುದಾನವೆಷ್ಟು;

**ಈ)** ರಾಜ್ಯ ಮತ್ತು ಕೇಂದ್ರ ಸರ್ಕಾರ ನೀಡಿರುವ ಅನುದಾನದಲ್ಲಿ ಎಲ್ಲೆಲ್ಲಿ ರಸ್ತೆ ಕಾಮಗಾರಿಗಳನ್ನು ನಿರ್ಮಿಸಲಾಗಿದೆ;

**ಉ)** ಬಾಕಿ ಇರುವ ಹೆದ್ದಾರಿ ಕಾಮಗಾರಿಗಳನ್ನು ಯಾವಾಗ ಪೂರ್ಣ ಗೊಳಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು;

**ಊ)** ಈ ಆರ್ಥಿಕ ವರ್ಷದಲ್ಲಿ ಹೊಸದಾಗಿ ಈ 2 ಜಿಲ್ಲೆಗಳಲ್ಲಿ ಯಾವ ಯಾವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸಲು ನಿರ್ಧರಿಸಲಾಗಿದೆ? (ವಿವರ ನೀಡುವುದು);

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)**

**ಅ)** ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ಕೆಳಕಂಡ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸಲು ರಾಜ್ಯ ಸರ್ಕಾರದಿಂದ ಕೇಂದ್ರ

ಭೂ ಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಲಾಗಿದ್ದು, ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ. | ರಸ್ತೆಯ ವಿವರ | ರಸ್ತೆಯ ಉದ್ದ (ಕಿಮೀ) | ಪ್ರಸ್ತಾವನೆಯನ್ನು ಸಲ್ಲಿಸಲಾದ ದಿನಾಂಕ |
|---|---|---|---|
| 1 | ನಂಜನಗೂಡು ನಿಂದ ಚಾಮರಾಜನಗರದ ವರೆಗೆ | 39 | 24–08–2009 |
| 2 | ಕಳ್‌ಪೇಟ–ಮಾನಂದವಾಡಿ–ಕುಟ್ಟ–ಗೋಣಿಕೊಪ್ಪಲ್–ಹುಣಸೂರು–ಮೈಸೂರು | 123 | 20–05–2011 |
| 3 | ಮೈಸೂರು–ಚನ್ನರಾಯಪಟ್ಟಣ–ಅರಸೀಕೆರೆ (ಹೊಳೇನರಸೀಪುರ ಮಾರ್ಗವಾಗಿ) | 187 | 11–03–2009 |
| 4 | ಬೆಂಗಳೂರು–ರಾಮನಗರ–ಚನ್ನಪಟ್ಟಣ–ಮಂಡ್ಯ–ಮೈಸೂರು–ಮಡಿಕೇರಿ–ಮಂಗಳೂರು | 385 | 11–03–2009 |
| 5 | ಮಳವಳ್ಳಿ–ಬನ್ನೂರು–ಮೈಸೂರು ಮಾರ್ಗವಾಗಿ ರಾ.ಹೆ.–209 ಮತ್ತು 212ನ್ನು ಸಂಪರ್ಕಿಸುವ ರಸ್ತೆ | 45 | 11–03–2009 |
| 6 | ರಾ.ಹೆ.–48 – ಹಾಸನ–ಗೊರೂರು–ಅರಕಲ್‌ಗೂಡು–ರಾಮನಾಥಪುರ – ಬೆಟ್ಟದಪುರ–ಪಿರಿಯಾಪಟ್ಟಣ–ಗುಂಡ್ಲುಪೇಟೆ ರಸ್ತೆ | 249 | 22–06–2009 |

**ಆ)** ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಅನುಮೋದನೆ ನೀರಿಕ್ಷಿಸಿದೆ. ಈ ಹೆದ್ದಾರಿಗಳ ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ ಅನುದಾನ ಲಭ್ಯವಾಗಿರುವುದಿಲ್ಲ.

**ಇ)** ಈ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತನೆಗೊಳಿಸಿದ ನಂತರ ನಿರ್ಮಾಣ : ನಿರ್ವಹಣೆಯ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುತ್ತದೆ.

**ಈ)** ಉದ್ಭವಿಸುವುದಿಲ್ಲ.

**ಉ)** ಉದ್ಭವಿಸುವುದಿಲ್ಲ.

**ಊ)** ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಕುರಿತು ಕೇಂದ್ರ ಸರ್ಕಾರವು ನಿರ್ಧರಿಸಬೇಕಿರುತ್ತದೆ.

**ಹೆದ್ದಾರಿಗಳಿಗೆ ವಿಧಿಸಿರುವ ಶುಲ್ಕದ ಬಗ್ಗೆ**

**43; ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಜ್ಯದ ಎಷ್ಟು ಹೆದ್ದಾರಿಗಳಿಗೆ ಇದುವರೆಗೆ ಶುಲ್ಕವನ್ನು ವಿಧಿಸಿ ವಸೂಲು ಮಾಡಲಾಗುತ್ತಿದೆ;

**ಆ)** ಆ ಶುಲ್ಕದ ವಿವರಗಳನ್ನು ಸಂಪೂರ್ಣವಾಗಿ ಅದೇಶದ ಪ್ರತಿಗಳೊಂದಿಗೆ ಒದಗಿಸುವುದು;

**ಇ)** ಶುಲ್ಕವನ್ನು ವಿಧಿಸಿರುವ ಹೆದ್ದಾರಿಗಳಿಗೆ ಟೆಂಡರ್ ಮೂಲಕ ಬಿಡ್ ನಡೆಸಲಾಗಿತ್ತೆ;

**ಈ)** ಹಾಗಿದ್ದಲ್ಲಿ, ಅಂತಿಮ ಬಿಡ್ ಮೂಲಕ ಶುಲ್ಕ ವಸೂಲಾತಿಯನ್ನು ಪಡೆದುಕೊಂಡಿರುವವರ ಹೆಸರು ಕಂಪನಿಯ ಸಂಪೂರ್ಣ ವಿಳಾಸ ಹಾಗೂ ಅಂತಿಮ ಬಿಡ್‌ನ ಮೊತ್ತದ ಎಲ್ಲಾ ವಿವರ ನೀಡುವುದು;

**ಉ)** ಎಷ್ಟು ವರ್ಷಗಳಿಗೆ ಈ ಹೆದ್ದಾರಿಗಳ ಶುಲ್ಕ ವಸೂಲಾತಿಯನ್ನು ನೀಡಲಾಗಿದೆ; (ವಿವರ ನೀಡುವುದು)

**ಊ)** ಇನ್ನು ಹೊಸದಾಗಿ ಎಷ್ಟು ಹೆದ್ದಾರಿಗಳಿಗೆ ಶುಲ್ಕ ನಿಗಧಿ ಮಾಡಲು ಯೋಜಿಸಲಾಗಿದೆ ಹಾಗೂ ಆ ಹೆದ್ದಾರಿಗಳು ಯಾವುವು? (ವಿವರ ನೀಡುವುದು)

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)**

**ಅ)** ಈವರೆವಿಗೆ ರಾಜ್ಯ ಹೆದ್ದಾರಿಗಳಲ್ಲಿ ಶುಲ್ಕವನ್ನು ವಿಧಿಸಲಾಗುತ್ತಿಲ್ಲ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಅವರ ನಿರ್ವಹಣೆಯಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಶುಲ್ಕ ವಿಧಿಸುತ್ತಿರುತ್ತಾರೆ. ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ–4ರ ಬೆಂಗಳೂರು–ಪೂನಾ ರಸ್ತೆಯಲ್ಲಿ ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆಯನ್ನು ಬಿ.ಓ.ಟಿ. (Built Operate and Transfer) ಆಧಾರದ ಮೇಲೆ ಕನ್‌ಸೆಷನೈರ್ (Concessionaire) ರವರಿಗೆ 1998 ರಲ್ಲಿ ವಹಿಸಿಕೊಟ್ಟಿದ್ದು ಅವರು ಶುಲ್ಕವನ್ನು ವಿಧಿಸುತ್ತಿದ್ದಾರೆ.

**ಆ)** ಬಿ.ಓ.ಟಿ. (Built Operate and Transfer) ಆಧಾರದ ಮೇಲೆ ವಹಿಸಿರುವುದರಿಂದ, ಟ್ರೈ ಪಾರ್ಟಿ ಅಗ್ರಿಮೆಂಟ್ ಪ್ರಕಾರ 1997 ರ ತಳಹದಿ ಮೇಲೆ ಶುಲ್ಕ ದರ ನಿಗಧಿಪಡಿಸಿದ್ದು, ನಂತರದ ವರ್ಷಗಳಲ್ಲಿ ಹಿಂದಿನ ವರ್ಷದ ದರಗಳ ಮೇಲೆ ಪ್ರತಿ ವರ್ಷ ಶೇಕಡ 10 ರಷ್ಟು ಹೆಚ್ಚಿನ (Maximum) ಶುಲ್ಕ ವಿಧಿಸಲಾಗುತ್ತಿದೆ. ಟ್ರೈ ಪಾರ್ಟಿ ಅಗ್ರಿಮೆಂಟ್‌ನ ಪ್ರಮುಖ ಪುಟಗಳ ಪ್ರತಿಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕ ಒದಗಿಸಲಾಗಿದೆ.

**ಇ)** ಬಿ.ಓ.ಟಿ. (Built Operate and Transfer) ಆಧಾರದ ಮೇಲೆ ವಹಿಸಿಕೊಡಲಾಗಿರುವುದರಿಂದ, ಶುಲ್ಕ ವಿಧಿಸುವಲ್ಲಿ ಬಿಡ್ ಮಾಡುವ ಪ್ರಕ್ರಿಯೆ ಅನ್ವಯಿಸುವುದಿಲ್ಲ.

**ಈ)** ಅನ್ವಯಿಸುವುದಿಲ್ಲ

**ಉ)** 1998 ರಿಂದ 2024 ರ ವರೆಗೆ (26 ವರ್ಷಗಳು) ಶುಲ್ಕ ವಸೂಲಾತಿಯನ್ನು ಬಿ.ಓ.ಟಿ. (Built Operate and Transfer) ಆಧಾರದ ಮೇಲೆ ವಹಿಸಿಕೊಡಲಾಗಿದೆ.

**ಊ)** ಕರ್ನಾಟಕ ರಾಜ್ಯ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಮೂರು ರಾಜ್ಯ ಹೆದ್ದಾರಿಗಳನ್ನು ಸಾರ್ವಜನಿಕ – ಖಾಸಗಿ ಸಹಭಾಗಿತ್ವದಲ್ಲಿ ಬಿ.ಓ.ಟಿ.–ವಿ.ಜಿ.ಎಫ್. ಅಡಿಯಲ್ಲಿ ಅಭಿವೃದ್ಧಿಪಡಿಸುವ ಕೆಲಸವು ಪ್ರಗತಿಯಲ್ಲಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ಶುಲ್ಕವನ್ನು ವಿಧಿಸಲಾಗುವುದು. ಹೆದ್ದಾರಿಗಳ ವಿವರ ಅನುಬಂಧ–1 ರಲ್ಲಿ ನೀಡಿದೆ.

## ಅನುಬಂಧ-1

## ಪ್ರಗತಿಯಲ್ಲಿರುವ ಪಿಪಿಪಿ ಯೋಜನೆಗಳ ವಿವರ (ಪಿಪಿಪಿ-ಬಿ.ಓ.ಟಿ-ವಿ.ಜಿ.ಎಫ್. (ಟೋಲ್))

ರೂ. ಕೋಟಿಗಳಲ್ಲಿ

| ಕ್ರ. ಸಂ. | ಯೋಜನಾ ವಿವರ | ಏಜೆನ್ಸಿ ಹೆಸರು | ಉದ್ದ ಕಿ.ಮೀ. | ಒಟ್ಟು ಯೋಜನಾ ಅಂದಾಜು | ರಿಯಾಯಿತಿದಾರರು ನಮೂದಿಸಿರುವ ವಿ.ಜಿ.ಎಫ್. ಮೊತ್ತ | | ವಿ.ಜಿ.ಎಫ್. ಕೊಡುಗೆ | | ಕೆಲಸ ಪ್ರಾರಂಭಿಸುವ ದಿನಾಂಕ | ಕೆಲಸ ಪೂರ್ಣಗೊಳಿಸುವ ದಿನಾಂಕ |
|---|---|---|---|---|---|---|---|---|---|---|
| | | | | | ಮೊತ್ತ | ಶೇ | ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | | |
| 1 | ಮಹಾರಾಷ್ಟ್ರ ಗಡಿಯಿಂದ ಆಂಧ್ರ ಪ್ರದೇಶ ಗಡಿಯವರೆಗೆ ವಯಾ ಆಲಂದ, ಗುಲ್ಬರ್ಗಾ, ಮಾಲ್ಡೇಡ್, ಸೇಡಮ್, ರಿಬ್ಬನ್ ಪಲ್ಲಿ (ವಾಗ್ದಾರಿ-ರಿಬ್ಬನ್ ಪಲ್ಲಿ ರಸ್ತೆ) ರಾಜ್ಯ ಹೆದ್ದಾರಿ ಅಭಿವೃದ್ಧಿ (SH-10) ಗುಲ್ಬರ್ಗಾ ಜಿಲ್ಲೆಯಲ್ಲಿ ಪಿಪಿಪಿ-ಬಿ.ಓ.ಟಿ.-ವಿ.ಜಿ.ಎಫ್. (ಟೋಲ್) ಆಧಾರದ ಅಡಿಯಲ್ಲಿ. | ಮೆ॥ ಜಿ.ವಿ.ಆರ್.ಎಂ.ಒ. ವಾಗ್ದಾರಿ ರಿಬ್ಬನ್ಪಲ್ಲಿ ಟೋಲ್ ವೇ ಪ್ರಾಜೆಕ್ಟ್ ಲಿಮಿಟೆಡ್. 476, ತಲಕಾವೇರಿ ಲೇಔಟ್, ಅಮೃತ ಹಳ್ಳಿ, ಬ್ಯಾಟರಾಯನಪುರ ವಿಮಾನ ನಿಲ್ದಾಣ, ಬೆಂಗಳೂರು | 141.00 | 242.75 | 90.66 | 38% | 49.10 | 41.56 | 03.12.2010 | 02.12.2012 |
| 2 | ಧಾರವಾಡ-ಅಳ್ನಾವರ್-ರಾಮನಗರ್ ರಸ್ತೆ ಅಭಿವೃದ್ಧಿ (SH-34) ಪಿಪಿಪಿ- | ಮೆ॥ ಜಿ.ವಿ.ಆರ್.ಎಂ.ಒ. ಧಾರವಾಡ- | 60.40 | 237.60 | 82.90 | 0.36 | 47.52 | 35.38 | 03.12.2010 | 02.12.2012 |

| | | | | | | | | | | |
|---|---|---|---|---|---|---|---|---|---|---|
| | ಬಿ.ಓ.ಟಿ.–ವಿ.ಜಿ.ಎಫ್. (ಟೋಲ್) ಆಧಾರದ ಅಡಿಯಲ್ಲಿ. | ರಾಮನಗರ್ ಟೋಲ್ ವೇ ಪ್ರಾಜೆಕ್ಟ್ ಲಿಮಿಟೆಡ್. 476, ತಲಕಾವೇರಿ ಲೇಔಟ್, ಅಮೃತ ಹಳ್ಳಿ, ಬ್ಯಾಟರಾಯನಪುರ, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು | | | | | | | | |
| 3 | ಚಿಕ್ಕನಾಯಕನಹಳ್ಳಿ–ತಿಪಟೂರು–ಹಾಸನ ರಸ್ತೆ ಅಭಿವೃದ್ಧಿ ಪಿಪಿಪಿ–ಬಿ.ಓ.ಟಿ.–ವಿ.ಜಿ.ಎಫ್. (ಟೋಲ್) ಆಧಾರದ ಅಡಿಯಲ್ಲಿ. | ಮೆ॥. ಅಭಿಜೀತ್ ಟೋಲ್ ರೋಡ್ (ಕರ್ನಾಟಕ ಲಿಮಿಟೆಡ್.) 4ನೇ ಮಹಡಿ, ಲ್ಯಾಂಡ್ ಮಾರ್ಕ್ ಕಟ್ಟಡ, ರಾಮದಾಸ್ ಪೇಟೆ, ವರದಾ ರಸ್ತೆ, ನಾಗಪುರ–440 010. | 74.00 | 241.76 | 92.99 | 39.00 | 47.68 | 45.31 | 05.01.2012 | 04.01.2014 |
| **TOTAL** | | | **275.60** | **722.11** | **266.55** | **39.74** | **144.30** | **122.25** | | |

**ಕೆ.ಎಂ.ಆರ್.ಸಿ. ಯೋಜನೆಯಡಿಯಲ್ಲಿ ಹಣ ಬಿಡುಗಡೆ ಬಗ್ಗೆ**

**45; ಶ್ರೀ ಸಂದೇಶ್ ನಾಗರಾಜ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಜ್ಯದಲ್ಲಿ ಕೆ.ಎಂ.ಆರ್.ಸಿ. ಯೋಜನೆಯಡಿಯಲ್ಲಿ ಕಳೆದ 2 ವರ್ಷಗಳಿಂದ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ;

**ಆ)** ಖರ್ಚು ಮಾಡಿರುವ ಈ ಅನುದಾನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಾಗೂ ಸ್ಥಳೀಯ ಸಂಸ್ಥೆಗಳ ಪಾಲೆಷ್ಟು; (ವಿವರ ನೀಡುವುದು)

**ಇ)** ಹಾಗೆಯೇ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಈ ಯೋಜನೆಯಡಿ ಕಳೆದ 2 ವರ್ಷಗಳಲ್ಲಿ ಖರ್ಚು ಮಾಡಿರುವ ಹಣವೆಷ್ಟು; ಆ ಸಂಸ್ಥೆಗಳು ಯಾವುವು; (ಈ ಎರಡು ಜಿಲ್ಲೆಗಳ ತಾಲ್ಲೂಕುವಾರು ವಿವರ ನೀಡುವುದು)

**ಈ)** ಕಳೇದ 2 ವರ್ಷಗಳಲ್ಲಿ ಈ ಜಿಲ್ಲೆಗಳಿಗೆ ಸೇರಿದ ಸಂಸ್ಥೆಗಳಲ್ಲಿ ಈ ಅನುದಾನದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಮತ್ತು ಮೂಲಭೂತ ಸೌಕರ್ಯಗಳಾವುವು; (ಸಂಪೂರ್ಣ ವಿವರ ನೀಡುವುದು)

**ಉ)** ಪ್ರಸ್ತುತ ಆರ್ಥಿಕ ವರ್ಷದ ಕೊನೆಯ ವೇಳೆಗೆ ಈ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಬೇಕಾಗಿರುವ ಬಾಕಿ ಮೊತ್ತವೇಷ್ಟು? (ವಿವರ ನೀಡುವುದು)

**ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ**

**ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು)**

**ಅ)** ವಿಶ್ವ ಬ್ಯಾಂಕ್ ಸಾಲದ ನೆರವಿನ ಕೆ.ಎಂ.ಆರ್.ಪಿ. ಯೋಜನೆಯಡಿ 2 ವರ್ಷಗಳಿಂದ ಖರ್ಚು ಮಾಡಿರುವ ವಿವರಗಳು ಈ ಕೆಳಕಂಡಂತಿದೆ :

| (ರೂ. ಕೋಟಿ) | | |
|---|---|---|
| ವರ್ಷ | ಗುರಿ/ಆರ್ಥಿಕ ಮುಂಗಡ ಪತ್ರ ನಿಯೋಜನೆ | ಖರ್ಚು |
| 2009–10 | 80 | 77.93 |
| 2010–11 | 250 | 132.49 |
| 2011–12 | 250 | 174.16* |

* ಫೆಬ್ರವರಿ 29, 2012 ಅಂತ್ಯದವರೆಗೆ

ಆ) ಖರ್ಚು ಮಾಡಿರುವ ಅನುದಾನದಲ್ಲಿ ರಾಜ್ಯ ಸರ್ಕಾರದ ಹಾಗೂ ಸ್ಥಳೀಯ ಸಂಸ್ಥೆಗಳ ಪಾಲು ಇಂತಿದೆ.

| (ರೂ. ಕೋಟಿ) | | | |
|---|---|---|---|
| ವರ್ಷ | ಕೇಂದ್ರ ಸರ್ಕಾರದ ಪಾಲು* | ರಾಜ್ಯ ಸರ್ಕಾರ ಪಾಲು | ಸ್ಥಳೀಯ ಸಂಸ್ಥೆಯ ಪಾಲು |
| 2009–10 | – | 15.22 | 1.81 |
| 2010–11 | – | 25.66 | 4.17 |
| 2011–12 | – | 33.70 | 5.64 |

* ಈ ಯೋಜನೆ ಕೇಂದ್ರ ಸರ್ಕಾರದ ಅನುದಾನವನ್ನು ಒಳಗೊಂಡಿರುವುದಿಲ್ಲ.

ಇ) & **ಈ)** ಕೆ.ಎಂ.ಆರ್.ಪಿ. ಯೋಜನೆಯಡಿಯಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ಮತ್ತು ಟಿ.ನರಸೀಪುರ ಪಟ್ಟಣಗಳು ಒಳಗೊಂಡಿದ್ದು ಮತ್ತು ಚಾಮರಾಜನಗರ ಜಿಲ್ಲೆಯ ವಿವರಗಳು ಈ ಕೆಳಕಂಡಂತಿದೆ.

| ಮೈಸೂರು ಜಿಲ್ಲೆ | ಉಪಯೋಜನೆ | ಯೋಜನಾ ಮೊತ್ತ (ರೂ. ಲಕ್ಷ) | ಖರ್ಚಾಗಿರುವ ಮೊತ್ತ (ರೂ. ಲಕ್ಷ) |
|---|---|---|---|
| ನಂಜನಗೂಡು | ನೀರು ಸರಬರಾಜು ಯೋಜನೆ | 920.00 | – |
| ಟಿ. ನರಸಿಪುರ | ಮಳೆ ನೀರು ಚರಂಡಿ | 144.00 | – |
| | ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಉನ್ನತೀಕರಣ. | 56.00 | – |
| | ಕಡಿಮೆ ವೆಚ್ಚ ಶೌಚಾಲಯ (75 ಸಂಖ್ಯೆ–ರೂ.15 ಲಕ್ಷ) | | 7.94 |
| **ಚಾಮರಾಜನಗರ ಜಿಲ್ಲೆ** | | | |
| ಕೊಳ್ಳೆಗಾಲ | ನೀರು ಸರಬರಾಜು ಯೋಜನೆ | 1086.00 | – |

**ಪ್ರಸ್ತುತ ಸ್ಥಿತಿ:**

**ಮೈಸೂರು ಜಿಲ್ಲೆ:**

ನಂಜನಗೂಡು: ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ, ಯೋಜನಾ ಸಮಾಲೋಚಕರು ಕರಡು ವಿವರಣಾತ್ಮಕ ಯೋಜನಾ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯ ಪರೀಕ್ಷಣೆ ಕಾರ್ಯ

ಪ್ರಗತಿಯಲ್ಲಿರುತ್ತದೆ. ಆದಕಾರಣ, ಈ ಯೋಜನೆಗೆ ಇದುವರೆಗೂ ಹಣ ಬಿಡುಗಡೆಗೊಂಡಿರುವುದಿಲ್ಲ.

**ಟಿ. ನರಸೀಪುರ:**

* ಮಳೆ ನೀರು ಚರಂಡಿ ಕಾಮಗಾರಿಗೆ ಸಂಬಂಧಿಸಿದಂತೆ ಯೋಜನಾ ಸಮಾಲೋಚಕರು ತಯಾರಿಸಿರುವ ವಿವರಣಾತ್ಮಕ ಯೋಜನಾ ವರದಿಯನ್ನು ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯಲ್ಲಿ ಈಗಾಗಲೇ ಮಂಡಿಸಲಾಗಿತ್ತು. ಆದರೆ, ಯೋಜನಾ ವರದಿಯಲ್ಲಿ ಕೆಲವು ನ್ಯೂನ್ಯತೆಗಳನ್ನು ಗಮನಿಸಿ ಸರಿಪಡಿಸಲು ಸೂಚಿಸಲಾಗಿರುತ್ತದೆ. ಸದರಿ ವರದಿಯನ್ನು ಮತ್ತೊಮ್ಮೆ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯ ಅನುಮೋದನೆ ಪಡೆಯುವ ಪ್ರಕ್ರಿಯೆಯಲ್ಲಿರುತ್ತದೆ. ಆದಕಾರಣ, ಈ ಯೋಜನೆಗೆ ಹಣ ಬಿಡುಗಡೆಗೊಂಡಿರುವುದಿಲ್ಲ.
* ಕಡಿಮೆ ವೆಚ್ಚದ ಶೌಚಾಲಯ ಕಾಮಗಾರಿ ನಿರ್ಮಾಣವು ಪೂರ್ಣಗೊಂಡಿರುತ್ತದೆ. ಈಗಾಗಲೇ ಸದರಿ ಯೋಜನೆಗೆ ರೂ.7.94 ಲಕ್ಷಗಳು ಬಿಡುಗಡೆಗೊಂಡಿದ್ದು, ಅಂತಿಮ ಬಿಲ್ ಪಾವತಿಸುವ ಪ್ರಕ್ರಿಯೆಯಲ್ಲಿರುತ್ತದೆ.

**ಚಾಮರಾಜನಗರ ಜಿಲ್ಲೆ:**

* ಕೊಳ್ಳೇಗಾಲ: ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಸಮಾಲೋಚಕರು ತಯಾರಿಸಿರುವ ವಿವರಣಾತ್ಮಕ ಯೋಜನಾ ವರದಿಯನ್ನು ತಾಂತ್ರಿಕ ಸಮಿತಿಯ ಅನುಮೋದನೆಗೆ ಸಲ್ಲಿಸಲಾಗುತ್ತಿದ್ದು, ಶೀಘ್ರದಲ್ಲಿಯೇ ಟೆಂಡರ್ ಕರೆಯಲಾಗುವುದು.

**ಉ)** ಪ್ರಸಕ್ತ ಸಾಲಿನಲ್ಲಿ 2011-12 ಮರ್ಚ್ ಅಂತ್ಯದ ವೇಳೆಗೆ ಟಿ. ನರಸೀಪುರ ಪಟ್ಟಣದಲ್ಲಿ ತೆಗೆದು ಕೊಂಡಿರುವ, ಕಡಿಮೆ ವೆಚ್ಚ ಶೌಚಾಲಯ ಕಾಮಗಾರಿಗೆ ಸಂಬಂಧಿಸಿದಂತೆ, ರೂ.7.06 ಲಕ್ಷ ಹಂಚಿಕೆ ಮಾಡಬೇಕಾಗಿರುತ್ತದೆ. ಕೊಳ್ಳೇಗಾಲ ಹಾಗೂ ನಂಜನಗೂಡು

ಪಟ್ಟಣಗಳಲ್ಲಿ ತೆಗೆದುಕೊಂಡಿರುವ ನೀರು ಸರಬರಾಜು ಯೋಜನೆಗಳಿಗೆ ವಿವರಣಾತ್ಮಕ ಯೋಜನಾ ವರದಿ ತಯಾರಿಸುವ ಪ್ರಕ್ರಿಯೆ ಜಾರಿಯಲ್ಲಿರುವುದರಿಂದ ಸದರಿ ಪಟ್ಟಣಗಳಿಗೆ ಯಾವುದೇ ಹಣ ಹಂಚಿಕೆ ಬಾಕಿ ಇರುವುದಿಲ್ಲ.

**ವಿವಿಧ ಯೋಜನೆಗಳಲ್ಲಿ ಕೊರೆದಿರುವ ಕೊಳವೆಬಾವಿಗಳ ಬಗ್ಗೆ**

**47; ಶ್ರೀ ಮಾನೆ ಶ್ರೀನಿವಾಸ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ 2008 ರಿಂದ ಪ್ರಸಕ್ತ ವರ್ಷದ ತನಕ ವಿವಿಧ ಯೋಜನೆಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

**ಆ)** ಕೊರೆದ ಬಾವಿಗಳಲ್ಲಿ ಎಷ್ಟು ಬಾವಿಗಳಿಗೆ ನೀರು ದೊರಕಿದೆ ಮತ್ತು ಎಷ್ಟು ಬಾವಿಗಳಿಗೆ ನೀರು ದೊರಕಿಲ್ಲ? (ವಿವರ ನೀಡುವುದು).

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

**ಅ)** ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ 2008 ರಿಂದ ಪ್ರಸಕ್ತ ವರ್ಷದ ತನಕ ವಿವಿಧ ಯೋಜನೆಗಳಲ್ಲಿ ಕೊರೆದ (ಟಾಸ್ಕ್‌ಫೋರ್ಸ್ ಕಾಮಗಾರಿಗಳನ್ನು ಹೊರತುಪಡಿಸಿ) ಕೊಳವೆ ಬಾವಿಗಳ ವಿವರ ಈ ಕೆಳಕಂಡಂತಿವೆ:

| ವರ್ಷ | ಧಾರವಾಡ | ಹಾವೇರಿ | ಗದಗ |
|---|---|---|---|
| 2008–09 | 150 | 88 | 311 |
| 2009–10 | 68 | 110 | 204 |
| 2010–11 | 58 | 299 | 176 |
| 2011–12 | 107 | 107 | 222 |
| **ಒಟ್ಟು** | **383** | **604** | **913** |

ಆ) ಕೊರೆದ ಬಾವಿಗಳಲ್ಲಿ ನೀರು ದೊರಕಿರುವ ವಿವರಗಳು ಈ ಕೆಳಕಂಡಂತಿವೆ:

| ವರ್ಷ | ಧಾರವಾಡ | ಹಾವೇರಿ | ಗದಗ |
|---|---|---|---|
| 2008–09 | 120 | 79 | 279 |
| 2009–10 | 55 | 90 | 185 |
| 2010–11 | 44 | 275 | 158 |
| 2011–12 | 84 | 96 | 193 |
| ಒಟ್ಟು | **303** | **540** | **815** |

ಕೊರೆದ ಬಾವಿಗಳಲ್ಲಿ ನೀರು ದೊರಕದಿರುವ ವಿವರಗಳು ಈ ಕೆಳಕಂಡಂತಿವೆ:

| ವರ್ಷ | ಧಾರವಾಡ | ಹಾವೇರಿ | ಗದಗ |
|---|---|---|---|
| 2008–09 | 30 | 9 | 32 |
| 2009–10 | 13 | 20 | 19 |
| 2010–11 | 14 | 24 | 18 |
| 2011–12 | 23 | 11 | 29 |
| ಒಟ್ಟು | **80** | **64** | **98** |

## ಹಾಪ್‌ಕಾಮ್ಸ್ ಆಡಿಟ್ ನಡೆಸುವ ಬಗ್ಗೆ

## 48; ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಹಾಪ್‌ಕಾಮ್ಸ್ ಆಡಿಟ್ ಅನ್ನು ಮಾಡಲಾಗಿದೆಯೇ, ಇಲ್ಲವಾದರೆ ಅದಕ್ಕೆ ಕಾರಣಗಳೇನು?

ಆ) ಹಾಪ್ ಕಾಮ್ಸ್ ಆಡಿಟ್‌ನ್ನು ಎಷ್ಟು ವರ್ಷಗಳಿಂದ ಮಾಡಿರುವುದಿಲ್ಲ? ವಿವರ ನೀಡುವುದು.

**ಶ್ರೀ ಎಸ್.ಎ.ರವೀಂದ್ರನಾಥ್ (ಸಕ್ಕರೆ ಮತ್ತು ತೋಟಗಾರಿಕೆ ಸಚಿವರು)**

ಅ) ಹೌದು, ಮಾಡಲಾಗಿದೆ. ಹಾಪ್‌ಕಾಮ್ಸ್, ಬೆಂಗಳೂರು ಸಂಸ್ಥೆಯ ಲೆಕ್ಕಪರಿಶೋಧನೆ ಕಾರ್ಯವನ್ನು ಕಾಲಕಾಲಕ್ಕೆ ಮಾಡಿಸಲಾಗುತ್ತಿದೆ. 2010–11ನೇ ಸಾಲಿನ ಲೆಕ್ಕ ಪರಿಶೋಧನೆಯು ಪೂರ್ಣಗೊಂಡಿದ್ದು, ಆಡಿಟ್ ವರದಿಯನ್ನು ತಯಾರಿಸಲಾಗಿದೆ. 2011–12ನೇ ಸಾಲಿನ ಲೆಕ್ಕ ಪರಿಶೋಧನಾ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಆ) ಉದ್ಭವಿಸುವುದಿಲ್ಲ.

**ಅಭಿವೃದ್ಧಿ ಪರಿಶೀಲನಾ ಸಭೆಗೆ ಅಧಿಕಾರಿಗಳನ್ನು ಆಹ್ವಾನಿಸುವ ಬಗ್ಗೆ**

**49; ಶ್ರೀ ಮಾನೆ ಶ್ರೀನಿವಾಸ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ರಾಜ್ಯದ ಎಲ್ಲಾ ಜಿಲ್ಲೆಯ ಅಭಿವೃದ್ಧಿ ಪರಿಶೀಲನಾ ಸಭೆಗಳಲ್ಲಿ ಜಿಲ್ಲೆಗಳ ಅಭಿವೃದ್ಧಿ ವಿಷಯದೊಳಗೆ ಸಂಬಂಧವಿರುವ ಪಟ್ಟಣ ಪಂಚಾಯತಿ, ಪುರಸಭೆ, ನಗರಸಭೆ ಮತ್ತು ಮಹಾನಗರ ಪಾಲಿಕೆಯ ಜನರಪ್ರತಿನಿಧಿಗಳಿಗೆ ಆಹ್ವಾನಿಸದಿರಲು ಕಾರಣವೇನು;

ಆ) ಒಂದು ವೇಳೆ ಆಹ್ವಾನಿಸಿದರೆ ಏನಾದರು ಸಮಸ್ಯೆ ಉದ್ಭವಿಸುತ್ತದೆಯೇ ಇಲ್ಲವಾದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿರುವುದು?

**ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ**

ಅ) ಜಿಲ್ಲಾ ಅಭಿವೃದ್ಧಿ ಸಮಿತಿಗಳಲ್ಲಿನ ಸದಸ್ಯರುಗಳನ್ನು ಮಾತ್ರ ಆಹ್ವಾನಿಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

## ಕೋಲಾರದಲ್ಲಿ ನೂತನ ಕಾರ್ಯಸೌಧ ನಿರ್ಮಾಣ ಕುರಿತು

**75; ಶ್ರೀ ವಿ.ಆರ್.ಸುದರ್ಶನ್ (ವಿಧಾಸಭೆಯಿಂದ ಚುನಾಯಿತರಾದವರು)**

ಅ) ಕೋಲಾರದ ಜಿಲ್ಲಾಧಿಕಾರಿಯವರ ಕಛೇರಿಯು ಶಿಥಿಲಗೊಂಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಜಿಲ್ಲಾ ಜನಪ್ರತಿನಿಧಿಗಳು ಹಲವಾರು ಬಾರಿ ಸರ್ಕಾರದ ಗಮನ ಸೆಳೆದು ಜಿಲ್ಲೆಯಲ್ಲಿ ಜಿಲ್ಲಾ ಸಂಕೀರ್ಣ ಕಾರ್ಯಸೌಧವನ್ನು ನಿರ್ಮಿಸುವಂತೆ ಒತ್ತಾಯಿಸಿರುವ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ.

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)**

ಅ) ಬಂದಿದೆ.

ಆ) ಕೋಲಾರ ನಗರದಲ್ಲಿ ಜಿಲ್ಲಾ ಕಛೇರಿಗಳ ಸಂಕೀರ್ಣ ನಿರ್ಮಿಸಲು ಕೋಲಾರ ತಾಲ್ಲೂಕು ಕಸಬಾ ಹೊಬಳಿ ಗಾಜಲದಿನ್ನೆ ಗ್ರಾಮದ ಸರ್ವೇ ನಂ 12ರಲ್ಲಿ 9.30 ಎಕರೆ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 71ರ ಅನ್ವಯ ಕಛೇರಿ ಸಂಕೀರ್ಣಕ್ಕಾಗಿ ಸರ್ಕಾರದಿಂದ ಅನುಮೋದನೆ ನೀಡಿದ್ದ ಮೇರೆಗೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ ಇವರು ಒಟ್ಟಾರೆ 36 ವಿವಿಧ ಇಲಾಖೆಗಳನ್ನು ಒಳಗೊಂಡ ಕಛೇರಿ ಸಂಕೀರ್ಣ ನಿರ್ಮಿಸಲು ರೂ.3,500.00 ಲಕ್ಷಗಳ ರೇಖಾ ಅಂದಾಜು ಪಟ್ಟಿಯನ್ನು ವಿವರವಾದ ಯೋಜನಾ ವರದಿಯೊಂದಿ ಸಿದ್ಧಪಡಿಸಿ ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ದಿ:05.03.2012ರಂದು ಸಲ್ಲಿಸಿರುತ್ತಾರೆ. ಸದರಿ ಅಂದಾಜು ಪಟ್ಟಿ ಮತ್ತು ಯೋಜನಾ ವರದಿಯನ್ನು ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರಿಗೆ ದಿ:16.03.2012ರಂದು ಸಲ್ಲಿಸಿ ಆಡಳಿತಾತ್ಮಕ ಅನುಮೋದನೆ ಹಾಗೂ 2012ನೇ ಸಾಲಿನ ಆಯವ್ಯಯದಲ್ಲಿ ರೂ.3,500.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿಸಿ ಕೊಡುವಂತೆ ಜಿಲ್ಲಾಧಿಕಾರಿಗಳು, ಕೋಲಾರ ಇವರು ಕೋರಿರುತ್ತಾರೆ.

## ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ರಸ್ತೆ ದುರಸ್ತಿ ಕಾಮಗಾರಿ ದುರುಪಯೋಗದ ಬಗ್ಗೆ

### 100; ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ರಸ್ತೆಗಳು ಹದಗೆಟ್ಟಿದ್ದು, ಅವುಗಳ ದುರಸ್ತಿ ಕಾರ್ಯ ನಿಯಮಗಳ ಪ್ರಕಾರ ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಾಮಗಾರಿಗಳನ್ನು ನಿರ್ವಹಿಸದೇ ಹಣ ಪಡೆಯುತ್ತಿರುವ ಗುತ್ತಿಗೆದಾರರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ?

ಇ) ರಸ್ತೆ ದುರಸ್ತಿ ಕಾರ್ಯ ನಡೆದಿರುವ ಬಗ್ಗೆ ತಾಲ್ಲೂಕುವಾರು ವಿವರ ನೀಡುವುದು?

### ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಅ) ಇಲ್ಲ.

ಆ) ಲಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗಲದಲ್ಲಿ ಯಾವುದೇ ಕಾಮಗಾರಿಗಳನ್ನು ನಿರ್ವಹಿಸದೇ ಯಾವ ಗುತ್ತಿಗೆದಾರರಿಗೂ ಹಣವನ್ನು ಪಾವತಿ ಮಾಡಿರುವುದಿಲ್ಲ. ಆದುದರಿಂದ ಕಾಮಗಾರಿಗಳನ್ನು ನಿರ್ವಹಿಸದೇ ಹಣ ಪಡೆಯುತ್ತಿರುವ ಗುತ್ತಿಗೆದಾರರ ಮೇಲೆ ಸರ್ಕಾರವು ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಜಿಲ್ಲಾ ಮುಖ್ಯ ರಸ್ತೆ ದುರಸ್ತಿ ವಿವರಗಳು ಅನುಬಂಧ–1ರಲ್ಲಿ ಮತ್ತು ರಾಜ್ಯ ಹೆದ್ದಾರಿ ದುರಸ್ತಿ ವಿವರಗಳನ್ನು ಅನುಬಂಧ–2 ರಲ್ಲಿ ತಾಲ್ಲೂಕುವಾರು ಲಗತ್ತಿಸಿದೆ.

## ಅನುಬಂಧ – 1 – ಎಲ್‌ಸಿಕ್ಯೂ – 100

## ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗದ ವ್ಯಾಪ್ತಿಯಲ್ಲಿ 2011–12ನೇ ಸಾಲಿನ 3054–13ನೇ ಹಣಕಾಸು ಯೋಜನೆಯಡಿಯಲ್ಲಿ

## ಜಿಲ್ಲಾ ಮುಖ್ಯ ರಸ್ತೆಗಳನ್ನು ದುರಸ್ತಿ ಪಡಿಸಿರುವ ವಿವರಗಳು

| ಕ್ರ. ಸಂ. | ತಾಲ್ಲೂಕು | ದುರಸ್ತಿ ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ದುರಸ್ತಿ ಯೋಜಿತ ಉದ್ದ (ಕಿ.ಮೀ. ನಲ್ಲಿ) | ದುರಸ್ತಿ ಪಡಿಸಿದ ಉದ್ದ (ಕಿ.ಮೀ ನಲ್ಲಿ) | ಮಾರ್ಚ್ 15, 2012ರ ವರೆಗೆ ವೆಚ್ಚ (ರೂ. ಲಕ್ಷಗಳಲ್ಲಿ) | ಷರಾ |
|---|---|---|---|---|---|---|---|
| **1** | **2** | **3** | **4** | **5** | **6** | **7** | **8** |
| 1 | ಹೊಸಕೋಟೆ | 29 | 49.34 | 129.15 | 129.15 | 19.25 | |
| 2 | ದೇವನಹಳ್ಳಿ | 9 | 25.00 | 22.11 | 22.11 | 6.98 | |
| 3 | ನೆಲಮಂಗಲ | 30 | 33.20 | 68.00 | 68.00 | – | |
| 4 | ದೊಡ್ಡಬಳ್ಳಾಪುರ | 19 | 73.44 | 198.50 | 198.50 | 34.42 | |
| | **ಒಟ್ಟು** | **90** | **180.98** | **417.76** | **417.76** | **60.65** | |

## ಅನುಬಂಧ – 2 – ಎಲ್‌ಸಿಕ್ಯೂ – 100

## ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗದ ವ್ಯಾಪ್ತಿಯಲ್ಲಿ 2011–12ನೇ ಸಾಲಿನ 3054–ರಾಜ್ಯ ಹೆದ್ದಾರಿ ಯೋಜನೆಯಡಿಯಲ್ಲಿ

## ರಾಜ್ಯ ಹೆದ್ದಾರಿ ರಸ್ತೆಗಳನ್ನು ದುರಸ್ತಿ ಪಡಿಸಿರುವ ವಿವರಗಳು

| ಕ್ರ. ಸಂ. | ತಾಲ್ಲೂಕು | ದುರಸ್ತಿ ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ದುರಸ್ತಿ ಯೋಜಿತ ಉದ್ದ (ಕಿ.ಮೀ. ನಲ್ಲಿ) | ದುರಸ್ತಿ ಪಡಿಸಿದ ಉದ್ದ (ಕಿ.ಮೀ ನಲ್ಲಿ) | ಮಾರ್ಚ್ 15, 2012ರ ವರೆಗೆ ವೆಚ್ಚ (ರೂ. ಲಕ್ಷಗಳಲ್ಲಿ) | ಷರಾ |
|---|---|---|---|---|---|---|---|
| **1** | **2** | **3** | **4** | **5** | **6** | **7** | **8** |
| 1 | ಹೊಸಕೋಟೆ | 6 | 9.16 | 21.04 | 21.04 | – | |
| 2 | ದೇವನಹಳ್ಳಿ | 5 | 9.85 | 29.00 | 29.00 | – | |
| 3 | ನೆಲಮಂಗಲ | 2 | 9.58 | 2.00 | 2.00 | – | |
| 4 | ದೊಡ್ಡಬಳ್ಳಾಪುರ | 2 | 43.66 | 110.64 | 110.64 | – | |
| | **ಒಟ್ಟು** | **18** | **72.55** | **162.68** | **162.68** | | |

**ಅಕ್ರಮ ಮಧ್ಯದ ಹಾವಳಿ ಹೆಚ್ಚಾಗಿರುವ ಕುರಿತು**

**105; ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲುಕಿನಲ್ಲಿ ಥರ್ಡ್ಸ್ ಅಕ್ರಮ ಮಧ್ಯ ತಯಾರಿಕೆ ಮತ್ತು ಮಾರಾಟದ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದನ್ನು ತಡೆಯುವಲ್ಲಿ ಸರ್ಕಾರ ಯಾವ ಕ್ರಮ ಕಯಗೊಂಡಿದೆ;

ಆ) ಥರ್ಡ್ಸ್ ಅಕ್ರಮ ಮಧ್ಯದ ತಯಾರಿಕೆ ಹಾಗೂ ಮಾರಾಟದಿಂದ ಸರ್ಕಾರದ ಆದಾಯ ಸೋರಿಕೆ ಹಾಗೂ ತೆರಿಗೆ ವಂಚನೆಗಿಂತ ಜನಸಾಮಾನ್ಯ ಅಮಾಯಕ ರೈತರ, ಆರೋಗ್ಯ ಹಾಳಾಗುತ್ತಿರುವುದರಿಂದ ಇದನ್ನು ಸಂಪೂರ್ಣವಾಗಿ ನಿಷೇಧ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

**ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು)**

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ ಥರ್ಡ್ಸ್ (ನಕಲಿ) ಮದ್ಯ ತಯಾರಿಕೆ ಪ್ರಕರಣಗಳು ವರದಿಯಾಗಿರುವುದಿಲ್ಲ. ಆದರೆ ಅಕ್ರಮ ಮದ್ಯ ಮಾರಾಟ ಪ್ರಕರಣಗಳು 2011–12ನೇ ಸಾಲಿನಲ್ಲಿ ವರದಿಯಾಗಿರುತ್ತದೆ.

2011–12ನೇ ಆರ್ಥಿಕ ಸಾಲಿನಲ್ಲಿ ಒಟ್ಟು 54 ಪ್ರಕರಣಗಳನ್ನು ದಾಖಲಿಸಿ, 31 ಘೋರ ಹಾಗೂ 28 ಸಾಮಾನ್ಯ ಮೊಕದ್ದಮೆಗಳನ್ನು ದಾಖಲು ಮಾಡಿ 14 ಜನ ಅಪರಾಧಿಗಳನ್ನು ದಸ್ತಗಿರಿ ಮಾಡಿ, 3–030 ಲೀಟರ್ ಮದ್ಯವನ್ನು ಜಪ್ತುಮಾಡಿಸಲಾಗಿರುತ್ತದೆ.

ನೆಲಮಂಗಲ ತಾಲ್ಲೂಕಿನಾದ್ಯಂತ 8 ರೂ.ಗಳನ್ನು ಗುರುತಿಸಿ, 50 ಪಾಯಿಂಟ್ ಪುಸ್ತಕಗಳನ್ನು ನಿರ್ವಹಿಸಿದೆ. ತಾಲ್ಲೂಕಿನಲ್ಲಿ ಅಬಕಾರಿ ಅಕ್ರಮಗಳಲ್ಲಿ ಭಾಗಿಯಾಗಿರುವ 104 ಹಳೆಯ ಆರೋಪಿಗಳಿದ್ದು, ಇದರಲ್ಲಿ 85 ಜನ ಆರೋಪಿಗಳನ್ನು ಗುರುತಿಸಿ ಸದರಿಯವರ, ಚಲನವಲನಗಳನ್ನು ಗಮನಿಸಲಾಗುತ್ತಿದೆ. ತಾಲ್ಲೂಕಿನಲ್ಲಿ ಒಟ್ಟು 22

ಗ್ರಾಮ ಪಂಚಾಯತಿಗಳಿದ್ದು, ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಸಭೆಗಳನ್ನು ನಡೆಸಲಾಗುತ್ತಿದೆ.

ಅಕ್ರಮ/ಅನಧಿಕೃತವಾಗಿ ಮದ್ಯವನ್ನು ಸಾಗಾಣಿಕೆ, ಸಂಗ್ರಹ ಹಾಗೂ ಮಾರಾಟ ಮಾಡುವುದನ್ನು ತಡೆಗಟ್ಟುವಂತೆ ಅಧಿಕಾರಿಗಳಿಗೆ ಸುತ್ತೋಲೆ/ಪತ್ರಗಳ ಮೂಲಕ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿರುತ್ತದೆ. ಅಕ್ರಮ/ಅನಧಿಕೃತವಾಗಿ ಮದ್ಯವನ್ನು ಸಾಗಾಣಿಕೆ, ಸಂಗ್ರಹ ಹಾಗೂ ಮಾರಾಟ ಪ್ರಕರಣಗಳನ್ನು ತಡೆಗಟ್ಟಲು ಸಾರ್ವಜನಿಕರಿಗೆ ಕಳ್ಳಭಟ್ಟಿ ಹಾಗೂ ನಕಲಿ ಮದ್ಯ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜನ ಜಾಗೃತಿ ಮೂಡಿಸಲಾಗಿರುತ್ತದೆ. ಜಾರಿ ಸಿಬ್ಬಂದಿ ಗ್ರಾಮ ಸಭೆಗಳನ್ನು ನಡೆಸುತ್ತಿದ್ದು, ಸದರಿ ಸಭೆಗಳಲ್ಲಿ ಸ್ತ್ರೀ ಶಕ್ತಿ ಸಂಘಗಳು, ಗ್ರಾಮ ಪಂಚಾಯ್ತಿ ಹಾಗೂ ಕಂದಾಯ ಅಧಿಕಾರಿಗಳಿಗೆ ಜಮೀನು/ಕಟ್ಟಡಗಳ ಮಾಲೀಕರುಗಳಿಗೆ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 1965ರ ನಿಯಮ 50 ರಂತೆ ಮಾಹಿತಿ ನೀಡಲು ಕೋರಲಾಗಿದೆ.

ಆ) ಥರ್ಡ್ಸ್ (ನಕಲಿ) / ಅಕ್ರಮ ಮದ್ಯದ ತಯಾರಿಕೆ ಹಾಗೂ ಮಾರಾಟದಲ್ಲಿ ಸರ್ಕಾರದ ಆದಾಯ ಸೋರಿಕೆಯಾಗುತ್ತದೆ. ಥರ್ಡ್ಸ್ (ನಕಲಿ)/ ಅಕ್ರಮ ಮದ್ಯದ ತಯಾರಿಕೆ ಹಾಗೂ ಮಾರಾಟ ಮಾಡುವುದು ಕಲಂ 32, ಅಬಕಾರಿ ಕಾಯ್ದೆ 1965 ರಂತೆ 5 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ರೂ.50,000/- ವರೆಗಿನ ದಂಡನೆಗೆ ಒಳಪಡುವ ಅಪರಾಧವಾಗಿದ್ದು, ಅಂತಹ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.

**ಚಾಮರಾಜನಗರ ಜಿಲ್ಲೆಯಲ್ಲಿನ ಸುವರ್ಣಗ್ರಾಮಗಳ ಬಗ್ಗೆ**

**103; ಶ್ರೀ ಕೆ.ಆರ್. ಮಲ್ಲಿಕಾರ್ಜುನಪ್ಪ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

ಅ) ಚಾಮರಾಜನಗರ ಜಿಲ್ಲೆಯಲ್ಲಿನ ಯಾವ ಗ್ರಾಮಗಳನ್ನು ಸುವರ್ಣ ಯೋಜನೆಯಡಿ ತರಲಾಗಿದೆ; (ತಾಲೂಕುವಾರು ವಿವರ ನೀಡುವುದು).

ಆ) ಗ್ರಾಮಗಳನ್ನು ಸುವರ್ಣ ಯೋಜನೆಯಡಿ ತರಲು ಮಾನದಂಡವೇನು; ಒದಗಿಸುವ ಅನುದಾನದ ಮೊತ್ತ ಎಷ್ಟು;

ಇ) ಸುವರ್ಣ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳ ವಿವರ ಒದಗಿಸುವುದು?

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು)**

ಅ) ಚಾಮರಾಜ ನಗರ ಜಿಲ್ಲೆಯಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ 3ನೇ ಹಂತದಡಿ 25 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ತಾಲ್ಲೂಕುವಾರು ಆಯ್ಕೆಯಾದ ಗ್ರಾಮಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ರಾಜ್ಯದ ಒಟ್ಟು ಗ್ರಾಮೀಣ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಗನುಗುಣವಾಗಿ ತಾಲ್ಲೂಕಿನ ಜನಸಂಖ್ಯೆನ್ನು ನಿಗದಿಪಡಿಸಲಾಗಿದೆ. ಈ ರೀತಿ ನಿಗದಿಪಡಿಸಿದ ಜನಸಂಖ್ಯೆಗೊಳಪಟ್ಟು ಸಾಮಾನ್ಯವಾಗಿ 2000 ರಿಂದ 8000 ಜನಸಂಖ್ಯೆಯಿರುವ ಗ್ರಾಮಗಳನ್ನು ಆಯ್ಕೆ ಮಾಡಲಾಗುತ್ತಿದೆ. ಆಯ್ಕೆಯಾದ ಗ್ರಾಮಗಳಿಗೆ ಸುಮಾರು ರೂ.2500 ತಲಾನುದಾನದಂತೆ ಅನುದಾನ ಹಂಚಿಕೆ ಮಾಡಲಾಗುತ್ತಿದೆ.

ಇ) ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳ ಗ್ರಾಮೀಣ ಜನಸಂಖ್ಯೆಗನುಗುಣವಾಗಿ ನಿಗದಿ ಪಡಿಸಿರುವ ಅನುದಾನದಲ್ಲಿ ರಸ್ತೆ, ಚರಂಡಿ, ಅಂಗನವಾಡಿ ಕಟ್ಟಡ, ಸಮುದಾಯ ಭವನ ಕಟ್ಟಡ ಮತ್ತು ತ್ಯಾಜ್ಯವಸ್ತು ವಿಲೇವಾರಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

# ಅನುಬಂಧ

| ಕ್ರ.ಸಂ. | ಆಯ್ಕೆಯಾದ ಗ್ರಾಮಗಳ ಹೆಸರು |
|---|---|
| | ಚಾಮರಾಜನಗರ ತಾಲ್ಲೂಕು |
| 1 | ಶಿವಪುರ |
| 2 | ಮಸಣಾಪುರ |
| 3 | ಯಾನಗಳ್ಳಿ |
| 4 | ಹೊಂಗನೂರು |
| 5 | ಮಂಗಲ |
| 6 | ಕೂಡ್ಲೂರು |
| 7 | ಕೊತ್ತಲವಾಡಿ |
| 8 | ಬಾಗಳಿ |
| 9 | ಚಾಟಿಪುರ |
| 10 | ಕೆಂಗಾಕಿ |
| **ಯಳಂದೂರು ತಾಲ್ಲೂಕು** | |
| 11 | ಯರಿಯುರು |
| 12 | ಹೊನ್ನೂರು |
| 13 | ಕೊಮಾರನಪುರ |
| | ಗುಂಡ್ಲುಪೇಟೆ ತಾಲ್ಲೂಕು |
| 14 | ಅಣ್ಣೂರು |

| | |
|---|---|
| 15 | ಯಡವಿನಹಳ್ಳಿ |
| 16 | ಮೂಕಹಳ್ಳಿ |
| 17 | ಕನ್ನೇಗಾಲ |
| 18 | ರಾಘವಾಪುರ |
| 19 | ಕಗ್ಗಲ |
| | ಕೊಳ್ಳೇಗಾಲ ತಾಲ್ಲೂಕು |
| 20 | ಬಂಡಳ್ಳಿ |
| 21 | ತೆಳ್ಳನೂರು |
| 22 | ಶಾಗ್ಯಂ |
| 23 | ಲೊಕ್ಕನಹಳ್ಳಿ |
| 24 | ಮುಳ್ಳೂರು |
| 25 | ಸಿದ್ದಯ್ಯನಪುರ |

**ಸರ್ಕಾರಿ ಹಾಗೂ ಖಾಸಗಿ ಮೀನು ಮರಿ ಉತ್ಪಾದನಾ ಕೇಂದ್ರಗಳ ಬಗ್ಗೆ**

**125; ಶ್ರೀ ಆರ್.ವಿ.ವೆಂಕಟೇಶ್ (ವಿಧಾನಸಭಾ ಕ್ಷೇತ್ರ)**

**ಅ)** ತರಕಾರಿ ಬೆಳೆಯಲು ಅನುಕೂಲವಾಗುವಂತೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ನೆರವಿನೊಂದಿಗೆ ಗ್ರೀನ್‌ಹೌಸ್ (ನೆರಳು ಮನೆ) ನಿರ್ಮಿಸುವ ಯೋಜನೆ ಆರಂಭಿಸಿದೆಯೇ?

**ಆ)** ಆರಂಭಿಸಿದ್ದರೆ, ಈ ಯೋಜನೆಯ ವಿವರಗಳನ್ನು ನೀಡುವುದು ಹಾಗೂ ಕಳೆದ 3 ವರ್ಷಗಳಿಂದ ಎಷ್ಟು ಜನ ರೈತರಿಗೆ ಸಬ್ಸಿಡಿ ನೀಡಲಾಗಿದೆ?

ಇ) ಇಲಾಖೆಯವರು ಈ ಯೋಜನೆಯಡಿ ಉನ್ನತ ಮಟ್ಟದ ಗ್ರೀನ್ ಹೌಸ್‌ಗಳಿಗೆ ಮಾತ್ರ ಸಬ್ಸಿಡಿ ನೀಡಿ ಸಣ್ಣ ರೈತರು ನಿರ್ಮಿಸಿರುವ ಕೆಳ ಮಟ್ಟದ ಗ್ರೀನ್ ಹೌಸ್‌ಗಳಿಗೆ ಸಬ್ಸಿಡಿ ನಿರಾಕರಿಸುತ್ತಿರುವುದು ನಿಜವೆ; ಈ ತಾರತಮ್ಯ ಹೋಗಲಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

**ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು)**

ಅ) ಹೌದು, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ನೆರವಿನೊಂದಿಗೆ ಗ್ರೀನ್‌ಹೌಸ್ (ನೆರಳು ಮನೆ) ಯೋಜನೆ ಆರಂಭಿಸಿದೆ.

ಆ) ಸದರಿ ಯೋಜನೆಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಇಲ್ಲಿಯ ವರೆಗೆ ಕಳೆದ 3 ವರ್ಷಗಳಿಂದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ 475 ಜನ ರೈತರಿಗೆ ಹಸಿರು ಮನೆ ನಿರ್ಮಾಣಕ್ಕೆ, 1330 ಜನ ರೈತರಿಗೆ ನೆರಳು ಪರದೆ ನಿರ್ಮಾಣಕ್ಕೆ ಸಬ್ಸಿಡಿ ನೀಡಲಾಗಿದೆ ಹಾಗೂ 2011–12ನೇ ಸಾಲಿನಿಂದ 18 ಜನ ರೈತರಿಗೆ ಹಸಿರು ಮನೆ ನಿರ್ಮಾಣಕ್ಕೆ Support to Vegetable Initiatives for Urban Clusters ಕಾರ್ಯಕ್ರಮದಡಿ ಸಬ್ಸಿಡಿ ನೀಡಲಾಗಿದೆ.

ಇ) ಈ ಯೋಜನೆಯಡಿ ಸಣ್ಣ ರೈತರು ನಿರ್ಮಿಸಿರುವ ಕೆಳ ಮಟ್ಟದ ಗ್ರೀನ್ ಹೌಸ್‌ಗಳಿಗೆ ಸಬ್ಸಿಡಿ ನಿರಾಕರಿಸುತ್ತಿರುವುದಿಲ್ಲ ಹಾಗೂ ಯಾವುದೇ ತಾರತಮ್ಯ ಮಾಡಿರುವುದಿಲ್ಲ.

## ಅನುಬಂಧ

## ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ support to Vegetable for Urban Clusters ಕಾರ್ಯಕ್ರಮದಡಿ ಗ್ರೀನ್ ಹೌಸ್ (ನೆರಳು ಮನೆ) ವಿವರಗಳಿ

| ಕಾರ್ಯಕ್ರಮದ ವಿವರ | ಘಟಕ ವೆಚ್ಚ | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ | | Vegetable Initiatives | |
|---|---|---|---|---|---|
| | | ಗರಿಷ್ಠ ಮಿತಿ | ಲಕ್ಷ ರೂ. ಗಳಲ್ಲಿ | ಗರಿಷ್ಠ ಮಿತಿ | ಲಕ್ಷ ರೂ. ಗಳಲ್ಲಿ |
| ಅ) ಹರಿಸು ಮನೆ (Green house structure) 1) Fan & Pad System | 1,465 /ಚ.ಮಿ. | ಶೇ.50ರ ಸಹಾಯ ಧನ 1000 ಚ.ಮೀ. | 7.325 | ಶೇ.50ರ ಸಹಾಯ ಧನ 4000 ಚ.ಮೀ. | 29.30 |
| i) Tubular structure | 935 / ಚ.ಮಿ. | ಶೇ.50ರ ಸಹಾಯ ಧನ 1000 ಚ.ಮೀ. | 4.675 | ಶೇ.50ರ ಸಹಾಯ ಧನ 4000 ಚ.ಮಿ. | 18.70 |
| ii) Wooden structure | 515/ ಚ.ಮಿ. | ಶೇ.50ರ ಸಹಾಯ ಧನ 1000 ಚ.ಮೀ. | 2.575 | ಶೇ.50ರ ಸಹಾಯ ಧನ 4000 ಚ.ಮಿ. | 10.30 |
| iii) Bamboo structure | 375/ ಚ.ಮಿ. | ಶೇ.50ರ ಸಹಾಯ ಧನ 1000 ಚ.ಮೀ. | 1.87 | ಶೇ.50ರ ಸಹಾಯ ಧನ 4000 ಚ.ಮಿ. | 7.50 |

| | | | | | |
|---|---|---|---|---|---|
| i) Tubular structure | 600/ ಚ.ಮಿ. | ಶೇ.50ರ ಸಹಾಯ ಧನ 1000 ಚ.ಮೀ. | 3.00 | ಶೇ.50ರ ಸಹಾಯ ಧನ 4000 ಚ.ಮಿ. | 12.00 |
| ii) Wooden structure | 410/ ಚ.ಮಿ. | ಶೇ.50ರ ಸಹಾಯ ಧನ 1000 ಚ.ಮೀ. | 2.05 | ಶೇ.50ರ ಸಹಾಯ ಧನ 4000 ಚ.ಮಿ. | 8.20 |
| iii) Bamboo structure | 300/ ಚ.ಮಿ. | ಶೇ.50ರ ಸಹಾಯ ಧನ 1000 ಚ.ಮೀ. | 1.50 | ಶೇ.50ರ ಸಹಾಯ ಧನ 4000 ಚ.ಮಿ. | 6.00 |
| ಈ) Cost of Planting material & other inputs of high value vegetables grown in green house/poly house/shade net house | 105/ ಚ.ಮಿ. | | | ಶೇ.50ರ ಸಹಾಯ ಧನ 4000 ಚ.ಮಿ. | 2.10 |

**ಅಂತರ್ಜಲ ನೀರು ಸಂಪೂರ್ಣ ವಿಷಯುಕ್ತವಾಗಿರುವ ಬಗ್ಗೆ**

**126; ಶ್ರೀ ಆರ್.ವಿ.ವೆಂಕಟೇಶ್ (ವಿಧಾನಸಭೆಯಿಂದ ಚುನಾಯಿತರಾದವರು)**

ಅ) ಬೆಂಗಳೂರು ನಗರ ಜಿಲ್ಲೆಯ ಆನೇಕಲ್, ಬೆಂಗಳೂರು ಪೂರ್ವ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ತಾಲ್ಲೂಕುಗಳಲ್ಲಿ ಅಂತರ್ಜಲ ನೀರು ಸಂಪೂರ್ಣ ವಿಷಯುಕ್ತವಾಗಿದೆಯೆಂದು ಗಣಿ ಮತ್ತು ಭೂವಿಜ್ಞಾನ ಇಲಾಖೆ ವರದಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ;

ಆ) ಬಂದಿದ್ದಲ್ಲಿ, ಈ ತಾಲ್ಲೂಕುಗಳಲ್ಲಿನ ಗ್ರಾಮಗಳಿಗೆ ಶುದ್ಧ ನೀರು ಪೂರೈಕೆ ಮಾಡಲು ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ;

ಇ) ಈ ಕಾರ್ಯಕ್ರಮಗಳನ್ನು ಎಷ್ಟು ವರ್ಷಗಳಲ್ಲಿ ಅನುಷ್ಠಾನಕ್ಕೆ ತರಲಾಗುವುದು?

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

ಅ) ಬೆಂಗಳೂರು ನಗರ ಜಿಲ್ಲೆಯ ಗ್ರಾಮೀಣ ಪ್ರದೇಶಗಳ 1037 ಜನವಸತಿಗಳಲ್ಲಿ ಹಾಲಿ 1996 ಕುಡಿಯುವ ನೀರಿನ ಜಲಮೂಲಗಳ ಪೈಕಿ 73 ಜನವಸತಿಗಳಲ್ಲಿನ ನೀರು ರಾಸಾಯನಿಕವಾಗಿ ಕಲುಷಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) & ಇ)ಬೆಂಗಳೂರು ನಗರ ಜಿಲ್ಲೆಯ ಗ್ರಾಮೀಣ ಪ್ರದೇಶಗಳ 230 ಜನವಸತಿಗಳಲ್ಲಿ ಕಬ್ಬಿಣದ ಅಂಶದಿಂದ ಕೂಡಿರುವ ಕುಡಿಯುವ ನೀರಿನ ಜಲಮೂಲಗಳಲ್ಲಿ 829 ಟೆರಾಫಿಲ್ ಘಟಕಗಳನ್ನು ಅಳವಡಿಸಲಾಗಿದೆ. ಹಾಗೂ 181 ಸರ್ಕಾರಿ ಶಾಲೆಗಳಿಗೆ ಜಲಮಣಿ ಕಾರ್ಯಕ್ರಮದಡಿ ಶುದ್ದ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಿ, ಸುರಕ್ಷಿತ ಕುಡಿಯುವ ನೀರಿನ ಪೂರೈಕೆ ಒದಗಿಸಲಾಗಿದೆ. ಕುಡಿಯುವ ನೀರಿನ ಗುಣಮಟ್ಟದ ಸಮಸ್ಯೆಯಿಂದ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕುಂಬಳಗೋಡು

ಹಾಗೂ ಸುತ್ತಮುತ್ತಲಿನ 27 ಗ್ರಾಮಗಳಿಗೆ ಮಂಚನಬೆಲೆ ಜಲಾಶಯದಿಂದ ಸುರಕ್ಷಿತ ಕುಡಿಯುವ ನೀರು ಪೂರೈಕೆಗಾಗಿ ರೂ.18.50 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಬಹುಗ್ರಾಮ ಯೋಜನೆಯಡಿ ಕಾಮಗಾರಿ ಪ್ರಸ್ತಾವನೆಯನ್ನು ತಯಾರಿಸಲಾಗಿದೆ. ಇದರ ತಾಂತ್ರಿಕ ಮತ್ತು ಆರ್ಥಿಕ ಕಾರ್ಯಸಿಂಧುತ್ವ ಪರಿಶೀಲಿಸಿ, ಅನುದಾನ ಲಭ್ಯತೆ ಆಧರಿಸಿ, 2012–13ರ ಸಾಲಿನಲ್ಲಿ ಯೋಜನೆಯ ಅನುಷ್ಠಾನ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

**ರಾಜ್ಯದಲ್ಲಿ ಕೃಷಿ ಬೆಲೆ ಆಯೋಗವನ್ನು ರಚಿಸುವ ಬಗ್ಗೆ**

**128; ಶ್ರೀ ಆರ್.ವಿ.ವೆಂಕಟೇಶ್ (ವಿಧಾನಸಭಾ ಕ್ಷೇತ್ರ)**

ಅ) ಕೇಂದ್ರ ಸರ್ಕಾರ ರಚಿಸಿರುವಂತೆ ರಾಜ್ಯ ಸರ್ಕಾರವು ರಾಜ್ಯ ಕೃಷಿ ಬೆಲೆ ಆಯೋಗವನ್ನು ರಚಿಸಲು ಉದ್ದೇಶಿಸಿದೆಯೆ;

ಆ) ರಚಿಸಲು ಉದ್ದೇಶಿಸಿದ್ದರೆ, ಎಷ್ಟು ದಿನಗಳಲ್ಲಿ ರಚಿಸಲಾಗುವುದು?

**ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು)**

ಅ) ಕೇಂದ್ರ ಸರ್ಕಾರ ರಚಿಸಿರುವಂತೆ ರಾಜ್ಯ ಸರ್ಕಾರವು ರಾಜ್ಯ ಕೃಷಿ ಬೆಲೆಲ ಆಯೋಗ ರಚಿಸುವ ಉದ್ದೇಶ ಸದ್ಯಕ್ಕೆ ಹೊಂದಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

**ಕ್ಯಾಮರಾ ಖರೀದಿಯಲ್ಲಿ ಅಕ್ರಮ**

**130; ಶ್ರೀ ಕೆ.ಸಿ. ಕೊಂಡಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಬಳ್ಳಾರಿ ಜಿಲ್ಲೆಯ ತಾಲ್ಲೂಕು ಪಂಚಾಯತ್‌ಗಳಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕಾಮಗಾರಿ ವಿಡಿಯೋ ಚಿತ್ರೀಕರಣ ಮಾಡಲು ಖರೀದಿಸಿದ್ದ ಕ್ಯಾಮರಾಗಳಲ್ಲಿ ಸಾಕಷ್ಟು ಅಕ್ರಮಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಪ್ರಕರಣದ ವಿವರ ಒದಗಿಸುವುದು);

ಆ) ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು);

ಇ) ಜಿಲ್ಲೆಯಲ್ಲಿ ತಾಲ್ಲೂಕು ಪಂಚಾಯತ್‌ಗಳ ಮೂಲಕ ಖರೀದಿಸಿದ ಕ್ಯಾಮರಾಗಳೆಷ್ಟು; ಅವುಗಳಿಗೆ ವೆಚ್ಚ ಮಾಡಿದ ಹಣವೆಷ್ಟು? (ತಾಲ್ಲೂಕು ಪಂಚಾಯತ್‌ವಾರು, ಖರೀದಿವಾರು, ಮುಖ ಬೆಲೆವಾರು ವಿವರ ನೀಡುವುದು)

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಪ್ರಕರಣದ ವಿವರಗಳು ಈ ಕೆಳಗಿನಂತಿದೆ.

1. ಸರ್ಕಾರದ ಪತ್ರ ಸಂ.ಗ್ರಾಅಪ/61/ಗ್ರಾಮಪಸ/2010, ದಿನಾಂಕ: 02–12–2010ರಲ್ಲಿ ಎಲ್ಲಾ ಗ್ರಾ.ಪಂ.ಗಳಲ್ಲಿ ಎಂ.ಜಿ.ಎನ್. ಆರ್.ಇ.ಜಿ.ಎ. ಆಡಳಿತ ವೆಚ್ಚದಿಂದ ವೀಡಿಯೋ ಕ್ಯಾಮೆರಾ ಖರೀದಿಸಲು ಸೂಚನೆ ನೀಡಲಾಗಿತ್ತು.

2. ಅದರಂತೆ ಸೋನಿ DCR-SX-20/EK ಮಾದರಿ ಹ್ಯಾಂಡಿಕ್ಯಾಮ್ ಅನು 189 ಗ್ರಾ.ಪಂ.ಗಳಿಗೆ ಕೊಟೇಶನ್‌ಗಳ ಮೂಲಕ ರೂ.23,720/– ರಿಂದ ರೂ.26,790/– ದರಗಳಲ್ಲಿ ತಾ.ಪಂ.ಗಳಲ್ಲಿ ಖರೀದಿಸಿ ರೂ.48,07,212.00ಗಳನ್ನು ಪಾವತಿ ಮಾಡಲಾಗಿದೆ.

3. ಸೋನಿ ಕಂಪನಿಯಿಂದ ಪಡೆದ ಕೊಟೇಶನ್ ಪ್ರಕಾರ ಸೋನಿ ಮಾದರಿ DCR-SX-20/EK ಹ್ಯಾಂಡಿಕ್ಯಾಮ್ ದರ ರೂ.12,990.00 ಇರುತ್ತದೆ.

**4.** ಸೋನಿ ಕಂಪನಿ ನಮೂದಿಸಿದ ದರದಂತೆ ತಾ.ಪಂ.ಗಳಿಂದ ಹೆಚ್ಚುವರಿಯಾಗಿ ರೂ.23,71,454.00 ಮೊತ್ತವನ್ನು ಮಾರಾಟಾಗಾರರಿಗೆ ಪಾವತಿಸಲಾಗಿರುತ್ತದೆ.

**ಆ)** ರೂ.23,71,454.00 ಗಳನ್ನು ಮಾರಾಟಗಾರರಿಂದ ವಸೂಲಿ ಮಾಡಿ ಎಂ.ಜಿ.ಎನ್.ಆರ್.ಇ.ಜಿ.ಎ. ಖಾತೆಗೆ ಜಮಾ ಮಾಡಲಾಗಿರುತ್ತದೆ.

**ಇ)** ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

# ಅನುಬಂಧ-1

## ಬಳ್ಳಾರಿ ಜಿಲ್ಲೆಯ ತಾಲ್ಲುಕು ಪಂಚಾಯತಿಗಳ ಮೂಲಕ ಖರೀದಿಸಿದ ಕ್ಯಾಮೆರಾಗಳು, ಅವುಗಳಿಗೆ ಮಾಡಿದ ವೆಚ್ಚ, ಮಾರಾಟಗಾರರಿಂದ ಹಿಂಪಡೆದ ಮೊತ್ತದ ವಿವರಗಳು

| ಕ್ರ. ಸಂ. | ತಾ.ಪಂ. ಹೆಸರು | ಖರೀದಿಸಿದ ಒಟ್ಟು ಕ್ಯಾಮೆರಾಗಳು | ಕ್ಯಾಮೆರಾ ಖರೀದಿಸಿದ ಬೆಲೆ | ಮಾರಾಟಗಾರರಿಗೆ ಪಾವತಿಸಿದ ಮೊತ್ತ | ನಿಗದಿತ ಬೆಲೆಗಿಂತ ಹೆಚ್ಚು ಪಾವತಿಸಿರುವುದು (ಸೋನಿ ಕಂಪನಿಯವರು ನೀಡಿದ ದರದ ಅನ್ವಯ) |
|---|---|---|---|---|---|
| 1 | ಹಗರಿಬೊಮ್ಮನಹಳ್ಳಿ | 22 | 26,800.00 | 5,89,600.00 | 3,03,820.00 |
| 2 | ಸಂಡೂರು | 21 | 23,720.00 | 4,98,120.00 | 2,25,330.00 |
| 3 | ಸಿರುಗುಪ್ಪ | 26 | 26,600.00 | 6,58,350.00 | 3,20,610.00 |
| 4 | ಕೂಡ್ಲಿಗಿ | 33 | 26,800.00 | 8,84,400.00 | 4,55,730.00 |
| 5 | ಬಳ್ಳಾರಿ | 40 | 24,966.00 | 9,98,640.00 | 4,79,040.00 |

| | | | | | |
|---|---|---|---|---|---|
| 6 | ಹಡಗಲಿ | 24 | 24,966.00 | 5,82,404.00 | 2,87,424.00 |
| 7 | ಹೊಸಪೇಟೆ | 23 | 25,900.00 | 5,95,700.00 | 2,99,500.00 |
| 8 | **ಒಟ್ಟು** | **189** | **179752.00** | **48,07,212.00** | **23,71,454.00** |

**ಶೌಚಾಲಯ ನಿರ್ಮಿಸುವ ಅನುದಾನದಲ್ಲಿ ಅಕ್ರಮ**

**132; ಶ್ರೀ ಕೆ.ಸಿ. ಕೊಂಡಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)**

ಅ) ಗ್ರಾಮೀಣ ಪ್ರದೇಶದಲ್ಲಿ ಪರಿಸರ ನೈರ್ಮಲ್ಯ ಕಾಪಾಡಲು ನೈರ್ಮಲೀಕರಣ ಯೋಜನೆಯಡಿಯಲ್ಲಿ ಹಳ್ಳಿಗಳಿಗೆ ಶೌಚಾಲಯ ನಿರ್ಮಿಸುವ ಅನುದಾನದಲ್ಲಿ ಸಾಕಷ್ಟು ಅಕ್ರಮಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಪ್ರಕರಣವಾರು ಗ್ರಾಮ ಪಂಚಾಯತಿಗಳವಾರು ವಿವರ ಒದಗಿಸುವುದು);

ಆ) ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು? (ಪ್ರಕರಣವಾರು ವಿವರ ಒದಗಿಸುವುದು);

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

ಅ) ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮದಡಿಯಲ್ಲಿ 2008 ರಿಂದ ಇದುವರೆಗೆ ಪ್ರಮುಖವಾಗಿ 5 ಆರ್ಥಿಕ ದುರುಪಯೋಗ ಪ್ರಕರಣಗಳು ನಡೆದಿರುತ್ತವೆ.

1) **ತುಮಕೂರು ಜಿಲ್ಲೆ**: ಮೊಬೈಲ್ ಟಾಯ್ಲೆಟ್ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಪ್ರಕರಣ. ಸಿಮೆಂಟ್ ರಿಂಗ್ ಮತ್ತು ಸಿಮೆಂಟ್ ಇಟ್ಟಿಗೆ ಖರೀದಿಯಲ್ಲಿ ಆಗಿದೆ ಎನ್ನಲಾದ ಅವ್ಯವಹಾರ.

2) **ಬಳ್ಳಾರಿ ಜಿಲ್ಲೆ**: ಮೊಬೈಲ್ ಟಾಯ್ಲೆಟ್ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಪ್ರಕರಣ.

3) **ರಾಯಚೂರು ಜಿಲ್ಲೆ**ಯಲ್ಲಿ ನಡೆದಿದೆ ಎನ್ನಲಾದ ಹಣ ದುರುಪಯೊಗ ಪ್ರಕರಣ.

4) **ಬಾಗಲಕೋಟೆ ಜಿಲ್ಲೆಯ** ಹುನ್ನೂರು ಗ್ರಾಮ ಪಂಚಾಯತಿಯಲ್ಲಿ ಶೌಚಾಲಯ ನಿರ್ಮಾಣದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಪ್ರಕರಣ.

5) **ಚಿತ್ರದುರ್ಗ ಜಿಲ್ಲೆಯ** ಹುಲ್ಲೂರು ಗ್ರಾಮ ಪಂಚಾಯತಿಯಲ್ಲಿ ಶೌಚಾಲಯ ನಿರ್ಮಾಣದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಪ್ರಕರಣ.

**ಆ)**

1) **ತುಮಕೂರು ಜಿಲ್ಲೆಯಲ್ಲಿ** ಸಿಮೆಂಟ್ ರಿಂಗ್ ಮತ್ತು ಸಿಮೆಂಟ್ ಇಟ್ಟಿಗೆ ಖರೀದಿಯಲ್ಲಿ ಆಗಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ತನಿಖಾ ಸಂಸ್ಥೆ ನೀಡಿದ ವರದಿಯನ್ನು ಅನುಷ್ಠಾನಗೊಳಿಸುವಂತೆ ಜಿಲ್ಲಾ ಪಂಚಾಯತ್, ತುಮಕೂರು ಇವರಿಗೆ ಪತ್ರ ಬರೆಯಲಾಗಿದೆ. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮನವಿಯನ್ನು ಆಧರಿಸಿ ಮೂರನೇ ಸ್ವಾಯತ್ತ ಸಂಸ್ಥೆಯಿಂದ ತನಿಖೆ ನಡೆಸಲು ಕ್ರಮವಹಿಸಲಾಗುತ್ತಿದೆ ವರದಿ ಆಧರಿಸಿ ಕ್ರಮ ಜರುಗಿಸಲಾಗುವುದು.

2) **ಬಳ್ಳಾರಿ ಜಿಲ್ಲೆಯಲ್ಲಿ** ಮೊಬೈಲ್ ಟಾಯ್ಲೆಟ್ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ತನಿಖೆ ನಡೆಸಿ ತಪ್ಪಿತಸ್ಥ ನಾಲ್ಕು ಜನ ಅಧಿಕಾರಿಗಳನ್ನು ಗುರುತಿಸಿ ಅಮಾನತ್ತು ಮಾಡಲಾಗಿದೆ. ಈಗ ಪ್ರಕರಣ ಆಡಳಿತ ನ್ಯಾಯ ಮಂಡಳಿಯಲ್ಲಿ ವಿಚಾರಣೆಯಲ್ಲಿದೆ.

3) **ರಾಯಚೂರು ಜಿಲ್ಲೆಯಲ್ಲಿ** ನಡೆದಿದೆ ಎನ್ನಲಾದ ಹಣ ದುರುಪಯೋಗದ ಬಗ್ಗೆ ಶ್ರೀ ಸೈಯದ್ ಶಂಶುದ್ದೀನ್ ಇವರು

ನೀಡಿರುವ ದೂರನ್ನು ಪರಿಶೀಲಿಸಿ ಮಾಹಿತಿ ನೀಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ.

4) **ಬಾಗಲಕೋಟೆ ಜಿಲ್ಲೆಯ** ಜಮಖಂಡಿ ತಾಲ್ಲೂಕಿನ ಹುನ್ನೂರು ಗ್ರಾಮ ಪಂಚಾಯತಿಯಲ್ಲಿ ಶೌಚಾಲಯ ನಿರ್ಮಾಣದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಪ್ರಕರಣ ಕುರಿತಂತೆ ಈ ಕಛೇರಿ ಸಿಬ್ಬಂದಿಯಿಂದ ಖುದ್ದಾಗಿ ತನಿಖೆ ನಡೆಸಲಾಗಿದ್ದು ಅದರಂತೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ಅಮಾನತ್ತು ಗೊಳಿಸಲಾಗಿದೆ ವಿವರವಾದ ತನಿಖೆಗೆ ಆದೇಶಿಸಲಾಗಿದ್ದು ತನಿಖಾ ವರದಿ ಬಂದ ಮೇಲೆ ತಪ್ಪಿತಸ್ತ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು.

5) **ಚಿತ್ರದುರ್ಗ ಜಿಲ್ಲೆಯ** ಚಿತ್ರದುರ್ಗ ತಾಲ್ಲೂಕಿನ ಹುಲ್ಲೂರು ಗ್ರಾಮ ಪಂಚಾಯತಿಯಲ್ಲಿ ಆಗಿದೆ ಎನ್ನಲಾದ ಹಣ ದುರುಪಯೋಗದ ಬಗ್ಗೆ ವಿಚಾರಣೆ ನಡೆಸಿ ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ಅಮಾನತ್ತುಗೊಳಿಸಿ ಗ್ರಾಮ ಪಂಚಾಯತಿ ಹಾಲಿ ಅಧ್ಯಕ್ಷರು ಮತ್ತು ಮಾಜಿ ಅಧ್ಯಕ್ಷರ ಮೇಲೆ ಕ್ರೀಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿದೆ. ಹಣಕಾಸಿನ ಅವ್ಯವಹಾರದ ಬಗ್ಗೆ ತನಿಖೆ ನಡೆಸಲಾಗುತ್ತಿದ್ದು ವಿವರವಾದ ತನಿಖೆ ವರದಿ ಬಂದ ನಂತರ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

**ಲೋಕೋಪಯೋಗಿ ಇಲಾಖೆಯಲ್ಲಿ ಕಾಮಗಾರಿ ಬಗ್ಗೆ**

**133; ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಲೋಕೋಪಯೋಗಿ ಇಲಾಖೆಯಲ್ಲಿ ಇಂದಿನವರೆಗೆ ಪೂರೈಸಿದ ಕಾಮಗಾರಿಗಳಿಗೆ ಕೊಡಬೇಕಾದ ಬಾಕಿ ಹಣ ಎಷ್ಟು?

ಆ) ಪೂರೈಸಿದ ಕಾಮಗಾರಿಗಳಿಗೆ ಇದುವರೆಗೂ ಅಂದರೆ 2012ರ ಮಾರ್ಚ್ ಒಳಗಾಗಿ ಕೊಡಬೇಕಾದ ಬಿಲ್ಲಿನ ಹಣವನ್ನು ಸರ್ಕಾರ ಪಾವತಿ ಮಾಡುವುದೇ?

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೊಗಿ ಸಚಿವರು)**

ಅ) ಲೋಕೋಪಯೋಗಿ ಇಲಾಖೆ ಉತ್ತರ ಮತ್ತು ದಕ್ಷಿಣ ವಲಯಗಳಡಿ ವಿವಿಧ ಲೆಕ್ಕ ಶೀರ್ಷಿಕೆಗಳು ಫೆಬ್ರವರಿ 2012ರ ಮಾಹೆಯ ಅಂತ್ಯಕ್ಕೆ ಪೂರೈಸಲಾಗಿರುವ ಕಾಮಗಾರಿಗಳಿಗೆ ರೂ.171935.36 ಲಕ್ಷಗಳು ಪಾವತಿಗಾಗಿ ಬಾಕಿ ಇರುತ್ತವೆ.

ಆ) ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ದಕ್ಷಿಣ ಮತ್ತು ಉತ್ತರ ವಲಯಗಳಿಂದ ವಿಭಾಗವಾರು ಸಲ್ಲಿಸಲಾಗುವ ಹಣ ಬೇಡಿಕೆ ಪ್ರಸ್ತಾವನೆಯನ್ವಯ ಆರ್ಥಿಕ ಇಲಾಖೆಯಿಂದ ಬಿಡುಗಡೆ ಮಾಡುವ ಮೊತ್ತವನ್ನು ವಲಯವಾರು ಹಂಚಿಕೆ ಮಾಡಲಾಗುವುದು. ಅದರಂತೆ ಮಾರ್ಚ್ 2012ರ ಅಂತ್ಯದವರೆಗೆ ಬಾಕಿ ಇರುವ ಬಿಲ್ಲುಗಳನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

**ಗುಲ್ಬರ್ಗಾ ಜಿಲ್ಲೆಯಲ್ಲಿ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿರುವ ಬಗ್ಗೆ**

**135; ಶ್ರಿ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಅಕ್ರಮವಾಗಿ ಸೇಂಧಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಕ್ರಮ ಸೇಂಧಿ ಮಾರಾಟಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಪಕ್ಕದ ಆಂಧ್ರ ಪ್ರದೇಶದಿಂದ ರೈಲುಗಳ ಮೂಲಕ ಗುಲ್ಬರ್ಗಾ ಜಿಲ್ಲೆಗೆ ಸೇಂಧಿ ಸಾಗಾಣಿಕೆ ಮಾಡುತ್ತಿರುವಾಗ ಪತ್ತೆಯಾಗಿರುವ ಪ್ರಕರಣಗಳೆಷ್ಟು;

ಇ) ಈ ಸಂಬಂಧ ರೈಲ್ವೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ರೈಲು ಮೂಲಕ ಸೇಂಧಿ ಸಾಗಾಣಿಕೆ ಮಾಡುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದೇ? (ಮಾಹಿತಿ ನೀಡುವುದು)

**ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು)**

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಅಕ್ರಮವಾಗಿ ಸೇಂಧಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಅಕ್ರಮ ಸೇಂಧಿ ಮಾರಾಟಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:

| ಕ್ರ.ಸಂ. | ತಾಲ್ಲೂಕು | ಪ್ರಕರಣಗಳು |
|---|---|---|
| 1) | ಗುಲ್ಬರ್ಗಾ | 02 |
| 2) | ಆಳಂದ | 14 |
| 3) | ಚಿತ್ತಾಪೂರ | 14 |
| 4) | ಸೇಡಂ | 35 |
| 5) | ಚಿಂಚೋಳಿ | 29 |

**ಆ)** ಪಕ್ಕದ ಆಂಧ್ರ ಪ್ರದೇಶದಿಂದ ರೈಲುಗಳ ಮೂಲಕ ಗುಲ್ಬರ್ಗಾ ಜಿಲ್ಲೆಗೆ ಸೇಂಧಿ ಸಾಗಾಣಿಕೆ ಮಾಡುತ್ತಿರುವಾಗ ಪತ್ತೆಯಾಗಿರುವ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ತಾಲ್ಲೂಕು | ಪ್ರಕರಣಗಳು |
|---|---|---|
| 1) | ಚಿತ್ತಾಪೂರ | 02 |
| 2) | ಸೇಡಂ | 01 |

**ಇ)** ಅಕ್ರಮವಾಗಿ ರೈಲ್ವೆ ಮೂಲಕ ಸೇಂಧಿ ಸಾಗಾಣಿಕೆಯನ್ನು ತಡೆಗಟ್ಟಲು ರೈಲ್ವೆ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದು, ಸೇಂದಿ ಸಾಗಾಣಿಕೆ ಯನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಅಧೀನ ಸಿಬ್ಬಂದಿಗಳಿಗೆ ಈ ಬಗ್ಗೆ ಸೂಕ್ತ ನಿರ್ದೇಶನ ನೀಡಲಾಗಿದೆ. ಮಾಸಿಕ ಸಮನ್ವಯ ಸಮಿತಿ ಸಭೆಯಲ್ಲಿ ಅಬಕಾರಿ ಲಾಟರಿ ನಿಷೇಧ ದಳ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಅಕ್ರಮ ಸೇಂಧಿ ಸಾಗಾಣಿಕೆ ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ದಿನಾಂಕ:03–03–2012

ರಂದು ಅಬಕಾರಿ ಉಪ ಆಯುಕ್ತರು, ಗುಲ್ಬರ್ಗಾ, ಯಾದಗಿರಿ, ರಾಯಚೂರು ಮತ್ತು ಆಂಧ್ರಪ್ರದೇಶದ ಮೆಹಬೂಬನಗರ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಹಾಗೂ ಇತರ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸಭೆ ನಡೆಸಿ, ಆಂಧ್ರಪ್ರದೇಶದ ಗಡಿಭಾಗದಿಂದ ಅಕ್ರಮವಾಗಿ ರಸ್ತೆ ಮೂಲಕ ಮತ್ತು ರೈಲು ಮೂಲಕ ಸೇಂದಿ ಸಾಗಾಣಿಕೆ ತಡೆಗಟ್ಟುವ ಕುರಿತು ಚರ್ಚಿಸಲಾಗಿರುತ್ತದೆ. ಅಬಕಾರಿ ಉಪ ಆಯುಕ್ತರು, ಮೆಹಬೂಬನಗರ ಜಿಲ್ಲೆರವರು ರಸ್ತೆ ಹಾಗೂ ರೈಲು ಮೂಲಕ ಅಕ್ರಮ ಸೇಂದಿ ಸಾಗಾಣಿಕೆಯಾಗುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲು ಅಲ್ಲಿನ ಅಧೀನ ಸಿಬ್ಬಂದಿಗಳಿಗೆ ನಿರ್ದೇಶಿಸಿರುತ್ತಾರೆ.

## ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಕೃಷಿ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳ ಬಗ್ಗೆ

**137; ಶ್ರಿ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ವಿಭಾಗಕ್ಕೆ ಸಂಬಂಧಪಟ್ಟಂತೆ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳು ಎಷ್ಟು? ಅವುಗಳಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು.)

**ಆ)** ಹೆಚ್ಚಿನ ಸಂಖ್ಯೆಯಲ್ಲಿ ಹುದ್ದೆಗಳು ಖಾಲಿ ಉಳಿದಿರುವುದರಿಂದ ಇಲಾಖೆಯ ಯೋಜನೆಗಳು ಸಮಪರ್ಕವಾಗಿ ಅನುಷ್ಠಾನ ಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಉಮೇಶ್.ವಿ.ಕತ್ತಿ (ಕೃಷಿ ಮಂತ್ರಿಗಳು)**

**ಅ)**

| ಇಲಾಖೆ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|
| ಕೃಷಿ ಇಲಾಖೆ | ಗುಲ್ಬರ್ಗಾ –457<br>ಯಾದಗಿರಿ –174 | ಗುಲ್ಬರ್ಗಾ –248<br>ಯಾದಗಿರಿ –86 | ಗುಲ್ಬರ್ಗಾ –209<br>ಯಾದಗಿರಿ –88 |
| ಜಲಾನಯನ ಅಭಿವೃದ್ಧಿ ಇಲಾಖೆ | ಗುಲ್ಬರ್ಗಾ –146<br>ಯಾದಗಿರಿ –45 | ಗುಲ್ಬರ್ಗಾ –72<br>ಯಾದಗಿರಿ –30 | ಗುಲ್ಬರ್ಗಾ –74<br>ಯಾದಗಿರಿ –15 |

**ಆ)** ಹೌದು. ಹಾಲಿ ಲಭ್ಯವಿರುವ ಸಿಬ್ಬಂದಿಗಳನ್ನು ಉಪಯೋಗಿಸಿಕೊಂಡು ಇಲಾಖೆಯ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ.

ಬಡ್ತಿ ಕೋಟಾದಡಿ ಲಭ್ಯವಿರುವ ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಲು ಕ್ರಮ ವಹಿಸಲಾಗಿದೆ.

ಕೃಷಿ ಅಧಿಕಾರಿ ವೃಂದದಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ನೇರ ನೇಮಕಾತಿ ಕೋಟಾದ 100 ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳಿಗೆ ಸಂಬಂಧಿಸಿದಂತೆ ನೇರ ನೇಮಕಾತಿ ಕೋಟಾದ 129 ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಆದೇಶ ಹೊರಡಿಸುವ ಹಂತದಲ್ಲಿದೆ. ಇದಲ್ಲದೆ 280 ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿಯೆ ತುಂಬಲಾಗುವುದು.

ಕೃಷಿ ಸಹಾಯಕರ ಹುದ್ದೆಗಳಿಗೆ ಸಂಬಂಧಿಸಿದಂತೆ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಗ್ರಾಮ ಪಂಚಾಯತಿ ಮಟ್ಟದಲ್ಲಿ ಒಬ್ಬೊಬ್ಬ ಕೃಷಿ ಸಹಾಯಕರನ್ನು ನೇಮಿಸುವ ಕುರಿತು 2433 ಕೃಷಿ ಸಹಾಯಕರ ಹುದ್ದೆಗಳನ್ನು ಪುನರುಜ್ಜೀವನಗೊಳಿಸಲು (Revival of posts) ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ.

**ಭೂಚೇತನ ಯೋಜನೆಯ ಅನುಷ್ಠಾನ**

**142; ಡಾ॥ ದೊಡ್ಡರಂಗೇಗೌ (ನಾಮನಿರ್ದೇಶಿತರು)**

**ಅ)** ಭೂಚೇತನ ಯೋಜನೆಯ ಫಲಾನುಭವಿಗಳ ಆಯಕೆ ಪ್ರಕ್ರಿಯೆಯ ಕುರಿತು ಮಾಹಿತಿ ನೀಡುವುದು;

**ಆ)** ರಾಜ್ಯದಲ್ಲಿ ಈ ವರ್ಷ ಎಷ್ಟು ಜನ ಅರ್ಹ ಫಲಾನುಭವಿಗಳನ್ನು ಭೂಚೇತನ ಯೋಜನೆಯಡಿ ಆಯ್ಕೆ ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

**ಶ್ರೀ ಉಮೇಶ್.ವಿ.ಕತ್ತಿ (ಕೃಷಿ ಸಚಿವರು)**

**ಅ)** ಬೆಳೆ ಕ್ಷೇತ್ರ ಆಧರಿಸಿ ಗ್ರಾಮಗಳನ್ನು ಆಯ್ಕೆಮಾಡಿ ಅಂತಹ ಗ್ರಾಮ/ ಕ್ಷೇತ್ರಗಳ ರೈತರನ್ನು ನೋಂದಣಿ ಮಾಡಲಾಗುವುದು. ಈ ರೈತರಿಗೆ ಭೂಚೇತನ ಯೋಜನೆಯಡಿ ಆಯ್ಕೆ ಮಾಡಿರುವ ಖುಷ್ಕಿ ಬೆಳೆಗಳ ಬೇಸಾಯ ತಾಂತ್ರಿಕತೆಗಳ ಕುರಿತು ಗೋಡೆ ಬರಹ, ಗ್ರಾಮ ಮಟ್ಟದ ತರಬೇತಿ, ಕರಪತ್ರಗಳು, ಮುಂತಾದ ಮಾಧ್ಯಮಗಳ ಮುಖಾಂತರ ಮಾಹಿತಿ/ತರಬೇತಿ ನೀಡಿ ತಾಂತ್ರಿಕತೆಗಳ ಕುರಿತು ಅರಿವು ಮೂಡಿಸಲಾಗುತ್ತದೆ. ಈ ತಾಂತ್ರಕತೆಗಳ ಅಳವಡಿಕೆಗೆ ಮುಂದಾಗುವ ರೈತರಿಗೆ ಅವಶ್ಯವಿರುವ ಪರಿಕರಗಳನ್ನು ಯೋಜನಾ ಮಾರ್ಗಸೂಚಿಯನ್ವಯ ವಿವಿಧ ಯೋಜನೆಗಳಡಿ ಶೇಕಡ 50 ರಿಯಾಯಿತಿ ದರದಲ್ಲಿ ಗುಚ್ಛಗ್ರಾಮ ಮಟ್ಟದಲ್ಲಿ ನೀಡಲಾಗುವುದ.

ಆ) ರಾಜ್ಯದಲ್ಲಿ ಇ ವರ್ಷ ಒಟ್ಟು 19,62,386 ಜನ ಫಲಾನುಭವಿಗಳನ್ನು ಭೂಚೇತನ ಯೋಜನೆಯಡಿ ನೋಂದಣಿ ಮಾಡಲಾಗಿದೆ. (ಜಿಲ್ಲಾವಾರು ವಿವರ ಲಗತ್ತಿಸಿದೆ.)

**2011–12 ನೇ ಸಾಲಿನಲ್ಲಿ ಭೂಚೇತನ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿ**

| ಕ್ರ.ಸಂ. | ಜಿಲ್ಲೆ | ಫಲಾನುಭವಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 61922 |
| 2 | ಬೆಂಗಳೂರು (ಗ್ರಾ) | 31637 |
| 3 | ಬೆಂಗಳೂರು (ನ) | 11200 |
| 4 | ಬೆಳಗಾವಿ | 87626 |
| 5 | ಬಳ್ಳಾರಿ | 46799 |
| 6 | ಬೀದರ್ | 144836 |
| 7 | ಬಿಜಾಪುರ | 109054 |
| 8 | ಚಾಮರಾಜನಗರ | 37244 |
| 9 | ಚಿಕ್ಕಬಳ್ಳಾಪುರ | 107509 |
| 10 | ಚಿಕ್ಕಮಗಳೂರು | 35888 |
| 11 | ಚಿತ್ರದುರ್ಗ | 139831 |
| 12 | ದಕ್ಷಿಣ ಕನ್ನಡ | 4612 |
| 13 | ದಾವಣಗೆರೆ | 103151 |
| 14 | ಧಾರವಾಢ | 48450 |
| 15 | ಗದಗ | 78000 |
| 16 | ಗುಲ್ಬರ್ಗ | 76844 |
| 17 | ಹಾಸನ | 91900 |

| | | |
|---|---|---|
| 18 | ಹಾವೇರಿ | 178000 |
| 19 | ಕೊಡಗು | 4325 |
| 20 | ಕೋಲಾರ | 105737 |
| 21 | ಕೊಪ್ಪಳ | 33325 |
| 22 | ಮಂಡ್ಯ | 32976 |
| 23 | ಮೈಸೂರು | 48621 |
| 24 | ರಾಯಚೂರು | 49648 |
| 25 | ರಾಮನಗರ | 54511 |
| 26 | ಶಿವಮೊಗ್ಗ | 47916 |
| 27 | ತುಮಕೂರು | 89643 |
| 28 | ಉತ್ತರ ಕನ್ನಡ | 33340 |
| 29 | ಉಡುಪಿ | 15838 |
| 30 | ಯಾದಗಿರ್ | 42003 |
| ಒಟ್ಟು | | **1952386** |

## ಮಹಾತ್ಮಾಗಾಂಧಿ ಉದ್ಯೋಗಖಾತ್ರಿ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತ್ ಬಿಡುಗಡೆ ಮಾಡಿದ ಹಣದ ಬಗ್ಗೆ

**145; ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಪ್ರಸ್ತುತ ವರ್ಷದಲ್ಲಿ ಗ್ರಾಮ ಪಂಚಾಯತ್‌ಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆ;

ಆ) ಸದರಿ ಯೋಜನೆಯಡಿಯಲ್ಲಿನ ಅವ್ಯವಹಾರ ತಡೆಗಟ್ಟುವಲ್ಲಿ ಸರ್ಕಾರವು ಓಂಬುಡ್ಸಮನಗಳನ್ನು ನೇಮಕಗೊಳಿಸಿದ್ದು ಇವರ ಮುಂದೆ ಬಂದ ಪ್ರಕರಣಗಳೇಷ್ಟು ಹಾಗೂ ಕೈಗೊಂಡ ಕ್ರಮಗಳೇನು?

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

ಅ) ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಗ್ರಾಮ ಪಂಚಾಯತಿಗಳಿಗೆ ಪ್ರಸ್ತುತ ಸಾಲಿನಲ್ಲಿ ರೂ.128098.00 ಲಕ್ಷಗಳು ಅನುದಾನ ಬಿಡುಗಡೆ ಮಾಡಲಾಗಿದೆ.

ಆ) ಸದರಿ ಯೋಜನೆಯಡಿ ಓಂಬುಡ್ಸಮನ್‌ಗಳ ಮುಂದೆ ಬಂದ ಒಟ್ಟು ಪ್ರಕರಣಗಳನ್ನು 1132 ಮತ್ತು ಈ ಸಂಬಂಧ ತೆಗೆದುಕೊಂಡ ಕ್ರಮಗಳ ವಿವರಗಳು ಈ ಮುಂದಿನಂತೆ ಇದೆ.

| **ಒಟ್ಟು ಪ್ರಕರಣಗಳ ಸಂಖ್ಯೆ** | **ಕ್ರಮಗಳು** | | | |
|---|---|---|---|---|
| | **ಹಣ ವಸೂಲಾತಿಗೆ** | | **ಶಿಸ್ತಿನ ಪ್ರಕರಣಗಳು** | **ದಂಡ ವಿಧಿಸಿದ ಪ್ರಕರಣಗಳು** |
| | **ಪ್ರಕರಣಗಳ ಸಂಖ್ಯೆ** | **ಮೊತ್ತ** | | |
| **1132** | **132** | **14168446.00** | **44** | **122** |

**ಗ್ರಾಮ ಪಂಚಾಯತ್ ಸದಸ್ಯರ ಆಧಾರದ ಮೇಲೆ ಅನುದಾನ ಬಿಡುಗಡೆ ಕುರಿತು**

**152; ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜು (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

ಅ) ಗ್ರಾಮ ಪಂಚಾಯತ್‌ಗಳಿಗೆ ಸದಸ್ಯರ ಆಧಾರದ ಮೇಲೆ ಅನುದಾನ ಬಿಡುಗಡೆಗೊಳಿಸುವ ಕುರಿತು ಸರ್ಕಾರದ ಮುಂದೆ ಪ್ರಸ್ತಾವ ಇದೆಯೇ;

ಆ) ರಾಜ್ಯದಲ್ಲಿ ಕೆಲ ಗ್ರಾಮ ಪಂಚಾಯತಿಗಳು 30 ಕ್ಕೂ ಅಧಿಕ ಸದಸ್ಯರನ್ನು ಹೊಂದಿದ್ದು, ಸದರಿ ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ

ಪಂಚಾಯತ್‌ಗಳನ್ನಾಗಿ ಪರಿವರ್ತಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

**ಅ)** ಸದಸ್ಯರ ಆಧಾರದ ಮೇಲೆ ಅನುದಾನ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

**ಆ)** 10,000 ಜನಸಂಖ್ಯೆಗಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ ಪರಿವರ್ತಿಸುವ ಕುರಿತಂತೆ ಪ್ರಸ್ತಾವನೆಯನ್ನು ದಿನಾಂಕ: 25-07-2007 ರಂದು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲಾಗಿದೆ.

**ರಾಜ್ಯದಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನ ಕುರಿತು**

**148; ಶ್ರೀ ಹೆಚ್. ಸಿ. ನೀರಾವರಿ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಅ)** ರಾಜ್ಯದಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಯಾವ ವರ್ಷದಿಂದ ಪ್ರಾರಂಭವಾಗಿದೆ;

**ಆ)** ಈ ಯೋಜನೆಯಡಿಯಲ್ಲಿ 2008-09, 2009-10, 2010-11 ಹಾಗೂ 2011-12ರ ಸಾಲಿನಲ್ಲಿ ಪ್ರತಿ ವರ್ಷ ಯೋಜನೆಯ ಅನುಷ್ಠಾನಕ್ಕಾಗಿ ಎಷ್ಟು ಹಣವನ್ನು ಒದಗಿಸಲಾಗಿದೆ;

**ಇ)** ಪ್ರತಿ ವರ್ಷ ಒದಗಿಸಲಾದ ಹಣದಲ್ಲಿ ಪ್ರತಿ ವರ್ಷ ವಾಸ್ತವಿಕವಾಗಿ ಖರ್ಚಾದ ಹಣವೆಷ್ಟು (ತಾಲ್ಲೂಕುವಾರು ವಿವರ ನೀಡುವುದು)

**ಈ)** ಈ ಯೋಜನೆಯ ಅನಷ್ಠಾನದಿಂದ ಪ್ರತಿ ವರ್ಷ ಸೃಷ್ಟಿಸಿದ ಉದ್ಯೋಗವಕಾಶದ ಪ್ರಮಾಣವೆಷ್ಟು (ತಾಲ್ಲೂಕುವಾರು ವಿವರ ನೀಡುವುದು)

**ಉ)** ಈ ಯೋಜನೆಯ ಅನುಷ್ಠಾನದಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಅವುಗಳ ಸಂಪೂರ್ಣ ವಿವರ ನೀಡುವುದು;

**ಊ)** ಅವ್ಯವಹಾರ ನಡೆಸಿರುವವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ಅವ್ಯವಹಾರದಲ್ಲಿ ಭಾಗಿಯಾಗಿರುವ ಪ್ರತಿ ವ್ಯಕ್ತಿಯ ಬಗ್ಗೆ ವಿವರ ನೀಡುವುದು.)

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

**ಅ)** 2006–07ನೆ ಸಾಲಿನಿಂದ ರಾಜ್ಯದಲ್ಲಿ ಮಹಾತ್ಮಾಗಾಂಧಿ ಉದ್ಯೋಗ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖತರಿ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.

**ಆ)** ಮಹಾತ್ಮಾಗಾಂಧಿ ಉದ್ಯೋಗ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಕಳೆದ 2008–09, 2009–10, 2010–11 ಹಾಗು 2011–12ರ ಸಾಲಿನಲ್ಲಿ ಕಾರ್ಮಿಕ ಮುಂಗಡ ಪತ್ರದ ಆಯವ್ಯಯದ ಪ್ರಕಾರ ರಾಜ್ಯಕ್ಕೆ ಒದಗಿಸಿದ ಅನುದಾನ ಈ ವಿವರಗಳನ್ನು ಕೆಳಗಿನಂತೆ ನೀಡಿದೆ.

| **ವರ್ಷ** | **ಒದಗಿಸಿದ ಅನುದಾನ (ರೂ. ಲಕ್ಷಗಳಲ್ಲಿ)** |
|---|---|
| 2008–09 | 110000.00 |
| 2009–10 | 284683.18 |
| 2010–11 | 478133.86 |
| 2011–12 | 241276.00 |

**ಇ)** ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗಿದೆ.

**ಈ)** ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ನೀಡಲಾಗಿದೆ.

**ಉ)** ಯೋಜನೆಯ ಅನುಷ್ಠಾನದಲ್ಲಿ ನಡೆದಿರುವ ಅವ್ಯವಹಾರದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಸಂಬಂಧ ಯೋಜನೆಯ ಅನುಷ್ಠಾನದಲ್ಲಿ ಅಧಿಕಾರಿಗಳು ಮತ್ತು ಅಧಿಕಾರೇತರ ರ್ಗದವರ ವಿರುದ್ಧ ಒಟ್ಟು 632 ಪ್ರಕರಣಗಳು ದಾಖಲಿಸಲಾಗಿದೆ. ಅದರ ವಿವರ ಈ ಕೆಳಗಿನಂತಿವೆ.

**1.** ಅಧಿಕಾರಿಗಳು/ನೌಕರರು – 540

**2.** ಅಧಿಕಾರೇತರ ವರ್ಗದವರು – 92

**ಊ)** ಯೋಜನೆಯ ಅನುಷ್ಠಾನದ ಅವ್ಯವಹಾರದಲ್ಲಿ ಭಾಗಿಯಾದವರ ವಿರುದ್ಧ ಸರ್ಕಾರವು ಇಲಾಖೆ ವಿಚಾರಣೆ, ಅಮಾನತು, ಮತ್ತು ಗುರುತರವಾದ ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ. ಅದರ ವಿವರಗಳು ಈ ಕೆಳಗಿನಂತಿವೆ.

**1.** ಇಲಾಖೆ ವಿಚಾರಣೆ ಪ್ರಕರಣಗಳು – 204

**2.** ಕ್ರಿಮಿನಲ್ ಮೊಕದ್ದಮೆ ಪ್ರಕರಣಗಳು – 217

**3.** ಅಮಾನತು ಪ್ರಕರಣಗಳು – 201

ಅವ್ಯವಹಾರದಲ್ಲಿ ಭಾಗಿಯಾಗಿರುವ ಪ್ರತಿ ವ್ಯಕ್ತಿಯ ವಿವರಗಳನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ.

**ರಾಜ್ಯದಲ್ಲಿ ತೊಗರಿಗೆ ಬೆಂಬಲ ಬೆಲೆ ಕೊಡುವ ಕುರಿತು**

**150; ಶ್ರೀ ಹೆಚ್.ಸಿ. ನೀರಾವರಿ (ವಿಧಾನಸಭಾ ಕ್ಷೇತ್ರ)**

**ಅ)** ರಾಜ್ಯದಲ್ಲಿ ಎಷ್ಟು ವಿಸ್ತೀರ್ಣದಲ್ಲಿ ರೈತರು ತೊಗರಿ ಬೆಳೆ ಬೆಳೆಯುತ್ತಿದ್ದಾರೆ (ಜಿಲ್ಲಾವಾರು ವಿವರ ನೀಡುವುದು);

ಆ) ಪ್ರಸ್ತುತ ವರ್ಷ ತೊಗರಿಗೆ ಸರ್ಕಾರ ಬೆಂಬಲ ಬೆಲೆ ಘೋಷಿಸಿದೆಯೇ ಹಾಗಿದ್ದಲ್ಲಿ, ಪ್ರತಿ ಕ್ವಿಂಟಾಲ್‌ಗೆ ನಿಗದಿ ಪಡಿಸಿದ ಬೆಂಬಲ ಬೆಲೆ ಎಷ್ಟು;

ಇ) ಪ್ರಸ್ತುತ ಸಾಲಿನಲ್ಲಿ ಈವರೆಗೆ ಎಷ್ಟು ರೈತರು ಬೆಳೆದ ತೊಗರಿಗೆ ಬೆಂಬಲ ಬೆಲೆ ನೀಡಲಾಗಿದೆ ಹಾಗೂ ಸರ್ಕಾರ ಈ ಸಂಬಂಧದಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು ಮತ್ತು ತೊಗರಿ ಕಾಳು ಖರೀದಿಸಲು ತೆರೆದ ಕೇಂದ್ರಗಳೆಷ್ಟು?

**ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು)**

ಅ) ಕರ್ನಾಟಕ ರಾಜ್ಯದಲ್ಲಿ 2011ರ ಮುಂಗಾರು ಹಂಗಾಮಿನಲ್ಲಿ 7,52,909 ಹೆಕ್ಟೇರ್ ವಿಸ್ತೀರ್ಣದಲ್ಲಿ ರೈತರು ತೊಗರಿ ಬೆಳೆಯನ್ನು ಬೆಳೆದಿರುತ್ತಾರೆ. (ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.)

ಆ) 2011–12ನೇ ಸಾಲಿನಲ್ಲಿ ಮುಂಗಾರು ಹಂಗಾಮಿನಲ್ಲಿ ತೊಗರಿಗೆ ಕೇಂದ್ರ ಸರ್ಕಾರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು ಪ್ರತಿ ಕ್ವಿಂಟಾಲ್‌ಗೆ 3,200/– ಮತ್ತು ತೊಗರಿ ಬೆಳೆಯು ಜನವರಿ ಮತ್ತು ಫೆಬ್ರವರಿ 2012ರ ಕಟಾವಿನ ಅವಧಿಯಲ್ಲಿ ಬೆಂಬಲ ಬೆಲೆಗಿಂತ ಕಡಿಮೆಯಾದ ಸಂದರ್ಭದಲ್ಲಿ ಮಾತ್ರ ಪ್ರತಿ ಕ್ವಿಂಟಾಲ್ ತೊಗರಿಗೆ, ಕೇಂದ್ರ ಸರ್ಕಾರ ನೀಡುವ 500/– ಗಳ ಪ್ರೋತ್ಸಾಹ ಧನ ಸೇರಿದಂತೆ ರಾಜ್ಯ ಸರ್ಕಾರದ 300/– ಗಳ ಹೆಚ್ಚುವರಿ ಪ್ರೋತ್ಸಾಹ ಧನ ಸೇರಿ ಪ್ರತಿ ಕ್ವಿಂಟಾಲ್‌ಗೆ 4000/– ನಿಗದಿಪಡಿಸಿದೆ. ಪ್ರಸ್ತುತ ವರ್ಷ ಅಂದರೆ 2011–12ನೇ ಸಾಲಿನಲ್ಲಿಯೂ ಸಹ ಮಾರುಕಟ್ಟೆಯಲ್ಲಿ ತೊಗರಿ ಬೆಲೆಯು ಪ್ರತಿ ಕ್ವಿಂಟಾಲ್‌ಗೆ ರೂ.3200.00 ರಂತೆ ಹೆಚ್ಚಿದ್ದರೂ ಸಹ ಆ ಭಾಗದ ಎಲ್ಲಾ ಮಾನ್ಯ ಶಾಸಕರುಗಳು ಹಾಗೂ ಇತರೆ ಶಾಸಕರ ಕೋರಿಕೆಯಂತೆ ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ತೊಗರಿ ಅಭಿವೃದ್ಧಿ ಮಂಡಳಿಯಿಂದ FAQ ಗುಣಮಟ್ಟದ ತೊಗರಿಯನ್ನು ಕ್ವಿಂಟಾಲ್‌ಗೆ ರೂ4000.00 ಗಳಂತೆ ಖರೀದಿಸಲು ನಿಗದಿಪಡಿಸಲಾಗಿದೆ.

ಇ) ಪ್ರಸ್ತುತ ತಾಲಿನಲ್ಲಿ 1796 ರೈತರಿಂದ ದಿನಾಂಕ:13.03.2012ರ ಅಂತ್ಯಕ್ಕೆ 25837.70 ಕ್ವಿಂಟಾಲ್ ತೊಗರಿಯನ್ನು ಬೆಂಬಲ ಬೆಳೆಯಡಿಯಲ್ಲಿ ಖರೀದಿಸಲಾಗಿದೆ. ಸರ್ಕಾರದಿಂದ ಈ ವರ್ಷ ರೂ.10.00 ಕೋಟಿ ಹಣ ಬಿಡುಗಡೆ ಮಾಡಲಾಗಿದೆ. ರಾಜ್ಯದಲ್ಲಿ ತೊಗರಿ ಕಾಳು ಖರೀದಿಸಲು ಗುಲ್ಬರ್ಗಾ, ಯಾದಗಿರಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಒಟ್ಟು 16 ತೊಗರಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿರುತ್ತದೆ.

**ಅನುಬಂಧ**

| ಕ್ರ.ಸಂ. | ಜಿಲ್ಲೆ | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) |
|---|---|---|
| 1 | ಬೆಂಗಳೂರು ನಗರ | 1626 |
| 2 | ಬೆಂಗಳೂರು (ಗ್ರಾಮ) | 2095 |
| 3 | ರಾಮನಗರ | 4328 |
| 4 | ಕೋಲಾರ | 3401 |
| 5 | ಚಿಕ್ಕಬಳ್ಳಾಪುರ | 7579 |
| 6 | ತುಮಕೂರು | 14258 |
| 7 | ಶಿವಮೊಗ್ಗ | 1004 |
| 8 | ಚಿತ್ರದುರ್ಗ | 8661 |
| 9 | ದಾವಣಗೆರೆ | 10292 |
| 10 | ಮೈಸೂರು | 4533 |
| 11 | ಚಾಮರಾಜನಗರ | 1721 |
| 12 | ಮಂಡ್ಯ | 1380 |
| 13 | ಕೊಡಗು | 0 |

| | | |
|---|---|---|
| 14 | ಹಾಸನ | 2610 |
| 15 | ಚಿಕ್ಕಮಗಳೂರು | 682 |
| 16 | ದ.ಕನ್ನಡ | 0 |
| 17 | ಉಡುಪಿ | 0 |
| 18 | ಧಾರವಾಡ | 2895 |
| 19 | ಗದಗ | 3204 |
| 20 | ಹಾವೇರಿ | 3037 |
| 21 | ಉ.ಕನ್ನಡ | 0 |
| 22 | ಬೆಳಗಾಂ | 4451 |
| 23 | ಬಿಜಾಪುರ | 92511 |
| 24 | ಬಾಗಲಕೋಟೆ | 7370 |
| 25 | ರಾಯಚೂರು | 45133 |
| 26 | ಕೊಪ್ಪಳ | 10381 |
| 27 | ಬಳ್ಳಾರಿ | 10970 |
| 28 | ಗುಲ್ಬರ್ಗಾ | 372595 |
| 29 | ಯಾದಗಿರಿ | 69216 |
| 30 | ಬೀದರ್ | 66976 |
| | **ಒಟ್ಟು** | **752909** |

## ಕೃಷಿ ಕ್ಷೇತ್ರದಲ್ಲಿ ಸಾಧಿಸಲಾದ ಪ್ರಗತಿ

## 155; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನಸಭಾ ಕ್ಷೇತ್ರ)

ಅ) ರಾಜ್ಯ ಸರ್ಕಾರವು 2011-12ನೇ ಸಾಲಿನಲ್ಲಿ ಪ್ರತ್ಯೇಕ ಕೃಷಿ ಆಯವ್ಯಯ ಪತ್ರ ಮಂಡಿಸಿದ ಹಿಂದಿನ ಉದ್ದೇಶವೇನು?

ಆ) ಕೃಷಿ ಕ್ಷೇತ್ರಕ್ಕಾಗಿ ಒದಗಿಸಲಾದ ಒಟ್ಟು ಅನುದಾನ, ಇಲ್ಲಿಯವರೆವಿಗೆ ಬಿಡುಗಡೆಯಾದ ಮೊತ್ತ ಮತ್ತು ಖರ್ಚು ಮಡಲಾದ ಮೊತ್ತವೆಷ್ಟು? (ವಿವರಗಳನ್ನು ನೀಡುವುದು);

ಇ) ಕೃಷಿ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾಧಿಸಲಾದ ಪ್ರಗತಿ ಎಷ್ಟು?

## ಶ್ರೀ ಉಮೇಶ್.ವಿ.ಕತ್ತಿ (ಕೃಷಿ ಸಚಿವರು)

ಅ) ಮಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

ಆ) ಕೃಷಿ ಇಲಾಖೆಗೆ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಮಾಹಿತಿಯನ್ನು ಅನುಬಂಧ-2 ಮತ್ತು ಅನುಬಂಧ-3 ರಲ್ಲಿ ಕ್ರಮವಾಗಿ ನೀಡಲಾಗಿದೆ.

ಇ) ಕಳೆದ ಮೂರು ವರ್ಷಗಳಲ್ಲಿ ಕೃಷಿ ಇಲಾಖೆಯಲ್ಲಿ ಸಾಧಿಸಲಾದ ಪ್ರಗತಿ ವಿವರಗಳು ಈ ಕೆಳಕಂಡಂತಿದೆ.

**(ರೂ. ಲಕ್ಷಗಳಲ್ಲಿ)**

| ವರ್ಷ | ವಾರ್ಷಿಕ ಗುರಿ | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|
| 2008-09 | 76829.07 | 71752.7 | 67556.43 |
| 2009-10 | 71378.24 | 64839.2 | 63494.52 |
| 2010-11 | 67366.78 | 60804.36 | 55809.64 |

ಕಳೆದ ಮೂರು ವರ್ಷಗಳಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಸಾಧಿಸಲಾದ ಪ್ರಗತಿ ವಿವರಗಳು ಈ ಕೆಳಕಂಡಂತಿದೆ.

| | | (ರೂ. ಲಕ್ಷಗಳಲ್ಲಿ) |
|---|---|---|
| **ವರ್ಷ** | **ಆರ್ಥಿಕ (ರೂ. ಲಕ್ಷಗಳಲ್ಲಿ)** | **ಭೌತಿಕ (ಹೆ.ಗಳಲ್ಲಿ)** |
| 2008–09 | ರೂ. 33652.15 | 371482 |
| 2009–10 | ರೂ.26878.84 | 358553 |
| 2010–11 | ರೂ.27789.35 | 291095 |

**ಅನುಬಂಧ–1**

ನಮ್ಮ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಶೇಕಡ 70ರಷ್ಟು ಜನಸಂಖ್ಯೆ ಕೃಷಿಯನ್ನು ಆಧರಿಸಿದೆ. ಇತ್ತೀಚಿನ ವರ್ಷಗಳಲ್ಲಿ ಈ ಪ್ರಮಾಣ ಶೇಕಡ 61ಕ್ಕೆ ಇಳಿದಿದ್ದು, ದೇಶದ ಬೆನ್ನೆಲುಬಾದ ರೈತರ ಸ್ಥಿತಿ–ಗತಿಗಳು ನಿರೀಕ್ಷಿತ ಪ್ರಮಾಣದಲ್ಲಿ ಸುಧಾರಿಸಿರುವುದಿಲ್ಲ. ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಹಾಗೂ ವಿಭಿನ್ನವಾದ ಪ್ರಯತ್ನಗಳನ್ನು ಮಾಡುವ ಅಗತ್ಯವಿದ್ದು, ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕೃಷಿಗಾಗಿಯೇ ಪ್ರತ್ಯೇಕ ಬಜೆಟ್ ಅನ್ನು ಮಂಡಿಸಲು ತೀರ್ಮಾನಿಸಲಾಯಿತು.

- ಕೃಷಿಯು ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿದ್ದು, ಕೃಷಿ ವಲಯದ ಅಭಿವೃದ್ಧಿಯಲ್ಲಿ ರಾಜ್ಯ ಸರ್ಕಾರದ ಪಾತ್ರವು ಬಹು ಮಹತ್ತರವಾದದ್ದು.
- ಹಿಡುವಳಿಯ ಗಾತ್ರ ಕ್ರಮೇಣ ಕಡಿಮೆಯಾಗುತ್ತಿದೆ ಹಾಗೂ 1970–71ರಲ್ಲಿ 35.51 ಲಕ್ಷ ಹಿಡುವಳಿಗಳಿದ್ದು, 2001–02ರಲ್ಲಿ 70–79 ಲಕ್ಷ, ಮತ್ತು 2005–06ರಲ್ಲಿ 75.81 ಲಕ್ಷಕ್ಕೆ ಹೆಚ್ಚಿವೆ. ಸರಾಸರಿ

ಹಿಡುವಳಿ ಪ್ರದೇಶ 1970–71ರಲ್ಲಿ 3.20 ಹೆಕ್ಟೇರ್‌ನಿಂದ 2005–06 ರಲ್ಲಿ 1.63 ಹೆಕ್ಟೇರ್‌ಗೆ ಇಳಿದಿದೆ.

- ಗ್ರಾಮೀಣ ಪ್ರದೇಶದಲ್ಲಿ ಕೃಷಿ ವಲಯವು ಹೆಚ್ಚಿನ ಉದ್ಯೋಗಾವಕಾಶ ಹಾಗೂ ಆದಾಯವನ್ನು ಕಲ್ಪಿಸುವ ಸಾಮರ್ಥ್ಯವನ್ನು ಹೊಂದಿದೆ.
- ಇತ್ತೀಚಿನ ವರ್ಷಗಳಲ್ಲಿ ಕೃಷಿಯಲ್ಲಿ ಉದ್ಯೋಗಾವಾಕಾಶದ ಪ್ರಮಾಣ ಶೇಕಡ 65 ರಿಂದ 61ಕ್ಕೆ ಇಳಿಮುಖವಾಗಿದ್ದು, ಜಿ.ಡಿ.ಪಿ. ಕೊಡುಗೆಯು ಅರ್ಧದಷ್ಟು ಅಂದರೆ ಶೇಕಡ 36 ರಿಂದ ಶೇಕಡ 18ಕ್ಕೆ ಇಳಿಮುಖವಾಗಿರುತ್ತದೆ.
- ಕೃಷಿ ನೀತಿಯಲ್ಲಿ ತೀರ್ಮಾನಿಸಿದಂತೆ, ಕೃಷಿ ಕ್ಷೇತ್ರದ ಜಿ.ಡಿ.ಪಿ.ಯನ್ನು ಸುಮಾರು ಶೇಕಡ 4.5ಕ್ಕೆ ಹೆಚ್ಚಿಸಿ ತೀವ್ರಗೊಳಿಸುವುದು ಕಷ್ಟ ಸಾಧ್ಯವಾಗಿದ್ದು, 10ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಿದ ಪ್ರಗತಿಗಿಂತ ಎರಡರಷ್ಟಕ್ಕೂ ಹೆಚ್ಚು ಕೃಷಿ ಬೆಳವಣಿಗೆಯನ್ನು ಸಾಧಿಸುವ ಸವಾಲನ್ನು ಮುಂದಿಡಲಾಗಿದೆ. ಇದಕ್ಕಾಗಿ ಸರಬರಾಜು ಹಾಗೂ ಬೇಡಿಕೆ ವಿಭಾಗದತ್ತ ತೀವ್ರ ಗಮನಹಸಿರಬೇಕಾಗಿದೆ.

**ಕೃಷಿ ಹಾಗೂ ಕೃಷಿಯೇತರ ಅಭಿವೃದ್ಧಿಯಲ್ಲಿ ಒತ್ತು ಕೊಡಬೇಕಾದ ಅಂಶಗಳು:**

- **ಬಂಡವಾಳದ ಕೊರತೆ**: ಹಲವಾರು ದಶಕಗಳಿಂದಲೂ ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳಿಗೆ ಅವಶ್ಯಕವಾದ ಬಂಡವಾಳವನ್ನು ತೊಡಗಿಸದೇ ಇರುವುದು ಒಂದು ಪ್ರಮುಖ ಕೊರತೆಯಾಗಿದೆ. ಈಗ ಹೂಡಿಕೆಯಾಗುತ್ತಿರುವ ಬಂಡವಾಳದಲ್ಲಿ ಬಹುತೇಕ ರೈತರ ಸ್ವಂತ ಬಂಡವಾಳವಾಗಿದೆ. ಇದು ಇತರೆ ಕ್ಷೇತ್ರಗಳಿಗಿಂತ ಕಡಿಮೆ ಪ್ರಮಾಣದಲ್ಲಿದೆ. ಸಾಂಸ್ಥಿಕ ಹಣಕಾಸು ಮೂಲಗಳಿಂದಲೂ ಸಹ ರೈತರಿಗೆ ಸುಲಭವಾಗಿ ಮತ್ತು ಸಾಕಷ್ಟು ಬಂಡವಾಳ ಸಿಗುತ್ತಿಲ್ಲ
- **ಸೂಕ್ತ ತಾಂತ್ರಿಕತೆಯ ಕೊರತೆ**: ಪ್ರಯೋಗಾಲಯಗಳಲ್ಲಿ ಮತ್ತು ಖಾಸಗಿ ಸಂಶೋಧನಾ ಸಂಸ್ಥೆಗಳಲ್ಲಿ ತಾಂತ್ರಿಕತೆ ಬೆಳೆದಿದೆ

ಯಾದರೂ, ಇದನ್ನು ರೈತನಿಗೆ ಮುಟ್ಟಿಸುವಲ್ಲಿ ಮತ್ತು ಅದರಿಂದ ಲಾಭ ಪಡೆಯುವಲ್ಲಿ ಸಾಕಷ್ಟು ಸಫಲವಾಗಿಲ್ಲ. ಈ ಅಂಶ ಸೂಕ್ತವಾದ ಬೆಳೆಯ ತಳಿಗಳು, ಕೃಷಿ ಪದ್ಧತಿಗಳು, ರೈತರಿಗೆ ತರಬೇತಿ ಮತ್ತು ಸಂಬಂಧಪಟ್ಟ ಎಲ್ಲಾ ಕ್ಷೇತ್ರಗಳಿಗೂ ಅನ್ವಯ ವಾಗುತ್ತದೆ.

- **ಸಂಸ್ಕರಣೆ ಮತ್ತು ಮಾರುಕಟ್ಟೆ:** ನಮ್ಮ ರೈತರು ಬಿಸಿಲು, ಮಳೆ ಎನ್ನದೆ ಬೆವರು ಸುರಿಸಿ, ಕಷ್ಟಪಟ್ಟು ಬೆಳೆದ ಬೆಳೆಗಳಿಗೆ ಸೂಕ್ತವಾದ ಬೆಲೆ ದೊರೆಯುತ್ತಿಲ್ಲ. ಅಗತ್ಯ ಮಾರುಕಟ್ಟೆ ಸೌಲಭ್ಯಗಳಿಲ್ಲದ ಜೊತೆಗೆ, ಸೂಕ್ತ ವರ್ಗೀಕರಣ ವ್ಯವಸ್ಥೆ, ಉಗ್ರಾಣ, ಶೀತಲಕೇಂದ್ರ ಮತ್ತು ಸಂಸ್ಕರಣಾ ಕೇಂದ್ರಗಳ ಕೊರತೆಯಿಂದ ರೈತರಿಗೆ ಲಾಭದಾಯಕ ಬೆಲೆ ಸಿಗುತ್ತಿಲ್ಲ. ಇನ್ನೊಂದು ಕಡೆ, ಬಳಕೆದಾರರಿಗೂ ಸಹ ಕೃಷಿ ಮತ್ತು ಕೃಷಿಯೇತರ ಸಾಮಗ್ರಿಗಳೂ ಸುಲಭ ಬೆಲೆಗೆ ದೊರೆಯುತ್ತಿಲ್ಲ.
- **ಸಹಭಾಗಿತ್ವದ ಕೊರತೆ:** ನಮ್ಮ ದೇಶದಲ್ಲಿ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಣಿತ ಸಂಸ್ಥೆಗಳಿದ್ದರೂ ಸಹ ಅವುಗಳ ಸೇವೆಯನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಸೂಕ್ತ ರೀತಿ ನೀತಿಗಳನ್ನು ರೂಪಿಸುವ ಅವಶ್ಯಕತೆ ಇದೆ.

ಮೊದಲಿನಿಂದಲೂ, ಕೃಷಿ ಮತ್ತು ಕೃಷಿ ಸಂಬಂಧಿ ಕಾರ್ಯ ಚಟುವಟಿಕೆಗಳ ಮೇಲಿನ ವೆಚ್ಚಗಳನ್ನು ಒಟ್ಟಾರೆ ಆರ್ಥಿಕ ಆಯವ್ಯಯ ದಡಿಯಲ್ಲೇ ಒದಗಿಸಲಾಗುತ್ತಿತ್ತು. ಹಲವಾರು ಉಪಕ್ರಮಗಳನ್ನು ತೆಗೆದು ಕೊಂಡಿದ್ದರೂ ಮತ್ತು ಪ್ರತಿ ಯೋಜನೆಯ ವೆಚ್ಚವನ್ನು ಗಮನಾರ್ಹವಾಗಿ ಹೆಚ್ಚಿಸಿದ್ದರೂ, ಕೃಷಿ ವಲಯದ ನಿರ್ಬಂಧಗಳನ್ನು ಹೋಗಲಾಡಿಸಲು ಮತ್ತು ಅದಕ್ಕೆ ಅಗತ್ಯವಾದ ಚಾಲನೆ ಒದಗಿಸಲು ಕಷ್ಟವಾಗಿದೆ. ಕೃಷಿ ವಲಯದ ಬೆಳವಣಿಗೆಗೆ ಅಗತ್ಯವಾದ ಚಾಲನಾ ಶಕ್ತಿ ಒದಗಿಸಲು ಆಯವ್ಯಯದಲ್ಲಿ ಕೃಷಿಯನ್ನು ಪ್ರತ್ಯೇಕವಾಗಿ ಪರಿಗಣಿಸಲು ಅವಶ್ಯಕವಾಗಿತ್ತು.

ಕೃಷಿ ಆಯವ್ಯಯವು ನೆಲ ಮತ್ತು ಜಲ ಕೇಂದ್ರೀಕೃತ ಯೋಜನೆಗಳ ಜೊತೆಗೆ ಅವುಗಳ ಉಪ ವಲಯಗಳ ಹಂಚಿಕೆಯನ್ನು ಒಳಗೊಂಡಿದೆ. ಈ

ಬಗ್ಗೆ ಒಂದು ಗಂಭೀರ ಚರ್ಚೆ ನಡೆಸಿ ಮತ್ತು ಸಮಸ್ಯೆಗಳನ್ನು ಸಮಗ್ರವಾಗಿ ಪರಿಹರಿಸಲು ಪೂರಕವಾದ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಕೃಷಿ ಆಯವ್ಯಯ ಅನುಕೂಲ ಆಗುವುದೆಂದು ಭಾವಿಸಿ ಪ್ರತ್ಯೇಕ ಕೃಷಿ ಬಜೆಟ್ ಅನ್ನು ಮಂಡಿಸಲಾಯಿತು.

# ಅನುಬಂಧ–2

**2011–12ನೇ ಸಾಲಿನಲ್ಲಿ ಕೃಷಿ ಇಲಾಖೆಗೆ ಒದಗಿಸಲಾದ ಒಟ್ಟು ಅನುದಾನ, ಇಲ್ಲಿಯವರೆಗೆ ಬಿಡುಗಡೆಯಾದ ಮತ್ತು ಖರ್ಚು ಮಾಡಲಾದ ಮೊತ್ತದ ವಿವರ (ರೂ. ಲಕ್ಷಗಳಲ್ಲಿ)**

| ಕ್ರ.ಸಂ. | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ | ವಾರ್ಷಿಕ ಗುರಿ (BE) | ವಾರ್ಷಿಕ ಗುರಿ (RE) | ಬಿಡುಗಡೆಯಾದ ಅನುದಾನ | ಫೆಬ್ರವರಿ 2012ರ ಅಂತ್ಯದ ವರೆಗಿನ ಸಂಚಿತ ವೆಚ್ಚ |
|---|---|---|---|---|---|
| ಎಸ್ 01 | ಕೃಷಿ ನಿರ್ದೇಶನಾಲಯ (2401–00–001–1–01) | 3000.00 | 2518.71 | 2250.00 | 489.43 |
| ಎಸ್ 02 | ಬೀಜಗಳ ಪೂರೈಕೆ (2401–00–103–0–15) | 6000.00 | 6000.00 | 4500.00 | 4645.60 |
| ಎಸ್ 03 | ಬೀಜ ಹಾನಿ ನಿಧಿ (2401–00–103–19) | 100.00 | 100.00 | 75.00 | |
| ಎಸ್ 04 | ಕರ್ನಾಟಕ ರಾಜ್ಯ ಬೀಜ ಪ್ರಮಾಣನ ಸಂಸ್ಥೆ RKVY (2401-00-103-0-21) | | 200.00 | | |
| ಎಸ್ 05 | ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ RKVY (2401-00-105-0-01) | | 800.00 | | |
| ಎಸ್ 06 | ಮಣ್ಣು ಆರೋಗ್ಯ ಕೇಂದ್ರಗಳು (2401–00–105–0–01) | 300.00 | 300.00 | 225.00 | 156.07 |
| ಎಸ್ 07 | ರಾಸಾಯನಿಕ ಗೊಬ್ಬರದ ಮೇಲಿನ ಬಡ್ಡಿ ಸಹಾಯಧನ (2401–00–105–0–27) | 1500.00 | 1500.00 | 1488.00 | 1488.00 |
| ಎಸ್ 08 | ಕೀಟನಾಶಕ ನಿಯಂತ್ರಣ ಪ್ರಯೋಗಶಾಲೆ (2401–00–107–0–03) | 250.00 | 250.00 | 187.50 | 178.28 |
| ಎಸ್ 09 | ಬೇಸಾಯ ಸಂಬಂಧಿತ ಚಟುವಟಿಕೆಗಳು (2401–00–109–0–21) | 300.00 | 300.00 | 225.00 | 137.36 |
| ಎಸ್ 10 | ಬೆಳೆ ಸಾಲಕ್ಕೆ ಸಹಾಯಧನ (2401–00–110–0–09) | 5000.00 | 2300.00 | | |
| ಎಸ್ 11 | ಇತರೆ ಕೃಷಿ ಯೋಜನೆಗಳು (2401–00–800–1–40) | 300.00 | 300.00 | 225.00 | 189.77 |
| ಎಸ್ 12 | ಸಾವಯವ ಕೃಷಿ (2401–00–800–1–43) | 20000.00 | 7500.00 | 5000.00 | 2578.42 |
| ಎಸ್ 13 | ನೂತನ ಕೃಷಿ ಉತ್ತೇಜನ ಯೋಜನೆ (2401–00–800–1–44) | 10000.00 | 7500.00 | 7500.00 | 4064.67 |

| | | | | | |
|---|---|---|---|---|---|
| ಎಸ್ 14 | ಜೈವಿಕ ಇಂಧನ (2401–00–800–1–46) | 10000.00 | 2000.00 | 2500.00 | 390.03 |
| ಎಸ್ 15 | ಮಣ್ಣಿನ ಸತ್ವ ಹೆಚ್ಚಿಸುವಿಕೆ (2401–00–800–1–58) | 2000.00 | 1700.00 | 1500.00 | 1095.81 |
| ಎಸ್ 16 | ಸಮಗ್ರ ಕೃಷಿ ವಿಸ್ತರಣಾ ಪದ್ಧತಿ (2401–00–800–1–61) | 1000.00 | 1000.00 | 1000.00 | 459.06 |
| ಎಸ್ 17 | ಕೃಷಿ ಬಂಡವಾಳ ಹೂಡಿಕೆ ನಿಧಿ (2401–00–800–1–62) | 50000.00 | 2300.00 | 2300.00 | 2300.00 |
| ಎಸ್ 18 | ಹಾವು ಕಡಿತಕ್ಕೆ ಪರಿಹಾರ (2401–00–800–1–63) | 100.00 | 100.00 | 100.00 | 478.16 |
| ಎಸ್ 19 | ರೈತರ ಉನ್ನತ ವ್ಯಾಪಾರ ಭಂಡಾರ (2401–00–800–1–65) | 500.00 | 250.00 | 375.00 | |
| ಎಸ್ 20 | ಸುವರ್ಣಭೂಮಿ ಯೋಜನೆ (2401–00–800–1–66) | 30000.00 | 26000.00 | 22500.00 | 22517.48 |
| ಎಸ್ 21 | ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ (2401–00–800–1–67) | | 500.00 | | |
| ಎಸ್ 22 | ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ಉನ್ನತೀಕರಣ (2401–00–800–3–05) | 750.00 | 550.00 | 562.50 | 372.00 |
| ಎಸ್ 23 | ಕೃಷಿ ಮೇಳ (2401–00–800–3–06) | 1000.00 | 800.00 | 750.00 | |
| ಎಸ್ 24 | ರೈತರ ಅಧ್ಯಯನ ಪ್ರವಾಸ (2401–00–800–3–07) | 300.00 | 300.00 | 225.00 | 66.00 |
| ಎಸ್ 25 | ಕರ್ನಾಟಕ ಕೃಷಿ ಆಯೋಗ (2401–00–800–3–08) | 100.00 | 100.00 | 75.00 | 47.69 |
| ಎಸ್ 26 | ಕರ್ನಾಟಕ ಕೃಷಿ ಮಾಹಿತಿ ಪದ್ಧತಿ (2401–00–800–3–08) | 528.00 | 328.00 | | |
| | ರಾಜ್ಯ ವಲಯ ಯೋಜನೆಗಳ – ಒಟ್ಟು (ಎ) | 143028.00 | 65496.71 | 53563.00 | 41653.83 |
| | ಜಿಲ್ಲಾ ವಲಯ ಯೋಜನೆಗಳ – ಒಟ್ಟು (ಬಿ) | 2165.80 | 2165.80 | 980.00 | 980.59 |
| | ಕೇಂದ್ರ ವಲಯ/ಪುರಸ್ಕೃತ ಯೋಜನೆಗಳು | | | | |
| ಸಿ.ಎಸ್. 01 | ಕುಯಿಲು ತಂತ್ರಜ್ಞಾನ ಮತ್ತು ನಿರ್ವಹಣೆ (2401–00–102–0–06) | | 139.05 | | |
| ಸಿ.ಎಸ್. 02 | ಹತ್ತಿ ಮಿನಿ ಮಿಷನ್ – II | 545.12 | 545.12 | 85.60 | 65.77 |
| ಸಿ.ಎಸ್. 03 | ಲಘು ನೀರಾವರಿ (2401–00–108–1–15) | 4000.00 | 4000.00 | 2537.75 | 2500.00 |

| | | | | | |
|---|---|---|---|---|---|
| ಸಿ.ಎಸ್. 04 | ಎಣ್ಣೆಕಾಳು ಉತ್ಪಾದನಾ ಕಾರ್ಯಕ್ರಮ | 6943.80 | 12079.50 | 5715.47 | 5717.47 |
| ಸಿ.ಎಸ್. 05 | ನೂತನ ವಿಸ್ತೃತ ಕಾರ್ಯ ನಿರ್ವಹಣೆ ಯೋಜನೆ – ವರ್ಕ್‌ಪ್ಲಾನ್ | 3860.60 | 3860.60 | 2332.07 | 1935.43 |
| ಸಿ.ಎಸ್. 06 | ಕೃಷಿ ತಂತ್ರಜ್ಞಾನ ನಿರ್ವಹಣಾ ಎಜೆನ್ಸಿ (2401–00–800–1–53) | 400.00 | 300.00 | 111.11 | 24.39 |
| ಸಿ.ಎಸ್. 07 | ಅಗ್ರಿಸ್ ನೆಟ್ (2401–00–800–1–54) | 100.00 | 100.00 | 81.88 | |
| ಸಿ.ಎಸ್. 08 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401–00–800–1–57) | 8900.00 | 27909.00 | 27843.00 | 15006.05 |
| | ಕೇಂದ್ರ ಪುರಸ್ಕೃತ ಯೋಜನೆಗಳ – ಒಟ್ಟು (ಸಿ) | 24749.52 | 48933.22 | 38706.88 | 25247.11 |
| II | ಬಂಡವಾಳ ವೆಚ್ಚಗಳು | | | | |
| ಎಸ್. 27 | ಸಸ್ಯ ಸಂಗೋಪನೆ ಬಂಡವಾಳ ವೆಚ್ಚ (4401–00–001–1–01) | 200.00 | 200.00 | | |
| ಎಸ್. 28 | ರೈತ ಸಂಪರ್ಕ ಕೇಂದ್ರಗಳು (4401–00–001–1–04) | 2000.00 | 2000.00 | 300.00 | 359.30 |
| ಎಸ್. 29 | ಮೈಕ್ರೋ ನೀರಾವರಿ ಮಂಡಳಿ (4401–00–108–1–01) | 1000.00 | 500.00 | | |
| ಎಸ್. 30 | ಶಿವಮೊಗ್ಗ ಕೃಷಿ ವಿಶ್ವ ವಿದ್ಯಾಲಯದ (4401–00–800–1–02) | 1000.00 | 1000.00 | 200.00 | 200.00 |
| | **ಬಂಡವಾಳ ವೆಚ್ಚಗಳು – ಒಟ್ಟು (4401)** | **4200.00** | **3700.00** | **500.00** | **559.30** |
| | **ಎಲ್ಲಾ ಒಟ್ಟು (2401 + 4401)** | **174143.32** | **120295.78** | **93750.47** | **68440.83** |

# ಅನುಬಂಧ–3

**2011–12ನೇ ಸಾಲಿಗೆ ಜಲಾನಯನ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳಡಿ ಯೋಜನಾವಾರು ಫೆಬ್ರವರಿ–2012 ರ ಅಂತ್ಯಕ್ಕೆ ಒದಗಿಸಲಾದ ಅನುದಾನ, ಬಿಡುಗಡೆ ಮತ್ತು ಖರ್ಚು ಮಾಡಿದ ಹಣದ ವಿವರ**

(ರೂ. ಲಕ್ಷಗಳಲ್ಲಿ)

**LC Qn.No.61(155)**

| ಕ್ರ. ಸಂ. | ಯೋಜನೆಯ ಹೆಸರು / ಲೆಕ್ಕ ಶೀರ್ಷಿಕೆ | ವಾರ್ಷಿಕ ಅನುದಾನ | ಪರಿಷ್ಕೃತ ಗುರಿ | ಒಟ್ಟು ಬಿಡುಗಡೆಯಾದ ಹಣ | ರ ಮಾಹೆಯ ವರೆಗಿನ ವೆಚ್ಚ (ಸಂಚಿತ) | ಷರಾ |
|---|---|---|---|---|---|---|
| **1** | **2** | **3** | **4** | **5** | **6** | **7** |
| 1 | ಜಲಾನಯನ ಅಭಿವೃದ್ಧಿ ಇಲಾಖೆ ಸಿಬ್ಬಂದಿ 2402–00–102–0–15 | 475.00 | 475.00 | 356.25 | 340.82 | |
| 2 | ಜಲಾನಯನ ಅಭಿವೃದ್ಧಿ ತರಬೇತಿ ಕೇಂದ್ರ 2402–00–109–0–02 | 60.00 | 60.00 | 45.00 | 12.75 | |
| 3 | ತರಬೇತಿ ಮತ್ತು ಮೌಲ್ಯಮಾಪನ 2402–00–109–0–03 | 8.25 | 8.25 | 6.18 | 3.47 | |
| 4 | ಉಪ್ಪು ಮತ್ತು ಕ್ಷಾರೀಯ ನೀರಿನಿಂದ ಆವರತ ಪ್ರದೇಶಗಳ ಅಭಿವೃದ್ಧಿ 2402–00–800–0–02 | 214.00 | 214.00 | 104.48 | | ಜನವರಿ–2012 ರ ಮಾಹೆಯಲ್ಲಿ ಅನುದಾನ ಬಿಡುಗಡೆಯಾಗಿದು, ಕಾಮಗಾರಿಗಳು ಪ್ರಗತಿಯಲ್ಲಿವೆ. |
| 5 | ಸುಜಲ ಜಲಾನಯನ ಯಘಜನೆ (3) 2402–000–800–080 | 1000.00 | 1000.00 | 250.00 | 31.94 | |

| | | | | | | |
|---|---|---|---|---|---|---|
| 6 | ಪ್ರಧಾನಮಂತ್ರಿಯವರ ಪರಿಹಾರ ಪ್ಯಾಕೇಜ್ ಜಲಾನಯನ ಯೋಜನೆಯಲ್ಲಿ ಭಾಗವಹಿಸುವಿಕೆ 2402–00–800–0–04 | 2603.00 | 2603.00 | 2989.16 | 2119.12 | |
| 7 | ಮೀನುಗಾರಿಕೆ ಕೃಷಿ ಹೊಂಡಗಳು ಮತತು ಇತರೆ ನೀರಿನ ಕೊಯಿಲು ಸಾಧನಗಳು 2402–00–800–0–05 | 45.00 | 45.00 | 30.25 | 22.28 | |
| 8 | ತಡೆ ಆಣೆಕಟ್ಟುಗಳಿಗಾಗಿ ಅಂದೋಲನ 2040–00–800–0–08 | 300.00 | 300.00 | 225.00 | 179.51 | |
| 9 | ವಿಶೇಷ ಘಟಕ ಯೋಜನೆ: ಎಸ್.ಡಿ.ಪಿ. 2402–00–789–0–01–133 | 1851.25 | 1851.25 | 925.62 | 745.04 | |
| 10 | ವಿಶೇಷ ಘಟಕ ಯೋಜನೆ: ಎಸ್.ಡಿ.ಪಿ. ಹೊರತುಪಡಿಸಿದ ಇತರೆ ತಾಲ್ಲೂಕುಗಳು 2402–00–789–0–01–422 | 692.15 | 692.15 | 346.07 | 238.22 | |
| 11 | ಗಿರಿಜನ ಉಪಯೋಜನೆ: ಎಸ್.ಡಿ.ಪಿ. 2402–00–796–0–01–133 | 748.75 | 748.75 | 561.56 | 421.76 | |
| 12 | ಗಿರಿಜನ ಉಪಯೋಜನೆ: ಎಸ್.ಡಿ.ಪಿ.ಹೊರತುಪಡಿಸಿದ ಇತರೆ ತಾಲ್ಲೂಕುಗಳು 2402–00–789–0–01–423 | 279.60 | 279.60 | 209.70 | 166.22 | |
| 13 | ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮ 2402–00–800–0–12 | 21700.00 | 21700.00 | 22496.67 | 10970.81 | |
| 14 | ಜಲಸಿರಿ–ನೀರು ಸಂಗ್ರಹಣ ವಿನ್ಯಾಸಗಳ ನಿರ್ಮಾಣ (SDP) | 2700.00 | 2700.00 | 2025.00 | 1433.37 | |

| | | | | | | |
|---|---|---|---|---|---|---|
| | 2402–00–800–0–13–133 | | | | | |
| 15 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಮಳೆಯಾಶ್ರಿತ ಪ್ರದೇಶಗಳ ಅಭಿವೃದ್ಧಿ ಯೋಜನೆ RADP) 2402–00–800–0–06 | 2400.00 | 2000.00 | 1000.00 | 603.70 | |
| 16 | ನಬಾರ್ಡ್–ಡಬ್ಲ್ಯು.ಡಿ.ಎಫ್. 2402–00–104–0–91 | 120.00 | 120.40 | | | ಸರ್ಕಾರದಿಂದ ಅನುದಾನ ಬಿಡುಗಡೆ ನಿರೀಕ್ಷಿಸಲಾಗಿದೆ. |
| 17 | ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ 2402–00–104–0–21 | 2910.30 | 1125.97 | 1125.97 | 418.18 | |
| 18 | ನದಿ ಕಣಿವೆ ಯೋಜನೆ 2402–00–104–0–01 | 2641.70 | 1125.00 | 1125.00 | 434.13 | |
| 19 | ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ 2501–01–101–0–04 | 3781.88 | 3781.88 | 3601.97 | 2616.76 | |
| 20 | ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ 2501–01–101–1–01 | 1968.84 | 1968.84 | 1447.41 | 1164.94 | |
| 21 | ಮರುಭೂಮಿ ಅಭಿವೃದ್ಧಿ ಯೋಜನೆ 2501–01–101–1–03 | 1394.00 | 1394.00 | 1990.84 | 1465.75 | |
| 22 | ನಬಾರ್ಡ್ ಆರ್ ಐ ಡಿ ಎಫ್ 4402–00–800–0–01 | 300.00 | 300.00 | | | ಯೋಜನೆ ಸರ್ಕಾರದಿಂದ ಅನುಮೋದಿಸಲ್ಪಟ್ಟಿಲ್ಲ. |
| | ಒಟ್ಟು | **48194.12** | **44493.09** | **40862.13** | **23388.77** | |

## ಸುವರ್ಣ ಗ್ರಾಮೋದಯ ಯೋಜನೆ ಬಗ್ಗೆ

**156; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಸುವರ್ಣ ಗ್ರಾಮೋದಯ ಯೋಜನೆ ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಧಾರವಾಡ, ಗದಗ್ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಎಷ್ಟು ಗ್ರಾಮಗಳನ್ನು ಅಭಿವೃದ್ಧಿ ಪಡಿಸಲಾಗಿದೆ; ಎಷ್ಟು ಗ್ರಾಮಗಳಲ್ಲಿ ರಸ್ತೆ ಮತ್ತು ಚರಂಡಿಗಳ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ; (ವಿವರಗಳನ್ನು ನೀಡುವುದು)

ಆ) ಅದರಂತೆ, "ಜಲ ನಿರ್ಮಲ್" ಯೋಜನೆ ಅಡಿಯಲ್ಲಿ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ;

ಇ) ಅದೇ ರೀತಿ ಎಷ್ಟು ಗ್ರಾಮೀಣ ಶಾಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗಿದೆ?

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಗ್ರಾಮೀಣ**

**ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು):**

ಅ) ಧಾರವಾಡ, ಗದಗ್ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ 3ನೇ ಹಂತದಡಿ ಕ್ರಮವಾಗಿ 16, 21 ಮತ್ತು 40 ಗ್ರಾಮಗಳನ್ನು 2009-10ನೇ ಸಾಲಿನಲ್ಲಿ ಆಯ್ಕೆ ಮಾಡಲಾಗಿದೆ. 3ನೇ ಹಂತದಡಿ ಧಾರವಾಡ, ಗದಗ್ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಆಯ್ಕೆಯಾದ ಗ್ರಾಮಗಳ ಪೈಕಿ ಕ್ರಮವಾಗಿ 15, 18 ಮತ್ತು 40 ಗ್ರಾಮಗಳಲ್ಲಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಆ) ಜಲ ನಿರ್ಮಲ್ ಯೋಜನೆಯಡಿ ಗದಗ್ ಜಿಲ್ಲೆಯಲ್ಲಿ 134 ಗ್ರಾಮಗಳಿಗೆ ಮತ್ತು 1 ತಾಂಡಾಕ್ಕೆ ಹಾಗೂ ಹಾವೇರಿ ಜಿಲ್ಲೆಯಲ್ಲಿ 256 ಗ್ರಾಮಗಳಿಗೆ

ಕುಡಿಯುವ ನೀರು ಒದಗಿಸುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಹಾಗೂ ಧಾರವಾಡ ಜಿಲ್ಲೆಯಲ್ಲಿ 11 ಗ್ರಾಮಗಳಲ್ಲಿ ಕುಡಿಯುವ ನೀರು ಒದಗಿಸುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಇ) ಧಾರವಾಡ, ಗದಗ್ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಕ್ರಮವಾಗಿ 69, 52 ಮತ್ತು 217 ಗ್ರಾಮೀಣ ಶಾಲೆಗಳಿಗೆ ಕುಡಿಯು ನೀರಿನ ಸೌಲಭ್ಯ ಒದಗಿಸಲಾಗಿದೆ.

**ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವವರ ಬಗ್ಗೆ**

**158; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಅ)** ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಜನಾಂಗದವರ ಏಳ್ಗೆಗಾಗಿ ಸರ್ಕಾರವು ಕೈಗೊಂಡ ಕ್ರಮಗಳೇನು;

**ಆ)** ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಜನಾಂಗದವರನ್ನು ಈ ವೃತ್ತಿಯಿಂದ ಮುಕ್ತಗೊಳಿಸಿ ಇತರರೊಂದಿಗೆ ಗೌರವಯುಕ್ತ ಜೀವನ ನಡೆಸುವಂತೆ ಯಾವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ;

ಇ) ಈ ವೃತ್ತಿಯಲ್ಲಿ ತೊಡಗಿರುವವರ ಆರೋಗ್ಯ ಕಾಪಾಡಲು ಯಾವ ಯಾವ ಕ್ರಮಗಳನ್ನು ಕೇಗೊಳ್ಳಲಾಗುತ್ತಿದೆ?

**ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)**

**ಅ)**

1. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಣ ಶೌಚಾಲಯಗಳು ಹಾಗೂ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ಬಗ್ಗೆ ಸಮೀಕ್ಷೆ ನಡೆಸಲು ಕರಮ ಕೈಗೊಂಡಿದ್ದು ಸಮೀಕ್ಷೆಯ ವರದಿಯ ಆಧಾರದ ಮೇಲೆ ಅಸ್ತಿತ್ವದಲ್ಲಿರುವ ಒಣ ಶೌಚಾಲಯಗಳ ನಿರ್ಮೂಲನೆ, ಒಣ ಶೌಚಾಲಯಗಳನ್ನು ನೀರಿನ ಶೌಚಾಲಯ

ಗಳಾಗಿ ಪರಿವರ್ತಿಸುವುದು, ಒಣ ಶೌಚಾಲಯಗಳನ್ನು ಹೊಂದಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಗುರುತಿಸಲಾದ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳಿಗೆ ವಿವಿಧ ಕಲ್ಯಾಣ ಹಾಗೂ ಪುನರ್ವಸತಿ ಯೋಜನೆಗಳನ್ನು ಹಮ್ಮಿಕೊಳ್ಳಲು ಕ್ರಮ ಕೈಗೊಳ್ಳಲಾಗಿರುತ್ತದೆ.

**2.** ಸ್ವಚ್ಛತಾ ಗುತ್ತಿಗೆದಾರರಡಿಯಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರಿಗೆ ಚಾಲ್ತಿಯಲ್ಲಿರುವ ಕನಿಷ್ಠ ವೇತನವನ್ನು ಪಾವತಿಸಲು, ಕಾರ್ಮಿಕರ ಭವಿಷ್ಯ ನಿಧಿ ಮತ್ತು ವಿಮಾ ಸೌಲಭ್ಯಗಳನ್ನು ಒದಗಿಸಲು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೂ ಅಗತ್ಯ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

**3.** ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೇ. 22.75ರ ಕಲ್ಯಾಣ ನಿಧಿ ಯೋಜನೆಯಡಿಯಲ್ಲಿ ಸಣ್ಣ ಉದ್ದಿಮೆಗಳಿಗಾಗಿ ಸಹಾಯಧನ ನೀಡುವುದು, ನಿವೇಶನ ಒದಗಿಸುವುದು, ಗೃಹ ನಿರ್ಮಾಣ ಸಾಲ ನೀಡುವುದು, ಕೌಶಲ್ಯ ಅಭಿವೃದ್ಧಿ ತರಬೇತಿ, ಕೃತಕ ಅಂಗ ಜೋಡಣೆಗೆ ಸಹಾಯಧನ ಒದಗಿಸುವುದು ಇತ್ಯಾದಿ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಈ ಯೋಜನೆಯ ಪ್ರಯೋಜನವನ್ನು ಪೌರಕಾರ್ಮಿಕರು ಕೂಡ ಪಡೆಯಬಹುದಾಗಿರುತ್ತದೆ.

**4.** ನಗರ ಸ್ಥಳೀಯ ಸಂಸ್ಥೆಗಳಾದ ಪಟ್ಟಣ ಪಂಚಾಯತಿ, ಪುರಸಭೆ ಮತ್ತು ನಗರಸಭೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರಾಗಿದ್ದ ಪಕ್ಷದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿರನ್ವಯ ಸಹಜ ಸಾವನ್ನು ಹೊರತು ಪಡಿಸಿ ನಗರ ಸ್ಥಳೀಯ ಸಂಸ್ಥೆಗಳ ಮುನಿಸಿಪಲ್ ನಿಧಿ ಅಥವಾ ಎಸ್.ಎಫ್.ಸಿ. ಮುಕ್ತನಿಧಿಯಿಂದ ಭರಿಸಿ ಪ್ರತಿಯೊಂದು ಪ್ರಕರಣದಲ್ಲಿಯೂ ರೂ. 1.50 ಲಕ್ಷಗಳನ್ನು

ಸಹ ಅವಲಂಬಿತರಿಗೆ ಸಂದಾಯ ಮಾಡಲಾಗುವುದು. ಈ ಹಣವನ್ನು ದುರ್ಘಟನೆ ನಡೆದ 24 ಘಂಟೆಗಳೊಳಗಾಗಿ ಮೃತರ ಕುಟುಂಬದ ಅವಲಂಬಿತರಿಗೆ ವಿತರಿಸಲಾಗುವುದು ಹಾಗೂ ಇದನ್ನು ಎನ್.ಡಿ.ಆರ್.ಎಫ್. (National Disaster Response Fund) ಮಾರ್ಗಸೂಚಿಯ ಅನ್ವಯ ನಿಗಧಿ ಪಡಿಸಲಾಗಿದೆ.

**5.** ದುರ್ಮರಣ ಹೊಂದಿದ ವ್ಯಕ್ತಿಯನ್ನು ಒಂದು ವೇಳೆ ಗುತ್ತಿಗೆದಾರನು ನೇಮಕ ಮಾಡಿಕೊಂಡ ಪ್ರಸಂಗದಲ್ಲಿ ನಿಯಮಾನುಸಾರ ನೀಡಬೇಕಾದ ಹಣವನ್ನು ಪಾವತಿಸುವುದಲ್ಲದೆ ಕಾರ್ಮಿಕ ಪರಿಹಾರ ಕಾಯ್ದೆಯಡಿ ಲೆಕ್ಕಾಚಾರ ಮಾಡಿ ಸಂಬಂಧಿತ ಗುತ್ತಿಗೆದಾರರು ದುರ್ಮರಣ ಹೊಂದಿದ ವ್ಯಕ್ತಿಯ ಅವಲಂಬಿತರಿಗೆ ಪರಿಹಾರವನ್ನು ಪಾವತಿಸಲು ಕಲ್ಪಿಸಲಾಗಿದೆ.

ಆ) 2006–07ರಲ್ಲಿ, ಮೇ ಡಾಟಾಮೇಷನ್ ರಿಸರ್ಚ್ ಅನಾಲಿಸ್ಟ್‌ರವರ ಮೂಲಕ ರಾಜ್ಯದಲ್ಲಿರುವ ಮಾನ್ಯುಯಲ್ ಸ್ಕಾವೆಂಜರ್ಸ್ ಮತ್ತು ಅವಲಂಬಿತ ಕುಟುಂಬಗಳನ್ನು ಗುರುತಿಸುವ ಸಲುವಾಗಿ ಕೈಗೊಳ್ಳಲಾದ ಸಮೀಕ್ಷೆಯಲ್ಲಿ ಗುರುತಿಸಲಾದ 296 ಮಾನ್ಯುಯಲ್ ಸ್ಕಾವೆಂಜರ್ಸ್ ಮತ್ತು ಅವಲಂಬಿತರ ಪಟ್ಟಿಯನ್ನು ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಪುನರ್ವಸತಿ ಕಲ್ಪಿಸುವ ಸಲುವಾಗಿ ಸಲ್ಲಿಸಿದ್ದು, ನೀಡಲಾದ ಪ್ರಸ್ತಾವನೆಯಲ್ಲಿರುವ ಎಲ್ಲಾ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲಾಗಿರುತ್ತದೆ.

ಇ) ಪೌರಕಾರ್ಮಿಕರ ಆರೋಗ್ಯ ಹಿತದೃಷ್ಟಿಯಿಂದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿರ್ವಹಿಸಲಾಗುವ ಸ್ವಚ್ಛತಾ ಹಾಗೂ ನೈರ್ಮಲ್ಯ ಕೆಲಸಗಳನ್ನು ಯಾಂತ್ರಿಕೃತಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಪೌರಕಾರ್ಮಿಕರ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಅವರಿಗೆ ಸುರಕ್ಷತಾ ಧಿರಿಸುಗಳಾದ ಗಂಬೂಟು, ಕೈಗವಚ, ಮುಖಕವಚಗಳು ಮತ್ತು ಇತರೆ ಅಗತ್ಯ ಸುರಕ್ಷತಾ ಸಾಮಗ್ರಿಗಳನ್ನು ಕಡ್ಡಾಯವಾಗಿ ಒದಗಿಸಲು ಹಾಗೂ ಪ್ರತಿ ವರ್ಷದ 22ನೇ ಫೆಬ್ರವರಿ ಅಥವಾ 2ನೇ

ಸಪ್ಟೆಂಬರ್ ದಿನವನ್ನು 'ಪೌರಕಾರ್ಮಿಕರ ದಿನ'ವನ್ನಾಗಿ ಆಚರಿಸಿ ಪೌರಕಾರ್ಮಿಕರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಅಲ್ಲದೇ ಪ್ರತಿಯೊಬ್ಬ ಪೌರಕಾರ್ಮಿಕನಿಗೂ 3 ತಿಂಗಳಿಗೊಮ್ಮೆ ಅಸಿಸ್ಟೆಂಟ್ ಸರ್ಜನ್‌ದರ್ಜೆಗಿಂತ ಮೇಲಿನ ಸರ್ಕಾರಿ ವೈದ್ಯಾಧಿಕಾರಿಗಳಿಂದ ತಪಾಸಣೆಯನ್ನು ಮಾಡಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

**ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೀಜನೆ ಬಗ್ಗೆ**

**157; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸಕಾಲದಲ್ಲಿ ಕೂಲಿ ಸಿಗದೆ ಕಾರ್ಮಿಕರು ಗುಳೇ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೃಷಿ ಕೆಲಸಕ್ಕೆ ಕಾರ್ಮಿಕರ ಕೊರತೆ ನಿವಾರಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ. (ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನೆಗಾಗಿ ಒದಗಿಸಲಾದ ಅನುದಾನ ಮತ್ತು ಖರ್ಚಿನ ವಿವರಗಳನ್ನು ಒದಗಿಸುವುದು);

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)**

ಅ) ಕಳೆದ ಸಾಲುಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಯೋಜನೆಯಡಿ ಅನುದಾನದ ವೆಚ್ಚವನ್ನು ಪರಿಶೀಲಿಸಿದಾಗ 60% ಹೆಚ್ಚಿನ ವೆಚ್ಚವು ಡಿಸೆಂಬರ್ ಮಾಹೆಯ ನಂತರ ಆಗುತ್ತಿರುವುದು ಕಂಡು ಬಂದಿರುತ್ತದೆ. ಅಲ್ಲದೆ NIAS (National Institute of Advance Studies) ಸಂಸ್ಥೆ ಈ ಬಗ್ಗೆ Impact Assessment ಮಾಡಿದಾಗ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರ ಇಯೋಜನೆಯಿಂದ ಕೃಷಿ

ವಲಯದಲ್ಲಿ ಕಾರ್ಮಿಕರ ಕೊರತೆ ಉಂಟಾಗಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ.

ಪ್ರಸಕ್ತ ಸಾಲಿನಲ್ಲಿ ಒದಗಿಸಲಾದ ಅನುದಾನ ಮತ್ತು ಖರ್ಚಿನ ವಿವರಗಳು ಈ ಮುಂದಿನಂತೆ ಇವೆ.

| ವರ್ಷ | ಒದಗಿಸಲಾದ ಅನುದಾನ (ರೂ. ಲಕ್ಷಗಳಲ್ಲಿ) | ಖರ್ಚು (ರೂ. ಲಕ್ಷಗಳಲ್ಲಿ) |
|---|---|---|
| 2011–12 | 241276.00 | 174454.79 (24.03.2012ರ ವರೆಗೆ) |

**'ಅಜಯ' ಗ್ರಾಮಸ್ಥರು ಕುಡಿಯುವ ನೀರಿಗೆ ಪರಿತಪಿಸುತ್ತಿರುವ ಬಗ್ಗೆ**

**27; ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಮಂಡ್ಯ ಜಿಲ್ಲೆ 2011–12ನೇ ಸಾಲಿಗೆ ಅಭಿವೃದ್ಧಿ ಕಾರ್ಯಗಳಿಗೆ ಜಿಲ್ಲಾ/ತಾಲ್ಲೂಕ್/ಗ್ರಾಮ ಪಂಚಾಯತಿಗಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಎಷ್ಟು (ತಾಲ್ಲೂಕುವಾರು ಮತ್ತು ಗ್ರಾಮ ಪಂಚಾಯತ್‌ವಾರು ವಿವರ ನೀಡುವುದು);

ಆ) ಈಗ ಆಗಿರುವ ಅಭಿವೃದ್ಧಿ ಕಾರ್ಯಗಳ ಹಾಗೂ ಇವುಗಳಿಗೆ ವಿನಿಯೋಗವಾಗಿರುವ ಅನುದಾನಗಳ ಯೋಜನಾವಾರು ವಿವರ ನೀಡುವುದು?

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು)**

ಅ) ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ವಿವರಣೆಯನ್ನು ಒದಗಿಸಿದೆ.

ಆ) ಮಾನ್ಯ ಸದಸ್ಯರಿತೆ ವಿವರಣೆ ಒದಗಿಸಲಾಗಿದೆ.

**ಸಭಾಪತಿಯವರು ಮಂಡಿಸಲಾಯಿತು**

## 2. ಪ್ರಕಟಣೆ

**ಸಭಾಪತಿಯವರು:–**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 222ರ ಮೇರೆಗೆ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಸದನದ ಕರ್ಯಕಲಾಪಗಳ ಸಲಹಾ ಸಮಿತಿಯನ್ನು ಪುನರ್ ರಚಿಸಲಾಗಿದೆ. ಅದರಂತೆ, ಈ ಕೆಳಕಂಡವರು ಸದಸ್ಯರಾಗಿರುತ್ತಾರೆ.

1. ಶ್ರೀಮತಿ ವಿಮಲಾಗೌಡ, ಮಾನ್ಯ ಉಪಸಭಾಪತಿಗಳು
2. ಶ್ರೀ ಡಿ.ವಿ.ಸದಾನಂದಗೌಡ, ಮಾನ್ಯ ಮುಖ್ಯಮಂತ್ರಿಯವರು ಹಾಗೂ ವಿಧಾನ ಪರಿಷತ್ತಿನ ಸಭಾನಾಯಕರು
3. ಶ್ರೀಮತಿ ಮೋಟಮ್ಮ, ಮಾನ್ಯ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು
4. ಡಾ: ಎ.ಹೆಚ್.ಶಿವಯೋಗಿಸ್ವಾಮಿ, ವಿಧಾನ ಪರಿಷತ್ತಿನ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು
5. ಶ್ರೀ ಆರ್.ವಿ.ವೆಂಕಟೇಶ್, ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
6. ಶ್ರೀ ವಿ.ಆರ್.ಸುದರ್ಶನ್, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು
7. ಶ್ರೀ ಯಂ.ಸಿ.ನಾಣಯ್ಯ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು
8. ಶ್ರೀ ಮತ್ತಿಕಟ್ಟಿ ವೀರಣ್ಣ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು

**ಹಾಗೂ ಈ ಕೆಳಕಂಡವರು ವಿಶೇಷ ಆಹ್ವಾನಿತರಾಗಿರುತ್ತಾರೆ.**

1. ಶ್ರೀ ಎಸ್.ಸುರೇಶ್ ಕುಮಾರ್, ಮಾನ್ಯ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು.
2. ಶ್ರೀ ರಾಮಚಂದ್ರಗೌಡ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಹಾಗೂ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರು.

3. ಶ್ರೀ ಬಸವರಾಜ ಹೊರಟ್ಟಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು
4. ಶ್ರೀ ಮನೋಹರ ಮಸ್ಕಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು

## 3. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು

**ಸಭಾಪತಿಯವರು:-** ನಿನ್ನೆಯ ರೀತಿ ಒಂದೇ ವಿಷಯದ ಮೇಲೆ ಹಲವಾರು ಸದಸ್ಯರು ತಮ್ಮ ನೋಟಿಸ್‌ನ್ನು ಕೊಟ್ಟಿದ್ದಾರೆ. ನೋಟಿಸ್ ಕೊಟ್ಟಿರುವವರ ಹೆಸರುಗಳನ್ನೆಲ್ಲಾ ನಾನು ಓದುತ್ತೇನೆ. ಯಾರದ್ದು ಮೊದಲು ಬಂದಿದೆಯೋ ಅವರಿಗೆ ಮಾತ್ರ ಓದುವುದಕ್ಕೆ ಅವಕಾಶ ಕೊಡುತ್ತೇನೆ. ಮುಂದೆ ಏನು ಮಾಡಬೇಕೆಂದು ಆಮೇಲೆ ತೀರ್ಮಾನ ಮಾಡುತ್ತೇನೆ. ಸರ್ಕಾರದ ಪರವಾಗಿ ಉತ್ತರವನ್ನು ಕೊಡುತ್ತಾರೆ. ಈ ಶೂನ್ಯ ವೇಳೆಯ ಪ್ರಸ್ತಾವನೆಯನ್ನು ರಾಜ್ಯದ ವಕ್ಫ್ ಮಂಡಳಿಯ ಆಸ್ತಿ ದುರ್ಬಳಕೆ ಆಗುತ್ತಿರುವ ಬಗ್ಗೆ ನೋಟಿಸ್ ಕೊಟ್ಟಿರುವವರು ಶ್ರೀಯುತ ಗೋ.ಮಧುಸೂದನ್, ಶ್ರೀಯುತ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶ್ರೀಯುತ ಅರುಣ ಶಹಾಪುರ, ಶ್ರೀಯುತ ಕೋಟ ಶ್ರೀನಿವಾಸ ಪೂಜಾರಿ, ಮತ್ತು ಪ್ರೊ.ಪಿ.ವಿ.ಕೃಷ್ಣಭಟ್ಟ, ಇಷ್ಟು ಜನ ಕೊಟ್ಟಿದ್ದಾರೆ. ಯಾರಾದರೊಬ್ಬರು ಅಂದರೆ, ಮೊದಲು ಬಂದವರದ್ದು ಮಧುಸೂದನ್, ಈಗ ಮಧುಸೂದನ್‌ರವರು ದಯಮಾಡಿ ಓದಬೇಕು.

### (ಅ) ರಾಜ್ಯದ ವಕ್ಫ್ ಮಂಡಳಿಯ ಆಸ್ತಿ ದುರ್ಬಳಕೆ ಆಗುತ್ತಿರುವ ಬಗ್ಗೆ

**ಶ್ರೀ ಗೋ.ಮಧುಸೂದನ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂದಿನ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಕ್ಫ್ ಹಗರಣದ ಬಗ್ಗೆ ಸರ್ಕಾರದ ಗಮನ ಸೆಳೆಯಲು ಇಚ್ಛಿಸುತ್ತೇನೆ. ಸದರಿ ಪ್ರಕರಣವು 2 ಲಕ್ಷ ಕೋಟಿ ರೂಪಾಯಿಗಳಿಗೂ ಮೀರಿದ ಬೃಹತ್ ಹಗರಣವಾಗಿದ್ದು, 2ಜಿ ಹಗರಣಕ್ಕಿಂತಲೂ ಮೀರಿದ ಹಗರಣವಾಗಿದೆ. ಬೆಂಗಳೂರು, ಮೈಸೂರು, ಬೀದರ್, ಮಂಡ್ಯ, ಬಳ್ಳಾರಿ, ದಾವಣಗೆರೆ, ಕೋಲಾರ, ಕೊಪ್ಪಳ, ಬಿಜಾಪುರ, ಹೀಗೆ ರಾಜ್ಯದ ಬಹುತೇಕ ನಗರಗಳಲ್ಲಿ ವಕ್ಫ್‌ಗೆ ಸೇರಿದ ಆಸ್ತಿಗಳ ದುರುಪಯೋಗಕ್ಕೆ ಸಂಬಂಧಿಸಿದಂತೆ ಸಾಕಷ್ಟು

ದೂರುಗಳು ಬಂದಿದ್ದರ ಮೇರೆಗೆ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾದ ಶ್ರೀ ಅನ್ವರ್ ಮಣಿಪ್ಪಾಡಿ, ಆಯೋಗದ ಕಾರ್ಯದರ್ಶಿ ಶ್ರೀ ಅತೀಕ್ ಅಹಮ್ಮದ್ ಹಾಗೂ ಸದಸ್ಯರಾದ ಶ್ರೀ ಪಿ.ಎನ್.ಬೆಂಜಮಿನ್ ಇವರುಗಳು ಆಯೋಗದ ಕಾಯಿದೆ 1994ರ ಕಲಂ 10ರ ಅಡಿಯಲ್ಲಿ ಆಯೋಗವೇ ಸ್ವತಃ ತನಿಖೆ ನಡೆಸಲು ನಿರ್ಧರಿಸಿ, ಸುಮಾರು 8,000 ಪುಟಗಳ ಸವಿಸ್ತಾರ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ.

ರಾಜ್ಯಾದ್ಯಂತ 33,741 ಆಸ್ತಿ ನೋಂದಣಿಯಾಗಿದ್ದು, 54 ಸಾವಿರ ಎಕರೆಗಿಂತಲೂ ಹೆಚ್ಚು ಆಸ್ತಿ ನೋಂದಣಿಯಾಗಿದೆ. ಇನ್ನೂ ನೋಂದಣಿಯಾಗದ 20 ಸಾವಿರ ಆಸ್ತಿಗಳಿವೆ. 1954 ರಿಂದಲೂ ವಕ್ಫ್ ಆಸ್ತಿಗಳು ಕಬಳಿಕೆಯಾಗಿದ್ದು, ಇದರಲ್ಲಿ ರಾಜ್ಯದ ಪ್ರಮುಖರ ಹೆಸರು ಪ್ರಸ್ತಾಪವಾಗಿದೆ. ಅಲ್ಪಸಂಖ್ಯಾತರ ನಾಯಕರೆಂದು ಪಟ್ಟಕಟ್ಟಿಕೊಂಡ ಸೋಗಲಾಡಿಗಳು ಪ್ರಕರಣದಲ್ಲಿ ಭಾಗಿಯಾಗಿರುವುದು ವರದಿಯಾಗಿದೆ. ರಾಜ್ಯದ ಪ್ರಮುಖರಾದ ಸಭಾಪತಿಯವರ ಆದೇಶಾನುಸಾರ ತೆಗೆದುಹಾಕಲಾಗಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಅವರು ಹೆಸರನ್ನು ಹೇಳಬಹುದೆ?

**ಸಭಾಪತಿಯವರು:–** ಚರ್ಚೆ ಇಲ್ಲ. ವರದಿಯನ್ನು ಹೇಳುತ್ತಿದ್ದಾರೆ.

**ಶ್ರೀ ಗೋ.ಮಧುಸೂದನ್**:– ನಾನು ವರದಿಯನ್ನೇ ಹೇಳುತ್ತಿದ್ದೇನೆ. ನಾನೇನೂ ಬೇರೆ ಹೇಳುತ್ತಿಲ್ಲ.

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:–** ವರದಿಯಲ್ಲಿಲ್ಲ.

ಶ್ರೀ **ಗೋ.ಮಧುಸೂದನ್**:– ಪತ್ರಿಕೆಯಲ್ಲಿ ಬಂದಿರುವುದನ್ನು ಓದುತ್ತಿದ್ದೇನೆ.

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಕೊಟ್ಟ ಯಾವುದೇ ವರದಿಯನ್ನು ಸದನದಲ್ಲಿ ಮಂಡಿಸಬೇಕಾಗುತ್ತದೆ.

**(ಗೊಂದಲ)**

**ಶ್ರೀ ಗೋ.ಮಧುಸೂದನ್:-** ಪತ್ರಿಕೆಯಲ್ಲಿ ಬಂದಿರುವುದನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

**ಶ್ರೀಮತಿ ಮೋಟಮ್ಮ:-** ಸದನದಲ್ಲಿ ಮಂಡನೆಯಾಗದೆ ಹೇಗೆ ಅವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕಾಗುತ್ತದೆ?

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ಕುಳಿತುಕೊಳ್ಳಿ

**(ಗೊಂದಲ)**

**ಸಭಾಪತಿಯವರು:-** ಮಧುಸೂದನ್‌ರವರೇ, ಒಂದು ನಿಮಿಷ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ವರದಿಯನ್ನು ಮಂಡಿಸದೇ ಸರ್ಕಾರದ ಅಭಿಪ್ರಾಯವನ್ನು ಹೇಳದೆ ತಾವು ಅವರಿಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದು ಸರಿ ಹೋಗುವುದಿಲ್ಲ.

**ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ಯಾವುದೇ ತನಿಖೆಗೂ ಸಿದ್ಧರಿದ್ದೇವೆ, ಅಗತ್ಯ ಬಿದ್ದರೆ ಸಿ.ಬಿ.ಐ. ತನಿಖೆ ಕೂಡ ಆಗಲಿ ಎಂದು ಸಂಬಂಧಪಟ್ಟಂಥ ಮುಖಂಡರು ಹೇಳಿದ್ದಾರೆ. ಸದನದಲ್ಲಿ ಇನ್ನೂ ವರದಿ ಮಂಡಿಸಲಿಲ್ಲ. ಸರ್ಕಾರದ ಅಭಿಪ್ರಾಯವನ್ನು ಹೇಳಲಿಲ್ಲ. ತಾವು ಹೇಗೆ

ಅವರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ? ದಯಮಾಡಿ ಇದಕ್ಕೆ ಅವಕಾಶವನ್ನು ಕೊಡಬಾರದು. ಸರ್ಕಾರ ಸದನದಲ್ಲಿ ಮಂಡಿಸಬೇಕಾಗುತ್ತದೆ.

**(ಗೊಂದಲ)**

**ಸಭಾಪತಿಯವರು:–** ಒಬ್ಬರಿಗಿಂತ ಜಾಸ್ತಿ ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ನನ್ನ ಸ್ವಾತಂತ್ರ್ಯಕ್ಕೆ ಅಡ್ಡಿ ಬರುತ್ತಿದ್ದಾರೆ. ನಾನು ಒಬ್ಬ ಸದಸ್ಯನಿದ್ದೇನೆ. ನಾನು ಓದಿದ ಮೇಲೆ ಅವರು ಹೇಳಲಿ. ನನಗೆ ಓದುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಸರ್ಕಾರ ವರದಿಯನ್ನು ಮೊದಲು ಈ ಸದನದಲ್ಲಿ ಮಂಡಿಸಿ ನಂತರ ಮಾತನಾಡಬೇಕು.

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಇದು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಇದನ್ನು ಇಲ್ಲಿ ಮಂಡನೆ ಮಾಡಬೇಕು.

**(ಗೊಂದಲ)**

**Sri M.C.NANAIAN:-** Sir, I am raising a point of order now. I am raising a point of order for your consideration. ಮಾನ್ಯ ಸದಸ್ಯರು ಎತ್ತಿರತಕ್ಕಂತಹ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ನನ್ನ ಅಭ್ಯಂತರವಿಲ್ಲ.

**ಶ್ರೀ ಗೋ.ಮಧುಸೂದನ್:–** ನಾನು ಅವರ ಬಗ್ಗೆ ಏನು ಹೇಳುತ್ತೇನೆಂದು ಕೇಳಿ.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, I am raising a point of order now.ಮಾನ್ಯ ಸದಸ್ಯರು ಕೆಲವು ಹೆಸರುಗಳನ್ನು ಹೇಳಿದರು. ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಕೊಟ್ಟಿರುವಂತಹ ಈ ಒಂದು ನೋಟೀಸ್ ಏನಿದೆ, ಅದರ ಪ್ರಕಾರ ಇವತ್ತು ಪತ್ರಿಕೆಯಲ್ಲಿ ಬಂದಿರತಕ್ಕಂತಹ ವರದಿಯ ಆಧಾರದ ಮೇಲೆ. Let me tell you sir, the Hon'ble Member Sri G. Madhusudhan has made it very clear. ಅದರಲ್ಲಿ ಕೆಲವು ಸದಸ್ಯರುಗಳ ಹೆಸರುಗಳನ್ನು ಹೇಳಿದರು. ಅದರಲ್ಲಿ ನಮ್ಮ ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗಿದ್ದವರು ಇದ್ದಾರೆ, ಕೆಲವು ಎಂ.ಪಿ.ಗಳಾಗಿದ್ದವರು ಇದ್ದಾರೆ, ನಮ್ಮ ಸಭೆಯ ನಡವಳಿಕೆಯನ್ನು ಮಾಡಲಾಗುತ್ತಿದೆ. ದಯವಿಟ್ಟು ನಾನು ಹೇಳುವುದೇನೆಂದರೆ ನಾಳೆ ವರದಿಯನ್ನು ಈ ಸದನದಲ್ಲಿ ಮಂಡಿಸಲಿ, ಮಂಡಿಸಿದ ಮೇಲೆ ಅದರ ಮೇಲೆ ಮಾತನಾಡತಕ್ಕಂತಹ ಅಧಿಕಾರ ಎಲ್ಲರಿಗೂ ಉಂಟು. ಈ ವಿಚಾರವನ್ನು ಸಿಬಿಐ ತನಿಖೆ ಮಾಡಬೇಕೆಂದು ಒತ್ತಾಯ ಮಾಡುವವರ ಪೈಕಿ ನಾನು ಸಹ ಒಬ್ಬನಾಗಿದ್ದೇನೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ರಾಜಕೀಯವನ್ನು ಬೆರೆಸುವಂತಹ ಅವಶ್ಯಕತೆ ಇಲ್ಲ. ಇದು ರಾಜ್ಯದ ಸಂಪತ್ತು. Wakf Board Property ಎಂದು ಹೇಳುವಂತಹದ್ದು ಏನಿದೆ, ಇದು ಒಂದು ಸಮುದಾಯಕ್ಕೆ ಕೊಟ್ಟಿರುವಂತಹದ್ದು. ಅದನ್ನು ದಾನ–ಧರ್ಮಕ್ಕೆ ಕೊಟ್ಟಿರುವಂತಹದ್ದು. ಅದನ್ನು ರಕ್ಷಣೆ ಮಾಡಲು Wakf Act ಉಂಟು. ರಾಜ್ಯ ಸರ್ಕಾರ ಅದರ ಮೇಲೆ ಕ್ರಮ ಕೈಗೊಳ್ಳಲೇಬೇಕು. ಆದರೆ ನಾನು ಹೇಳುತ್ತಿರುವುದು, ಇದನ್ನು ಇವತ್ತು ಶೂನ್ಯವೇಳೆಯಲ್ಲಿ, ಪತ್ರಿಕೆಯ ಆಧಾರದ ಮೇಲೆ ಬಂದಿರುವಂತಹ ವರದಿಯನ್ನು ಕೇಳಿ ಸದಸ್ಯರುಗಳ ಹೆಸರುಗಳನ್ನು ಮಾಡಿರುವುದು ಮಾತ್ರ ಸೀಮಿತವಾಗಿರುತ್ತದೆ. ಇದು ಸರಿಯಾದಂತಹ ಕ್ರಮವಲ್ಲ. ಅದಕ್ಕೆ, ಸೀಮಿತವಾಗಿ ಮಾತ್ರ ನಾನು ಹೇಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಮಧುಸೂದನ್‌ರವರು ಉಲ್ಲೇಖಿಸಿರುವ ಹೆಸರುಗಳನ್ನು ಕಡತದಿಂದ ತೆಗೆಯಲೇಬೇಕು.

**ಸಭಾಪತಿಯವರು:-** ಇವತ್ತು ಪತ್ರಿಕೆಯಲ್ಲಿ ಬಂದಿರುವಂತಹ ವರದಿಯ ಆಧಾರದ ಮೇಲೆ ಶೂನ್ಯವೇಳೆಯಲ್ಲಿ ತಾವು ನೋಟೀಸ್ ಅನ್ನು ತಾವು ಸೇರಿದಂತಹ ಸಾಕಷ್ಟು ಸದಸ್ಯರು ಕೊಟ್ಟಿದ್ದಾರೆ. ಅದರಲ್ಲಿ ವರದಿಯನ್ನು ಮಾತ್ರ ಉಲ್ಲೇಖ ಮಾಡಿ ಹೆಸರುಗಳನ್ನು ಹೇಳಬಾರದು ಎಂದು ಹೇಳಿ ಗೌರವಾನ್ವಿತ ಕೆಲವು ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಆದ್ದರಿಂದ, ತಾವು ಹೆಸರುಗಳನ್ನು ಉಲ್ಲೇಖ ಮಾಡದೇ, ಮುಂದಿನದ್ದು ಏನಿದೆ, ಅದನ್ನು ತಾವು ಓದಿ.

**ಶ್ರೀ ಮತ್ತಿಕಟ್ಟಿ ವೀರಣ್ಣ:** ಅನೇಕ ವರದಿಗಳು ಪತ್ರಿಕೆಯಲ್ಲಿ ವರದಿಯಾಗುತ್ತವೆ. ಅದಕ್ಕೆ ಸಂಬಂಧಪಟ್ಟಂತೆ ಹೆಸರುಗಳನ್ನು ಇಲ್ಲಿ ಹೇಳುವುದಕ್ಕಾಗುತ್ತದೆಯೇ? ಹೇಳಬಾರದು.

**(ಗೊಂದಲ)**

**ಸಭಾಪತಿಯವರು:-** ಶೂನ್ಯವೇಳೆಯಲ್ಲಿ ಏನು ಪ್ರಸ್ತಾಪ ಮಾಡಿದ್ದೀರಿ, ಅದನ್ನು ಓದಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ವಿಚಾರವನ್ನು ಶೂನ್ಯವೇಳೆಯಲ್ಲಿ ತಂದಿದ್ದಾರೆ. ಶೂನ್ಯವೇಳೆಯಲ್ಲಿ ವಿಚಾರವನ್ನು ತಂದರೆ, ಅದಕ್ಕೆ ಸರ್ಕಾರದವರು ಉತ್ತರವನ್ನು ಹೇಳಬೇಕಾಗುತ್ತದೆ. ಇವತ್ತು ಆಗದಿದ್ದರೆ ನಾಳೆ ಹೇಳಬೇಕಾಗುತ್ತದೆ. ಈಗ ವರದಿಯಲ್ಲಿ ಅಲ್ಲಿ ಮಂಡಿಸಿದ್ದಾರೆ. ನಿಮ್ಮ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರೆ. ಅದು ನಮ್ಮ ಸದನಕ್ಕೆ ಬರಬೇಕು. ಈ ಸದನದಲ್ಲಿ ಇಲ್ಲದೇ ಇರುವವರ ಹೆಸರನ್ನು ಹೇಳಿದ್ದಾರೆ. ಹೀಗಾಗಿ ಅವರ ಹೆಸರುಗಳನ್ನು ಈ ಸದನದಲ್ಲಿ ಹೇಳುವಂತಹದ್ದು ಸರಿಯಾದುದಲ್ಲ. ಅವರುಗಳ ಹೆಸರುಗಳನ್ನು ಇಲ್ಲಿ ಹೇಳಬಾರದು.

**(ಗೊಂದಲ)**

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರು ಈಗಾಗಲೇ ಮಾನ್ಯ ಸದಸ್ಯರಿಗೆ ಹೆಸರುಗಳನ್ನು ಹೇಳಬಾರದೆಂದು ಹೇಳಿದ್ದಾರೆ.

**(ಗೊಂದಲ)**

ಮಾನ್ಯ ಸದಸ್ಯರು ಪತ್ರಿಕೆಗಳಲ್ಲಿ ಬಂದಿರುವಂತಹ ಹೆಸರುಗಳನ್ನು ಹೇಳಿದ್ದಾರೆ. ಸಭಾಪತಿಯವರು ಬೇಡವೆಂದು ಹೇಳಿದರೆ ಬಿಟ್ಟುಬಿಡೋಣ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇದು ಸರಿಯಾದ ಪದ್ಧತಿಯಲ್ಲ.

**ಸಭಾಪತಿಯವರು:–** ನಾನು ಈಗಾಗಲೇ ಹೇಳಿದ್ದೇನೆ. ಹೆಸರುಗಳನ್ನು ಬಿಟ್ಟು ಬಾಕಿ ವಿಚಾರವನ್ನು ಹೇಳಿ ಎಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಈ ವಿಚಾರವನ್ನು ಸದನದ ಗಮನಕ್ಕೆ ತರಬೇಕು. ಈ ಸದನದ ಪರಂಪರೆ ಏನು? ಯಾವ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ, ಆ ಸಂದರ್ಭದಲ್ಲಿ ಅತ್ಯಂತ ಅವಶ್ಯಕತೆ ಇದ್ದಲ್ಲಿ ಸರ್ಕಾರದ ಗಮನಕ್ಕೆ ತರಬೇಕು. ಈಗ ಸರ್ಕಾರಕ್ಕೆ ಒಂದು ವರದಿಯನ್ನು ಅವರು ಸಲ್ಲಿಸಿದ್ದಾರೆ. ಅದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಿದ್ದಾರೆ. ಆ ವರದಿ ಈ ಸದನಕ್ಕೆ ಮಂಡನೆಯಾಗಲಿ. ಚರ್ಚೆಯಾಗಲಿ, ಇದು ಶೂನ್ಯವೇಳೆಯಲ್ಲಿ ಬರುವುದೇ ಇಲ್ಲ. ಆದ್ದರಿಂದ ಈ ವಿಚಾರವಾಗಿ ಮರುಪರಿಶೀಲನೆ ಮಾಡಬೇಕು. ಯಾವ ಒಂದು ವಿಚಾರ ಸರ್ಕಾರದ ಗಮನದಲ್ಲಿ ಇರುವುದಿಲ್ಲ, ಅದನ್ನು ಸರ್ಕಾರದ ಗಮನಕ್ಕೆ ತರಬೇಕು.

**(ಗೊಂದಲ)**

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಶೂನ್ಯವೇಳೆಯಲ್ಲಿ ಅವಕಾಶ ಕೊಡಬೇಕಾದರೆ . . .

**ಶ್ರೀ ಮತ್ತಿಕಟ್ಟಿ ವೀರಣ್ಣ:–** ನಾಳೆ ಮತ್ತೊಬ್ಬರು ಇದೇ ರೀತಿಯಲ್ಲಿ ತರುತ್ತಾರೆ.

**(ಗೊಂದಲ)**

**ಸಭಾಪತಿಯವರು:–** ಒಬ್ಬರಿಗಿಂತ ಹೆಚ್ಚು ಜನ ಮಾತನಾಡಿದ್ದು ದಾಖಲೆಗೆ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಇದು ಒಳ್ಳೆಯ ಪದ್ಧತಿ ಅಲ್ಲ. ನಾಳೆ ಸದನದಲ್ಲಿ ಎಲ್ಲಾ ರೀತಿಯ ಸಮಸ್ಯೆಗಳನ್ನು ಅನುಭವಿಸಬೇಕಾಗುತ್ತದೆ. ಆಗ ನೀವು ಓಡಿ ಹೋಗುತ್ತೀರಿ.

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಮ್ಮ ಸದನದಲ್ಲಿ ಶೂನ್ಯವೇಳೆಯಲ್ಲಿ ಯಾವುದೇ ಒಂದು ವಿಚಾರವನ್ನು ತರುವಾಗ ಹಲವಾರು ಸಂಗತಿಗಳು, ಪತ್ರಿಕೆಯಲ್ಲಿ ಬಂದಂತಹ ಮತ್ತು ಮಾಧ್ಯಮದಲ್ಲಿ ಬಂದಂತಹ ವಿಚಾರಗಳನ್ನು ನಾವು ಪ್ರಸ್ತಾಪ ಮಾಡುವಂತಹ ನಮ್ಮ ಪದ್ಧತಿಯನ್ನು ನಾವು ನಡೆಸಿಕೊಂಡು ಬಂದಿದ್ದೇವೆ. ಆದ್ದರಿಂದ ಪತ್ರಿಕೆಗಳಲ್ಲಿ ಬಂದಂತಹ ಸುದ್ದಿಗಳನ್ನು ಇಲ್ಲಿ ಪ್ರಸ್ತಾಪ ಮಾಡಬಾರದು ಎಂತಿಲ್ಲ. ಆದರೆ, ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀಯುತ ಮತ್ತಿಕಟ್ಟಿ ವೀರಣ್ಣನವರು, ಶ್ರೀಯುತ ಯಂ.ಸಿ.ನಾಣಯ್ಯನವರು ಮತ್ತು ಬಸವರಾಜ ಹೊರಟ್ಟಿಯವರು ಹೇಳಿದ್ದು ಸರಿ ಇದೆ. ಅದು ಏನೆಂದರೆ, ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಬಂದಂತಹ ವರದಿಗಳ ಆಧಾರದ ಮೇಲೆ ನೀವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ, ಯಾರ ಹೆಸರನ್ನೇ ಹೇಳುವಾಗ ಅದಕ್ಕೆ ಬೇರೆ ದಾಖಲೆಗಳ ಅವಶ್ಯಕತೆ ಬೀಳುತ್ತದೆ. ದಯಮಾಡಿ ನಮ್ಮ ಸದನದಲ್ಲಿ ಆ ಪದ್ಧತಿ ಇಲ್ಲ. ಆದ್ದರಿಂದ, ಯಾರದ್ದೇ ಹೆಸರುಗಳನ್ನು ತಾವುಗಳು ಉಲ್ಲೇಖ ಮಾಡದೇ ಬಂದಿರತಕ್ಕಂತಹ ವರದಿ ಮತ್ತು ನಿಮ್ಮ ಬೇಡಿಕೆ ಏನು ಎನ್ನುವುದನ್ನಷ್ಟೇ ಹೇಳಬಹುದು. ಅಷ್ಟಕ್ಕೆ ಸೀಮಿತಗೊಳಿಸುತ್ತೇನೆ. ಹೆಸರುಗಳನ್ನು ತಾವು ಏನು ಉಲ್ಲೇಖ ಮಾಡಿದ್ದೀರಿ, ಅದು ದಾಖಲೆಗೆ ಹೋಗಿದ್ದರೆ, ಅದನ್ನು ದಯವಿಟ್ಟು ತೆಗೆದು ಹಾಕಿ.

**ಶ್ರೀ ಗೋ.ಮಧುಸೂಧನ್:-** ಅವರ ಹೆಸರುಗಳನ್ನು ಹೇಳುವುದಿಲ್ಲ ಸರ್.

**ಸಭಾಪತಿಯವರು:-** ನಾನು ಹೇಳಿದ್ದು ತಮಗೆ ಕೇಳಿಸಿದೆಯೋ ಇಲ್ಲವೋ?

**ಶ್ರೀ ಗೋ.ಮಧುಸೂಧನ್:-** ಪ್ರಸ್ತಾಪ ಮಾಡುವುದಿಲ್ಲ ಸರ್. ಸನ್ಮಾನ್ಯ ಸಭಾಪತಿಯವರೆ, ಈ ವರದಿಯಲ್ಲಿ ಹಲವಾರು ರಾಜಕೀಯ ನಾಯಕರ . .

**ಸಭಾಪತಿಯವರು:-** ಶ್ರೀಯುತ ಮಧುಸೂಧನ್‌ರವರೆ, ದಯಮಾಡಿ ಕುಳಿತುಕೊಳ್ಳಿ. ನಾನು ಹೇಳಿದ್ದು ಏನೆಂದರೆ, ತಾವು ಬರೆದಿರುವ ಪತ್ರದಲ್ಲಿ ಭಾಷಣಕ್ಕೆ ಅವಕಾಶವಿಲ್ಲ. ಹೆಸರುಗಳನ್ನು ಬಿಟ್ಟು ಕೊನೆಯ ಪ್ಯಾರಾವನ್ನು ಓದಿ ಎಂದು ಹೇಳಿದೆ. ಅದನ್ನು ಬಿಟ್ಟು ನೀವು ಭಾಷಣ ಮಾಡಲಿಕ್ಕೆ ಹೊರಟಿದ್ದೀರಿ. ಅಷ್ಟನ್ನು ಮಾತ್ರ ಓದಿ. ದೇಶವನ್ನು ಹಾಳು ಮಾಡುತ್ತಾರೆ. ಬೇಕಾದಷ್ಟು ವರದಿಗಳನ್ನು ಸಲ್ಲಿಸಿಲ್ಲವೇ? ಇದೇ ಬೇಕಾ? ಒಂದು ಕೋಮಿನವರು . . . .

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳಿಗೆ ವರದಿಯನ್ನು ಕೊಟ್ಟಿದ್ದಾರೆ. ಅವರು ಸರ್ಕಾರಕ್ಕೆ ವರದಿಯನ್ನು ಕೊಟ್ಟ ಮೇಲೆ ಈ ಸದನದಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೀರಿ. Is it the way to functioning?

**ಡಾ: ಎ.ಹೆಚ್.ಶಿವಯೋಗಿ ಸ್ವಾಮಿ:-** ಮಾನ್ಯ ಸಭಾಪತಿಯವರು ನೀಡಿದ ರೂಲಿಂಗ್ ಅನ್ನು ಪ್ರಶ್ನೆ ಮಾಡುತ್ತೀರಾ?

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:-** ನಾನು ಯಾರ ಪರವಾಗಿಯೂ ಹೇಳುತ್ತಿಲ್ಲ. ಈ ಸದನದ ಹಿತದೃಷ್ಟಿಯಿಂದ ಇದು ಒಳ್ಳೆಯ ಟೇಸ್ಟ್ ಅಲ್ಲ. ಅವರು ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರೆ. ಅದು ಈಗಾಗಲೇ

ಅವರ ಗಮನಕ್ಕೆ ಬಂದಿದೆ ಮತ್ತೆ ಸರ್ಕಾರದ ಗಮನವನ್ನು ಏಕೆ ಸೆಳೆಯುತ್ತಿದ್ದೀರಿ?

**ಸಭಾಪತಿಯವರು:–** ತಾವು ಓದಿಬಿಡಿ.

**(ಗೊಂದಲ)**

**ಶ್ರೀ ಗೋ. ಮಧುಸೂಧನ್:–** ಮಾನ್ಯ ಸಭಾಪತಿಯವರೇ ತಾವು ಹೇಳಿದ ಹಾಗೆ ಕೇಳುತ್ತೇವೆ. ನನಗೆ ಓದುವುದಕ್ಕೆ ಬಿಡಿ. ಅಲ್ಲದೆ . . . .

ಮಾನ್ಯ ಸಭಾಪತಿಯವರ ಆದೇಶಾನುಸಾರ ತೆಗೆದುಹಾಕಲಾಗಿದೆ.

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಹಾಗಾದರೆ ಈ ಸರ್ಕಾರ ಇದಕ್ಕೆ ಉತ್ತರವನ್ನು ಹೇಳಬೇಕಾಗುತ್ತದೆ. ಸರ್ಕಾರ ಉತ್ತರವನ್ನು ಹೇಳದೇ ಹೋದರೆ ನಾವು ಈ ಸದನವನ್ನು ನಡೆಯುವುದಕ್ಕೆ ಬಿಡುವುದಿಲ್ಲ.

(ಗೊಂದಲ)

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರ ಆದೇಶಾನುಸಾರ ತೆಗೆದುಹಾಕಲಾಗಿದೆ. ಇವರ ಹೆಸರು ಪ್ರಸ್ತಾಪಿತವಾಗಿದೆ.

**ಸಭಾಪತಿಯವರು:–** ಹೆಸರುಗಳನ್ನು ಓದಬೇಡಿ ಎಂದು ನಾನು ಆಗಲೇ ಹೇಳಿದ್ದೆ.

**ಶ್ರೀ ಗೋ. ಮಧುಸೂದನ್:–** ಇದು ಒಂದು ಅತಿ ದೊಡ್ಡ ಅವ್ಯವಹಾರದ ವಿಚಾರವಾಗಿರುತ್ತದೆ. ಈ ಗಂಭೀರದ ವಿಷಯದ ಬಗ್ಗೆ ಸಮಗ್ರ ತನಿಖೆಗಾಗಿ ಲೋಕಾಯುಕ್ತಕ್ಕೆ ಇಲ್ಲವೇ ಸಿ.ಒ.ಡಿ. ತನಿಖೆಗಾಗಿ ಇದನ್ನು ವಹಿಸಬೇಕೆಂದು ಈ ಮೂಲಕ ಈ ಸದನದಲ್ಲಿ ಪ್ರಸ್ತಾಪ ಮಾಡುತ್ತೇನೆ. ಈ ಬಗ್ಗೆ ಸರ್ಕಾರ ಉತ್ತರವನ್ನು ಹೇಳಬೇಕೆಂದು ಸರ್ಕಾರವನ್ನು ಕೇಳುತ್ತೇನೆ.

**(ಗೊಂದಲ)**

**ಶ್ರೀ ವಿ.ಆರ್.ಸುದರ್ಶನ್:-** ದಯಮಾಡಿ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಹೇಳಬೇಕಾಗುತ್ತದೆ.

**ಸಭಾಪತಿಯವರು:-** ಸರ್ಕಾರ ಈ ಬಗ್ಗೆ ಏನು ಹೇಳುತ್ತದೆಯೋ ಕೇಳೋಣ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ ದಯಮಾಡಿ ಬೇಡ. ಮಾನ್ಯ ಕಾಗೇರಿಯವರೆ, ಈ ವಿಷಯ ಬಗ್ಗೆ ಉತ್ತರವನ್ನು ಹೇಳಲು ಮಾನ್ಯ ಮುಖ್ಯ ಮಂತ್ರಿಗಳನ್ನು ಈ ಸದನಕ್ಕೆ ಕರೆಸಿ ಅವರಿಂದ ಉತ್ತರವನ್ನು ಹೇಳಿಸಬೇಕಾಗುತ್ತದೆ. ತಮ್ಮ ಮೇಲೆ ಒತ್ತಡವನ್ನು ಹಾಕುತ್ತಿದ್ದೇವೆ. ದಯವಿಟ್ಟು ತಾವು ಅನ್ಯಥಾ ಭಾವಿಸಬೇಡಿ. ತಮ್ಮ ಮೇಲೆ ನಮಗೆ ಅಪಾರ ಗೌರವ ಇದೆ.

**(ಗೊಂದಲ)**

**ಸಭಾಪತಿಯವರು:-** ಅವರು ಏನು ಹೇಳುತ್ತಾರೋ ಕೇಳೋಣ. ಅವರು ಉತ್ತರ ಹೇಳುತ್ತಾರೆಂದು ಏನು ಗೊತ್ತು?

**(ಗೊಂದಲ)**

**ಡಾ: ಎ.ಹೆಚ್.ಶಿವಯೋಗಿಸ್ವಾಮಿ:-** ಮಾತನಾಡುವುದಕ್ಕೇ ಅವಕಾಶ ಮಾಡಿಕೊಡದಿದ್ದರೆ ಹೇಗೆ? . . .

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ನಾವು ಅಂದರೆ ಸರ್ಕಾರದ ಪರವಾಗಿ ಏನು ಹೇಳುತ್ತೇವೋ ಅದನ್ನು ಕೇಳಬೇಕು. ಸರ್ಕಾರದ ಪರವಾಗಿ ನಾನು ಉತ್ತರವನ್ನು ಕೊಡುವುದಕ್ಕೆ ಸಿದ್ಧನಿದ್ದೇನೆ. ಆ ಉತ್ತರವನ್ನು ತಾವು ಕೇಳಿದ ನಂತರ ಅದರ ಬಗ್ಗೆ ಅವರ ಅಭಿಪ್ರಾಯವನ್ನು ತಮ್ಮ ಬಳಿ ವ್ಯಕ್ತ ಮಾಡಬಹುದು. ಅದಕ್ಕೆ ನಾನು ಉತ್ತರವನ್ನು ಕೊಡಬಾರದೆಂದು ಈ ರೀತಿ ಮಾಡುವುದು ಸರಿಯಲ್ಲ. ಈ ರೀತಿ ಮಾಡುವುದು ಸರಿಯಾದ ಕ್ರಮ ಅಲ್ಲ. ತಾವುಗಳು ಜವಾಬ್ದಾರಿಯುತವಾಗಿ ಇರಬೇಕಾಗುತ್ತದೆ. ಸರ್ಕಾರದ ಪರವಾಗಿ ಉತ್ತರವನ್ನು ಹೇಳುವುದಕ್ಕೆ ನಾವು ಇಲ್ಲಿ ಇರುವಾಗ ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ.

(ಗೊಂದಲ)

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಕಾಗೇರಿಯವರೇ, ನಿಮಗೆ ಎಷ್ಟು ಜವಾಬ್ದಾರಿ ಇದೆಯೋ ನಮಗೂ ಕೂಡ ಅಷ್ಟೇ ಜವಾಬ್ದಾರಿ ಇದೆ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ನಾವು ಏನು ಹೇಳುತ್ತೇವೆಯೋ ಅದನ್ನು ತಾವುಗಳು ಕೇಳಬೇಕಲ್ಲ. ಒಂದು ಹಂತದಲ್ಲಿ ನೀವುಗಳು ಈ ರೀತಿ ನಡೆದುಕೊಳ್ಳುತ್ತಿದ್ದರೆ ನಾವು ಸರ್ಕಾರದ ಪರವಾಗಿ ಬೇರೆ ರೀತಿಯಿಂದ ನಮ್ಮ ಭಾವನೆಗಳನ್ನು ವ್ಯಕ್ತಪಡಿಸಬೇಕಾಗುತ್ತದೆ.

**ಶ್ರೀಮತಿ ಮೋಟಮ್ಮ:_** ಮಾನ್ಯ ಮುಖ್ಯಮಂತ್ರಿಗಳು ಬಂದು ಉತ್ತರವನ್ನು ಹೇಳಲಿ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರು ಹೆಸರುಗಳನ್ನು ಇಲ್ಲಿ ಹೇಳುವುದು ಬೇಡವೆಂದು ಹೇಳಿದ್ದಾರೆ. ಅವರು ಅದಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಅದನ್ನು ಬಿಟ್ಟು ಮಾನ್ಯ ಸದಸ್ಯರು ಓದಿದ್ದಾರೆ.

**ಸಭಾಪತಿಯವರು:–** ಅವರು ಇಲ್ಲಿ ಮಾತನಾಡುತ್ತಿದ್ದಾರೆ . . .

(ಗೊಂದಲ)

**ಶ್ರೀಮತಿ ಮೋಟಮ್ಮ:–** ಸರ್ಕಾರ ಆ ವರದಿಯನ್ನು ಒಪ್ಪಿಕೊಂಡ ಮೇಲೆ ಅದನ್ನು ಇಲ್ಲಿ ಏಕೆ ಚರ್ಚೆಗೆ ತೆಗೆದುಕೊಳ್ಳಬೇಕು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ತಾವು ಅತ್ಯಂತ ಸ್ಪಷ್ಟವಾಗಿ ಅವರ ಹೆಸರುಗಳನ್ನು ಇಲ್ಲಿ ಉಲ್ಲೇಖ ಮಾಡಬಾರದೆಂದು ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಿ ಹೇಳಿದ್ದೀರಿ. ಮಾನ್ಯ ಸದಸ್ಯರು ಅದನ್ನು ಬಿಟ್ಟು ಉಳಿದ ಭಾಗವನ್ನು ಓದಿದ್ದಾರೆ.

**ಸಭಾಪತಿಯವರು:–** ಹೇಳಿದ್ದರೆ ಅದನ್ನು ಕಡತದಿಂದ ತೆಗೆದು ಹಾಕಿದ್ದೇನೆ.

**(ಗೊಂದಲ)**

**ಶ್ರೀ ಅಬ್ದುಲ್ ಅಜೀಂ:–** ಅದು ಕಾನ್‌ಫಿಡೆನ್‌ಷಿಯಲ್ ವರದಿ. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವ ಹಾಗಿಲ್ಲ. . . .

**(ಗೊಂದಲ)**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಪತಿಯವರು ಹೆಸರುಗಳನ್ನು ಬಿಟ್ಟು ಉಳಿದ ಭಾಗವನ್ನು ಮಾನ್ಯ ಸದಸ್ಯರು ಓದುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದಕ್ಕೆ ಎಲ್ಲಾ ಗೌರವಾನ್ವಿತ ಸದಸ್ಯರು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಉತ್ತರ ಹೇಳುವುದನ್ನು ಕೇಳಬೇಕು. ಸರ್ಕಾರ ಉತ್ತರ ಹೇಳಬಾರದೆಂದು ಹೇಳಿದರೆ ಅದು ಹೇಗಾಗುತ್ತದೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಮುಖ್ಯಮಂತ್ರಿಗಳು ಬಂದು ಉತ್ತರವನ್ನು ಹೇಳಲಿ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಸಭಾ ನಾಯಕರಿದ್ದಾರೆ.

**ಶ್ರೀ ಮನೋಹರ ಮಸ್ಕಿ:–** ಸರ್ಕಾರ ಹೇಳುವ ಉತ್ತರವನ್ನು ಕೇಳುವ ಸೌಜನ್ಯ ನಿಮಗೆ ಇಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ನಾನು ಏನು ಉತ್ತರ ಹೇಳುತ್ತೇನೆಂದು ಕೇಳಿ. ನಾನು ಏನು ಹೇಳುತ್ತೇನೆಂದು ಅಂದುಕೊಂಡು ನೀವು ಏಕೆ ಈ ರೀತಿ ಮಾಡುತ್ತಿದ್ದಿತಿ?

**ಶ್ರೀ ಜಗದೀಶ್ ಶೆಟ್ಟರ್:–** ಸರ್ಕಾರದ ಪರವಾಗಿ ಅವರು ಏನು ಉತ್ತರವನ್ನು ಹೇಳುತ್ತಾರೆ ಅದನ್ನು ತಾವು ಕೇಳುವುದಕ್ಕೆ ತಯಾರಿಲ್ಲ ಅಂದರೆ ಹೇಗೆ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಮುಖ್ಯಮಂತ್ರಿಗಳು ಬರಬೇಕೆಂದು ತಾವೇನು ಹೇಳುತ್ತಿದ್ದೀರಿ ಅದಕ್ಕೆ ನಾನು ಏನು ಹೇಳುತ್ತೇನೆಂದು ಕೇಳಬೇಕಲ್ಲವೆ?

**ಶ್ರೀ ವಿ.ಆರ್. ಸುದರ್ಶನ್:-** ಎಲ್ಲಾ ವಿಷಯಕ್ಕೂ ನೀವು ಏಕೆ ಉತ್ತರವನ್ನು ಹೇಳಬೇಕು?

**(ಗೊಂದಲ)**

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಸದನದಲ್ಲಿ ಚರ್ಚೆಯಾಗುವಾಗ ಕೆಲವು ವಿಷಯಗಳ ಬಗ್ಗೆ ಯಾವ ರೀತಿ ಚರ್ಚೆ ನಡೆಯಬೇಕು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ನಿನ್ನೆ ದಿವಸ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಬಂದ ವರದಿಯ ಆಧಾರದ ಮೇಲೆ ಅದು ಲೀಕ್ ಆಗಿದೆಯೋ, ಪ್ರೂವ್ ಆಗಿದೆಯೋ, ಇಲ್ಲವೋ ಎಂದು ಯಾರೂ ಪ್ರಶ್ನೆಯನ್ನು ಮಾಡಲಿಲ್ಲ. ನಿನ್ನೆಯ ದಿವಸ ಚರ್ಚೆಯಾಯಿತು. ಎಲ್ಲರೂ ಆ ಚರ್ಚೆಯಲ್ಲಿ ಭಾಗವಹಿಸಿದಿರಿ. ಸರ್ಕಾರದಿಂದ ಅದಕ್ಕೆ ಉತ್ತರವೂ ಬಂತು. ಇವತ್ತಿನ ಪತ್ರಿಕೆಯಲ್ಲಿ ಬಂದಿರತಕ್ಕಂತಹ ವರದಿಯ ಆಧಾರದ ಮೇಲೆ ಸದನದಲ್ಲಿ ಚರ್ಚೆಯನ್ನು ಮಾಡುವುದಕ್ಕೆ ಪ್ರಸ್ತಾಪ ಮಾಡುವ ಮೂಲಕ ಆ ಒಂದು ಪ್ರಯತ್ನವನ್ನು ಮಾಡಿದ್ದಾರೆ. ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಯಾವುದಾದರೂ ಹೆಸರುಗಳು ಇಲ್ಲಿ ಪ್ರಸ್ತಾಪವಾಗಿದ್ದರೆ ಆ ಹೆಸರುಗಳನ್ನು ನಾನು ಕಡತದಿಂದ ತೆಗೆಸಿ ಹಾಕಿದ್ದೇನೆ. ಈಗ ಅವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ತಮ್ಮ ಒಂದು ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಸರ್ಕಾರ ಈ ವರದಿಯನ್ನು ಒಪ್ಪಿದೆಯೋ ಇಲ್ಲವೋ ಆ ಬಗ್ಗೆ ಏನು ಮಾಡಿದೆ ಏನು ಮಾಡಿಲ್ಲ ಅದನ್ನು ಸರ್ಕಾರದ ಹೇಳುವುದಕ್ಕೆ ತಯಾರಿದ್ದರೆ ಹೇಳಬಹುದು. ಇಲ್ಲದಿದ್ದರೆ ಇನ್ನೊಂದು ದಿವಸ ಇದರ ಬಗ್ಗೆ ಮಾತನಾಡಬಹುದು.

**(ಗೊಂದಲ)**

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ನೀವು ಲೀಕ್ ಆಗಿದೆಯೋ ಇಲ್ಲವೋ ಎಂದು ಹೇಳಿದಿರಲ್ಲ, ಹಾಗಾದರೆ ಹೇಗೆ ಆ ಪರೀಕ್ಷೆಯನ್ನು ಮುಂದಕ್ಕೆ ಹಾಕಿದರು? ಅದು ಲೀಕ್ ಆಗಿದ್ದರಿಂದ ತಾನೆ ಇವರು ಪರಿಕ್ಷೆಯನ್ನು ಮುಂದಕ್ಕೆ ಹಾಕಿದ್ದು . . .

**ಸಭಾಪತಿಯವರು:-** ಅದನ್ನು ಈ ಸದನದಲ್ಲಿ ಮಾಡುತ್ತೇವೆ. ಎಲ್ಲಾ ವಿಷಯಗಳೂ ಅಷ್ಟೇನೇ.

**ಶ್ರೀಮತಿ ಮೋಟಮ್ಮ:-** ಆ ವಿಷಯ ಬೇರೆ, ಈ ವಿಷಯ ಬೇರೆ.

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೆ, ನಾನು ತಮ್ಮ ಚಿಂತನೆಯನ್ನು ಒಪ್ಪಿಕೊಳ್ಳುತ್ತೇನೆ. ಅಧಿಕೃತವಾಗಿ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳಿಗೆ ವರದಿಯನ್ನು ಸಲ್ಲಿಸಿರತಕ್ಕಂತಾದ್ದು ಎಲ್ಲರಿಗೂ ಗೊತ್ತಾಗಿದೆ. ಅದರ ಮುಂದಕ್ಕೆ ಇರತಕ್ಕಂಥ ಕ್ರಮಗಳೇನು ಎಂದರೆ, ಯಾವುದಾದರು ಒಂದು ಆಯೋಗ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲವೇ ಸಂಬಂಧಪಟ್ಟ ಮಂತ್ರಿಗಳು ಅದನ್ನು ಸ್ವೀಕಾರ ಮಾಡಿದ ಮೇಲೆ ಆ ವರದಿಯ ಬಗ್ಗೆ ಸಚಿವಸಂಪುಟ ಸಭೆಯಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಮತ್ತು ಆ ವರದಿಯನ್ನು ಒಪ್ಪಿಕೊಳ್ಳಬೇಕೋ ಬೇಡವೋ ಎಂಬ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ಅದು ನಮ್ಮಲ್ಲಿರುವ ನಿಯಮಗಳು. It is the rules of business of Cabinet. ಮಾನ್ಯ ಕಾಗೇರಿಯವರೆ ನೀವು ಬಹಳ ವರ್ಷಗಳಿಂದ ಸಚಿವ ಸಂಪುಟದ ಸದಸ್ಯರಾಗಿದ್ದೀರಿ. What is the prodecure? What is the Rules of business of the Cabinet. ಈಗ ವರದಿ ಕೊಟ್ಟಿರತಕ್ಕಂಥಾದ್ದು ಆಯಿತು. ಉದಾಹರಣೆಗೆ ಹೇಳುವುದಾದರೆ, ಈಗ ಯಾವುದೋ ಒಂದು ಆಯೋಗವನ್ನು ನೇಮಕ ಮಾಡುತ್ತೀರಿ, ನ್ಯಾಯಾಂಗ ತನಿಖೆ ಮಾಡುವುದಕ್ಕೆ ಆಯೋಗವನ್ನು ರಚನೆ ಮಾಡುತ್ತೀರಿ ಎಂದು ಇಟ್ಟುಕೊಳ್ಳಿ. ಅವರು ವರದಿಯನ್ನು ಸಲ್ಲಿಸುತ್ತಾರೆ. ಆ ವರದಿ ಸಚಿವ ಸಂಪುಟಕ್ಕೆ ಹೋಗುತ್ತದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ನಾಣಯ್ಯನವರು ಏನು ಹೇಳುತ್ತಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಆದರೆ ಸರ್ಕಾರ ಈ ಬಗ್ಗೆ ಏನು ಹೇಳುತ್ತದೆ ಎಂಬುದನ್ನು ಅವರು ಕೇಳದೆಯೇ ಈ ರೀತಿ ಹೇಳಿದರೆ ಅದು ಸರಿಯಾಗುವುದಿಲ್ಲ.

**SRI M.C.NANAIAH:-** Mr. Chairman, Sir, as at the moment ಈ ವಕ್ಫ್ ಬೋರ್ಡಿಗೆ ಸಂಬಂಧಿಸಿದಂತೆ ವರದಿಯನ್ನು ಅವರು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ್ದಾರೆ. Because he happens to be the in charge ofWakf Board & Minority Welfare department. Ultimately this is a matter which has to be discussed by the Cabinet tomorrow.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ಸದಸ್ಯರು . . . .

**ಸಭಾಪತಿಯವರು:-** ಅವರು ಏನು ಹೇಳುತ್ತಾರೋ ಕೇಳೋಣ. ಅವರು ಏನು ಹೇಳುತ್ತಾರೆ ಎಂಬುದನ್ನು ನಾವು ಕೇಳಲೇ ಇಲ್ಲವಲ್ಲ. ಅದನ್ನು ನಾವು ನೀವು ಹೇಳುವುದಕ್ಕೆ ಬರುವುದಿಲ್ಲ. ಅವರೇ ಹೇಳಿಕೊಳ್ಳಲಿ.

**ಶ್ರೀ ಯಂ.ಸಿ. ನಾಣಯ್ಯ:-** ನಾನು ಹೇಳುತ್ತೇನೆ. ಅವರು ಉತ್ತರವನ್ನು ಹೇಳುವುದಕ್ಕೆ ನಾವು ಏಕೆ ಆಕ್ಷೇಪಣೆಯನ್ನು ಮಾಡಿದೆವು ಎಂದರೆ,

**ಸಭಾಪತಿಯವರು:-** ಅವರು ಉತ್ತರವನ್ನು ಹೇಳಲಿಲ್ಲ. ಈ ವಿಷಯದ ಬಗ್ಗೆ ಸರ್ಕಾರದ ನಿಲುವು ಏನು ಎಂದು ಹೇಳುವುದಕ್ಕೆ ನಿಂತಿದ್ದರು.

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಬಂದು ಉತ್ತರವನ್ನು ಹೇಳಲಿ.

**(ಗೊಂದಲ)**

**ಶ್ರೀ ಜಗದೀಶ್ ಶೆಟ್ಟರ್:-** ಸರ್ಕಾರ ಏನು ಹೇಳುತ್ತದೆಯೋ ತಿಳಿದುಕೊಳ್ಳಬೇಕಲ್ಲ. ನೀವು ಪ್ರೊಸೀಜರ್ ಏನು ಇದೆ ಎಂದು ಹೇಳುತ್ತಿದ್ದೀರಿ.

ಅದನ್ನು ನಾವು ಒಪ್ಪಿಕೊಳ್ಳುತ್ತಿದ್ದೇವೆ. ಇಲ್ಲಿ ಒಬ್ಬ ಸದಸ್ಯರು ಪ್ರಶ್ನೆ ಮಾಡಿದಾಗ ಉತ್ತರವನ್ನು ಸಚಿವರು ಹೇಳಬೇಕಲ್ಲವೇ? ಒಂದು ವೇಳೆ ಅದರಲ್ಲಿ ತಪ್ಪು ಇದ್ದರೆ ಆಗ ಪ್ರಶ್ನೆ ಮಾಡಿ.

(ಗೊಂದಲ)

**ಸಭಾಪತಿಯವರು:–** ಈ ವಿಚಾರದ ಬಗ್ಗೆ ಇಷ್ಟೊಂದು ಹೀಟ್ ಜನರೇಟ್ ಆಗಿದ್ದು ಸರಿಯಲ್ಲ. ಸರ್ಕಾರ ಏನು ಮಾಡಬೇಕೋ ಬಿಡಬೇಕೋ ಎಂಬುದು ಅವರಿಗೆ ಬಿಟ್ಟ ವಿಚಾರವಾಗಿದೆ. ಅದನ್ನು ಅವರು ಹೇಳಬೇಕು. ನಾನು ಅದನ್ನು ಹೇಳುವುದಕ್ಕೆ ತಯಾರಿಲ್ಲ. ಮಾನ್ಯ ನಾಣಯ್ಯನವರು ಹೇಳಿದ್ದು ಸರಿ ಇದೆ ಎಂದು ಅನ್ನಿಸುತ್ತದೆ. ವರದಿ ಬಂದ ಮೇಲೆ ಅದು ಸಚಿವ ಸಂಪುಟಕ್ಕೆ ಹೋಗಿ ಬರಬೇಕಾಗುತ್ತದೆ. ಆದರೆ ಹಲವಾರು ಬಾರಿ ಈ ವರದಿಗಳ ಆಧಾರದ ಮೇಲೆ ನಮ್ಮ ಸದನದಲ್ಲಿ ಚರ್ಚೆಗಳು ಆಗಿವೆ. ಲೋಕಾಯುಕ್ತ ವರದಿ ಬಗ್ಗೆ ಸಚಿವ ಸಂಪುಟ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚಿತವಾಗಿ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ತಾವುಗಳು ಈ ಬಗ್ಗೆ ಅನೇಕ ಡಿಮ್ಯಾಂಡುಗಳನ್ನು ಇಟ್ಟಿದ್ದೀರಿ. ಮಾನ್ಯ ಮಂತ್ರಿಗಳ ರಾಜೀನಾಮೆಯನ್ನು ಕೇಳಿದ್ದೀರಿ. ಇಲ್ಲಿ ಇವೆಲ್ಲವೂ ನಡೆದಿದೆ. ಅಷ್ಟೊಂದು ನಾಜೂಕಾಗಿ ಹೋದರೆ ಈ ಸದನದಲ್ಲಿ ಪತ್ರಿಕೆಯಲ್ಲಿ ಬಂದ ಯಾವುದೇ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ನಾನು ಎಲ್ಲವನ್ನೂ ಯೋಚನೆ ಮಾಡಿ, ಚಿಂತನೆಯನ್ನು ಮಾಡಿ ಈ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ಅದನ್ನು ಪ್ರಸ್ತಾಪ ಮಾಡಿದ ಮೇಲೆ, ಸರ್ಕಾರ ಆ ವರದಿಯ ಬಗ್ಗೆ ತನ್ನ ನಿರ್ಣಯವನ್ನು ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಅಷ್ಟರ ಮೇಲೆ ಅವರು ಹೇಳಿದರೆ ಗೊತ್ತಿಲ್ಲ. ಅದು ಸರ್ಕಾರಕ್ಕೆ ಬಿಟ್ಟಿದ್ದು. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಪ್ರಸ್ತಾಪ ಮಾಡಿದಾಗ ಸರ್ಕಾರ ಆ ವರದಿಯ ಬಗ್ಗೆ ತನ್ನ ನಿರ್ಣಯ ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಇಷ್ಟರ ಮೇಲೆ ಅವರು ಹೇಳಿದರೆ ಗೊತ್ತಿಲ್ಲ. ಅದು ಸರ್ಕಾರಕ್ಕೆ ಬಿಟ್ಟಿದ್ದು. ಅವರು

ಏನು ಹೇಳುತ್ತಾರೆ ಕೇಳೋಣ. ಮೊದಲು ಸರ್ಕಾರ ಹೇಳಲಿ ದಯಮಾಡಿ ಎಲ್ಲರು ಕುಳಿತುಕೊಳ್ಳಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಅತ್ಯಂತ ಒಂದು ಗಂಭೀರವಾದಂಥ ವಿಷಯವನ್ನು ರಾಜ್ಯ ವಕ್ಫ್ ಮಂಡಳಿಯಲ್ಲಿ 2 ಲಕ್ಷ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಹಣದ ದುರುಪಯೋಗ ಆಗಿದೆ. ಅದರೊಳಗೆ ಅನೇಕ ಗಣ್ಯರು, ಹಿರಿಯರು, ಬೇರೆ ಬೇರೆಯವರು ಇತ್ಯಾದಿಯವರು ಭಾಗಿಗಳಾಗಿದ್ದಾರೆಂದು ಪತ್ರಿಕೆಯಲ್ಲಿ ವಿವರವಾಗಿ ಬಂದಿರುವುದನ್ನು ಮಾನ್ಯ ಸದಸ್ಯರಾದ ಶ್ರೀ ಗೋ.ಮಧುಸೂದನ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದಾರೆ. ಅದರ ಜೊತೆಯಲ್ಲಿ ಕ್ಯಾಪ್ಟನ್ ಗಣೇಶ್ ಕಾರ್ಣಿಕರವರು, ಶ್ರೀ ಅರುಣ್ ಶಹಾಪೂರ್‌ರವರು, ಕೋಟಾ ಶ್ರೀನಿವಾಸ್ ಪೂಜಾರಿಯವರು, ಪ್ರೊ.ಜಿ.ಕೃಷ್ಣಭಟ್‌ರವರು ಇವರೆಲ್ಲರೂ ಸಹ ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಶೂನ್ಯವೇಳೆಯಲ್ಲಿ ಪ್ರಸ್ತಾವನೆಯನ್ನು ತಮಗೆ ಕಳುಹಿಸಿದ್ದಾರೆ. ಯಾವು ಮೊದಲು ಪ್ರಸ್ತಾವವನ್ನು ಕೊಟ್ಟಿದ್ದಾರೋ ಅವರಿಗೆ ತಾವು ಓದಲು ಅವಕಾಶವನ್ನು ನೀಡಿದ್ದೀರಿ. ಅವರು ಅದನ್ನು ಓದಿದ್ದಾರೆ. ಇವೊತ್ತು ಪತ್ರಿಕೆಯನ್ನು ನೋಡಿದಾಗ ಮೇಲ್ನೋಟಕ್ಕೆ ಇದಂತು, ನಿನ್ನೆ ಮಾನ್ಯ ಮುಖ್ಯಮಂತ್ರಿಗಳಿಗೆ ಆ ವರದಿಯನ್ನು ನಮ್ಮ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರಾದ ಶ್ರೀ ಅನ್ವರ್ ಮಣ್ಪಾಡಿಯವರು ಅದನ್ನು ಸಲ್ಲಿಸಿದಾಗಲೇ ಇದೊಂದು ಬಹಳ ದೊಡ್ಡ ಹಗರಣ ಎಂದು ಎಲ್ಲರಿಗೂ ಅನಿಸಿದೆ.

**SRI M.C.NANAIAH:-** Are you speaking on behalf of the Chief Minister? Are you making a statement on behalf of the Chief Minister?

**(ಗೊಂದಲ)**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ನಿಮಗೆ ಒಂದು ನಿಮಿಷ ತಾಳ್ಮೆ ಇಲ್ಲವೇ? ತಾವು ಹೇಳಿದ್ದನ್ನು ನಾವು ಕೇಳಿದ್ದೇವೆ. ನಾವು ಹೇಳಿದ್ದನ್ನು ಕೂಡ

ತಾವು ಕೇಳಬೇಕು. ಒಂದು ನಿಮಿಷ ತಾಳ್ಮೆ ವಹಿಸಿ. ನಾನು ಎಲ್ಲವನ್ನು ಹೇಳುತ್ತೇನೆ. ನಾನು ಒಂದು ಮಾತನ್ನು ಸ್ಪಷ್ಟವಾಗಿ ಮಾನ್ಯ ಸಭಾಪತಿಯವರ ಮುಖಾಂತರ ಹೇಳುವುದೇನೆಂದರೆ ಈ ರೀತಿ ಸರ್ಕಾರದ ಉತ್ತರವನ್ನು ಅಡ್ಡಿಪಡಿಸುವುದಕ್ಕೆ ವಿರೋಧ ಪಕ್ಷದವರು ಬಯಸಿದರೆ ಈ ಹಗರಣವನ್ನೆ ಮುಚ್ಚಿ ಹಾಕುವುದಕ್ಕೆ ಕುಮ್ಮಕ್ಕು ಕೊಟ್ಟ ಹಾಗೆ ಆಗುತ್ತದೆ.

**(ಗೊಂದಲ)**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ನೀವು ಏನು ಮಾತನಡುತ್ತಿದ್ದೀರೆಂದು ನಾನು ಕೂಡ ಗಮನಿಸುತ್ತಿದ್ದೇನೆ.

**(ಗೊಂದಲ)**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಅದನ್ನು ಮುಚ್ಚಿ ಹಾಕುವುದಕ್ಕೆ ಈ ಸದನವನ್ನು ವೇದಿಕೆ ಮಾಡಿಕೊಳ್ಳುತ್ತಿದ್ದೀರಿ.

**(ಗೊಂದಲ)**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಅವರು ಮಾನ್ಯ ಮುಖ್ಯಮಂತ್ರಿಗಳಿಗೆ ವರದಿಯನ್ನು ಸಲ್ಲಿಸಿದ್ದಾರೆ. ಮುಖ್ಯಮಂತ್ರಿಗಳು ನಿಶ್ಚಿತವಾಗಿ ಎಲ್ಲಾ ಹಂತದಲ್ಲಿ ಇದರ ಪರಿಶೀಲನಾ ಕ್ರಮವನ್ನು ಮಾಡುತ್ತಾರೆ. ಮುಂದೆ ಸದನದಲ್ಲಿ ವಿವರವಾದಂಥ ವರದಿಯನ್ನು ಸದನದಲ್ಲಿ ಮಂಡಿಸುತ್ತಾರೆ. ಇಷ್ಟು ಸ್ಪಷ್ಟವಾದಂಥ ಉತ್ತರವನ್ನು ಹೇಳುತ್ತಿದ್ದೇನೆ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರು ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಇದೆಲ್ಲಾ ಅತಿಯಾಯಿತು.

**ಸಭಾಪತಿಯವರು:–** ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಅವರು ಸಕಾರದ ಪರವಾಗಿ ಇದರ ಬಗ್ಗೆ ಹೇಳುತ್ತಾರೆಂದು ಹೇಳಿದ್ದಾರೆ. ದಯಮಾಡಿ ಎಲ್ಲರು ಕುಳಿತುಕೊಳ್ಳಿ.

**(ಗೊಂದಲ)**

**ಸಭಾಪತಿಯವರು:–** ಅವರು ಅದನ್ನು ಹೇಳಿದ್ದಾರೆ. ಆದರೆ ನೀವು ಯಾರೂ ಕೇಳಿಸಿಕೊಳ್ಳಲಿಲ್ಲ.

**(ಗೊಂದಲ)**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ಅವರಿಗೆ ಆತುರಪಡಬೇಡಿ ಎಂದು ಹೇಳಿ. ನಾವು ಜವಾಬ್ದಾರಿಯುತವಾಗಿ ಸರ್ಕಾರವನ್ನು ನಡೆಸುವುದಕ್ಕೆ ಇಲ್ಲಿದ್ದೇವೆ. ನಾವು ಸಂವಿಧಾನವನ್ನು ಒಪ್ಪಿಕೊಂಡಿರುವವರಿದ್ದೇವೆ. ಸಂವಿಧಾನದ ಚೌಕಟ್ಟಿನಲ್ಲಿ ಆಡಳಿತವನ್ನು ನಡೆಸುತ್ತಿದ್ದೇವೆ. ನಮಗೆ ಸಂವಿಧಾನದಲ್ಲಿ ನಂಬಿಕೆ ಇದೆ. ನಾವು ಸಂವಿಧಾನಬದ್ಧವಾಗಿ ಆಡಳಿತವನ್ನು ನಡೆಸುತ್ತೇವೆ.

**(ಗೊಂದಲ)**

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಸಂವಿಧಾನದಲ್ಲಿ ನಂಬಿಕೆ ಇರುವವರು ರೆಸಾರ್ಟ್‌ಗೆ ಹೋಗುತ್ತಾರೆಯೇ?

**(ಗೊಂದಲ)**

**ಶ್ರೀಮತಿ ಮೋಟಮ್ಮ:–** ರೆಸಾರ್ಟ್‌ಗೆ ಹೋಗುವುದು ಸಂವಿಧಾನ ಅಲ್ಲ? ರೆಸಾರ್ಟ್‌ಗೆ ಹೋಗುವುದು ಸಂವಿಧಾನವೇ? ಸಂವಿಧಾನದಲ್ಲಿ ನಂಬಿಕೆ ಇರುವವರು ಹಾಗೆ ಮಾಡುತ್ತಾರೆಯೇ?

**(ಗೊಂದಲ)**

**ಡಾ: ಎ.ಹೆಚ್. ಶಿವಯೋಗಿಸ್ವಾಮಿ:–** ಅಲ್ಪಸಂಖ್ಯಾತರ ರೊಕ್ಕಾ ಹೊಡಯುವವರು? ಅದು ಸಂವಿಧಾನವೇ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ದೇಶದಲ್ಲಿಯೇ ಕರ್ನಾಟಕ ನಂಬರ್ ಒನ್ ಕರಪ್ಟ್ ರಾಜ್ಯ ಎಂದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ.

**(ಗೊಂದಲ)**

**ಡಾ: ಎ.ಹೆಚ್. ಶಿವಯೋಗಿಸ್ವಾಮಿ:-** ಅದಕ್ಕೆ 2ಜಿ ಸ್ಪೆಕ್ಟ್ರಮ್ ಆಗಿದೆ.

**(ಗೊಂದಲ)**

**ಸಭಾಪತಿಯವರು:-** ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಮುಂದಿನ ವಿಷಯಕ್ಕೆ ಹೋಗೋಣ. ಇದನ್ನು ಎಷ್ಟು ಹೊತ್ತು ಮಾಡುತ್ತೀರಿ?

**ಶ್ರೀಮತಿ ಮೋಟ್ಟಮ್ಮ:-** ಅಧಿವೇಶನಕ್ಕೆ ಗ್ರಹಣ ಹಿಡಿಸಿದ್ದೀರಿ. ಅದು ಸಂವಿಧಾನವೇ?

**(ಗೊಂದಲ)**

**ಸಭಾಪತಿಯವರು:-** ಒಬ್ಬರಿಗಿಂತ ಹೆಚ್ಚು ಜನರು ಮಾತನಾಡಿದರೆ ಕಡತಕ್ಕೆ ಹೋಗತಕ್ಕದ್ದಲ್ಲ. ಒಬ್ಬರಿಗಿಂತ ಹೆಚ್ಚು ಜನ ಮಾತನಾಡಿದರೆ, ನನ್ನ ಅಪ್ಪಣೆ ಇಲ್ಲದೆ ಮಾತನಾಡಿದರೆ ಅವರು ಮಾತನಾಡಿರುವುದು ಕಡತಕ್ಕೆ ಹೋಗತಕ್ಕದ್ದಲ್ಲ. ಈಗ ಈ ವಿಷಯ ಇಲ್ಲಿಗೆ ಮುಕ್ತಾಯವಾಯಿತು.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೆ, ಮಂತ್ರಿಯವರು ಆವೇಶದಲ್ಲಿ ಈ ಹಗರಣವನ್ನು ಮುಚ್ಚುವುದಕ್ಕೆ ನೀವು ಹೊರಟಿದ್ದೀರಿ ಎಂದು ಹೇಳಿದ್ದಾರೆ. ಅದಕ್ಕೆ ನಾವು ಸಿ.ಬಿ.ಐ. ತನಿಖೆ ಆಗಬೇಕೆಂದು ಹೇಳುತ್ತಿದ್ದೇವೆ. ಸರ್ಕಾರ ಸಿ.ಬಿ.ಐ. ತನಿಖೆ ಮಾಡಲು ಸಿದ್ಧ ಇದೆಯೇ?

**(ಗೊಂದಲ)**

**ಸಭಾಪತಿಯವರು:-** ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಈಗ ಮುಂದಿನ ವಿಷಯಕ್ಕೆ ಹೋಗೋಣ. ಶ್ರೀ ಆರ್.ವಿ.ವೆಂಕಟೇಶ್‌ರವರ

ಇನ್ನೊಂದು ಶೂನ್ಯ ವೇಳೆಯ ಪ್ರಸ್ತಾಪ ಇದೆ. ನಾವು ಆ ವಿಷಯಕ್ಕೆ ಹೋಗೋಣ. ದಯಮಾಡಿ ವೆಂಕಟೇಶ್‌ರವರು ಆ ವಿಷಯವನ್ನು ಓದಬೇಕು. ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಈ ವಿಷಯ ಇಲ್ಲಿಗೆ ಸಾಕು. ನಾನು ಸದನ ನಡೆಸಬೇಕು.

**ಶ್ರೀ ಬಸವರಾಜ ಹೊರಟ್ಟಿ:–** ಮನ್ಯ ಸಭಾಪತಿಯವರೆ, ನನಗೆ ಒಂದು ಕ್ಲ್ಯಾರಿಫಿಕೇಶನ್ ಬೇಕು. ಅವರು ಉತ್ತರ ಹೇಗೆ ಹೇಳಿದರು. ಇಲ್ಲಿ ಉತ್ತರ ಹೇಳುವುದಕ್ಕೆ ಒಂದು ಪದ್ಧತಿ ಇರಬೇಕು.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ನಮ್ಮ ಮೇಲೆ ಸಭಾನಾಯಕರು ಆಪಾದನೆಯನ್ನು ಮಾಡಿದ್ದಾರೆಂದು ನಾನು ಭಾವಿಸುತ್ತೇನೆ.

**(ಗೊಂದಲ)**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ನಾನು ಹಾಗೆ ಹೇಳಲಿಲ್ಲ. ನಾನು ಸರ್ಕಾರದ ಪರವಾಗಿ ಹೇಳುವಾಗ ಸದನದಲ್ಲಿ ಸಹಜವಾಗಿ ಮಾತಿಗೆ ಮಾತು ನಡೆಯುತ್ತದೆ. ನಾವು ಎಲ್ಲಾ ತನಿಖೆ ಮಾಡಿಯೇ ಮಾಡುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅವರು ತನಿಖೆ ಮಾಡಲಿ. ನಾವು ಬೇಡ ಎಂದು ಹೇಳಿಲ್ಲ. ಆದರೆ ಮುಚ್ಚಿ ಹಾಕುತ್ತೇವೆ ಅಂದರೇನು? ನಾವು ಮುಚ್ಚಿ ಹಾಕುತ್ತೇವೆಯೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ನಾನು ಸರ್ಕಾರದ ಪರವಾಗಿ ಈ ಸಂದರ್ಭದಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಈ ವರದಿಯನ್ನು ಸಲ್ಲಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಪರಿಶೀಲಿಸಿ, ನಮ್ಮ ಸದನಕ್ಕೆ ಯಾವ ರೀತಿಯಾದಂಥ ಒಂದು ವಿಷಯ ಮಂಡನೆ ಮಾಡಬೇಕೋ ಅದನ್ನು ಮಾಡುತ್ತಾರೆ ಎಂದು ಸರ್ಕಾರದ ಪರವಾಗಿ ನಾನು ಹೇಳುತ್ತಿದ್ದೇನೆ. ಇದೇ ಸಂದರ್ಭದಲ್ಲಿ ನನ್ನ ಮಾತುಗಳನ್ನು ನಾನು ಹೇಳುವ ಸಂದರ್ಭದಲ್ಲಿ, ನಾನು ಹೇಳಬೇಕು ಎಂದು ಎದ್ದು ನಿಂತಾಗ ಮಧ್ಯದಲ್ಲಿ ಇಲ್ಲಿ ಅನೇಕ ರೀತಿಯ

ಅಡೆತಡೆಗಳು ಉಂಟಾಗಿರುವುದರಿಂದ ಮಾತುಗಳನ್ನು ಸರ್ಕಾರದ ಪರವಾಗಿ ಜವಾಬ್ದಾರಿಯುತವಾಗಿ ಹೇಳುವಂಥ ಸಂದರ್ಭದಲ್ಲಿ, ಮಾತನಾಡುವಾಗ ತಾವುಗಳು ಒಬ್ಬೊಬ್ಬರು ಏನೇನೋ, ಯಾವುದ್ಯಾವುದೋ ಮಾತನಾಡಿದ್ದೀರಿ. ಹೇಗೆ ಮಾತನಾಡಿದ್ದೀರಿ ಎಂದು ನಾನು ಕೂಡ ಗಮನಿಸಿಸದ್ದೇನೆ. ಹಾಗಾಗಿ ಆ ಸಂದರ್ಭದಲ್ಲಿ ಮಾತಿಗೆ ಮಾತಿನ ಸಂದರ್ಭದಲ್ಲಿ ನೀವು ಆ ರೀತಿ ಶೆಲ್ಟರ್ ತೆಗೆದುಕೊಳ್ಳುತ್ತಿದ್ದೀರಿ ಎನ್ನುವ ಸಂದೇಶ ಇಲ್ಲಿಂದ ಹೋಗಬಾರದು ಇದು ಗಂಭೀರವಾದದ್ದು. ಇದು ಚರ್ಚೆಯಾಗಬೇಕು. ಈ ರೀತಿ ಭ್ರಷ್ಟಾಚಾರದ ಹಗರಣಗಳನ್ನು ರಕ್ಷಿಸುವುದಕ್ಕೆ ನಾವು ಯಾರು ಇಲ್ಲ ಎನ್ನುವ ಸಂದೇಶ ಹೋಗಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ನಾನು ಆ ಮಾತನ್ನು ಹೇಳಿದ್ದೇನೆ. ನೀವು ರಕ್ಷಿಸುತ್ತೀರಿ ಎನ್ನು ಸಂದೇಶ ಬೇಡ. ಇಷ್ಟು ದೊಡ್ಡ ಹಗರಣ ಆಗಿದೆ. ಇಷ್ಟು ದೊಡ್ಡ ಹಗರಣದ ತನಿಖೆಯಾಗಲಿ, ನಮ್ಮೆಲ್ಲಾ ಸದಸ್ಯರ ಅಭಿಪ್ರಾಯ ಇರಲಿ. ನಾವು ಆ ದಿಕ್ಕಿನಲ್ಲಿ ಈ ವಿಷಯವನ್ನು ಚರ್ಚೆ ಮಾಡಬೇಕು ಎನ್ನುವುದು ಹೇಳುವಂಥ ಧಾಟಿಯಲ್ಲಿದ್ದಾಗ ಇದು ಅನಗತ್ಯವಾಗಿ ಅಪಾರ್ಥಕ್ಕೆ ಒಳಗಾಗುವ ಕಾರಣ ಇಲ್ಲ. ಈ ಸದನದಲ್ಲಿನ ನಾವೆಲ್ಲಾ ಸದಸ್ಯರುಗಳು ಸಹ ಇಷ್ಟು ದೊಡ್ಡ ಹಗರಣಗಳು ನಡೆದಿದ್ದನ್ನು ನೀವು ಹೇಳಿದಂತೆ ಸಿ.ಬಿ.ಐ.ದಿಂದ ಆಗಬೇಕು. ಅವರು ಸಿ.ಐ.ಡಿ. ಕೇಳಿದ್ದಾರೆ. ಸಿ.ಐ.ಡಿ.ಯಲ್ಲಿ ಆಗಬೇಕೇ, ಇನ್ಯಾರಿಂದ ಆಗಬೇಕು? ಏನು ಆಗಬೇಕು? ಮುಖ್ಯಮಂತ್ರಿಗಳು ವರದಿಯನ್ನು ತೆಗೆದುಕೊಂಡಿದ್ದಾರೆ, ಅದನ್ನು ಪರಿಶೀಲಿಸುತ್ತಾರೆ. ಪರಿಶೀಲಿಸಿ ನಮ್ಮ ಸದನಕ್ಕೆ, ನಮ್ಮ ರಾಜ್ಯದ ಜನತೆಗೆ ಸ್ಪಷ್ಟವಾದ ಮಾಹಿತಿ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಸದನದಲ್ಲಿ ಏನಾಗುತ್ತದೆಂದರೆ ನಾವೆಲ್ಲಾ ಸದಸ್ಯರುಗಳು ಇಷ್ಟು ದೊಡ್ಡ ಹಗರಣಕ್ಕೆ ಇಲ್ಲಿ ಭಿನ್ನಾಭಿಪ್ರಾಯದ ಧ್ವನಿ ಇದೆ ಎಂದು ರಾಜ್ಯದ ಜನ ಅಂದುಕೊಳ್ಳಬಾರದು. ನಾವೆಲ್ಲರೂ ಇಂತಹ ದೊಡ್ಡ ಹಗರಣವನ್ನು ತನಿಖೆ ಮಾಡುತ್ತಿದ್ದೇವೆ. ತನಿಖೆ ಮಾಡುವುದಕ್ಕಾಗಿ ನಮ್ಮ ಸದನದ ಸದಸ್ಯರೆಲ್ಲರೂ ಪಕ್ಷಾತೀತವಾಗಿ ಒಟ್ಟಾರೆ ಒಟ್ಟಿಗಿದ್ದೇವೆ ಎನ್ನುವ ಸಂದೇಶ ಬರಬೇಕಾಗುತ್ತದೆ. ಸರ್ಕಾರಕ್ಕೆ ಏನು ನಿನ್ನೆ ಈ ವಿಷಯ ಕೊಟ್ಟಿದ್ದಾರೆ ಅದು ಇವೊತ್ತು ಪ್ರಸ್ತಾಪ ಆಗಿದೆ ಅದರ ಬಗ್ಗೆ ನಾವೆಲ್ಲರು ಒಂದಾಗಿ ತನಿಖೆಯಾಗಬೇಕೆಂದು ಹೇಳೋಣ. ನಾವೆಲ್ಲರೂ ಒಂದಾಗಿ

ಇಂಥದ್ದೇ ತನಿಖೆಯಾಗಬೇಕೆಂದು ಹೇಳೋಣ. ಯಾವ ರೀತಿಯಾಗಿ ತನಿಖೆಯಾಗಬೇಕು ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚಿಸೋಣ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದು ಉತ್ತರವನ್ನು ಹೇಳುತ್ತಾರೆಂದು ಹೇಳಿದ್ದೇನೆ. ನಾನು ತಮ್ಮ ಮುಖಾಂತರ ಹಿರಿಯ ಸದಸ್ಯರಾದಂತಹ ಶ್ರೀ ಯಂ.ಸಿ.ನಾಣಯ್ಯನವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ವೈಯಕ್ತಿಕವಾಗಿ ನಾನು ಯಾರೇ ಸದಸ್ಯರ ಕುರಿತು ಯಾವುದೇ ಅಭಿಪ್ರಾಯ ಭಾವನೆಗಳನ್ನು ಹೇಳಿಲ್ಲ. ಆದರೆ ಈ ಸದನದಲ್ಲಿ ಒಟ್ಟಾದ ಧ್ವನಿ ಇಂತಹ ಭ್ರಷ್ಟಾಚಾರದ ವಿಷಯದಲ್ಲಿ ನಾವು ತನಿಖೆಯನ್ನು ಮಾಡುತ್ತೇವೆ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಒಟ್ಟು ಅಭಿಪ್ರಾಯ ಬರಲಿ ಎನ್ನುವುದಕ್ಕಾಗಿ ಇದನ್ನು ಉಲ್ಲೇಖ ಮಾಡಿದ್ದೇನೆ.

**(ಗೊಂದಲ)**

**ಶ್ರೀ ಯಂ.ಸಿ. ನಾಣಯ್ಯ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನಗೆ ನೋವಾಗಿರುವಂಥದ್ದು ಒಂದು ಪದದಿಂದ ಮಾತ್ರ. ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ್ದಾರೆ. ವರದಿ ಬಂದಾದ ಮೇಲೆ ಈ ಸದನದಲ್ಲಿ ಅದನ್ನು ಮಂಡಿಸಲೇಬೇಕಾಗುತ್ತದೆ. ಬಹುಶಃ ಆ ವರದಿ ಬಂದಾದ ಮೇಲೆ ನಾನೇ ಸಿಬಿಐ ತನಿಖೆಗೆ ವಹಿಸಬೇಕೆಂದು ಹೇಳುತ್ತೇನೆಂದು ಹೇಳಿದ್ದೇನೆ. ನಾನು ಹೇಳಿರತಕ್ಕಂತಹ ಮಾತು ಇಷ್ಟೇ, ಮಾನ್ಯ ಮುಖ್ಯಮಂತ್ರಿಗಳು ಆ ವರದಿಯನ್ನು ಸ್ವೀಕಾರ ಮಾಡಿಯಾದ ಮೇಲೆ ಅವರ ಚಿಂತನೆಯನ್ನು ಮಾನ್ಯ ಮುಖ್ಯಮಂತ್ರಿಗಳೇ ಇಲ್ಲಿ ಬಂದು ಉತ್ತರವನ್ನು ಹೇಳುತ್ತಾರೆ ಎನ್ನುವಂತಹ ಪರಿಸ್ಥಿತಿಯನ್ನು ಅವರು ಮೊದಲೇ ಹೇಳಿಬಿಟ್ಟಿದ್ದರೆ ಬಹುಶಃ ಈ ಗೊಂದಲಕ್ಕೆ ಅವಕಾಶವಿರಲಿಲ್ಲ.

**(ಗೊಂದಲ)**

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ನನಗೆ ಬಾಯಿ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ಶ್ರೀ ಮನೋಹರ್ ಮಸ್ಕಿಯವರಿಗೆ ಬಾಯಿ ಯಾವ ರೀತಿಯಾಗಿದೆ ಎಂದು ನನಗೆ ಗೊತ್ತಿದೆ.

(ಗೊಂದಲ)

**ಶ್ರೀ ಮನೋಹರ್ ಮಸ್ಕಿ:–** ಮಾನ್ಯ ಸಭಾಪತಿಯವರೆ, ಎಲ್ಲರಿಗೂ ಗೊತ್ತಿರುವಂತೆ ಈ ಸದನದಲ್ಲಿ ಬಾಯಿ ಇದ್ದರೆ ಅದು ಶ್ರೀ ಯಂ.ಸಿ.ನಾಣಯ್ಯನವರಿಗೆ ಮಾತ್ರ. ಅವರು ನಮಗೆ ಬಾಯಿ ಇದೆ ಎಂದು ಹೇಳಿರುವುದು ಸತ್ಯಕ್ಕೆ ದೂರವಾದಂತಹ ಮಾತು ಆದುದರಿಂದ ಅವರ ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ನಾನು ತಮ್ಮ ಮುಖಾಂತರ ಸಭಾನಾಯಕರನ್ನು ಕೇಳಿರುವಂಥದ್ದು ಏನೆಂದರೆ, ನೀವು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಕೊಡುತ್ತಿದ್ದೀರಾ ಎಂದು ಒಂದು ಮಾತನ್ನು ಕೇಳಿದೆ.

**ಸಭಾಪತಿಯವರು:–** ಅವರ ಉತ್ತರವನ್ನು ಕೊಡುವುದಕ್ಕೆ ಆಗಲೇ ಇಲ್ಲ. ಅವರು ಒಂದು ಮಾತನ್ನು ಕಡೆಯಲ್ಲಿ ಹೇಳಿದರು.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತೆಗೆದುಕೊಂಡು ಬಂದು ಮಾನ್ಯ ಮಂತ್ರಿಗಳು ಈ ರೀತಿಯಾದಂತಹ ಹೇಳಿಕೆ ಕೊಡಿ ಎಂದು ಹೇಳಿದ್ದರೆ . . .

**ಸಭಾಪತಿಯವರು:–** ಅವರು ಅದನ್ನೇ ಹೇಳಿದರು.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ಅಷ್ಟಕ್ಕೆ ಅವರು ಸ್ವಲ್ಪ ಉದ್ವೇಗಕ್ಕೆ ಒಳಗಾದರು. ನೀವು ನಮ್ಮ ಸರ್ಕಾರದ ಪರವಾಗಿ ಕೊಡುತ್ತಿರುವಂತಹ ಉತ್ತರವನ್ನು ಅಡ್ಡಿಪಡಿಸುವುದಕ್ಕೋಸ್ಕರ ಎನ್ನುವಂತಹ ಮಾತು ಕಡೆಗೆ ಈ ಹಗರಣವನ್ನು ಮುಚ್ಚಿ ಹಾಕುವುದಕ್ಕೆ ಇರತಕ್ಕಂತಹ

ಪ್ರಯತ್ನ. ದಯವಿಟ್ಟು ಈ ಮಾತುಗಳನ್ನು ನೀವು ಸರ್ಕಾರದ ಕಡೆಯಲ್ಲಿ ಸಭಾನಾಯಕರ ಸ್ಥಾನದಲ್ಲಿ ಕುಳಿತುಕೊಂಡಿದ್ದೀರಿ ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ಆ ಸ್ಥಾನದಲ್ಲಿ ಕುಳಿತುಕೊಂಡಿದ್ದೀರಿ. ಕೆಲವು ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಹೇಳಿಕೆಯನ್ನು ಕೊಡುವಂತಹ ಸ್ಥಾನವನ್ನು ನೀವು ಅಲಂಕರಿಸಿದ್ದೀರಿ. ಆದುದರಿಂದ ತಾವು ಸಭಾ ನಾಯಕರಾಗಿರುವಂತಹ ಸಂದರ್ಭದಲ್ಲಿ ತಾವು ಕೂಡ ಪದಗಳನ್ನು ಬಳಸುವಾಗ ಎಚ್ಚರಿಕೆಯನ್ನು ವಹಿಸಬೇಕು. ಆದ್ದರಿಂದ ಹಗರಣವನ್ನು ಮುಚ್ಚಿ ಹಾಕುವುದಕ್ಕೆ ಹೊರಟಿದ್ದೀರಿ ಎನ್ನುವುದು ನಮಗೆ ಮಾಡಿರುವಂತಹ ಅಪಾದನೆ ಇದೆ. ಆದುದರಿಂದ ದಯವಿಟ್ಟು ಆ ಪದಗಳು ಕಡತದಲ್ಲಿ ಇರಬಾರದು.

**ಸಭಾಪತಿಯವರು:–** ಅವರು ಏನು ಹೇಳುತ್ತಾರೆ ಕೇಳೋಣ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ನನಗೆ ನಮ್ಮ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಗಳ ಪ್ರಮುಖ್ಯತೆಗಳ ಕೆಲವು ಸಂಗತಿಗಳನ್ನು ಕಳೆದ ನಾಲ್ಕು ಬಾರಿಯಿಂದ ಶಾಸಕನಾಗಿ ಆಯ್ಕೆಯಾಗಿರುವಂತಹ ಹಿನ್ನೆಲೆಯಲ್ಲಿ ತಿಳಿದುಕೊಂಡಿದ್ದೇನೆ. ಈ ಸದನಗಳ ಘನತೆ ಗೌರವಗಳನ್ನು ನಾವೆಲ್ಲರೂ ಎತ್ತಿ ಹಿಡಿಯಬೇಕು. ಇದರ ಪ್ರಮುಖ್ಯತೆಯನ್ನು ನಾವೆಲ್ಲರೂ ಅರಿತಂಥವರಿದ್ದೇವೆ. ಇಲ್ಲಿ ಯಾರು ಹೊಸಬರು ಇಲ್ಲ. ನಾವೆಲ್ಲರೂ ಅನೇಕ ವರ್ಷಗಳಿಂದ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದೇವೆ. ಒಮ್ಮೊಮ್ಮೆ ಮಾತಿನ ಮಧ್ಯೆದಲ್ಲಿ ನಾವು ನಿಮಗೆ ಹೇಳುವುದು, ನೀವು ನಮಗೆ ಹೇಳುವಂಥದ್ದು ಈ ರೀತಿ ಇರುತ್ತದೆ. ನಾನು ನಿಶ್ಚಿತವಾಗಿ ಹೇಳಬಲ್ಲೆ ಶ್ರೀ ಯಂ.ಸಿ.ನಾಣಯ್ಯನವರು ಹೇಳಿರುವಂಥದ್ದು ಆಗಿರಬಹುದು. ಶ್ರೀ ಬಸವರಾಜ ಹೊರಟ್ಟಿಯವರು ಏನೇನು ಮಾತನಾಡಿದ್ದರು ಎನ್ನುವುದನ್ನು ಶ್ರೀ ಯಂ.ಸಿ.ನಾಣಯ್ಯನವರು ಕೇಳಿದ್ದರೆ, ನನಗೆ ಹೇಳಿದಂತೆ ಅವರಿಗೂ ಕೂಡ ಹೇಳಬೇಕಗುತ್ತದೆ. ಇದನ್ನು ಹೇಳಬಾರದು.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ಆ ರೀತಿ ಹೇಳಿದ್ದರೆ, I will withdraw that.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಎಲ್ಲರೂ ಎಲ್ಲಾ ಮಾತುಗಳನ್ನು ಹೇಳಿದ್ದನ್ನು ನಾನು ಬಹಳ ಸಮಾಧಾನದಿಂದಲೇ ಕುಳಿತುಕೊಂಡು ಕೇಳಿದ್ದೇನೆ. ನೀವು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ನಂತರವೇ ನಾನು ಉತ್ತರವನ್ನು ಹೇಳುವುದಕ್ಕೆ ನಿಂತಿದ್ದೇನೆ. ನಾನು ಉತ್ತರವನ್ನು ಹೇಳುವಂತಹ ಸಂದರ್ಭದಲ್ಲಿ ಪ್ರಸ್ತಾವಿಕವಾಗಿ ಇಂತಿಂಥವರೆಲ್ಲಾ ಈ ವಿಷಯದ ಬಗ್ಗೆ ಮಂಡಿಸಿದ್ದರು ಎಂದು ಹೇಳಿ ಮುಂದೆ ಹೋಗುವುದರೊಳಗೆ ಮಧ್ಯೆದಲ್ಲಿ ಪ್ರವೇಶವಾಗಿರುವುದರಿಂದ ಮತ್ತು ಬೇರೆ ಸರ್ಕಾರದ ಪರವಾಗಿ ನಾನು ಏನು ಉತ್ತರವನ್ನು ಹೇಳುತ್ತೇನೆಂದು ಕೇಳುವುದಕ್ಕೆ ಅವಕಾಶವನ್ನು ಕೊಡದೇ ಇದ್ದುದ್ದರಿಂದ ಹೇಳಿದಾಗ ಒಟ್ಟಾರೆ ಒಂದು ಧ್ವನಿ ಇರಲಿ ಎನ್ನುವ ಕಾರಣಕ್ಕಾಗಿ ಹೇಳಿದನೇ ಹೊರತು, ವೈಯಕ್ತಿಕವಾಗಿ ನಿಮ್ಮ ಯಾರ ಅಭಿಪ್ರಾಯಕ್ಕೂ ನಾನು ಅಗೌರವ ಇಲ್ಲ. ವೈಯಕ್ತಿಕವಾಗಿ ನಿಮ್ಮೆಲ್ಲರ ಬಗ್ಗೆ ಗೌರವ ಇದೆ. ಈ ಸದನದಲ್ಲಿ ತಾವೆಲ್ಲರು ಹಿರಿಯರಾಗಿ ನಿಮ್ಮ ಕೊಡುಗೆಯನ್ನು ಕೊಟ್ಟಿದ್ದೀರಿ. ಈ ಸದನದಲ್ಲಿ ಪ್ರಮುಖವಾಗಿ ನೆನ್ನೆಯ ದಿವಸ ಎಷ್ಟು ಒಳ್ಳೆಯ ಚರ್ಚೆಯಾಗಿದೆ. ನನಗೆ ನನ್ನ ಜವಾಬ್ದಾರಿಯ ಬಗ್ಗೆ ಇನ್ನಷ್ಟು ಹೆಚ್ಚು ಮಾಡಿದ್ದೀರಿ. ಈ ರೀತಿಯ ಒಳ್ಳೆಯ ಚರ್ಚೆಯಾಗಬೇಕು. ರಚನಾತ್ಮಕವಾದಂತಹ ಚರ್ಚೆಗಳಾಗಿ ಸಲಹೆಗಳು ಬರಬೇಕು. ನಿನ್ನೆಯ ದಿವಸ ಆ ರೀತಿಯಾಗಿದೆ. ಅದೇ ರೀತಿಯಲ್ಲಿ ಈ ವಿಷಯದಲ್ಲಿಯೂ ನಮ್ಮ ನಿಮ್ಮ ಮಧ್ಯೆ ಈ ಭಿನ್ನಾಭಿಪ್ರಾಯವಿಲ್ಲ. ನೀವು ಹೇಳಿದಂತೆ ಸಿಬಿಐ ಹೇಳಬಹುದು ನಾವು ಬೇಕಾದರೆ ಸಿಐಡಿ ಎಂದು ಹೇಳಬಹುದು. ಯವುದಾದರು ಒಂದು ತನಿಖೆಯಾಗಬೇಕೆಂದು ನಮ್ಮ ನಿಮ್ಮ ಒಟ್ಟು ಅಭಿಪ್ರಾಯ. ಒಟ್ಟಾದ ಒಂದು ಧ್ವನಿಯಿಂದ ಈ ರೀತಿಯ ಒಂದು ಹಗರಣವನ್ನು ನಾವು ಸಮಾಜದಲ್ಲಿ ಮುಂದುವರೆಯುವುದಕ್ಕೆ ಬಿಡುವುದಿಲ್ಲ. ನಾವು ಸರ್ಕಾರವಾಗಿ ತನಿಖೆ ಮಾಡುವುದಕ್ಕೆ ಸಿದ್ಧಧರಿದ್ದೇವೆಂದು

ಹೇಳುವುದಕ್ಕೆ ಮಹತ್ವ ಇತ್ತು. ಹಾಗಾಗಿ ಈಗ ಮಾನ್ಯ ಮುಖ್ಯಮಂತ್ರಿಗಳು ವರದಿಯನ್ನು ತೆಗೆದುಕೊಂಡಿದ್ದಾರೆ. ಅವರು ಈ ಸದನಕ್ಕೆ ಬಂದು ಅವರು ವಿವರವಾದ ಮಾಹಿತಿಯನ್ನು ಮಂಡಿಸುತ್ತಾರೆ. ನಿಶ್ಚಿತವಾಗಿ ನಾನು ಆ ಅಭಿಪ್ರಾಯದಲ್ಲಿ ಹೇಳಿಲ್ಲ. ನಾನು ಹೇಳಿದ್ದು ನೀವ್ಯಾರು ಮುಚ್ಚಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎನ್ನುವ ದಾಟಿಯಲ್ಲ. ಅಂದರೆ ಈ ಸದನದಲ್ಲಿ ಒಟ್ಟಾಗಿ ಈ ವಿಷಯದ ಗಾಂಭೀರತೆಯ ಹಿನ್ನೆಲೆಯಲ್ಲಿ ನಾವು ತನಿಖೆ ಮಾಡುವುದಕ್ಕೆ ಸಿದ್ದರಿದ್ದೇವೆ ಎನ್ನುವಂತಹ ಸಂದೇಶ ಹೋಗಬೇಕು ಎನ್ನುವಷ್ಟೇ ಉದ್ದೇಶ ಇತ್ತು. ಹಾಗಾಗಿ ನಾನು ಸ್ಪಷ್ಟಪಡಿಸಿದ್ದೇನೆ. ವೈಯಕ್ತಿಕವಾಗಿ ಯಾರು ಅನ್ಯಥಾ ಭಾವಿಸಬಾರದು. ಈ ವಿಷಯದ ಗಾಂಭೀರ್ಯತೆಯ ಹಿನ್ನೆಲೆಯಲ್ಲಿ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನಾವೆಲ್ಲರೂ ಮಾತನಾಡೋಣ. ಇವತ್ತು ನೀವುಗಳೆಲ್ಲರೂ ಹೇಳಿರುವಂತಹ ಅಭಿಪ್ರಾಯವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ. ಅವರು ಕೂಡ ಸದನಕ್ಕೆ ಬಂದು ಇದರ ಬಗ್ಗೆ ವಿವರವಾದ ಮಾಹಿತಿಯನ್ನು ಕೊಡುತ್ತಾರೆ. ನಾವೆಲ್ಲರೂ ಈ ರೀತಿಯ ಭ್ರಷ್ಟಾಚಾರ ಹಗರಣಗಳು ಎಲ್ಲಿಯೂ ನಡೆಯದಿರುವಂತೆ ಒಂದು ಬಿಗುವಾದಂತಹ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಮುಂದಾಗೋಣವೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಸಭಾಪತಿಯವರು:–** ಇಲ್ಲಿಗೆ ಈ ವಿಷಯವನ್ನು ಮುಗಿಸೋಣ.

## (ಆ) ಕಾವೇರಿ ನಾಲ್ಕನೇ ಹಂತ, ಮೂರನೇ ಘಟ್ಟ ಯೋಜನೆ ಅನುಷ್ಠಾನದಲ್ಲಿನ ವಿಳಂಬದಿಂದ ಬೆಂಗಳೂರು ನಗರ ಜನತೆಗೆ ಕುಡಿಯುವ ನೀರಿನ ತೊಂದರೆ ಆಗುತ್ತಿರುವ ಬಗ್ಗೆ

**ಶ್ರೀ ಆರ್.ವಿ.ವೆಂಕಟೇಶ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಕಾವೇರಿ 4ನೇ ಹಂತ 2ನೇ ಘಟ್ಟ ಯೋಜನೆ ಅನುಷ್ಠಾನದಲ್ಲಿ ವಿಳಂಬವಾಗುತ್ತಿರುವುದಿರಂದ, ಬೆಂಗಳೂರು ನಗರದ ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆ ಆಗಿರುವ ಬಗ್ಗೆ ಪ್ರಸ್ತಾಪಿಸುತ್ತಿದ್ದೇನೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹೊಸದಾಗಿ ಸೇರ್ಪಡೆಗೊಂಡ ಪ್ರದೇಶದಲ್ಲಿ ಕುಡಿಯುವ ನೀರು

ಪೂರೈಕೆಗೆ 2005ರಲ್ಲಿ ಪ್ರಾರಂಭಿಸಿದ ಕಾವೇರಿ 4ನೇ ಹಂತ 2ನೇ ಘಟ್ಟ ಯೋಜನೆಯು ಆಮೆಗತಿಯಲ್ಲಿ ಸಾಗುತ್ತಿದ್ದು, ಈ ಯೋಜನೆ ಕಾಮಗಾರಿಯು 2011ನೇ ಡಿಸೆಂಬರ್ ಪೂರ್ಣಗೊಳ್ಳಬೇಕಾಗಿದ್ದರೂ, ಇನ್ನು 25% ಕಾಮಗಾರಿ ಬಾಕಿ ಇದೆ ಎಂದು ವರದಿಯಾಗಿದೆ.

**ಸಭಾಪತಿಯವರು:–** ನಮ್ಮ ಸದನದಲ್ಲಿ ಒಂದು ಪದ್ಧತಿ ಇದೆ. ಮಾತನಾಡಿದಂತಹ ಸದಸ್ಯರು ಅವರ ಮಾತಿನ ನಂತರ ಎದ್ದು ಹೋರಟು ಹೋಗಬಾರದು. ಮಾತನಾಡಿದ ನಂತರ ಕನಿಷ್ಟ ಅರ್ಧ ಗಂಟೆ ಮುಕ್ಕಾಲು ಗಂಟೆ ಕುಳಿತುಕೊಂಡಿದ್ದರೆ ಸದನಕ್ಕೆ ಗಾಂಭೀರ್ಯತೆ ಬರುತ್ತದೆ. ನಾನು ಮಾತನಾಡಿದ್ದು ಆಯಿತು ಎದ್ದು ಹೋಗುತ್ತೇನೆ ಇನ್ನುವುದು ಸರಿಯಾದುದ್ದಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ ಆ ರೀತಿ ಈಗ ಗೋ.ಮಧುಸೂಧನ್‌ರವರು ಸದನದಿಂದ ಹೊರಗಡೆ ಹೋಗುತ್ತಿದ್ದಾರೆ.

**ಸಭಾಪತಿಯವರು:–** ಆ ರೀತಿಯಾಗಿ ಹೋಗಬಾರದೆಂದು ನಾನು ಅವರನ್ನು ನೋಡಿಯೇ ಹೇಳುತ್ತಿರುವಂಥದ್ದು.

**ಶ್ರೀ ಗೋ.ಮಧುಸೂಧನ್:–** ನಾನು ಹೋಗುತ್ತಿಲ್ಲ. ಹಿಂದೆ ಹೋಗಿ ಕುಳಿತುಕೊಳ್ಳಲು ಹೋಗುತ್ತಿದ್ದೆ.

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ ಬೆಂಗಳೂರು ಜನರ ದಾಹವನ್ನು ಕೊಂಚವಾದರೂ ತಗ್ಗಿಸುವ ಈ ಯೋಜನೆ ಮಾರ್ಚ್ 2012ರೊಳಗೆ ಮುಗಿಸುವುದಾಗಿ ಮಾನ್ಯ ಬೆಂಗಳೂರು ಜಲಮಂಡಳಿ ಸಚಿವರು ಕಳೆದ ಬಾರಿ ಅಧಿವೇಶನದಲ್ಲಿ ತಿಳಿಸಿದ್ದರು. ಬೇಸಿಗೆ ಪ್ರಾರಂಭದ ಫೆಬ್ರವರಿ ತಿಂಗಳಿಂದಲೇ ಬೆಂಗಳೂರು ನಗರದ ಪೂರ್ವ ಮತ್ತು ಉತ್ತರ ವಲಯಗಳಲ್ಲಿ ನೀರಿಗೆ ಜನರು ಹಾಹಾಕಾರ ಪಡುತ್ತಿದ್ದಾರೆ ಇಂತಹ ಪರಿಸ್ಥಿತಿಯಲ್ಲಿ ಈ ಯೋಜನೆಯ ಶೀಘ್ರ ಅನುಷ್ಠಾನಕ್ಕೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕಾಗಿತ್ತು. ಈ ಯೋಜನೆಯು ಇನ್ನು 25% ರಷ್ಟು ಕಾಮಗಾರಿ ಅಂದರೆ, ಇನ್ನೂ 13 ನೀರು ಸರಬರಾಜು ಕಾಮಗಾರಿಗಳು, 11 ಒಳಚರಂಡಿ

ಹಾಗೂ ನೀರು ಶುದ್ಧೀಕರಣ ಘಟಕಗಳ ನಿರ್ಮಾಣ ಕಾಮಗಾರಿ ಬಾಕಿ ಇದೆ. ಹಾಗೂ ಈ ಯೋಜನೆಯ ಭಾಗವಾದ ಕೊಳಗೇರಿ ಪ್ರದೇಶಗಳ 22,000 ಮನೆಗಳಿಗೆ ಉಚಿತ ನೀರಿನ ಸಂಪರ್ಕ ಒದಗಿಸುವುದು ಹಾಗೂ ಕೊಳಗೇರಿಯಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಕೊಳಚೆ ನೀರು ಸಂಸ್ಕರಣೆ ಘಟಕ ಅಳವಡಿಕೆ ಕಾಮಗಾರಿಯೂ ಪೂರ್ಣಗೊಳ್ಳಬೇಕು. ಆಗ ಮಾತ್ರ ಯೋಜನೆ ಸಂಪೂರ್ಣ. ಇಷ್ಟೆಲ್ಲಾ ಕಾಮಗಾರಿಗಳನ್ನು ಮೂರು ತಿಂಗಳಲ್ಲಿ ಜಲ ಮಂಡಳಿ ಪೂರೈಸಲು ಸಾಧ್ಯವಿಲ್ಲ ಎಂಬುದು ಪರಿಣಿತರ ಅಭಿಪ್ರಾಯ. ಆದ್ದರಿಂದ ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಾ ಈ ಯೋಜನೆಯು ತ್ವರಿತವಾಗಿ ಪೂರೈಸಲು ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ತಮ್ಮ ಮುಖಾಂತರ ಒತ್ತಾಯಿಸುತ್ತಿದ್ದೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಶ್ರೀ ಆರ್.ವಿ. ವೆಂಕಟೇಶ್‌ರವರು ಬೆಂಗಳೂರು ಬೃಹತ್ ನಗರ ಪಾಲಿಕೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾಳೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:–** ಶ್ರೀ ನ್ಯಾಮಗೌಡರವರು ಮತ್ತು ಶ್ರೀ ಎಸ್.ಆರ್.ಪಾಟೀಲ್‌ರವರು ಇಬ್ಬರು ಒಂದೇ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ವಿಷಯವನ್ನು ಕಳುಹಿಸಿದ್ದಾರೆ. ಇಬ್ಬರಲ್ಲಿ ಯಾರಾದರೊಬ್ಬರು ವಿಷಯವನ್ನು ಓದಬಹುದು.

**ಶ್ರೀ ಎಸ್.ಆರ್.ಪಾಟೀಲ್ (ಸ್ಥಳೀಯ ಸಂಸ್ಥೆ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ನೋಟೀಸ್ ಅನ್ನು ಬೆಳಿಗ್ಗೆ 9 ಗಂಟೆ 45 ನಿಮಿಷದಲ್ಲಿ ಕೊಟ್ಟಿದ್ದೇನೆ.

**ಸಭಾಪತಿಯವರು:–** ನಿಮ್ಮ ಹೆಸರನ್ನು ಕೂಡ ಬರೆದಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಎರಡು ಹೆಸರುಗಳನ್ನು ಬರೆಯಲಾಗಿದೆ. ನಿಮ್ಮ ಕಾರ್ಯಾಲಯಕ್ಕೆ 10 ಗಂಟೆಗೆ ನೋಟೀಸ್ ಕೊಟ್ಟವರ ಹೆಸರು ಮೊದಲು ಬಂದಿದೆ. ನಾನು 9 ಗಂಟೆ 45 ನಿಮಿಷಕ್ಕೆ ಕೊಟ್ಟಿದ್ದೇನೆ ನನ್ನ ಹೆಸರು ಎರಡನೆಯದಾಗಿ ಬಂದಿದೆ. ನಿಮ್ಮ ಕಾರ್ಯಾಲಯದ ಅಧಿಕಾರಿಗಳ ಬಗ್ಗೆ ನನಗೆ ನೋವಾಗುತ್ತಿದೆ. ನನ್ನ ಹೆಸರು ಮೊದಲು ಬರಬೇಕಾಗಿತ್ತು. ಆದರೆ ಎರಡನೆಯದಾಗಿ ಬಂದಿದೆ. ಬೆಳಿಗ್ಗೆ 9.45 ಗಂಟೆಗೆ ನಾನು ನೋಟೀಸ್ ಸಬ್‌ಮಿಟ್ ಮಾಡಿದ್ದರು ಕೂಡ ಎರಡನೆಯದಾಗಿ ಹೆಸರು ಬಂದಿದೆ. ವಿರೋಧ ಪಕ್ಷದ ಸದಸ್ಯರು ಎರಡನೆಯ ದರ್ಜೆಯ ಶಾಸಕರುಗಳಾ?

**ಸಭಾಪತಿಯವರು:–** ತಮ್ಮ ಆಕ್ಷೇಪಣೆ ಏನೆಂದು ಅರ್ಥವಾಗಲಿಲ್ಲ.

**ಶ್ರೀ ಜಿ.ಎಸ್.ನ್ಯಾಮಗೌಡ:–** ಮಾನ್ಯ ಸಭಾಪತಿಯವರೆ, ಶ್ರೀ ಎಸ್.ಆರ್.ಪಾಟೀಲ್‌ರವರೆ ಓದಲಿ.

**ಶ್ರೀ ಎಸ್.ಆರ್.ಪಾಟೀಲ್:–** ನನ್ನ ಹೆಸರು ಮೊದಲು ಬರಬೇಕಾಗಿತ್ತು. ಏಕೆಂದರೆ ಮೊದಲು ಸಬ್‌ಮಿಟ್ ಮಾಡಿದ್ದೆ. ಅಥವಾ ಆಡಳಿತ ಪಕ್ಷದ ಸದಸ್ಯರು ಯಾವಾಗಲಾರದು ನೋಟೀಸ್ ಕೊಟ್ಟರು ಅವರ ಹೆಸರು ಮೊದಲು ಬರುತ್ತದೆಯೇ? ದಯಮಾಡಿ ನಿಮ್ಮ ಕಾರ್ಯಾಲಯದಲ್ಲಿರತಕ್ಕಂತಹ ಅಧಿಕಾರಿಗಳ ಬಗ್ಗೆ ಆಕ್ಷೇಪಣೆ ಇದೆ. ಆಮೇಲೆ ನಾನು ಇದನ್ನು ಓದುತ್ತೇನೆ. ಶ್ರೀ ನ್ಯಾಮಗೌಡರು ಓದಿದರು ಕೂಡ ನನ್ನದು ಏನು ಅಭ್ಯಂತರವಿಲ್ಲ. ನೀವೇ ನೋಡಿ ನಾನು ಬೆಳಿಗ್ಗೆ 9.45 ಗಂಟೆಗೆ ಸಬ್‌ಮಿಟ್ ಮಾಡಿದ್ದೇನೆ. ಅವರು ಬೆಳಿಗ್ಗೆ 10 ಗಂಟೆಗೆ ಸಬ್‌ಮಿಟ್ ಮಾಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿರುವಂಥದ್ದು ಸರಿ ಇದೆ. ನಾನು ಇಲ್ಲಿ ನೋಡಿದೆ. ನಾನು ಈಗ ನೋಡುತ್ತಿದ್ದೇನೆ. ಶ್ರೀ ಎಸ್.ಆರ್.ಪಾಟೀಲ್‌ರವರು ಬೆಳಿಗ್ಗೆ 9.45 ಗಂಟೆಗೆ ಕೊಟ್ಟಿದ್ದಾರೆ. ಶ್ರೀ ನ್ಯಾಮಗೌಡರು ಬೆಳಿಗ್ಗೆ 10.00 ಗಂಟೆಗೆ ಕೊಟ್ಟಿದ್ದಾರೆ.

ಒಂದೇ ವಿಷಯವಾಗಿರುವುದರಿಂದ ಇಬ್ಬರ ಹೆಸರನ್ನು ಹಾಕಿ ಎಂದು ಹೇಳಿದ್ದು ಹೌದು. ಮೊದಲು ಶ್ರೀ ಎಸ್.ಆರ್.ಪಾಟೀಲ್ ಎಂದು ಹಾಕಿ ನಂತರ ಶ್ರೀ ನ್ಯಾಮಗೌಡರ ಹೆಸರನ್ನು ಹಾಕಬೇಕಾಗಿತ್ತು. ಇದು ತಪ್ಪಾಗಿದೆ. ಇದನ್ನು ನಮ್ಮ ಕಾರ್ಯಾಲಯದವರು ಗಮನಿಸಬೇಕೆಂದು ಹೇಳುತ್ತೇನೆ. ಈಗ ಶ್ರೀ ಎಸ್.ಆರ್.ಪಾಟೀಲ್‌ರವರು ಓದಿ.

## (ಇ) ಬಿಜಾಪುರ–ಬಾಗಲಕೋಟೆ ಜಿಲ್ಲೆಗಳಿಗೆ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಬರುವುದರಿಂದ ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಕನಿಷ್ಠ 3 ಟಿ.ಎಂ.ಸಿ. ನೀರನ್ನು ಏಕಕಾಲಕ್ಕೆ ಬಿಡಲು ಮಹಾರಾಷ್ಟ್ರ ಸರ್ಕಾರಕ್ಕೆ ವಿನಂತಿಸಿಕೊಳ್ಳುವ ಬಗ್ಗೆ.

**ಶ್ರೀ ಎಸ್.ಆರ್.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಾಗಲಕೋಟೆ ಜಿಲ್ಲೆಯ ಬೀಳಗಿ ಹಾಗೂ ಜಮಖಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ ಮತ್ತು ಬಿಜಾಪುರ ತಾಲ್ಲೂಕು ಹಾಗೂ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕೃಷ್ಣ ನದಿಯ ದಡದಲ್ಲಿರುವ ನೂರಾರು ಹಳ್ಳಿಗಳ ಜನರಿಗೆ ಕೃಷ್ಣ ನದಿಯ ಒಂದು ಹನಿ ನೀರು ಸಹ ದೊರೆಯದೆ ಜನ ಜಾನುವಾರುಗಳಿಗೆ ಕುಡಿಯಲಿಕ್ಕೆ ನೀರು ದೊರೆಯದೆ ಬಹಳ ತೊಂದರೆಯಾಗಿರುತ್ತದೆ. ಕಳೆದ ಒಂದು ವಾರದಿಂದ ಕೃಷ್ನ ನದಿಯಲ್ಲಿ ಸಂಪೂರ್ಣವಾಗಿ ನೀರು ಬತ್ತಿ ಹೋಗಿರುತ್ತದೆ. ಈ ರೀತಿಯ ಭಾರೀ ಪ್ರಮಾಣದ ಹಾಹಾಕಾರ ಉಂಟಾಗಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುವ ಪರಿಸ್ಥಿತಿ ಉದ್ಭವಿಸುವ ಲಕ್ಷಣಗಳು ಗೋಚರಿಸುತ್ತಿವೆ. ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಕನಿಷ್ಠ 3 ಟಿ.ಎಂ.ಸಿ. ನೀರನ್ನು ಏಕಕಾಲಕ್ಕೆ ಬಿಡಲು ಮಹಾರಾಷ್ಟ್ರ ಸರ್ಕಾರಕ್ಕೆ ವಿನಂತಿಸಿಕೊಂಡು, ಒಂದೆರಡು ದಿನಗಳಲ್ಲಿ ಈ ಮೇಲಿನ 3 ಜಿಲ್ಲೆಗಲ್ಲಿ ಬರುವ ತಾಲ್ಲೂಕಿನ ಮತ್ತು ನೂರಾರು ಹಳ್ಳಿಗಳ ಜನ ಜಾನುವಾರುಗಳಿಗೆ ನೀರು ಪೂರೈಕೆ ಮಾಡುವಂತೆ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಪಡಿಸುತ್ತಿದ್ದೇನೆ.

ಅಲ್ಲಿ ಕುಡಿಯುವುದಕ್ಕೆ ಸಹ ನೀರಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಅಲ್ಲಿ

ಖಂಡಿತವಾಗಿಯೂ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ಉದ್ಭವಿಸುತ್ತದೆ. The people are fed up. Definitely a law and order problem will arise. ಜನಜಾನುವಾರುಗಳು ಬಹಳ ಹಾಹಾಕಾರದ ಪರಿಸ್ಥಿತಿಯಲ್ಲಿರುವುದರಿಂದ ನಾವು ಆ ಜಿಲ್ಲೆಗಳಿಗೆ ಭೇಟಿ ನೀಡುವುದು ಸಹ ಬಹಳ ದುಸ್ತರವಾಗಿದೆ. ಇದು ಬಹಳ ಗಂಭೀರವಾದಂತಹ ಸಮಸ್ಯೆ ಆಗಿರುವುದರಿಂದ ಸರ್ಕಾರ ಈ ಬಗ್ಗೆ ಸೂಕ್ತವಾದಂತಹ ಕ್ರಮ ಕೈಗೊಂಡು ಒಂದೆರಡು ದಿವಸಗಳಲ್ಲಿ ಪರಿಹಾರ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಜಿ.ಎಸ್.ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್‌ರವರು ತಿಳಿಸಿರುವಂತೆ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಈ ಸಮಸ್ಯೆ ಬಹಳ ಗಂಭೀರವಾಗಲಿದ್ದು ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ 5 ಟಿ.ಎಂ.ಸಿ. ನೀರನ್ನು ಬಿಡಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಬೃಹತ್ ನೀರಾವರಿ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಗಂಭೀರವಾದಂತಹ ವಿಷಯವಾಗಿದೆ ಎನ್ನುವಂತಹ ವಿಚಾರವನ್ನು ನಾವು ಸಹ ಒಪ್ಪುತ್ತೇವೆ. ಮಾನ್ಯ ಎಸ್.ಆರ್.ಪಾಟೀಲ್‌ರವರ ಪ್ರಸ್ತಾವನೆಯಲ್ಲಿ 3 ಟಿ.ಎಂ.ಸಿ. ಎಂಬುದಾಗಿಯೂ ಮತ್ತು ಶ್ರೀ ಜಿ.ಎಸ್.ನ್ಯಾಮಗೌಡರ ಪ್ರಸ್ತಾವನೆಯಲ್ಲಿ 5 ಟಿ.ಎಂ.ಸಿ. ನೀರು ಎಂಬುದಾಗಿಯೂ ತಿಳಿಸಲಾಗಿದೆ. ನೆನ್ನೆಯ ದಿವಸ ವಿಧಾನ ಸಭೆಯಲ್ಲಿ ಮಹಾರಾಷ್ಟ್ರದಿಂದ 5 ಟಿ.ಎಂ.ಸಿ. ನೀರನ್ನು ಬಿಡಿಸಬೇಕೆಂದು ಚರ್ಚೆಯಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಮತ್ತು ಬೃಹತ್ ನೀರಾವರಿ ಸಚಿವರು ಈ ವಿಷಯದ ಬಗ್ಗೆ ಅಲ್ಲಿ ಬಹಳ ಗಂಭೀರವಾಗಿ ಮಾತನಾಡಿದ್ದಾರೆ. ಅಲ್ಲದೆ ಈ 5 ಟಿ.ಎಂ.ಸಿ. ನೀರನ್ನು ಖರೀದಿ ಮಾಡುವುದಕ್ಕೆ ಸಂಬಂಧಿಸಿದಂತೆ ಹಿಂದೆಲ್ಲಾ ಮಾಡಿದಂತೆ ಈ

ಬಾರಿಯೂ ಮಾಡುವುದಕ್ಕೆ ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಆ ದಿಕ್ಕಿನಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ. ವಿವರವಾದ ಉತ್ತರವನ್ನು ಸನ್ಮಾನ್ಯ ಸಚಿವರಿಂದ ನಾಳೆ ಕೊಡಿಸಲಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಿಂದೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಕೊಯ್ನಾ ಜಲಾಶಯದಿಂದ 6 ಸಲ ನೀರನ್ನು ಬಿಡಿಸಿದ್ದೇವೆ. ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯವನ್ನು ಪ್ರತಿನಿಧಿಸುತ್ತಿರುವಂತಹ ಸಚಿವರಿಗೂ ಸಹ ನಾವು ಈ ವಿಚಾರದಲ್ಲಿ ಒತ್ತಾಯ ಮಾಡುತ್ತೇವೆ. ಏಕೆಂದರೆ ನಮ್ಮದು ಮ್ಯಾಚಿಂಗ್ ಗೌರ್ನಮೆಂಟ್ ಇರುವುದರಿಂದ we will not shirk from the responsibility. ಅದರ ಬಗ್ಗೆ ನಾವು ಸಹ ಕಾಳಜಿ ವಹಿಸುತ್ತೇವೆ. ಆದರೆ ನೀರಿನ ವಿಚಾರವಾಗಿ ರಾಜಕಾರಣ ಬೇಡ, ದಯಮಾಡಿ ಎಷ್ಟು ಸಾಧ್ಯವಿದೆಯೋ ಅಷ್ಟು, 5 ಟಿ.ಎಂ.ಸಿ.ಗಿಂತ ಹೆಚ್ಚು ಬಿಡಿಸುವುದಕ್ಕಾದರೆ ಬಿಡಿಸಲಿ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ತಕ್ಷಣವೇ ಒಂದೆರಡು ದಿವಸಗಳಲ್ಲಿ ನೀರನ್ನು ಬಿಡಿಸುವಂತಹ ಕೆಲಸ ಆಗಬೇಕು. ಏಕೆಂದರೆ ಇದು ಬಹಳ ಜ್ವಲಂತವಾದ ಹಾಗೂ ಗಂಭೀರವಾದಂತಹ ಸಮಸ್ಯೆಯಾಗಿದೆ. ಅಲ್ಲಿ ಬಹಳ ಹಾಹಾಕಾರದ ಪರಿಸ್ಥಿತಿ ಉದ್ಭವಿಸಿದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಸನ್ಮಾನ್ಯ ಸಭಾಪತಿಯವರೇ, ಶ್ರೀಯುತರುಗಳಾದ ಎಸ್.ಆರ್.ಪಾಟೀಲ್‌ರವರು ಮತ್ತು ಜಿ.ಎಸ್. ನ್ಯಾಮಗೌಡರು ಇಬ್ಬರು ಸಹ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ನಾನು ಈಗಾಗಲೇ ತಿಳಿಸಿರುವಂತೆ ಈ ವಿಚಾರ ನೆನ್ನೆಯ ದಿವಸ ವಿಧಾನ ಸಭೆಯಲ್ಲಿ ಕೂಡ ಚರ್ಚೆಯಾಗಿದೆ. ಇದು ಅತ್ಯಂತ ಗಂಭೀರವಾದಂತಹ ವಿಷಯ ಎಂಬುದಾಗಿ ಸ್ವತಃ ಸನ್ಮಾನ್ಯ ಮುಖ್ಯಮಂತ್ರಿಯವರೇ ಈ ವಿಚಾರಕ್ಕೆ ಸ್ಪಂದಿಸಿದ್ದಾರೆ. ಜೊತೆಗೆ ಬೃಹತ್ ನೀರಾವರಿ ಸಚಿವರು ಸಹ ಈ ವಿಚಾರದಲ್ಲಿ ಸ್ಪಂದಿಸಿದ್ದಾರೆ. ಇದರಲ್ಲಿ ರಾಜಕಾರಣದ ಪ್ರಶ್ನೆಯೇ ಇಲ್ಲ. ಜನ ಮತ್ತು ಜಾನುವಾರುಗಳ ಕುಡಿಯುವ ನೀರಿನ ಸಲುವಗಿ ನಾವು ಈ ಕೆಲಸವನ್ನು

ಅಗತ್ಯವಾಗಿ ಮಾಡಲೇಬೇಕಾಗಿದೆ. ಈ ಕೆಲಸವನ್ನು ಹಿಂದಿನಿಂದಲೂ ಮಾಡಿಕೊಂಡು ಬರಲಾಗಿದೆ. ನಾವು ಮಾಡಿಲ್ಲ, ನೀವು ಮಾಡಿಲ್ಲ ಎನ್ನುವಂಥದ್ದೇನೂ ಇಲ್ಲ. ಇದನ್ನು ನಿರಂತರವಾಗಿ ಮಾಡಿಕೊಂಡು ಬರಲಾಗಿದೆ. ಈಗ ಈ ದಿಕ್ಕಿನಲ್ಲಿ ರಾಜ್ಯ ಸರ್ಕಾರವಾಗಿ ನಾವು ನಿಶ್ಚಿತವಾಗಿಯೂ ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಮಾತುಕತೆ ನಡೆಸಿ ಕೊಯ್ನಾ ಜಲಾಶಯದಿಂದ ನೀರನ್ನು ಬಿಡಿಸುವುದಕ್ಕೆ ಎಲ್ಲ ರೀತಿಯ ಪ್ರಯತ್ನಗಳನ್ನು ಕೂಡ ಮಾಡುತ್ತಿದ್ದೇವೆ. ನಾನು ಸನ್ಮಾನ್ಯ ಎಸ್.ಆರ್.ಪಾಟೀಲ್‌ರವರಲ್ಲಿ ಒಂದು ವಿನಂತಿ ಮಾಡಿಕೊಳ್ಳಬಯಸುತ್ತಿದ್ದೇನೆ. ಈಗಾಗಲೇ ತಿಳಿಸಿರುವಂತೆ ಅವರು ತಮ್ಮ ಕೌಂಟರ್‌ಪಾರ್ಟ್ ಜೊತೆಯಲ್ಲಿ ಮಾತನಾಡಿ ಮಾಡುತ್ತೇವೆ ಎಂದು ಹೇಳಿದ್ದನ್ನು ನಾನು ಸ್ವಾಗತಿಸುತ್ತೇನೆ, ಆ ಪ್ರಯತ್ನ ತಮ್ಮಿಂದ ಕೂಡ ಆಗಲಿ, ನಾವಂತೂ ಆ ದಿಕ್ಕಿನಲ್ಲಿ ಪ್ರಯತ್ನಗಳನ್ನು ಮಾಡುತ್ತಲೇ ಇದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ನಾಯಕರು ಬಹಳ ಹುರುಪಿನಲ್ಲಿದ್ದಾರೆ. ಚಿಕ್ಕಮಗಳೂರು ಮತ್ತು ಉಡುಪಿಯಲ್ಲಿ . . . .

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ಈ ರೀತಿ ಮಾತನಾಡಿದರೆ ನಾನು ಉತ್ತರ ಪ್ರದೇಶದ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ.

**ಸಭಾಪತಿಯವರು:-** ಈಗ ಮುಂದಿನ ವಿಷಯ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರೇ ತಾವು ಆ ಪ್ರಸ್ತಾವನೆಯನ್ನು ಓದಿಬಿಡಿ.

**(ಈ) ತುಂಗಭದ್ರಾ ಎಡದಂಡೆ ಕಾಲುವೆಯ ನೀರು ಬಿಡುವ ಕುರಿತು.**

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ತುಂಗಭದ್ರಾ ಎಡದಂಡೆ ಕಾಲುವೆಯಿಂದ ನೀರು ಬಿಡುವ ವಿಷಯವಾಗಿ ನಾನು ಪ್ರಸ್ತಾಪಿಸುತ್ತಿದ್ದೇನೆ. ಈ ವಿಚಾರವಾಗಿ ತುಂಗಭದ್ರಾ ಎಡದಂಡೆ ಕಾಲುವೆಯಿಂದ ನೀರು ಬಿಡುವುದನ್ನು ಮಾರ್ಚ್ 31ನೇ

ತಾರೀಖಿಗೆ ನಿಲ್ಲಿಸಲಾಗುವುದು ಎಂಬುದಾಗಿ ತಿಳಿದುಬಂದಿದೆ. ತುಂಗಭದ್ರಾ ಎಡದಂಡೆ ಕಾಲುವೆ ಕಕ್ಷೆಯಲ್ಲಿ ಕನಿಷ್ಟ 35,000 ಎಕರೆ (15,000 ಹೆಕ್ಟೇರ್) ಗಳಷ್ಟು ಪ್ರದೇಶದಲ್ಲಿ ಈಗಾಗಲೇ ಭತ್ತದ ಬೆಳೆ ಇದೆ. ಮಾರ್ಚ್ 31ಕ್ಕೆ ನೀರು ಬಿಡುವುದನ್ನು ನಿಲ್ಲಿಸಿದಲ್ಲಿ ಅಲ್ಲಿನ ರೈತರಿಗೆ ತುಂಬಾ ಹಾನಿಯಾಗುತ್ತದೆ. ಆ ದೃಷ್ಟಿಯಿಂದ ನನಗಿರುವ ಮಾಹಿತಿ ಪ್ರಕಾರ ತುಂಗಭದ್ರಾ ಜಲಾಶಯದಲ್ಲಿ ನೀರಿನ ಕೊರತೆ ಇರುವುದಿಲ್ಲ. ಆದ್ದರಿಂದ ಈ ಭಾಗದ ರೈತರ ಹಿತದೃಷ್ಟಿಯಿಂದ ಮಾರ್ಚ್–31ರ ಬದಲು ಕನಿಷ್ಟ ಪಕ್ಷ ಏಪ್ರಿಲ್ 15 ರವರೆಗೆ ತುಂಗಭದ್ರಾ ಎಡದಂಡೆ ಕಾಲುವೆಯ ನೀರು ಬಿಡುವುದನ್ನು ಮುಂದುವರೆಸಬೇಕು. ಈ ವಿಷಯವಾಗಿ ತಮ್ಮ ಮೂಲಕ ಸರ್ಕಾರವನ್ನು ವಿನಂತಿಸುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ತುಂಗಭದ್ರಾ ಎಡದಂಡೆ ಕಾಲುವೆಯಲ್ಲಿ ನೀರನ್ನು ಬಿಡುವ ವಿಷಯದಲ್ಲಿ ಮಾರ್ಚ್ 31ರ ಬದಲು ಏಪ್ರಿಲ್ 15 ರವರೆಗೆ ನೀರನ್ನು ಬಿಟ್ಟರೆ ಅಲ್ಲಿನ ರೈತರಿಗೆ ಅನುಕೂಲವಾಗುತ್ತದೆ ಎನ್ನುವಂತಹ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂಥೆ ಬೃಹತ್ ನೀರಾವರಿ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ. ನಮ್ಮ ಸರ್ಕಾರ ನಿಶ್ಚಿತವಾಗಿಯೂ ರೈತರ ಬಗ್ಗೆ ಕಾಳಜಿಯನ್ನು ಹೊಂದಿದೆ. ಅನುಕೂಲಕರವಾದ ನಿರ್ಣಯವನ್ನು ನಾವು ಮಾಡುತ್ತೇವೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಯಾವುದೇ ಸರ್ಕಾರ ಇರಲಿ ಅದು ರೈತರ ಬಗ್ಗೆ ಕಾಳಜಿಯನ್ನು ವಹಿಸಲೇಬೇಕಾಗುತ್ತದೆ, ಇಲ್ಲದಿದ್ದರೆ ಅವರು ಓಡಿಸುತ್ತಾರೆ. ಅದರ ಬಗ್ಗೆ ನಾವೀಗ ಮಾತನಾಡುವುದು ಬೇಡ, ಯಾರೇ ಇದ್ದರೂ ರೈತರ ಪರವಾಗಿ ಕಾಳಜಿ ವಹಿಸಲೇಬೇಕು. ನಾನು ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿರುವುದರ ಉದ್ದೇಶವೇನೆಂದರೆ ಅಲ್ಲಿ ರೈತರು ಮುಷ್ಕರ ನಡೆಸುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಕ್ರಮ ಕೈಗೊಂಡರೆ ರೈತರಿಗೂ ಅನುಕೂಲವಾಗುತ್ತದೆ ಮತ್ತು ಸರ್ಕಾರಕ್ಕೂ

ಒಳ್ಳೆಯದಾಗುತ್ತದೆ. ಏಕೆಂದರೆ ಇಳುವರಿ ಜಾಸ್ತಿಯಾಗುವುದರಿಂದ ಕೃಷಿ ಉತ್ಪನ್ನ ಕೂಡ ಜಾಸ್ತಿಯಾಗುತ್ತದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ನಾವು ನೀರಿನ ಲಭ್ಯತೆಗನುಗುಣವಾಗಿ ನಿಶ್ಚಿತವಾಗಿಯೂ ರೈತರ ಪರವಾದ ನಿರ್ಣಯವನ್ನು ಮಾಡುವ ವಿಚಾರದಲ್ಲಿ ಮಾನ್ಯ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಸಭಾಪತಿಯವರು:–** ಈಗ ಮುಂದಿನ ವಿಷಯಕ್ಕೆ ಹೋಗೋಣ. ನಿಯಮ 68ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರಿಂದ ಚರ್ಚೆ, ನಾನು ನಮ್ಮ ನಿಯಮಾವಳಿಗಳ ಪುಸ್ತಕವನ್ನು ಬಹಳಷ್ಟು ಸಂದರ್ಭದಲ್ಲಿ ಸದನದಲ್ಲಿ ಪ್ರಸ್ತಾಪ ಮಾಡುತ್ತಿರುತ್ತೇನೆ. ಆದರೂ ನಾವೇ . . . .

## 4. ನಿಲುವಳಿ ಸೂಚನೆಗೆ ಅನುಮತಿ ಕೋರಿ ಪ್ರಸ್ತಾವ

### ಕಾವೇರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ ತಮಿಳುನಾಡು ಸರ್ಕಾರ ಸರ್ವೋಚ್ಚ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿರುವ ಕುರಿತು.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅದಕ್ಕೂ ಮೊದಲು ಇವೊತ್ತು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ಇನ್ನೊಂದು ವಿಷಯವನ್ನು ಕಳುಹಿಸಿಕೊಟ್ಟಿದ್ದೇನೆ. ನೆನ್ನೆ ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಲಾಗಿದ್ದ ವಿಷಯವನ್ನು ನಿಯಮ 68ಕ್ಕೆ ಕನ್ವರ್ಟ್ ಮಾಡಿರುವುದು ಸರಿ, ಅದರ ಜೊತೆಗೆ ಈ ದಿನ ಕಾವೇರಿ ನದಿ ನೀರಿನ ಬಿಡುಗಡೆ ಬಗ್ಗೆ ತಮಿಳುನಾಡಿನ ಮುಖ್ಯಮಂತ್ರಿಗಳು ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ಸುಪ್ರೀಂ ಕೋರ್ಟಿಗೇನು ಹೋಗಿದ್ದಾರೆ, ಅದರ ವಿರುದ್ಧ ಒಂದು ವಿಷಯವನ್ನು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ನೋಟೀಸ್ ಕಳುಹಿಸಿಕೊಟಿದ್ದೇವೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರಲ್ಲಿ ಒಂದು ವಿನಂತಿ, ಇದರಲ್ಲಿ ತಾಂತ್ರಿಕವಾಗಿ ಒಂದು ಸಣ್ಣ ಸಮಸ್ಯೆ ಇದೆ, ಇದನ್ನು ಯಾವ ರೀತಿ ತಾವು ಸರಿಪಡಿಸಬಹುದೋ ಆ ರೀತಿ ಮಾಡಬೇಕು. ಆ ವಿಚಾರದಲ್ಲಿ ತಾವು ತಮ್ಮ ಸಲಹೆಯನ್ನು ಕೊಡಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಂತಹ ವಿಷಯವೂ ಸರಿಯಿದೆ, ಅದಕ್ಕೆ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಹೇಳಿದಂತಹ ವಿಚಾರ ಕೂಡ ಸರಿಯಿದೆ. ಆ ಬಗ್ಗೆ ನಾನು ಒಂದು ವಿಚಾರವನ್ನು ತಿಳಿಸುತ್ತೇನೆ. ಕಾವೇರಿ ನೀರಿನ ಬಗ್ಗೆ ನಿಲುವಳಿ ಸೂಚನೆಯ ಅಡಿಯಲ್ಲಿ ಚರ್ಚೆ ಮಾಡಬೇಕೆಂದು ವಿರೋಧ ಪಕ್ಷದ ನಾಯಕರಾದ ಶ್ರೀಮತಿ ಮೋಟಮ್ಮನವರು ಮತ್ತು ಇನ್ನು ಕೆಲವು ಸದಸ್ಯರೆಲ್ಲಾ ಸೇರಿ ಸಹಿ ಮಾಡಿ ಕಳುಹಿಸಿಕೊಟ್ಟಿರುವ ಸೂಚನಾ ಪತ್ರವನ್ನು ನಾನು ಸ್ವಲ್ಪಮಟ್ಟಿಗೆ ಪರಿಗಣನೆ ಮಾಡಿದ್ದೇನೆ. ಇದರಲ್ಲಿ ಸ್ವಲ್ಪ ಮಟ್ಟಿನ ತಾಂತ್ರಿಕ ಸಮಸ್ಯೆ ಇದೆ. ಇದು ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿರುವಂತಹ ವಿಷಯವಾದ್ದರಿಂದ ಮಾನ್ಯ ಸದಸ್ಯರು ಆ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡುವುದಾದರೆ ಪರವಾಗಿಲ್ಲ, ಇಲ್ಲವಾದರೆ ಕಷ್ಟವಾಗುತ್ತದೆ. ಆದ್ದರಿಂದ ಮಧ್ಯಾಹ್ನ ಹೇಗಿದ್ದರೂ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ನಾವು ನೀವೆಲ್ಲಾ ಸೇರಲಿದ್ದು ಅಲ್ಲಿ ಚರ್ಚೆ ಮಾಡಿದ ನಂತರ ಈ ವಿಷಯದಲ್ಲಿ ಏನು ಮಾಡಬಹುದೆಂಬುದನ್ನು ತೀರ್ಮಾನ ಮಾಡಿದರೆ ಒಳ್ಳೆಯದಾಗುತ್ತದೆ. ಆದ್ದರಿಂದ ಈ ವಿಷಯವನ್ನು ಪೆಂಡಿಂಗ್ ಇಟ್ಟುಕೊಳ್ಳುತ್ತೇನೆ. ಈ ವಿಚಾರದಲ್ಲಿರುವಂತಹ ತಾಂತ್ರಿಕ ಸಮಸ್ಯೆ ಬಗ್ಗೆ ಇಲ್ಲಿ ಈ ಸಂದರ್ಭದಲ್ಲಿ ಚರ್ಚೆ ಮಾಡುವುದು ಸರಿಯಾಗುವುದಿಲ್ಲ. ಆದ್ದರಿಂದ ಎಲ್ಲರೂ ದಯವಿಟ್ಟು ಸಹಕರಿಸಿ. ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಈ ವಿಷಯವಾಗಿ ಏನು ತೀರ್ಮಾನಕ್ಕೆ ಬರಲಾಗುತ್ತದೆಯೋ ಅದರಂತೆ ನಡೆದುಕೊಳ್ಳೋಣ.

ನಾನು ಇನ್ನೊಂದು ವಿಚಾರದ ಬಗ್ಗೆ ಹೇಳಲಿಕ್ಕೆ ಹೊರಟಿದ್ದೇನೆ. ನಿಯಮ 68ರ ಅಡಿಯಲ್ಲಿ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವಾಗ ಪ್ರತಿ ಬಾರಿಯೂ ನಿಯಮಾವಳಿ ಪುಸ್ತಕದಲ್ಲಿನ ಅಂಶಗಳನ್ನು ನೋಡಬೇಕೇನ್ನುವಂತಹ ಉದ್ದೇಶ ನನ್ನದಲ್ಲ, ಈ ಸದನದಲ್ಲಿ ಬಹಳಷ್ಟು ಹಿರಿಯ ಸದಸ್ಯರಿರುವುದರಿಂದ ಎಲ್ಲರಿಗೂ ಆ ವಿಚಾರಗಳು ಗೊತ್ತಿರುತ್ತವೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಷಯದ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡುತ್ತಾರೆ. ಇನ್ನಿತರ ಬಹಳಷ್ಟು ಸದಸ್ಯರು ಆ ಚರ್ಚೆಯಲ್ಲಿ ಭಾಗವಹಿಸುವುದಾಗಿ ಹೆಸರುಗಳನ್ನು ಕಳುಹಿಸಿಕೊಟ್ಟಿದ್ದಾರೆ. ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿರುವ ವಿಷಯಕ್ಕೆ ಸುಮಾರು ಒಂದು ಗಂಟೆ ಕಾಲ ಅವಕಾಶ ಕೊಡಬಹುದು ಎಂಬುದಾಗಿ ಈ ನಿಯಮಾವಳಿಗಳಲ್ಲಿ ನಾವೇ ಬರೆದುಕೊಂಡಿದ್ದೇವೆ. ಈಗಾಗಲೇ ಸಮಯ ಮಧ್ಯಾಹ್ನ ಒಂದೂಕಾಲು ಗಂಟೆಯಾಗಿರುವುದರಿಂದ ಊಟದ ಸಮಯವಾಗುತ್ತಿದೆ. ಆದುದರಿಂದ ಆ ವಿಚಾರವನ್ನು ನೆನಪಿಟ್ಟುಕೊಂಡು ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪಿಸುವುದು ಒಳ್ಳೆಯದು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಒಬ್ಬೊಬ್ಬರು ಒಂದೊಂದು ಗಂಟೆ ಎಂದು ನಾನು ಭಾವಿಸಿದ್ದೇನೆ.

**ಸಭಾಪತಿಯವರು:–** ಇಲ್ಲ, ಹಾಗಿದ್ದರೆ ಆ ನಿಯಮವನ್ನು ಓದಿಬಿಡುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಇಲ್ಲ ಮಾನ್ಯ ಸಭಾಪತಿಯವರೇ, ನಾನು casual ಆಗಿ ತಮಾಷೆಗೆ ಕೇಳಿದೆ ಅಷ್ಟೆ.

**ಸಭಾಪತಿಯವರು:–** 'ಒಂದು ಗಂಟೆಗೆ ಮಿರದಂತಹ ಅವಧಿಯನ್ನು ಚರ್ಚೆಗಾಗಿ ಒದಗಿಸಿಕೊಡಬಹುದು' ಎಂಬುದಾಗಿ ನಾವೇ ನಿಯಮಗಳನ್ನು ಬರೆದುಕೊಂಡಿದ್ದೇವೆ. ಆದಷ್ಟು ಮಟ್ಟಿಗೆ ಆ ಕಾಲಮಿತಿಯೊಳಗೆ ಚರ್ಚಿಸಿದರೆ ಉತ್ತಮ. ಬೇರೆಯವರಿಗೂ ಅವಕಾಶಗಳು ಬೇಕು. ವಿರೋಧ ಪಕ್ಷದ ನಾಯಕರಾದ ಮಾನ್ಯ ಮೋಟಮ್ಮನವರು, ಶ್ರೀಯುತ ವೀರಣ್ಣ

ಮತ್ತಿಕಟ್ಟಿಯವರು, ಶ್ರೀಯುತ ವಿ.ಆರ್.ಸುದರ್ಶನ್‌ರವರು, ಶ್ರೀಯುತ ಆರ್.ವಿ.ವೆಂಕಟೇಶ್‌ರವರು, ಶ್ರೀಯುತ ಮಹಂತೇಶ ಕೌಜಲಗಿಯವರು ಈ ಐವರು ಸದಸ್ಯರು ಈ ನೋಟೀಸ್‌ಗೇನು ಸಹಿ ಮಾಡಿದ್ದೀರಿ, ನೀವು ನಿಮ್ಮ ನಿಮ್ಮಲ್ಲಿಯೇ ಮಾತನಾಡಿಕೊಂಡು, ಕಾಲಾವಕಾಶವನ್ನು ಹೊಂದಾಣಿಕೆ ಮಾಡಿಕೊಂಡು ವಿಷಯವನ್ನು ಪ್ರಸ್ತಾಪಿಸಬಹುದಾಗಿದೆ. ಚರ್ಚೆಗೆ ಸರ್ಕಾರದ ಪರವಾಗಿ ಅವಕಾಶ ಕೊಡುತ್ತೇವೆ. ನಿಯಮ 68ರ ಪರವಾಗಿ ಬಂದಾಗ ಸಹಿ ಮಾಡಿದವರ ಹೆಸರುಗಳಿಗೂ ಅವಕಾಶ ಕೊಡುತ್ತೇವೆ. ಸರ್ಕಾರದಿಂದಲೂ ಬೇರೆ ಯಾರಿಗಾದರು ಅವಕಾಶ ಕೊಡಲಾಗುವುದು. ಮೊದಲು ಪ್ರಾರಂಭ ಮಾಡಲಿ. ಸಮಯಾವಕಾಶದ ಬಗ್ಗೆ ಸಹ ಹೇಳುತ್ತೇನೆ, ಕೆಲವು ಸಲ ಬಹಳ ಬಿಗಿಯಾಗಿ ಟೈಂ ಅಡ್ಜೆಸ್ಟ್ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಮಧ್ಯಾಹ್ನ ಬಜೆಟ್ ಮೇಲಿನ ಚರ್ಚೆ ಯಾವುದೇ ಕಾರಣಕ್ಕೂ ಸಹ ಮುಂದಕ್ಕೆ ಹೋಗಬಾರದು, ನಿನ್ನೆ ದಿವಸ ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ಆಗಲಿಲ್ಲ, ಇವತ್ತು ಪ್ರಾರಂಭ ಮಾಡಬೇಕಾಗುತ್ತದೆ. ಇದನ್ನು ನೆನಪಿಟ್ಟುಕೊಂಡು ಚರ್ಚೆಯನ್ನು ಪ್ರಾರಂಭ ಮಾಡೋಣ.

## 5. ನಿಯಮ 68ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ

## ರಾಜ್ಯದ ಬರಪೀಡಿತ ಪ್ರದೇಶಗಳಿಗೆ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವು ಒದಗಿಸಲು ಸರ್ಕಾರ ಸಂಪೂರ್ಣವಾಗಿ ವಿಫಲವಾಗಿರುವ ಬಗ್ಗೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಕುಡಿಯುವ ನೀರಿನ ಹಾಹಾಕಾರ ಹೆಚ್ಚಾಗಿದೆ. ಮನುಷ್ಯನಿಗೆ ಊಟ ಇಲ್ಲದೆ ಎರಡು ದಿವಸ ಬೇಕಾದರು ಉಪವಾಸ ಇರಬಹುದು, ಆದರೆ ಮನುಷ್ಯ ನೀರು ಕುಡಿಯದೆ ಬದುಕುವುದಕ್ಕೆ ತುಂಬಾ ಕಷ್ಟವಾಗುತ್ತದೆ. ಸಣ್ಣ ಪುಟ್ಟ ಪಕ್ಷಿ–ಪ್ರಾಣಿಗಳಿಗೂ ಸಹ ನೀರಿನ ಅವಶ್ಯಕತೆ ಇರುತ್ತದೆ. ಸರ್ಕಾರ ಈಗಾಗಲೇ 123 ತಾಲ್ಲೂಕುಗಳಲ್ಲಿ ಬರಗಾಲವಿದೆ ಸುಮಾರು 24 ಜಿಲ್ಲೆಗಳನ್ನು ಅದು

ಒಳಗೊಂಡಿದೆ ಎಂಬುದನ್ನು ಹೇಳಿದ್ದಾರೆ. ಹಾಗಾಗಿ ನಮ್ಮ ರಾಜ್ಯದ ಸುಮಾರು 70ರಷ್ಟು ಭಾಗದ ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿವೆ. ಬರಗಾಲದ ತೀವ್ರತೆಯನ್ನು ಕೇವಲ ಒಂದು ಕಣ್ಣೊರೆಸುವ ರೀತಿಯಲ್ಲಿ ಸರ್ಕಾರ ತೆಗೆದುಕೊಂಡು ಅದಕ್ಕೆ ಹಣ ಬಿಡುಗಡೆ ಮಾಡುವುದಷ್ಟೇ ಮುಖ್ಯವಲ್ಲ. ಬಿಡುಗಡೆಯಾದ ಹಣದಿಂದ ಬರಪರಿಹಾರ ಕಾಮಗಾರಿಗಳು ಸರಿಯಾದ ರೀತಿಯಲ್ಲಿ ಅನುಷ್ಠಾನ ಸಹ ಆಗಬೇಕು. ಈ ದಿಕ್ಕಿನಲ್ಲಿ ಸರ್ಕಾರ ಎಷ್ಟರ ಮಟ್ಟಿಗೆ ಪ್ರಯತ್ನ ಮಾಡಿದೆ ಎಂಬುದನ್ನು ನೋಡಬೇಕಾಗುತ್ತದೆ. ಬರಗಾಲದ ತೀವ್ರತೆಗೆ ಕಾರಣ ಏನು ಎಂಬುದನ್ನು ಸಹ ನಾವು ಈ ಸಂದರ್ಭದಲ್ಲಿ ವಿಚಾರ ಮಾಡಬೇಕಾಗುತ್ತದೆ. ಕಳೆದ ವರ್ಷ ಮಳೆಯ ಕೊರತೆಯಿಂದಾಗಿ ಈ ಬರಗಾಲ ಪರಿಸ್ಥಿತಿ ಉದ್ಭವವಾಗಿರುವುದು ಒಂದು ಕಡೆಯಾದರೆ, ಸರಿಯಾದಂತಹ ವಿದ್ಯುತ್ ಸರಬರಾಜು ಇಲ್ಲದೆಯೆ ಬರಗಾಲದ ತೀವ್ರತೆ ಮತ್ತಷ್ಟು ಹೆಚ್ಚಾಗಿದೆ ಎಂದು ಹೇಳಬಹುದು. ಇದರ ಜೊತೆಯಲ್ಲಿ ಇನ್ನೊಂದು ಬಹಳ ಮುಖ್ಯವಾದಂತಹ ವಿಷಯವೇನೆಂದರೆ, ಸರ್ಕಾರ ಬರದ ಬಗ್ಗೆ ಸಕಾಲಿಕವಾಗಿ ಸ್ಪಂದಿಸದೆ ಇರುವುದು ಇನ್ನೊಂದು ಕಾರಣ. ಹಾಗಾಗಿ ಬರಗಾಲದ ತೀವ್ರತೆ ಇವತ್ತು ಬಹಳಷ್ಟಾಗಿದೆ. ಹಿಂದಿನ ಶಾಸನ ಸಭೆಯ ಸಂದರ್ಭದಲ್ಲಿಯೂ ಸಹ ನಾವು ಈ ಬರಗಾಲದ ಬಗ್ಗೆ ಚರ್ಚೆ ಮಾಡಿ ಸರ್ಕಾರದ ಗಮನವನ್ನು ಸೆಳೆದಿದ್ದೆವು.

**(ಈ ಹಂತದಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರು ಸಭಾಪತಿಯವರ ಪೀಠವನ್ನಲಂಕರಿಸಿದರು)**

ಆ ಸಮಯದಲ್ಲಿ ಅದೇ ತಾನೆ ಹೊಸ ಮುಖ್ಯಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡಿದ್ದರು, ಬರಗಾಲದ ಪರಿಸ್ಥಿತಿಯನ್ನು ಅಧ್ಯಯನ ಮಾಡದೆಯೇ ನೀವು ಬೇರೆ ಬೇರೆ ದೇವಸ್ಥಾನ, ಮಠ–ಮಾನ್ಯಗಳಿಗೆ ಹೋಗಿದ್ದು ತಪ್ಪು ಎನ್ನುವ ಮಾತನ್ನು ಸಹ ಆವತ್ತಿನ ದಿವಸ ಹೇಳಿದ್ದೇವು. ಏಕೆಂದರೆ ಜನರು ಬರಗಾಲಕ್ಕೆ ತುತ್ತಾಗಿ ಸಂಕಷ್ಟದಲ್ಲಿದ್ದಾಗ ಮೊದಲು ಆ ಜನರನ್ನು ನೀವು ಭೇಟಿ ಮಾಡಬೇಕಾಗಿತ್ತು, ಸಂತೈಸಬೇಕಾಗಿತ್ತು. ಅದಕ್ಕೆ ಪರಿಹಾರ ಹುಡುಕಬೇಕಗಿತ್ತು, ಅದರ ಬದಲಾಗಿ ಈ ಕೆಲಸ ಮಾಡಿದ್ದು

ಸರಿಯಲ್ಲವೆಂದು ಹೇಳಿದರು. ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವರುಗಳು ಸಹ ಯಾವುದೇ ಜಿಲ್ಲೆಗೆ ಭೇಟಿ ಕೊಟ್ಟು, ಬರಗಾಲದ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದಾಗಲಿ ಅಥವಾ ಸಂಬಂಧಪಟ್ಟಂತಹ ಅಧಿಕಾರಿಗಳೊಂದಿಗೆ ಚರ್ಚೆ ಮಾಡುವುದಾಗಲಿ ಮತ್ತು ಜಿಲ್ಲಾಧಿಕರಿಗಲ ಹತ್ತಿರ ಇರುವಂತಹ ಹಣ ಎಷ್ಟು, ಬರದ ತೀವ್ರತೆಗೆ ಅನುಗುಣವಾಗಿ ಮತ್ತೆ ಬೇಕಗುವ ಹಣ ಎಷ್ಟು, ಅದನ್ನು ಹೇಗೆ ಸಚಿವ ಸಂಪುಟದ ಸಭೆಯ ಮುಂದೆ ಇಟ್ಟು ಚರ್ಚೆ ಮಾಡಿ ಹಣ ಪಡೆಯಬೇಕು ಎಂಬುದರ ಬಗ್ಗೆ ಯಾರೂ ಸಹ ಚರ್ಚೆ ಮಾಡಲಿಲ್ಲ. ಆದರೆ ವಿರೋಧ ಪಕ್ಷದಲ್ಲಿದ್ದಂತಹ ಮಾನ್ಯ ಸಿದ್ದರಾಮಯ್ಯನವರು ಸುಮಾರು ಹತ್ತಾರು ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದಾರೆ. ನಾನೂ ಸಹ ತುಮಕೂರು, ಅರಸೀಕೆರೆ, ಚಿಕ್ಕಮಗಳೂರು ಈ ರೀತಿ ಬೇರೆ ಬೇರೆ ಊರಿಗೆ ಭೇಟಿ ಕೊಟ್ಟಾಗ ಇನ್ನು ಹಣ ಬಿಡುಗಡೆ ಆಗಿರಲಿಲ್ಲ. ಆದರೆ ಇವತ್ತು ಹಣ ಬಿಡುಗಡೆ ಮಾಡಿರುವ ಬಗ್ಗೆ ಒಂದು ಪಟ್ಟಿಯನ್ನು ಒದಗಿಸಿದ್ದಾರೆ. ಅದರ ಪ್ರಕಾರ ಹಣ ಒದಗಿಸಿದ್ದರೂ ಸಹ ಇವತ್ತು ಈ ಬರಗಾಲದ ತೀವ್ರತೆಯನ್ನು ಕಡಿಮೆ ಮಾಡುವುದಕ್ಕೆ ಏಕೆ ಸಾಧ್ಯವಾಗಿಲ್ಲ, ಜನ-ಜಾನುವಾರಗುಳು ಏಕೆ ಸಾಯುತ್ತಿವೆ? ಜೊತೆಗೆ ಜನರು ಏಕೆ ಗುಳೆ ಹೋಗುತ್ತಿದ್ದಾರೆ? ಇದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಕಡೆಯ ಪಕ್ಷ ಶೇಕಡ 50 ರಿಂದ 60ರಷ್ಟಾದರೂ ಬರಗಾಲವನ್ನು ತಡೆಯುವುದಕ್ಕೆ ಸರ್ಕಾರವಾಗಲಿ, ಜಿಲ್ಲಾ ಮಟ್ಟದ ಅಧಿಕಾರಿಗಳಾಗಲಿ ಪ್ರಯತ್ನ ಮಾಡಿದ್ದರೆ ದನಗಳು ಸಾಯುತ್ತಿರಲಿಲ್ಲ, ಜನರು ಗುಳೆ ಹೋಗುತ್ತಿರಲಿಲ್ಲ. ಈಗ ಬೀದರ್, ಗುಲ್ಬರ್ಗಾ, ಬಿಜಾಪುರ ಜಿಲ್ಲೆಗಳಲ್ಲಿ ಮಾತ್ರ ಕುಡಿಯುವ ನೀರಿನ ಅಭಾವ ಇದೆ, ಬೇರೆ ಕಡೆ ಇಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಇತ್ತೀಚೆಗೆ ನಡೆದಂತಹ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಪ್ರಚಾರಕ್ಕಾಗಿ ಚಿಕ್ಕಮಗಳೂರಿನಲ್ಲಿ ಓಡಾಡಿದಾಗ ಪ್ರತಿಯೊಂದು ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಹೇಳುತ್ತಿದ್ದುದೇನೆಂದರೆ, ನೋಡಿ ನಮಗೆ ಎಂಟು ದವಸಕ್ಕೊಮ್ಮೆ ಕುಡಿಯುವ ನೀರನ್ನು ಬಿಡುತ್ತಾರೆ ಈ ರೀತಿಯಾದರೆ ನಾವು ಹೇಗೆ ಬದುಕುವುದು ಇದನ್ನು ಮೊದಲು ನೀವು ಸುಧಾರಣೆ ಮಾಡುತ್ತೀರಾ ಹೇಳಿ ಎಂದು ಕೇಳುತ್ತಿದ್ದರು. ಅದಕ್ಕೆ ನಾವು ಹೇಳಿದೆವು, ನೋಡಿ ನಾವು

ಆಡಳಿತ ಪಕ್ಷದಲ್ಲಿ ಇಲ್ಲ, ನಾವು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತೇವೆ ಎಂಬ ಮಾತನ್ನು ಹೇಳಬೇಕಾಯಿತು. ಆದರೂ ಸಹ ಈಗ ನೀವು ಚುನಾವಣೆಗೆ ಬಂದಾಗ ನಾವು ಇದರ ಜವಾಬ್ದಾರಿಯನ್ನು ಹೊತ್ತಿಕೊಳ್ಳುತ್ತೇವೆ ಎಂಬ ಮಾತನ್ನು ಹೇಳಬೇಕು ಎಂದು ಆ ಹೆಣ್ಣು ಮಕ್ಕಳು ಹೇಳಿದ್ದಾರೆ.

**ಶ್ರೀ ಯಂ.ಸಿ. ನಾಣಯ್ಯ:-** ಆ ಕಾರಣದಿಂದ ನೀವು ಚುನಾವಣೆಯಲ್ಲಿ ಗೆಲುವನ್ನು ಪಡೆದುಕೊಂಡಿದ್ದೀರಿ.

**ಶ್ರೀಮತಿ ಮೋಟಮ್ಮ:-** ಅದೂ ಒಂದು ಕಾರಣವಿರಬಹುದು. ಬಹಳಷ್ಟು ಜನರಿಗೆ ಈ ಒಂದು ಸರ್ಕಾರ ನಡೆದುಕೊಂಡಿರುವ ರೀತಿಯ ಬಗ್ಗೆ ಬೇಸರವಾಗಿದೆ. ಅದರಲ್ಲೂ ಬರಗಾಲವನ್ನು ಸರಿಯಾಗಿ ನಿಭಾಯಿಸಲಿಲ್ಲ, ಕುಡಿಯುವ ನೀರಿನ ಕೊರತೆ ಏನಿದೆ ಅದನ್ನು ನಿಭಾಯಿಸಲಿಲ್ಲ ಎನ್ನುವಂತಹ ಮಾತನ್ನು ಜನ ಹೇಳಿದರು. ಈಗ ಬರಪರಿಹಾರಕ್ಕಾಗಿಯೇ ಸುಮಾರು ರೂ.172.25 ಕೋಟಿ ಕೊಟ್ಟಿದ್ದಾರೆ. ಆರ್.ಡಿ.ಪಿ.ಆರ್. ಇಲಾಖೆ ಕುಡಿಯುವ ನೀರಿಗಾಗಿ ಸುಮಾರು ರೂ.122.00 ಕೋಟಿ ಕೊಟ್ಟಿದೆ. ಅದೇ ರೀತಿ ಅರ್ಬನ್ ಡೆವಲಪ್‌ಮೆಂಟ್ ಇಲಾಖೆಗೆ ರೂ.10.00 ಕೋಟಿಗಳನ್ನು ಕೊಟ್ಟಿದೆ. ಆದರೆ ಈಗ ಸರ್ಕಾರ ಹೇಳುವುದೇನೆಂದರೆ, ಈಗ ನಾವು ಗೋ-ಕಟ್ಟೆಗಳನ್ನು ಪ್ರಾರಂಭ ಮಾಡಿದ್ದೇವೆ, ನಾನು ಹೇಳಿದಂತೆ 176 ತಾಲ್ಲೂಕುಗಳಲ್ಲಿ ಶೇಕಡ 80ರಷ್ಟು ಇದೇ ರೀತಿಯಾದಂತಹ ಪರಿಸ್ಥಿತಿ ಇದೆ. ಈ ರೀತಿ ಇರುವಾಗ ಸರ್ಕಾರ ಎಷ್ಟು ಕಡೆ ಗೋ-ಕಟ್ಟೆ ಕಟ್ಟಿರಬಹುದು, ಹೆಚ್ಚೆಂದರೆ ಸುಮಾರು ಹತ್ತಿಪ್ಪತ್ತು ಕಡೆ ಕಟ್ಟಿರಬಹುದು. ಜನರಿಗೆ ಕುಡಿಯುವುದಕ್ಕೆ ನೀರಿಲ್ಲದೆ ಇರುವಂತಹ ಪರಿಸ್ಥಿತಿಯಲ್ಲಿ ಇನ್ನು ದನಗಳಿಗೆ ಎಲ್ಲಿಂದ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ? ಹಾಗಾಗಿ ಜಾನುವಾರುಗಳಿಗೆ ಅಗತ್ಯವಿರುವ ನೀರು ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಸರ್ಕಾರ ಈ ಹಣವನ್ನು ಬಿಡುಗಡೆ ಮಾಡಿದ ಮಾತ್ರಕ್ಕೆ ಬರಗಾಲ ನಿವಾರಣೆ ಆಗಿದೆ ಎಂದು ಭಾವಿಸಬಾರದು. ಎರಡನೆಯದಾಗಿ ಈಗ ಮೇವಿನ ಬೀಜ ಕೊಟ್ಟಿದ್ದಾರೆ, ನೀರೇ ಇಲ್ಲ, ಈ ಬೀಜ ಹೇಗೆ ಬಿತ್ತನೆ ಮಡಿ ಮೇವನ್ನು ಬೆಳೆಯುವುದು? ಇದರಲ್ಲಿ

ಅರ್ಥವಿದೆಯೇ? ಇನ್ನೊಂದು ವಿಷಯವೇನೆಂದರೆ, ಬರಗಾಲದ ಸಂದರ್ಭದಲ್ಲಿ ಸಣ್ಣಪುಟ್ಟ ರೈತರು ಅರ್ಧ ಎಕರೆ, ಒಂದು ಎಕರೆ ಜಮೀನು ಉಳ್ಳಂತಹ ರೈತರು ಬಿತ್ತನೆ ಮಾಡಿದ್ದಾರೆ. ಆ ಬಿತ್ತನೆ ಒಣಗಿ ಹೋಗಿದೆ. ಅವರ ಪರಿಸ್ಥಿತಿ ಏನು? ಹಿಂದೆ ಕೂಡ ನಾನು ಈ ವಿಚಾರವನ್ನು ತಿಳಿಸಿದ್ದೆ. ಅವರಿಗೆ ನೀವು ಬರ ಪರಿಹರ ಕಾಮಗಾರಿಯನ್ನು ಒದಗಿಸಿಕೊಡಬೇಕಾಗುತ್ತದೆ. ಅದು ಉದ್ಯೋಗ ಭರವಸೆಯ ಯೋಜನೆ ಇರಬಹುದು ಅಥವಾ ಸರ್ಕಾರವೇ ಅವರಿಗೆ ಉದ್ಯೋಗ ಸೃಷ್ಟಿ ಮಡುವ ರೀತಿಯಲ್ಲಿ ಮಡಿಕೊಡಬೇಕಾಗುತ್ತದೆ. ಆ ರೀತಿ ಮಾಡದೆ ಇರುವುದರಿಂದಲೇ ಸಾಕಷ್ಟು ಜನ ಬೀದರ್, ಗುಲ್ಬರ್ಗಾ, ರಾಯಚೂರು ಹಾಗೂ ಬಳ್ಳಾರಿಯ ಜನ ಕಾಫಿ ಪ್ಲಾಂಟೇಶನ್‌ನಲ್ಲಿ ಕೆಲಸ ಮಾಡುವುದಕ್ಕೆ ಮೂಡಿಗೆರೆ ಕಡೆಗೆ ಬರುತ್ತಿದ್ದಾರೆ. ಅಲ್ಲದೆ ಬೀದರ್, ರಾಯಚೂರು, ಗುಲ್ಬರ್ಗಾದವರು ಹೈದ್ರಾಬಾದ್ ಮಹಾರಾಷ್ಟ್ರದ ಕಡೆಗೆ ಹೋಗುತ್ತಿದ್ದಾರೆ. ಒಂದೊಂದು ಕುಟುಂಬದಲ್ಲಿ ಎಲ್ಲರೂ ಮನೆ ಬಿಟ್ಟು ಹೋಗಿ ಮನೆಗಳು ಖಾಲಿಯಾಗುವಂತಹ ಸ್ಥಿತಿ ಉಂಟಾಗಿದೆ. ಇದನ್ನು ಸರ್ಕಾರ ತೀವ್ರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಆರ್.ಡಿ.ಪಿ.ಆರ್. ಸಚಿವರು ಸ್ವಲ್ಪ ಕೇಳಿಸಿಕೊಳ್ಳಬೇಕು. ಇದರಲ್ಲಿ ಅವರ ಜವಾಬ್ದಾರಿ ಜಾಸ್ತಿ ಇರುತ್ತದೆ. ರಾಜಕಾರಣದಲ್ಲಿ ಮತ್ತು ಸರ್ಕಾರದಲ್ಲಿ ಅವರು ಬಹಳ ಹಿರಿಯ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ. ತಮ್ಮಂಥವರೇ ಇನ್ನೂ ಗಮನ ಹರಿಸದೆ ಕುರ್ಚಿ ಆಟದಲ್ಲಿ ಸಿಕ್ಕಿಹಾಕಿಕೊಂಡು ನೀವು ರೆಸಾರ್ಟ್‌ಗೆ ಹೋಗಿ ಕುಳಿತುಕೊಂಡಿದ್ದಿರಿ ಎಂದರೆ ನಮಗೆಲ್ಲರಿಗೂ ದುಃಖವಾಗುತ್ತದೆ. ಇದನ್ನೆಲ್ಲಾ ನೋಡಿಕೊಳ್ಳಬೇಕಾದವರು ಗ್ರಾಮೀಣಾಭಿವೃದ್ಧಿ ಸಚಿವರಲ್ಲವೆ?

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ನಾವು ಒಟ್ಟು ರೂ. 126 ಕೋಟಿ ಗಳನ್ನು ಬಿಡುಗಡೆ ಮಾಡಿದ್ದೇವೆ. ಈಗಾಗಲೇ 2,400 ಬೋರ್‌ವೆಲ್‌ಗಳನ್ನು ಕೊರೆಸಲಾಗಿದೆ.

**ಶ್ರೀಮತಿ ಮೋಟಮ್ಮ:-** ಹಣ ಬಿಡುಗಡೆ ಮಾಡುವುದು ಮುಖ್ಯವಲ್ಲ. ಹಣವನ್ನು ಯಾರು ಬೇಕಾದರು ಕೊಡಬಹುದು. ಅನುಷ್ಠಾನ ಆಗುವುದಕ್ಕೆ ಅಧಿಕಾರಿಗಳನ್ನು ಬಿಗಿ ಹಿಡಿದು ಮಾಡಿಸಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ರೆಸಾರ್ಟ್‌ನಲ್ಲಿ ಕುಳಿತಂತಹ ಒಬ್ಬ ಸಚಿವರನ್ನು ಪತ್ರಿಕೆಯವರು ಮಾತನಾಡಿಸುತ್ತಾ, "ಏನ್ರೀ ನಮ್ಮಲ್ಲಿ ನೀರಿನ ಸಮಸ್ಯೆ, ವಿದ್ಯುತ್ ಸಮಸ್ಯೆ ಇದೆ, ಈ ರೀತಿ ಇದ್ದರೂ ಸಹ ನೀವು ರೆಸಾರ್ಟ್‌ಗೆ ಬಂದಿದ್ದೀರಿ' ಎಂದು ಕೇಳಿದ್ದಕ್ಕೆ ಸಚಿವ ಸಂಪುಟದ ಅತ್ಯಂತ ಹಿರಿಯ ಸಚಿವರು ಹೇಳಿದಂತಹ ಮಾತನ್ನು ಕೇಳಿ ನಮಗೆ ಬೇಸರವಾಗಿದೆ. ಜನರ ಕಾಟ ಹೆಚ್ಚಾಗಿದೆ ಅದಕ್ಕೆ ನಾವು ಜನರಿಂದ ದೂರವಾಗಿ, ವಿಶ್ರಾಂತಿ ತೆಗೆದುಕೊಳ್ಳುವುದಕ್ಕೆ ಬಂದಿದ್ದೇವೆಂದು ಹೇಳಿದರೆ ಹೇಗೆ? ಜವಾಬ್ದಾರಿಯುಳ್ಳಂತಹ ಸಚಿವರು ಈ ರೀತಿ ಹೇಳಿದ ಕಾರಣ ಇಡೀ ರಾಜ್ಯದ ಉದ್ದಗಲಕ್ಕೂ ಇದರ ಬಗ್ಗೆ ಟೀಕೆ, ಟಿಪ್ಪಣಿಗಳು ಬಂದವು.

**ಶ್ರೀ ರೇವೂನಾಯಕ್ ಬೆಳಮಗಿ:-** ಮಾನ್ಯ ಸಭಾಪತಿವರೇ, . . . .

**ಶ್ರೀ ಎಸ್.ಆರ್. ಪಾಟೀಲ್:-** ತಾವೇಕೆ ಎದ್ದು ನಿಂತಿರಿ? ಆ ಸಚಿವರು ತಾವೇ ಏನು?

**ಶ್ರೀ ರೇವೂನಾಯಕ್ ಬೆಳಮಗಿ:-** ಹೌದು ನಾನೇ, ಎಲ್ಲರಿಗೂ ಗೊತ್ತಾಗಿದೆ ನಿಮಗೆ ಗೊತ್ತಾಗಿರಲಿಲ್ಲವೆ?

**ಶ್ರೀ ಎಸ್.ಆರ್.ಪಾಟೀಲ್:-** ನಾನು ಒಬ್ಬರು ಸಚಿವರು ಎಂದಷ್ಟೇ ಕೇಳಿದ್ದೆ, ಆಯಿತು, ತಾವೀಗ ಆ ಜವಾಬ್ದಾರಿಯನ್ನು ಹೊತ್ತುಕೊಂಡಿರುವುದರಿಂದ ಬಹಳ ಸಂತೋಷ.

**ಶ್ರೀ ರೇವೂನಾಯಕ್ ಬೆಳಮಗಿ:-** ಮಾನ್ಯ ಸಭಾಪತಿಯವರೇ, ನಮ್ಮ ಭಾಗದಲ್ಲಿನ ಎಲ್ಲರಿಗೂ ಗೊತ್ತಿರುವಂತೆ ನಾನು ರಾಜಕೀಯ ಮನುಷ್ಯ ಅಲ್ಲ, ನನಗೆ ರಾಜಕೀಯ ಮಾಡುವುದಕ್ಕೆ ಬರುವುದಿಲ್ಲ.

**ಶ್ರೀಮತಿ ಮೋಟಮ್ಮ:-** ರಾಜಕೀಯದಲ್ಲಿಯೇ ಇದ್ದು, ರಾಜಕಾರಣ ಮಾಡುವುದಿಲ್ಲ ಎಂದರೆ ಹೇಗೆ? ರಾಜಕಾರಣ ಮಾಡದಿದ್ದರೆ ರಾಜಕೀಯದಲ್ಲಿ ಇರುವುದಕ್ಕೆ ಸಾಧ್ಯವೇ ಇಲ್ಲ.

**ಶ್ರೀ ರೇವೂನಾಯಕ್ ಬೆಳಮಗಿ:-** ಮಾನ್ಯ ಸಭಾಪತಿಯವರೇ, ಆ ದಿನ ನಾನು ಹೊರಗೆ ಬಂದಿದ್ದೆ, ಬಂದು ಒಳಗಡೆ ಹೋಗುವಂತಹ ಸಂದರ್ಭದಲ್ಲಿ ಮಾಧ್ಯಮದವರು ಇಲ್ಲಿಗೆ ಏಕೆ ಬಂದಿದ್ದೀರಿ ಎಂದು ಕೇಳಿದರು. ನಮ್ಮ ನಾಯಕರು ಕರೆದಿದ್ದಾರೆ, ಬಂದಿದ್ದೇವೆ ಎಂದು ಹೇಳಿದೆ. ಅದಕ್ಕವರು ಇಲ್ಲ, ಇಲ್ಲ ನೀವು ಮಜಾ ಮಾಡುವುದಕ್ಕೆ ಬಂದಿದ್ದೀರಿ, ಇಡೀ ರಾಜ್ಯದಲ್ಲಿ ದುಷ್ಕಾಲ ಉಂಟಾಗಿದೆ, ನೀರಿಗೆ ಹಾಹಾಕಾರ ಉಂಟಾಗಿದೆ, ಕರೆಂಟಿಲ್ಲ, ರೋಡ್ ಇಲ್ಲ ಎಂಬುದಾಗಿ ಪದೇ ಪದೇ ಅದೇ ಮಾತುಗಳನ್ನು ಹೇಳಿದರು. ಕೊನೆಗೆ ನಾನು "ಅದನ್ನೇ ತಿಳಿದುಕೊಳ್ಳಿ, ರೇವೂನಾಯಕ್ ಯಾರೆಂಬುದು ನಮ್ಮ ಇಡೀ ಕ್ಷೇತ್ರಕ್ಕೆ ಗೊತ್ತಿದೆ" ಎಂದು ಹೇಳಿದೆ. ಆ ರೀತಿ ನಾನು ತಮಾಷೆ ಮಾಡಿದ್ದನ್ನೇ ಮಾಧ್ಯಮದವರು highlight ಮಾಡಿ ತೋರಿಸಿದ್ದಾರೆ.

**(ಈ ಹಂತದಲ್ಲಿ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಶ್ರೀ ಎಚ್.ಸಿ.ನೀರಾವರಿ:-** ಮಾನ್ಯ ಸಭಾಪತಿಯವರೇ, ಮೊನ್ನೆ ಮಾನ್ಯ ಸಚಿವರು ಮಾತನಾಡಿದಂತಹ ಸಂದರ್ಭದಲ್ಲಿ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿರುವುದಾಗಿ ತಿಳಿಸಿದರು. ಹಣವನ್ನು ಬಿಡುಗಡೆ ಮಾಡಿರಬಹುದು. ಮಾನ್ಯ ಹೊರಟ್ಟಿಯವರು ಸಹ ನಮ್ಮ ಊರಿಗೆ ಬಂದಿದ್ದರು. ಮೆಜಾರಿಟಿ ತಾಲ್ಲೂಕುಗಳಲ್ಲಿ, ಅದರಲ್ಲಿಯೂ ವಿಶೇಷವಾಗಿ ಕುಷ್ಟಗಿ ತಾಲ್ಲೂಕಿನಲ್ಲಿ ನೀರಿಲ್ಲ, ನಮ್ಮೂರಿನಲ್ಲಿ ಕಳೆದ ಸುಮಾರು ಹತ್ತು ದಿವಸಗಳಿಂದ ನೀರನ್ನೇ ಬಿಟ್ಟಿಲ್ಲ. ಜನತೆ ನೀರಿಗಾಗಿ ಜಮೀನುಗಳಲ್ಲಿ ಕೊರೆದಿರುವಂತಹ ಕೊಳವೆಬಾವಿಗಳನ್ನು ಹುಡುಕಿಕೊಂಡು ಹೋಗಿ ನೀರನ್ನು ತರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆ ಕೊಳವೆಬಾವಿಗಳಲ್ಲಿ ಕೂಡ ನೀರು ಕಡಿಮೆಯಾಗಿದೆ. ಅಲ್ಲಿಯೇ ಸರತಿಯ ಸಾಲಿನಲ್ಲಿ ನಿಂತುಕೊಂಡು ಕರೆಂಟ್ ಬರುವವರೆಗೆ ಕಾದಿದ್ದು, ಮೋಟಾರ್ ಸ್ಟಾರ್ಟ್ ಮಾಡಿದ ಮೇಲೆ

ಕೊಡದಲ್ಲಿ ನೀರನ್ನು ಹೊತ್ತು ತರುತ್ತಿದ್ದಾರೆ. ನಾನು ಶಾಸಕರ ಅನುದಾನದಲ್ಲಿ ಒಂದು ಕೊಳವೆಬಾವಿಯನ್ನು ಹಾಕಿಸಿಕೊಟ್ಟೆ. ಅದನ್ನು ಅಲ್ಲಿರುವಂತಹ ಟ್ಯಾಂಕ್‌ಗೆ ಕನೆಕ್ಷನ್ ಕೊಡಿಸಿ, ಕಡೆಯಪಕ್ಷ ಜನರಿಗೆ ನೀರಾದರೂ ಸಿಗಲಿ ಎಂದು ವ್ಯವಸ್ಥೆ ಮಾಡಿಸಲಾಯಿತು. ಅಲ್ಲಿ ಒಬ್ಬ ರೈತ ಏನು ಮಾಡಿದ್ದಾನೆ ಎಂದರೆ, ನಿಮ್ಮ ಅಧಿಕಾರಿಗಳು ಅಲ್ಲಿ ಕೆಲಸ ಮಾಡುವುದಿಲ್ಲ ಎನ್ನುವುದಕ್ಕೆ ನಾನು ಈ ವಿಚಾರವನ್ನು ತಿಳಿಸುತ್ತಿದ್ದೇನೆ. ಸರ್ಕಾರ ಹಣವನ್ನು ಬಿಡುಗಡೆ ಮಾಡಿರಬಹುದು, ಅಲ್ಲಿ ಒಂದು ಕೊಳವೆಬಾವಿಯನ್ನು ಹಾಕಿಸಿ ಊರಿನ ಜನತೆಗೆ ಉಪಯೊಗಿಸಲಾಗುತ್ತಿದೆ ಅದರ ಕೆಳಭಾಗದ ಜಮೀನಿನಲ್ಲಿಯೇ ಮತ್ತೊಂದು ಕೊಳವೆಬಾವಿಯನ್ನು ಆ ರೈತ ತೋಡಿಸಿಬಿಟ್ಟಿದ್ದಾನೆ. ಹೀಗಾಗಿ ಮೇಲ್ಭಾಗದಲ್ಲಿದ್ದಂತಹ ಕೊಳವೆ ಬಾವಿಯ ನೀರು ಹೋಯಿತು. ಆ ಕೊಳವೆಬಾವಿಗೆ ಸುಮಾರು ಐದಾರು ಅಡಿಗಳ ಅಂತರದಲ್ಲಿಯೇ ವಿದ್ಯುತ್ ಕನೆಕ್ಷನ್ ಕೊಟ್ಟಿದ್ದಾರೆ, ಈ ರೀತಿಯ ಅವ್ಯವಸ್ಥೆಗಳೆಲ್ಲಾ ನಡೆಯುತ್ತಿವೆ. ಇಂತಹ ಪರಿಸ್ಥಿತಿ ಏಕೆ ಉಂಟಾಗುತ್ತಿದೆ ಎಂದರೆ ಸಂಬಂಧಪಟ್ಟ ಅಧಿಕಾರಿಗಳು ಮೇಲಿಂದ ಮೇಲೆ ಭೇಟಿ ಕೊಟ್ಟು ಪರಿವೀಕ್ಷಣೆ ಮಾಡುತ್ತಾರೆ ಎನ್ನುವಂತಹ ಭಯವಿದ್ದರೆ ಅವರು ಈ ರೀತಿ ಮಾಡುತ್ತಿರಲಿಲ್ಲ. ಅಲ್ಲಿ ಸುಮಾರು ಹತ್ತು ದಿವಸಗಳಿಂದ ನೀರನ್ನೇ ಬಿಟ್ಟಿಲ್ಲ ಎಂದು ಹೇಳಿದರೆ ಅವರು ಬೇರೆ ಬೇರೆ ಜಮೀನುಗಳಲ್ಲಿರುವ ಕೊಳವೆಬಾವಿಗಳಿಂದ ನೀರನ್ನು ಹೊತ್ತು ತಂದು ದಿನನಿತ್ಯದ ಉಪಯೋಗಕ್ಕಾಗಿ ನೀರನ್ನು ತುರುವುದರ ಜೊತೆಗೆ ಜಾನುವಾರುಗಳಿಗೂ ಸಹ ಕುಡಿಯುವ ನೀರನ್ನು ತರಬೇಕಾಗಿದೆ. ಅವರು ಎಲ್ಲಿಂದ ನೀರನ್ನು ತರಲು ಸಾಧ್ಯ? ನಾವು ಸ್ವತಃ ಅಲ್ಲಿ ನಿಂತು ನೋಡಿದ್ದೇವೆ, ಜನರು ನೀರಿಗಾಗಿ ಎಷ್ಟು ಗೋಳಾಡುತ್ತಾರೆ, ಎಷ್ಟು ಕಣ್ಣೀರು ಹಾಕುತ್ತಿದ್ದಾರೆ ಎಂದರೆ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ನಾವು ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿಕೊಂಡು ಕುಳಿತುಕೊಂಡರೆ ಪ್ರಯೊಜನವಿಲ್ಲ, ಪ್ರಯತ್ನ ಮಾಡಿ ಆ ಜನರಿಗೆ ನೀರನ್ನೊದಗಿಸುವಂತಹ ಕೆಲಸ ಕೂಡ ಆಗಬೇಕು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಸಮಸ್ಯೆಗಳನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಮಾನ್ಯ ಪಶುಸಂಗೋಪನಾ ಸಚಿವರು ಇಲ್ಲಿ ಉಪಸ್ಥಿತರಿದ್ದಾರೆ. ದನಕರುಗಳಿಗೆ ಮೇವಿಲ್ಲ ಎನ್ನುವಂತಹ ವಿಚಾರವನ್ನು ನಾನು ಈಗಾಗಲೇ ಸದನದಲ್ಲಿ ಸುಮಾರು ಮೂರು–ನಾಲ್ಕು ಬಾರಿ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಕಳೆದ ಅಧಿವೇಶನದಲ್ಲಿ ಉತ್ತರ ಕೊಟ್ಟರು. ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಯಾದವಾಡದಲ್ಲಿ ದಿನಕ್ಕೆ 10 ಟನ್ ಮೇವು ಮಹಾರಾಷ್ಟ್ರಕ್ಕೆ ರವಾನೆಯಾಗುತ್ತಿದೆ. ಈ ವಿಚಾರವನ್ನು ನಾನು ಎಲ್ಲರ ಗಮನಕ್ಕೂ ತಂದಿದ್ದೇನೆ. ಎಲ್ಲಾ ರೈತರು ಮೇವಿಲ್ಲದ ಕಾರಣ ತಮ್ಮ ದನಕರುಗಳನ್ನು ಮಾರಾಟ ಮಾಡುತ್ತಿದ್ದಾರೆ. ಈ ವಿಚಾರವಾಗಿ ನಾನು ತಮಗೆ ಪತ್ರವನ್ನು ಸಹ ಬರೆದಿದ್ದೇನೆ. ಆದರೆ ಪರಿಶೀಲಿಸಲಗುವುದು ಎನ್ನುವಂತಹ ಉತ್ತರ ಮಾತ್ರ ಸಿಕ್ಕಿದೆ. ದನಗಳಿಗೆ ಮೇವಿಲ್ಲದೆ ಪರಿಸ್ಥಿತಿ ಬಹಳ ಗಂಭೀರವಾಗಿದೆ. ದೂರದ ಊರುಗಳಿಂದ ಮೇವನ್ನು ತರುವಂತಹ ಪರಿಸ್ಥಿತಿ ಉಂಟಾಗಿದೆ. ಆದ್ದರಿಂ ದಿನಕ್ಕೆ 10 ಟನ್‌ಗಳಷ್ಟು ಮೇವು ಮಹಾರಾಷ್ಟ್ರಕ್ಕೆ ಏನು ಹೋಗುತ್ತಿದೆ ಅದನ್ನು ತಡೆಹಿಡಿಯಬೇಕಾಗಿದೆ. ಆ ವಿಚಾರದಲ್ಲಿ ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಸ್ಪಷ್ಟವಾಗಿ ತಿಳೀಸಬೇಕಾಗುತ್ತದೆ. ಮನುಷ್ಯರ ಪರಿಸ್ಥಿತಿ ಒಂದು ಕಡೆಯಾದರೆ ಜಾನುವಾರುಗಳ ಪರಿಸ್ಥಿತಿ ಏನು ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಂಡು ಆ ದಿಕ್ಕಿನಲ್ಲಿ ಏನಾದರೊಂದು ಕ್ರಮವನ್ನು ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ರೇವೂನಾಯಕ್ ಬೆಳಮಗಿ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಈ ರೀತಿಯ ಪರಿಸ್ಥಿತಿ ಇದೆ ಎಂಬ ಬಗ್ಗೆ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಭೆ ನಡೆಸಿ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮತ್ತು ನಮ್ಮ ಇಲಾಖೆಯ ಅಧಿಕಾರಿಗಳಿಗೆ ಆದೇಶವನ್ನು ಕಳುಹಿಸಿಕೊಟ್ಟಿದ್ದೇವೆ. ಎಲ್ಲಿ ಮೇವಿನ ಕೊರತೆ ಇದೆ, ಕುಡಿಯುವ ನೀರಿಗೆ ಕೂಡ ಹಾಹಾಕಾರದ ಪರಿಸ್ಥಿತಿ ಇದೆ ಅಲ್ಲಿ ಗೋಶಾಲೆಗಳನ್ನು ತೆರೆಯಬೇಕು, ಗೋಮಾತೆಗೆ ರಕ್ಷಣೆಯನ್ನು ಕಲ್ಪಿಸಿ . . .

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಸರ್ಕಾರದ ಗಮನಕ್ಕೆ ತಂದಿರುವಂತಹ ವಿಚಾರವೇ ಬೇರೆ. ಮಾರಾಷ್ಟ್ರಕ್ಕೆ ಸಾಗಾಣಿಕೆಯಾಗುತ್ತಿರುವಂತಹ ಮೇವನ್ನು ಮೊದಲು ನಿರ್ಬಂಧಿಸಬೇಕೆನ್ನುವಂತಹ ವಿಚಾರವನ್ನು ನಾನು ತಿಳಿಸುತ್ತಿದ್ದೇನೆ. ಉಳಿದವುಗಳೆಲ್ಲಾ ಬೇಡ, ಸರ್ಕಾರದ ಸುತ್ತೋಲೆಗಳು, ನಿರ್ದೇಶನಗಳನ್ನು ನಾನು ಒಪ್ಪುತ್ತೇನೆ.

**ಶ್ರೀ ರೇವೂನಾಯಕ್ ಬೆಳಮಗಿ:–** ಮಾನ್ಯ ಸಭಾಪತಿಯವರೇ, ನಾನು ಮುಂದೆ ಅದೇ ವಿಚಾರಕ್ಕೆ ಬರುತ್ತಿದ್ದೇನೆ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ಆದೇಶಗಳನ್ನು ಹೊರಡಿಸಿರುವುದು ಸರಿ, ಆದರೆ ಅವುಗಳನ್ನು ಯಾರೂ ಸರಿಯಾಗಿ ಅನುಷ್ಠಾನಗೊಳಿಸುವುದಿಲ್ಲ. ಜೊತೆಗೆ ಮಾನ್ಯ ಹೊರಟ್ಟಿಯವರು ತಿಳಿಸುತ್ತಿರುವಂತಹ ವಿಚಾರ ಕೂಡ ನಿಜ. ನಮ್ಮ ಬೆಳಗವಿ ಜಿಲ್ಲೆಯಿಂದ ಮಹಾರಾಷ್ಟ್ರಕ್ಕೆ ಪ್ರತಿ ದಿನ ಸುಮಾರು ಹತ್ತರಿಂದ ಹದಿನೈದು ಟ್ರಕ್ ಮೇವು ಸಾಗಾಣಿಕೆಯಾಗುತ್ತಿದೆ. ಈ ವಿಚಾರವನ್ನು ಈಗಾಗಲೇ ನಾವು ಅನೇಕ ಬಾರಿ ಪ್ರಸ್ತಾಪ ಮಾಡಿದ್ದು ಅದನ್ನು ನಿಲ್ಲಿಸಬೇಕೆಂದು ವಿನಂತಿಸಿದ್ದೇವೆ.

**ಶ್ರೀ ರೇವೂನಾಯಕ್ ಬೆಳಮಗಿ:–** ಮಾನ್ಯ ಸಭಾಪತಿಯವರೇ, ನಾನು ಸಹ ಅದೇ ವಿಚಾರಕ್ಕೆ ಬರುತ್ತಿದ್ದೇನೆ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ:–** ಮಾನ್ಯ ಸಭಾಪತಿಯವರೇ, ಅಲ್ಲಿ ನಮ್ಮ ದನಕರುಗಳಿಗೇ ಮೇವು ಸಿಗುತ್ತಿಲ್ಲ, ಹೀಗಿರುವಾಗ ಒಂದು ಟ್ರಕ್ ಮೇವನ್ನು ಖರೀದಿಸಲು ಸುಮಾರು ಹತ್ತಿರಿಂದ ಹದಿನೈದು ಸಾವಿರ ರೂಪಾಯಿಗಳು ಬೇಕಾಗುತ್ತದೆ. ಮಾನ್ಯ ಹೊರಟ್ಟಿಯವರು ನಾಲ್ಕು ಟ್ರಕ್ ಮೇವನ್ನು ಕೊಡಿಸುವಂತೆ ನನಗೆ ಸುಮಾರು ಮೂರ್ನಾಲ್ಕು ಸಲ ವಿನಂತಿ ಮಾಡಿದ್ದರು. ಇಂತಹವರಿಗೇ ಮೇವು ಸಿಗುತ್ತಿಲ್ಲವೆಂದರೆ ಇನ್ನುಳಿದಂತಹ ಸಾಮಾನ್ಯ ರೈತರು ಏನು ಮಾಡಬೇಕು? ತಾವು ಅಲ್ಲಿಗೆ

ಬಂದು ನೋಡಬೇಕು, ಪ್ರತಿದಿನ ಟ್ರಕ್‌ಗಳಲ್ಲಿ ದನಗಳ ಸಹಿತವಾಗಿ ಮೇವನ್ನು ಕೂಡ ತೆಗೆದುಕೊಂಡು ಹೋದಂತೆ ಹೋಗುತ್ತಿದ್ದಾರೆ.

**ಶ್ರೀ ರೇವೂನಾಯಕ್ ಬೆಳಮಗಿ:–** ಮಾನ್ಯ ಸಭಾಪತಿಯವರೇ, ಎಲ್ಲೆಲ್ಲಿ ಗೋಶಾಲೆಗಳ ಅವಶ್ಯಕತೆ ಇದೆ ಅಲ್ಲೆಲ್ಲಾ ಅವುಗಳನ್ನು ತೆರೆಯಬೇಕೆನ್ನುವಂತಹ ಉದ್ದೇಶದಿಂದ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಭೆ ನಡೆಸಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ನಮ್ಮ ಇಲಾಖೆಯ ಅಧಿಕಾರಿಗಳಿಗೆ ಆದೇಶವನ್ನು ಕಳುಹಿಸಿಕೊಟ್ಟಿದ್ದೇವೆ. ಅದರ ಜೊತೆಗೆ ಕರ್ನಾಟಕ ರಾಜ್ಯದ ಮೇವು ಹೊರಗಡೆಗೆ ಸಾಗಾಣಿಕೆಯಾಗಬಾರದು, ಜಿಲ್ಲಾಬಂಧಿಯಾಗಬೇಕು, ನಮ್ಮ ಕರ್ನಾಟಕ ರಾಜ್ಯದ ಬಂಧಿಯಾಗಬೇಕೆಂದು ತಿಳಿಸಿ ಅದಕ್ಕೂ ಸಹ ನಾವು ಆದೇಶವನ್ನು ಕಳುಹಿಸಿಕೊಟ್ಟಿದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾವು ದಿನನಿತ್ಯ ಬಹಳ ಗಂಭೀರ ಪರಿಸ್ಥಿತಿಯನ್ನು ಎದುರಿಸುತ್ತಿರುವುದರಿಂದ ಆ ವಿಚಾರವನ್ನು ನಾವು ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಕಳೆದ ಅಧಿವೇಶನದಲ್ಲಿ ತಕ್ಷಣವೇ ಕ್ರಮ ತೆಗೆದುಕೊಳ್ಳುವುದಾಗಿ ಸರ್ಕಾರದ ಪರವಾಗಿ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಉತ್ತರ ಕೊಟ್ಟಿದ್ದರು. ಸರ್ಕಾರ ಜಿಲ್ಲಾಬಂಧಿಗಳನ್ನು ಪ್ರಾರಂಭ ಮಾಡಿದೆ, ಆದರೆ ಇವೊತ್ತಿನವರೆಗೆ ಹೇಗೆ ಮಾಡುತ್ತಿದ್ದಾರೆ ಎಂದರೆ ಮೇವನ್ನು ಯಂತ್ರಗಳ ಮುಖಾಂತರ ಕಟಾವು ಮಾಡಿ ಸುಮಾರು ಹತ್ತರಿಂದ ಹದಿನೈದು ಟ್ರ್ಯಾಕ್ಟರ್ ಮೇವನ್ನು ಒಂದೇ ಟ್ರಕ್‌ನಲ್ಲಿ ಕೊಂಡೊಯ್ಯುತ್ತಿದ್ದಾರೆ. ಮೇವನ್ನು ಕತ್ತರಿಸಿ ಕಡಬಾಕುಟ್ಟಿ ಎಂದು ಮಾಡಿ ಅದನ್ನು ಒಂದು ಟ್ರಕ್‌ಗೆ ಸುಮಾರು ಒಂದು ಲಕ್ಷದ ಎಂಬತ್ತು ಸಾವಿರ ರೂಪಾಯಿಗಳಿಗೆ ಮಹಾರಾಷ್ಟ್ರಕ್ಕೆ ಮಾರಾಟ ಮಾಡುತ್ತಾರೆ. ಮೊದಲು ಎರಡು ಸಾವಿರ ರೂಪಾಯಿಗಳಿಗೆ ಒಂದು ಟ್ರ್ಯಾಕ್ಟರ್ ಮೇವೇನು ಸಿಗುತ್ತಿತ್ತು ಅದು ಇವೊತ್ತಿನ ದಿವಸ ಸುಮಾರು ಹದಿನೈದು ಸಾವಿರ ರೂಪಾಯಿಗಳಷ್ಟು ಬೆಲೆಯಾಗಿದೆ. ನಾನೇ ಬೈಲಹೊಂಗಲದಿಂದ 4 ಟ್ರ್ಯಾಕ್ಟರ್ ಮೇವನ್ನು ಕಳುಹಿಸಿಕೊಡಿ ಎಂದರೆ

ಒಂದು ಟ್ರ್ಯಾಕ್ಟರ್ ಮೇವಿಗೆ ಹದಿನೈದು ಸಾವಿರ ರೂಪಾಯಿಗಳಷ್ಟು ಬೆಲೆ ಇದೆ ಎಂದು ಹೇಳುತ್ತಾರೆ. ನಮ್ಮಲ್ಲಿ ಮೇವಿನ ಕೊರತೆಯಿಂದಾಗಿ ಬಹಳ ಗಂಭೀರ ಪರಿಸ್ಥಿತಿ ಉಂಟಾಗಿರುವುದರಿಂದ ರೈತರು ತಮ್ಮ ದನಕರುಗಳನ್ನು ತಮಗೆ ಹೇಗೆ ಬೇಕೋ ಹಾಗೆ ಮಾರಾಟ ಮಾಡುವುದಕ್ಕೆ ಹೊರಟಿದ್ದು ಅವುಗಳನ್ನು ಕಟುಕರಿಗೆ ಕೂಡ ಮಾರುತ್ತಿದ್ದಾರೆ. ಆದ್ದರಿಂದ ಇವೊತ್ತೇ ತಾವು ಅಧಿಕಾರಿಗಳಿಗೆ ಮೇಲಿಂದ ಮೇಲೆ ತಿಳಿಸಿ ಬಿಜಾಪುರದ ಬಾರ್ಡರ್ ಇರಬಹುದು, ಬೆಳಗಾವಿ ಬಾರ್ಡರ್ ಇರಬಹುದು ಎಲ್ಲಾ ಕಡೆಗಳಲ್ಲಿಯೂ ನಾಕಾಬಂದಿ ಮಾಡಿ ಕಡೆಯ ಪಕ್ಷ ಮಳೆಗಾಲ ಪ್ರಾರಂಭವಾಗುವವರೆಗೆ ಮೇವು ಹೊರಗಡೆ ಹೋಗದಂತೆ ನಿರ್ಬಂದಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಮೇವು ಸಾಗಾಣಿಕೆಗೆ ಸಂಬಂಧಿಸಿದಂತೆ ಸ್ಪಷ್ಟವಾದ ಆದೇಶವನ್ನು ಕೊಟ್ಟಿದ್ದು ಅದರಲ್ಲಿ ಇರುವಂತಹ ಒಂದು ಅಂಶವೆಂದರೆ ನಾಕಾಬಂದಿ ಮಾಡಿ ಸಹ ಕಳುಹಿಸಬಾರದು ಎಂದು ಹೇಳಿದ್ದಾರೆ. ಈ ನಿರ್ಬಂದ ಇದ್ದಾಗ್ಯೂ ಅವರು ಮೇವನ್ನು ಯಂತ್ರಗಳ ಸಹಾಯದಿಂದ ಕತ್ತರಿಸಿ ನುಚ್ಚು ಮಾಡಿ, ಪೌಡರ್ ಮಾಡಿ ಮಹಾರಾಷ್ಟ್ರಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದರೆ ಅವರು ಒಳದಾರಿ, ಮತ್ತೊಂದೇನೋ ಹುಡುಕುತ್ತಿದ್ದಾರೆ, ಆ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ಧಾರೆ ಎನ್ನುವಂಥದ್ದು ಸಹ ಇದೆ. ಹಾಗಾಗಿ ನಾನು ಈ ವಿಚಾರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಈಗಾಗಲೇ ಮಾನ್ಯ ಸಚಿವರು ಕೂಡ ತಿಳಿಸಿರುವಂತೆ ಈ ರೀತಿ ಮೇವನ್ನು ಪರಿವರ್ತಿಸಿ ಬೇರೆ ರೀತಿಯಲ್ಲಿ, ಬೇರೆ ರಾಜ್ಯಗಳಿಗೆ ತೆಗೆದುಕೊಂಡು ಹೋಗದೆ ಇರುವಂತೆಯೂ ಸಹ ನಾವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ನಾವು ಅಧಿಕಾರಿಗಳಿಗೆ ಸೂಚಿಸುತ್ತೇವೆ. ಆ ದಿಕ್ಕಿನಲ್ಲಿ ವಿಶೇಷವಾದ ತಪಾಸಣಾ ಕಾರ್ಯವನ್ನು ನಾಕಾಬಂದಿಗಳಲ್ಲಿ ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದಂತಹ ಕ್ರಮಗಳ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಪಶುಸಂಗೋಪನಾ ಇಲಾಖೆಯಿಂದ ಮತ್ತು ಮಾನ್ಯ ಮುಖ್ಯಮಂತ್ರಿಗಳಿಂದ

ಸಹ ನಿರ್ದೇಶನಗಳನ್ನು ನೀಡಲಾಗುತ್ತದೆ. ನಮ್ಮ ಜಾನುವಾರುಗಳ ಮೇವಿಗೆ ಕೊರತೆಯಾಗದಂತೆ ಕ್ರಮ ತೆಗೆದುಕೊಳ್ಳುವುದಕ್ಕೆ ಮಾನ್ಯ ಸದಸ್ಯರು ಏನೆಲ್ಲಾ ಸಲಹೆಗಳನ್ನು ಕೊಟ್ಟಿದ್ದಾರೆಯೋ ಅವುಗಳಿಂದ ಮುನ್ನೆಚ್ಚರಿಕೆ ವಹಿಸಬೇಕೋ ಆ ಮುನ್ನೆಚ್ಚರಿಕೆಗಳನ್ನೆಲ್ಲಾ ವಹಿಸುತ್ತೇವೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸರ್ಕಾರ ಹಣ ಬಿಡುಗಡೆ ಮಾಡಿರುವುದು ಸರಿ, ಆದರೆ ಆ ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನಗೊಳ್ಳಬೇಕು ಎನ್ನುವುದು ಒಂದು ವಿಚಾರ. ಇನ್ನು ಎರಡನೆಯದಾಗಿ ಕೊಳವೆಬಾವಿಗಳು ಕೆಟ್ಟು ಹೋಗಿರುವ ಕಡೆಗಳಲ್ಲಿ ಹೊಸ ಕೊಳವೆಬಾವಿಗಳನ್ನು ಕೊರೆಸುವುದು ಒಂದು ಕಡೆಯಾದರೆ, ನಮ್ಮ ಕೋಲಾರ, ಬೀದರ್, ರಾಯಚೂರು ಮುಂತಾದ ಜಿಲ್ಲೆಗಳಲ್ಲಿ ಅಂತರ್ಜಲದ ಮಟ್ಟ ಕುಸಿದುಹೋಗಿದೆ. ಹೊಸ ಕೊಳವೆಬಾವಿಗಳನ್ನು ತೆರೆಯುವುದಕ್ಕೆ ಸರ್ಕಾರ ಸುಮ್ಮನೆ ಅವಕಾ ಮಡಿಕೊಟ್ಟಿಲ್ಲ. ಕೆಟ್ಟಿರುವ ಹಳೆಯ ಕೊಳವೆ ಬಾವಿಗಳನ್ನು ದುರಸ್ತಿಗೊಳಿಸುವುದಕ್ಕೆ ಮತ್ತು ಅದರ ಆಳವನ್ನು ಇನ್ನೊಂದಷ್ಟು ಹೆಚ್ಚು ಮಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಇಷ್ಟೆಲ್ಲಾ ಮಾಡಿದರೂ ಆ ಕೊಳವೆಬಾವಿಗಳಲ್ಲಿ ನೀರು ಬರದಿದ್ದರೆ ಕಡೆಗೆ ಏನು ವ್ಯವಸ್ಥೆ ಮಾಡಬೇಕು? ಈಗಾಗಲೇ ಟ್ಯಾಂಕರ್‌ಗಳಲ್ಲಿ ನೀರನ್ನು ತಂದು ಪೂರೈಸುತ್ತಿರುವುದಾಗಿ ಪ್ರಶ್ನೋತ್ತರ ಅವಧಿಯಲ್ಲಿ ಮಾನ್ಯ ಸಚಿವರು ಉತ್ತರ ಕೊಟ್ಟರು. ಈ ರೀತಿಯ ಬರಗಾಲ ಪರಿಸ್ಥಿತಿ ಎದುರಾಗುತ್ತದೆ ಎನ್ನುವಂತಹ ವಿಚಾರ ಗೊತ್ತಿದ್ದರೂ ಕೂಡ ಎಲ್ಲಾ ಜಿಲ್ಲಾ ಪಂಚಾಯತ್‌ಗಳಲ್ಲಿ ಅವರದೇ ಆದಂತಹ ಟ್ಯಾಂಕರ್‌ಗಲನ್ನು ಇಟ್ಟುಕೊಂಡಿಲ್ಲ. ಕೊನೆಯ ಪಕ್ಷ ಪ್ರತಿ ಜಿಲ್ಲೆಯಲ್ಲಿ 10 ಟ್ಯಾಂಕರ್‌ಗಳನ್ನಿಟ್ಟುಕೊಂಡರೆ ಈ ಬಾಡಿಗೆ ಟ್ಯಾಂಕರ್‌ಗಳನ್ನು ತರುವುದು, ಅವರು ಹೆಚ್ಚಿಗೆ ಬಾಡಿಗೆಯನ್ನು ಕೇಳುವುದು ಇಂತಹ ಸಮಸ್ಯೆಗಳೆಲ್ಲಾ ಬರುವುದಿಲ್ಲ. ಅಲ್ಲದೆ ಆ ಬಾಡಿಗೆ ಟ್ಯಾಂಕರ್‌ಗಳು ಸಮಯಕ್ಕೆ ಸರಿಯಾಗಿ ಸಿಗದಿದ್ದರೆ ನೀವು ಏನು ಮಾಡುವುದಕ್ಕೆ ಸಾಧ್ಯ? ಆದ್ದರಿಂದ ಸರ್ಕಾರ ಆ ಟ್ಯಾಂಕರ್‌ಗಳ ವ್ಯವಸ್ಥೆಯನ್ನು ಸಹ ಮಾಡಿಕೊಳ್ಳುವುದು ಒಳ್ಳೆಯದು.

ಏಕೆಂದರೆ ಎಲ್ಲ ಜಿಲ್ಲೆಗಳಲ್ಲಿಯೂ ಒಂದೇ ಸಮನಾಗಿ ವಾಡಿಕೆ ಮಳೆ ಬೀಳುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಇಂತಹ ಪರಿಸ್ಥಿತಿ ಇರುವಾಗ ನಿಮ್ಮಲ್ಲೀಗ ಯಾವುದೇ ರೀತಿಯ ವಾಟರ್ ಸಪ್ಲೈ ಟ್ಯಾಂಕರ್ಸ್ ಇಲ್ಲ. ಯಾವುದೇ ಹಳ್ಳಿಗೆ ಹೋಗಿ ಕೊಡಬೇಕೆಂದರೆ ಆ ಟ್ಯಾಂಕರ್‌ಗಳು ನಿಮ್ಮಲ್ಲಿದ್ದರೆ ಅದನ್ನು ತಾಲ್ಲೂಕುಗಳಿಗೆ ಕಳುಹಿಸಿಕೊಟು ಅಲ್ಲಿಂದ ನೀವು ನೀರನ್ನು ಸರಬರಾಜು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಜಾನುವಾರುಗಳಿಗೆ ಸಹ ಕುಡಿಯುವ ನೀರಿಲ್ಲದ ಕಾರಣ ಸಾಕಷ್ಟು ಜನ ಸಣ್ಣಪುಟ್ಟ ರೈತರು ಅವುಗಳನ್ನು ಖಸಾಯಿಖಾನೆಯವರಿಗೆ ಮಾರಾಟ ಮಾಡುತ್ತಿದ್ದಾರೆ. ಬೆಳಗಾಂ ಜಿಲ್ಲೆಯಿಂದ ಹೊರಗೆ ಹೋಗುತ್ತಿದೆ. ಇದು ಕೃಷಿ ಮತ್ತು ಪಶುಸಂಗೋಪನಾ ಇಲಾಖೆಯವರಿಗೆ ಕಾಣುವುದಿಲ್ಲವೇ? ಇದನ್ನು ತಡೆಗಟ್ಟಿ, ಆ ಜಿಲ್ಲೆ ಅಥವಾ ಪಕ್ಕದ ಜಿಲ್ಲೆಯ ದನಕರುಗಳಿಗೆ Fodder Bank ಮಾಡಿ ಒದಗಿಸಬೇಕು. ಈ ರೀತಿ ಮಾಡಿ ದನಗಳಿಗೆ ಪೂರೈಕೆ ಮಾಡಬೇಕು. ಅಂದರೆ ಅವರಿಗೆ ಜನರ ಸಂಕಟ ಮತ್ತು ದನಗಳ ಮೇವಿನ ಬಗ್ಗೆ ಕಾಳಜಿ ಇಲ್ಲ. ಇದರ ಬಗ್ಗೆ ವಿಚಾರ ಮಾಡುವುದಿಲ್ಲ. ಅದನ್ನು ನೋಡಿದವರಿಗೆ ಸಂಕಟವಾಗುತ್ತಿದೆ. ಅಲ್ಲಿಂದ ಮೇವು ಹೊರಗಡೆ ಹೋಗುತ್ತಿದೆ. ಸರ್ಕಾರದ ಇಲಾಖೆಯವರು ಏಕೆ ಮಾಡುತ್ತಿಲ್ಲ ಎಂದು ಸಂಕಟವಾಗುತ್ತಿದೆ. ಸಲಹೆ ಕೊಟ್ಟಮೇಲೂ ಗಣನೆಗೆ ತೆಗೆದುಕೊಳ್ಳದಿದ್ದರೆ ಸರ್ಕಾರದಲ್ಲಿ ಕೆಲಸ ಮಾಡಲು ಎಷ್ಟರಮಟ್ಟಿಗೆ ಆಸಕ್ತಿ ಇದೆ ಎಂದು ಗೊತ್ತಾಗುತ್ತದೆ. ಮಾನ್ಯ ಪಶುಸಂಗೋಪನಾ ಸಚಿವರು ಮೊನ್ನೆ ನೀಡಿದ ಹೇಳಿಕೆಯ ಬಗ್ಗೆ ಅವರಿಗೆ ಬಿಡುತ್ತೇನೆ. ಆದರೂ ಒಬ್ಬ ಸಚಿವರಾಗಿ ಕುಡಿಯುವ ನೀರಿನ ಸಮಸ್ಯೆ, ರಸ್ತೆ ಸಮಸ್ಯೆ ಅಥವಾ ಇನ್ನ್ಯಾವುದೋ ಬರಗಾಲದ ಸಮಸ್ಯೆ ಬಗ್ಗೆ ಒತ್ತಡ ಹೇರುತ್ತಾರೆ ಎಂದು ನಾಯಕರೊಂದಿಗೆ ರೆಸಾರ್ಟ್‌ಗೆ ಬಂದಿದ್ದೇವೆ ಎಂದು ಹೇಳಿರುವ ಮಾತು ರಾಜ್ಯಕ್ಕೆ ಅಪಮಾನವಾದ ಮಾತಾಗಿದೆ. ಅವರಿಗೆ ನಿಭಾಯಿಸಲು ಶಕ್ತಿ ಮತ್ತು ಇಚ್ಛೆ ಇಲ್ಲದಿದ್ದರಿಂದ ಈ ಮಾತು ಬಂದಿದೆ ಎಂದು ಹೇಳುತ್ತೇನೆ. ಅವರು ಆ ರೀತಿ ಮುಗ್ಧತೆಯಿಂದ ಅಥವಾ ಯಾವುದೇ ದೃಷ್ಟಿಯಿಂದ ಹೇಳಿರಬಹುದು. ಆದರೆ ಜನರಿಗೆ ಯಾವ ರೀತಿ ಮಾಹಿತಿ ಹೋಗುತ್ತದೆ? ಆಸಕ್ತಿ ಮತ್ತು ಶಕ್ತಿ ಇಲ್ಲದೇ ಬೇಜವಾಬ್ದಾರಿತನದಿಂದ ರೆಸಾರ್ಟ್‌ನಲ್ಲಿ ಕುಳಿತಿದ್ದಾರೆ ಎಂದು ಮಾಹಿತಿ

ಹೋಗುತ್ತದೆ. RDPR ಸಚಿವರು ಬಹಳ ಹಿರಿಯರು ಮತ್ತು ಸರ್ಕಾರದ ವಿರೋಧ ಪಕ್ಷದಲ್ಲಿ ಕುಳಿತವರು. ಏನೇ ರಾಜಕಾರಣವಿದ್ದರೂ, ಪಕ್ಷಕ್ಕೆ ಮಾತ್ರ ಸೀಮಿತ ಮಾಡಿಕೊಳ್ಳಬೇಕೆ ವಿನಃ ನಾಳೆ ಬಜೆಟ್ ಮಂಡನೆ ಎಂದಾಗ ಎರಡು ದಿನ ಮುಂಚೆ ರೆಸಾರ್ಟ್‌ನಲ್ಲಿ ಕುಳಿತು ಅವರ ಸರ್ಕಾರದ ಮಾನ್ಯ ಮುಖ್ಯಮಂತ್ರಿಯವರನ್ನು ಅವರೇ ಬ್ಲಾಕ್‌ಮೇಲ್ ಮಾಡುತ್ತಾರೆಂದರೆ ಏನರ್ಥ ಇದೆ. ಈ ರೀತಿ ತೀವ್ರ ಬರಗಾಲ ಇರುವಾಗ ರೆಸಾರ್ಟ್‌ನಲ್ಲಿ ಕುಳಿತರೆ ಜನ ಮತ್ತು ದನಗಳ ಕತೆ ಏನಾಗಬೇಕು? ಕುಡಿಯುವ ನೀರಿನ ಸಮಸ್ಯೆಯನ್ನು ಹೇಗೆ ಬಗೆಹರಿಸಲು ಸಾಧ್ಯ? ಅಧಿಕಾರಿಗಳಿಗೆ ಯಾವರೀತಿ ನಿರ್ದೇಶನ ಕೊಟ್ಟು ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಬರಗಾಲವನ್ನು ನಿಭಾಯಿಸುವುದರಲ್ಲಿ ಸರ್ಕಾರ ವಿಫಲವಾಗಿದೆ. ಇದನ್ನು ಒಪ್ಪಿಕೊಳ್ಳಬೇಕು. ಅವರು ಅಷ್ಟು ಬಿಡುಗಡೆ ಮಾಡಿದ್ದೇವೆ, ಇಷ್ಟು ಬಿಡುಗಡೆ ಮಾಡಿದ್ದೇವೆ ಎಂದರೂ ಸಮಸ್ಯೆಗಳು ಪರಿಹಾರ ಆಗಿಲ್ಲ. ಇವತ್ತು ಜನರು ಗುಳೆ ಹೋಗುತ್ತಿರುವುದು ಒಂದು ನಿದರ್ಶನ, ಇನ್ನೊಂದು ಕಡೆ ದನಗಳು ಸಾಯುತ್ತಿವೆ, ಮತ್ತೊಂದು ಕಡೆ ದನಗಳನ್ನು ಕಸಾಯಿ ಖಾನೆಗೆ ಕಳುಹಿಸುತ್ತಿದ್ದಾರೆ. ಇದರಿಂದ ಸರ್ಕಾರ ನಡಸುವುದರಲ್ಲಿ ವಿಫಲತೆಯನ್ನು ತೋರಿಸುತ್ತದೆ. ಗೋ ಹತ್ಯೆ ನಿಷೇಧ ಕಾಯ್ದೆಯ ಬಗ್ಗೆ ಜಾರಿಗೆ ಬರಬೇಕೆಂದು ಬಹಳಷ್ಟು ಗಲಾಟೆಗಳು ನಡೆದವು, ರಾಷ್ಟ್ರಪತಿಯವರಿಗೂ ಯಾವುದೇ ರೀತಿ ತಡೆ ಹಾಕಬಾರದು ಎನ್ನುವಂತೆ ಇತ್ತು. ಆದರೆ ನಾನು ಪ್ರಶ್ನೆ ಮಾಡುವುದೇನೆಂದರೆ, ಅವರಿಗೆ ಗೋ ಮತ್ತು ಗೋ ಧರ್ಮದ ಬಗ್ಗೆ ಅಷ್ಟೊಂದು ನಂಬಿಕೆ ಇದ್ದರೆ ಇಂತಹ ಬರಗಾಲದ ಪರಿಸ್ಥಿತಿಯಲ್ಲಿ ಒಬ್ಬೊಬ್ಬರು ಶಾಸಕರು ನಾಲ್ಕೈದು ದನಗಳನ್ನು ದತ್ತು ತೆಗೆದುಕೊಂಡು ಪೋಷಣೆ ಮಾಡಿಕೊಡು ಮೇವು ಮತ್ತು ನೀರು ಒದಗಿಸುವ ಪ್ರಯತ್ನವನ್ನು ಮಾಡಬೇಕು. ಇದರಿಂದ ಅವರಿಗೆ ಶ್ರೇಯಸ್ಸು ಬರುತ್ತದೆ. ಸುಮ್ಮನೆ ಗೋಹತ್ಯೆ ನಿಷೇಧ ತರುತ್ತೇವೆ ಎಂದು ಹೇಳಿದರೆ ಆಗುವುದಿಲ್ಲ. ಇಂತಹ ಕೆಲಸಗಳನ್ನು ಮಾಡಬೇಕಾಗುತ್ತದೆ. ಈ ಸಲಹೆಯನ್ನು ನಾನು ಕೊಡಬಯಸುತ್ತೇನೆ.

(ಗೊಂದಲ)

**ಶ್ರೀ ಅರುಣ ಶಹಾಪುರ:–** ಆ ಕೆಲಸವನ್ನು ತಾವೇ ಮಾಡಬಹುದಲ್ಲವೇ?

**ಶ್ರೀಮತಿ ಮೋಟಮ್ಮ:–** ನಾನು ಅವರ ರೀತಿ ಹೇಳಿಲ್ಲ. ನಮ್ಮ ಜವಾಬ್ದಾರಿಯೂ ಇದೆ. ಹೇಳಿದಂತೆ ನಡೆದುಕೊಳ್ಳುವುದರಲ್ಲಿ ಅರ್ಥ ಇರುತ್ತದೆ. ಹೇಳುವುದು ಒಂದು ಮತ್ತು ನಡೆದುಕೊಳ್ಳುವುದು ಒಂದು ಇರಬಾರದು. ಪ್ರವಾಹ ಪರಿಸ್ಥಿತಿಯಲ್ಲಿ ಸಂಘ ಸಂಸ್ಥೆಗಳು ಮುಂದೆ ಹೋಗಿ ಅಗತ್ಯವಿರುವ ಆಹಾರ ಮತ್ತು ಬಟ್ಟೆಗಳನ್ನು ಒದಗಿಸುತ್ತಾರೆ. ಅದೇ ರೀತಿ ದನಗಳು ಸಾಯುತ್ತಿಲ್ಲ ಮತ್ತು ಕಸಾಯಿಖಾನೆಗೂ ಹೋಗುತ್ತಿಲ್ಲ ಹಾಗೂ ಗುಳೆ ಹೋಗುತ್ತಿಲ್ಲ ಎಂದು ನಿರ್ಲಿಪ್ತವಾಗಿ ಇರುವ ಆ ಭಾಗದ ಶಾಸಕರು ನಾನು ಹೇಳಿದ ಸಲಹೆಯನ್ನು ತೆಗೆದುಕೊಂಡು ಇಂತಿಂಥ ಹಳ್ಳಿಗಳಲ್ಲಿ ಇಷ್ಟು ದನಗಳನ್ನು ದತ್ತು ತೆಗೆದುಕೊಂಡು ಮೇವು ಮತ್ತು ನೀರನ್ನು ಒದಗಿಸಿ ಪೋಷಣೆ ಮಾಡುವ ಜವಾಬ್ದಾರಿ ಹೊತ್ತುಕೊಂಡು ತಗಲುವ ವೆಚ್ಚವನ್ನು ಕೊಡಬೇಕು. ಸರ್ಕಾರವು ನಿರ್ಭಯವಾಗಿ ಇರುತ್ತದೆ. ಇದೇ ರೀತಿ ತಾನೇ ಘೋಷಣೆ ಮಾಡಿಕೊಂಡದ್ದು, ಅಲ್ಲವೇ? ಗೈಡ್‌ಲೈನ್ ......

**ಶ್ರೀ ಅರುಣ ಶಹಾಪುರ:–** ಆಯಾ ಭಾಗದ ಶಾಸಕರು ಎಂದು ಹೇಳಿದರು, ಆದರೆ ಇವರೇ ಮಾಡಬೇಕು ಎಂದು ಹೇಳುವುದು ಸರಿಯಲ್ಲ. ನಾವು ಇದನ್ನು ನಿರೀಕ್ಷೆ ಮಾಡಿರಲಿಲ್ಲ.

**ಶ್ರೀಮತಿ ಮೋಟಮ್ಮ:–** ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುವಂತೆ ಆಗಬಾರದು. ಇದರಲ್ಲಿ ತಪ್ಪೇನಿದೆ, ಗೋ ಸಂರಕ್ಷಣೆ ಮಾಡಬೇಕು, ಅದಕ್ಕೆ ನನ್ನ ಸಲಹೆ ಕೊಟ್ಟಿದ್ದೇನೆ. ಅದು ಬೇರೆಯವರಿಗೆ ಚುಚ್ಚಬಾರದು.

**ಶ್ರೀ ಪುಟ್ಟಣ್ಣ:–** ಇದು ಪಶುಸಂಗೋಪನೆ ಸಚಿವರಿಂದ ಪ್ರಾರಂಭವಾಗುವುದಕ್ಕಿಂತಲೂ ಕಂದಾಯ ಸಚಿವರಿಂದ ಪ್ರಾರಂಭವಾಗಬೇಕು.

**ಶ್ರೀ ರೇವುನಾಯಕ್ ಬೆಳಮಗಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸಲಹೆ ಕೊಟ್ಟಿದ್ದಾರೆ, ನಾನು ಮೊದಲೇ ಸ್ವೀಕಾರ ಮಾಡುವ ಮನುಷ್ಯ ಆಗಿದ್ದೇನೆ. ಆದರೆ ನನ್ನ ಅಕ್ಕನವರ ಬಾಯಿಯಿಂದ ನನ್ನ ಹೆಸರು ಬರುವುದಿಲ್ಲ ಎಂದು ತಿಳಿದುಕೊಂಡಿದ್ದೆನು. ಏನೋ ಜೋಕ್ ಆಗಿ ಮಜಾ ಮಾಡಿದೆ ಎಂದು ಹೇಳಿ ಅದಕ್ಕೆ ನಾನು ಕ್ಷಮೆ ಕೇಳಿದ್ದೇನೆ. ಆದರೆ ಮತ್ತೆ ನನ್ನ ಅಕ್ಕನವರು ಉಲ್ಲೇಖ ಮಾಡಿದರು.

**ಶ್ರೀಮತಿ ಮೋಟಮ್ಮ:–** ಇಲ್ಲ, ನಾನು ಮಜಾ ಮಡಿದೆ ಎಂದು ಹೇಳಲಿಲ್ಲ. ಅವರು ಮುಗ್ದತೆಯಿಂದ ಮಾತನಾಡಿರಬಹುದು, ಇದರಿಂದ ಸರ್ಕಾರಕ್ಕೆ ಆಪಾದನೆ ರೀತಿ ಬಂದಿದೆ. ಇದು ಇಡೀ ಸರ್ಕಾರದ ಮೇಲೆ ಆಪಾದನೆ ಬಂದ ಹಾಗೆ ಆಗುತ್ತದೆ. ಯಾವುದನ್ನು ನಿಭಾಯಿಸಲು ಆಗದೇ ಆರಾಮವಾಗಿ ರೆಸಾರ್ಟ್‌ನಲ್ಲಿ ಕುಳಿತಿದ್ದೇವೆ ಎಂದ ಹಾಗೆ ಆಯಿತು.

**ಶ್ರೀ ರೇವುನಾಯಕ್ ಬೆಳಮಗಿ:–** ಅದು ಜೋಕ್ ಮಡಿದಷ್ಟೇ. ಗೋ ರಕ್ಷಣೆ ಎಂದರೆ ರೇವುನಾಯಕ್ ಅದರಲ್ಲಿ ಭಾಗಿ ಎಂದರ್ಥ. ಹೇಗೆಂದರೆ ನಾನು ಸ್ವತಃ ಗೋ ಮಾತೆಯನ್ನು ರಕ್ಷಣೆ ಮಾಡಿದವನು. ಆಕಳು–ಎಮ್ಮೆಗಳನ್ನು ನೂರಾರು ಸಾಕಣೆ ಮಾಡಿದವನು. ಅದರ ಬಗ್ಗೆ ಬಹಳ ಚಿಂತನೆ ಇದೆ. ಇಡೀ ಕರ್ನಟಕ ರಾಜ್ಯದಲ್ಲಿ 28 ಗೋಶಾಲೆಗಳು ನಡೆಯುತ್ತಿದೆ. ಅದರ ಬಗ್ಗೆ ಸುತ್ತೋಲೆಯೂ ಇದೆ. ಮೂಕ ಪ್ರಾಣಿಗಳು ಕಸಾಯಿ ಖಾನೆಗೆ ಹೋಗಬಾರದು.

**ಶ್ರೀಮತಿ ಮೋಟಮ್ಮ:–** ಅವು ಸಂಕಷ್ಟದಲ್ಲಿದ್ದು, ಕಸಾಯಿಖಾನೆಗೆ ಹೋಗುತ್ತಿವೆ.

**ಶ್ರೀ ರೇವುನಯಕ್ ಬೆಳಮಗಿ:–** ನಾನು ಇನ್ಸಪೆಕ್ಟರ್ A.D.(Assistant Director) ಮತ್ತು DD. (Deputy Director ಅವರುಗಳನ್ನು ಕರೆಸಿ ಸಭೆ ಮಾಡಿ ಆದೇಶ ಮಾಡಿದ್ದೇನೆ. ಗೋವುಗಳು ಕಸಾಯಿಖಾನೆಗೆ ಹೋಗದಂತೆ ರಕ್ಷಣೆ ಕೊಡಬೇಕೆಂದು ಆದೇಶ ಕೊಟ್ಟಿದ್ದೇನೆ. ಅವಶ್ಯಕತೆ ಇರುವಲ್ಲಿ

ಗೋಶಾಲೆಗಳನ್ನು ತೆರೆದು, ಜಿಲ್ಲಾಧಿಕಾರಿಗಳ ಮುಖಾಂತರ ರಕ್ಷಣೆ ಮಾಡಬೇಕೆಂದು ಅದೇಶ ಮಾಡಿದ್ದೇನೆ.

**ಶ್ರೀಮತಿ ಮೋಟಮ್ಮ:-** ಆ ರೀತಿ ಮಾಡಿದ್ದರೂ, ಯಾದಗಿರಿ, ಕೊಪ್ಪಳ, ಚಿತ್ತಾಪುರದ ಕಡೆಗಳಲ್ಲಿ ನಡೆಯುತ್ತಿದೆ. ಆದ್ದರಿಂದ ಇದನ್ನು ತಡೆಗಟ್ಟಲು ಈ ಮಾರ್ಗೋಪಾಯವನ್ನಾದರೂ ಮಾಡಿ ಎಂದು ಸಲಹೆ ಕೊಟ್ಟಿದ್ದೇನೆ. ಇದರಲ್ಲಿ ತಪ್ಪಿದೆಯೇ? ಈ ಬರಗಾಲದ ತೀವ್ರತೆಯನ್ನು ಅರ್ಥಮಾಡಿಕೊಂಡಿದ್ದಾರೆ ಮತ್ತು ನಾವು ಅರ್ಥೈಸುವ ಹಾಗೆ ಹೇಳಿದ್ದೇನೆ. ಇನ್ನು ಎಷ್ಟರಮಟ್ಟಿಗೆ ನಿಭಾಯಿಸುತ್ತಾರೆ ಎನ್ನುವುದು ಬೇಕಗುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕುಡಿಯುವ ನೀರಿನ ಅಭಾವದ ಬಗ್ಗೆ ಮಾತನಾಡಿದರು. ಅಂದರೆ ಬೆಂಗಳೂರು ಸೇರಿದಂತೆ ಪಟ್ಟಣಗಳಲ್ಲೂ ಕುಡಿಯುವ ನೀರಿನ ಅಭಾವ ಇದೆ. ಅದರೆ ಅವರು ಶಾಶ್ವತವಾದ ಪರಿಹಾರವನ್ನು ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಅದನ್ನು ಎಲ್ಲಿ ಮಾಡಿದ್ದಾರೋ ಗೊತ್ತಿಲ್ಲ. ನನಗೆ ತಿಳಿದಂತೆ ಕೆಲವೊಂದು ನಗರ ಪಂಚಾಯತಿ ಅಥವಾ ಪಟ್ಟಣ ಪಂಚಾಯತಿ ಇರುವಲ್ಲಿ Urban Supply Scheme ಮೂಲಕ ನೀರನ್ನು ಪೂರೈಸುತ್ತಿದ್ದಾರೆ. ಮಾನ್ಯ ಕೃಷ್ಣರವರು ಇರುವಾಗ ನನ್ನ ಕ್ಷೇತ್ರದಲ್ಲಿ ಹೇಮಾವತಿಯಿಂದ ನೀರನ್ನು ತರಲು 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, enruote villages ಎಂದು 18 ಹಳ್ಳಿಗಳಿಗೆ ನೀರು ಕೊಡುವುದರ ಜೊತೆ 24 ಗಂಟೆಗಳ ಕಾಲ ಮೂಡಿಗೆರೆ ನಗರಕ್ಕೆ ನೀರು ಕೊಡುವ ವ್ಯವಸ್ಥೆ ಮಾಡಿದ್ದಾರೆ. ಎಲ್ಲ ಊರು-ಕೇರಿಗಳಲ್ಲಿ ಹಳ್ಳ-ಕೊಳ್ಳ ಮತ್ತು ಕೆರೆಗಳು ಇದ್ದು, ಇಂತಹ ಕಡೆಗಳಲ್ಲಿ ಆದಷ್ಟು ಬೇಗ ಶಾಶ್ವತ ನೀರು ಪರಿಹಾರ ಯೋಜನೆಯನ್ನು ತರಬೇಕಾಗುತ್ತದೆ. ಸನ್ಮಾನ್ಯ ಸಭಾಪತಿಯವರೇ, ಇದೇ ಸಂದರ್ಭದಲ್ಲಿ ಹತ್ತಾರು ಟ್ಯಾಂಕರ್‌ಗಳನ್ನು ಕೊಂಡು ಆ ಟ್ಯಾಂಕರ್‌ಗಳ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಎಲ್ಲಿ ನೀರಿನ ಹಾಹಾಕಾರವಿದೆ, ಎಲ್ಲಿ ದನ ಕರುಗಳಿಗೆ ನೀರಿಲ್ಲ ಅಂತಹ ಕಡೆಗಳಲ್ಲಿ ನೀರನ್ನು ಒದಗಿಸುವಂತಹ ವ್ಯವಸ್ಥೆಯನ್ನು ಸರ್ಕಾರ ಕಡ್ಡಾಯವಾಗಿ ಮಾಡಬೇಕಾಗುತ್ತದೆ. ಆಗ ಮಾತ್ರ ಸ್ವಲ್ಪ ಮಟ್ಟಿಗೆ ಈ ಬರಗಾಲವನ್ನು

ಹತ್ತಿಕ್ಕುವುದಕ್ಕ ಅಥವಾ ನಿಭಾಯಿಸುವುದಕ್ಕೆ ಸಾಧ್ಯವಾಗುತ್ತದೆ. ಇದರ ಕಡೆಗೆ ಸರ್ಕಾರ ಹೆಚ್ಚಿನ ಗಮನವನ್ನು ಹರಿಸಬೇಕಾಗುತ್ತದೆ. ಕೇಂದ್ರ ಸರ್ಕಾರದ ವತಿಯಿಂದ Central Study committee ಏನು ಬಂದಿತ್ತು ಅದು ತನ್ನ ವರದಿಯನ್ನು ಕೊಟ್ಟಿದೆ. ಆ ವರದಿಯಲ್ಲಿ, 'ಈ ಬರಗಾಲವನ್ನು ನಿಭಾಯಿಸುವುದಕ್ಕೆ 1600 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ' ಎಂದು ತಿಳಿಸಿದೆ.

ಸನ್ಮಾನ್ಯ ಸಭಾಪತಿಯವರೇ, ಯಾಕೋ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಆಕಳಿಸುತ್ತಿದ್ದಾರೆ. ಅವರಿಗೆ ನಿದ್ದೆ ಬರುತ್ತಿರಬಹುದು. ನಾನು ಮಾತನಾಡುತ್ತಿರುವುದರಿಂದ ಅವರಿಗೆ ತೂಕಡಿಕೆ ಬರುತ್ತಿರಬಹುದು. ಅವರು ಎರಡು ಮೂರು ಬಾರಿ ಆಕಳಿಸಿದ್ದನ್ನು ನಾನು ನೋಡಿದ್ದೇನೆ. ರಾತ್ರಿ ನಿದ್ದೆಗೆಟ್ಟಿರಬಹುದು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಅವರು ಬಹಳ ನೋವಿನಲ್ಲಿದ್ದಾರೆ.

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, ನೋವಿನಲ್ಲಿದ್ದರೆ ಎಲ್ಲಿ ನಿದ್ದೆ ಬರುತ್ತದೆ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನೋವು ಎಂದರೆ, ಏನೋ ಆಗಬೇಕಾಗಿತ್ತು, ಏನೋ ಆಗಿ ಹೋಯಿತು ಎನ್ನುವಂತಹ ನೋವು.

**ಶ್ರೀ ನಾರಾಯಣ ಸಾ. ಭಾಂಡಗೆ:–** ಸನ್ಮಾನ್ಯ ಸಭಾಪತಿಯವರೇ, ಯಾವುದೇ ರೀತಿಯ ನೋವು ಇಲ್ಲ. ಎಲ್ಲರೂ ಸಂತೋಷವಾಗಿದ್ದೇವೆ.

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, Central Study committee ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಬರ ಪರಿಹಾರಕ್ಕೆ 1600 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ ಎನ್ನುವಂತಹ ವರದಿಯನ್ನು ಕೊಟ್ಟಿದೆ. ಅದನ್ನು ಪಡೆದುಕೊಳ್ಳುವುದಕ್ಕೆ ರಾಜ್ಯ ಸರ್ಕಾರ ಯಾವ ರೀತಿಯ ಪ್ರಯತ್ನವನ್ನು ಮಾಡಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈಗಾಗಲೇ

ಒಂದಷ್ಟು ಹಣವನ್ನು ನೀಡಿದೆ. ನಮ್ಮ ಮನಸ್ಸಿಗೆ ನೋವನ್ನುಂಟು ಮಾಡಿದ ವಿಚಾರವೇನೆಂದರೆ, ಮಾನ್ಯ ಸದಾನಂದ ಗೌಡರು ಮುಖ್ಯಮಂತ್ರಿಗಳಾದ ಹೊಸದರಲ್ಲಿ ಡಿ.ಸಿ.ಗಲ ಸಭೆಯನ್ನು ಕರೆದು 920 ಕೋಟಿ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ. ಕುಡಿಯುವ ನೀರಿಗೆ ಎಷ್ಟು ಖರ್ಚು ಮಾಡಿದ್ದೀರಿ ಎಂದು ಅವರು ಸ್ಟಡಿ ಮಾಡಿದ್ಧಾಗ ತಿಳಿದು ಬಂದ ಅಂಶವೇನೆಂದರೆ ಕೇವಲ 250 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಬರ ಪರಿಹಾರದ ಬಗ್ಗೆ ಸರ್ಕಾರಕ್ಕೆ ಮತ್ತು ಅಧಿಕಾರಿಗಳಿಗೆ ಎಷ್ಟು ಕಳಕಳಿ ಇದೆ ಎನ್ನುವುದು ಅರ್ಥವಾಗುತ್ತದೆ.

**ಶ್ರೀ ಜಗದೀಶ್ ಶೆಟ್ಟರ್:-** ಸನ್ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆಯಿಂದ ಸಿ.ಆರ್.ಎಫ್. ಅಡಿಯಲ್ಲಿ 170 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ 120 ಕೋಟಿ ರೂಪಾಯಿಗಳನ್ನು ಟಾಸ್ಕ್‌ಫೋರ್ಸ್ ಕಮಿಟಿಗಳಿಗೆ ಬಿಡುಗಡೆ ಮಾಡಲಾಗಿದೆ. ಪ್ರತಿಯೊಂದು ಜಿಲ್ಲೆಗೂ ಒಂದು ಕೋಟಿ, ಒಂದೂವರೆ ಕೋಟಿ, ನಾಲ್ಕು ಕೋಟಿ ಹೀಗೆ ಹಂಚಿಕೆ ಮಾಡಿದ್ದೇವೆ. ಬರ ಪರಿಹಾರ ಕೆಲಸ ನಡೆಯುತ್ತಿದೆ. 2400 ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ. 3500 ಬೋರ್‌ವೆಲ್‌ಗಳನ್ನು revive ಮಾಡುತ್ತಿದ್ದೇವೆ. ಇಷ್ಟು ಕೆಲಸವನ್ನು ಮಾಡುತ್ತಿದ್ದೇವೆ.

**ಶ್ರೀಮತಿ ಮೋಟಮ್ಮ:-** ಸನ್ಮಾನ್ಯ ಸಭಾಪತಿಯವರೇ, ಇದು ಉತ್ಪ್ರೇಕ್ಷೆಯ ಮಾತಲ್ಲ. ಮಾನ್ಯ ಮುಖ್ಯಮಂತ್ರಿಗಳು ಡಿ.ಸಿ.ಗಳ ರಿವ್ಯೂ ಮೀಟಿಂಗ್‌ನಲ್ಲಿ ಆ ಮಾತುಗಳನ್ನು ಹೇಳಿದ್ದಾರೆ. ಅವರು ಹೇಳಿದಂತಹ ಮಾತುಗಳನ್ನು ನಾನು ಹೇಳಿದ್ದೇನೆ. ಆ ಮೀಟಿಂಗ್ ಎರಡು ತಿಂಗಳುಗಳ ಹಿಂದೆ ನಡೆದಿತ್ತು. ಆ ನಂತರ ಇಷ್ಟೆಲ್ಲಾ ಕೆಲಸಗಳು ನಡೆದಿವೆ ಎಂದರೆ ಅದು ಪವಾಡವೇ ಸರಿ. ಕೆಲಸ ಆಗಿದ್ದರೆ ಸಂತೋಷ. ಕೆಲಸ ಆಗಲಿ ಎನ್ನುವುದು ನಮ್ಮ ಆಶಯ. ಮುಂದೆ ಕೂಡ ಸರ್ಕಾರ ಬಹಳ ಎಚ್ಚರಿಕೆಯನ್ನು ವಹಿಸಿ ಕಾಳಜಿ ಇಟ್ಟು ಈ ಬರಗಾಲವನ್ನು ಎದುರಿಸುವುದಕ್ಕೆ ಎಲ್ಲ ಪ್ರಯತ್ನಗಳನ್ನು ಮಾಡಬೇಕು. ಜನರನ್ನು ಸಂತೈಯಿಸುವುದರ ಜೊತೆಗೆ ದನಕರುಗಳು ಸಾಯದಂತೆ ನೋಡಿಕೊಳ್ಳುವ ವ್ಯವಸ್ಥೆ ಸರ್ಕಾರದಿಂದ ಆಗಬೇಕಾಗಿದೆ. ಅದು

ಆಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಶೇಕಡಾ 70ರಷ್ಟು ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿವೆ. ಒಟ್ಟು 30 ಜಿಲ್ಲೆಗಳಲ್ಲಿ 24 ಜಿಲ್ಲೆಗಳು ಬರಗಾಲದಿಂದ ತತ್ತರಿಸಿ ಹೋಗಿವೆ. 176 ತಾಲ್ಲೂಕುಗಳಲ್ಲಿ 123 ತಾಲ್ಲೂಕುಗಳು ಬರಗಾಲಕ್ಕೆ ಒಳಗಾಗಿವೆ. ನಾನು ಬಹಳ ದಿನಗಳಿಂದ ಬರಗಾಲ ಬಂದಾಗ, ಸರ್ಕಾರಗಳು ಯಾವ ರೀತಿಯಲ್ಲಿ ಸ್ಪಂದಿಸುತ್ತಿವೆ ಎನ್ನುವುದನ್ನು ನೋಡಿಕೊಂಡು ಬಂದಿದ್ದೇನೆ. 1971–72ರಲ್ಲಿ ಭೀಕರ ವಾದಂತಹ ಬರಗಾಲವನ್ನು ನಮ್ಮ ರಾಜ್ಯ ಎದುರಿಸಿತ್ತು. ಆಗ ಸ್ವತಃ ಅಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ದೇವರಾಜ ಅರಸುರವರು, ಜವಾದಾರಿಯುತವದಂತಹ ಅಧಿಕಾರಿಯೊಬ್ಬರನ್ನು ನೊಡಲ್ ಅಧಿಕಾರಿ ಯನ್ನಾಗಿ ನೇಮಕ ಮಾಡಿ, ಅವರಿಗೆ ಸೂಪರ್ ಪವರ್ ಕೊಟ್ಟು ನೇರವಾಗಿ ನಿರ್ಧಾರಗಳನ್ನು ತೆಗೆದುಕೊಂಡು ಜನರ ಸಂಕಷ್ಟಗಳಿಗೆ ಸ್ಪಂದಿಸಿ ಬರ ಪರಿಹಾರದಲ್ಲಿ ಆಸಕ್ತಿಯಿಂದ ಕೆಲಸ ಮಾಡುವಂತಹ ವ್ಯವಸ್ಥೆಯನ್ನು ನಿರ್ಮಾಣ ಮಾಡಿದ್ದರು. ಅಷ್ಟೇ ಅಲ್ಲ, 21 ದಿನಗಳ ಕಾಲ ಅಂದಿನ ಮುಖ್ಯಮಂತ್ರಿಗಳೂ ಸಂಬಂಧಪಟ್ಟ ಮಂತ್ರಿಗಳನ್ನು ಮತ್ತು ಅಧಿಕಾರಿಗಳನ್ನು ಕರೆದುಕೊಂಡು ಎಲ್ಲ ಕಡೆಗಳಿಗೆ ಹೋಗಿ ಜನರ ಕಣ್ಣೀರನ್ನು ಒರೆಸುವಂತಹ ಕೆಲಸವನ್ನು ಮಾಡಿದ್ದರು. ಇವತ್ತು ಆ ರೀತಿಯ ಸ್ಪಂದನೆ ಇರಬೇಕು ಎನ್ನುವುದು ನಮ್ಮೆಲ್ಲರ ಆಶಯವಾಗಿದೆ. ಯಾವ ಜನರಿಂಧ ನಾವು ಚುನಾಯಿತರಾಗಿ ಬಂದಿದ್ದೇವೆ, ಆ ಜನರು ಸಂಕಷ್ಟದಲ್ಲಿ ಇರುವಾಗ, ಅವರ ಸಂಕಷ್ಟಗಳಿಗೆ ಪರಿಹಾರವನ್ನು ಕಂಡುಹಿಡಿಯುವ ದಿಸೆಯಲ್ಲಿ ಕೆಲಸ ಮಾಡುವಂತಹ ಮತ್ತು ಸ್ಪಂದಿಸುವಂತಹ ಕಾರ್ಯವಾಗಬೇಕೆನ್ನುವುದು ನನ್ನ ವಿನಂತಿಯಾಗಿದೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಈಗಾಗಲೇ 120 ಕೋಟಿಗೂ ಹೆಚ್ಚು ಹಣವನ್ನು ಈ ಕಾರ್ಯಕ್ಕಾಗಿ ಕೊಟ್ಟಿದ್ದೇವೆ ಎಂದು ಹೇಳಿದರು. ಹಿಂದೆ ನೆರೆ ಹಾವಳಿಯಂತಹ

ಸಂದರ್ಭದಲ್ಲಿ ರಾಷ್ಟ್ರ ಮಟ್ಟದಲ್ಲಿ ಯೋಜನಾ ಮಂತ್ರಿಗಳಾಗಿ ಕೆಲಸ ಮಾಡಿದಂತಹ ಈ ಮನೆಯ ಹಿರಿಯ ಸದಸ್ಯರಾದಂತಹ ರಾಜಶೇಖರನ್‌ರವರು ಇಂತಹ ಸಮಸ್ಯೆಗಳಿಗೆ ಕೆಲವು ಪರಿಹಾರಗಳನ್ನು ನೀಡಿದ್ದರು. ಜಿಲ್ಲಾಧಿಕಾರಿಗಳ ಸಮಿತಿಯನ್ನು ಮಾಡಬೇಕು, ಜಿಲ್ಲಾಧಿಕಾರಿಗಲು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಇದರಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಿ ಕೆಲಸ ಮಾಡಬೇಕು. ಹದಿನೈದು ದಿನಗಳಿಗೆ ಒಮ್ಮೆಯಾದರೂ ಸಭೆಗಳನ್ನು ನಡೆಸಿ pull up ಮಾಡಬೇಕು. ಈ ಕೆಲಸ ಇವರ ಸರ್ಕಾರದಿಂದ ಆಗುತ್ತಿಲ್ಲ ಎನ್ನುವಂತಹ ನೋವು ನನಗಿದೆ. ದಯಮಾಡಿ ಇದಕ್ಕೆ ಸರ್ಕಾರ ಆದ್ಯತೆಯನ್ನು ನೀಡಬೇಕಾಗಿದೆ. ಸರ್ಕಾರ ಬಿಡುಗಡೆ ಮಾಡುವಂತಹ ಹಣ ಸದುಪಯೋಗವಾಗಬೇಕು ಮತ್ತು ಅಲ್ಲಿ ಕೆಲಸ ಆಗಿದೆಯೇ ಇಲ್ಲವೇ ಎನ್ನುವುದನ್ನು ರಿವ್ಯೂ ಮಾಡುವಂತಹ ಕೆಲಸ ಆಗಬೇಕಾಗಿದೆ. ಮಾನ್ಯ ಪಶುಸಂಗೋಪನಾ ಸಚಿವರು ಬಹಳ ಸರಳ ವ್ಯಕ್ತಿಗಳು. ಅದರ ಬಗ್ಗೆ ಎರಡು ಮಾತಿಲ್ಲ. ರಾಜಕೀಯದ ತಂತ್ರಗಾರಿಕೆಗಳು ಅವರಿಗೆ ಗೊತ್ತಿಲ್ಲ. ನೇರವಾಗಿ ಇರುವಂತಹ ವಿಚಾರವನ್ನು ಹೇಳುತ್ತಾರೆ.

**ಉಪ ಸಭಾಪತಿಯವರು:-** ರಾಜಕೀಯದ ತಂತ್ರ ಗೊತಿದೆಯೋ ಇಲ್ಲವೋ, ಆದರೆ ಕುಸ್ತಿಯ ತಂತ್ರ ಅವರಿಗೆ ಚೆನ್ನಾಗಿ ಗೊತ್ತಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಅವರು ಮಣ್ಣಿನ ಮಗ. ಜನತ್ತು ಹೇಗಿದೆ ಎನ್ನುವುದನ್ನು ಅವರು ತಿಳಿದುಕೊಳ್ಳಬೇಕು. ಜಗತ್ತು ಮಾನ್ಯ ಮಧುಸೂದನ್ ರೀತಿಯಲ್ಲಿ ಇದೆ. ಅವರು ಅದನ್ನು ತಿಳಿದುಕೊಳ್ಳಬೇಕಾಗಿದೆ. ಈ ರಾಷ್ಟ್ರದಲ್ಲಿ ಯಾರು ಒಳ್ಳೆಯವರಾಗಿದ್ದಾರೆ, ಯಾರು ಮಣ್ಣಿನ ಮಕ್ಕಳಾಗಿದ್ದರೆ, ಯಾರು ಈ ದೇಶದ ಮೂಲ ನಿವಾಸಿಗಳಾಗಿದ್ದಾರೆ ಅವರುಗಳೇ ಬಲಿಪಶುಗಳಾಗುವುದು. ಆದ್ದರಿಂದ ಮಾನ್ಯ ಮಧುಸೂದನ್‌ರವರು ಮಾತನಾಡುವ ರೀತಿಯಲ್ಲಿ ಮಾತನಾಡುವುದನ್ನು ಮಾನ್ಯ ಪಶುಸಂಗೋಪನಾ ಸಚಿವರು ಕಲಿಯಬೇಕಾಗುತ್ತದೆ. ಇಲ್ಲದಿದ್ದರೆ ಒಳ್ಳೆಯವರಿಗೆ ಕಷ್ಟವಾಗುತ್ತದೆ. ನಾವು ನೇರವಾಗಿ ಹೇಳುತ್ತೇವೆ. ಯಾವುದೇ ವಿಚಾರವಾಗಲೀ ಪಕ್ಷಾತೀತವಾಗಿ ಸದನದಲ್ಲಿ ಚರ್ಚೆಯಾಗಬೇಕಾಗುತ್ತದೆ.

**ಶ್ರೀ ಗೋ.ಮಧುಸೂದನ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣರವರು ಎಷ್ಟು ಚೆನ್ನಾಗಿ ಹೆಸರನ್ನು ಇಟ್ಟುಕೊಂಡಿದ್ದಾರೆಂದರೆ, ಮತ್ತಿಕಟ್ಟಿಯವರ ಹೆಸರಿನಲ್ಲಿಯೇ ಅವರು ಎಷ್ಟು ಬುದ್ಧಿವಂತರು ಎನ್ನುವುದು ಇದೆ. 'ಮತಿ' ಎಂದರೇ 'ಬುದ್ಧಿ' ಎಂದು ಅರ್ಥ. 'ಕಟ್ಟ"ಎಂದರೆ, 'ಒಂದು ಕಡೆ ಕಟ್ಟಿ ಇಡುವುದು' ಎಂದರ್ಥ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಬುದ್ಧಿವಂತಿಕೆಯನ್ನೆಲ್ಲ ತಮ್ಮ ಬಳಿಯೇ ಕಟ್ಟಿ ಇಟ್ಟುಕೊಂಡಿದ್ದಾರೆ. ಬುದ್ದಿವಂತಿಕೆಯನ್ನು ತಾವೇ ಕಟ್ಟಿ ಇಟ್ಟುಕೊಂಡು, 'ಅವರು ಜಾಣರು, ಇವರು ಜಾಣರು' ಎಂದು ಹೇಳುತ್ತಾರೆ. ಇದನ್ನು ಹೇಗೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯ?

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಮೂಲಭೂತವಾಗಿ ಯಾವ ರೀತಿಯಲ್ಲಿ ಈ ಸಮಸ್ಯೆಯನ್ನು ಎದುರಿಸಬೇಕು ಅಷ್ಟು ತೀವ್ರತೆಯಿಂದ ಎದುರಿಸುವುದಕ್ಕೆ ಆಗಿಲ್ಲ ಎನ್ನುವುದನ್ನು ತಿಳಿಸುವುದಕ್ಕೆ ಬಯಸುತ್ತಿದ್ದೇನೆ. ನನಗಿರುವ ಮಾಹಿತಯ ಪ್ರಕಾರ ಇವತ್ತು ಕಂದಾಯ ಇಲಾಖೆಯನ್ನು ಮಾನ್ಯ ಮುಖ್ಯಮಂತ್ರಿಗಳೇ ಇಟ್ಟುಕೊಂಡಿದ್ದಾರೆ. ಅದಕ್ಕೆ ಬೇರೆ ಸಚಿವರು ಇಲ್ಲ. ಬರಗಾಲವನ್ನು ಎದುರಿಸುವುದಕ್ಕೆ ಒಬ್ಬ ಸಚಿವರನ್ನಾಗಲೀ, ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳಾದ ಅಪರ ಮುಖ್ಯ ಕಾರ್ಯದರ್ಶಿಗಳ ಹಂತದ ಅಧಿಕರಿಗಳನ್ನು ನೇಮಕ ಮಾಡಬೇಕು. ಈ ಕೆಲಸಕ್ಕೆ ಆದ್ಯತೆಯನ್ನು ಕೊಡಬೇಕಾಗಿದೆ. ಪ್ರತಿ ಜಿಲ್ಲೆಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿ ಆ ಮೂಲಕ ಕೆಲಸ ಮಾಡಬೇಕಾಗುತ್ತದೆ. ಪ್ರತಿ ತಾಲ್ಲೂಕಿನಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಗಳು ಇರುತ್ತವೆ. ಅವು ಕೆಲಸ ಮಾಡುತ್ತವೆಯೋ ಇಲ್ಲವೋ ಎನ್ನುವುದನ್ನು ರಿವ್ಯೂ ಮಾಡಿದಾಗ ಮಾತ್ರ ಒಳ್ಳೆಯದಾಗುತ್ತದೆ.

ಇನ್ನು ಕುಡಿಯುವ ನೀರು, ದನಗಳಿಗೆ ಮೇವು, ಅದರ ಜೊತೆಗೆ ದುಡಿಯುವ ಕೈಗಳಿಗೆ ಕೆಲಸ ಕೊಡಬೇಕಾಗುತ್ತದೆ. ದನಗಳಿಗೆ ಮೇವು ಸಿಗಬೇಕು, ಕುಡಿಯುವ ನೀರಿನ ವ್ಯವಸ್ಥೆ ಆಗಬೇಕು. ಅದರ ಜೊತೆಗೆ ದುಡಿಯುವ ಕೈಗಳಿಗೆ ಕೆಲಸ ಕೊಡಲಿಕ್ಕೆ 'ಉದ್ಯೋಗ ಭರವಸೆ ಯೋಜನೆ' ಇದೆ. ಅದನ್ನು expedite ಮಾಡಿದರೆ ಕರ್ನಾಟಕ ಸರ್ಕಾರಕ್ಕೆ ಹಣದ

ತೊಂದರೆಯಾಗುವುದಿಲ್ಲ. ಅದಕ್ಕಾಗಿ ಕೇಂದ್ರದಿಂದ ಅನುದಾನ ಬರುವುದರಿಂದ ಅದನ್ನು ಉಪಯೋಗ ಮಾಡಿಕೊಳ್ಳಬಹುದು. ಇವೆಲ್ಲಾ ಅದಕ್ಕೆ ಪೂರಕ. ಅದರ ಜೊತೆಗೆ ರಾಜ್ಯದ assets creation ಗೂ ಸರ್ಕಾರ ಆದ್ಯತೆಯನ್ನು ಕೊಡಬೇಕು ಮತ್ತು ಕೆಲಸವೂ ಸಹ ಆಗಬೇಕು. ದುಡಿಯುವ ಕೈಗಳಿಗೆ ಕೆಲಸ ಕೊಡಬೇಕು. 28 ಗೋಶಾಲೆಗಳನ್ನು ತೆರೆದಿದ್ದೇವೆ ಎಂದು ಹೇಳಿದರು. ಮಧ್ಯಮ ವರ್ಗದ ರೈತರು ತಮ್ಮ ದನ-ಕರುಗಳನ್ನು ಗೋಶಾಲೆಗೆ ಕಳುಹಿಸುವುದಿಲ್ಲ. ಅವರಿಗೂ ಸಹ ಮೇವು ಸಿಗಬೇಕಲ್ಲಾ. ಒಂದು ಟ್ರ್ಯಾಕ್ಟರ್ ಮೇವಿಗೆ 12,000 ದಿಂದ 15,000 ರೂಪಾಯಿ ಇದೆ ಎಂದು ಮಾನ್ಯ ಬಸವರಾಜ ಹೊರಟ್ಟಿಯವರು ಮತ್ತು ಮಹಾಂತೇಶ್ ಶಿವಾನಂದ ಕೌಜಲಗಿಯವರು ಹೇಳಿದರು. ಅಷ್ಟಾಗಿಯೂ ಮೇವು ಸಿಗುತ್ತಿಲ್ಲ. ಮೇವೆಲ್ಲಾ ಹೊರಗಡೆಗೆ ಹೋಗುತ್ತಿದೆ. ಕಟ್ಟುನಿಟ್ಟಾಗಿ ಮೇವು ಹೊರಗಡೆ ಹೋಗದ ಹಾಗೆ ವ್ಯವಸ್ಥೆ ಮಾಡಿ ಮೇವನ್ನು ಒಂದೊಂದು ತಾಲ್ಲೂಕು ಕೇಂದ್ರದಲ್ಲಿ ಶೇಖರಿಸಿ ಎಲ್ಲೆಲ್ಲಿ ಇದೆ ಅದನ್ನು ತರಿಸಿ ರೈತರಿಗೆ ಹಂಚತಕ್ಕಂಥ ಕೆಲಸವನ್ನು ಮಾಡಿ, ಎಲ್ಲರೂ ಗೋಶಾಲೆಗಳಿಗೆ ತಮ್ಮ ದನಕರುಗಳನ್ನು ಕಳುಹಿಸುವುದಿಲ್ಲವಲ್ಲ. ನಮ್ಮ ರೈತರು ತಮಗಿಂತ ಹೆಚ್ಚಿನ ಪ್ರೀತಿಯನ್ನು ತಮ್ಮ ದನಕರುಗಳ ಮೇಲೆ ಇಟ್ಟಿರುತ್ತಾರೆ. ನಮ್ಮ ಕಡೆ ಬಂದು ನೋಡಿ, ಮನೆಯ ಮುಂಭಾಗದಲ್ಲಿ ಮನೆಯ ಮಾಲೀಕ ಅಥವಾ ಹಿರಿಯರು ಎಲ್ಲಿರುತ್ತಾರೆಯೋ ಅವರ ಮುಂದೆಯೇ ದನದ ಕೊಟ್ಟಿಗೆ ಇರುತ್ತದೆ.

**ಉಪ ಸಭಾಪತಿಯವರು:-** ನಿಮ್ಮಲ್ಲಿ ಮಾತ್ರವಲ್ಲ, ನಮ್ಮ ಹಳ್ಳಿಗಳಲ್ಲಿಯೂ ಕೂಡ ಇದೇ ವ್ಯವಸ್ಥೆ ಇದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ರೈತರು ತಮಗಿಂತ ಹೆಚ್ಚಿನ ಆದ್ಯತೆಯನ್ನು ತಮ್ಮ ದನಕರುಗಳಿಗೆ ಕೊಡುತ್ತಾರೆ. ಅವರು ತಮ್ಮ ದನಕರುಗಳನ್ನು ದೇವರು ಎಂದು ಪೂಜಿಸುತ್ತಾರೆ. ಕೆಲವರು ತಮ್ಮ ದನಕರುಗಳನ್ನು ಗೋಶಾಲೆಗಳಿಗೆ ಕಳುಹಿಸುವುದಿಲ್ಲ. ಅದಕ್ಕಾಗಿ ರೈತರಿಗೆ ಪೂರಕವಾಗಿ ಸಹಾಯವಾಗತಕ್ಕಂಥಾದ್ದಕ್ಕೆ ಸರ್ಕಾರ ನಿರ್ಧಾರವನ್ನು ತೆಗೆದುಕೊಳ್ಳಲಿ. ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ,

ಟ್ಯಾಂಕರ್‌ಗಳಿಂದ ಕೆಲವು ಕಡೆ ನೀರನ್ನು ಪೂರೈಕೆ ಮಾಡುತ್ತಿದ್ದಾರೆ. ಸುಮಾರು 10 ರಿಂದ 15 ದಿವಸಗಳ ಕಾಲ ಬಾಡಿಗೆ ಕೊಡದೇ ಇದ್ದರೆ ಅವರು ಹೇಗೆ ಬರುತ್ತಾರೆ. ಅವರಿಗೆ ಡೀಸಲ್‌ಗಾದರೂ ಹಣ ಬೇಕಲ್ಲ. ಅದನ್ನು ತಿಳಿದುಕೊಂಡು ಎರಡು ದಿವಸಗಳಲ್ಲಿ ಅವರಿಗೆ... ಕೆಳಮಟ್ಟದಲ್ಲಿ ವಿಕೇಂದ್ರೀಕರಣ ಮಾಡಿ ಜಿಲ್ಲಾಧಿಕಾರಿಗಳಿಂದ ತಹಸೀಲ್ದಾರರಿಗೆ ಅಧಿಕಾರ ವನ್ನು ಕೊಡಿ, ತಹಸೀಲ್ದಾರರಿಂದ ರೆವಿನ್ಯೂ ಇನ್ಸ್‌ಪೆಕ್ಟರ್ ಅಥವಾ ಇನ್ಯಾರು ಇರುತ್ತಾರೆಯೋ ಅವರಿಗೆ ಅಧಿಕಾರವನ್ನು ಕೊಟ್ಟು ತಕ್ಷಣವೇ ನೀರು ಪೂರೈಕೆ ಮಡತಕ್ಕಂಥಾದ್ದಕ್ಕೆ ವ್ಯವಸ್ಥೆ ಮಾಡಿ, ಕನಿಷ್ಟ 5–6 ದಿವಸಗಳಿಗೊಮ್ಮೆ ಅಥವಾ ವಾರಕ್ಕೊಮ್ಮೆ ಆದರೂ ಹಣ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ, ಇಷ್ಟನ್ನು ಹೇಳಿ ಸರ್ಕಾರ ಇನ್ನು ಹೆಚ್ಚು ಶ್ರದ್ಧೆಯಿಂದ ಕೆಲಸ ಮಾಡಲಿ ಎಂದು ತಮ್ಮ ಮೂಲಕ ನಾನು ವಿನಂತಿಸುತ್ತೇನೆ.

**ಉಪ ಸಭಾಪತಿಯವರು:–** ಈಗ ಸಮಯ ಮಧ್ಯಾಹ್ನ 2 ಗಂಟೆ ಯಾಗಿದೆ. ಬಿಎಸಿ ಸಭೆಯು ಸಹ ಇದೆ. ಶ್ರೀ ಸುದರ್ಶನ್, ಶ್ರೀ ವೆಂಕಟೇಶ್ ರವರು, ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿಯವರು, ಶ್ರೀ ಅಲ್ಲಮ ಪ್ರಭುಪಾಟೀಲ್‌ರವರು, ಶ್ರೀ ಮೋಹನ ಲಿಂಬೀಕಾಯಿಯವರು, ಶ್ರೀ ಕೋಟಾ ಶ್ರೀನಿವಾಸ ಪೂಜಾರಿ ಮುಂತಾದವರು ಈ ವಿಚಾರವಾಗಿ ಮಾತನಾಡ ಬೇಕೆಂದು ಬರೆದು ಕಳುಹಿಸಿದ್ದಾರೆ. ಆದ್ದರಿಂದ ಬೋಜನ ವಿರಾಮವನ್ನು ನೀಡಿ ನಂತರ 3.30ಕ್ಕೆ ನಾವು ಸದನವನ್ನು ಪ್ರಾರಂಭ ಮಾಡೋಣ.

**ಶ್ರೀ ವಿ.ಆರ್.ಸುದರ್ಶನ್:–** ಮಾನ್ಯ ಸಭಾಪತಿಯವರೇ, ಭೋಜನ ವಿರಾಮಕ್ಕಾಗಿ ಒಂದು ಗಂಟೆ ಕಾಲ ಸಾಕು. ಒಂದೂವರೆ ಗಂಟೆ ಕಾಲ ಏಕೆ ಬೇಕು ಹೇಳಿ.

**ಉಪ ಸಭಾಪತಿಯವರು:–** ಬಿಎಸಿ ಸಭೆ ಇದೆ.

**ಶ್ರೀ ವಿ.ಆರ್.ಸುದರ್ಶನ್:–** ಮಾನ್ಯ ಸಭಾಪತಿಯವರೇ, ದಿನವೂ ಹೀಗೆ ಆಗುತ್ತದೆ. ಹೀಗಾದೆ ಚರ್ಚೆ ಮಾಡುವುದು ಯಾವಾಗ ಹೇಳಿ. ಭೋಜನ ವಿರಾಮಕ್ಕಾಗಿ ಒಂದೂವರೆ ಗಂಟೆ ಕಾಲ ಕೊಟ್ಟರೆ ಹೇಗೆ?

ಇದನ್ನು reconsider ಮಾಡಿ. ಮಧ್ಯಾಹ್ನ 2 ಗಂಟೆ ಕಾಲ ಭೋಜನ ವಿರಾಮ ಆಗುತ್ತಿದೆ.

**ಉಪ ಸಭಾಪತಿಯವರು:–** ಮಾನ್ಯ ಸುದರ್ಶನ್‌ರವರೆ, ನಾವು ಸದನವನ್ನು 3 ಗಂಟೆ 30 ನಿಮಿಷಕ್ಕೆ ಸರಿಯಾಗಿ ಪ್ರಾರಂಭ ಮಾಡಿ ಇದೇ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ. ಈಗ ಸದನವನ್ನು ಮಧ್ಯಾಹ್ನ 3 ಗಂಟೆ 30 ನಿಮಿಷಗಳವರೆವಿಗೂ ಮುಂದೂಡಲಾಗಿದೆ.

(02 ಗಂಟೆ 04 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ 03 ಗಂಟೆ 45 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದ್ದರು)

**ಶ್ರೀ ವಿ. ಆರ್. ಸುದರ್ಶನ (ವಿಧಾನಸಭಾ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ನಿಯಮ 68ರ ಅಡಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ನಾವೆಲ್ಲರೂ ಕೂಡ ರಾಜ್ಯದ ಬರಗಾಲ ಸ್ಥಿತಿಗತಿಗಳ ಬಗ್ಗೆ ಚರ್ಚೆ ಮಾಡುವುದಕೋಸ್ಕರ ವಿಷಯವನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ನಾನು ಚರ್ಚೆಯಲ್ಲಿ ಭಾಗವಹಿಸಿ ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ತಮಗೂ ಕೂಡ ವಂದನೆಗಳನ್ನು ಹೇಳುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ನಾವೆಲ್ಲಾ ಒತ್ತಾಯ ಮಾಡಿದ ಮೇಲೆ ದಿನಾಂಕ 4–10–2011ರಲ್ಲಿ 21 ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿದರು. ದಿನಾಂಕ : 7–10–2011ರಲ್ಲಿ 9 ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿದರು. ದಿನಾಂಕ : 15–10–2011ರಲ್ಲಿ 6 ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿದರು. ದಿನಾಂಕ : 8–11–2011ರಂದು ಮತ್ತೆ 7 ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿದರು. ದಿನಾಂಕ : 1–2–2012ರಂದು 10 ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿದರು.

ಹೀಗೆ ಒಟ್ಟು 176 ತಾಲ್ಲೂಕುಗಳಲ್ಲಿ 123 ತಾಲ್ಲೂಕುಗಳನ್ನು ಇವತ್ತು ಬರಗಾಲ ಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿದ್ದಾರೆ. ಕರ್ನಾಟಕದ ಜನರು ನಂಬಿಕೊಂಡಿರುವಂಥದ್ದೇ ಸೌತ್-ವೆಸ್ಟ್ ಮಾನ್‌ಸೂನ್ ಮತ್ತು ನಾರ್ಥ-ಈಸ್ಟ್ ಮನ್‌ಸೂನ್. ಇವೆರಡು ಮಳೆಗಳು ವಿಫಲವಾದ ಮೇಲೆ ಇವತ್ತು ಆತಂಕದ ಸ್ಥಿತಿಯಲ್ಲಿ ಜನರಿದ್ದಾರೆ. ಜಾನುವಾರುಗಳಿವೆ. ವಿಶೇಷವಾಗಿ ರೈತರು, ಗ್ರಾಮೀಣ ಪ್ರದೇಶದ ಜನರಿದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ಸರ್ಕಾರ ತನ್ನ ಜವಾಬ್ದಾರಿಯನ್ನು ಹೇಗೆ ಮಾಡಿದೆ, ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಹೇಗೆ ನಿರ್ವಹಿಸಿದ್ಧಾರೆ, ಜನರ ಸಂಕಷ್ಟದಲ್ಲಿ ಒಂದು ಸರ್ಕಾರ, ಏಕೆಂದರೆ ಸರ್ಕಾರ ಸಮಾಧಾನವಾಗಿರುವಾಗ ಸರ್ಕಾರ ತನ್ನ ಪಾಡಿಗೆ ತಾನು ನಡೆದುಕೊಂಡು ಹೋಗುವುದು ಬೇರೆ. ಆದರೆ, ನಿಜವಾದ ಜನಪರವಾದಂತಹ ಒಂದು ಸರ್ಕಾರ ಜನರು ಸಂಕಷ್ಟದಲ್ಲಿದ್ದಂತಹ ಸಂದರ್ಭದಲ್ಲಿ ಜನರ ನೆರವಿಗೆ ಹೇಗೆ ಹೋಗುತ್ತದೆ, ಹೇಗೆ ಆಡಳಿತ ಮಾಡುತ್ತದೆ, ಹೇಗೆ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳುತ್ತದೆ ಎಂಬುದು ಮುಖ್ಯವಾಗುತ್ತದೆ. ಮಾನ್ಯ ಜಗದೀಶ್ ಶೆಟ್ಟರ್‌ರವರೇ, ತಾವು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದಂಥವರು. ತಾವು ಸಭಾಧ್ಯಕ್ಷರಾಗಿ ಕೆಲಸ ಮಾಡಿದಂಥವರು. ಇವತ್ತು ಹಿರಿಯ ಸಚಿವರೂ ಕೂಡ ಆಗಿದ್ದೀರಿ. ತಾವು ಮುಖ್ಯಮಂತ್ರಿಯ ಮೆಟೀರಿಯಲ್ ಕೂಡ ಆಗಿದ್ದೀರಿ. ಇದನ್ನು ನಾನು ರಾಜಕೀಯ ಕಾರಣಕ್ಕೋಸ್ಕರ ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ತಾವು ಗ್ರಾಮೀಣ ಅಭಿವೃದ್ಧಿ ಸಚಿವರಾಗಿರುವಂತಹ ಸಂದರ್ಭದಲ್ಲಿ ಗ್ರಾಮೀಣ ಜನರು ಆತಂಕಕ್ಕೆ ಒಳಪಟ್ಟಿರುವಂತಹ ಸಂದರ್ಭದಲ್ಲಿ 123 ತಾಲ್ಲೂಕುಗಳು ಬರಗಾಲ ಪೀಡಿತ ಪ್ರದೇಶಗಳಾಗಿವೆ. ಬರಗಾಲವನ್ನು ಕೂಡ ಅಸೆಸ್ ಮಾಡುವುದಕ್ಕೆ, ಪೀಸ್ ಪೀಸ್ ಆಗಿ ಡಿಕ್ಲೇರ್ ಮಾಡುತ್ತಿದ್ದಾರೆ. ಅಕ್ಟೋಬರ್‌ನಿಂದ ಹಿಡಿದು ಮೊನ್ನೆಯವರಿಗೂ ಕೂಡ ಡಿಕ್ಲೇರ್ ಮಾಡುತ್ತಾ ಹೋಗುತ್ತಿದ್ದಾರೆ. ಅಕ್ಟೋಬರ್‌ನಿಂದ ಹಿಡಿದು ಮೊನ್ನೆಯವರಿಗೂ ಕೂಡ ಡಿಕ್ಲೇರ್ ಮಾಡುತ್ತಾ ಹೋಗುತ್ತಿದ್ದಾರೆ. ಇದಕ್ಕೇನು ಮಹತ್ವ ಇಲ್ಲವೇ? ಸರ್ಕಾರಕ್ಕೆ ಅನುಭವದ ಕೊರತೆ ಇದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಏಕೆಂದರೆ, ಈಗಾಗಲೇ 2006 ರಿಂದ ನಿರಂತರವಾಗಿ ಈ ರಾಜ್ಯದಲ್ಲಿ ಅಧಿಕಾರವನ್ನು ಮಾಡಿಕೊಂಡು

ಬರುತ್ತಿದ್ದಾರೆ. ಹೀಗಾಗಿ ಅನುಭವದ ಕೊರತೆ ಎಂದು ನಾವು ಹೇಳುವುದಕ್ಕೆ ಬರುವುದಿಲ್ಲ. ಎಲ್ಲೋ ಒಂದು ಕಡೆ ದೂರದೃಷ್ಟಿ ಮತ್ತು ಜವಾಬ್ದಾರಿಯ ಕೊರತೆ ಸರ್ಕಾರದಲ್ಲಿ ಕಾಣುತ್ತಿದೆ. ದೂರದೃಷ್ಟಿ ಮತ್ತು ಮಾಡಬೇಕಾಗಿರುವ ಜವಾಬ್ದಾರಿಯ ಕೊರತೆ ಇವತ್ತು ಕಾಣುತ್ತಿದೆ. ಇದನ್ನು ಹೇಗೆ ಸರಿದೂಗಿಸುವುದು? ಇದನ್ನು ಯಾರು ಸರಿದೂಗಿಸಬೇಕಾಗುತ್ತದೆ. ಒಂದು ಬರಗಾಲ ಎಂದು ಹೇಳಿದರೆ ಅದರಿಂದ ಅಗುವಂತಹ ಅನಾನುಕೂಲಗಳೇನು? ಯಾವ ಯಾವ ಕ್ಷೇತ್ರಗಳಲ್ಲಿ ಎಷ್ಟೆಷ್ಟು ತೊಂದರೆಗಳಾಗುತ್ತವೆ? ಇವತ್ತು ಸರ್ಕಾರ ಬಜೆಟ್‌ನ್ನು ಮಂಡಿಸಿದೆ. ಬಜೆಟ್‌ನಲ್ಲಿ ಇದರ ಪರಿಣಾಮ ಏನಗಿದೆ? Agricultural progress has come down. ಬರಗಾಲದ ಕಾರಣಕ್ಕಾಗಿ ಮತ್ತು ಆಡಳಿತವನ್ನು ಸರಿಯಾಗಿ ನಡೆಸದಿದ್ದ ಕಾರಣಕ್ಕಾಗಿ ಇವತ್ತು ವ್ಯವಸಾಯದ ಕ್ಷೇತ್ರ ಕುಂಠಿತವಾಗಿದೆ. ಸರ್ಕಾರವೇ ಒಪ್ಪಿಕೊಂಡಿದೆ. ಕರ್ನಾಟಕದಲ್ಲಿ ಬರಗಾಲ ನೀವು ಬಂದ ಮೇಲೆ ಬಂದಿದೆ ಎಂದು ನಾವು ಕೇಳಬಹುದು. ನೀವು ಬಂದಿದ್ದರಿಂದ ಬರಗಾಲ ಬಂದಿದೆ ಅಥವಾ ನೀವು ಇದ್ದಾಗ ಮತ್ರ ಬರಗಾಲ ಬಂದಿದೆ ಎನ್ನುವಂಥದ್ದಲ್ಲ. ಅನೇಕ ಸಂದರ್ಭಗಳಲ್ಲಿ ಕರ್ನಾಟಕದಲ್ಲಿ ಬರಗಾಲ ಬಂದಿದೆ. ಆದರೆ, ಯಾವ ಯಾವ ಸರ್ಕಾರಗಳು ಬರಗಲ ಬಂದಂತಹ ಸಂದರ್ಭಗಳಲ್ಲಿ ಹೇಗೆ ಬಿರುಸಾದಂತಹ ರೀತಿಯಲ್ಲಿ ಜನರ ಪರವಾದಂತಹ ರೀತಿಯಲ್ಲಿ ಆಡಳಿತವನ್ನು ಮಾಡಿದ್ದಾರೆ. ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ತಾವು ಹೇಗೆ ಮಾಡಿದ್ದೀರಿ ಎಂದು ಇವತ್ತು comparative study ಆಗಬೇಕಲ್ಲವೇ? ಕರ್ನಾಟಕದಲ್ಲಿ ಬರಗಾಲ ಹೀಗಿದೆ ಎಂದು ಹೀಗೆಯೇ ಮುಂದುವರೆದುಕೊಂಡು ಹೋಗಬೇಕೇ? ಬರಗಾಲ ನಿರಂತರವಾಗಿ ಆಗಿದ್ದಾಂಗೆ ಬರುತ್ತಿದೆ ಎಂದು ಗೊತ್ತಾದ ಮೇಲೆ ಒಂದು ದೂರದೃಷ್ಟಿ ಇರುವಂತಹ ಸರ್ಕಾರ ಏನು ಮಾಡಬೇಕೇ? ಒಂದು short term measures ಏನು ತೆಗೆದುಕೊಳ್ಳಬೇಕು. medium term measures ಏನು ತೆಗೆದುಕೊಳ್ಳಬೇಕು, ಮತ್ತು ಒಂದು long term measures ನಲ್ಲಿ ಸರ್ಕಾರವಾಗಿ ನಾವೇನು ಮಾಡಬೇಕಾಗುತ್ತದೆ ಎಂಬುದನ್ನು ಆಲೋಚನೆ ಮಾಡಬೇಕಲ್ಲವೇ? ಏನಾದರೂ ನಮ್ಮ ಪ್ರಯತ್ನಗಳು ಈ ಆರು ತಿಂಗಳಿನಲ್ಲಿ

ಆಗಬೇಕಾಗಿತ್ತಲ್ಲವೇ? 2600 ಬೋರ್‌ವೆಲ್‌ಗಳನ್ನು ಕೊರೆಸಿದ್ದೇವೆ, 3500 ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಿ ಸರಿ ಮಾಡಿಸಿದ್ದೇವೆಂದು ನೀವೇ ಹೇಳಿದ್ದೀರಿ. ಇದಿಷ್ಟು ಮಾಡಿದರೆ ಸಾಕೇ? ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಅದೊಂದು short term ಪ್ರಯತ್ನವಾಗುತ್ತದೆ. ಸರ್ಕಾರ ಇಲ್ಲದಿದ್ದರೂ ಕೂಡ ಅಧಿಕಾರಿಗಳು ತಮ್ಮ ಪಾಡಿಗೆ ತಾವು ಬೋರ್‌ವೆಲ್ ಕೊರೆಸುವ ಕೆಲಸವನ್ನು ಮಾಡಿಕೊಂಡು ಹೋಗುತ್ತಾರೆ. ಏಕೆಂದರೆ, ಅಲ್ಲಿನ PHC ಯವರಿಗೆ ಅದರಿಂದ ಹಣ ಸಿಗುತ್ತದೆ. ಇಷ್ಟು ಬೋರ್‌ವೆಲ್‌ಗಳನ್ನು ಕೊರೆದರೆ ಅಷ್ಟು ಹಣ ಅವರಿಗೆ ಸಿಗುತ್ತದೆ. ನೂರು ಅಡಿ ಕೊರೆದಿದ್ದರೆ 200 ಅಡಿ ಎಂದು ಬರೆದುಕೊಳ್ಳುತ್ತಿದ್ದಾರೆ. ಅದನ್ನು ಯಾರಾದರೂ ನೋಡುತ್ತಿದ್ದೇವೆಯೇ? ಅದಕ್ಕೆ ಏನಾದರೂ ಲೆಕ್ಕ ಇದೆಯೇ? ಇದರ ಪರಿಣಾಮ ಏನಗಿದೆ? ಇವತ್ತು ground water ನ ಪರಿಸ್ಥಿತಿ ಏನಾಗಿದೆ, reservoir ಗಳ ಪರಿಸ್ಥಿತಿ ಏನಗಿದೆ? ಇದು ಒಂದು ಕಡೆಯಾಗುತ್ತದೆ. ಮತ್ತೊಂದು ಕಡೆ ಕುಡಿಯುವ ನೀರಿನ ಸಮಸ್ಯೆಯಾಗುತ್ತದೆ. ಇವತ್ತು ಜನರ ಉದ್ಯೋಗದ ಸಮಸ್ಯೆಗಳೇನಿದೆ. ನಿಮ್ಮ ಭಾಗದಿಂದ ನಮ್ಮ ಕರ್ನಾಟಕದ ಜನರು ಗೋವಾಗೆ ಗುಳೇ ಹೋಗಿ ದುಡಿದುಕೊಂಡು ಇದ್ದರೆ, ಮಹಾರಾಷ್ಟ್ರದ ಮುಂಬೈನಲ್ಲಿ ನಮ್ಮ ಭಾಗದ ಜನರು ಉದ್ಯೋಗಕೋಸ್ಕರ ಬೀದಿ ಬೀದಿಯಲ್ಲಿ ಅಲೆಯುತ್ತಿದ್ದರೆ ಇದು ಕರ್ನಾಟಕದ ಸ್ವಾಭಿಮಾನದ ಪ್ರಶ್ನೆಯಲ್ಲವೆ, ಸಮೃದ್ಧ ಕರ್ನಾಟಕ ನಿರ್ಮಾಣ ಮಾಡುವ ಕನಸು ಇದಾಗುತ್ತದೆಯೇ? ನಮ್ಮ ರಾಜ್ಯದ ಜನರು ಇನ್ನೊಂದು ರಾಜ್ಯಕ್ಕೆ ಗುಳೇ ಹೋಗದಿರುವಂತಹ ರೀತಿಯಲ್ಲಿ ಅವರಿಗೆ ಇಲ್ಲೇ ಉದ್ಯೋಗಗಳನ್ನು ಸೃಷ್ಟಿ ಮಾಡಿಕೊಡುವಂತಹ ರೀತಿಯಲ್ಲಿ ಮಾಡಬೇಕಾಗಿರುವಂತಹ ಬಹಳ ದೊಡ್ಡ ಜವಾಬ್ದಾರಿ ಯಾರದ್ದು? ಸರ್ಕಾರದಲ್ಲವೇ? ಅದಕ್ಕೆ ನೀವು ಯೋಜನೆಗಳನ್ನು ಹಾಕಿಕೊಳ್ಳುವುದಿಲ್ಲ? ಕೇಂದ್ರ ಸರ್ಕಾರದ ಕಾರ್ಯಕ್ರಮಗಳನ್ನು ಕೊಟ್ಟರೆ ಅದನ್ನೂ ಕೂಡ ಸಮರ್ಪಕವಾಗಿ ಜನರಿಗೆ ತರುವುದಿಲ್ಲವೆಂದರೆ ನಿಮ್ಮ ಇಚ್ಛಾಶಕ್ತಿ ಏನು, ನಿಮ್ಮ ಆದ್ಯತೆ ಯಾವುದು? ನಿಮ್ಮ ಆದ್ಯತೆ ಯಾವುದೆಂದರೆ, ಭ್ರಷ್ಟಾಚಾರದ ಹಗರಣಗಳು, ರಾಜಕೀಯದ ಗೊಂದಲಗಳು, ಇದೇ ನಿಮ್ಮ ಆದ್ಯತೆಗಳಾಗಿಬಿಟ್ಟಿದೆ. ಈ ರಾಜಕೀಯದ ಗೊಂದಲಗಳನ್ನು

ನೋಡಿಕೊಂಡಿರುವುದರಿಂದ ಜನರಿಗೆ ಸಮಾಧಾನ ಸಿಗುತ್ತದೆಯೇ? ಜನರಿಗೆ ಹಸಿವು ಹೋಗುತ್ತದೆಯೇ? ಅವರ ಸ್ಥಿತಿ ಏನಾಗಬೇಕು? ಅವರ ಸ್ಥಿತಿಗಳನ್ನು ಸುಧಾರಿಸುವವರು ಯಾರು? ನಿಮ್ಮ ಗೊಂದಲಗಳ ಪರಿಣಾಮ, ಭ್ರಷ್ಟಾಚಾರ ಹಗರಣಗಳ ಪರಿಣಾಮ ಏನಾಗಿದೆ ಎಂದರೆ ಇವತ್ತು ಆಡಳಿತದ ಮೇಲೆ ದುಷ್ಪರಿಣಾಮ ಬಿದ್ದಿದೆ. ಅದರ ದುಷ್ಪರಿಣಾಮ ಇವತ್ತು ಅಭಿವೃದ್ಧಿ ಕೆಲಸಗಳು ಸ್ಥಗಿತವಾಗಿವೆ. ಇವತ್ತು ಈ ರಾಜ್ಯದಲ್ಲಿ ಆಡಳಿತದ ಅಭಿವೃದ್ಧಿ ಕುಸಿದು ಬಿದ್ದಿದೆ. ಹೆಸರಿಗೋಸ್ಕರ ಒಂದು ಸರ್ಕಾರವಾಗಿ ನೀವು ಉಳಿದುಕೊಂಡಿದ್ದೀರಿ. ಇವತ್ತು ಇಂತಹ ಪರಿಸ್ಥಿತಿ ಕರ್ನಾಟಕಕ್ಕೆ ಬೇಕೇ? ಇವತ್ತು ನೈತಿಕ ಜವಾಬ್ದಾರಿಯ ಪ್ರಶ್ನೆ ಬರುವುದಿಲ್ಲವೇ? ಇವತ್ತು ವಿದ್ಯುತ್ತಿನ ಸಮಸ್ಯೆ ಇದೆ. ಬರಗಾಲದ ಸಮಸ್ಯೆ ಇದೆ. ಬರಗಾಲದ ಸಮಸ್ಯೆಯಿಂದ ಏನು ದುಷ್ಪರಿಣಾಮಗಳಾಗುತ್ತವೆ? ಇವತ್ತು ನರೇಗಾ ಕಾರ್ಯಕ್ರಮ ಮಹತ್ಮಗಾಂಧಿಯವರ ಹೆಸರಿನಲ್ಲಿರುವಂತಹ ಒಂದು progressive and revolutionary programme of the Union Government. ಕರ್ನಾಟಕಕ್ಕೆ 2006 ರಿಂದ ಇವತ್ತಿನವರೆಗೆ ಕೊಟ್ಟಂತಹ ಹಣ ಎಷ್ಟು? ಇದರ ಉದ್ದೇಶ ಏನು? To generate employment and to create asset. ಎಷ್ಟು ಅಸೆಟ್ಸ್‌ನ್ನು ಮೂಲಭೂತ ಅವಶ್ಯಕತೆಗಳನ್ನು, ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಮನಸ್ಸು ಮಾಡಿದರೆ ಪ್ರತಿ ಹಳ್ಳಿಗಳನ್ನು ಬಂಗಾರ ಮಾಡಿಕೊಳ್ಳಬಹುದಲ್ಲವೆ? ಈ ಕಾರ್ಯಕ್ರಮವನ್ನು ಸದುಪಯೋಗ ಮಾಡಿಕೊಂಡರೆ ಪ್ರತಿ ಹಳ್ಳಿಯಲ್ಲೂ ಬೇಕಾದಂತಹ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಕಾರ್ಯಕ್ರಮ ಎಷ್ಟರಮಟ್ಟಿಗೆ ಅನುಷ್ಠಾನವಾಗಿದೆ? ನಾನು ತಮ್ಮ ಗಮನಕ್ಕೆ ತರುತ್ತೇನೆ. 2006-07ರಲ್ಲಿ Budget provision ಇದ್ದದ್ದು 3,04,133.46 ಲಕ್ಷ ರೂಪಾಯಿಗಳು. ನಿಮ್ಮ expenditure ಎಷ್ಟು ಎಂದರೆ, 2,05,189.70 ಲಕ್ಷ ರೂಪಾಯಿಗಳು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗದೇ ಇದ್ದದ್ದು, ಎಷ್ಟು ಎಂದರೆ, 8,943.76 ಲಕ್ಷ ರೂಪಾಯಿಗಳು. ಹಾಗೆಯೇ 2007-08 ರಲ್ಲಿ 4,01,925.47 ಲಕ್ಷ ರೂಪಾಯಿಗಳು. Total expenditure ನಿಮ್ಮ ಮಾಡುವುದಕ್ಕೆ ಸಾಧ್ಯವಾಗಿರುವುದು 2,03,669.49 ಲಕ್ಷ ರೂಪಾಯಿಗಳು ಉಪಯೋಗ

ಮಾಡಿಕೊಳ್ಳುವುದಕ್ಕೆ ಆಗದೇ ಇದ್ದದ್ದು ಎಷ್ಟು ಎಂದರೆ, 1,08,255.98 ಲಕ್ಷ ರೂಪಾಯಿಗಳು. 2008–09 ರಲ್ಲಿ 6,06,776.67 ಲಕ್ಷ ರೂಪಾಯಿಗಳು. Total expenditure 3,05,787.45 ಲಕ್ಷ ರೂಪಾಯಿಗಳು. ಉಪಯೋಗ ಮಾಡಿಕೊಳ್ಳುವುದಕ್ಕೆ ಆಗದೇ ಇದ್ದದ್ದು ಎಷ್ಟು ಎಂದರೆ, 3,00,989.22 ಲಕ್ಷ ರೂಪಾಯಿಗಳು. 2009–10 ರಲ್ಲಿ 3,03,880.17 ಲಕ್ಷ ರೂಪಾಯಿಗಳು. ಉಪಯೋಗ ಮಾಡಿಕೊಳ್ಳುವುದಕ್ಕೆ ಆಗದೇ ಇದ್ದದ್ದು ಎಷ್ಟು ಎಂದರೆ 8,02,186.99 ಲಕ್ಷ ರೂಪಾಯಿಗಳು. 2010–11 ರಲ್ಲಿ 3,03,517.71 ಲಕ್ಷ ರೂಪಾಯಿಗಳು. ಉಪಯೋಗ ಮಾಡಿಕೊಳ್ಳುವುದಕ್ಕೆ ಆಗದೇ ಇದ್ದದ್ದು, 1,44,916.84 ಲಕ್ಷ ರೂಪಾಯಿಗಳು. ಅಂದರೆ, ಉಪಯೋಗ ಮಾಡಿಕೊಳ್ಳದೇ ಇರುವಂಥದ್ದು 2010–11 ರಲ್ಲಿ ಶೇಕಡ 43.85 ಲಕ್ಷ ರೂಪಾಯಿಗಳು. 2011–12 ರಲ್ಲಿ 1,90,304.00 ಲಕ್ಷ ರೂಪಾಯಿಗಳು. Total expenditure 1,43,078.89 ಲಕ್ಷ ರೂಪಾಯಿಗಳು. ಉಪಯೋಗ ಮಾಡಿಕೊಳ್ಳದೇ ಇರುವಂಥದ್ದು 47,225.11 ಲಕ್ಷ ರೂಪಾಯಿಗಳು. ಅಂದರೆ, ಶೇಕಡ 24.82 ಲಕ್ಷ ರೂಪಾಯಿಗಳು ಉಪಯೋಗ ಮಾಡಿಕೊಳ್ಳುವುದಕ್ಕಾಗಲಿಲ್ಲ.

**ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರದ ಕಡೆಯಲ್ಲಿರುವ ರಿಪೋರ್ಟ್‌ನ್ನು ಅವರಿಗೆ ಹೇಳುತ್ತೇನೆ. ದಾಖಲೆಗೆ ತಪ್ಪು ಮಾಹಿತಿ ಹೋಗಬಾರದೆಂದು ಹೇಳುತ್ತಿದ್ದೇನೆ. 2008–09 ರಲ್ಲಿ ಒಟ್ಟು ನಮಗೆ total available fund 440 ಕೋಟಿ ರೂಪಾಯಿಗಳು. ಅದರಲ್ಲಿ ಭಾರತ ಸರ್ಕಾರದ್ದು 398 ಕೋಟಿ ರೂಪಾಯಿಗಳು. ನಮ್ಮ ಸರ್ಕಾರದ್ದು 42 ಕೋಟಿ ರೂಪಾಯಿಗಳು. ಆಗ ಎಕ್ಸ್‌ಪೆಂಡಿಂಚರ್ ಆಗಿದ್ದು 374 ಕೋಟಿ ರೂಪಾಯಿಗಳು. 2009–10 ರಲ್ಲಿ ಭಾರತ ಸರ್ಕಾರದಿಂದ ಬಂದಿದ್ದು 2407 ಕೋಟಿ ರೂಪಾಯಿಗಳು. ನಮ್ಮ ಸರ್ಕಾರದ್ದು 252 ಕೋಟಿ ರೂಪಾಯಿಗಳು. ಆ ಸಂದರ್ಭದಲ್ಲಿ total available fund 2659 ಕೋಟಿ ರೂಪಾಯಿಗಳು. ನಾವು ಖರ್ಚು ಮಾಡಿರುವುದು 2216 ಕೋಟಿ ರೂಪಾಯಿಗಳು.

**ಶ್ರೀ ವಿ.ಆರ್. ಸುದರ್ಶನ್:-** ಈ ಐದು ವರ್ಷದಲ್ಲಿ ಒಟ್ಟು ಹಣ ಎಷ್ಟು?

**ಶ್ರೀ ಜಗದೀಶ್ ಶೆಟ್ಟರ್:-** ಅದನ್ನು ನಾನು ನಿಮಗೆ ಹೇಳುತ್ತೇನೆ. 2010-11 ರಲ್ಲಿ 194 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದ್ದು, ನಮ್ಮ ಸರ್ಕಾರದ್ದು 143 ಕೋಟಿ ರೂಪಾಯಿಗಳು. ಆಗ total available fund 2085 ಕೋಟಿ ರೂಪಾಯಿಗಳು. ನಾವು ಖರ್ಚು ಮಾಡಿರುವುದು 1860 ಕೋಟಿ ರೂಪಾಯಿಗಳು. 2011-12ನೇ ಸಾಲಿನಲ್ಲಿ ನಮಗೆ ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ ಬಂದಿರುವುದು 662 ಕೋಟಿ ರೂಪಾಯಿಗಳು. ನಮ್ಮ ಸರ್ಕಾರದ್ದು 159 ಕೊಟಿ ರೂಪಾಯಿಗಳು. total available fund 821 ಕೋಟಿ ರೂಪಾಯಿಗಳು. ನಾವು ಇಲ್ಲಿಯವರೆಗೆ ಖರ್ಚು ಮಾಡಿರುವುದು 1780 ಕೋಟಿ ರೂಪಾಯಿಗಳು. ಎಲ್ಲಿಯವರೆಗೆ ಎಂದರೆ, ಮೊನ್ನೆ ಮಾರ್ಚ್ 26ನೇ ತಾರೀಖಿನವರೆಗೆ 1780 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. Available fund 821 ಕೋಟಿ ರೂಪಾಯಿಗಳು ಮಾತ್ರ. ನಮಗೆ ಇನ್ನೂ ಕೇಂದ್ರ ಸರ್ಕಾರದಿಂದ 400 ಕೋಟಿ ರೂಪಾಯಿಗಳು ತಕ್ಷಣ ಬೇಕಾಗಿದೆ. 400 ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಿ ಎಂದು ನಾವು ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ಇನ್ನೂ ಬಿಡುಗಡೆಯಾಗುತ್ತಿಲ್ಲ. ಹೀಗಾಗಿ ಅದು ಒಂದು ಪ್ರಯತ್ನ ನಡೆಯುತ್ತಿದೆ. ಮಾನ್ಯ ಸುದರ್ಶನ್‌ರವರು ಹೇಳಿದ ಹಾಗೆ ಉದ್ಯೋಗ ಖಾತ್ರಿ ಯೋಜನೆ ಬಹಳ ಉತ್ತಮವಾದಂತಹ ಯೋಜನೆ ಆಗಿದೆ. ನಮ್ಮ ಗ್ರಾಮೀಣ ಭಾಗದಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಆದರೆ ಮೂಲ ಉದ್ದೇಶ ಏನು ಇದೆ ಅದು ಬಹಳ ಮುಖ್ಯವಾದದ್ದಾಗಿದೆ. ಉದಾಹರಣೆಗೆ ಹೇಳುವುದಾದರೆ, ಈ ರಸ್ತೆ ಕಾಮಗಾರಿಯನ್ನು ಒಂದು ವರ್ಷದಲ್ಲಿ ಮುಗಿಸಬೇಕು. ಕುಡಿಯುವ ನೀರಿನ ಕಾಮಗಾರಿಯನ್ನು ಒಂದು ವರ್ಷದಲ್ಲಿ ಮುಗಿಸಬೇಕೆಂದು ಆ ಸಮಯದಲ್ಲಿ ಇಷ್ಟು ಹಣವನ್ನು ಖರ್ಚು ಮಾಡಲೇಬೇಕು ಎಂದು ಏನು ಹೇಳುತ್ತೇವೆ ಇದು ಆ ರೀತಿ ಟೈಂ ಬೌಂಡ್ ಪ್ರಾಜೆಕ್ಟ್ ಏನೂ ಅಲ್ಲ. ಗ್ರಾಮೀಣ ಜನರಿಗೆ

ಉದ್ಯೋಗಾವಕಾಶವನ್ನು ಕೇಳಿಕೊಂಡು ಬರುತ್ತಾರೆ ಅವರಿಗೆ ಉದ್ಯೋಗಾವಕಾಶವನ್ನು ಕೊಡುವಂಥ ಒಂದು ಯೋಜನೆ ಇದಾಗಿದೆ. ಇವತ್ತು ಕೇಂದ್ರ ಸಚಿವರಾದ ಮಾನ್ಯ ಜಯರಾಂ ರಮೇಶ್ ಅವರು 155 ರೂಪಾಯಿ ಕೂಲಿಯನ್ನು ಕೊಡುವ ಬಗ್ಗೆ ಒಂದು ಘೋಷಣೆಯನ್ನು ಮಾಡಿದ್ದಾರೆ. ಇದರಿಂದಾಗಿ ಹೆಚ್ಚು ಜನರು ಕೂಲಿಗೆ ಬರುವುದಕ್ಕೆ ಸಾಧ್ಯವಿದೆ. ಯಾರು ಉದ್ಯೋಗವನ್ನು ಕೇಳಿಕೊಂಡು ಬರುತ್ತಾರ ಅವರಿಗೆ ಉದ್ಯೋಗಾವಕಾಶ ಸಿಗುತ್ತದೆ. ಇದು ಬಹಳ ಮುಖ್ಯವಾದ ಉದ್ದೇಶವಾಗಿದೆ. ಅದರ ಜೊತೆಗೆ ನಾವು ಇನ್‌ಫ್ರಾಸ್ಟ್ರಕ್ಚರ್ ಅನ್ನು ಕ್ರಿಯೇಟ್ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಈ ಒಂದು ಪ್ರಯತ್ನ ನಡೆಯುತ್ತಿದೆ. ಕೇಂದ್ರ ಸರ್ಕಾರದ ಒಂದು ಗೈಡ್‌ಲೈನ್ಸ್ ಇದೆ. ಅದರೊಳಗೆ ನಾವು ಕೆಲಸವನ್ನು ಮಾಡಬೇಕಾಗಿದೆ. ಅದನ್ನು ಮೀರಿ ಮಾಡುವುದಕ್ಕಾಗುವುದಿಲ್ಲ. ಬಹಳಷ್ಟು ಕಡೆಗಳಲ್ಲಿ ಸರ್ಕಾರಿ ಶಾಲೆಗಳಿಗೆ ಕಾಂಪೌಂಡ್ ಗೋಡೆ ಇರಲಿಲ್ಲ. ಇವತ್ತು ಬಹಳಷ್ಟು ಕಡೆಗಳಲ್ಲಿ ಈ ಕಾಂಪೌಂಡ್ ಗೋಡೆಯನ್ನು ಕಟ್ಟಿಸಿದ್ದೇವೆ. ಈ ಉದ್ಯೋಗ ಖಾತ್ರಿ ಯೋಜನೆಯಿಂದ ಕಟ್ಟಿಸಿದ್ದೇವೆ. ಯಾವಾಗ ನೀವು ಗೈಡ್‌ಲೈನ್ಸ್ ಅನ್ನು ಬಹಳ ಕಟ್ಟುನಿಟ್ಟಾಗಿ ಜಾರಿಗೆ ಕೊಡುತ್ತೀರಿ ಆಗ ಈ ಕಾಂಪೌಂಡ್ ಗೋಡೆಯನ್ನು ಆ ಹಣದಲ್ಲಿ ಕಟ್ಟಿಸುವುದಕ್ಕಾಗುವದಿಲ್ಲ. ಅಲ್ಲಿ ಪ್ರೊಟೆಕ್ಷನ್ ವಾಲ್ ಎಂದು ಕಟ್ಟಿಸುತ್ತಿದ್ದೇವೆ. ಆ ಒಂದು ವ್ಯವಸ್ಥೆಯಲ್ಲಿ ನಾವು ಈ ಒಂದು ಉದ್ಯೋಗ ಖಾತ್ರಿ ಯೋಜನೆಯ ಪ್ರೋಗ್ರೆಸ್ ಅನ್ನು ಮಾಡಬೇಕಾಗಿದೆ. ಇಲ್ಲಿಯವರೆಗೆ 1780 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಸುಮಾರು ಶೇಕಡ 80 ರಿಂದ 90 ರಷ್ಟು ಹಣವನ್ನು ಉಪಯೋಗ ಮಾಡುತ್ತಿದ್ದೇವೆ. ಇಡೀ ರಾಷ್ಟ್ರದ ಅಂಕಿಸಂಖ್ಯೆಯನ್ನು ತೆಗೆದುಕೊಂಡಾಗ ನಮ್ಮ ಸರ್ಕಾರದ ಪ್ರೋಗ್ರೆಸ್ ಏನು ಇದೆ ಅದು ನಂಬರ್ 1–2 ನೇ ಸ್ಥಾನದಲ್ಲಿ ಇದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರೆ, ಮಾನ್ಯ ಸುದರ್ಶನ್ ಅವರೇ, ಇಷ್ಟಾದರೂ ನಮಗೆ ಇನ್ನೂ ಸಮಾಧಾನವಿಲ್ಲ. ಇದನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಉಪಯೋಗ ಮಾಡುವುದಕ್ಕೆ ಸಾಧ್ಯವಿದೆ. ಈ ದಿಸೆಯಲ್ಲಿ ಜನರೂ ಮನಸ್ಸು ಮಾಡಬೇಕು. ಕೆಳ ಹಂತದ ಜನ ಪ್ರತಿನಿಧಿಗಳೂ ಮನಸ್ಸು ಮಾಡಬೇಕಾಗಿದೆ. ನಾವು ರಾಜ್ಯ ಸರ್ಕಾರ

ಮತ್ತು ಕೇಂದ್ರ ಸರ್ಕಾರದ ವತಿಯಿಂದ ಗೈಡ್‌ಲೈನ್ಸ್ ಅನ್ನು ಇಷ್ಯೂ ಮಾಡುತ್ತೇವೆ. ಇದನ್ನು ಮಾಡಿ ಎಂದು ಹೇಳುತ್ತೇವೆ. ಆ ಆದರೆ ಇದರ ಉಪಯೋಗ ತೆಗೆದುಕೊಂಡು ಆ ಜನಗಳೀಗೆ ಈ ಯೋಜನೆಯ ಫಲ ಸಿಗುವಂತಾಗಬೇಕು. ಅಂತಹ ಒಂದು ಅವೇರ್‌ನೆಸ್ ಅನ್ನು ಕ್ರಿಯೇಟ್ ಮಾಡುವ ದಿಸೆಯಲ್ಲಿ ಸಾಕಷ್ಟು ಪ್ರಯತ್ನಗಳು ನಡೆಯುತ್ತಿವೆ. ಇನ್ನು ಮೊದಲು ಅಂದರೆ ಕಳೆದ 5–10 ವರ್ಷಗಳಲ್ಲಿ ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ, ಗುಳೆ ಹೋಗುವಂಥಾದ್ದು ಬಹಳ ಇತ್ತು. ಈಗ ಈ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ಬಂದ ಮೇಲೆ ಈ ಗುಳೆ ಹೋಗುವುದು ಸ್ವಲ್ಪ ಕಡಿಮೆಯಾಗಿದೆ. ಅಂಕಿ ಅಂಶವನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ಅಷ್ಟಾದರೂ ಕೂಡ ಕೆಲವರು ಬೇರೆ ಕಡೆಯಲ್ಲಿ ಹೆಚ್ಚಿನ ಕೂಲಿ ಸಿಗುತ್ತದೆಂದು ಬೇರೆ ಕಡೆಗೆ ಗುಳೆ ಹೋಗುತ್ತಿದ್ದಾರೆ. ಮಂಗಳೂರಿನ ಕಡೆಯಲ್ಲಿ 350–400 ರೂಪಾಯಿ ಕೂಲಿ ಸಿಗುತ್ತಿದೆ. ಚಿಕ್ಕಮಗಳೂರಿನಲ್ಲಿ ಕೂಲಿ ಜಾಸ್ತಿ ಇದೆ. ಇವತ್ತು 125 ರೂಪಾಯಿ ಕೂಲಿ ಇತ್ತು ಅದನ್ನು 155 ರೂಪಾಯಿಗೆ ಏರಿಕೆ ಮಾಡಲಾಗಿದೆ. 155 ರೂಪಾಯಿ ಅಂದ ಮೇಲೆ ಹೆಚ್ಚು ಜನರು ಕೂಲಿ ಕೇಳಿಕೊಂಡು ಬರಬಹುದು. ಇವತ್ತು ಗೋವಾ, ಮಹಾರಾಷ್ಟ್ರಕ್ಕೆ ಹೋಗುತ್ತಾರೆ. ಹೆಚ್ಚು ವರಮಾನ ನಮಗೆ ಬರಲಿ ಎನ್ನುವ ದೃಷ್ಟಿಯಿಂದ ಅಲ್ಲಿಗೆ ಹೋಗುತ್ತಿರಬಹುದು. ಮೊದಲು ಅಲ್ಲಿ ಸ್ಥಳೀಯವಾಗಿ ಉದ್ಯೋಗ ಇರಲಿಲ್ಲ. ಕಡೇ ಪಕ್ಷ 125 ರೂಪಾಯಿ ಕೂಡ ಕೂಲಿ ಸಿಗುತ್ತಿರಲಿಲ್ಲ. ಅಂತಹ ಒಂದು ಸಂದರ್ಭದಲ್ಲಿ ಜನರು ಬೇರೆ ಕಡೆಗೆ ಗುಳೆ ಹೋಗುತ್ತಿದ್ದರು ಎಂದು ಹೇಳಿದರೆ ಅದರಲ್ಲಿ ಅರ್ಥ ಇದೆ. ಆದರೆ ಇವತ್ತು ನಮಗೆ ಉದ್ಯೋಗ ಸಿಗುತ್ತಿಲ್ಲ ಎಂಬ ಕಾರಣದಿಂದ ಹೋಗುತ್ತಿಲ್ಲ ಎಂಬುದನ್ನಷ್ಟೇ ತಮ್ಮ ಗಮನಕ್ಕೆ ತರುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಸಹಾಯದಿಂದ ನಾವು ಶಾಲಾ ಕಾಂಪೌಂಡ್ ಇತ್ಯಾದಿ ಕೆಲಸವನ್ನು ಮಾಡಿಕೊಳ್ಳುತ್ತಿದ್ದೇವೆ ಎಂದು ಸರ್ಕಾರದ ವತಿಯಿಂದ ಹೇಳಿದ್ದನ್ನು ಕೇಳುತ್ತಿದ್ದೇವೆ. ಯಾವುದೇ ಕೇಂದ್ರ

ಸರ್ಕಾರದ ಯೋಜನೆಯಿಂದ ಅನುಕೂಲವಾಗಿದೆ ಎನ್ನುವ ಮಾತನ್ನು ಯಾರೂ ಆಡುವುದಿಲ್ಲ. ಒಂದು ಸಲ ಎಲ್ಲೋ ಕೇಳಿದ್ದೆ. ಮೊದಲ ಬಾರಿಗೆ ತಮ್ಮ ಬಾಯಿಂದ ಈ ಮಾತನ್ನು ಇಲ್ಲಿ ಕೇಳುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಕೇಂದ್ರ ಸರ್ಕಾರದ ಯೋಜನೆ ಇರಲಿ, ರಾಜ್ಯ ಸರ್ಕಾರದ ಯೋಜನೆ ಇರಲಿ. ನಾವು ಜನರ ಕೆಲಸವನ್ನು ಮಾಡುತ್ತಿದ್ದೇವೆ.

**ಶ್ರೀಮತಿ ಮೋಟಮ್ಮ:-** ಕೇಂದ್ರ ಸರ್ಕಾರದ ಬಗ್ಗೆ ತಮಗೆ ಅಪ್ರೀಸಿಯೇಷನ್ ಇರಬೇಕಲ್ಲ. ಮೊನ್ನೆ ಮಾನ್ಯ ಅಶೋಕ್ ಅವರು ನರ್ಮ್ ಯೋಜನೆಯ ಆಧಾರದ ಅಡಿಯಲ್ಲಿ ಸಾಕಷ್ಟು ಬಸ್‌ಗಳು ಬಂದಿರುವ ದಿಸೆಯಿಂದ ಇವತ್ತು ಸಾರಿಗೆ ವ್ಯವಸ್ಥೆ ಬಹಳ ಲಾಭದಾಯಕವಾಗಿ ನಡೆಯುತ್ತಿದೆ ಎಂದು ಒಂದು ಮಾತನ್ನು ಹೇಳಿದರು. ಅದನ್ನು ಬಿಟ್ಟರೆ ಬಾಕಿ ನಿಮ್ಮ ಸ್ಥಳೀಯ ಲೀಡರ್ಸ್, ಶಾಸಕರನ್ನು ಕೇಳಿ ಇದೆಲ್ಲವೂ ನಮ್ಮದು, ಅದೆಲ್ಲವೂ ನಮ್ಮದು ಎಂದು ಹೇಳಿಕೊಂಡು ಓಡಾಡುತ್ತಾರೆ. ಒಂದೇ ಒಂದು ಕಡೆಯಲ್ಲಿ ಕೇಂದ್ರ ಸರ್ಕಾರದ ಅನುದಾನಿತ ಯೋಜನೆಯಿಂದ ಮಾಡಲಾಗಿದೆ ಎಂದು ಬೋರ್ಡ್ ಇಲ್ಲ. ತುರ್ತು ವಾಹನ 108ಕ್ಕೆ ಮಾನ್ಯ ಪ್ರಧಾನ ಮಂತ್ರಿಯವರ ಫೋಟೋ ಹಾಕಿರಲಿಲ್ಲ. ಅಂಥಾದ್ದರಲ್ಲಿ ನೀವು ಈ ಮಾತನ್ನು ಇಲ್ಲಿ ಹೇಳಿದಿರಲ್ಲ ಅದು ಒಳ್ಳೆಯದಾಯಿತು. ಈ ಗುಳೆ ಹೋಗುವುದನ್ನು ತಡೆಗಟ್ಟಬೇಕಾಗುತ್ತದೆ. ಇಡೀ ಕುಟುಂಬ ಗುಳೆ ಹೋಗುತ್ತದೆ. ಸಣ್ಣ ಸಣ್ಣ ಮಕ್ಕಳನ್ನೂ ಕರೆದುಕೊಂಡು ಗುಳೆ ಹೋಗುತ್ತಾರೆ. ಇದರಿಂದಾಗಿ ಆ ಮಕ್ಕಳ ಭವಿಷ್ಯ ಹಾಳಾಗುತ್ತದೆ. ಆ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕಾಗುವುದಿಲ್ಲ. ಮೂರು ತಿಂಗಳಲ್ಲಿ ಹೆಚ್ಚಿನ ಕೂಲಿ ಸಿಗುತ್ತದೆ ಎಂದು ಹೇಳಿ ಹೋದರೆ ಹೇಗೆ ಆ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕಾಗುತ್ತದೆ. ಈಗ ನಮ್ಮಲ್ಲಿ ಕಾಫಿ ಹಣ್ಣು ಕೀಳುವ ಸಮಯದಲ್ಲಿ ಕೂಲಿಗಾಗಿ ಬರುತ್ತಾರೆ. ಕೆಲಸ ಆದ ನಂತರ ಹೊರಟು ಹೋಗುತ್ತಾರೆ. ಹೀಗಿರುವಾಗ ಆ ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗುತ್ತದೆ. ಬೇರೆ ಕಡೆಗೆ ಗುಳೆ ಹೋಗುವುದನ್ನು ತಪ್ಪಿಸಬೇಕಾಗುತ್ತದೆ. ಬೇರೆ ಕಡೆಗೆ ಹೋಗಿ ಆ

ಮಕ್ಕಳ ಭವಿಷ್ಯವನ್ನು ಹಾಳು ಮಾಡುವುದಕ್ಕಿಂತ ನೀವು ಇಲ್ಲಿಯೇ ಕೆಲಸ ಮಾಡಿ 150 ರೂಪಾಯಿ ಇಲ್ಲೇ ಕೂಲಿ ಸಿಗುತ್ತದೆ ಇಲ್ಲಿಯೇ ಕೆಲಸ ಮಾಡಿ ಎಂದು ಹೇಳಬೇಕಾಗುತ್ತದೆ. ಅಂತಹ ಒಂದು ಅವೇರ್‌ನೆಸ್ ಅನ್ನು ನೀವು ನಿಮ್ಮ ಇಲಾಖೆಯಿಂದ ಕ್ರಿಯೇಟ್ ಮಾಡಬೇಕಾಗುತ್ತದೆ. ಇದು ನನ್ನ ಮನವಿ.

**ಶ್ರೀ ಶಿವರಾಜ್ ಸಜ್ಜನರ್:–** ಮಾನ್ಯ ಸಭಾಪತಿಯವರೆ, ಈ ವರ್ಷ ಈ ನೆರೆ ಹಾವಳಿಯ ಸಂದರ್ಭದಲ್ಲಿ ಕೃಷಿ ಕಾರ್ಮಿಕರು ಏನು ಕೆಲಸ ಮಾಡಿದ್ದಾರೆ ಅವರಿಗೆ ಕಳೆದ 3–4 ತಿಂಗಳಿನಿಂದ ಹಣ ಬಟವಾಡೆ ಆಗುತ್ತಿಲ್ಲ. ನಾವು ಹಣವನ್ನು ಖರ್ಚು ಮಾಡಬೇಕಾದರೆ, ಮುಂದಿನ ವರ್ಷ ಬಹಳ ದೊಡ್ಡ ಪ್ರಮಾಣದಲ್ಲಿ ಹೊಡೆತ ಬೀಳಬಹುದು. 3–4 ತಿಂಗಳಿಂದ ಈ ಕೃಷಿ ಕಾರ್ಮಿಕರಿಗೆ ನಾವು ಹಣವನ್ನೇ ಕೊಡದಿದ್ದರೆ ಬಹಳ ಕಷ್ಟವಾಗುತ್ತದೆ. ಹೆಚ್ಚು ಎಂದರೆ ಒಂದು ವಾರ ತಡವಾದರೆ ತಡೆದುಕೊಳ್ಳಬಹುದು. ಆದರೆ 3–4 ತಿಂಗಳು ಆದರೂ ಈ ಕೃಷಿ ಕಾರ್ಮಿಕರಿಗೆ ಹಣವನ್ನು ಕೊಡದಿದ್ದರೆ ಅವರು ಮುಂದಿನ ವರ್ಷ ಈ ನೆರೆ ಹಾವಳಿಯ ಕೆಲಸಕ್ಕೆ ಬರುವುದಕ್ಕೆ ಸಾಧ್ಯವೇ ಇಲ್ಲ. ಕಳೆದ 3–4 ತಿಂಗಳಿನಿಂದ ಏನು ಹಣ ಸಿಗುತ್ತಿಲ್ಲ. ಅದನ್ನು ದಯವಿಟ್ಟು ತಕ್ಷಣ ಕೊಡುವ ವ್ಯವಸ್ಥೆಯಗಬೇಕು. ಒಂದು ವಾರದೊಳಗೆ ಅವರಿಗೆ ಪೇಮೆಂಟ್ ಆಗಬೇಕು. ಆ ರೀತಿ ಆದರೆ ಮಾತ್ರ ಈ ಯೋಜನೆ ಯಶಸ್ವಿಯಾಗುತ್ತದೆ. ಒಂದು ವಾರ ಇಲ್ಲವೇ 15 ದಿನಗಳಲ್ಲಿ ಹಣ ಪಾವತಿ ಆಗಬೇಕು. ಆದರೆ 3–4 ತಿಂಗಳಾದರೂ ಹಣವನ್ನು ಕೊಡದಿದ್ದರೆ ಈ ಕೆಲಸಕ್ಕೆ ಬರುವುದು ಬಹಳ ಕಡಿಮೆ ಆಗುತ್ತದೆಂದು ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ವಿ.ಆರ್.ಸುದರ್ಶನ್:–** ನೀವೇ ಹೇಳಿದಂತೆ 1780 ಕೋಟಿ ರೂಪಾತಿಯನ್ನು ನೀವು ಬಳಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಕೇಂದ್ರ ಸರ್ಕಾರ ಕಳೆದ 5 ವರ್ಷಗಳಲ್ಲಿ 4800 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು ಆ ಪೈಕಿ ಕೇವಲ 1780 ಕೋಟಿ ರೂಪಾಯಿಗಳನ್ನು ಬಳಕೆ ಮಾಡಿಕೊಂಡಿದ್ದೀರಿ.

**ಶ್ರೀ ಜಗದೀಶ್ ಶೆಟ್ಟರ್:-** 1780 ಕೋಟಿ ರೂಪಾಯಿ ಈ ವರ್ಷದ್ದು. 2008-09 ರಲ್ಲಿ 374 ಕೋಟಿ 2009-10 ರಲ್ಲಿ 2216 ಕೋಟಿ, 2010-11 ರಲ್ಲಿ 1860 ಕೋಟಿ, ಈ ಸಲ 1780 ಕೋಟಿ. ಒಟ್ಟು 4000 ಕೋಟಿ ರೂಪಾಯಿಯ ಮೇಲೆ ಖರ್ಚು ಆಗಿದೆ. ನಾವು ಇಲ್ಲಿಯವರೆಗೆ ಪ್ರತಿ ವರ್ಷ ಖರ್ಚು ಮಾಡಿದ್ದನ್ನು ಹೇಳುತ್ತಿದ್ದೇನೆ.

**ಶ್ರೀ ವಿ.ಆರ್.ಸುದರ್ಶನ್:-** ನಮ್ಮ ಪ್ರಶ್ನೆಗೆ ಉತ್ತರವನ್ನು ಕೊಡುವ ಸಂದರ್ಭದಲ್ಲಿ ಆಗ ಕೊಟ್ಟಂತಹ ಅಂಕಿ ಅಂಶಗಳಿಗೂ ಈಗ ಕೊಡುತ್ತಿರುವ ಅಂಕಿ ಅಂಶಗಳಿಗೂ ಸಾಕಷ್ಟು ವ್ಯತ್ಯಾಸಗಳು ಇವೆ. ತಾವು ಅಧಿಕಾರಿಗಳ ಮುಖಾಂತರ ಇದನ್ನು ವೆರಿಫೈ ಮಾಡಿಸಿಕೊಳ್ಳಿ. ಇದು ಕೂಡ ನೂರಕ್ಕೆ ನೂರರಷ್ಟು ಕೇಂದ್ರ ಸರ್ಕಾರ ಅನುದಾನ ನೀಡುವ ಕಾರ್ಯಕ್ರಮ ಆಗಿರುತ್ತದೆ. ನಿಮ್ಮದು ಆಡಳಿತಾತ್ಮಕ ವೆಚ್ಚ ಮಾತ್ರ. ಇನ್ನೂ ಸ್ವಲ್ಪ ಹಣವನ್ನು ಬಿಡುಗಡೆ ಮಾಡಬೇಕೆಂದು ನೀವು ಹೇಳುತ್ತಿದ್ದೀರಿ. ಆದರೆ ನೀವು ಯೂಟಿಲೈಸ್ಡ್ ಸರ್ಟಿಫಿಕೇಟ್ ಅನ್ನು ಕಳುಹಿಸಿ ಕೊಡದೇ ಹೋದರೆ ಅವರು ಉಳಿದ ಹಣವನ್ನು ಹೇಗೆ ಬಿಡುಗಡೆ ಮಾಡುತ್ತಾರೆ?

**ಶ್ರೀ ಜಗದೀಶ್ ಶೆಟ್ಟರ್:-** ಯೂಟಿಲೈಸ್ಡ್ ಸರ್ಟಿಫಿಕೇಟ್ ಅನ್ನು ಕೊಟ್ಟ ಮೇಲೂ ಕೂಡ ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲ. ಸುಮ್ಮನೆ ನಾವು ಅವರನ್ನು ಟೀಕೆ ಮಾಡುವ ಅವಶ್ಯಕತೆ ಇಲ್ಲ. ನಾವು ಆದಷ್ಟೂ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸಜ್ಜನರ್ ಅವರು ಪ್ರತಿ ವರ್ಷದಂತೆ ಈ ವರ್ಷವೂ ಹಣವನ್ನು ನೀಡಬೇಕಾಗಿತ್ತು ಎಂದು ಹೇಳಿದರು. ಕೇಂದ್ರದಿಂದ ಹಣ ಬಂದಿಲ್ಲ ಅಲ್ಲಿಂದ ಹಣ ಬಂದ ಕೂಡಲೇ ನಾವು ಇವರಿಗೆ ಹಣವನ್ನು ಕೊಟ್ಟು ಬಿಡುತ್ತೇವೆ, ಏನೂ ತೊಂದರೆ ಇಲ್ಲ.

**ಶ್ರೀ ವಿ.ಆರ್.ಸುದರ್ಶನ್:-** ಈ ಕಾರ್ಯಕ್ರಮದ ಬಗ್ಗೆ ವಿಚಾರ ಮಾಡುವ ಸಲುವಾಗಿ ಈಗಲೇ ಇಲ್ಲಿ ಹತ್ತಿರವಿರುವ ಯಾವುದಾದರೂ ಒಂದು ಹಳ್ಳಿಗೆ ಹೋಗಿ ನೋಡೋಣ. ಈ ಕಾರ್ಯಕ್ರಮದ ಉಪಯುಕ್ತತೆ ಬಗ್ಗೆ ಮತ್ತು ರೀತಿಯ ಪ್ರಯೋಜನ ಪಡೆದುಕೊಳ್ಳುವ ಮತ್ತು ಕೆಲವು ಗೈಡ್‌ಲೈನ್ಸ್ ಅನ್ನು ಮಾರ್ಪಾಡು ಮಾಡಿಕೊಳ್ಳುವ ಬಗ್ಗೆ ವಿಚಾರ ಮಾಡುವ

ಸಲುವಾಗಿ ತಾವು ಅಲ್ಲಿಗೆ ಭೇಟಿ ಮಾಡಬೇಕಾಗುತ್ತದೆ. ಜಿಲ್ಲಾ ಪಂಚಾಯತಿ ಕಚೇರಿಯಲ್ಲಿ ಕುಳಿತು ತಮ್ಮ ಅಧಿಕಾರಿಗಳು ಹೇಳುವ ಅಂಕಿ ಅಂಶಗಳನ್ನು ಇಲ್ಲಿ ತೆಗೆದುಕೊಂಡು ಬಂದರೆ ಅದು ಸಾಕಾಗುವುದಿಲ್ಲ. ನೀವು ಅಭ್ಯಾಸವನ್ನು ಮಾಡಿಕೊಳ್ಳಬೇಕಾಗುತ್ತದೆ. ತಾವು ತಮ್ಮ ಕ್ಷೇತ್ರದ ಹಳ್ಳಿಗಳಿಗೆ ಹೋಗಬಹುದು. ತಮ್ಮದು ನಗರ ವ್ಯಾಪ್ತಿಗೆ ಬರತಕ್ಕಂಥಹ ಕ್ಷೇತ್ರವಾಗಿದೆ. ಆದರೆ ನೀವು ಜಿಲ್ಲೆಗಳಿಗೆ ಹೋದಗ ಬರೀ ಜಿಲ್ಲಾ ಪಂಚಾಯತಿ ಕಚೇರಿಯಲ್ಲಿ ಕುಳಿತು ಅಲ್ಲಿಯೇ ರಿವ್ಯೂ ಮಾಡಿ ಬಂದರೆ ಅದು ಹೇಗೆ ಆಗುತ್ತದೆ. ಈ ಕಾರ್ಯಕ್ರಮ ಎಷ್ಟರ ಮಟ್ಟಿಗೆ ಇಂಪ್ಲಿಮೆಂಟ್ ಹಳ್ಳಿಗಳಲ್ಲಿ ಆಗಿದೆ ಎಂಬುದನ್ನು ನೋಡಬೇಕಾಗುತ್ತದೆ. ಗ್ರಾಮ ಪಂಚಾಯತಿ ಈ ದಿಸೆಯಲ್ಲಿ ಎಷ್ಟರ ಮಟ್ಟಿಗೆ ಜವಾಬ್ದಾರಿಯನ್ನು ಹೊತ್ತಿದ್ದಾರೆ, ತಾಲ್ಲೂಕು ಪಂಚಾಯತಿಯ ಮಟ್ಟದಲ್ಲಿ ಇ.ಓ.ಗಳ ಹಂತದಲ್ಲಿ ಏನು ನಡೆದಿದೆ ಎಂಬುದನ್ನು ನೋಡಬೇಕಾಗುತ್ತದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ದುರುಪಯೋಗ ನಡೆದಿದೆ ಇದರಲ್ಲಿ ಎಷ್ಟು ಜನರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕಾಗುತ್ತದೆ. ಹಣ ಉಪಯೋಗ ಮಾಡಿಕೊಳ್ಳುವುದು ಒಂದು ಭಾಗ, ಆದರೆ ಹಣ ದುರುಪಯೋಗವನ್ನು ಯಾರು ಮಾಡುತ್ತಾರೆ ಅವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುವುದು ಮತ್ತೊಂದು ಮುಖ್ಯವಾದ ಭಾಗವಾಗುತ್ತದೆ. ಆ ದೃಷ್ಟಿಯಲ್ಲಿ ತಾವು ಗಮನವನ್ನು ಹರಿಸಬೇಕಾಗುತ್ತದೆ. ಎಷ್ಟು ದೊಡ್ಡ ಪ್ರಮಾಣದಲ್ಲಿ ದುರುಪಯೋಗವಾಗುತ್ತಿದೆ ಎಂದು ಹೇಳಿದರೆ, ಈ ದುರುಪಯೋಗವಾಗುವುದನ್ನು ಹೀಗೇ ಮುಂದುರೆಸುತ್ತಾ ಹೋದರೆ ಮುಂದೆ ಒಂದು ದಿವಸ ಈ ಯೋಜನೆ ರದ್ದಾಗುವುದನ್ನು ನಾವು ನೋಡಬೇಕಾಗುತ್ತದೆ. It is one of the progressive and revolutionary programmes of the government. ಇದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳದೇ ಹೋದರೆ ಇನ್ನು ಯಾವ ಯೋಜನೆಯನ್ನು ನೀವು ಕೊಟ್ಟಿದ್ದೀರಿ? ನೀವು ರಾಜ್ಯ ಸರ್ಕಾರದ ವತಿಯಿಂದ ಈ ರೀತಿಯ ಇನ್ನು ಯಾವುದಾದರೂ ಯೋಜನೆಯನ್ನು ಕ್ರಿಯೇಟ್ ಮಾಡಿದ್ದೀರಾ? To generate employment and to create assets, ಯಾವುದಾದರೂ ಒಂದು ಕಾರ್ಯಕ್ರಮವನ್ನು ಹೇಳಿ ನೋಡೋಣ. ಈ ಕಾರ್ಯಕ್ರಮವನ್ನು

ಸಮರ್ಪಕವಾಗಿ ಜಾರಿಗೆ ತಂದರೆ ಕೇಂದ್ರ ಸರ್ಕಾರಕ್ಕೆ ಇದರಿಂದ ಎಲ್ಲಿ ಒಳ್ಳೆಯ ಹೆಸರು ಬರುತ್ತದೆಯೋ ಎಂದು ಈ ಕಾರ್ಯಕ್ರಮ ಆದರೆ ಎಷ್ಟು ಹೋದರೆ ಎಷ್ಟು ಎನ್ನುವ ಧೋರಣೆಯಲ್ಲಿ ರಾಜ್ಯ ಸರ್ಕಾರ ನಡೆದುಕೊಂಡರೆ ಅದು ಸರಿಯಾಗುವುದಿಲ್ಲ. ಇದಕ್ಕೆ ಸಿಗಬೇಕಾದ ಪ್ರಾಧಾನ್ಯತೆ ಎಷ್ಟರ ಮಟ್ಟಿಗೆ ಸಿಗಬೇಕಾಗಿತ್ತೋ ಆ ಪ್ರಮಾಣದಲ್ಲಿ ಸಿಗುತ್ತಿಲ್ಲ. ನೀವು ಇದರ ಕಡೆಗೆ ಎಷ್ಟರ ಮಟ್ಟಿಗೆ ಗಮನ ಹರಿಸಬೇಕಾಗಿತ್ತೋ ಅಷ್ಟರ ಮಟ್ಟಿಗೆ ಗಮನ ಹರಿಸುತ್ತಿಲ್ಲ. ಅಧಿಕಾರಿಗಳ ಮೇಲೆ ಹಿಡಿತವನ್ನು ಅಷ್ಟು ಹಿಡಿತವನ್ನು ಇಟ್ಟುಕೊಂಡಿಲ್ಲ. ರಾಜ್ಯದಲ್ಲಿ ಓಂಬಡ್ಸ್‌ಗಲನ್ನು ನೇಮಕ ಮಾಡುವುದಕ್ಕೆ ನಿಮ್ಮ ಕೈಯ್ಯಲ್ಲಿ ಆಗಿಲ್ಲ. ರಾಜ್ಯದಲ್ಲಿ 30 ಜಿಲ್ಲೆಗಳು ಇವೆ. ಅದರ ಪೈಕಿ 17 ಜಿಲ್ಲೆಗಳಿಗೆ ಓಂಬಡ್ಸ್‌ಮನ್‌ಗಳನ್ನು ನೇಮಕ ಮಾಡಿದ್ದಾರೆ. ಇನ್ನು ಉಳಿದ ಜಿಲ್ಲೆಗಳಿಗೆ ಈ ನೇಮಕಾತಿ ಆಗಿಲ್ಲ. ಅಂದರೆ ಇಲ್ಲಿ ನ್ಯಾಯಾಧೀಶ ಕೊರತೆ ಇದೆಯೇ? ಹಾಗದರೆ, ವಿಲೇಜ್ ಪಂಚಾಯತಿಗಳಲ್ಲಿ ದುರುಪಯೋಗ ನಡೆದುಕೊಂಡು ಹೋಗುತ್ತಿದ್ದರೆ ಹಾಗೇ ನಡೆದುಕೊಂಡು ಹೋಗಲಿನಾ? 5000 ಕ್ಕೂ ಹೆಚ್ಚು ಗ್ರಾಮ ಪಂಚಾಯತಿಗಳು ನಮ್ಮ ರಾಜ್ಯದಲ್ಲಿ ಇವೆ. ಅದರ ಮುಖಾಂತರ ಈ ಕಾರ್ಯಕ್ರಮ ಜಾರಿಗೆ ಬರಬೇಕಾಗಿದೆ. ಅಲ್ಲಿ ಇದನ್ನು ಸರಿಪಡಿಸುವುದಕ್ಕೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳಬಯಸುತ್ತೇನೆ.

ಏಕೆಂದರೆ ಬರಗಾಲಕ್ಕೂ ಇದಕ್ಕೂ ಸಂಬಂಧ ಇದೆ. ನೂರು ದಿವಸಗಳ ಕಾಲ ಉದ್ಯೋಗ ಕೊಡಬೇಕಾಗುತ್ತದೆ. ಅದು ಇಂತಹ ಕಠಿಣವಾದಂಥ ಸಂದರ್ಭ. ಮಾರ್ಚ್, ಏಪ್ರಿಲ್‌ನಲ್ಲಿ ಬಹಳ ಬಿಸಿಲಿನ ಬೇಗನೆ ಇರುವಂಥದ್ದು. ಮಳೆ ಇಲ್ಲ, ಉದ್ಯೋಗ ಇಲ್ಲ, ಇಂತಹ ಒಂದು ಸಂದರ್ಭದಲ್ಲಿ ಅಲ್ಲಿ ನೀವು ಕ್ರಮಗಳನ್ನು ತೆಗೆದುಕೊಳ್ಳದೆ ಹೋದರೆ ನಿಜವಾಗಲೂ ಕೂಡ ಆ ಪಾಪದ ಜನರು ಯಾರು ಇದ್ದಾರೆ, ಆ ಬಡವರು ಯಾರು ಇದ್ದಾರೆ ಅವರಿಗೆ ಮೂರು ತಿಂಗಳಿನಿಂದ ಅವರು ಮಾಡಿರುವ ಉದ್ಯೋಗದ ಹಣ ಕೊಡಲಿಲ್ಲ ಅಂದರೆ ಅವರು ಹೇಗೆ ಬದುಕಬೇಕು? ಅವರು ಹೇಗೆ ಜೀವನ ಮಾಡಬೇಕೆಂದು ತಾವು ಹೇಳಿ?

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ನಮಗೆ 400 ಕೋಟಿ ತಕ್ಷಣ ಬರಬೇಕಾಗಿತ್ತು. ಕೊಟ್ಟಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಕಳೆದ ವರ್ಷ ಸಮಸ್ಯೆ ಆಗಿಲ್ಲ, ಇಲ್ಲಿಯವರೆಗೆ ಸಮಸ್ಯೆಯಾಗಿಲ್ಲ. ಈ 2–3 ತಿಂಗಳಿನಿಂದ ಸಮಸ್ಯೆಯಾಗುತ್ತಿದೆ. ಕೇಂದ್ರ ಸರ್ಕಾರ ಹಣ ಕೊಟ್ಟಿಲ್ಲ. ಅಲ್ಲಿ ಬಜೆಟ್ ಅಲೋಕೇಶನ್ ಇಲ್ಲವೋ? ಮತ್ತೊಂದು ಮಗದೊಂದು ಅದನ್ನು ಕೂಡ ನಾವು ವಿಚಾರ ಮಾಡಬೇಕಲ್ಲ. ನಾನು ಕೇಂದ್ರದ ಸಚಿವರಿಗೆ ಭೇಟಿಯಾಗಿದ್ದೇನೆ. ಕರೆಸ್ಪಾಂಡನ್ಸ್ ಮಾಡುತ್ತಿದ್ದೇನೆ. ಎಲ್ಲಾ ಮಾಡುತ್ತಿದ್ದೇನೆ.

**ಶ್ರೀ ವಿ.ಆರ್.ಸುದರ್ಶನ್:–** ಮಾನ್ಯ ಸಭಾಪತಿಯವರೇ, ಅವರು ಇಡೀ ಅಡ್ಜಸ್ಟ್‌ಮೆಂಟ್‌ನ ಬಜೆಟ್ ಕೊಟ್ಟಿದ್ದಾರೆ. ಇಡೀ ಬಜೆಟ್ ಅನ್ನು ಅಡ್ಜೆಸ್ಟ್‌ಮೆಂಟ್ ಮಾಡಿದ್ದಾರೆ, ಇಡೀ ಬಜೆಟ್ ಅಡ್ಜೆಸ್ಟ್‌ಮೆಂಟ್ ಫಿಗರ್ಸ್ ಇವೆ. ಅಡ್ಜೆಸ್ಟ್‌ಮೆಂಟ್ ಅನ್ನು ಮಾಡಿ ಕರ್ನಾಟಕದಲ್ಲಿ ಒಂದು ಲಕ್ಷ ಕೋಟಿ ಮೀರಿದ ಬಜೆಟ್ ಅನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದನ್ನೆಲ್ಲಾ ಬಜೆಟ್ ಬಗ್ಗೆ ಮಾತನಾಡುವಾಗ ಹೇಳೋಣ. ತಾವು ಹೇಗೆ ಒಂದು ಲಕ್ಷ ಕೋಟಿ ತಲುಪಿದ್ದೀರಿ, ಎಲ್ಲೆಲ್ಲಿ ಅಡ್ಜೆಸ್ಟ್‌ಮೆಂಟ್‌ಗಳು ನಡೆದಿದ್ದಾವೆಂದು ಆ ಸಂದರ್ಭದಲ್ಲಿ ಹೇಳೋಣ. ಈಗ ನೀವು ಹಣವನ್ನು ಬಿಡುಗಡೆ ಮಾಡಿ ಆನಂತರ ಅಡ್ಜೆಸ್ಟ್‌ಮೆಂಟ್ ಮಾಡಿಕೊಳ್ಳುವುದಕ್ಕಾಗುವುದಿಲ್ಲವೇ? ಕೇಂದ್ರದವರು ಹಣ ಕೊಡಲಿಲ್ಲ ಎಂದು ಹೇಳಿ ನೀವು ಬಡವರಿಗೆ ಹಣ ಕೊಡದಿದ್ದರೆ, ಬಡವರು ಹಾಗೆಯೇ ಉಪವಾಸ ಇರುವುದಕ್ಕಾಗುತ್ತದೆಯೇ?

**ಉಪ ಸಭಾಪತಿಯವರು:–** ಮಾನ್ಯ ಸುದರ್ಶನ್‌ರವರೆ ತಾವು ಇನ್ನು ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ?

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ತಾವು ಎಷ್ಟು ಅವಕಾಶ ಕೊಡುತ್ತೀರೋ ಅಷ್ಟು.

**ಉಪ ಸಭಾಪತಿಯವರು:–** ಮೂರು ನಿಮಿಷದಲ್ಲಿ ಮುಗಿಸಿ. ಏಕೆಂದರೆ ನಿಮ್ಮ ಕಡೆ ಇನ್ನು ಇಬ್ಬರು ಮಾತನಾಡಬೇಕು. ಆಡಳಿತ ಪಕ್ಷದಿಂದ 2–3 ಜನರು ಹೆಸರು ಕೊಟ್ಟಿದ್ದಾರೆ.

**ಶ್ರೀ ವಿ.ಆರ್.ಸುದರ್ಶನ್:-** ಮೂರು ನಿಮಿಷದಲ್ಲಿ ಹೇಗೆ ಮುಗಿಸುವುದಕ್ಕಾಗುತ್ತದೆ. ನೀವು ನಮ್ಮ ಕಡೆ ಸ್ವಲ್ಪ ಹೆಚ್ಚು ಸಮಯ ಕೊಡಬೇಕು.

**ಉಪ ಸಭಾಪತಿಯವರು:-** ಸಹಿ ಮಾಡಿರುವವರು ಮೊದಲು ಮಾತನಾಡಲಿ ಎಂದು ಅವಕಾಶ ಕೊಟ್ಟಿದ್ದೇನೆ.

**ಶ್ರೀ ವಿ.ಆರ್.ಸುದರ್ಶನ್:-** ಇರಲಿ. ದಯಮಾಡಿ ಈ ಭಾಗಕ್ಕೆ ತಮ್ಮ ಆದ್ಯತೆ ಇರಲಿ. ಸದನದಲ್ಲಿ ಸರ್ಕಾರಕ್ಕೆ ಹೇಳುವಂಥ ಅವಕಾಶ ಇಲ್ಲಿಯೇ ಇರುವಂಥದ್ದು. ನಾವು ಇಲ್ಲಿ ಹೇಳುವುದನ್ನು ಹೇಳಲೇಬೇಕಾಗುತ್ತದೆ. ದಯಮಾಡಿ ತಾವು ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ.

**ಉಪ ಸಭಾಪತಿಯವರು:-** ಆಯಿತು ಆದಷ್ಟು ಬೇಗ ಮುಕ್ತಾಯ ಮಾಡಿ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೆ, ಇಲ್ಲಿ ಕಂಪ್ಲೀಟ್ ಮ್ಯಾನ್ಯುವಲ್ ಇದೆ. ಕೆಲವು ಗೈಡ್‌ಲೈನ್ಸ್‌ಗಳನ್ನು ಕಂಪ್ಲೀಟ್ ಮಾರ್ಪಾಡು ಮಾಡಿಕೊಳ್ಳಬೇಕಾಗುತ್ತದೆ. ಕಂಪ್ಲೀಟ್ ಮ್ಯಾನ್ಯುವಲ್ ಆಗಿ ಮಾಡುವಂಥದ್ದು, ಇದು ಸ್ವಲ್ಪ ಮಟ್ಟಿಗೆ ಪ್ರ್ಯಾಕ್ಟಿಕಲ್ ಆಗಿ, ಗ್ರೌಂಡ್‌ಲ್ಲಿ ಇದು ಕಷ್ಟ ಆಗುತ್ತದೆ. ಇದಕ್ಕೆ ಕೆಲವು ಗೈಡ್‌ಲೈನ್ಸ್ ಅನ್ನು ಕೂಡ ಮಾಡಬೇಕಾಗುತ್ತದೆ. ಅದನ್ನು ಹೇಳುವವರು ನೀವು ಹೋಗಿ ಹೇಳಬೇಕಲ್ಲ. ಅದಾದರು ಮಾಡಬೇಕಲ್ಲ. ನಿಮ್ಮ ಅಧಿಕಾರಿಗಳ ಮುಖಾಂತರವಾದರು ಹೇಳಬೇಕು. ನೀವಾದರು ಹೇಳಬೇಕು. ಕೂಲಿ ಕೊಡುವಂಥದ್ದು ಸಾಕಾಗುವುದಿಲ್ಲ ಎನ್ನುವಂಥದ್ದಾದರೆ ಅದಕ್ಕೇನಾದರೊಂದು ಪ್ರಯತ್ನಗಳಾಗಬೇಕಲ್ಲ. ಬರೀ ಇಲ್ಲಿಯೇ ಹೇಳುತ್ತ ಕುಳಿತುಕೊಂಡರೆ ಆಗುತ್ತದೆಯೇ? ಇದು ಯಾವಾಗ ಸಾಧ್ಯವಾಗುತ್ತದೆಂದರೆ ನಿಮಗೆ ಇಚ್ಛಾಶಕ್ತಿ ಇದ್ದಾಗ. ಇಚ್ಛಾಶಕ್ತಿ ಕೊರತೆ ನಿಮಗೆ ಇರುವುದರಿಂದ, ನಿಮ್ಮದೇ ಆದ ರಾಜಕೀಯ ಗೊಂದಲಗಳಿರುವುದರಿಂದ ಹೇಳಬೇಕಾದ ಜನರಿಗೂ ನೀವು ಹೇಳುವುದಕ್ಕಾಗುತ್ತಿಲ್ಲ. ಅದನ್ನು ಸರಿಪಡಿಸುವುದಕ್ಕೆ ನಿಮಗೆ ಸಾಧ್ಯವಾಗುತ್ತಿಲ್ಲ.

ನಿಮಗೆ ಕೊರತೆ ಇರುವುದು ಇಲ್ಲಿ. ಮತ್ತೆ ಇನ್ನು ಯಾವುದಾದರು ಕಡೆ ಬೆರಳು ತೋರಿಸಿದರೆ ಏನು ಪ್ರಯೋಜನ? ಈ ಕಾರ್ಯಕ್ರಮದಿಂದ ಜನರಿಗೆ ಬಹಳ ದೊಡ್ಡ ನಿರೀಕ್ಷೆ ಇದೆ. ಇದು ಇವೊತ್ತು ರಾಜಕಾರಣದ ಕಾರ್ಯಕ್ರಮ ಅಲ್ಲ. ಇದು ಜನರ ಬದುಕಿನ ಪ್ರಶ್ನೆ ಆಗುತ್ತದೆ. ಇಂತಹ ಒಂದು ಸಂಕಷ್ಟದ ಸಂದರ್ಭದಲ್ಲಿ ಈ ಕಾರ್ಯಕ್ರಮಗಳನ್ನು ಬಹಳ ಜವಾಬ್ದಾರಿಯುತವಾಗಿ ಮಾಡಬೇಕಾಗುತ್ತದೆ. ಇದು ಎಲ್ಲಾ ಯಾವಾಗ ಸಾಧ್ಯವಾಗುತ್ತದೆಂದರೆ ಇದು ಬರೀ ಮಾನ್ಯ ಜಗದೀಶ ಶೆಟ್ಟರ್‌ರವರು ಪ್ರವಾಸ ಮಾಡಿದರೆ ಸಾಕಾಗುವುದಿಲ್ಲ. ತಮ್ಮ ಜಿಲ್ಲಾ ಉಸ್ತುವಾರಿ ಹೊತ್ತಿರುವ ಗೌರವಾನ್ವಿತ ಸಚಿವರಿದ್ದಾರಲ್ಲ ಅವರೇನಾದರು ಆ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದಾರಾ? ಕೆ.ಡಿ.ಪಿ. ಸಭೆಗಳನ್ನು ಕರೆದಿದ್ದಾರೆಯೇ? ತಾಲ್ಲೂಕು ಹಂತಗಳಲ್ಲಿ ಟಾಸ್ಕ್‌ಫೋರ್ಸ್ ಕಮಿಟಿಗಳಿವೆ. ಆ ಟಾಸ್ಕ್‌ಫೋರ್ಸ್ ಕಮಿಟಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರು ಕೂಡ ಸದಸ್ಯರುಗಳಿದ್ದಾರೆ. ಮಾನ್ಯ ವೀರಯ್ಯನವರೆ ತಾವು ಕೋಲಾರ ಜಿಲ್ಲೆಯಲ್ಲಾಗಲೀ ಬೇರೆ ಬೇರೆ ಜಿಲ್ಲೆಗಳಿಗೆ ಹೋದಂಥ ಸಂದರ್ಭಗಳಲ್ಲಿ ಎಲ್ಲಿಯಾದರು ಟಾಸ್ಕ್‌ಫೋರ್ಸ್ ಸಮಿತಿಗಳ ಸಭೆಗಳು ನಡೆದಿವೆಯೇ? ತಾವು ಯಾವುದಾದರು ಟಾಸ್ಕ್‌ಫೋರ್ಸ್‌ನಲ್ಲಿ ಭಾಗವಹಿಸಿದ್ದೀರಾ? ಇದರಲ್ಲಿ ರಾಜಕಾರಣ ಏನಿದೆ?

**ಶ್ರೀ ಶಿವರಾಜ್ ಸಜ್ಜನರ್:-** ಮಾನ್ಯ ಸಭಾಪತಿಯವರೆ, ಹಾವೇರಿ ಜಿಲ್ಲೆಯಲ್ಲಿ ಆಗಿದೆ.

**ಶ್ರೀ ವಿ.ಆರ್.ಸುದರ್ಶನ್:-** ಐ.ಬಿ.ಗಳಲ್ಲಿ ಆಗಿದೆಯೇ? ಜಗದೀಶ್ ಶೆಟ್ಟರ್‌ರವರ ಜಿಲ್ಲೆಯಲ್ಲಿ ಅವರು ಕರೆದಿರಬಹುದು.

**ಶ್ರೀ ಮೋಹನ್ ಎ. ಲಿಂಬಿಕಾಯಿ:-** ಮಾನ್ಯ ಸಭಾಪತಿಯರೆ, ಮಾನ್ಯ ಜಗದೀಶ್ ಶೆಟ್ಟರ್‌ರವರ ಜಿಲ್ಲೆ ಧಾರವಾಡ. ಗದಗ್‌ನಲ್ಲಿ ಕರೆದಿದ್ದಾರೆ, ಹಾವೇರಿಯಲ್ಲಿ ಕರೆದಿದ್ದಾರೆ, ಧಾರವಾಡದಲ್ಲಿ ಕರೆದಿದ್ದಾರೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಚಿಕ್ಕಮಗಳೂರಿನಲ್ಲಿ ಎಷ್ಟು ಸಭೆಗಳನ್ನು ಕರೆದಿದ್ದಾರೆಂದು ಕೇಳಿ. ಅಲ್ಲಿ ಕೆ.ಡಿ.ಪಿ.

ಸಭೆಯನ್ನೆ ನೆಟ್ಟಗೆ ಮಾಡುವುದಿಲ್ಲ. ಇನ್ನು ಟಾಸ್ಕ್‌ಫೋರ್ಸ್ ಎಲ್ಲಿ ಮಾಡುತ್ತಾರೆ?

**ಶ್ರೀ ಮೋಹನ್ ಎ. ಲಿಂಬಿಕಾಯಿ:–** ಮಾನ್ಯ ಸಭಾಪತಿಯರೆ, ಅವರು ಟಾಸ್ಕ್‌ಫೋರ್ಸ್ ಸಭೆಯನ್ನು ಕರೆದಿಲ್ಲ ಎಂದು ಹೇಳಿದ್ದಾರೆ. ಆದರೆ ನಾನು ಕರೆದಿದ್ದಾರೆಂದು ಹೇಳುತ್ತಿದ್ದೇನಷ್ಟೆ. ಒಂದೆರಡು ಜಿಲ್ಲೆಗಳಲ್ಲಿ ಕರೆದಿರಲಿಕ್ಕಿಲ್ಲ. ಬಹಳಷ್ಟು ಜಿಲ್ಲೆಯೊಳಗೆ ಟಾಸ್ಕ್‌ಫೋರ್ಸ್ ಸಭೆಯನ್ನು ಕರೆದಿದ್ದಾರೆ ಹಾಗೂ ಅದರ ಬಗ್ಗೆ ಚರ್ಚೆ ಮಾಡಿದ್ದಾರೆ.

**ಶ್ರೀಮತಿ ಮೋಟಮ್ಮ:–** ನೀವುಗಳು ಇರುವ ಕಡೆ ಕರೆದಿರಬೇಕು. ಬಹಳಷ್ಟು ಜಿಲ್ಲೆಗಳಲ್ಲಿ ಕರೆದಿಲ್ಲ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ತಾವು ಸಿ.ಇ.ಓ.ಗಳು, ಜಿಲ್ಲಾಧಿಕಾರಿಯವರು ಯಾರು ಇದ್ದಾರೆ ಅವರಿಗೆ ಒಂದು ಆದೇಶವನ್ನು ನೀಡಿ. ಕೂಡಲೇ ಟಾಸ್ಕ್‌ಫೋರ್ಸ್ ಸಭೆಗಳನ್ನು ಕರೆದು ಒಂದು ಆಕ್ಷನ್ ಪ್ಲ್ಯಾನ್ ಅನ್ನು ಮಾಡಿ ಎಂದು ಆದೇಶವನ್ನು ನೀಡಿ. ನೀವು ಎಲ್ಲರ ಸಲಹೆಗಳನ್ನು ಕೇಳಿ. ಇದರಲ್ಲಿ ರಾಜಕಾರಣವೇನಿದೆ? ಇದೆಲ್ಲಾ ಎಲ್ಲರ ಜವಾಬ್ದಾರಿ ಇದೆಯಲ್ಲ. ಜವಾಬ್ದಾರಿ ಹಕ್ಕುಗಳಿ ಎರಡೂ ಇವೆಲ್ಲ. ಆ ಜವಾಬ್ದಾರಿ ಟೀಮ್ ವರ್ಕ್ ಅಲ್ಲವೇ. ಆಡಳಿತ ಬರೀ ಒನ್ ಮ್ಯಾನ್ ಶೋ ಆಗುತ್ತದೆಯೇ? ನೀವು ಸರ್ಕಾರದ ಇಲಾಖೆಗಳು ಸತ್ತು ಹೋಗಿವೆ ಎನ್ನುವ ರೀತಿಯಲ್ಲಿ ಗುದ್ದಲಿ ಪೂಜೆಗಳನ್ನು ಮಾಡಿಕೊಂಡು ಬರುತ್ತೀರಲ್ಲ ಹಾಗಲ್ಲ. ಯಾವುದೇ ಇನ್ವಿಟೇಶನ್ ಅನ್ನು ಪ್ರಿಂಟ್ ಮಾಡುವುದಿಲ್ಲ. ಇಲಾಖೆಯ ಕಾರ್ಯಕ್ರಮಗಲನ್ನು ಜನರಿಗೆ ಪರಿಚಯ ಮಾಡುವುದಿಲ್ಲ. ಇದೇನು ತಮ್ಮ ಮನೆಯಿಂದ, ತಮ್ಮ ಕಾರ್ಯಕ್ರಮ ಸ್ವಂತ ಹಣದಿಂದ ತೆಗೆದು ಹಾಕಿದ್ದೇವೆಂದು ಗುದ್ದಲಿ ಪೂಜೆ ಮಾಡಿಕೊಂಡು ಹೋಗುವುದು ಉದ್ದಕ್ಕೆ ಜನರಿಗೆ ಯಾವುದೇ ರೀತಿಯಾದ ಮಾಹಿತಿಯನ್ನು ಕೊಡುವುದು ಬೇಡವೇ? ಇದೇನು ಆಡಳಿತ ಅಂದುಕೊಂಡಿದ್ದೀರಾ?

**ಶ್ರೀ ಮೋಹನ್ ಎ. ಲಿಂಬಿಕಾಯಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಬರಗಾಲದ ಬಗ್ಗೆ ಮಾತನಾಡುವುದು ಬಿಟ್ಟು, ಗುದ್ದಲಿ ಪೂಜೆಯ ಬಗ್ಗೆ ಮಾತನಾಡುತ್ತಿದ್ದಾರಲ್ಲ ದಯಮಾಡಿ ಅವರು ಬರಗಾಲ ಬಗ್ಗೆ ಮಾತನಾಡಲಿ. ಬಹಳಷ್ಟು ಸಮಸ್ಯೆಗಳಿವೆ, ನೀರಿನ ತೊಂದರೆ ಇದೆ, ಮೇವಿನ ತೊಂದರೆ ಇದೆ. ಅದರ ಬಗ್ಗೆ ಮಾತನಾಡಲಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಎಲ್ಲಾ ಕಡೆ ಯಾರಿಗೂ ಹೇಳದೆ ಗುದ್ದಲಿ ಪೂಜೆಗಳಾಗುವುದಿಲ್ಲ. ಎಲ್ಲಾ ಕಡೆ ರಾಜಕಾರಣ ಬೆರೆಸಿ ಮಾತನಾಡಬೇಕೆಂದು ಅವರು ಮಾತನಾಡುತ್ತಿದ್ದಾರೆ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಒಂದು ಸದನ ಸಮಿತಿಯನ್ನು ಮಾಡಿ. ಅದಕ್ಕೆ ಒಂದು ತಿಂಗಳ ಅವಕಾಶ ಕೊಡಿ. ನಾವೆಲ್ಲರು ಅದರ ಬಗ್ಗೆ ರಿವ್ಯೂ ಮಾಡಿಕೊಂಡು ಬರೋಣ. ಆಗ ಅವರಿಗೆ ವಸ್ತುಸ್ಥಿತಿ ಗೊತ್ತಾಗುತ್ತದೆ. ಅಲ್ಲಿ ಮಾನ್ಯ ಸದಸ್ಯರಾದ ಶ್ರೀಮತಿ ಲೀಲಾರವರು ಇದ್ದಾರೆ ಅವರನ್ನು ಕೇಳಿ. ಅವರು ಕೂಡ ಹಳ್ಳಿಗಳಿಗೆ ಹೋಗುತ್ತಿರುತ್ತಾರೆ.

**ಡಾ: ಎಸ್.ಆರ್.ಲೀಲಾ:-** ಮಾನ್ಯ ಸಭಾಪತಿಯವರೆ, ಆ ತರಹ ಏನಾದರು ಸರ್ಕಾರಿ ಕಾರ್ಯಕ್ರಮ ಆಗುವುದಿದ್ದು, ಯಾರನ್ನು ಕರೆಯಬೇಕು ಅಂಥವರನ್ನು ಕರೆಯದಿದ್ದರೆ ಹಕ್ಕುಬಾಧ್ಯತಾ ಸಮಿತಿ ಇದೆ. ಅದಕ್ಕೆ ನಾವು ಹಾಕಿಕೊಳ್ಳಬಹುದು. ನಾನು ಕೂಡ ಸದಸ್ಯಳಾಗಿದ್ದೆ. 3-4 ಅರ್ಜಿಗಳು ಬಂದಿದ್ದು ನಾನು ನೋಡಿದ್ದೇನೆ. ಆದ್ದರಿಂದ ಸಾಲಾಗಿ ಗುದ್ದಲಿ ಪೂಜೆ ಮಾಡಿಕೊಂಡು ಹೋಗುವುದು, ಯಾರಿಗೂ ಕರೆಸದೆ ಇರುವುದು ಆಗಿಲ್ಲ. ಏನೋ ಆಕಸ್ಮಾತ್ ಆಗಿ ಯಾವುದಾದರು ಆಗಿರಬಹುದು.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೆ, ಇವೊತ್ತು ಕುಡಿಯುವ ನೀರಿನ ವಿಚಾರ ಹೇಳಿದ್ದಾರೆ. ಇವೊತ್ತು ಬರಗಾಲದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಗ್ರೌಂಡ್ ವಾಟರ್ ಯಾವ ಸ್ಥಿತಿಯಲ್ಲಿ ಹೋಗಿದೆ. ಇವೊತ್ತು ಗ್ರೌಂಡ್ ವಾಟರ್ ಆಧಾರದ ಮೇಲೆ ನಮ್ಮ ವ್ಯವಸಾಯ ಎಷ್ಟು ನಿಂತಿದೆ

ಎಂದು ನಿಮಗೂ ಗೊತ್ತಿದೆ. ನಮಗೂ ಗೊತ್ತಿದೆ. ವ್ಯವಸಾಯ ಕ್ಷೇತ್ರದಲ್ಲಿ ಇವೊತ್ತು ಸುಮಾರು 10.78 ಲಕ್ಷ ಹೆಕ್ಟೇರ್ ಪ್ರದೇಶ ಗ್ರೌಂಡ್ ವಾಟರ್ ಮೇಲೆ ಆಧಾರಿತವಾಗಿದೆ. ಹೆಚ್ಚು ಕಡಿಮೆ ಸುಮಾರು 33 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿಗೆ ಒಳಪಟ್ಟಿದೆ. ಆ 33 ಲಕ್ಷ ಹೆಕ್ಟೇರ್ ನೀರಾವರಿ ಪ್ರದೇಶದಲ್ಲಿ ಗ್ರೌಂಡ್ ವಾಟರ್ ಮೇಲೆ ನಾವು ಆಧಾರ ಪಟ್ಟಿರುವಂಥದ್ದೆಷ್ಟು ಅಂತ ಕೇಳಿದರೆ ಸ್ವಲ್ಪ ಹೆಚ್ಚು ಕಡಿಮೆ 11 ಲಕ್ಷ ಹೆಕ್ಟೇರ್ ಪ್ರದೇಶ. ಈ ರೀತಿಯಾಗಿ ಮೋರ್ ಎಕ್ಸ್‌ಪ್ಲಾಯಟೇಶನ್ ಆಗುತ್ತ ಹೋದರೆ ನಾವು ಯಾವ ಸ್ಥಿತಿಗೆ ಹೋಗಿ ತಲುಪುತ್ತೇವೆ. ಒಂದು ಕುಡಿಯುವ ನೀರಿಗೂ ತೊಂದರೆಯಾಗುತ್ತದೆ. ಮತ್ತು ವ್ಯವಸಾಯದ ಮೇಲೂ ಕೂಡ ಭೀಕರವಾದಂಥ ಪರಿಣಾಮ ಬೀರುತ್ತದೆ. ಇದಕ್ಕೇನಾದರು ನಾವು ಕಾರ್ಯಕ್ರಮಗಲನ್ನು ಹಾಕಿಕೊಂಡಿದೇವೆಯೇ? ಯಾವಾಗಲೋ ಈ ಜಗತ್ತು, ಈ ಪೃಥ್ವಿ ಸೃಷ್ಟಿಯಾದಾಗ ನೀರು ಗ್ರೌಂಡ್ ವಾಟರ್ ಆಕ್ಯುಮಲೇಟ್ ಆಗಿರುವಂಥದ್ದು. ಅದನ್ನು ಕೇವಲ 20–30 ವರ್ಷದಲ್ಲಿ ನಾವು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡು ಬಿಟ್ಟಿದ್ದೇವೆಂದರೆ ಅಂದರೆ ಭವಿಷ್ಯದಲ್ಲಿ ಯಾರು ಜನರು ಬದುಕುವುದೇ ಬೇಡವೇ? ಈ ಬದುಕು ನಮಗಷ್ಟೇ ಸೀಮಿತವೇ? ಇದಕ್ಕೇನಾದರು ಮೇಜರ್ಸ್ ಬೇಕೇ ಬೇಡವೇ? ಇವೊತ್ತು ಬೆಂಗಳೂರಿನಂತಹ ದೊಡ್ಡ ನಗರದಲ್ಲಿಯೂ ಸಹಿತ ಗ್ರೌಂಡ್ ವಾಟರ್ ಟೋಟಲ್ ಆಗಿ ಓವ್ಹರ್ ಎಕ್ಸ್‌ಪ್ಲಾಯಿಟೇಶನ್ ಆಗಿದೆ. ನೀವು ಒಂದು ಕಾನೂನನ್ನು ತಂದಿದ್ದೀರಿ, ಅದಕ್ಕೆ ಒಂದು ಆಕ್ಟ್ ಅನ್ನು ಕೂಡ ತಂದಿದ್ದೀರಿ. ಆದರೆ ನಿಮ್ಮ ಸರ್ಕಾರಕ್ಕೆ ಅದರ ಬಗ್ಗೆ ಇವೊತ್ತಿನವರೆಗೆ ಒಂದು ರೂಲ್ಸ್ ಫ್ರೇಮ್ ಮಾಡುವುದಕ್ಕಾಗಲಿಲ್ಲ ಅಂದರೆ ನಿಮಗೆ ಏನು ಜವಾಬ್ದಾರಿ ಇದೆ ಎಂದು ಹೇಳಬೇಕು. ಹಾಗಿದ್ದರೆ ನೀವು ಬಹಳ ಚೆನ್ನಾಗಿ ಆಡಳಿತ ಮಾಡುತ್ತಿದ್ದೀರೆಂದು ಹೊಗಳಬೇಕೇ? ನೀವೇ ತಂದಂಥ ಒಂದು ಕಾನೂನಿಗೆ ಮೂರು ತಿಂಗಳಾದರೂ ಕುಡ ಒಂದು ರೂಲ್ಸ್ ಫ್ರೇಮ್ ಮಾಡುವುದಕ್ಕಾಗುವುದಿಲ್ಲ ಅಂದರೆ ಮತ್ತೆ ಯಾವ ಕೆಲಸವನ್ನು ತಾವು ಮಾಡುತ್ತೀರಿ? ಗ್ರೌಂಡ್ ವಾಟರ್‌ಗೆ ಸಂಬಂಧಪಟ್ಟಂತೆ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇವೊತ್ತು ಬರೀ ಹಳ್ಳಿಗಾಡಿನ ಪ್ರದೇಶವಷ್ಟೇ ಅಲ್ಲ, ಎಲ್ಲಾ

ಪಟ್ಟಣ ಪ್ರದೇಶಗಳು ಕೂಡ ಇವೊತ್ತು ಗ್ರೌಂಡ್ ವಾಟರ್ ಮೇಲೆ ಡಿಪೆಂಡ್ ಆಗಿವೆ. ಸ್ಥಿತಿ ಇಷ್ಟೊಂದು ಗಂಭೀರವಾಗಿದೆ. ನೀರು ಎಲ್ಲರಿಗೂ ಬೇಕು ಬೇಡವೇ? ಇವೊತ್ತು ಕುಡಿಯುವ ನೀರು ಎಲ್ಲರಿಗೂ ಬೇಕು. ಇವೊತ್ತು ನಮ್ಮಂಥ ಹಳ್ಳಿಗಳಲ್ಲಿ ಅದರಲ್ಲೂ ಕೂಡ ಬಯಲು ಸೀಮೆ ಜಿಲ್ಲೆಗಳಲ್ಲಿ ಫ್ಲೋರೈಡ್ ಕಂಟೇಂಟ್ಸ್‌ದಿಂದ ಜನರ ಆರೋಗ್ಯದ ಮೇಲೂ ಕೂಡ ದುಷ್ಪರಿಣಾಮ ಆಗುತ್ತಿದೆ. ಬಯಲು ಸೀಮೆ ಜಿಲ್ಲೆಗಳು ಇವೊತ್ತು ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿವೆ. ಮಾನ್ಯ ಸಭಾಪತಿಯವರೆ, ಆ ಬಯಲುಸೀಮೆ ಜಿಲ್ಲೆಗಳಿಗೆ ಸಾಮಾಜಿಕ ನ್ಯಾಯ ಬೇಡಬೇ? ಆ ಜನರು ಬದುಕಬಾರದೇ? ಆ ಜನರ, ರೈತರ ಕಾಂಟ್ರಿಬ್ಯೂಷನ್ ಇಲ್ಲವೇ? ರಾಜ್ಯದ ಪ್ರಗತಿಯಲ್ಲಿ ಬಹಳ ದೊಡ್ಡ ಪ್ರಮಾಣದ ಶ್ರಮ ಯಾರದಾದರೂ ಇದ್ದರೆ ಈ ಬಯಲುಸೀಮೆ ಜಿಲ್ಲೆಗಳದ್ದಿದೆ. ಈ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ, ರಾಮನಗರ ಈ ಎಲ್ಲಾ ಜಿಲ್ಲೆಗಳಿವೆಯಲ್ಲ ಅಲ್ಲಿನ ಜನರ ಸ್ಥಿತಿ ಏನಿದೆ? ಅಲ್ಲಿ ಯಾವುದೇ ನದಿ ನೀರಿನ ಆಶ್ರಯ ಇಲ್ಲ. ಅಲ್ಲಿ ಕೇವಲ ಕೆರೆಗಳ ಮೇಲೆ ಅವಲಂಬಿತರಾಗಿದ್ದಾರೆ. ಆ ಕೆರೆಗಳು ಕೂಡ ಒಣಗಿವೆ. ಈ ರಾಜ್ಯದಲ್ಲಿ ಸುಮಾರು 3470 ಮೈನರ್ ಇರ್ರಿಗೇಶನ್ ಟ್ಯಾಂಕ್ಸ್‌ಗಳಿವೆ. ಇವೊತ್ತು ಸುಮಾರು 2000 ಕೆರೆಗಳು ಸಂಪೂರ್ಣವಾಗಿ ಬತ್ತಿ ಹೋಗಿವೆ. ಅಂದರೆ ಇವೊತ್ತು ಸ್ಥಿತಿ ಎಲ್ಲಿಗೆ ಹೋಗಿದೆ ಎಂದು ನೋಡಿ. ಕೆರೆಗಳನ್ನು ನಾವು ನಿರ್ಮಾಣ ಮಾಡಿದ್ದೇವೆಯೇ? ಕೆರೆಗಳನ್ನು ನಿರ್ಮಾಣ ಮಾಡಿರುವಂಥವರು ಯಾರು? ಪ್ರಜಾಪ್ರಭುತ್ವದ ವ್ಯವಸ್ಥೆ ಬರುವುದಕ್ಕೂ ಮೊದಲು ಆ ಹಿರಿಯರು ಇದ್ದಾರಲ್ಲ, ಅವರು ಯಾವುದೇ ಯುನಿವರ್ಸಿಟಿಗೆ ಹೋಗಿರಲಿಲ್ಲ. ಅವರು ಯಾವುದೇ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಹೋಗಿರಲಿಲ್ಲ. ಅವರು ಕೆರೆಗಳನ್ನು, ಅರಣ್ಯ ಪ್ರದೇಶಗಳನ್ನು ನಿರ್ಮಾಣ ಮಾಡಿದ್ದಾರೆ. ಅಂದರೆ ವ್ಯವಸಾಯಕ್ಕೆ ಆವತ್ತಿನ ಪರಿಸ್ಥಿತಿಯಲ್ಲಿ ಹೇಗೆ ಒಂದು ಸದ್ಬಳಕೆ ಮಾಡಿಕೊಳ್ಳುವಂತಹ ಒಂದು ಪ್ರಯತ್ನವನ್ನು ಜನರು ಮಾಡಿದ್ದರು ಎನ್ನುವುದು ಸರ್ಕಾರಗಳಿಗೆ ಮತ್ತು ಇಲಾಖೆಯವರಿಗೆ ವಿವೇಚನೆ ಇಲ್ಲದೇ ಹೋದರೆ ಇಂತಹ ಭೀಕರವಾದಂತಹ ಸ್ಥಿತಿಯನ್ನು ನಾವು ನೋಡಬೇಕಾಗುತ್ತದೆ. ಅದಕ್ಕೆ ನಾನು ಹೇಳಿದ್ದು ಸರ್ಕಾರ ಈ

ಭೀಕರವಾದಂತಹ ಬರಗಾಲದಂತಹ ಸನ್ನಿವೇಶದಲ್ಲಿ ಒಂದು Short Term ಕಾರ್ಯಕ್ರಮಗಳ ಬಗ್ಗೆ ಯೋಚನೆ ಮಾಡಬೇಕು. Medium Term ಕಾರ್ಯಕ್ರಮಗಳ ಬಗ್ಗೆ ಮತ್ತು Long Term ಕಾರ್ಯಕ್ರಮಗಳ ಬಗ್ಗೆ ಆಲೋಚನೆ ಮಾಡಬೇಕು. ಹಾಗಿದ್ದರೆ ಈ ಜಿಲ್ಲೆಗಳಲ್ಲಿ ಶಾಶ್ವತವಾದಂತಹ ಪರಿಹಾರಗಳನ್ನು ಸರ್ಕಾರ ಕೊಡಬೇಕಲ್ಲವೇ? ಕುಡಿಯುವ ನೀರಿಗಾಗಿ ಬೋರ್‌ವೆಲ್‌ಗಳನ್ನು ಹಾಕಿರುವುದು 15 ದಿವಸಗಳಲ್ಲಿ ನೀರು ಬರದೇ ಡ್ರೈ ಆಗಿದೆ. ದಯಮಾಡಿ ಮಾನ್ಯ ಸಚಿವರು ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕುರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಸರ್ಕಾರದ ಇಲಾಖೆಯಿಂದ ಹಾಕಿರುವಂತಹ ಬೋರ್‌ವೆಲ್‌ಗಳು 15 ದಿವಸಗಳಲ್ಲಿ ಡ್ರೈ ಆಗಿದೆ. ಆಗಿದ್ದರೆ ಈ ಜಿಲ್ಲೆಗಳಿಗೆ ಕುಡಿಯುವ ನೀರಿಗೆ ಶಾಶ್ವತವಾದಂತಹ ಪರಿಹಾರ ಬೇಕೇ, ಬೇಡವೇ? ಆ ಶಾಶ್ವತ ಪರಿಹಾರಕ್ಕೆ ಇವತ್ತು ಏನಾದರು ದೂರದೃಷ್ಟಿ ಬೇಕಲ್ಲವೇ? ಅದಕ್ಕೆ ಒಂದು ಚಾಲನೆಯಾಗಬೇಕಲ್ಲವೇ? ಇಷ್ಟೆಲ್ಲಾ ಜನ ನಿರಂತರವಾಗಿ ಸರ್ಕಾರದವರ ಮೇಲೆ ಹೋರಾಟವನ್ನು ಮಾಡುತ್ತಿದ್ದಾರೆ. ಪ್ರಯತ್ನ ಮಾಡುತ್ತಿದ್ದಾರೆ, ಇದು ಬದುಕಿನ ಪ್ರಶ್ನೆ ಎಂದು ಹೇಳುತ್ತಿದ್ದಾರೆ. ಇಷ್ಟಾದರೂ ಕೂಡ ಸರ್ಕಾರ ಕಣ್ಣು ತೆರೆಯುವುದಿಲ್ಲವೆಂದು ಹೇಳಿದರೆ, ಆ ಜನರಿಗೆ ಉಳಿದಿರುವಂತಹ ದಾರಿಯಾದರು ಏನು? ದಾರಿ ಏನೆಂದರೆ ಮುಂದೆ ಒಂದು ದಿನ ಆ ಜಿಲ್ಲೆಗಳು ಮರುಳುಗಾಡುಗಳಾಗಿ ಬಿಡುತ್ತದೆ. ಕರ್ನಾಟಕದ ಮ್ಯಾಪ್‌ನಲ್ಲಿ ಈ ಎಲ್ಲಾ ಬಯಲು ಸೀಮೆ ಜಿಲ್ಲೆಗಳು ಇದೆಯಲ್ಲಾ ಇವುಗಳನ್ನು ಮರುಳುಗಾಡು ಎಂದು ತಾವು ಡಿಕ್ಲೇರ್ ಮಾಡಿಬಿಡಬೇಕಗುತ್ತದೆ.

**ಶ್ರೀ ಜಿ.ಹೆಚ್.ತಿಪ್ಪಾರೆಡ್ಡಿ:-** ಮಾನ್ಯ ಸಭಾಪತಿಯವರೆ, ಎತ್ತಿನ ಹೊಳೆ ನೀರಾವರಿಗೆ ನಮ್ಮ ಸರ್ಕಾರ 400 ಕೋಟಿ ರೂಪಾಯಿಗಳನ್ನು ಇಟ್ಟಿಲ್ಲವೇ?

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೆ, ಎತ್ತಿನ ಹೊಳೆ ನೀರಾವರಿಗೆ ನಾವೆಲ್ಲಾ ಒತ್ತಾಯ ಮಾಡಿದ ಮೇಲೆ ಡಾ: ಪರಮಶಿವಯ್ಯನವರ ವರದಿಯನ್ನು ಅದನ್ನು Cold Storage ಮಾಡುವಂತಹ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತಿದೆ. ಇದು ಇನ್ನು ಯಾವ

ಹಂತದಲ್ಲಿದೆ? ಅದಕ್ಕೆ ಇದುವರೆಗೂ ಹಣ ಕೊಟ್ಟಿಲ್ಲ. ಒಂದು ಸರ್ವೇ ಮಾಡಿರುವಂತಹ ಡಾ: ಪರಮಶಿವಯ್ಯನವರು ಸರ್ಕಾರಕ್ಕೆ ಕೊಟ್ಟಿರುವಂತಹ ವರದಿಯನ್ನು ಸದನದ ಮುಂದೆ ಮಂಡಿಸಿ, ಅದರ ಬಗ್ಗೆ ಸರ್ಕಾರದ ಅಭಿಪ್ರಾಯವನ್ನು ಹೇಳಿ. ಅದನ್ನು ಹೇಳಬೇಕೋ ಬೇಡವೋ?

**ಶ್ರೀ ಸಿ.ಪಿ.ಯೋಗೇಶ್ವರ್ (ಅರಣ್ಯ ಸಚಿವರು):–** ಮಾನ್ಯ ಸಭಾಪತಿಯವರೆ, ಡಾ: ಪರಮಶಿವಯ್ಯನವರು ಕೊಟ್ಟಿರುವಂತಹ ವರದಿಯನ್ನು ಸರ್ಕಾರ ಈಗಾಗಲೇ ಕೂಲಂಕುಶವಾಗಿ ಪರಿಶೀಲನೆಯನ್ನು ಮಾಡುತ್ತಿದೆ. ತಮಗೂ ಕೂಡ ಕೊಟ್ಟಿರುವಂತೆ Western Ghat ನಲ್ಲಿ ಸಾಕಷ್ಟು ಪ್ರತಿಭಟನೆ ಇರುವುದರಿಂದ ಎಷ್ಟು ನಮ್ಮ ಇತಿಮಿತಿಯಲ್ಲಿ ನಾವು ಮಾಡಿಕೊಳ್ಳಬಹುದು ನಾವು ಮೊದಲನೆಯ ಹಂತದಲ್ಲಿ ಎತ್ತಿನ ಹೊಳೆ ನೀರಾವರಿಗೆ ಚಾಲನೆಯನ್ನು ಕೊಟ್ಟಿದ್ದೇವೆ. 400 ಕೋಟಿ ರೂಪಯಿಗಳನ್ನು ಈಗ ಆಯವ್ಯಯದಲ್ಲಿ ಹಣವನ್ನು ಮೀಸಲಾಗಿದೆ. ತಮ್ಮ ಕೂಗು ಬಯಲು ಸೀಮೆ ಬಗ್ಗೆ ಇದೆ. ಒಟ್ಟಿನಲ್ಲಿ ನಮ್ಮ ಸರ್ಕಾರ ಅದಕ್ಕೆ ಪೂರಕವಾಗಿ ಕ್ರಮವನ್ನು ಕೈಗೊಂಡಿದೆಯಲ್ಲವೇ?

**ಶ್ರೀ ತಿಪ್ಪಾರೆಡ್ಡಿ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿ.ಆರ್.ಸುದರ್ಶನ್‌ರವರೆ upper Bhadra and upper Bhadra ಯೋಜನೆಗಳ ಬಗ್ಗೆ ಹಿಂದಿನ 30–40 ವರ್ಷಗಳ ಹಿಂದೆಯೇ ಅನೇಕ ಸರ್ಕಾರಗಳಲ್ಲಿ ಚರ್ಚೆಯಾಗಿತ್ತು. ಕಳೆದ ಮೂರು ವರ್ಷದಲ್ಲಿ ಸುಮಾರು 4,000 ಕೋಟಿ ರೂಪಾಯಿ ಹಣವನ್ನು ಕೊಟ್ಟು ಆ ಏರಿಯಾದಲ್ಲಿ ಈಗ ಅತಿ ವೇಗವಾಗಿ ಕೆಲಸ ನಡೆಯುತ್ತಿದೆ. ನಮ್ಮ ಜಿಲ್ಲೆಗೆ ಮತ್ತು ಕೋಲಾರ ಜಿಲ್ಲೆಗೂ ನೀರು ಬರತಕ್ಕಂಥದ್ದು.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಪ್ಲಾನ್ ಮಾಡಿದ್ದು ನಂತರ ನೀವು ಸರ್ಕಾರ ಬಂತು ಅದನ್ನು ಮಾಡುತ್ತಿದ್ದೀರಿ. ಅದರಲ್ಲಿ ಏನು ಹೆಚ್ಚುಗಾರಿಕೆ ಇಲ್ಲ ಬಿಡಿ.

**ಶ್ರೀ ತಿಪ್ಪಾರೆಡ್ಡಿ:-** ಮಾನ್ಯ ಸಭಾಪತಿಯವರೆ, ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಆಡಳಿತದಲ್ಲಿದ್ದಾಗ ಚುನಾವಣೆಯ ಸಂದರ್ಭದಲ್ಲಿ ಅಪ್ಪರ್ ಭದ್ರಾಕ್ಕೆ ನಾಲ್ಕು ಸಾರಿ ಪ್ರಧಾನ ಮಂತ್ರಿಗಳ ಹತ್ತಿರ ಫೌಂಡೇಷನ್ ಹಾಕಿಸಲಾಯಿತು. ಆದರೆ ಚಾಲನೆ ಕೊಟ್ಟದ್ದು ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಮಾನ್ಯ ತಿಪ್ಪಾರೆಡ್ಡಿಯವರೆ ನೀವು ಮೊದಲು ಎಲ್ಲಿದ್ದೀರಿ ಎನ್ನುವುದನ್ನು ನೋಡಿಕೊಂಡು ಮಾತನಾಡಿ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೆ, ನಾವು ಬರಗಾಲದಲ್ಲಿ ಜನಗಳ ಬಗ್ಗೆ ಮಾತನಾಡಿದ್ದೇವೆ. ಆದರೆ ಜಾನುವಾರುಗಳ ಪರಿಸ್ಥಿತಿ ಏನಾಗಿದೆ ಎಂದರೆ ಪಾಪ ಅವುಗಳಿಗೆ ಮಾತನಾಡುವುದಕ್ಕೆ ಬರುವುದಿಲ್ಲ. ಮಾತನಾಡುವುದಕ್ಕೆ ಬರುವುದಿಲ್ಲವೆಂದು ಹೇಳಿ ನಿರ್ಲಕ್ಷ್ಯವನ್ನು ಮಾಡುವುದಕ್ಕೆ ಆಗುತ್ತದೆಯೇ? ಮಾನ್ಯ ಕಂದಾಯ ಸಚಿವರು ಸದನದಲ್ಲಿಯೇ ಇದ್ದಾರೆ ಅವರು ಹೇಳಬೇಕು. ನಮ್ಮ ರಾಜ್ಯದಲ್ಲಿ ಹಸು, ಎಮ್ಮೆ, ಕುರಿ ಎಲ್ಲಾ ಪ್ರಾಣಿಗಳು ಸೇರಿ ಒಟ್ಟು 1.40 ಕೋಟಿ ಇದೆ. ಇವುಗಳಿಗೆ ಬೇಕಾಗಿರುವಂತಹ ಮೇವಿನ ಅಗತ್ಯ ಎಷ್ಟು ಎಂದರೆ, 82.81 ಲಕ್ಷ ಟನ್‌ಗಳು. ಆದರೆ ಈಗ ಮೇವು ಇರುವಂತಹ ಸ್ಟಾಕ್‌ನಲ್ಲಿ 20 ವಾರಗಳ ಮೇವು ಕೊರತೆ ಬರುತ್ತಿದೆ. ಈ 20 ವಾರಗಳ ಮೇವಿನ ಕೊರತೆಯನ್ನು ಸರ್ಕಾರ ಯಾವ ರೀತಿಯಾಗಿ ಸರಿದೂಗಿಸಿಕೊಳ್ಳುತ್ತದೆ. ಇದರಲ್ಲಿ ಅರಣ್ಯ ಇಲಾಖೆಯ, ತೋಟಗಾರಿಕೆ ಇಲಾಖೆಯ ಜವಾಬ್ದಾರಿ ಇಲ್ಲವೇ? ಯಾವತ್ತಾದರು ಒಂದು ದಿವಸ ಏಕೆಂದರೆ, ಬರಗಾಲಕ್ಕೆ ಸಂಬಂಧಪಟ್ಟಂತೆ ಶ್ರಿ ಜಗದೀಶ್ ಶೆಟ್ಟರ್‌ರವರು ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ಪಶುಸಂಗೋಪನೆ ಇಲಾಖೆ ಇವೆಲ್ಲಾ ಸೇರಿ ಒಂದು ಸಭೆಯನ್ನು ಯಾವತ್ತಾದರೂ ಮಾಡಲಾಗಿದೆಯೇ? ಒಂದು ರಿವ್ಯೂ ಮಾಡಲಾಗಿದೆಯೇ? It’s a collective responsibility on their part. ಅಲ್ಲವೇ? ಈ ಇಲಾಖೆಗಳ ಬಗ್ಗೆ ಏನಾದರು

ಹೊಂದಾಣಿಕೆ ಇದೆಯೇ? ದಯಮಾಡಿ ರಾಜ್ಯದ ಹಂತದಲ್ಲಿ ಈ ಇಲಾಖೆಗಳು ಒಟ್ಟಾಗಿ ಸೇರಿ ಬರಗಾಲದ ಬಗ್ಗೆ ಏನಾದರು ಒಂದು ಸಭೆಯನ್ನು ಮಾಡಲಾಗಿದೆಯೇ ಎಂದು ದಯಮಾಡಿ ಹೇಳಬೇಕು. ಇಷ್ಟು ಇಲಾಖೆಗಳನ್ನು ಸೇರಿಸಿ ಬರಗಾಲದ ನಿರ್ವಹಣೆಯಲ್ಲಿ ನಿಮ್ಮ ಜವಾಬ್ದಾರಿಗಳಿದೆ, ನಾಳೆಯ ದಿವಸ ಕ್ರಮ ಕೈಗೊಳ್ಳಲಿಲ್ಲ ಎಂದರೆ, ನಿಮ್ಮ ಮೇಲೆ action initiate ಮಾಡಬೇಕಾಗುತ್ತದೆ. ಏನಾದರು ಮೇವು ಕೊರತೆ ಬಂದರೆ you will be held responsible ಎನ್ನುವಂತಹ ಎಚ್ಚರಿಕೆ ಸಂದೇಶವನ್ನು ಅಧಿಕಾರಿಗಳಿಗೆ ಹೇಳಲಾಗಿದೆ. ಜನಗಳಿಗೆ ಏನಾದರು ಸಮಾಧಾನದ ಸಂದೇಶಗಳೇನಾದರು ತಲುಪುವುದಕ್ಕೆ ಸಾಧ್ಯವಾಗಿದೆ ಎನ್ನುವುದನ್ನು ನೋಡಿದರೆ ಎಂಥದ್ದು ಇಲ್ಲ. ನಿಮ್ಮ ರೆಸಾರ್ಟ್‌ಗಳ ಸಂದೇಶಗಳನ್ನೇ ಜನರು ನೋಡಿ ಖುಷಿ ಪಟ್ಟುಕೊಳ್ಳಬೇಕು. ಕರ್ನಾಟಕದ ರಾಜಕಾರಣವನ್ನು, ನಿಮ್ಮ ಗೊಂದಲಗಳನ್ನು ನೋಡಿ, ಅದನ್ನೇ ಊಟ ಎಂದು ಜನರು ಖುಷಿ ಪಟ್ಟುಕೊಂಡಿರಬೇಕಾದಂತಹ ದುಸ್ಥಿತಿ ಇವತ್ತು ಕರ್ನಾಟಕ ರಾಜ್ಯದಲ್ಲಿ ನಿರ್ಮಾಣವಾಗಿದೆ. ಮೂಖ ಜೀವಿಗಳು, ಆ ಪ್ರಾಣಿಗಳಿಗೆ ಮಾತು ಇಲ್ಲ ಎಂದು ನಿರ್ಲಕ್ಷ್ಯ ಧೋರಣೆ ಸರ್ಕಾರ ಅನುಸರಿಸುತ್ತದೆಂದು ಹೇಳಿದರೆ ಇನ್ನು ಯಾವುದರ ಬಗ್ಗೆ ಸರ್ಕಾರ ಆಸಕ್ತಿಯನ್ನು ತೆಗೆದುಕೊಳ್ಳಲಾಗುತ್ತದೆ? ಬೆಳೆ ಪರಿಹಾರದ ಬಗ್ಗೆ ಕೂಡ ಬೆಳೆ ವಿಮೆ ಇದೆ. ಇವತ್ತು ರೈತರಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ನಷ್ಟವಾಗಿದೆಯಲ್ಲಾ ಅದನ್ನು ಯಾರು ಕಟ್ಟಿ ಕೊಡುವವರು? ಸರ್ಕಾರ ಕೈಗಾರಿಕೆಗಳನ್ನು ನಡೆಸುವಂಥವರಿಗೆ ಏನಾದರು ನಷ್ಟವಾದರೆ ಬೇರೆ ಬೇರೆ tax reforms ನಲ್ಲಿ ಬೇರೆ ಬೇರೆ ರೀತಿಯ ಅವಕಾಶಗಳನ್ನು ಸರ್ಕಾರ ಮಾಡಿಕೊಡುವುದಕ್ಕೆ ಮುಂದಾಗುತ್ತದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ರೈತರ ಬೆಳೆ ನಷ್ಟವಾಗಿದೆಯಲ್ಲಾ, ಆ ಬೆಳೆ ನಷ್ಟಕ್ಕೆ ಏನಾದರು ಪರಿಹಾರದ ಘೋಷಣೆಯನ್ನು ಮಾಡಲಾಗಿದೆಯೇ? ದಯಮಾಡಿ ಆ ಘೋಷಣೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ರೈತರ ಬೆಳೆ ನಷ್ಟಕ್ಕೆ ಸರ್ಕಾರ ಏನಾದರು ಪರಿಹಾರವನ್ನು ಕೊಡಬೇಕಾಗುತ್ತದೆ. ಇದರ ಜೊತೆಗೆ ಬೆಳೆ ವಿಮೆ ಇದೆಯಲ್ಲಾ ಇದರ ಬಗ್ಗೆ

ವಿಮೆ ಕಂಪನಿಗಳ ಜೊತೆಯಲ್ಲಿ ಸರ್ಕಾರ ಚರ್ಚೆ ಮಾಡಬೇಕು. ಬೆಳೆ ವಿಮೆ ವ್ಯವಸ್ಥೆ ಇದೆಯಲ್ಲಾ ಅದು ಕೂಡ ಸರಿಯಾಗುತ್ತಿಲ್ಲ. ನೀವು ಎಲ್ಲಿಯವರಿಗೆ ಒಂದು ಗ್ರಾಮ ಪಂಚಾಯತಿಯನ್ನು ಯೂನಿಟ್ ಆಗಿ ತೆಗೆದುಕೊಳ್ಳುವುದಿಲ್ಲವೋ, ಅಲ್ಲಿಯವರೆಗೂ ಬೆಳೆ ವಿಮೆಯನ್ನು ಮಾಡಿಸುವುದರಲ್ಲಿ ಅರ್ಥವಿಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಜವಾಬ್ದಾರಿ ಇದೆ. ಆದುದರಿಂದ ಕೇಂಧ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಈ ಬೆಳೆ ವಿಮೆ ಕಂಪನಿಗಳು ಯಾವುದು ಇದೆ ಇವರುಗಳನ್ನು ಕರೆದು ಚರ್ಚೆ ಮಾಡಿ, ಈಗ ಇರುವಂತಹ ಗೈಡ್‌ಲೈನ್ಸ್ ಅನ್ನು ಬದಲಾವಣೆ ಮಾಡಬೇಕಾಗುತ್ತದೆ. ಆ ರೀತಿಯಾದಾಗ ಮಾತ್ರ ಬೆಳೆ ವಿಮೆಗೆ ಏನಾದರು ಅರ್ಥ ಬರುತ್ತದೆಯೇ ವಿನಃ ಇಲ್ಲದೇ ಹೋದರೆ ಬೆಳೆ ವಿಮೆ ಎನ್ನುವದು ಕೇವಲ ಪುಸ್ತಕದಲ್ಲಿ ಉಳಿಯುತ್ತದೆಯೇ ಹೊರತು, ರೈತರಿಗೆ ಯಾವುದೇ ರೀತಿಯಲ್ಲಿ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಜೊತೆಯಲ್ಲಿ ಮತ್ತು ಬೆಳೆ ವಿಮೆ ಕಂಪನಿಗಳ ಜೊತೆಯಲ್ಲಿ ಮಾತನಾಡಲಿ. ಬ್ಯಾಂಕರ್ಸ್ ಮೀಟಿಂಗ್‌ನಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ. ಏನಾದರು ಮಾಡಿ ಬದಲಾವಣೆಗಳನ್ನು ತರುವಂಥದ್ದರ ಬಗ್ಗೆ ಪ್ರಯತ್ನಗಳನ್ನು ಸರ್ಕಾರ ಮಾಡಬೇಕಾಗುತ್ತದೆ. ಇನ್ನೊಂದು ಮುಖ್ಯವಾಗಿ ಬರ ಪರಿಹಾರಕ್ಕೆ 172.25 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಕೊಟ್ಟಿದೆ. ದಯಮಾಡಿ ಶ್ರೀ ಜಗದೀಶ್ ಶೆಟ್ಟರ್‌ರವರು ಗಮನ ಹರಿಸಬೇಕು. ಈ ಹಣವನ್ನು ಜಿಲ್ಲಾಧಿಕಾರಿಗಳು ಏಕೆ ಈ ಪಿಡಿ ಅಕೌಂಟ್‌ಗೆ ಹಾಕಿಕೊಳ್ಳುತ್ತಾರೆ? ಸರ್ಕಾರ ಹಣವನ್ನು ಕೊಟ್ಟಿರುವುದು ಪಿಡಿ ಅಕೌಂಟ್‌ನಲ್ಲಿ ಹಾಕಿಕೊಳ್ಳುವುದಕ್ಕೆ ಕೊಟ್ಟಿರುವುದೇ? ಬರೀ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯಗಳು ಏನೋ ಸಕ್ರೀಯವಾಗಿ ಕೆಲಸವನ್ನು ಮಡುತ್ತಿದ್ದಾರೆ. ಅವರಿಬ್ಬರೆ ಕೆಲಸವನ್ನು ಮಾಡಿದರೆ ಆಗಿ ಬಿಡುತ್ತದೆಯೇ? ಆದ್ದರಿಂದ ಜಿಲ್ಲೆಗಳೀಗೆ ಹೋಗಿ ರಿವ್ಯೂ ಮಾಡಿ ಜಿಲ್ಲಾಧಿಕಾರಿಗಳನ್ನು ಕರೆದು ಚರ್ಚಿಸಿದಾಗ ಗೊತ್ತಾಗುತ್ತದೆ. ಪ್ರತಿಯೊಂದು ಹಣವನ್ನು ಪಿಡಿ ಅಕೌಂಟ್‌ಗೆ ಟ್ರಾನ್ಸ್‌ಫರ್ ಮಾಡಿ ಮತ್ತು ಬರಗಾಲಕ್ಕೆ ಹಣ ಕೊರತೆ ಇದೆ ಎಂದು ಅವರು ಹೇಳುವುದಕ್ಕೆ ಶುರು

ಮಾಡಿದರೆ ಹೇಗೆ ಸಾಧ್ಯವಾಗುತ್ತದೆ. ಇವತ್ತು ಚಿಕ್ಕಬಳ್ಳಾಪುರಕ್ಕೆ ಹೋಗಿದ್ದೇವೆ ಮತ್ತು ಬೇರೆ ಬೇರೆ ಜಿಲ್ಲೆಗಳಿಗೂ ಕೂಡ ನಾವು ಹೋಗಿ ಬಂದಿದ್ದೇವೆ. ನಾವು ಬಾಗಲಕೋಟೆಗೆ ಹೋಗಿ ಬಂದಿದ್ದೇವೆ, ರಾಯಚೂರಿಗೂ ಹೋಗಿ ಬಂದಿದ್ದೇವೆ. ಮೈಸೂರ್ ಡಿವಿಜನ್‌ನಲ್ಲಿ ಎರಡು ಮೂರು ಜಿಲ್ಲೆಗಳಿಗೆ ಹೋಗಿ ಬಂದಿದ್ದೇವೆ. ಇಲ್ಲಿ ಏನಾಗಿದೆಂದರೆ ಮಂತ್ರಿಗಳೆಲ್ಲರೂ ತಮ್ಮ ತಮ್ಮ ಜಿಲ್ಲೆಗಳಿಗೆ ಮಾತ್ರ ಸಿಮಿತವಾಗಿ ಬಿಟ್ಟಿದ್ದಾರೆ. ಇಲಾಖಾ ಮಂತ್ರಿಗಳೀಗೆ ಒಂದೊಂದು ಜಿಲ್ಲೆಯ ಉಸ್ತುವಾರಿಯನ್ನು ಕೊಟ್ಟಿರುವುದರಿಂದ ಆ ಉಸ್ತುವಾರಿಯೇ ಅವರಿಗೆ ಖುಷಿಯಾಗಿದೆ. ತಮ್ಮ ತಮ್ಮ ಜಿಲ್ಲೆಗಳಲ್ಲಿ ಗೂಟದ ಕಾರುಗಳಲ್ಲಿ ಸುತ್ತಾಡುವುದು. ಅವರು ಮದುವೆಗಳಿಗೆ, ಗೃಹ ಪ್ರವೇಶಗಳಿಗೆ, ಮತ್ತೊಂದು ಸಮಾರಂಭಗಳಿಗೆ ಸುತ್ತಾಡುವುದು. ಈ ರಾಜ್ಯದಲ್ಲಿ 30 ಜಿಲ್ಲೆಗಳಿವೆ. ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ 30 ಜಿಲ್ಲೆಗಳಲ್ಲಿ ಪ್ರವಾಸ ಮಾಡಬೇಕಾದ ಜವಾಬ್ದಾರಿ ಇದೆ ಎನ್ನುವಂತಹ ಕನಿಷ್ಠ ವಿವೇಚನೆ ಕೂಡ ಇವರುಗಳಿಗೆ ಇಲ್ಲ. ತಾವು ಉಸ್ತುವಾರಿಯನ್ನು ಹೊತ್ತಿರುವಂತಹ ಜಿಲ್ಲೆಗಳಲ್ಲಿಯೂ ಕೂಡ ಕೆಡಿಪಿ ಸಭೆಗಳನ್ನು ನೆಟ್ಟಗೆ ಮಾಡುತ್ತಿಲ್ಲ. ಸಭೆಗಳನ್ನು ಕರೆಯುವುದಿಲ್ಲ. ಮೂರು ತಿಂಗಳಿಗೆ ಒಮ್ಮೆ ರಿವ್ಯೂ ಮಾಡುವುದಿಲ್ಲ. ಅದಕ್ಕೆ ನಾನು ಹೇಳಿದ್ದು ನಾನು ಈ ಮಾತನ್ನು ಉತ್ಪ್ರೇಕ್ಷೆಗೋಸ್ಕರವಾಗಿ ಹೇಳುತ್ತಿಲ್ಲ. ಈ ರಾಜ್ಯದಲ್ಲಿ ಆಡಳೀತ ಸಂಪೂರ್ಣ ಕುಸಿದು ಬಿದ್ದಿದೆ. ಇದರ ಪರಿಣಾಮ ಆಡಳಿತದ ಮೇಲೆ ಆಗಿದೆ. ಇವತ್ತು ರಾಜ್ಯದ ರೈತರು ಮತ್ತು ಸಾಮಾನ್ಯ ಜನರು ಹಾಹಾಕರದ ಪರಿಸ್ಥಿತಿಯಲ್ಲಿದ್ದಾರೆ. ಇದೇ ಪರಿಸ್ಥಿತಿ ಹೀಗೆ ಮುಂದುವರೆದರೆ ಜನ ನಿಮ್ಮನ್ನು ಬೀದಿ ಬೀದಿಯಲ್ಲಿ ವಿಚಾರಣೆ ಮಾಡಿಕೊಳ್ಳುತ್ತಾರೆ ಎನ್ನುವಂತಹ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ಜನರು ಎಚ್ಚರಿಸಬೇಕೆಂದು ಇದ್ದಾರೆ. ಏಕೆಂದರೆ ಜನರು ಸರ್ಕಾರದ ಮೇಲೆ ಯಾವುದೇ ಭರವಸೆಯನ್ನು ಇಟ್ಟುಕೊಂಡಿಲ್ಲ. ಏಕೆಂದರೆ ಎಲ್ಲಾ ಭರವಸೆಗಳು ಹುಸಿಯಾಗಿದೆ, ಮಣ್ಣು ಪಾಲು ಆಗಿದೆ. ಆ ಎಲ್ಲಾ ನಿರೀಕ್ಷೆಗಳು ಸತ್ತು ಹೊಗಿದೆ. ಇವತ್ತು ಯಾವ ಭರವಸೆಗಳು ಕೂಡ ಉಳಿದಿಲ್ಲ. ಯಾವ ಭರವಸೆಗಳು ಸಹ ಉಳಿದಿಲ್ಲ. ಆದ್ದರಿಂದ ಇವೊತ್ತೇನು 123 ತಾಲ್ಲೂಕುಗಳಲ್ಲಿನ ರೈತರು ಮತ್ತು ಸಾಮಾನ್ಯ ಜನರು ಮತ್ತು ಬಡವರು ಅತ್ಯಂತ ಕಷ್ಟದಲ್ಲಿದ್ದಾರೆ ಅವರ ನೆರವಿಗೆ ಸರ್ಕಾರ

ಹೋಗಬೇಕಾಗುತ್ತದೆ. ಪ್ರತಿ ಜಿಲ್ಲೆಯ ಹಳ್ಳಿಗಳಿಗೆ ಭೇಟಿ ಕೊಟ್ಟು, ಇಲಾಖೆಗಳ ಮುಖಾಂತರ ಕೈಗೊಳ್ಳುವಂತಹ ಕಾರ್ಯಕ್ರಮಗಳಿಗೆ ಹಣ ಖರ್ಚಾಗಿದೆಯೇ ಎಂಬುದನ್ನು ಗಮನಿಸಿ ಆ ಜನರಿಗೆ ಉದ್ಯೋಗವನ್ನು ಕೊಡುವಂಥದ್ದು. ಆಸ್ತಿಯನ್ನು ನಿರ್ಮಾಣ ಮಾಡುವಂಥದ್ದು, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತಹ ಒಂದು ವಾತಾವರಣ ಇನ್ನಾದರೂ ನಿರ್ಮಾಣವಾಗಲಿ, ಸರ್ಕಾರಕ್ಕೆ ಆ ರೀತಿಯ ವಾತಾವರಣವನ್ನು ನಿರ್ಮಿಸುವಂತಹ ಬುದ್ಧಿ ಬರಲಿ ಎಂದು ತಮ್ಮ ಮುಖಾಂತರ ಅವರಿಗೆ ಎಚ್ಚರಿಕೆಯನ್ನು ನೀಡಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನನ್ನು ಮುಗಿಸುತ್ತೇನೆ.

**ಶ್ರೀ ಮೋಹನ ಎ. ಲಿಂಬೀಕಾಯಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬರ ಪರಿಸ್ಥಿತಿಯ ಮೇಲೆ ಇದುವರೆಗೂ ಮಾತನಾಡಿದ ಮಾನ್ಯ ಸದಸ್ಯರಗುಳ ಮಾತುಗಳನ್ನು ಕೇಳಿದ ಮೇಲೆ ನಾವು ಬರಕ್ಕೆ ಏನು ಪರಿಣಾಮವನ್ನು ಮಾಡಬಹುದು, ಬರಕ್ಕೆ ಏನು ಪರಿಹಾರವನ್ನು ಕಂಡುಹಿಡಿಯಬೇಕು ಎನ್ನುವುದಕ್ಕಿಂತ ಪೂರ್ವದಲ್ಲಿ ಬರಗಾಲ ಪರಿಸ್ಥಿತಿ ನಿರ್ಮಾಣವಾಗಲು ಕಾರಣವೇನು, ಆ ರೀತಿಯ ಪರಿಸ್ಥಿತಿ ಉಂಟಾಗುವಂತೆ ತಡೆಗಟ್ಟುವಲ್ಲಿ ಸರ್ಕಾರದ ಜವಾಬ್ದಾರಿ ಏನು ಎಂಬುದರ ಬಗ್ಗೆ ಚರ್ಚೆ ಮಾಡುವುದು ಒಳ್ಳೆಯದೆಂಬುದು ನನ್ನ ಭಾವನೆ. ನಮ್ಮ ಭಾರತದ ಅಂಕಿಸಂಖ್ಯೆಗಳನ್ನು ತೆಗೆದುಕೊಂಡಾಗ ಕನ್ಯಾಕುಮಾರಿಯಿಂದ ಕಶ್ಮೀರದವರೆಗಿನ ಒಟ್ಟು ಕ್ಷೇತ್ರದಲ್ಲಿ ಶೇಕಡ 68ರಷ್ಟು ಭಾಗದಲ್ಲಿ ಬರಗಾಲ ಪರಿಸ್ಥಿತಿ ಇದೆ ಎಂಬುದು ಅಂಕಿಸಂಖ್ಯೆಗಳಿಂದ ಗೊತ್ತಾಗುತ್ತದೆ. ಬರಗಾಲದ ಪರಿಸ್ಥಿತಿಯಿಂದ ಯಾವ ರೀತಿಯ ಪರಿಣಾಮಗಳಾಗುತ್ತವೆ ಎಂಬ ಬಗ್ಗೆ ಮಾನ್ಯ ಸುದರ್ಶನ್‌ರವರು ಈಗಾಗಲೇ ತಿಳಿಸಿದ್ದಾರೆ. ಬರಕ್ಕೆ ಏನು ಕಾರಣ, ಆ ಪರಿಸ್ಥಿತಿ ಬರದಂತೆ ನಾವು ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂಬ ಬಗ್ಗೆ ಮೊದಲು ಯೋಚಿಸುವುದು ಸೂಕ್ತವೆನಿಸುತ್ತದೆ. ಮೊದಲು ಈ ಪ್ರಮಾಣದಲ್ಲಿ ಬರ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ, ಈ ತೀವ್ರತೆ ಕಳೆದ ಸುಮಾರು ಇಪ್ಪತ್ತು-ಇಪ್ಪತ್ತೈದು

ವರ್ಷಗಳಲ್ಲಿ ಹೆಚ್ಚಾಗಿದೆ. ಒಂದು ಕಡೆ ಬರಗಾಲ ಪರಿಸ್ಥಿತಿ ಇದ್ದರೆ ಮತ್ತೊಂದೆಡೆ ಅತಿವೃಷ್ಟಿ ಪರಿಸ್ಥಿತಿ ತಲೆದೋರಿರುತ್ತದೆ. ಯಾವುದೇ ಸಮಸ್ಯೆಗಳ ಬಗ್ಗೆ ವಿಚಾರ ಮಾಡುವಾಗ ನಾವು ಎರಡು ವಿಷಯಗಳನ್ನು ತೆಗೆದುಕೊಳ್ಳುತ್ತೇವೆ. ಜಾನುವಾರುಗಳಿಗೆ ನೀರು ಹಾಗೂ ಮೇವಿನ ಕೊರತೆ ಮತ್ತು ಜನರಿಗೆ ಕುಡಿಯುವ ನೀರಿನ ಕೊರತೆಗಳ ವಿಚಾರವಾಗಿ ನಾವು ಮಾತನಾಡುತ್ತಿದ್ದೇವೆ. ಈ ಸಮಸ್ಯೆ ಎರಡು ಸಂದರ್ಭಗಳಲ್ಲಿ ಎದುರಾಗುತ್ತದೆ. ಮಳೆ ಬೀಳದೆ ಇದ್ದಂತಹ ಸಂದರ್ಭದಲ್ಲಿ ಮತ್ತು ಹೆಚ್ಚು ಮಳೆ ಬಂದು ಪ್ರವಾಹ ಪರಿಸ್ಥಿತಿ ಉಂಟಾದಾಗ ಕೂಡ ಈ ಎರಡು ಸಮಸ್ಯೆಗಳು ಎದುರಾಗುತ್ತವೆ. ರಾಜ್ಯದ ಸುಮಾರು 120 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಇದ್ದರೂ ಕೂಡ ಎಷ್ಟೋ ಕಡೆ ಯಾವಾಗ ಮಳೆಯ ಅವಶ್ಯಕತೆ ಇತ್ತೋ ಆ ಸಂದರ್ಭದಲ್ಲಿ ಮಳೆಯಾಗಿಲ್ಲ. ಹೀಗಾಗಿ ಜನಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಈ ರೀತಿಯ ಪರಿಸ್ಥಿತಿಗೆ ಕಾರಣವೇನೆಂಬುದು ಬಹಳಷ್ಟು ಜನರಿಗೆ ಗೊತ್ತಿದೆ. ಸುಮಾರು ಹತ್ತಿಪ್ಪತ್ತು ವರ್ಷಗಳ ಹಿಂದೆ ಗ್ರಾಮೀಣ ಪ್ರದೇಶದಲ್ಲಿ ನಾಲ್ಕೈದು ರೈತರ ಜಮೀನಿಗೊಂದರಂತೆ ಕೆರೆಗಳೇನಿರುತ್ತಿದ್ದವು ಆ ಕೆರೆಗಳ ನೀರನ್ನು ಕುಡಿಯುವ ಉದ್ದೇಶಕ್ಕೆ ಮತ್ತು ಜಾನುವಾರುಗಳ ಉಪಯೋಗಕ್ಕೆ ಕೂಡ ಬಳಕೆ ಮಾಡುತ್ತಿದ್ದರು. ಆದರೆ ಇತ್ತೀಚೆಗೆ ಆ ಕೆರೆಗಳಿರುವುದರಿಂದ ಇಳುವರಿ ಸರಿಯಾಗಿ ಬರುವುದಿಲ್ಲ. ಜನರು ನೀರಿಗಾಗಿ ಬಂದು ಬೆಳೆಗಳನ್ನು ಹಾಳು ಮಾಡುತ್ತಾರೆ ಎನ್ನುವಂತಹ ದೃಷ್ಟಿಯಿಂದ ಸರ್ವೇ ಸಾಮಾನ್ಯವಾಗಿ ಎಲ್ಲ ಕೆರೆಗಳನ್ನು ಸಹ ಮುಚ್ಚಿದ್ದಾರೆ. ಆದರೆ ಕಳೆದ ವರ್ಷ ಕೆರೆಗಳ ಅಭಿವೃದ್ಧಿಗಾಗಿ ಪ್ರತಿ ತಾಲ್ಲೂಕಿಗೆ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರ ಪರಿಣಾಮವಾಗಿ ಎಷ್ಟೋ ನೀರಾವರಿ ಕೆರೆಗಳು ಅಭಿವೃದ್ಧಿಯಾಗಿವೆ. ಆ ರೀತಿ ಆ ಕೆರೆಗಳು ಅಭಿವೃದ್ಧಿಯಗಿರುವ ಪರಿಣಾಮವಾಗಿ ಇವೊತ್ತು ಜನ ಜಾನುವಾರುಗಳಿಗೆ ಅಲ್ಲಲ್ಲಿ ನೀರು ಸಿಗುತ್ತಿದೆ. ಯಾವುದೇ ಸರ್ಕಾರ ಇರಲಿ, ಅಂತರ್ಜಲವನ್ನು ಹೆಚ್ಚು ಮಾಡುವಂತಹ ಕಾರ್ಯಕ್ರಮಗಳನ್ನು, ವಾಟರ್ ಹಾರ್ವೆಸ್ಟಿಂಗ್ ಮಾಡುವಂತಹ ಕಾರ್ಯಕ್ರಮಗಳನ್ನು ಪ್ರಮುಖವಾಗಿ ಮಾಡಬೇಕಾಗಿತ್ತು. ಎಲ್ಲಿಯವರೆಗೆ ಈ ಕಾರ್ಯಕ್ರಮಗಳು ಆಗುವುದಿಲ್ಲವೋ ಅಲ್ಲಿಯವರೆಗೆ ಈ ಸಮಸ್ಯೆಗಳಿಗೆ

ಪರಿಹಾರವನ್ನು ಕಂಡುಕೊಳ್ಳುವುದಕ್ಕಾಗುವುದಿಲ್ಲ. ಮಳೆಯ ನೀರನ್ನು ನಾವು ಸಂಪೂರ್ಣವಾಗಿ ಕ್ರೋಢೀಕರಿಸಿ ಅದನ್ನು ನೀರಾವರಿ ಉದ್ದೇಶಕ್ಕಿರಬಹುದು ಅಥವಾ ಕುಡಿಯುವ ನೀರಿನ ಉದ್ದೇಶಕ್ಕಾಗಿ ಇರಬಹುದು ಅದನ್ನು ಉಪಯೋಗ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಸಮಸ್ಯೆ ನಿರಂತರವಾಗಿ ಮುಂದುವರೆಯುತ್ತಿರುತ್ತದೆ. ಇತ್ತೀಚೆಗೆ ನಾನು ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಲೇಖನವೊಂದನ್ನು ಓದುತ್ತಿದ್ದಾಗ ಒಂದು ವಿಚಾರ ನನ್ನ ಗಮನಕ್ಕೆ ಬಂತು. ಮಲೇಶಿಯಾದಲ್ಲಿ ಮಳೆ ನೀರಿನ ಶೇಕಡ 82ರಷ್ಟನ್ನು ಅವರು ಉಪಯೋಗ ಮಾಡಿಕೊಳ್ಳುತ್ತಾರೆ, ಇನ್ನುಳಿದ ಶೇಕಡ 18ರಷ್ಟು ನೀರು ಮಾತ್ರ ಸಮುದ್ರವನ್ನು ಸೇರುತ್ತದೆ. ಆದರೆ ನಮ್ಮ ಭಾರತ ದೇಶದಲ್ಲಿ ಶೇಕಡ 18ರಷ್ಟು ನೀರನ್ನು ಮಾತ್ರ ಉಪಯೋಗ ಮಾಡಿಕೊಂಡು ಇನ್ನುಳಿದ ಶೇಕಡ 82ರಷ್ಟನ್ನು ನಾವು ಸಮುದ್ರಕ್ಕೆ ಹರಿದು ಹೋಗಲು ಬಿಡುತ್ತಿದ್ದೇವೆ. ಎಲ್ಲಿಯವರೆಗೆ ನಾವು ನೀರಿನ ಸಾಂದ್ರತೆಯನ್ನು ಕಾಪಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ತೊಂದರೆ ಇದ್ದೇ ಇರುತ್ತದೆ. ನೆರೆ ಅಥವಾ ಬರ ಬಂದಾಗಷ್ಟೇ ನಾವು ಈ ವಿಚಾರಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿ ತಾತ್ಕಾಲಿಕವಾದ ಪರಿಹಾರವನ್ನು ಕಂಡುಕೊಂಡು ಆ ಸಮಸ್ಯೆಯನ್ನು ಬಗೆಹರಿಸಿಕೊಂಡ ಮೇಲೆ ಅದನ್ನು ಸಂಪೂರ್ಣವಾಗಿ ಮರೆತುಬಿಡುತ್ತೇವೆ. ಈ ಸಮಸ್ಯೆಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳುವ ಬಗ್ಗೆ ದೂರದೃಷ್ಟಿಯಿಂದ ಒಂದು ಆಲೋಚನೆಯನ್ನು ಮಾಡಿ ನೀರಿನ ಸಾಂದ್ರತೆಯನ್ನು ಕಾಪಾಡಿಕೊಳ್ಳುವ ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಪಂಜಾಬ್‌ನ ಭೂಗರ್ಭ ಶಾಸ್ತ್ರಜ್ಞ ಮತ್ತು ಕೃಷಿ ವಿಜ್ಞಾನ ರಾಜೇಂದ್ರಸಿಂಗ್‌ರವರು ಏನು ಹೇಳಿದ್ದಾರೆ ಎಂದರೆ, .

**ಉಪ ಸಭಾಪತಿಯವರು:–** ಅವರು ಪಂಜಾಬ್‌ನವರಲ್ಲ, ರಾಜಸ್ತಾನದವರು.

**ಶ್ರೀ ಮೋಹನ ಎ. ಲಿಂಬೀಕಾಯಿ:–** ಮಾನ್ಯ ಸಭಾಪತಿಯವರೇ, ಇರಲಿ, ಅವರು ಪ್ರತಿಯೊಂದು ಹೊಲಕ್ಕೆ ಒಂದು ಕೆರೆ ಇರಬೇಕೆಂದು ಹೇಳುತ್ತಾರೆ. ನೀರಿನ ಸಾಂದ್ರತೆಯನ್ನು ಕಾಯ್ದುಕೊಳ್ಳಬೇಕೆಂಬ ಉದ್ದೇಶದಿಂದ

ಅವರು ಆ ವಿಚಾರವನ್ನು ಹೇಳಿದ್ದಾರೆ. ನಮಗೆ 750 ಎಂ.ಎಂ.ನಷ್ಟು ಮಳೆ ಬೇಕಾಗುತ್ತದೆ, ನಮ್ಮ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮಳೆಯಾಗಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡಾಗ ರಾಜ್ಯದಲ್ಲಿ ಈ ವರ್ಷ ಶೇಕಡ 35ರಷ್ಟು ಪ್ರದೇಶಕ್ಕೆ ಈ ಪ್ರಮಾಣದಲ್ಲಿ ಮಳೆಯಾಗಿದೆ. 750 ರಿಂದ 1150 ಎಂ.ಎಂ.ಮಳೆ ಶೇಕಡ 35ರಷ್ಟು ಪ್ರದೇಶದಲ್ಲಾಗಿದೆ. 1125 ರಿಂದ 2000 ಎಂ.ಎಂ. ಮಳೆ ಶೇಕಡ 24ರಷ್ಟು ಪ್ರದೇಶದಲ್ಲಾಗಿದೆ. 2000 ಎಂ.ಎಂ.ಗಿಂತಲೂ ಹೆಚ್ಚು ಮಳೆ ಶೇಕಡ 8ರಷ್ಟು ಪ್ರದೇಶದಲ್ಲಾಗಿದೆ. ಮಳೆಯ ಈ ಸರಾಸರಿ ಪ್ರಮಾಣವನ್ನು ನೋಡಿದಾಗ ನಮ್ಮ ಕರ್ನಾಟಕ ರಾಜ್ಯಕ್ಕೆ ಎಷ್ಟು ಮಳೆ ಬರಬೇಕಾಗಿತ್ತೋ, ಎಷ್ಟು ನೀರು ಮಳೆಯಿಂದ ಬರಬೇಕಾಗಿತ್ತೋ ಅಷ್ಟು ನೀರು ಬಂದಿದೆ. ಆದರೆ ಆ ನೀರನ್ನು ಕ್ರೋಢೀಕರಿಸಿ ಸದುಪಯೋಗ ಪಡಿಸಿಕೊಳ್ಳುವಲ್ಲಿ ಸರ್ಕಾರ ವಿಶೇಷವಾದಂತಹ ಯೋಜನೆಗಳನ್ನು ಹಾಕಿಕೊಳ್ಳಬೇಕು. ಆ ರೀತಿ ಯೋಜನೆಗಳನ್ನು ರೂಪಿಸಿ ಅವುಗಳನ್ನು ಕಾರ್ಯರೂಪಕ್ಕೆ ತಂದಾಗ ಮಾತ್ರ ಈ ಬರಗಾಲದ ಸಮಸ್ಯೆಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಈಗ ನಾವು ಹಿಡಿದಿರುವಂತಹ ಹಾದಿಯಿಂದ ಈ ಸಮಸ್ಯೆಯನ್ನು ಕೇವಲ ತಾತ್ಪೂರ್ತಿಕವಾಗಿ ಮಾತ್ರ ಬಗೆಹರಿಯುತ್ತದೆ. ದೂರದೃಷ್ಟಿಯಿಂದ ಈ ಸಮಸ್ಯೆಗೆ ನಿರಂತರವಾದ ಪರಿಹಾರವನ್ನು ಕಂಡುಹಿಡಿಯುವ ಉದ್ದೇಶದಿಂದ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕು. ನಾವೆಲ್ಲರೂ ಒಗ್ಗೂಡಿ ಪಕ್ಷಾತೀತವಾಗಿ ವಿಚಾರ ಮಾಡಬೇಕಾಗಿದೆ. ಏಕೆಂದರೆ ಇದು ಕೇವಲ ಇತ್ತೀಚಿನ ಸಮಸ್ಯೆಯಲ್ಲ, ಸುಮಾರು ಇಪ್ಪತ್ತು-ಇಪ್ಪತ್ತೈದು ವರ್ಷಗಳಿಂದ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ತಲೆದೋರಿದೆ. ರಾಜ್ಯದಲ್ಲಿ ಈ ರೀತಿಯ ಪರಿಸ್ಥಿತಿ ಎದುರಾದಾಗ ವಿರೋಧ ಪಕ್ಷದವರು ಚೀರಾಡುವುದು, ಆಡಳಿತ ಪಕ್ಷದವರು ಈ ರೀತಿಯಾಗಿ ಉತ್ತರ ಕೊಡುವುದನ್ನು ನಾವು ಕಳೆದು ಸುಮಾರು ಹತ್ತಿಪ್ಪತ್ತು ವರ್ಷಗಳಿಂದ ನೋಡುತ್ತಲೇ ಬಂದಿದ್ದೇವೆ. ಆದರೆ ಬರ ಪರಿಸ್ಥಿತಿ ರಾಜ್ಯದಲ್ಲಿ ತಲೆದೋರದಂತೆ ಪ್ರಾಮಾಣಿಕವಾಗಿ ಪ್ರಯತ್ನಗಳನ್ನು ಮಾಡಿದಾಗ್ಯೂ ಬರ ಬಂದಂತಹ ಸಂದರ್ಭದಲ್ಲಿ ಮುಂದೆ ಆ ಪರಿಸ್ಥಿತಿ ಎದುರಾಗದಂತೆ ಅದಕ್ಕೆ ನಾವು ಯಾವ ರೀತಿಯ

ಪರಿಹಾರಗಳನ್ನು ಕಂಡುಹಿಡಿಯಬೇಕೆನ್ನುವುದರ ಬಗ್ಗೆ ಎಲ್ಲರೂ ಸಹ ಪಕ್ಷಾತೀತವಾಗಿ ಪ್ರಯತ್ನ ಮಾಡಿದರೆ, ಆ ಬಗ್ಗೆ ಸಲಹೆಗಳನ್ನು ನೀಡಿದರೆ ಖಂಡಿತವಾಗಿಯೂ ಸರ್ಕಾರ ಅದಕ್ಕೆ ಸ್ಪಂದಿಸುತ್ತದೆ ಎಂಬುದು ನನ್ನ ಭಾವನೆ.

**ಶ್ರೀ ಹೆಚ್.ಸಿ.ನೀರಾವರಿ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಬರಗಾಲ ಪರಿಸ್ಥಿತಿಯ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ಆ ವಿಚಾರಗಳ ಬಗ್ಗೆ ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಬರಗಾಲ ಪರಿಸ್ಥಿತಿಯಿಂದಾಗಿ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಬಿಸಿಲಿನ ಬೇಗೆ 44 ಡಿಗ್ರಿ ಸೆಂಟಿಗ್ರೇಡ್‌ನಿಂದ 45 ಡಿಗ್ರಿ ಸೆಂಟಿಗ್ರೇಡ್‌ವರೆಗೆ ಹೋಗಿದೆ. ಕೊಪ್ಪಳ, ರಾಯಚೂರಿನ ಕೆಲವು ಭಾಗಗಳು, ಗುಲ್ಬರ್ಗಾದ ಕೆಲವು ಭಾಗಗಳು, ಬೀದರ್, ಬಾಗಲಕೋಟೆ, ಗದಗ ಮುಂತಾದ ಭಾಗಗಳನ್ನೆಲ್ಲಾ ನೋಡಿದರೆ ಅಲ್ಲಿ ಜನ ಜಾನುವಾರುಗಳು ವಾಸ ಮಾಡುವಂತಹ ಪರಿಸ್ಥಿತಿ ಕಂಡುಬರುತ್ತಿಲ್ಲ. ಅಲ್ಲೀಗ ಜನರಂತೂ ಇಲ್ಲವೇ ಇಲ್ಲ. ನೀವು ಕೂಲಿ ಕೊಡುತ್ತೇವೆ ಎಂದರೂ ಸಹ ಯಾರೂ ಕೆಲಸಕ್ಕೆ ಬರಲು ಸಿದ್ಧರಿಲ್ಲ. ಏಕೆಂದರೆ ಎಲ್ಲರೂ ಮಹಾರಾಷ್ಟ್ರ, ಗೋವಾ, ಮಂಗಳೂರು, ಬೆಂಗಳೂರು ಈ ಜಿಲ್ಲೆಗಳಿಗೆ ಗುಳೆ ಹೋಗಿಬಿಟ್ಟಿದ್ದಾರೆ. ಆ ಹಳ್ಳಿಗಳಲ್ಲಿ ಈಗ ಇರುವವರಾರೆಂದರೆ ವಯಸ್ಸಾದ ಮುದುಕರು ಮತ್ತು ಮಕ್ಕಳು, ಅವರನ್ನು ಹೊರತುಪಡಿಸಿದರೆ ಬೇರೆ ಯಾರೂ ಇಲ್ಲ. ಇಲ್ಲಿರುವಂತಹ ಪ್ರಶ್ನೆ ಎಂದರೆ, ಅವರು ಊಟವನ್ನು ಹೇಗಾದರೂ ಸಂಪಾದನೆ ಮಾಡಿಕೊಳ್ಳುತ್ತಾರೆ, ದುಡಿಯುವವರು ಇವರಿಗೆ ಹಣವನ್ನೇನು ಕಳುಹಿಸಿಕೊಡುತ್ತಾರೆ ಅದರಿಂದ ಹೇಗೋ ಊಟ ಮಾಡಿಕೊಳ್ಳುತ್ತಾರೆ. ಆದರೆ ಅವರಿಗೆ ಖಂಡಿತ ಅಲ್ಲಿ ಕುಡಿಯುವುದಕ್ಕೆ ನೀರು ಸಿಗುತ್ತಿಲ್ಲ. ನಾನು ಈ ಚರ್ಚೆಯ ಸಂದರ್ಭದಲ್ಲಿ ಮಧ್ಯಪ್ರವೇಶ ಮಾಡಿ ಒಂದು ಮಾತನ್ನು ಹೇಳಿದ್ದೇನೆ. ನಮ್ಮ ಗ್ರಾಮದಲ್ಲಿಯೇ ಹತ್ತು ದಿವಸದಿಂದ ಕುಡಿಯುವುದಕ್ಕೆ ನೀರು ಬಿಟ್ಟಿಲ್ಲ, ಜನರು ಒಂದೊಂದು ಬಿಂದಿಗೆ ನೀರಿಗಾಗಿ ಪರಿತಪಿಸುತ್ತಿದ್ದಾರೆ. ಆ ಕ್ಷೇತ್ರದ ಎಂ.ಎಲ್.ಎ. ನಮ್ಮ ಮನೆಗೆ ಬಂದಿದ್ದರು. ಆಗ ಊರಿನ ಜನರು ಅವರ ಬಳಿ ಬಂದು ನಮ್ಮ

ಊರಿನಲ್ಲಿರುವಂತಹ ನೀರಿನ ಸಮಸ್ಯೆಯನ್ನು ಬಗೆಹರಿಸಿ ಹೋಗಿ ಎಂದು ಅವರನ್ನು ಕೇಳಿದರು. ಅದಕ್ಕೆ ಅವರು ಹೇಳಿದರು, ನಾನು ಏನು ಮಾಡಲಿ, ಸರ್ಕಾರ ಹಣ ಕೊಡಬಹುದು ಆದರೆ ನಿಮ್ಮ ಊರಿನಲ್ಲಿಯೇ ಮೂರ್‍ನಾಲ್ಕು ಬೋರ್‌ವೆಲ್ ಹಾಕಿಸಿದ್ದೆವು ಅವುಗಳೆಲ್ಲಾ ವಿಫಲವಾಯಿತು, ವಾಟರ್ ಲೆವೆಲ್ ತುಂಬಾ ಕೆಳಗೆ ಹೋಗಿದೆ, ಯಾರದಾದರು ಜಮೀನಿನಲ್ಲಿ ಬೋರ್‌ವೆಲ್ ಹಾಕೋಣವೆಂದರೆ ಯಾರೂ ಒಪ್ಪುವುದಿಲ್ಲ. ಯಾರದಾದರು ಬೋರ್‌ವೆಲ್ ಇದ್ದರೆ ಅದನ್ನು ಅಕ್ವೈರ್ ಮಾಡಿಕೊಳ್ಳೋಣವೆಂದರೆ ಅಲ್ಲಿಯೂ ಸಹ ಸರಿಯಾಗಿ ನೀರಿಲ್ಲ. ಈ ರೀತಿಯಾಗಿ ಶಾಸಕರು ಜನಗಳಿಗೆ ಸಮಜಾಯಿಷಿ ಕೊಡುತ್ತಿದ್ದರು. ಅಂದರೆ ಪರಿಸ್ಥಿತಿ ಎಷ್ಟು ಗಂಭೀರವಾಗಿದೆಯೆಂದು ಅರ್ಥಮಾಡಿಕೊಳ್ಳಬೇಕು. ತೋಟಗಳಿಗೆ ನೀರು ಬಿಡುವುದಕ್ಕೆ ಥ್ರೀ ಫೇಸ್ ಕರೆಂಟ್ ಯಾವಾಗ ಬರುತ್ತದೆಂದು ಅವರು ತೋಟಗಳಲ್ಲಿಯೇ ಕಾಯ್ದುಕೊಂಡು ಕುಳಿತುಕೊಂಡಿರುತ್ತಾರೆ. ತೋಟಕ್ಕೆ ನೀರು ಕೊಡುವುದಕ್ಕೂ ಸಹ ನೀರಿಲ್ಲ. ಬೀಜ ಗೊಬ್ಬರ ಹಾಕಿದ್ದಾರೆ ಅದೆಲ್ಲಾ ಹಾಳಾಗಿ ಹೋಗಿದೆ. ಪ್ರತಿ ವರ್ಷ ಬೇಸಿಗೆ ಬೆಳೆಯಾದಂತಹ ಸೂರ್ಯಕಾಂತಿ ಹಾಗೂ ನೆಲಗಡಲೆ ಬೆಳೆಗಳೆಲ್ಲವೂ ಹಾಳಾಗಿ ಹೋಗಿವೆ. ಕುಡಿಯುವ ನೀರಿಗಾಗಿ ಕೆಲವರು ಎತ್ತಿನಗಾಡಿಯಲ್ಲಿ ಪ್ಲಾಸ್ಟಿಕ್ ಡ್ರಮ್‌ಗಳಲ್ಲಿ ನೀರನ್ನು ತಂದು ಏನೋ ಒಂದು ಮಾಡುತ್ತಾರೆ ಅಂತಹ ಒಂದು ಪರಿಸ್ಥಿತಿ ಇದೆ. ಜನಗಳಿಗೆ ಕುಡಿಯುವುದಕ್ಕೆ ನೀರಿಲ್ಲ, ದನಗಳಿಗೆ ಕುಡಿಯುವುದಕ್ಕೆ ನೀರೂ ಇಲ್ಲ, ಮೇವೂ ಇಲ್ಲ. ಸರ್ಕಾರ ಇದಕ್ಕಾಗಿ ಹಣವನ್ನು ಬಿಡುಗಡೆ ಮಾಡಿದೆ ಎಂದು ಮಾನ್ಯ ಸಚಿವರು ಹೇಳಿದರು. ಕೇವಲ ಹಣ ಕೊಟ್ಟರೆ ಆಗುವುದಿಲ್ಲ. ಅವರು ಕಾನ್ಸ್‌ಟೆಂಟ್ ಆಗಿ ಕೆಲಸಗಳನ್ನು ರಿವ್ಯೂ ಮಾಡಬೇಕು, ಕೆಲಸ ಎಲ್ಲಿದೆ ಎಂದು ತಪಾಸಣೆಯನ್ನಾದರು ಮಾಡಬೇಕು ಎಲ್ಲಿ ಸಮಸ್ಯೆ ಇದೆ ಎಂದು ಮಾಹಿತಯನ್ನು ಸಂಗ್ರಹ ಮಾಡಬೇಕು. ಈ ರೀತಿ ತೆಗೆದುಕೊಳ್ಳದೆ ಹೋದರೆ ಇನ್ನು ಎರಡು ತಿಂಗಳು ಜನಗಳು ಆ ಭಾಗದಲ್ಲಿ ಬದುಕುವುದಕ್ಕೆ ಬಹಳ ಕಷ್ಟವಾಗುತ್ತದೆ. ಅದರಲ್ಲೂ ಏಪ್ರಿಲ್–ಮೇ ತಿಂಗಳಿನಲ್ಲಿ ಮಳೆ ಬೇಗ ಬರಲಿಲ್ಲ ಎಂದರೆ ಬಿಸಿಲಿನ ಬೇಗೆಗೆ ದನಕರುಗಳು ಬದುಕುವುದಿಲ್ಲ, ಮನುಷ್ಯರು ಸಹ ಬದುಕುವುದಿಲ್ಲ. ಆದಕಾರಣ ಸರ್ಕಾರ ಸಮರೋಪಾದಿಯಲ್ಲಿ ಕೆಲಸ

ಮಾಡಲಿಲ್ಲವೆಂದರೆ ತುಂಬಾ ಕಷ್ಟವಾಗುತ್ತದೆ. ಪತ್ರಿಕೆಯಲ್ಲಿ ಅಷ್ಟು ಹಣ ಕೊಟ್ಟಿದ್ದೇವೆ, ಇಷ್ಟು ಹಣ ಹೊಟ್ಟಿದ್ದೇವೆ ಎಂದು ಹೇಳುವುದು ಅಥವಾ ಕೇಂದ್ರ ಸರ್ಕರ ಹಣ ಕೊಡಲಿಲ್ಲವೆಂದು ಹೇಳುವುದು ಸರಿಯಲ್ಲ. ಕೇಂದ್ರ ಸರ್ಕಾರ ಹಣ ಕೊಡುತ್ತದೋ ಇಲ್ಲವೋ ಅದು ಬೇರೆ ವಿಷಯ. ಇದು ಸರ್ಕಾರದ ಜವಾಬ್ದಾರಿ ಇದೆ. ನೀವು ಮೊದಲು ಹಣ ಖರ್ಚು ಮಾಡಿ ನಂತರ ವಾಪಸ್ಸು ತೆಗೆದುಕೊಳ್ಳಿ. ಮೊದಲು ನೀವು ಹಣವನ್ನು ಖರ್ಚು ಮಾಡಿ ದನಕರುಗಳಿಗೆ ನೀರು, ಮೇವು ಕೊಡಿ ಜನಗಳಿಗೆ ಕುಡಿಯುವುದಕ್ಕೆ ನೀರು ಕೊಡಿ. ಅದು ಕೊಡಲಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ಆದಕಾರಣ ಸರ್ಕಾರ ಈ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು, ಕೇವಲ ಮಾತುಗಳನ್ನು ಹೇಳಿಕೊಂಡು ಹೋಗುವುದಲ್ಲ. ಸಮರೋಪಾದಿಯಲ್ಲಿ ಸರ್ಕಾರ ಏನಾದರು ಕೆಲಸ ಮಾಡಿದರೆ ಜನಗಳಿಗೆ ಏನಾದರು ಸ್ವಲ್ಪ ಮುಟ್ಟುತ್ತದ್ದೆ, ಇಲ್ಲವೆಂದರೆ ಜನ ಇಡೀ ಸರ್ಕಾರಕ್ಕೆ ನಮಗೆ, ನಿಮಗೆ ಎಲ್ಲರಿಗೂ ಶಾಪ ಹಾಕುತ್ತಾರೆ. ದಯವಿಟ್ಟು ಸರ್ಕಾರ ಇದನ್ನು ಅರ್ಥಮಾಡಿಕೊಳ್ಳಬೇಕೆಂದು ತಮ್ಮ ಮೂಲಕ ತಿಳಿಸುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ನನಗಿಂತ ಮೊದಲು ಮಾತನಾಡಿದಂತಹ ಗೌರವಾನ್ವಿತ ಶಾಸಕರು ಅನೇಕ ವಿಚಾರಗಳ ಬಗ್ಗೆ ಗಮನವನ್ನು ಸೆಳೆದಿದ್ದಾರೆ. “ಬರ” ಎಂದ ತಕ್ಷಣ ನಮ್ಮ ಜಿಲ್ಲೆಯಲ್ಲಿ ಅನೇಕ ಕುಟುಂಬಗಳನ್ನು ಪ್ರಥಮವಾಗಿ ಕಾಡುವಂಥದ್ದು ಕುಡಿಯುವ ನೀರು. ಆದರೆ ನಾನು ಅದರ ಬಗ್ಗೆ ಮಾತ್ರ ಮಾತನಾಡಲು ಬಯಸುತ್ತೇನೆ. ರಾಜ್ಯ ಸರ್ಕಾರ ಇಂದು ಈ ಬರದ ಪರಿಸ್ಥಿತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಎದುರಿಸುತ್ತೇವೆ ಎಂಬ ಮಾತನ್ನು ಹೇಳಿದೆ. ಇದರ ಆಧಾರದ ಮೇಲೆ ಎಲ್ಲಾ ಗ್ರಾಮಾಂತರ ಪ್ರದೇಶದಲ್ಲಿರುವಂತಹ ಜನಸಾಮಾನ್ಯರು ಸಹ ಬಹಳ ವಿಶ್ವಾಸದಿಂದ ಸರ್ಕಾರ ನಮ್ಮ ಕಡೆ ಬರುತ್ತದೆ. ನಮ್ಮ ಸಮಸ್ಯೆಯನ್ನು

ಬಗೆಹರಿಸುತ್ತದೆ ಎಂಬ ವಿಶ್ವಾಸವನ್ನು ಇಟ್ಟುಕೊಂಡಿರುವುದನ್ನು ಸಹ ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಇಷ್ಟಾಗಿಯೂ ಸಹ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆಂದರೆ, ಯಾವ ಯಾವ ಕಡೆ ಕುಡಿಯುವ ನೀರಿನ ಸಮಸ್ಯೆ ಇದೆ, ಅಲ್ಲಿಗೆ ಹಣ ಬಿಡುಗಡೆಯ ಕೊರತೆ ಎದ್ದು ಕಾಣುತ್ತದೆ. ಮಾನ್ಯ ಸಚಿವರು ಗಮನಿಸಬೇಕು, ಇವತ್ತು ಶಾಸಕರ ಕಾರ್ಯಪಡೆಯನ್ನು ರಚನೆ ಮಾಡಿ ನನಗೆ ಬಂದಿರುವಂತಹ ಮಾಹಿತಿಯ ಪ್ರಕಾರ ತುರ್ತು ಕುಡಿಯುವ ನೀರಿಗೋಸ್ಕರ ಪ್ರತೀ ವಿಧಾನಸಭಾ ಕ್ಷೇತ್ರಕ್ಕೆ ಏಳು ಲಕ್ಷ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ಆದರೆ ನಮ್ಮ ಪ್ರತೀ ವಿಧಾನಸಭಾ ಕ್ಷೇತ್ರದಲ್ಲಿ ಸರಾಸರಿ 30 ರಿಂದ 32 ಗ್ರಾಮ ಪಂಚಾಯತಿಗಳು ಬರುತ್ತದೆ. ಇವುಗಳಿಗೆ ಏಳರಿಂದ ಹತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಒಂದೊಂದು ಗ್ರಾಮಪಂಚಾಯತಿಗೆ ಕನಿಷ್ಟ ಒಂದೊಂದು ಲಕ್ಷ ರೂಪಾಯಿಗಳು ಸಹ ಬರುವುದಿಲ್ಲ. ಒಂದೊಂದು ಗ್ರಾಮ ಪಂಚಾಯತಿಗಳಲ್ಲಿ ನಾಲ್ಕು, ನಾಲ್ಕು, ಕುಡಿಯುವ ನೀರಿನ ಯೂನಿಟ್‌ಗಳಿವೆ. ಹತ್ತರಿಂದ ಹನ್ನೆರಡು ಬೋರ್‌ವೆಲ್ಸ್ ಇವೆ. ಹಾಗಾಗಿ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ಪ್ರತಿ ಗ್ರಾಮಪಂಚಯತಿಗೆ ಕನಿಷ್ಟಪಕ್ಷ ಎರಡು ಲಕ್ಷ ರೂಪಾಯಿಗಳನ್ನು ಕೊಡದೆ ಇದ್ದರೆ ಕುಡಿಯುವ ನೀರಿನ ತುರ್ತು ನಿರ್ವಹಣೆ ಸಾಧ್ಯವಿಲ್ಲ. ಹಾಗಾಗಿ ಒಂದು ವಿಧಾನಸಭಾ ಕ್ಷೇತ್ರಕ್ಕೆ ಕೇವಲ ಏಳು ಲಕ್ಷ ರೂಪಾಯಿಗಳನ್ನು ಕೊಟ್ಟರೆ, ಅದನ್ನು ಶಾಸಕರು ತಮ್ಮ ವಿವೇಚನೆ ವ್ಯಾಪ್ತಿಯಲ್ಲಿ ಯಾವುದಾದರು ಒಂದು ಗ್ರಾಮಕ್ಕೆ ಹಾಕಿದರೆ ಉಳಿದ 20 ರಿಂದ 22 ಗ್ರಾಮಗಳಿಗೆ ಕುಡಿಯುವ ನೀರಿನ ತುರ್ತು ನಿರ್ವಹಣೆಗೆ ಕಷ್ಟವಾಗುತ್ತದೆ ಎಂಬ ವಿಷಯವನ್ನು ಸರ್ಕಾರ ಗಮನಿಸಬೇಕೆಂದು ವಿನಂತಿಸುತ್ತೇನೆ. ನದಿ ಜೋಡಣೆ ಮಾಡುವಂಥದ್ದು, ಬೋರ್‌ವೆಲ್‌ಗಳನ್ನು ಕೊರೆಯುವಂಥದ್ದು ಹಾಗೂ ಪ್ರತೀ ಜಿಲ್ಲಾಪಂಚಾಯತಿಗೆ ಸ್ವಲ್ಪ ಹೆಚ್ಚು ಹಣವನ್ನು ಕೊಡುವಂಥ ಕೆಲಸವನ್ನು ಸರ್ಕಾರ ಮಾಡಬೇಕು. ಏಕೆಂದರೆ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯಿತಿಗೆ ಗ್ರಾಮಪಂಚಾಯಿತಿಗಳಲ್ಲಿ ಕೆಲವು ಬೇಡಿಕೆಗಳನ್ನು ಇಡುತ್ತಾರೆ. ನಮ್ಮಲ್ಲಿ ಬೋರ್‌ವೆಲ್ ಹಾಳಾಗಿದೆ. ಕೈ ಪಂಪು ಹಾಳಾಗಿದೆ ಎಂದರೆ ಆ

ಗ್ರಾಮಪಂಚಾಯಿತಿಗಳಲ್ಲಿ ಹಣ ಇದ್ದರೂ ಸಹ ನಲ್ಲಿ ರಿಪೇರಿ ಮಾಡುವುದಕ್ಕೆ ಬೋರ್‌ವೆಲ್ ರಿಪೇರಿ ಮಾಡುವುದಕ್ಕೆ ಅವರಿಗೆ ಕೊಡುವಂಥದ್ದು ಕೇವಲ 350 ರೂಪಾಯಿಗಳನ್ನು ಮಾತ್ರ. ನಮ್ಮ ಜಿಲ್ಲೆಯಂಥ ಗ್ರಾಮಪಂಚಾಯತಿಗಳಲ್ಲಿ ಕೈಪಂಪ್ ರಿಪೇರಿ ಮಾಡುವುದಕ್ಕೆ ಕೊಡುವಂಥ ಖರ್ಚುಗಳನ್ನು ಬಿಡಿ, ಒಬ್ಬ ಕೂಲಿ ಮಾಡುವವರಿಗೂ ಸಹ 350 ರೂಪಾಯಿಗಳನ್ನು ಕೊಡಬೇಕು. ಆದರೆ ನಲ್ಲಿ ಹಾಗೂ ಕೈಪಂಪ್ ರಿಪೇರಿ ಮಾಡುವುದಕ್ಕೆ ಈ ಹಣವನ್ನು ಹದಿನೈದು ವರ್ಷದ ಹಿಂದೆ ಫಿಕ್ಸ್ ಮಾಡಿರುವಂಥದ್ದು. ದಯವಿಟ್ಟು ಅದನ್ನು ಕನಿಷ್ಟಪಕ್ಷ ಒಂದು ಆವಿರ ರೂಪಾಯಿಗಾದರು ಹೆಚ್ಚಿಸದಿದ್ದರೆ ಅಲ್ಲಿ ಯಾವ ಕೈಪಂಪ್‌ನ್ನು ಸಹ ರಿಪೇರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವುದಕ್ಕೆ, ಮೋಟಾರ್‌ಗಳನ್ನು ರಿಪೇರಿ ಮಾಡುವುದಕ್ಕೆ ಮತ್ತು ಒವರ್‌ಹೆಡ್ ಟ್ಯಾಂಕ್‌ಗಳನ್ನು ಶುಚಿ ಮಾಡುವುದಕ್ಕೆ ಒಂದೊಂದು ಯೂನಿಟ್‌ಗೆ ಕನಿಷ್ಟಪಕ್ಷ ಎಂಟು ಸಾವಿರಕ್ಕಿಂತ ಹೆಚ್ಚಿಗೆ ಹಣ ಕೊಡಬಾರದು ಎಂಬ ನಿರ್ದೇಶನವನ್ನು ಸರ್ಕಾರ ಕೊಟ್ಟಿದೆ. ಈ ನಿರ್ದೇಶನ ಕೊಟ್ಟಿರುವುದು ಹದಿನೈದು ವರ್ಷದ ಕೆಳಗೆ, ಆದರೆ ಅದು ಇನ್ನೂ ಕೂಡ ಹಾಗೆಯೇ ಉಳಿದಿದೆ. ಈ ಯೋಜನೆಗೆ ಕನಿಷ್ಟಪಕ್ಷ ಹದಿನೈದರಿಂದ ಇಪ್ಪತ್ತು ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಯಾವುದೇ ಒಂದು ಮೋಟರ್ ರಿಪೇರಿಗಾಗಲಿ, ತೆರೆದ ಬಾವಿಯಿಂದ ಹೂಳು ಎತ್ತುವುದಕ್ಕಾಗಲಿ ಅಥವಾ ಒವರ್‌ಹೆಡ್ ಟ್ಯಾಂಕ್‌ಗಳನ್ನು ರಿಪೇರಿ ಮಾಡುವುದಕ್ಕಾಗಲಿ ಹದಿನೈದು ವರ್ಷದ ಹಿಂದೆ ನಿಗದಿ ಪಡಿಸಿರುವಂತಹ 350 ರೂಪಾಯಿಗಳು ಯಾವುದಕ್ಕೂ ಸಾಕಾಗುವುದಿಲ್ಲ. ಬಾವಿಗಳ ರಿಪೇರಿಗಾಗಿ ಮತ್ತು ಮೋಟಾರ್ ರಿಪೇರಿಗಾಗಿ ಇಟ್ಟಿರುವಂತಹ ಎಂಟು ಸಾವಿರ ರೂಪಾಯಿಗಳು ಇರುವುದನ್ನು ಹೆಚ್ಚು ಮಾಡುವುದಕ್ಕೆ ತಾವು ಆದೇಶ ನೀಡಬೇಕು ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಕೆಲವು ಕಡೆ ತುರ್ತಾಗಿ ಕುಡಿಯುವ ನೀರಿನ ಯೋಜನೆಯನ್ನು ಹಮ್ಮಿಕೊಳ್ಳುತ್ತೇನೆ. ನಾನು ಒಂದು ಕಡೆ ಗ್ರಾಮಪಂಚಾಯತಿಗೆ ಹೋಗಿದ್ದೆ, ಅಲ್ಲಿ ಏನಾಗಿದೆ ಎಂದರೆ 20.00 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಅವನಿಗೆ ಕುಡಿಯುವ ನೀರಿನ ಯೋಜನೆಯನ್ನು ಮಾಡುವುದಕ್ಕೆ ಹೇಳಿದ್ದೀರಿ.

ಆದರೆ ಇಂಜಿನೀಯರ್ ಮತ್ತು ಗುತ್ತಿಗೆದಾರರು ಶಾಮೀಲಾಗಿ ಏನು ಮಾಡಿದ್ದಾರೆಂದರೆ ಮೊದಲು ಓವರ್‌ಹೆಡ್ ಟ್ಯಾಂಕ್ ಮಾಡಿದ್ದಾರೆ, ಅನಂತರ ಪೈಪ್‌ಲೈನ್ ಮಾಡಿದ್ದಾರೆ ಕೊನೆಯದಾಗಿ ಕೊಳವೆಬಾವಿಯನ್ನು ಕೊರೆಯುವಾಗ ಅಲ್ಲಿ ಬಂಡೆ ಬಂದು ನೀರು ಬಂದಿಲ್ಲ. ಹಾಗಾದರೆ ಏನು ಮಾಡಿದಂತೆ ಆಯಿತು? ಅವರು ಮೊದಲು ಬಾವಿಯನ್ನು ಕೊರೆಯಬೇಕಾಗಿತ್ತಲ್ಲವೆ, ಆದುದರಿಂದ ಅದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಎಷ್ಟೇ ಪ್ರಯತ್ನ ಪಟ್ಟರೂ ಸಹ ಮುಂದಿನ ದಿನಗಳಲ್ಲಿ ಬೋರ್‌ವೆಲ್ ಮತ್ತು ತೆರೆದಬಾವಿಗಳಿಂದ ಯಾವುದೇ ಪರಿಣಾಮಕಾರಿಯಾದಂತಹ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಆದಕಾರಣ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ತಕ್ಷಣ ನೀವು ಮಂಜೂರು ಮಾಡುವುದಾದರೆ ಅಲ್ಲಿರುವಂತಹ ನಾಲ್ಕಾರು ಗ್ರಾಮಗಳಿಗೆ ಒಂದೊಂದು ಕುಡಿಯುವ ನೀರಿನ ಯೋಜನೆಯನ್ನು ಮಂಜೂರು ಮಾಡಿದರೆ ಸಮೃದ್ಧವಾಗಿ ಕುಡಿಯುವ ನೀರನ್ನು ಬಿಡುಗಡೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಸರ್ಕಾರದ ಮುಂದೆ ಹೇಳಬಯಸುತ್ತೇನೆ. ಮಾನ್ಯ ಸಚಿವರು ಗಮನಿಸಬೇಕು ನಮ್ಮ ಸರ್ಕಾರದಲ್ಲಿ ಎಲ್.ಪಿ.ಸಿ.ಡಿ. ಎಂಬ ಸಿಸ್ಟಂ ಇದೆ, ಅದು ಏನೆಂದರೆ ಒಬ್ಬ ವ್ಯಕ್ತಿಗೆ 40 ಲೀಟರ್ ಶುದ್ಧವಾದ ನೀರನ್ನು ಪ್ರತಿನಿತ್ಯ ಬಿಡುಗಡೆ ಮಾಡುವಂಥದ್ದು ಕುಡಿಯುವ ನೀರಿನ ಇಲಾಖೆ ಮಾಡುವಂತಹ ಕೆಲಸ. ಅದು ಗ್ರಾಮಪಂಚಾಯತಿ ಇರಬಹುದು. ತಾಲ್ಲೂಕು ಪಂಚಾಯಿತಿ ಇರಬಹುದು ಜಿಲ್ಲಾಪಂಚಾಯಿತಿ ಇರಬಹುದು. ಎಲ್.ಪಿ.ಸಿ.ಡಿ. ಪ್ರಕಾರ ನಾವು ಲೆಕ್ಕ ಹಾಕುತ್ತಾ ಹೋದರೆ ಒಬ್ಬ ವ್ಯಕ್ತಿಗೆ ಒಂದು ಲೀಟರ್ ನೀರು ಸಹ ಸಿಗುತ್ತಿಲ್ಲ. ಆದುದರಿಂದ ಆ ಲೆಕ್ಕಾಚಾರವನ್ನಾದರು ಸರಿಪಡಿಸಬೇಕು. ಹಾಗೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮೂಲಕ ತುರ್ತಾಗಿ ಕಾಮಗಾರಿಯನ್ನು ಕೈಗೆತ್ತಿಕೊಂಡರೆ ನಮ್ಮ ಕಾಮಗಾರಿಗಳು ಸುಲಭವಾಗುತ್ತದೆ. ಕುಡಿಯುವ ನೀರಿನ ಸಮಸ್ಯೆಗಳು ಸ್ವಲ್ಪ ಮಟ್ಟಿಗೆ ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತಾ, ಕರ್ನಾಟಕದ ಜನ ಬಹಳ ಆಸೆಯಿಂದ ಇದ್ದಾರೆ, ಕ್ಲಿಷ್ಟವಾದಂತಹ ಬರಗಾಲದಲ್ಲಿ ಪ್ರಸ್ತುತ

ಸರ್ಕಾರ ಬಹಳ ಪರಿಣಾಮಕಾರಿಯಾಗಿ ಎದುರಿಸುತ್ತದೆ ಎಂಬ ವಿಶ್ವಾಸದಲ್ಲಿದ್ದಾರೆ. ಆ ವಿಶ್ವಾಸ ಉಳಿಸುವುದಕ್ಕೂ ಸಹ ಸರ್ಕಾರಕ್ಕೆ ಶಕ್ತಿ ಇದೆ. ಸರ್ಕಾರ ಇಚ್ಛಾಶಕ್ತಿಯ ಪ್ರದರ್ಶನದಿಂದ ಕೂಡಲೆ ಹಣವನ್ನು ಬಿಡುಗಡೆ ಮಾಡುವಂತಹ ಕೆಲಸವನ್ನು ಮಾಡಬೇಕೆಂದು ಹೇಳಿ, ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬರದ ಪರವಾಗಿ ಸಾಕಷ್ಟು ಚರ್ಚೆಗಳನ್ನು ಮಾಡಿದರು. ಈ ಚರ್ಚೆಯಲ್ಲಿ ಕೇವಲ ಸಲಹೆಗಳಾದವೆ ಹೊರತು ಜನ ಸಾಮಾನ್ಯರಿಗೆ ಏನು ಮುಟ್ಟಬೇಕು ಎನ್ನುವುದರ ಬಗ್ಗೆ ಯಾರೂ ಸರಿಯಾದ ರೀತಿಯಲ್ಲಿ ಸಮರ್ಥವಾಗಿ ಸರ್ಕಾರಕ್ಕೆ ತಿಳಿಸಲಿಲ್ಲ. ತಮ್ಮ ಮೂಲಕ ಸರ್ಕಾರಕ್ಕೆ ನಾನು ಕೇಳುವುದೇನೆಂದರೆ, ಪ್ರತೀ ಹಂತದಲ್ಲಿಯೂ 3 ತಾಲ್ಲೂಕುಗಳು ಬರದ ತಾಲ್ಲೂಕುಗಳು ಎಂದು ಹೇಳಿದೆಯೇ ಹೊರತು ನಮ್ಮ ಕಾರ್ಯಕ್ರಮಗಳು ಏನು ಎಂದು ಹೇಳುವಂತಹ ಇಚ್ಛಾಶಕ್ತಿ ಸರ್ಕಾರಕ್ಕೆ ಇದೂವರೆವಿಗೂ ಬಂದಿಲ್ಲ. ಇವತ್ತಿನ ದಿವಸ ಜನರು ಕುಡಿಯುವುದಕ್ಕೆ ನೀರಿಲ್ಲದೆ ಸಾಯುತ್ತಿದ್ದಾರೆ. ನೀವುಗಳು ದೂರದರ್ಶನದಲ್ಲಿ ನೋಡಬಹುದು ಹೆಣ್ಣುಮಕ್ಕಳು ತಮ್ಮ ಮಕ್ಕಳನ್ನು ಎತ್ತಿಕೊಂಡು ನಾಲ್ಕೈದು ಕಿಲೋಮೀಟರ್ ದೂರದಿಂದ ನೀರನ್ನು ಎತ್ತಿಕೊಂಡು ಬರುತ್ತಿದ್ದಾರೆ. ಆ ಹೆಣ್ಣು ಮಕ್ಕಳ ಬಗ್ಗೆ ಮತ್ತು ಜಲದ ಸಮಸ್ಯೆ ಬಗ್ಗೆ ಸರ್ಕಾರದಲ್ಲಿ ಯಾರಿಗಾದರು ಇಚ್ಛಾಶಕ್ತಿ ಇದೆಯೇ? ಅಲ್ಲಿರುವಂತಹ ತಹಶೀಲ್ದಾರ್ ಇರಬಹುದು, ಜನಪ್ರತಿನಿಧಿಗಳು ಇರಬಹುದು, ತಾತ್ಕಾಲಿಕವಾಗಿ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಡಿ.ಸಿ. ಅವರಿಗೆ ಇಷ್ಟು ಕೊಟ್ಟಿದ್ದೇವೆಂದು ಹೇಳಿದರು, ಅಂತಹ ಡಿ.ಸಿ.ಗಳನ್ನು ಪನಿಷ್ ಮಾಡಿ.

ಅಲ್ಲಿನ ತಹಶೀಲ್ದಾರರು, ಜನಪ್ರತಿನಿಧಿಗಳು ಇರಬಹುದು. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಜಿಲ್ಲಾಧಿಕಾರಿಗೆ ಇಷ್ಟು ಹಣ ಕೊಟ್ಟಿದ್ದೇವೆ ಎಂದು ಹೇಳಿದರು. ಅಂತಹ ಜಿಲ್ಲಾಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸಿ ಅಥವಾ

ಹೆಚ್ಚಿನ ನೆರವು ಕೊಡಿ, ಎಲ್ಲರೂ ಮಾಧ್ಯಮಗಳಲ್ಲಿ ನೋಡಿದ ಮೇಲೆ ಈ ರೀತಿ ಆಯಿತು ಎಂದುಕೊಳ್ಳುತ್ತಾರೆ. ಮಾನ್ಯ ರೇವುನಾಯಕ್ ಬೆಳಮಗಿರವರು ಜನರ ಸಮಸ್ಯೆಯಿಂದ ರೆಸಾರ್ಟ್‌ಗೆ ಬಂದಿದ್ದೇವೆ ಎಂದು ಹೇಳಿದರು. ಕೇವಲ ಓಡಿಹೋದರೆ ಜನರ ಸಮಸ್ಯೆ ಮುಗಿಯುವುದಿಲ್ಲ. ಉದ್ಯೋಗ ಖಾತ್ರಿ ಯೋಜನೆಯಡಿ ನಾವು ಚರ್ಚೆ ಮಾಡುತ್ತಲೇ ಇದ್ದೇವೆ. ಸರ್ಕಾರವು ಎಲ್ಲೋ ಒಂದು ಕಡೆ ಡೀವಿಯೇಷನ್ ಮಾಡಿ ಏನೋ ಮಾಡುತ್ತಿದೆ ಅಂದುಕೊಳ್ಳುತ್ತೇವೆ. ಕೇಂದ್ರ ಸರ್ಕಾರದ ನೆರವಿನ ಬಗ್ಗೆ ಮಾನ್ಯ ಸುದರ್ಶನ್‌ರವರು ಸಹ ಮಾತನಾಡಿ, 120 ರೂಪಾಯಿಗಳಿಂದ 155 ರೂಪಾಯಿಗಳಿಗೆ ಕೂಲಿ ಹೆಚ್ಚಿಸಿರುವ ಬಗ್ಗೆ ಹೇಳಿದರು. ನಾನು ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಇಡೀ ರಾಜ್ಯದಲ್ಲಿ 4 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದರಲ್ಲಿ ಒಂದೇ ಒಂದು ಕೆಲಸವನ್ನು ಕೇಂದ್ರ ಸರ್ಕಾರದ ನಾರ್ಮ್ಸ್ ಪ್ರಕಾರ ಮಾಡಿದ್ದರೆ ನಾನು ಯಾವ ಶಿಕ್ಷೆಗೂ ಸಿದ್ಧನಿದ್ದೇನೆ. ಇದು ಪತ್ರಿಕೆಗಳಲ್ಲಿ ನಡೆಯುತ್ತಿರುವ ಉದ್ಯೋಗ ಖಾತ್ರಿ ಯೋಜನೆ ಎನ್ನುವುದನ್ನು ಬಿಟ್ಟರೆ, ಯಾವುದೇ ಸಣ್ಣ ಕೂಲಿಕಾರನಿಗೆ ಹಣ ತಲುಪಿರುವ ಉದಾಹರಣೆಯನ್ನು ತೋರಿಸಲಿ. ಯಾರೋ ಒಬ್ಬ ಗುತ್ತಿಗೆದಾರ ಹತ್ತಿಪ್ಪತ್ತು ಜಾಬ್ ಕಾರ್ಡ್ ಮಾಡಿಕೊಂಡು, ಜೆಸಿಬಿಯಿಂದ ಕೆಲಸ ಮಾಡಿ ಉದ್ಯೋಗ ಖಾತ್ರಿ ಕೊಟ್ಟಿದ್ದೇವೆ ಎಂದು ಸರ್ಕಾರದ ಕಾರ್ಯಕ್ರಮ ಮಾಡುತ್ತಿದ್ದಾನೆ. ಈ ಹಣ ಜನ ಸಾಮಾನ್ಯರಿಗೆ ಬಳಕೆ ಆಗಲಿ. ನಮ್ಮ ಹಣದಲ್ಲಿ ಏನಾದರೂ ವ್ಯತ್ಯಾಸಗಳನ್ನು ಮಾಡಿ ಕೆಲಸಗಳನ್ನು ಮಾಡುವಾಗ ದುರುಪಯೋಗವಾಗಿರುತ್ತದೆ. ಕೇಂಧ್ರ ಸರ್ಕಾರದ ಹಣವನ್ನು ಕ್ರೋಢೀಕರಿಸಿಕೊಂಡು, ನಾವೆಲ್ಲರೂ ಸೇರಿ ಸಾಮೂಹಿಕವಾಗಿ ಜನ ಸಾಮಾನ್ಯರ ಕೆಲಸಕ್ಕೆ ಬಳಸಿ ರಾಜ್ಯವನ್ನು ಅಭಿವೃದ್ಧಿ ಪ್ರಯತ್ನ ಮಾಡಲಿ ಅಥವಾ ಉದ್ಯೋಗ ಖಾತ್ರಿ ಯೋಜನೆ ಬೇಕಾಗಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಹೇಳಲಿ. ಹಳ್ಳಿಗಳಲ್ಲಿ ಜಾಬ್ ಕಾರ್ಡ್‌ನಲ್ಲಿ 125 ರೂಪಾಯಿಗಳಿಗೆ ಯಾರೂ ಕೆಲಸಕ್ಕೂ ಬರುವುದಿಲ್ಲ. ಅಲ್ಲಿ ಕೆಲಸವೂ ಇಲ್ಲ. ಅಂದರೆ ಸದನದ ಸಮಯವನ್ನು ಇದಕ್ಕಾಗಿ ಮೀಸಲಿಟ್ಟು ಚರ್ಚೆ ಮಾಡಿದರೆ 123 ತಾಲ್ಲೂಕುಗಳಲ್ಲಿ ಸರ್ಕಾರವು ಮುಂದಿನ ದಿನಗಳಲ್ಲಿ ಯಾವ

ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ? ಯಾವ ರೀತಿ ಪರಿಹಾರ ನೀಡುತ್ತದೆ ಎಂದು ಸರ್ಕಾರ ಹೇಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ವಿ.ಆರ್. ಸುದರ್ಶನ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ನಾಗರಿಕನಾಗಿ ಬರಗಾಲದ ಪರಿಸ್ಥಿತಿ ಬಗ್ಗೆ ನಾನು ಹೇಳಿದ್ದೇನೆ.

**ಶ್ರೀ ಇ. ಕೃಷ್ಣಪ್ಪ:–** ಸರ್ಕಾರಕ್ಕೆ ಹೇಳಿರುವುದು ಸರಿ. ಕೇಂದ್ರ ಸರ್ಕಾರ ಕೊಟ್ಟಿದೆ, ರಾಜ್ಯ ಸರ್ಕಾರ ಕೊಟ್ಟಿಲ್ಲ. ನಮಗೆ ಸರ್ಕಾರ ಬೇಕಾಗಿಲ್ಲ. ಜನರಿಗೆ ಬರಕ್ಕೆ ಸ್ಪಂದಿಸುವ ಸರ್ಕಾರ ಇರಬೇಕಾಗುತ್ತದೆ ಮತ್ತು ಸಾಮಾನ್ಯವಾದ ಶೌಚಾಲಯವನ್ನು ಒದಗಿಸುವ ಕೆಲಸ ಮಾಡಬೇಕಾಗುತ್ತದೆ.

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬರಗಾಲ ಯಾವರೀತಿ ಆಗಿದೆ ಎಂದರೆ ಹಿಂದೆ 1975ರಲ್ಲಿ ಅಮೆರಿಕಾದಿಂದ ಕೆಂಪು ಜೋಳವನ್ನು ತಂದು ಕೊಟ್ಟಂತಹ ಪರಿಸ್ಥಿತಿಯಲ್ಲಿಯೂ ಇಷ್ಟೊಂದು ಕಠಿಣವಾದ ಬರಗಾಲವನ್ನು ನೋಡಿರಲಿಲ್ಲ. ಇದು ಸ್ವಲ್ಪಮಟ್ಟಿಗೆ ಭೀಕರವಾಗಿ ಉತ್ತರ ಕರ್ನಾಟಕದಲ್ಲಿ ಇರುತ್ತಿತ್ತು. ಇವತ್ತು ಚಿತ್ರದುರ್ಗದಿಂದ ಈಚೆಗೆ ಬಂದರೂ ಒಂದೇ ರೀತಿಯಾದ ಬರಗಾಲ ಪ್ರಾರಂಭವಾಗಿದೆ. ಅದಕ್ಕೆ ಸಾಕಷ್ಟು ಹಣವನ್ನು ನೀಡಿದ್ದೇವೆ ಎಂಬ ವಿಚಾರ ಪ್ರಸ್ತಾಪವಾಗಿದೆ. ನಮ್ಮ ಪಶುಸಂಗೋಪನಾ ಸಚಿವರು ಸದನದಲ್ಲಿದ್ದು, ಇವತ್ತು ರೈತರು ಖರೀದಿಸಿದ ದನಗಳ ದರವು 1 ಲಕ್ಷ ಅಥವಾ 1.5 ಲಕ್ಷ ರೂಪಾಯಿಗಳಾಗಿದ್ದರೆ ಅವುಗಳನ್ನು ಮನಸ್ಸಿಗೆ ಬಂದಂತೆ ಮಾರಾಟ ಮಾಡುತ್ತಿದ್ದಾರೆ. ಅಂದರ ಅವರಿಗೆ ವಿಧಿಯಿಲ್ಲ. ಗೋಶಾಲೆಗಳನ್ನು ತೆರೆಯಬೇಕು ಅಥವಾ ಅವುಗಳಿಗೆ ಆಹಾರವನ್ನು ಸರಬರಾಜು ಮಾಡುವ ಕೆಲಸವನ್ನಾದರೂ ಮಾಡಬೇಕು. ಇಲ್ಲದಿದ್ದರೆ ಮನಸ್ಸಿಗೆ ಬಂದ ದರಕ್ಕೆ ದನಗಳನ್ನು ಮಾರಿ ರೈತರ ಆರ್ಥಿಕ ಪರಿಸ್ಥಿತಿ ಇನ್ನಷ್ಟು ಹದೆಗೆಡುವ ಸ್ಥಿತಿಗೆ ಬರುತ್ತದೆ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳಬೇಕಾದರೆ ಹಿಂದೆ ಅಂತರ ಜಲದ ಮಟ್ಟ ಇಷ್ಟೊಂದು ಕೆಳಮಟ್ಟಕ್ಕೆ ಹೋಗಿರಲಿಲ್ಲ. ಹಿಂದೆ ಚಿಕ್ಕಬಳ್ಳಾಪುರ ಮತ್ತು ಕೋಲಾರದ ಕಡೆಗಳಲ್ಲಿ ಸಾವಿರ–ಸಾವಿರದೈನೂರು ಅಡಿ ಕೆಳಗೆ ಇದ್ದ ಅಂತರ ಜಲ ಈಗ ಎಲ್ಲಾ ಕಡೆ ಕೆಳಗೆ ಹೋಗಿದೆ. ಜಿಲ್ಲಾ ಪಂಚಾಯತಿಗಳಲ್ಲಿ ಕೊಳವೆ ಬಾವಿಗಳನ್ನು ತೋಡಲು ಸ್ವಲ್ಪ ಕಡಿಮೆ ಪ್ರಮಾಣದ ಹಣವನ್ನು ಕೊಡುತ್ತಿದ್ದಾರೆ. ಕೆಲವು ಕಡೆ ಕೊರೆಯುವುದನ್ನು ನಿಲ್ಲಿಸಿದ್ದಾರೆ. ಕಾರಣ ಗೊತ್ತಾಗಿಲ್ಲ. ಹಳೆ ಮೈಸೂರು ಭಾಗದಲ್ಲಿ ನೀರು ಸಿಗುವುದು ಕಷ್ಟವಾಗಿರುವುದನ್ನು ನೋಡಿದ್ದೇವೆ. ಇಂತಹ ಪ್ರದೇಶಗಳಲ್ಲಿ ಅಂತರ ಜಲ ಕುಸಿದಿದ್ದು, ಈ ಕಾರಣದಿಂದ ಬೋರ್‌ವೆಲ್‌ಗಳಿಗೆ ಹೆಚ್ಚು ಹಣವನ್ನು ವ್ಯಯ ಮಾಡಬೇಕಾಗಿದೆ. ಹಿಂದೆ ದನಕರುಗಳಿಗೆ ನೀರಿನ ಸಮಸ್ಯೆ ಆದಾಗ ಆಯಾ ಕೆರೆಗಳಲ್ಲಿ ದೊಡ್ಡ ಹೊಂಡವನ್ನು ತೋಡಿ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿದ್ದರು. ಆದರೆ ಈ ರೀತಿಯ ಕಾರ್ಯಕ್ರಮಗಳನ್ನು ಕಾಣುತ್ತಿಲ್ಲ ಮತ್ತು ಇಂತಹ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಅಭಿಪ್ರಾಯ ಏನಿದೆಯೋ ಗೊತ್ತಿಲ್ಲ. ಮಳೆ ಪ್ರಾರಂಭವಾಗಬಹುದೆಂದು ಇದ್ದರೂ ಪ್ರಾರಂಭವಾಗುವ ಸೂಚನೆಗಳು ಕಾಣುತ್ತಿಲ್ಲ. ಒಟ್ಟಾರೆ ಮಳೆ ಪ್ರಮಾಣ ಕಡಿಮೆ ಆಗಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ಬಹಳ ಜಾಸ್ತಿಯಾಗಿದೆ. ಮಾನ್ಯ ಸದಸ್ಯರಾದ ಶ್ರೀ ನೀರಾವರಿಯವರು ಉತ್ತರ ಕರ್ನಾಟಕದಲ್ಲಿ ಗುಳೆ ಹೋಗುವ ಪರಿಸ್ಥಿತಿಯ ಬಗ್ಗೆ ಮಾತನಾಡಿದ್ದು, ಇವತ್ತು ದಕ್ಷಿಣ ಕರ್ನಾಟಕದವರು ಗುಳೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ, ಇಲ್ಲದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಗೆ ತಲುಪಿದ್ದಾರೆ. ಇವೆಲ್ಲವನ್ನು ಗಮನಿಸಿ ಪರಿಹಾರ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ. ನಾನು ನಮ್ಮ ಜಿಲ್ಲೆ ಸೇರಿಸಿ ಎಲ್ಲಾ ಜಿಲ್ಲೆಗಳ ಸಮಸ್ಯೆಯ ಬಗ್ಗೆ ಹೇಳುತ್ತಿದ್ದೇನೆ. ಆದ್ದರಿಂದ ಬರಗಾಲವನ್ನು ಸರಿಯಾಗಿ ದೂಗಿಸದಿದ್ದರೆ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುವ ಸಂದರ್ಭ ಹೆಚ್ಚಿದೆ. ರೈತರು ದನಗಳನ್ನು ಸಾಕುವಂತಿಲ್ಲ, ಅವರೂ ಬದುಕುವಂತಿಲ್ಲ. ಈ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ಪರಿಹರಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೂ ಬಹಳಷ್ಟು ಚರ್ಚೆಯಾಗಿದ್ದು, ವಿಶೇಷವಾಗಿ ಬರಗಾಲದಲ್ಲಿ ಬಿಜಾಪುರ, ರಾಯಚೂರು, ಯಾದಗಿರಿ ಮತ್ತು ಗುಲ್ಬರ್ಗಾಗಳಲ್ಲಿ ಕುಡಿಯುವ ನೀರಿಗೆ ಸಾಕಷ್ಟು ಸಮಸ್ಯೆಯಾಗಿದೆ. ಏಕೆಂದರೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಭೀಮಾ ನದಿಯ ನೀರನ್ನು ಮಹಾರಾಷ್ಟ್ರದವರು ಸೀನಾ ನದಿಗೆ ಡೈವರ್ಟ್ ಮಾಡಿದ್ದಾರೆ. ಭೀಮಾ ನದಿಗೆ ಕೃಷ್ಣಾ ನದಿಯ ಮೇಲ್ದಂಡೆಯಿಂದ ನೀರು ಬರುತ್ತದೆ. ಈ ಕಲುಷಿತ ನೀರನ್ನು ಸುಮಾರು ಹಳ್ಳಿಗಳ ಜನರು ಕುಡಿಯಬೇಕಾಗುತ್ತದೆ. ಈ ನೀರನ್ನು ಮೈಮೇಲೆ ಹಾಕಿಕೊಂಡರೂ ಮೈ ಉರಿಯುತ್ತದೆ. ಇದನ್ನು ತಾವು ಗುಲ್ಬರ್ಗಾದಲ್ಲಿ ನೋಡಿದ್ದೀರಿ. ಇಂತಹ ಭೀಕರ ಪರಿಸ್ಥಿತಿ ಇದ್ದು, ಸರ್ಕಾರವು ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲ. ಈಗಾಗಲೇ ಮಾನ್ಯ ಕೋಟಾ ಶ್ರೀನಿವಾಸ ಪೂಜಾರಿಯವರು ಹೇಳಿದಂತೆ ಒಂದು ಪಂಚಾಯತಿಗೆ ಒಂದೆರಡು ಲಕ್ಷಗಳನ್ನು ಕೊಟ್ಟರೆ ಏನು ಮಾಡುತ್ತಾರೆ? ಪಂಚಾಯತಿಗಳಲ್ಲಿ ಇಂಜಿನಿಯರ್ಸ್ ಅಥವಾ ತಾಂತ್ರಿಕ ತಜ್ಞರು ಇಲ್ಲ, ಬೋರ್‌ವೆಲ್‌ಗಳ ರಿಪೇರಿ ಆಗುವುದಿಲ್ಲ. ಇದರಿಂದ ಕುಡಿಯುವ ನೀರಿನ ಸಮಸ್ಯೆ ಇದೆ. ಇದರಲ್ಲಿ ಸಾಕಷ್ಟು ತೊಂದರೆಗೆ ರೈತರು ಸಿಗುತ್ತಾರೆ. ಈಗಾಗಲೇ ಉತ್ತರ ಕರ್ನಾಟಕದ 10 ಲಕ್ಷ ಕೂಲಿಕಾರರು ಗುಳೆ ಹೋಗಿದ್ದಾರೆ. ಎರಡು ಎತ್ತುಗಳನ್ನು ಇಟ್ಟುಕೊಂಡಿರುವ ರೈತರು ಎಲ್ಲಿಯೂ ಹೋಗಲು ಸಾಧ್ಯವಿಲ್ಲ. ಏಕೆಂದರೆ ಅವರಿಗೆ ಸ್ವಲ್ಪ ಸ್ವಾಭಿಮಾನ ಕಾಡುತ್ತದೆ. ಎರಡು ಎತ್ತುಗಳನ್ನು ಇಟ್ಟುಕೊಂಡಿರುವ ರೈತ, ಗೌಡ ಹಾಗೂ ಹೊಲವನ್ನು ಬಿಟ್ಟು ಹೇಗೆ ಹೋಗುವುದೆಂದು ಸ್ವಾಭಿಮಾನ ಕಾಡುತ್ತದೆ. ಕುಡಿಯುವ ನೀರಿನ ತೊಂದರೆ ಜೊತೆ ದನಕರುಗಳಿಗೆ ಮೇವಿನ ತೊಂದರೆಯೂ ಇದೆ. ಸನ್ಮಾನ್ಯ ಸಭಾಪತಿಯವರೇ. ಇವತ್ತಿನವರೆಗೆ 80,000 ಟನ್‌ನಷ್ಟು ಮೇವಿನ ಅವಶ್ಯಕತೆ ಇತ್ತು. ಈಗ ಮೇವಿನ ಕೊರತೆ ಸಾಕಷ್ಟು ಇದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಮೇವಿನ ಸಂಗ್ರಹವೇ ಇಲ್ಲ. 123 ತಾಲ್ಲೂಕುಗಳಲ್ಲಿ ಕೇವಲ 28 ಗೋಶಾಲೆಗಳನ್ನು ತೆರೆಯಲಾಗಿದೆ. ಇದು ಸಾಕಾಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಬಹಳಷ್ಟು ದನಕರುಗಳು ಕಸಾಯಿಖಾನೆಗೆ ಹೋಗುತ್ತಿವೆ. ಇವತ್ತು ಯಾರೂ ರಾಜಕೀಯ

ಇಚ್ಛಾಶಕ್ತಿಯನ್ನು ಪ್ರದರ್ಶಿಸುತ್ತಿಲ್ಲ. ಬರದಿಂದಾಗಿ ರಾಜ್ಯದಲ್ಲಿ 2606 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ ಎನ್ನುವಂತಹ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದಿಂದ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 150 ಕೋಟಿ ರೂಪಾಯಿಗಳು ಹೆಚ್ಚಾಗಿವೆ. ಆ ಹಣವನ್ನು ನೇರವಾಗಿ ರೈತರಿಗೆ ಬಾವಿ ತೊಡುವುದಕ್ಕೆ ಮತ್ತು ಒಡ್ಡು ಹಾಕುವುದಕ್ಕೆ 100 ದಿನಗಳ ಕಾರ್ಯಕ್ರಮಗಳನ್ನು ರೂಪಿಸಿ ಉದ್ಯೋಗವನ್ನು ನೀಡಬೇಕಾಗಿದೆ. 33,000 ಹೆಕ್ಟೇರ್ ಪ್ರದೇಶದಲ್ಲಿ ನೀರಿನ ಅಂಶ ಜಾಸ್ತಿಯಾಗಿ ಬಸಿ ನೀರಿನಿಂದ ಬಾವಿಯೊಳಗೆ ನೀರು ಬರುತ್ತಿದೆ. ಅಲ್ಲಿ ಓಪನರ್ ಹೊಡೆಯುವುದಕ್ಕೆ ಅನುಕೂಲ ಮಾಡಿಕೊಡಬೇಕಾಗುತ್ತದೆ. ಸುಮಾರು 12.12 ಲಕ್ಷ ಹೆಕ್ಟೇರ್ ಪ್ರದೇಶ ಬಹಳಷ್ಟು ಹಾನಿಗೊಳಗಾಗಿದೆ. ಹಿಂದೆ 2004ರಲ್ಲಿ ರೈತರಿಗೆ ಅಂದಾಜು 600 ಕೋಟಿ ರೂಪಾಯಿಗಳಷ್ಟು ವಿಮೆ ಹಣ ಬಿಡುಗಡೆಯಾಗಿತ್ತು. ಇವತ್ತಿನವರೆವಿಗೂ ಬ್ಯಾಂಕ್‌ನಲ್ಲಿ ರೈತರ ವಿಮೆ ಹಣವನ್ನು ಮುರಿದುಕೊಳ್ಳುತ್ತಿದ್ದಾರೆ. ಆದರೆ, ಇಲ್ಲಿಯವರೆಗೆ ರೈತರಿಗೆ ವಿಮೆ ಹಣ ಬಂದಿಲ್ಲ. ವಿಮೆ ಹಣ ಬಂದರೆ ರೈತರಿಗೆ ಅನುಕೂಲವಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, 'ಮಂತ್ರಕ್ಕೆ ಮಾವಿನ ಹಣ್ಣು ಬೀಳುವುದಿಲ್ಲ' ಎನ್ನುವ ಗಾದೆ ಮಾತಿನಂತೆ ಮಾನ್ಯ ಮುಖ್ಯಮಂತ್ರಿಗಳು ವಿಡಿಯೋ ಕಾನ್ಫರೆನ್ಸ್ ಮಾಡುತ್ತಿದ್ದಾರೆ. ಇಲ್ಲಿಯವರೆಗೆ ಆ ವಿಡಿಯೋ ಕಾನ್ಫರೆನ್ಸ್‌ಗೆ ಮೂರ್‍ನಾಲ್ಕು ಜನ ಜಿಲ್ಲಾಧಿಕಾರಿಗಳೂ ಬಂದಿಲ್ಲ ಎಂದು ನಾನು ಕೇಳಿದ್ದೇನೆ. ಜಿಲ್ಲಾಧಿಕಾರಿಗಳು ಬರದೇ ಇರುವಂತಹ, ಉಸ್ತುವಾರಿ ಸಚಿವರು ಮತ್ತು ಉಸ್ತುವಾರಿ ಕಾರ್ಯದರ್ಶಿಗಳು ಇಲ್ಲದೆ ಇರುವಂತಹ, ವಿಡಿಯೋ ಕಾನ್ಫರೆನ್ಸ್‌ನಿಂದ ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಇದನ್ನೇ ಮಾಡುತ್ತಾ ನಾವು ಕುಳಿತುಕೊಂಡರೆ, ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯವರೆಗೆ ಯಾವುದೇ ಬರ ಪೀಡಿತ ಪ್ರದೇಶಗಳಿಗೆ ಭೇಟಿ ಕೊಟ್ಟಿಲ್ಲ. ಗುಲ್ಬರ್ಗಾ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಒಂದು ಮಿಟಿಂಗ್ ಮಾಡಿರುವುದನ್ನು ಬಿಟ್ಟರೆ, ಬೇರೆ ಯಾವುದೇ ಕಾಮಗಾರಿಗಳು ಪ್ರಾರಂಭವಾಗಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಅಲ್ಲಮ ಪ್ರಭು ಪಾಟೀಲ್‌ರವರೇ, ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ, ಸರ್ಕಾರ ಉತ್ತರ ಕೊಟ್ಟ ನಂತರ ತಾವು ಮಾತನಾಡಿ ಸ್ಪಷ್ಟೀಕರಣವನ್ನು ಪಡೆದುಕೊಳ್ಳಬಹುದು.

**ಶ್ರೀ ಅಲ್ಲಮಪ್ರಭು ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಬೇಗ ಮುಗಿಸುತ್ತೇನೆ. ಸರ್ಕಾರದ ವಿಫಲತೆಯಿಂದಾಗಿ ಜನಪ್ರತಿನಿಧಿಗಳು ತಾಲ್ಲೂಕಿಗೆ ಹೋಗುವಂತಹ ಪರಿಸ್ಥಿತಿ ಇಲ್ಲ. ಒಂದು ಉದಾಹರಣೆಯನ್ನು ಹೇಳಬೇಕಾದರೆ, ನಮ್ಮ ಊರಿನಲ್ಲಿ ಅಂತರ್ಜಲ ಕಲುಷಿತಗೊಂಡು ನೀರಿನ ತೊಂದರೆಯುಂಟಾಗಿದೆ. ನಾನು ಎಂ.ಎಲ್.ಸಿ. ಫಂಡ್‌ನಿಂದ ಜಿಲ್ಲಾಪಂಚಾಯಿತಿ ಇಂಜಿನಿಯರಿಂಗ್ ವಿಭಾಗಕ್ಕೆ 10 ಲಕ್ಷ ರೂಪಾಯಿಗಳನ್ನು ನೀಡಿದರೂ ಸಹ ಇವತ್ತಿನವರೆಗೆ ಶುದ್ಧವಾಗಿರುವಂತಹ ಕುಡಿಯುವ ನೀರಿನ ವ್ಯವಸ್ಥೆ ಆಗುತ್ತಿಲ್ಲ. ಪಂಚಾಯಿತ್‌ರಾಜ್ ಮಂತ್ರಿಗಳು ಈ ಬರಗಾಲವನ್ನು ನಿರ್ವಹಣೆ ಮಾಡುವುದಕ್ಕಾಗಿ ಉದ್ಯೋಗ ಖಾತರಿ ಯೋಜನೆಯ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಕೃಷಿ ಮಂತ್ರಿಗಳಾದ ಮಾನ್ಯ ಉಮೇಶ್ ಕತ್ತಿಯರವರು ಮತ್ತು ನಮ್ಮ ದನಗಳ ಮಂತ್ರಿಗಳು ಈ ಮೂರು ಮಂತ್ರಿಗಳನ್ನು ಒಂದು ತಿಂಗಳಿನಿಂದ ನೋಡುತ್ತಿದ್ದೇನೆ.

**ಉಪ ಸಭಾಪತಿಯವರು:–** ಅವರನ್ನು ದನಗಳ ಮಂತ್ರಿಗಳು ಎನ್ನಬಹುದೇ? ಪಶುಸಂಗೋಪನಾ ಮಂತ್ರಿಗಳು ಎನ್ನಬೇಕು.

**ಶ್ರೀ ಅಲ್ಲಮಪ್ರಭು ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು ಕ್ಷಮಿಸಬೇಕು, ಮೊನ್ನೆ ಯಾವುದೋ ಕಾರ್ಯಕ್ರಮದಲ್ಲಿ ನಾನು ಅವರ ಪಕ್ಕದಲ್ಲಿಯೇ ಕುಳಿತಿದ್ದೆ. ಆಗ ಅವರು ಭಾಷಣ ಮಾಡುತ್ತಾ, "ನಾನು ದನಗಳ ಮಂತ್ರಿ, ಮೂಕ ಪ್ರಾಣಿಗಳು" ಎಂದು ಹೇಳಿಕೊಂಡರು. ನಾನು ಮೇಲೆ ಹೇಳಿದ ಮೂರು ಮಂತ್ರಿಗಳು ಬರಗಾಲದ ನಿರ್ವಹಣೆಯಲ್ಲಿ ವಿಶೇಷವಾದ ಕಾಳಜಿಯನ್ನು ವಹಿಸಬೇಕಾಗುತ್ತದೆ. ಆದರೆ, ಈ ಮೂರು ಜನ ಮಂತ್ರಿಗಳು ಕಳೆದ ಒಂದು ತಿಂಗಳಿನಿಂದ ಮುಖ್ಯಮಂತ್ರಿಗಳ ನಾಯಕತ್ವ ಬದಲಾವಣೆಯ ವಿಚಾರವಾಗಿ ಓಡಾಡುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಈ

ಬರಗಾಲದ ಪರಿಸ್ಥಿತಿಯನ್ನು ಯಾರು ಬಗೆಹರಿಸುತ್ತಾರೆ ಮತ್ತು ಯಾವ ರೀತಿಯಲ್ಲಿ ಹಣ ಬಿಡುಗಡೆಯಾಗುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ಎಲ್ಲ ಸಮಸ್ಯೆಗಳನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಬರ ಪರಿಸ್ಥಿತಿಯನ್ನು ನಿಭಾಯಿಸಲು ವಿಫಲವಾಗಿರುವ ಈ ಸರ್ಕಾರಕ್ಕೆ ಜನರು ಮೊನ್ನೆ ತಾನೇ ಉತ್ತರವನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಬಹಳಷ್ಟು ಜನರು, 'ಸರ್ಕಾರ ನಾಳೆ ಹೋಗುತ್ತದೆ, ನಾಳೆ ಯಾರು ಮುಖ್ಯಮಂತ್ರಿಗಳು' ಎನ್ನುವುದರಲ್ಲಿಯೇ ಕಾಲ ಕಳೆಯುತ್ತಿದ್ದಾರೆ. ಮಾನ್ಯ ಸದಾನಂದಗೌಡರು ಮತ್ತು ಮಾನ್ಯ ಯಡಿಯೂರಪ್ಪನವರು ಒಟ್ಟಿಗೆ ಸೇರಿ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕಾಗುತ್ತದೆ ಮತ್ತು ಜನರಲ್ಲಿ 'ಈ ಸರ್ಕಾರ ನೀರಿನ ಕೊರತೆಯನ್ನು ನೀಗಿಸುತ್ತದೆ, ಈ ಸರ್ಕಾರ ದನಕರುಗಳಿಗೆ ಮೇವನ್ನು ಒದಗಿಸುತ್ತದೆ ಮತ್ತು ಈ ಸರ್ಕಾರ ಬರಗಾಲ ಕಾಮಗಾರಿಯನ್ನು ಪ್ರಾರಂಭ ಮಾಡುತ್ತದೆ' ಎನ್ನುವಂತಹ ವಿಶ್ವಾಸವನ್ನು ಮೂಡಿಸಬೇಕಾಗುತ್ತದೆ. ನಮ್ಮ ಭಾಗದಲ್ಲಿ ನೀರಿನ ಸಮಸ್ಯೆ ಉಂಟಾದಾಗ 1992ರಲ್ಲಿ ರೈಲಿನ ಮುಖಾಂತರ ನೀರನ್ನು ಒದಗಿಸಿದಂತಹ ಉದಾಹರಣೆ ಇದೆ. ಪ್ರಸ್ತುತ ಸರ್ಕಾರ ಈ ರೀತಿಯ ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಂಡಿರುವಂತಹ ಉದಾಹರಣೆ ಇಲ್ಲ. ಗ್ರಾಮೀಣ ಭಾಗದಲ್ಲಿ ಇರುವಂತಹ ಹೆಣ್ಣುಮಕ್ಕಳು ಕುಡಿಯುವ ನೀರಿನ ತೀವ್ರ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ರೆಸಾರ್ಟ್‌ನಲ್ಲಿ ಸಚಿವರು ಹಾಗೂ ಶಾಸಕರಿಗೆ ನೀರಿಗಿಂತ ಹೆಚ್ಚಾಗಿ ಹೊರದೇಶದ ಮಧ್ಯವನ್ನು ಸರಬರಾಜು ಮಾಡಿದ್ದಾರೆ. ಅದಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ನೀರನ್ನು ಕೊಟ್ಟರೆ ಒಳ್ಳೆಯ ಕೆಲಸ ಮಾಡಿದಂತೆ ಆಗುತ್ತದೆ. ಬರಗಾಲ ಪರಿಹಾರ ಕಾಮಗಾರಿ ಕೆಲಸ ಆಗಬೇಕಾಗಿದೆ. ಅದಕ್ಕೆ ಸರ್ಕಾರ ಹೆಚ್ಚು ಒತ್ತು ಕೊಡಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿ ವಲಸೆ ಹೋಗುತ್ತಿರುವವರನ್ನು ತಡೆಯುವಂತಹ ಕೆಲಸ ಆಗಬೇಕು ವಿಶೇಷವಾಗಿ ಬೆಳೆ ಹಾನಿಯಾಗಿರುವ ರೈತರಿಗೆ ವಿಮೆ ಕೊಡುವಂತಹ ಕೆಲಸ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ವಿಮಾ ಕಂಪನಿಗಳೊಂದಿಗೆ ಮಾತನಾಡಿ ಕ್ರಮ ತೆಗೆದುಕೊಳ್ಳಬೇಕಾಗಿದೆ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

**ಉಪ ಸಭಾಪತಿಯವರು:–** ಈಗ ಸರ್ಕಾರದಿಂದ ಉತ್ತರ.

**ಶ್ರೀ ಘೊಟ್ನೇಕರ್ ಶ್ರೀಕಾಂತ ಲಕ್ಷ್ಮಣ:–** ಸನ್ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶವನ್ನು ನೀಡಿ.

**ಉಪ ಸಭಾಪತಿಯವರು:–** ಸರ್ಕಾರ ಉತ್ತರವನ್ನು ನೀಡಿದ ನಂತರ, ತಾವು ಸ್ಪಷ್ಟೀಕರಣವನ್ನು ಕೇಳಬಹುದಾಗಿದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಮುಖ್ಯಮಂತ್ರಿಗಳ ಪರವಾಗಿ):–** ಸನ್ಮಾನ್ಯ ಸಭಾಪತಿಯವರೇ, ಈ ಸದನದ ಗೌರವಾನ್ವಿತ ವಿರೋಧ ಪಕ್ಷದ ನಾಯಕಿಯವರನ್ನು ಒಳಗೊಂಡಂತೆ ಸುಮರು 8 ಜನ ಸದಸ್ಯರುಗಳು ಬರದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಉದ್ಭವವಾಗಿರುವ ಕೆಲವಾರು ವಿಚಾರಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವಂತಹ ಮತ್ತು ಜನರ ಕಷ್ಟಸುಖಗಳನ್ನು ಪ್ರತಿಬಿಂಬಿಸುವ ನಿಟ್ಟಿನಲ್ಲಿ ಬಹಳ ಜವಾಬ್ದಾರಿಯುತವಾಗಿ ತಮ್ಮ ಪ್ರಯತ್ನವನ್ನು ಮಾಡಿದ್ದಾರೆ. ಈ ಚರ್ಚೆಯಲ್ಲಿ ಭಾಗವಹಿಸಿ ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ಕೊಟ್ಟಿರುವುದಕ್ಕಗಿ ಎಲ್ಲ ಸದಸ್ಯರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಕಳೆದ ಜೂನ್ ತಿಂಗಳಿನಲ್ಲಿ ನಾವು ಬರದ ಪರಿಸ್ಥಿತಿಯನ್ನು ನಿರೀಕ್ಷಿಸಿರಲಿಲ್ಲ. ಆದರೆ, ಅದು ಬಂತು.

ಸನ್ಮಾನ್ಯ ಸಭಾಪತಿಯವರೇ, 2011ರ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ಅಕ್ಟೋಬರ್ ತನಕ ಯಾವ ಪ್ರಮಾಣದಲ್ಲಿ ಮಳೆ ಆಗಬೇಕಾಗಿತ್ತು, ಆ ಪ್ರಮಾಣದಲ್ಲಿ ಮಳೆ ಆಗಲಿಲ್ಲ. ಆ ಇತಿಹಾಸಕ್ಕೆ ನಾನು ಹೋಗುವುದಿಲ್ಲ. ಕಳೆದ 40 ವರ್ಷಗಳಲ್ಲಿ ಇಷ್ಟು ಕಡಿಮೆ ಪ್ರಮಾಣದಲ್ಲಿ ಮಳೆ ಆಗಿರಲಿಲ್ಲ. ಕಳೆದ 40 ವರ್ಷಗಳಲ್ಲಿ ಯಾವ ಪ್ರಮಾಣದಲ್ಲಿ ಮಳೆ ಆಗಿತ್ತೋ ಆ ಪ್ರಮಾಣದಲ್ಲಿ ಮಳೆ ಆಗದೇ ಇದ್ದಾಗ, ಇದರ ಭೀಕರತೆ ಎಷ್ಟು ಎನ್ನುವುದನ್ನು ನಾವು ಆಗಲೆ ಊಹಿಸಿದ್ದೆವು. ಆ ಹಿನ್ನೆಲೆಯಲ್ಲಿ ಸಾಕಷ್ಟು ಪೂರ್ವಭಾವಿಯಾದ ಸಿದ್ಧತೆಗಳನ್ನು ಮತ್ತು ಎಚ್ಚರಿಕೆಯನ್ನು ವಹಿಸಿಕೊಂಡು, ಇಂತಹ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವುದಕ್ಕೆ ನಮ್ಮ ರಾಜ್ಯದ

ಆಡಳಿತವನ್ನು ಹೇಗೆ ಚುರುಕುಗೊಳಿಸಬೇಕು ಎನ್ನುವುದರ ಬಗ್ಗೆ ನಿರಂತರವಾದ ಪ್ರಯತ್ನವನ್ನು ಮತ್ತು ಪ್ರಕ್ರಿಯೆಗಳನ್ನು ನಾವು ಮಾಡಿದ್ದೇವೆ. ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷದವರು ಇರಬಹುದು, ಆಡಳಿತ ಪಕ್ಷದವರಿರಬಹುದು, ಅನೇಕ ಸಂಘ ಸಂಸ್ಥೆಗಳಿರಬಹುದು, ಸ್ವಯಂ ಸೇವಾ ಸಂಸ್ಥೆಗಳು ಅನೇಕ ದಾನಿಗಳು ಸಹ ತಮ್ಮದೇ ಆಗಿರುವ ರೀತಿಯಲ್ಲಿ ಈ ಬರದ ಸನ್ನಿವೇಶವನ್ನು ಎದುರಿಸುವುದಕ್ಕೆ ಬೇಕಾದಂತಹ ಸಹಕಾರವನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದಾರೆ. ರಾಜ್ಯ ಸರ್ಕಾರ ಈ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದೆ. ನಾನು ಎಲ್ಲ ಗೌರವಾನ್ವಿತ ಸದಸ್ಯರಿಗೆ ಈ ವಿಷಯವನ್ನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತಿದ್ದೇನೆ. ರಾಜ್ಯದಲ್ಲಿನ 24 ಜಿಲ್ಲೆಗಳ 123 ತಾಲ್ಲೂಕುಗಳಲ್ಲಿ ಈ ರೀತಿಯ ಬರಗಾಲದಿಂದ ಉದ್ಭವವಾಗಿರುವಂತಹ ಎಲ್ಲ ವಿಷಯಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದೆ. ನಾವು ಯಾವುದೇ ಹಂತದಲ್ಲೂ ಇದನ್ನು ನಿರ್ಲಕ್ಷಿಸುವಂತಹ ಪ್ರಶ್ನೆಯೇ ಇಲ್ಲ, ನಿರ್ಲಕ್ಷಿಸಿಯೂ ಇಲ್ಲ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ನಮ್ಮ ಪಕ್ಷದ ಆಂತರಿಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದಾರೆ. ಇದು ಬರದ ಪರಿಸ್ಥಿತಿಯನ್ನು ನಿರ್ವಹಣೆ ಮಾಡುವುದಕ್ಕೆ ಅಡ್ಡಿಯಾಗಿಲ್ಲ. ನಮ್ಮ ಆಡಳಿತ ವ್ಯವಸ್ಥೆಯ ಮೂಲಕ ನಿರಂತರವಾಗಿ ಜನರ ಕಷ್ಟಗಳಿಗೆ ಸ್ಪಂದಿಸುವಂತಹ ಕೆಲಸಗಳನ್ನು ಮಾಡಿದ್ದೇವೆ. ನಮ್ಮ ಗೌರವಾನ್ವಿತ ಮುಖ್ಯಮಂತ್ರಿಗಳಾದ ಮಾನ್ಯ ಸದಾನಂದಗೌಡರು 25 ಜಿಲ್ಲೆಗಳಲ್ಲಿ ಪ್ರವಾಸವನ್ನು ಮಾಡಿದ್ದಾರೆ.

**ಶ್ರೀ ವಿ.ಆರ್. ಸುದರ್ಶನ್ (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್, ಮಾನ್ಯ ಸಚಿವರಾಗಲೀ ಅಥವಾ ಮಾನ್ಯ ಮುಖ್ಯಮಂತ್ರಿಗಳಾಗಲೀ ಸದನದಲ್ಲಿ ನಾಲ್ಕಾರು ಬಾರಿ 'ನಮ್ಮ ಅಂತರಿಕವಾದಂತಹ ಸಮಸ್ಯೆ...... ನಮ್ಮ ಅಂತರಿಕವಾದಂತಹ ಸಮಸ್ಯೆ' ಎಂದು ಹೇಳಿಕೊಂಡು ಬಂದಿದ್ದಾರೆ. ನಾವು ಬಿ.ಜೆ.ಪಿ. ಪಕ್ಷದ ಅಂತರಿಕವಾಗಿರುವಂತಹ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿಲ್ಲ. ಅದರ ಬಗ್ಗೆ

ನಮಗೆ ಯಾವುದೇ ಆಸಕ್ತಿಯೂ ಇಲ್ಲ. ಯಾರು ಅಧ್ಯಕ್ಷರಾಗಬೇಕು, ಯಾರು ಪದಾಧಿಕಾರಿಗಳಾಗಬೇಕು ಎನ್ನುವುದು ಅವರ ಪಕ್ಷಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಆದರೆ, ಸರ್ಕಾರದ ಸಚಿವರುಗಳು ಸದನದ ಒಳಗೆ ಮತ್ತು ಸದನದ ಹೊರಗೆ ಹೇಗೆ ನಡೆದುಕೊಳ್ಳುತ್ತಿದ್ದಾರೆ, ರಾಜ್ಯದಲ್ಲಿ ಅವರ ನಡವಳಿಕೆಗಳು ಹೇಗಿವೆ, ಇಲಾಖೆಗಳ ಜವಾಬ್ದಾರಿಯನ್ನು ಹೇಗೆ ನಿರ್ವಹಿಸುತ್ತಿದ್ದಾರೆ ಎನ್ನುವುದು ಅವರ ಪಕ್ಷದ ಅಂತರಿಕ ವಿಷಯವಲ್ಲ. ಇದು ರಾಜ್ಯದ ಜನರಿಗೆ ಸಂಬಂಧಪಟ್ಟ ವಿಷಯವಾಗಿದೆ. ಜವಾಬ್ದಾರಿ ಇಲ್ಲದೆ, ವಿವೇಚನೆ ಇಲ್ಲದೇ ಮಾತನಾಡುವುದಕ್ಕೆ ಹೋಗಬಾರದು. ಪುನಃ ಪುನಃ ಅವರು ಅದನ್ನೇ ಹೇಳುತ್ತಿದ್ದಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ನಾವು ನಮ್ಮ ಜವಾಬ್ದಾರಿ ಮತ್ತು ವಿವೇಚನೆಗಳನ್ನು ಅರಿಯದೇ ಇಲ್ಲಿ ಬಂದು ಕುಳಿತುಕೊಂಡಿದ್ದೇವೆಂದು ಅವರು ಭಾವಿಸಬಾರದು. ಅವರಿಗೂ ಅವರ ವಿವೇಚನೆ ಮತ್ತು ಜವಾಬ್ದಾರಿಗಳು ಗೊತ್ತಿದೆ. ಅವರು ಅದನ್ನು ನಿರ್ವಹಿಸಲಿಲ್ಲವೆಂದೇ ಆ ಕಡೆ ಕುಳಿತುಕೊಂಡಿದ್ದಾರೆ.

**ಶ್ರೀ ವಿ.ಆರ್. ಸುದರ್ಶನ್ (ವಿಧಾನ ಸಭಾ ಕ್ಷೇತ್ರ):–** ಅದನ್ನು ಜನರು ತೀರ್ಮಾನ ಮಾಡುತ್ತಾರೆ. ನಾವು ಜನರ ವಿವೇಚನೆಗೆ ತಲಬಾಗುತ್ತೇವೆ. ಮಾನ್ಯ ಸಭಾಪತಿಯವರೇ, ಜನರು ಏನು ಆದೇಶವನ್ನು ಕೊಡುತ್ತಾರೆ ಅದಕ್ಕೆ ತಕ್ಕ ಹಾಗೆ ನಾವು ನಡೆದುಕೊಳ್ಳುತ್ತೇವೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–**ಮಾನ್ಯ ಸಭಾಪತಿಯವರೇ, ನನ್ನನ್ನು ನಾನು ಬರದ ವಿಚಾರಕ್ಕೆ ಅಷ್ಟೇ ಸೀಮಿತಗೊಳಿಸುವುದಕ್ಕೆ ಬಯಸುತ್ತೇನೆ. ನಾನು ಇದಕ್ಕೆ ಮೀರಿ ಉಳಿದ ವಿಷಯಗಳನ್ನು ಉಲ್ಲೇಖಿಸುವುದಕ್ಕೆ ಬಯಸುವುದಿಲ್ಲ. ಈಗ ನಾನು ಹೇಳುತ್ತಿದ್ದುದು ನಮ್ಮ ಮುಖ್ಯಮಂತ್ರಿಗಳು 25 ಜಿಲ್ಲೆಗಳಲ್ಲಿ ಪ್ರವಾಸವನ್ನು ಮಾಡಿ ಬರ ಪರಿಸ್ಥಿತಿಯ ಬಗ್ಗೆ ಅಲ್ಲಿನ ಅಧಿಕಾರಿಗಳ ಜೊತೆಗೆ ಚರ್ಚಿಸಿ ಅಲ್ಲಿ ತಕ್ಷಣಕ್ಕೆ ಯಾವ್ಯಾವ ನಿರ್ದೇಶನಗಳನ್ನು, ಸೂಚನೆಗಳನ್ನು ಕೊಟ್ಟಿರುವುದನ್ನು ನಾನು ಇಲ್ಲಿ ಉಲ್ಲೇಖಿಸುವುದಕ್ಕೆ ಬಯಸುತ್ತೇನೆ. ಇಷ್ಟೇ ಅಲ್ಲ, ಉಸ್ತುವಾರಿ ಸಚಿವರಗುಳು

ಸಹ ಅವರ ಜಿಲ್ಲೆಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಸಭೆಗಳನ್ನು ನಡೆಸಿದ್ದಾರೆ. ಉಸ್ತುವಾರಿ ಕಾರ್ಯದರ್ಶಿಗಳು ಸಭೆಯನ್ನು ನಡೆಸಿದ್ದಾರೆ. ಜಿಲ್ಲಾಧಿಕಾರಿಗಳು ಪ್ರತಿ ವಾರವೂ ಸಹ ಈ ಜಿಲ್ಲೆಗಳಲ್ಲಿ ಅಲ್ಲಿನ ಪರಿಸ್ಥಿತಿಗಳ ಬಗ್ಗೆ ಅವಲೋಕನ ಸಭೆಗಳನ್ನು ನಡೆಸಿದ್ದಾರೆ. ಅಗತ್ಯ ನಿರ್ಣಯಗಳನ್ನು ತೆಗೆದುಕೊಂಡು ಜನರ ಕಷ್ಟಗಳಿಗೆ ಸ್ಪಂದಿಸುವುದಕ್ಕೆ ನಿರ್ಧಾರ ತೆಗೆದುಕೊಂಡಿದ್ದಾರೆ. ನಮ್ಮ ಶಾಸಕರ ಅಧ್ಯಕ್ಷತೆಯಲ್ಲಿರುವಂಥ ಸಮಿತಿಗಳು ಅಥವಾ ನಮ್ಮ ವಿಧಾನ ಪರಿಷತ್ತಿನ ಅಥವಾ ವಿಧಾನ ಸಭೆಯ ಸದಸ್ಯರು ಸಹ ತಮ್ಮ ತಮ್ಮ ಕ್ಷೇತ್ರದಲ್ಲಿ ಅಲ್ಲಿ ಯಾವ ರೀತಿ ತುರ್ತು ಅಗತ್ಯ ಕಾಮಗಾರಿಗಳನ್ನು ನಡೆಸಬೇಕೋ ಅದಕ್ಕೆ ಸ್ಪಂದಿಸಿದ್ದಾರೆ. ನಾವು ಸರ್ಕಾರ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡಿದೆ. ಇದರ ಬಗ್ಗೆ ಗಂಭೀರವಾಗಿ ಸ್ಪಂದಿಸುವುದಕ್ಕೆ ಎಲ್ಲಾ ಪ್ರಯತ್ನವನ್ನು ನಾವು ಮಾಡಿದ್ದೇವೆ. ಇಂತಹ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ನಮಗೆ ಯಾವುದೇ ಕಾರಣಕ್ಕೂ ಹಣಕಾಸಿನ ಕೊರತೆ ಇಲ್ಲ. ವಿವಿಧ ಇಲಾಖೆಗಳಲ್ಲಿ ಸಿಆರ್‌ಎಫ್ ನಿಂದ ನಮಗೆ 126 ಕೋಟಿ ರೂಪಾಯಿ ಬಂದಿದೆ. ರಾಜ್ಯದ ಪಾಲು 41 ಕೋಟಿ 25 ಲಕ್ಷ ಇದೆ. 169 ಕೋಟಿ ರೂಪಾಯಿಗಳನ್ನು ನಾವು ಈ ಒಂದು ಸಿಆರ್‌ಎಫ್ ಫಂಡ್‌ನಿಂದ ಕೊಟ್ಟಿರುವುದು ಈಗಾಗಲೇ ನಮ್ಮ ಹತ್ತಿರ ಇದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಆಗಲೇ ಉಲ್ಲೇಖ ಮಾಡಿದ್ದಾರೆ. 127 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಅಗತ್ಯ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಅವರು ಸೂಚಿಸಿ ಅಗತ್ಯವಾದಂಥ ಕೆಲಸ-ಕಾರ್ಯಗಳು ನಡೆಯುತ್ತಿವೆ. ಪಶು ಸಂಗೋಪನೆ ಇಲಾಖೆಯಿಂಥ 1.77 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಬಿಡುಗಡೆಯಾಗಿ ಅದು ಸಹ ಕೆಲಸ-ಕಾರ್ಯಗಳು ನಡೆಯುತ್ತಿವೆ. ಇನ್ನು ನಗರಾಭಿವೃದ್ಧಿ ಇಲಾಖೆಯಿಂದಲೂ ಸಹ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. 321 ಕೋಟಿ 31 ಲಕ್ಷ ರೂಪಾಯಿ ಹಣವನ್ನು ನಾವು ಕೊಟ್ಟು ಸಮರ್ಥವಾಗಿ ಈ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ನಮ್ಮ ಎಲ್ಲಾ ಪ್ರಯತ್ನವನ್ನುನಾವು ಮಾಡುತ್ತಿದ್ದೇವೆ. ಹಾಗೆಂದು ಜನರ ಸಮಸ್ಯೆ ಸಂಪೂರ್ಣವಾಗಿ ಬಗೆಹರಿದಿದೆಯೇ ಎಂದರೆ

ಬಗೆಹರಿದಿಲ್ಲ. ಇಂತಹ ಸಂದರ್ಭದಲ್ಲಿ ನಾವೆಲ್ಲರೂ ಈ ಸದನದಲ್ಲಿ ಒಟ್ಟಾಗಿ ಇಂತಹ ಒಂದು ಭೀಕರವಾದಂಥ ಬರಗಾಲದ ಪರಿಸ್ಥಿತಿಯಲ್ಲಿ, ಸುಮಾರು 40 ವರ್ಷಗಳ ಹಿಂದೆ ಅಂತಹ ಒಂದು ಮಳೆ ಆಗಿತ್ತು. 40 ವರ್ಷಗಳಲ್ಲಿ ಇಷ್ಟು ಕಡಿಮೆ ಮಳೆ ಆಗಿರಲಿಲ್ಲ. ಅದರ ಪರಿಣಾಮವಾಗಿ ಈ ಬರದ ಪರಿಸ್ಥಿತಿ ಉದ್ಭವವಾಗಿದೆ. ಈ ರೀತಿ ಬರದ ಪರಿಸ್ಥಿತಿ ಉದ್ಭವವಾದಾಗ ಹಿಂದೆಯೂ ಸಹ ಪಕ್ಷಾತೀತವಾಗಿ ನಾವೆಲ್ಲರೂ ಜನರ ಕಷ್ಟಗಳಿಗೆ ಸ್ಪಂದಿಸುವಂಥ ಪ್ರಯತ್ನವನ್ನು ಮಾಡಿದ್ದೇವೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಬೆಳೆ ಹಾನಿ ಆಯಿತು. ಬೆಳೆ ಹಾನಿ ಬಗ್ಗೆ ನಾವೆ ಕೇಂದ್ರಕ್ಕೆ ಒಂದು ವರದಿಯನ್ನು ಕೊಟ್ಟೆವು. ಸುಮಾರು 2607 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ನಾವು ಕೇಂದ್ರಕ್ಕೆ ಕೊಟ್ಟೆವು. ಎನ್‌ಸಿಸಿಎಫ್ ಅಡಿಯಲ್ಲಿ ನಮಗೆ ಈ ಹಣವನ್ನು ಕೊಡಬೇಕು. ವಿಶೇಷವಾದಂಥ ಬರಗಾಲದ ಪರಿಸ್ಥಿತಿ ಉದ್ಭವವಾಗಿದೆ ಎಂದು ಹೇಳಿದೆವು. ಕೇಂಧ್ರದ ತಂಡಗಳು ಸಹ ಬಂದು ಹೋಯಿತು. ಆಗ ನಾವು ಕೇಂದ್ರದ ತಂಡಕ್ಕೆ, ಕೇಂಧ್ರ ಸರ್ಕಾರಕ್ಕೆ ಅಭಿನಂದಿಸಿದ್ದೇವೆ. ರಾಜ್ಯದ ನಮ್ಮ ಬೇಡಿಕೆ ಏನಿದೆ, ಅದರಂತೆ ಅವರು ಬಂದು ಪರಿಶೀಲನೆ ಮಾಡಿ ಹೋಗಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಲೇಬೇಕು. ಹಿಂದೆ ರಾಜ್ಯ ಬೇರೆ ಬೇರೆ ಸಂದರ್ಭದಲ್ಲಿ ಯಾವ ರೀತಿಯಾಗಿ ಬರಗಾಲದ ಪರಿಸ್ಥಿತಿಯನ್ನು ಅಥವಾ ಅತಿವೃಷ್ಟಿಯನ್ನು ಅನುಭವಿಸಿತ್ತೋ ಆಗ ಕೇಂದ್ರ ಸರ್ಕಾರ ಹೇಗೆ ಸ್ಪಂದಿಸಿತ್ತೋ, ಈ ಬಾರಿಗೆ ಕೇಂದ್ರ ಸರ್ಕಾರ ನಮಗೆ ಕೊಡಬೇಕಾದಂತಹ ಎನ್‌ಸಿಸಿಎಫ್ ಹಣವನ್ನು ಅಂದರೆ ನಾವು 2607 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಏನು ಕೊಟ್ಟಿದ್ದೇವೆ, ಒಂದು ರೂಪಾಯಿಯು ನಮಗೆ ಇವತ್ತಿನವರೆವಿಗೂ ಬಿಡುಗಡೆಯಾಗಿಲ್ಲ. ರೆಗ್ಯುಲರ್ ಆಗಿರುವ ಬರಬೇಕಾಗಿರುವ ಸಿಆರ್‌ಎಫ್ ಹಣ ನಮಗೆ ಬಂದಿದೆ. ಎನ್‌ಸಿಸಿಎಫ್ ಹಣ ಎಂದರೆ ವಿಶೇಷವಾಗಿ ಈ ರೀತಿಯ ಸಂದರ್ಭ ಬಂದಾಗ ಕೇಂದ್ರದ ತಂಡ ಬಂದು ಹೋದ ನಂತರ ನಾವು ಪ್ರಸ್ತಾವನೆಯನ್ನು ಕೊಟ್ಟಾಗ ಅವರು ನಮಗೆ ವಿಶೇಷವಾದ ಹಣವನ್ನು ಕೊಡುವುದಿದೆ, ಕೊಡುತ್ತಾರೆ ಎನ್ನುವ ವಿಶ್ವಾಸ ನಮಗೆ ಕೇಂದ್ರದ ಬಗ್ಗೆ ಇದೆ.

2607 ಕೋಟಿ ರೂಪಾಯಿಗಳನ್ನು ಕೊಡಬೇಕು ಎನ್ನುವುದು ನಮ್ಮ ಒಂದು ಅಪೇಕ್ಷೆ ಆಗಿದೆ. ಅಷ್ಟು ಹಣವನ್ನು ಕೊಟ್ಟರೆ ಒಳ್ಳೆಯ ರೀತಿಯಲ್ಲಿ ನಾವಿದನ್ನು ವಿನಿಯೋಗಿಸುತ್ತೇವೆ. ಕೇಂದ್ರ ಸರ್ಕಾರಕ್ಕೆ ಇಷ್ಟು ಹಣವನ್ನು ಕೊಡಲಿಕ್ಕೆ ಆಗುತ್ತದೆಯೋ ಇಲ್ಲವೋ ಎನ್ನುವ ಪ್ರಶ್ನೆ ಇದೆ. ಆದರೆ ಅವರು ನಮಗೆ ಹಣವನ್ನು ಕೊಡಬೇಕು. ನಾನಿದನ್ನು ಆರೋಪದ ರೀತಿಯಲ್ಲಿ ಹೇಳುತ್ತಿಲ್ಲ. ಇದರಲ್ಲಿ ತಡವಾಗುತ್ತಿದೆ, ವಿಳಂಬವಾಗುತ್ತಿದೆ. ಈ ಸದನದಲ್ಲಿ ನೀವುಗಳು ಹೇಳಿರುವ ಭಾವನೆಗಳಿಗೆ ಸ್ಪಂದಿಸುವುದಕ್ಕೆ ಕೇಂದ್ರ ಸರ್ಕಾರದಿಂದಲೂ ನಮಗೆ ಸಹಾಯದ ಅಗತ್ಯತೆ ಇದೆ. ಎನ್‌ಸಿಸಿಎಫ್ ಹಣವನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕಾದಂಥ ಅಗತ್ಯತೆ ಇದೆ ಎನ್ನುವುದನ್ನು ನಾನು ಇಲ್ಲಿ ಉಲ್ಲೇಖಿಸುವುದಕ್ಕೆ ಬಯಸುತ್ತೇನೆ. ಅವರು ಹಣವನ್ನು ಕೊಡುತ್ತಾರೆನ್ನುವ ವಿಶ್ವಾಸವಿದೆ. ಅದರಲ್ಲಿ ಈ ರಾಜ್ಯ, ಆ ರಾಜ್ಯ ಎನ್ನುವ ತಾರತಮ್ಯವನ್ನು ಅವರು ಮಾಡುವುದಿಲ್ಲ. ಬೇರೆ ಬೇರೆ ವಿಷಯಗಳಲ್ಲಿ ಅದೆಲ್ಲಾ ನಡೆದಿರಬಹುದು. ಆದರೆ ಬರದಂತಹ ವಿಷಯದಲ್ಲಿ.....

**ಶ್ರೀ ಎಸ್.ಆರ್. ಪಾಟೀಲ್:–** ಯಾವ ವಿಷಯದಲ್ಲಿ ನಡೆದಿಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಈಗ ಆ ವಿಷಯಗಳ ಬಗ್ಗೆ ಚರ್ಚೆ ಬೇಡ. ಉದ್ಯೋಗ ಖಾತ್ರಿ ಯೋಜನೆಗೆ ಕೊಡಬೇಕಾದಂಥ 400 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಉದ್ಯೋಗ ಖಾತ್ರಿ ಯೋಜನೆಗೆ ಎಷ್ಟು ಹಣ ಬಿಡುಗಡೆಯಾಗಿದೆ, ಆ ಹಣವನ್ನು ಉಪಯೋಗ ಮಾಡುವುದಕ್ಕೆ ಹೇಳಿ ಈ ಸರ್ಕಾರಕ್ಕೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇಲ್ಲಿ ಯಾವ ಸರ್ಕಾರವಿದೆ ಎನ್ನುವುದನ್ನು ಗಮನಿಸುವುದಿಲ್ಲ. ಆದರೆ ಕೇಂದ್ರ ಸರ್ಕಾರ ಈ 5 ವರ್ಷಗಳಲ್ಲಿ ಕೊಟ್ಟಿರುವ ಹಣ ಹಿಂದೆ ಎಂದೂ ಕೊಟ್ಟಿರಲಿಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಆಯಿತು, ಅದನ್ನು ಚರ್ಚೆ ಮಾಡೋಣ.

**ಉಪ ಸಭಾಪತಿಯವರು:-** ಮೊದಲು ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

**ಶ್ರೀ ಎಸ್.ಆರ್. ಪಾಟೀಲ್:-** ಕೇಂದ್ರ ಸರ್ಕಾರ ಏನು ಹಣವನ್ನು ಬಿಡುಗಡೆ ಮಾಡಿದೆ ಆ ಹಣವನ್ನು ವಿನಿಯೋಗಿಸುವುದಕ್ಕೆ ಈ ಸರ್ಕಾರ ಅಶಕ್ತವಾಗಿದೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಸುಮಾರು 400 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬರಬೇಕಾಗಿದೆ. ಎಲ್ಲಾ ರೀತಿಯ ಅಂಕಿ-ಅಂಶಗಳನ್ನು ನಾವು ಒದಗಿಸಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಸದನದಲ್ಲಿ ಕಾರ್ಯ ನಿರ್ವಹಿಸುವಂಥ ಪವಿತ್ರವಾದ ಕೆಲಸವನ್ನು ಮಾಡಲಿ.

**ಉಪ ಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲ್‌ರವರೆ, ಮೊದಲು ಅವರು ಉತ್ತರವನ್ನು ಕೊಡಲಿ, ನಂತರ ಬೇಕಾದರೆ ಸ್ಪಷ್ಟೀಕರಣವನ್ನು ಕೇಳಿ, ಕುಳಿತುಕೊಳ್ಳಿ. ಮಾನ್ಯ ಸಚಿವರು ಸಂಪೂರ್ಣವಾದ ಉತ್ತರವನ್ನು ಕೊಡುವುದಕ್ಕೆ ತಾವು ಅವಕಾಶ ಮಾಡಿಕೊಡಿ. ಬರಗಾಲದ ಬಗ್ಗೆ ಸುಮಾರು ಎರಡು ಮುಕ್ಕಾಲು ಗಂಟೆಗಳ ಕಾಲ ಚರ್ಚೆ ಆಗಿ ಈಗ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ನಾನು ಉಳಿದ ವಿಷಯಗಳಿಗೆ ಹೋಗುವುದಕ್ಕೆ ಬಯಸುವುದಿಲ್ಲ. ಬರದ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವುದಕ್ಕೆ ರಾಜ್ಯ ಸರ್ಕಾರವಾಗಿ ನಾವು ಏನೆಲ್ಲಾ ಪ್ರಯತ್ನ ಮಾಡುತ್ತಿದ್ದೇವೆಯೋ ಅದರ ಜೊತೆಗೆ ಎನ್‌ಸಿಸಿಎಫ್ ಹಣವನ್ನು 2607 ಕೋಟಿ ರೂಪಾಯಿಗಳನ್ನು ಏನು ಕೇಳಿದ್ದೇವಯೋ ಅದರ ಭಾಗವನ್ನು ಬೇಗ ಬಿಡುಗಡೆ ಮಾಡಬೇಕೆನ್ನುವ ಅಪೇಕ್ಷೆ ಇದೆ. ಕೇಂದ್ರ ಸರ್ಕಾರ ಅದನ್ನು ಬಿಡುಗಡೆ ಮಾಡುತ್ತದೆನ್ನುವ

ವಿಶ್ವಾಸವನ್ನು ನಾನು ವ್ಯಕ್ತಪಡಿಸುವುದಕ್ಕೆ ಬಯಸುತ್ತಿದ್ದೇನೆ. ಆ ಹಣ ಬಂದರೆ ಇನ್ನಷ್ಟು ತಮ್ಮ ಅಪೇಕ್ಷೆಗೆ ತಕ್ಕಂತೆ ನಾವು ಸಹ ಸ್ಪಂದಿಸುವುದಕ್ಕೆ ಸಾಧ್ಯವಿದೆ. ಅದನ್ನು ಸಹ ನಾನು ಇಲ್ಲಿ ಉಲ್ಲೇಖಿಸುವುದಕ್ಕೆ ಬಯಸುತ್ತಾ ಹೇಳುವುದೇನೆಂದರೆ, ಯಾವಾಗ ಸಭೆಯನ್ನು ಮಾಡಿದೆವು, ಯಾರ್‍ಯಾರ ಜೊತೆಯಲ್ಲಿ ಯಾವ ಸಂದರ್ಭದಲ್ಲಿ ವಿಡಿಯೋ ಕಾನ್ಫರೆನ್ಸ್ ಮಾಡಬೇಕೋ ಅದನ್ನೆಲ್ಲಾ ನಾವು ಮಾಡಿದ್ದೇವೆ. ಎಲ್ಲಾ ಹಂತದಲ್ಲಿ ಇದಕ್ಕೆ ಏನೆಲ್ಲಾ ಸ್ಪಂದನೆಯನ್ನು ಕೊಡಬೇಕೋ ಆ ಸ್ಪಂದನೆ ಕೊಟ್ಟಿರುವುದನ್ನು ನಾವು ಕಾಣುವುದಕ್ಕೆ ಸಾಧ್ಯವಿದೆ. ಬೆಳೆಗಳ ಪರಿಸ್ಥಿತಿಯ ಬಗ್ಗೆಯೂ ಸಹ ನಮ್ಮ ಉತ್ತರದಲ್ಲಿ ನಾವು ವಿವರವಾಗಿ ಕೊಟ್ಟಿದ್ದೇವೆ. ರಸಗೊಬ್ಬರದ ವಿಚಾರ ಇರಬಹುದು, ರೈತರಿಗೆ ಯಾವ್ಯಾವ ರೀತಿಯ ಸೌಲಭ್ಯ ಬೇಕೋ ಅದೆಲ್ಲವನ್ನು ಕೊಟ್ಟಿದ್ದೇವೆ ಆ ಎಲ್ಲಾ ವಿವರಗಳಿಗೆ ನಾನು ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಲಿಖಿತ ಉತ್ತರವನ್ನು ಈಗಾಗಲೇ ಎಲ್ಲರಿಗೂ ಕೊಟ್ಟಿದ್ದೇವೆ. ರಾಜ್ಯದಲ್ಲಿ ಕೆರೆಗಳಲ್ಲಿ ನೀರು ತುಂಬಿಲ್ಲ. ಈ ರೀತಿಯಾಗಿ ಏನೇನು ಪರಿಸ್ಥಿತಿ ಉದ್ಭವವಾಗಿದೆ ಎಂಬುದನ್ನು ಗಮನಿಸಬೇಕು. ನಮ್ಮ ಎದುರಿಗೆ ಬಹಳ ಗಂಭೀರವಾದ ಎರಡು ಮೂರು ವಿಷಯಗಳಿವೆ.

ಮೊದಲನೆಯದಾಗಿ ಕುಡಿಯುವ ನೀರಿನ ಬಗ್ಗೆ ಮಾನ್ಯ ಸುದರ್ಶನ್‌ರವರು, ಮಾನ್ಯ ಮೋಹನ್ ಲಿಂಬೀಕಾಯಿಯವರು ಹಾಗೂ ಇನ್ನಿತರರು ಮಾತನಾಡಿದರು. ಅವರೆಲ್ಲರೂ ಹೇಳಿದ್ದನ್ನು ನಾನು ಕೇಳಿದೆ. ನಿಜ, ಕುಡಿಯುವ ನೀರಿನ ಸಮಸ್ಯೆಗೆ ನಾವೆಲ್ಲಾ ಈ ಮಳೆ ಬರುವ ತನಕ ಏನು ಮಾಡಬೇಕೆಂದು ಯೋಚನೆ ಮಾಡುವುದು ಸಹಜವಾಗಿದೆ. ಅದಕ್ಕೆ ನಾವು ಸ್ಪಂದಿಸಿ ಕೆಲಸ ಮಾಡೋಣ. ಆದರೆ ಗಂಭೀರವಾಗಿ ಇಡೀ ರಾಜ್ಯದಲ್ಲಿ ಸರ್ಕಾರ ಮಾತ್ರವಲ್ಲ, ಇಡೀ ಜನ ಸಮೂಹವೆ ಕುಡಿಯುವ ನೀರಿನ ವಿಷಯದಲ್ಲಿ ಗಂಭೀರವಾಗಿ ಚರ್ಚೆ ಮಾಡಬೇಕಾದಂಥ ಒಂದು ಸವಾಲು ನಮ್ಮ ಮುಂದೆ ಇದೆ. ಇದೊಂದು ಗಂಭೀರವಾದ ಪ್ರಶ್ನೆ ಇದೆ. ಇದಕ್ಕೆ ಸರ್ಕಾರವಾಗಿ ಯಾವುದೇ ಸಂದರ್ಭದಲ್ಲಿಯೂ ಸಹ ಈ ಒಂದು ವಿಷಯದಲ್ಲಿ ನಾವು ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕೋ ಅದನ್ನು

ತೆಗೆದುಕೊಳ್ಳುವುದಕ್ಕೆ ಮುಂದಾಗಿದ್ದೇವೆ. ಈಗಾಗಲೇ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಜಗದೀಶ್ ಶೆಟ್ಟರ್‌ರವರು..... ನಾವು 2,000 ಕ್ಕಿಂತ ಹೆಚ್ಚು ಬೋರ್‌ವೆಲ್‌ಗಳನ್ನು ತೆಗೆಯಲಿಕ್ಕೆ ಹೇಳುತ್ತಿದ್ದೇವೆ, ಕೆಲಸ ಮಾಡುತ್ತಿದ್ದಾರೆ. ಇದು ಅನುಷ್ಠಾನಗೊಳಿಸುತ್ತಿರುವುದು.

**ಶ್ರೀ ಹೆಚ್.ಸಿ.ನೀರಾವರಿ (ವಿಧಾನ ಸಭಾ ಕ್ಷೇತ್ರ):–** ನೀರು ಬರಲಿಲ್ಲವೆಂದರೆ ಏನು ಮಾಡುತ್ತೀರಿ? ನಮ್ಮೂರಿನಲ್ಲಿ 5 ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಎಲ್ಲವೂ ಫೇಲ್ ಆಗಿವೆ. ನೀರನ್ನು ಒದಗಿಸಲಿಕ್ಕೆ ಒಂದು ಮೂಲವೂ ಸಹ ಇಲ್ಲ. ಅದಕ್ಕೇನು ಮಾಡುತ್ತೀರಿ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಅದಕ್ಕೆ ನಾವಾದರೂ ಏನು ಮಾಡೋಣವೆಂಬುದನ್ನು ನೀವು ಹೇಳಿ.

**ಶ್ರೀ ಹೆಚ್.ಸಿ.ನೀರಾವರಿ:–** ಇದರ ಬಗ್ಗೆ ಸರ್ಕಾರ ಹೇಳಬೇಕಲ್ಲಾ. ನೀವು ನೀರನ್ನು ಟ್ಯಾಂಕರ್ ಮೂಲಕ ಸಪ್ಲೈ ಮಾಡುತ್ತೀರಾ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಈಗ ನಾವು ಅದನ್ನೇ ಮಾಡುತ್ತಿದ್ದೇವೆ. ನಾವು ಟ್ಯಾಂಕರ್ ಮೂಲಕವೂ ನೀರನ್ನು ಪೂರೈಕೆ ಮಾಡುತ್ತಿದ್ದೇವೆ. ಟ್ಯಾಂಕರ್‌ಗೆ ನೀರು ಬೇಕಲ್ಲಾ ಅದೇ ಈಗ ಸಮಸ್ಯೆಯಾಗಿದೆ. ಒಂದು ಗಂಭೀರವಾದ ಸವಾಲು ರಾಜ್ಯದ ಜನತೆಯ ಮುಂದೆ, ನಮ್ಮೆಲ್ಲರ ಮುಂದೆ ಮತ್ತು ನಮ್ಮ ಸರ್ಕಾರದ ಮುಂದಿದೆ. ನಮ್ಮಲ್ಲಿ ಈಗ ಕುಡಿಯುವ ನೀರಿಗೆ ತೊಂದರೆ ಇದೆ. ನಾವು ಈಗ ಬೋರ್‌ವೆಲ್ ತೆಗೆಯುತ್ತಿರುವ ಪಾಯಿಂಟ್ ಒಂದಿದೆ ಅಥವಾ ಟ್ಯಾಂಕರ್‌ನಲ್ಲಿ ನೀರು ಕೊಡುತ್ತಿರುವುದು ಇದೆ. ನಾವು ಟ್ಯಾಂಕರ್ ಮೂಲಕ ನೀರನ್ನು ಒದಗಿಸಿ ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇವೆ. ಅದೇ ರೀತಿ ತಹಸೀಲ್ದಾರರು ಮತ್ತು ಎಗ್ಸಿಕ್ಯೂಟಿವ್ ಆಫೀಸರ್‌ಗಳಿಗೆ ಹೇಳಿದ್ದೇವೆ. ಪಂಚಾಯ್ತಿಯಲ್ಲಿ ನಾವು ಎಲ್ಲಾ ರೀತಿಯ ಮಾಹಿತಿಯನ್ನು ತೆಗೆದುಕೊಂಡು ಕುಡಿಯುವ ನೀರನ್ನು ನಗರ ಪ್ರದೇಶಗಳಿಗೆ ಅಷ್ಟೇ ಅಲ್ಲ, ಗ್ರಾಮೀಣ ಭಾಗಗಳಿಗೂ ಒದಗಿಸಿ ಎಂದು ಹೇಳಿದ್ದೇವೆ. ನೀರನ್ನು ಕೊಡುತ್ತಿರುವ ಬಗ್ಗೆ ಇಲ್ಲಿ ನಾವು ಅಂಕಿ–ಸಂಖ್ಯೆಗಳ

ವಿವರಗಳನ್ನು ಕೊಟ್ಟಿದ್ದೇವೆ. ನಾವು ನೀರನ್ನು ಕೊಡುವುದಕ್ಕೆ ತೊಂದರೆ ಇಲ್ಲ. ಆದರೆ ಟ್ಯಾಂಕರ್‌ನಲ್ಲಿ ನೀರನ್ನು ಒದಗಿಸುವುದಕ್ಕೆ ನೀರು ಬೇಕಲ್ಲಾ, ಆ ನೀರಿಗೂ ಸಹ ಇನತ್ತಿನ ದಿವಸ ತೊಂದರೆಯಾಗುತ್ತಿದೆ. ಖಾಸಗಿಯವರ ಬೋರ್‌ವೆಲ್‌ಗಳು, ಬಾವಿಗಳಿದ್ದರೆ ಅವರಿಂದ ತೆಗೆದುಕೊಳ್ಳುವುದಕ್ಕೆ ನಮಗೆ ಅಧಿಕಾರವಿದೆ, ಅವರಿಂದಲೂ ಸಹ ನೀರನ್ನು ತೆಗೆದುಕೊಂಡು ನಾವು ಕೊಡುತ್ತಿದ್ದೇವೆ. ಭೂಮಿಯಲ್ಲಿ ದಿನದಿಂದ ದಿನಕ್ಕೆ ನೀರಿನ ಮಟ್ಟ ಕೆಳಗಿಳಿಯುತ್ತಿದೆ. ಕೋಲಾರದಲ್ಲಿ ನೀರಿನ ಮಟ್ಟ ಯಾವರೀತಿ ಕುಸಿದಿದೆ ಎನ್ನುವದು ನಮಗೆಲ್ಲರಿಗೂ ಗೊತ್ತಿದೆ.

**ಶ್ರೀ ಆರ್.ವಿ. ವೆಂಕಟೇಶ್:-** ಖಾಸಗಿಯವರು ನೀರು ಸರಬರಾಜು ಮಾಡುವುದನ್ನು ನಿಲ್ಲಿಸಬೇಕು. 24x7 ಗಣಿಗಾರಿಕೆ ಹೇಗೆ ನಡೆಯುತ್ತಿತ್ತೋ ಅದೇ ರೀತಿ ಬಹುತೇಕ ಬಡಾವಣೆಗಳಲ್ಲಿ ನೀರಿನ ಸರಬರಾಜು ಆಗುತ್ತಿದೆ. ಮುಂದಿನ ದಿನಗಳಲ್ಲಿ ಇದನ್ನು ನಿಯಂತ್ರಣ ಮಾಡದೇ ಹೋದರೆ ಎಲ್ಲೇ ಬೋರ್‌ವೆಲ್ ತೆಗೆದರೂ 3 ತಿಂಗಳಲ್ಲಿ ನೀರು ಬತ್ತಿ ಹೋಗುವ ಪರಿಸ್ಥಿತಿ ಬರುತ್ತದೆ.

**ಶ್ರೀ ಪುಟ್ಟಣ್ಣ:-** ನೀರು ಅವಶ್ಯಕತೆ ಇರುವುದರಿಂದ ಕೊಂಡುಕೊಳ್ಳುತ್ತಾರೆ. ಸರ್ಕಾರವೇ ಸರಿಯಾಗಿ ನೀರು ಸರಬರಾಜು ಮಾಡಿದರೆ ಖಾಸಗಿಯವರ ಹತ್ತಿರ ಹೋಗಿ ಏಕೆ ತೆಗೆದುಕೊಳ್ಳುತ್ತಾರೆ? ಅನಿವಾರ್ಯತೆಯಿಂದ ನೀರನ್ನು ಖಾಸಗರಿಯವರಿಂದ ಸರಬರಾಜು ಮಾಡಿಸಿಕೊಳ್ಳುತ್ತಿದ್ದಾರೆ.

**ಉಪ ಸಭಾಪತಿಯವರು:-** ಮೊದಲು ಸರ್ಕಾರದ ಉತ್ತರ ಮುಗಿಯಲಿ. ನಂತರ ಬೇರೆ ಏನಾದರೂ ಕ್ಲ್ಯಾರಿಫಿಕೇಷನ್ ಇದ್ದರೆ ಕೇಳಿ.

**ಶ್ರೀ ಪಟೇಲ್ ಶಿವರಾಂ:-** ಧನಗಳಿಗೆ ನೀರುಣಿಸುವುದಕ್ಕೆ ಸಂಬಂಧಿಸಿದಂತೆ ಗುಂಡಿಗಳನ್ನು ತೋಡಿಸುವ ಕಾರ್ಯಕ್ರಮ ನಿಮ್ಮಲ್ಲಿ ಇದೆಯೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಹೇಳುತ್ತೇನೆ. ಮಾನ್ಯ ಸಭಾಪತಿಗಳೆ, ಇವತ್ತು ಅಂತರ್ಜಲ ಮಟ್ಟ ತುಂಬಾ ಕುಸಿದಿದೆ. ಬೋರ್‌ವೆಲ್‌ಗಳನ್ನು 1000 ಅಡಿಗೂ ಹೆಚ್ಚು ತೋಡಿಸಬೇಕಾದಂತಹ ಪರಿಸ್ಥಿತಿ ಇದೆ. ಎಲ್ಲಾ ಕಡೆ ಬಾವಿಗಳನ್ನು ಆಳ ಮಾಡುತ್ತಿದ್ದರೂ ನೀರು ಸಿಗುತ್ತಿಲ್ಲ. ನಿಮಗೆಲ್ಲರಿಗೂ ಗೊತ್ತಿರುವ ಹಾಗೆ flushing ಮತ್ತು deepening ಮಾಡಿಸುತ್ತಿದ್ದೇವೆ. ಆದರೂ ನೀರು ಸಿಗುತ್ತಿಲ್ಲ. ಮಳೆ ನೀರನ್ನು ಹಿಡಿದಿಟ್ಟುಕೊಳ್ಳುವುದಕ್ಕೆ ಆಗುತ್ತಿಲ್ಲ. ಮಳೆ ಆಗದ ಕಡೆ ಇರುವಂತಹ ಪರಿಸ್ಥಿತಿಯನ್ನು ನಾವು ಇಂದು ಅನುಭವಿಸುತ್ತಿದ್ದೇವೆ. ನಿಜವಾಗಿಯೂ ನೀರಿನ ಸಮಸ್ಯೆ ಇದೆ. ಆದಾಗ್ಯೂ ಕೂಡ ಜನರ ಕಷ್ಟಗಳಿಗೆ ಸ್ಪಂದಿಸುವುದಕ್ಕೆ ಸಂಬಂಧಪಟ್ಟಂತೆ ಎಲ್ಲಾ ರೀತಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಯಾವುದೇ ಊರುಗಳಲ್ಲಿ ಅಥವಾ ಯಾವುದೇ ನಗರ ಪ್ರದೇಶಗಳಲ್ಲಿ ನೀರು ಇಲ್ಲವೆಂದು ನಮ್ಮ ತಹಸೀಲ್ದಾರರಿಗೆ, ನಮ್ಮ ಡಿಸಿಗಳಿಗೆ ತಿಳಿಸಿದರೆ ಅವರು ತಕ್ಷಣ ಟ್ಯಾಂಕರ್ ಮೂಲಕ ನಿರು ಸರಬರಾಜು ಮಾಡಬೇಕೆಂದು ಸೂಚಿಸಿದ್ದೇವೆ ಮತ್ತು ಅವರು ಅದೇ ರೀತಿ ಕ್ರಮ ಕೈಗೊಳ್ಳುತ್ತಾರೆ. ಈ ವಿಚಾರದಲ್ಲಿ ನಾವು ಯಾವುದೇ ರೀತಿಯಲ್ಲೂ ಹಿಂದೆ ಬೀಳುವುದಿಲ್ಲ. ನೀವು ನಿಮ್ಮ ತಹಸೀಲ್ದಾರರಿಗೆ ಹೇಳಿ, ನಿಮ್ಮ ಡಿಸಿಗಳಿಗೆ ಹೇಳಿ, ಸರ್ಕಾರಕ್ಕೆ ಹೇಳಿ ನಾವು ತಕ್ಷಣ ಆ ಊರುಗಳಿಗೆ ನೀರು ಸರಬರಾಜು ಮಾಡುವುದಕ್ಕೆ ಸಿದ್ಧರಿರುತ್ತೇವೆ. ನೀರಿನ ಸಮಸ್ಯೆ ಗಂಭೀರವಾಗಿರುವುದರಿಂದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ನಾವು ಮುಂದಿನ ಕ್ರಮ ಕೈಗೊಳ್ಳಬೇಕಿದೆ. ನಮ್ಮ ಸರ್ಕಾರ ಒಂದು ಸಾವಿರ ಕರೆಗೆಳ ಪುನರುಜ್ಜೀವನಕ್ಕೆ ಕಾರ್ಯಕ್ರಮ ಕೈಗೊಂಡಿದೆ. ಒಂದೊಂದು ಜಿಲ್ಲೆಯಲ್ಲಿ ನೂರಾರು ಕೆರೆಗಳನ್ನು ಅಭಿವೃದ್ಧಿ ಮಾಡುತ್ತಿರುವುದನ್ನು ನೋಡುತ್ತಿದ್ದೀರಿ. ನಾನು ಸಣ್ಣ ನೀರಾವರಿ ಇಲಾಖೆ ಅಥವಾ ಬೃಹತ್ ನೀರಾವರಿ ಇಲಾಖೆಯ ವಿಷಯಕ್ಕೆ ಹೋಗುತ್ತಿಲ್ಲ. ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೆರೆಗಳ ಹೂಳು ಎತ್ತುವುದಕ್ಕೆ, ಕೆರೆಗಳನ್ನು ಅಭಿವೃದ್ಧ ಮಾಡುವುದಕ್ಕೆ ಕೊಟ್ಟಿರುವುದನ್ನು ತಾವು ನೋಡಿದ್ದೀರಿ. ಬೇರೆ ಬೇರೆ ಯೋಜನೆಗಳ ಮೂಲಕವೂ ಈ ಕೆಲಸ ಮಾಡಲಾಗುತ್ತಿದೆ. ಬಿದ್ದ ನೀರನ್ನು ಇಂಗಿಸುವ ಪ್ರಯತ್ನವನ್ನು ಅರಣ್ಯ ಇಲಾಖೆಯವರು

ಮಾಡುತ್ತಿದ್ದಾರೆ, ಕೃಷಿ ಮತ್ತು ತೋಟಗಾರಿಕೆ ಇಲಾಖೆಯವರು ಬೃಹತ್ ನೀರಾವರಿ ಇಲಾಕೆಯ ಜೊತೆ ಮಾಡುತ್ತಿರುವಂತಹ ಕಾರ್ಯಕ್ರಮಗಳು ನಡೆಯುತ್ತಲೇ ಇದೆ. ಮುಂದಿನ ವರ್ಷಗಳಲ್ಲಿ ಉದ್ಭವಿಸುವ ನೀರಿನ ಸಮಸ್ಯೆಯನ್ನು ಎದುರಿಸುವುದಕ್ಕೆ ಹಾಕಿಕೊಂಡಿರುವ ಯೋಜನೆಗಳನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ. ಒಟ್ಟಿನಲ್ಲಿ ನೀರಿನ ಕೊರತೆ ನೀಗಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದೇವೆ. ಇನ್ನೂ ಯಾವುದಾದರೂ ಸಂದರ್ಭದಲ್ಲಿ ನೀರಿನ ಕೊರತೆಯಾದರೆ ಸ್ಥಳೀಯ ಮಟ್ಟದ ಅಧಿಕಾರಿಗಳೀಗೆ ಯಾರೇ ಪ್ರತಿನಿಧಿಗಳು ಅಥವಾ ಸಾರ್ವಜನಿಕರು ತಿಳಿಸಿದರೆ ಟ್ಯಾಂಕರ್ ಮುಖಾಂತರ ನೀರು ಸರಬರಾಜು ಮಾಡುವುದಕ್ಕೆ ಸೂಚಿಸಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ದೊಡ್ಡ ಸಮಸ್ಯೆ ಎಂದರೆ ಜಾನುವಾರುಗಳ ಸಾಗಾಣಿಕೆ ಮತ್ತು ಮೇವು ಒದಗಿಸುವುದು. ನಾವು 35 ಗೋಶಾಲೆಗಳನ್ನು ತೆಗೆದಿದ್ದೇವೆ. ಇದರಲ್ಲಿ ಸುಮಾರು 16 ಸಾವಿರಕ್ಕಿಂತ ಹೆಚ್ಚು ಗೋವುಗಳಿಗೆ ರಕ್ಷಣೆ ಕೊಡುತ್ತಿದ್ದೇವೆ. ಆದರೆ ರಾಜ್ಯದ ಒಟ್ಟು ಗೋಸಂಪತ್ತನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಇನ್ನೂ ಗೋಶಾಲೆಗಳು ಬೇಕು ಎಂದನಿಸಬಹುದು. ಜನಪ್ರತಿನಿಧಿಗಳಾದ ನಾವು ಜವಾಬ್ದಾರಿ ತೆಗೆದುಕೊಂಡು, ಎಲ್ಲೆಲ್ಲಿ ಗೋಶಾಲೆ ತೆಗೆಯಬೇಕೋ ಅಲ್ಲಿ ಗೋಶಾಲೆಗಳನ್ನು ತೆರೆಯುವುದಕ್ಕೆ ನಮ್ಮ ಅಧಿಕಾರಿಗಳಿಗೆ ಸೂಚಿಸಿದ್ದೇವೆ. ಈಗ ಮಾನ್ಯ ಪಶುಸಂಗೋಪನಾ ಸಚಿವರು ಇಲ್ಲಿದ್ದಾರೆ. ಅಂತರ್ಜಿಲ್ಲಾ ಮೇವು ಸಾಗಾಣಿಕೆಗೆ ನಿರ್ಬಂಧ ಹಾಕಿದ್ದೇವೆ ಎನ್ನುವ ಮಾತನ್ನು ಬೆಳಿಗ್ಗೆ ಹೇಳಿದೆ. ಆದಾಗ್ಯೂ ಸಹ ಬೇರೆ ರೀತಿ ಮೇವು ಸಾಗಾಣಿಕೆ ಮಾಡುತ್ತಿದ್ದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚಿಸಿದ್ದೇವೆ, ಬೆಳಗಾವಿ ಡಿಸಿಯವರಿಗೂ ಹೇಳಿದ್ದೇವೆ, ಬೆಳಗಾವಿ ವಿಭಾಗದಲ್ಲಿ ಏನು ಎಚ್ಚರಿಕೆ ವಹಿಸಬೇಕೋ ಅದನ್ನೂ ಸಹ ಸೂಚಿಸಿದ್ದೇವೆ. ಮಾನ್ಯ ಸಭಾಪತಿಗಳ ಮೇವಿನ ಕೊರತ ಆಗದೆ ಇರುವ ಹಾಗೆ ನಾವು ನೋಡಿಕೊಳ್ಳುತ್ತೇವೆ. ನಮ್ಮ ಹತ್ತಿರ ಇನ್ನು 91,64,820 ಟನ್ ಮೇವು ಲಭ್ಯವಿದೆ. ಇದು ಮುಂದಿನ 20 ವಾರಗಳಿಗೆ ಆಗುತ್ತದೆ. ನಮಗೆ ಯಾವುದೇ

ರೀತಿಯಲ್ಲೂ ಸಹ ದನಕರುಗಳಿಗೋಸ್ಕರ ಗೋಶಾಲೆಗಳನ್ನು ಸ್ಥಾಪಿಸುವುದಕ್ಕಾಗಲಿ ಅಥವಾ ಮೇವು ಒದಗಿಸುವುದಕ್ಕಾಗಲಿ ತೊಂದರೆ ಇಲ್ಲ. ಅವಶ್ಯಕತೆ ಹೆಚ್ಚಾದರೆ ಹೆಚ್ಚು ಮೇವನ್ನು ಸಂಗ್ರಹಿಸಿ ಕೊಡುವುದಕ್ಕೆ ನಮ್ಮ ಪಶುಸಂಗೋಪನಾ ಇಲಾಖೆ ಸಿದ್ಧವಿದೆ. ಇಷ್ಟು ದೊಡ್ಡ ಪ್ರಮಾಣದ ಗೋಸಂಪತ್ತಿದೆ, ಅವೆಲ್ಲಕ್ಕೂ ತೊಂದರೆ ಆಗುವುದಕ್ಕೆ ಬಿಡುತ್ತಿಲ್ಲ ಎನ್ನುವ ಭಾವನೆಯಿಂದ ನಾನು ಮಾತನಾಡುತ್ತಿಲ್ಲ. ತೊಂದರೆ ಆಗುತ್ತಿರುವುದು ನಿಜ. ಆದರೂ ಸರ್ಕಾರ ತನ್ನೆಲ್ಲ ಶಕ್ತಿಯನ್ನು ಕ್ರೋಢೀಕರಿಸಿ ಇಂತಹ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಏನೆಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವೆಲ್ಲವನ್ನೂ ತೆಗೆದುಕೊಳ್ಳುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಗಳೆ, ಗುಳೆ ಹೋಗುವುದನ್ನು ತಪ್ಪಿಸಿ ಉದ್ಯೋಗಾವಕಾಶವನ್ನು ಸೃಷ್ಟಿಸುವ ಅವಶ್ಯಕತೆ ಇದೆ. ಅದರ ಬಗ್ಗೆ ಸಹ ಅನೇಕ ಕಾರ್ಯಕ್ರಮಗಳ ಮೂಲಕ ನಮ್ಮ ಪ್ರಯತ್ನಗಳನ್ನು ಮಾಡುತ್ತಿದ್ದೇವೆ.

**ಶ್ರೀ ವಿ.ಆರ್.ಸುದರ್ಶನ್:–** ಮಾನ್ಯ ಸಭಾಪತಿಗಳೆ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ . . .

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ನಾನು ಮೊದಲು ಉತ್ತರವನ್ನು ಹೇಳಿಬಿಡುತ್ತೇನೆ. ನಂತರ ಏನು ಬೇಕಾದರೂ ಕೇಳಲಿ . . .

**ಉಪಸಭಾಪತಿಯವರು:–** ಮಾನ್ಯ ಸಚಿವರು ಮೊದಲು ಉತ್ತರ ಹೇಳಿಬಿಡಲಿ, ಅವರು ಉತ್ತರ ಹೇಳಿದ ಮೇಲೆ ಒಂದೆರಡು ನಿಮಿಷ clarification ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ವಿ.ಆರ್.ಸುದರ್ಶನ್:–** ನಾನು ಈ ವಿಚಾರವಾಗಿಯೇ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ನಾವು ಇಲ್ಲಿ ಹಳ್ಳಗಾಡು ಪ್ರದೇಶಗಳಲ್ಲಿ ಬಂದಿರುವ ಬರ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. Mr. Jagadeesh Shettar is holding the portfolio of Rural Development Minister. ನಾವು ಮಾತನಾಡಿದರೆ ನಿಮಗೆ ಸಿಟ್ಟು ಬರಬಹುದು, ಅದಕ್ಕೆ

ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. ನಾನು ಆಗಲೇ, ರಾಜಕೀಯ ಗೊಂದಲಗಳು ಯಾವರೀತಿ ದುಷ್ಪರಿಣಾಮ ಬೀರುತ್ತದೆ ಎಂಬ ಮಾತನ್ನು ಹೇಳಿದೆ and Hon'ble Chief Minister has authorized Primary & Secondary Education Minister to reply. ಇಲ್ಲ Rural Development Minister ಸುಮ್ಮನೆ ಕುಳಿತಿದ್ದಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಗಳೆ, ಇದು ಪಾಯಿಂಟ್ ಆಫ್ ಆರ್ಡರ್ ಆಗುವುದಕ್ಕೆ ಸಾಧ್ಯವಿಲ್ಲ. . . (ಗೊಂದಲ) ತಾವು ಹಿರಿಯ ಸದಸ್ಯರಾಗಿದ್ದೀರಿ . . .

**ಶ್ರೀ ವಿ. ಆರ್. ಸುದರ್ಶನ್:–** ನಾನು ಹಿರಿಯ ಸದಸ್ಯನಾಗಿರುವುದರಿಂದಲೇ ಈ ಮಾತುಗಳನ್ನು ಹೇಳುತ್ತಿದ್ದೇನೆ. It is an insult to you.

**ಶ್ರೀ ಜಗದೀಶ್ ಶೆಟ್ಟರ್:–** ಸಮಯ ಬಂದಾಗ ನಾನೂ ಉತ್ತರ ಕೊಟ್ಟಿದ್ದೇನೆ. ಇಲ್ಲಿ ರಾಜಕಾರಣದ ಮಾತುಗಳನ್ನು ಹೇಳುವುದು ಸರಿಯಲ್ಲ . . . (ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:–** ಪ್ರತಿನಿತ್ಯ ರಾಜಕಾರಣವನ್ನು ಮಾಡಿ ಕುಳಿತುಕೊಂಡಿರುವವರು ನೀವು. ಆಡಳಿತವನ್ನು ನಿರ್ಲಕ್ಷ್ಯ ಮಾಡಿ ಪ್ರತಿ ಕ್ಷಣ ರಾಜಕಾರಣವನ್ನು ಮಾಡುತ್ತಿದ್ದೀರಿ . . .

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಗಳೆ, drought and flood comes under the Revenue Department. ಕಂದಾಯ ಇಲಾಖೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇದೆ. ನಮ್ಮಲ್ಲಿ ಒಂದು ವ್ಯವಸ್ಥೆ ಇದೆ. ಹಿಂದೆ ಮಾನ್ಯ ಆಚಾರ್ಯರವರು ಇದ್ದಾಗಲೂ ಸಹ, ವಿಧಾನ ಪರಿಷತ್ತಿನಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳು ಹೆಚ್ಚು ಬರುವುದರಿಂದ ಮಾನ್ಯ ಕಾಗೇರಿಯವರು ಇಲ್ಲಿದ್ದು ಮುಖ್ಯ ಮಂತ್ರಿಗಳ ಪರವಾಗಿ ಉತ್ತರ ಕೊಡಬೇಕೆಂಬ ವ್ಯವಸ್ಥೆ ಇತ್ತು. ಇವತ್ತು ಕಂದಾಯ ಇಲಾಖೆ ಮುಖ್ಯಮಂತ್ರಿಗಳ ಅಡಿಯಲ್ಲಿ ಬರುತ್ತದೆ. ಅವರು ಮಾಹಿತಿ ಕೊಟ್ಟಿರುವುದರಿಂದ ಮಾನ್ಯ ಕಾಗೇರಿಯವರು ಉತ್ತರ ಕೊಡುತ್ತಿದ್ದಾರೆ. ನಾವು

ರೆಗ್ಯುಲರ್ ಆದ ಕುಡಿಯುವ ನೀರಿನ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಕೆಲಸವನ್ನು ಮಾಡುತ್ತೇವೆ. Drought ಅಥವಾ flood ಬಂದಾಗ ಅದನ್ನು ಕಂದಾಯ ಇಲಾಖೆ ನಿರ್ವಹಣೆ ಮಾಡುತ್ತದೆ. ಆದ್ದರಿಂದ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಗೇರಿಯವರು ಉತ್ತರ ಕೊಡುತ್ತಿದ್ದಾರೆ. ಇದರಲ್ಲೂ ರಾಜಕಾರಣ ಮಾಡುವಂಥದ್ದು ಸರಿಯಲ್ಲ.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುತ್ತಾ, ಸಂದರ್ಭ ಬಂದಾಗ ನಾವು ಒಟ್ಟಿಗೆ ಹೋಗುತ್ತೇವೆ ಎಂದು ಹೇಳಿದ್ದಾರೆ, ಆಯಿತು ಈ ವಿಚಾರ ಬೇಡ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಇವರು (ಕಾಂಗ್ರೆಸ್) ನಮ್ಮ ಮಧ್ಯೆ ಏನನ್ನಾದರೂ ತಂದಿಡುವುದಕ್ಕೆ ನೋಡುತ್ತಿದ್ದಾರೆ. ಆದರೆ ಅದು ಆಗುವುದಿಲ್ಲ. ಅದರಲ್ಲಿ ಯಶಸ್ವಿಯಾಗುವುದಿಲ್ಲ.

**SRI M.C.NANAIAH:–** Your loyalty to the Chief Minister

is unquestionable. Loyalty of some other Minister's is questionable ಎನ್ನುವುದು ಎಲ್ಲರಿಗೂ ಗೊತ್ತಿದೆ. Why do you say so?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ಜನರ ಉದ್ಯೋಗದ ದೃಷ್ಟಿಯಿಂದಲೂ ಸಹ ನಾವು ಯೋಚನೆ ಮಾಡಬೇಕಾಗಿದೆ. ಈಗಲೇ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಸಹ ಮಧ್ಯದಲ್ಲಿ ಪ್ರವೇಶ ಮಾಡಿ ಉದ್ಯೋಗ ಖಾತ್ರಿ ವಿಷಯವನ್ನು, ಕುಡಿಯುವ ನೀರಿನ ವಿಷಯವನ್ನು ಮತ್ತು ಇನ್ನಿತರ ವಿಷಯಗಳೆಲ್ಲವನ್ನೂ ಎಲ್ಲವನ್ನೂ ಸ್ಪಷ್ಟಪಡಿಸಿದ್ದಾರೆ.

**ಉಪ ಸಭಾಪತಿಯವರು:–** ಈ ವಿಚಾರವಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹೇಳಿದ್ದಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಉದ್ಯೋಗ ಖಾತ್ರಿ ಯೋಜನೆಯಲ್ಲಿ 400 ಕೋಟಿ ರೂಪಾಯಿಗಳು ಬರಬೇಕಾಗಿದ್ದು, ಅದು ಬರಲಿಲ್ಲವೆಂದು ಅವರು ಈ ಸದನದಲ್ಲಿ ಹೇಳಿದ್ದಾರೆ. ನಾವು ಈ ರೀತಿಯ ಅಡೆತಡೆಗಳ

ಮಧ್ಯೆಯು ಸಹ ನಾವು ಗುಳೆ ಹೋಗುವುದನ್ನು ತಡೆಗಟ್ಟಿ ಅವರಿಗೆ ಅಲ್ಲಿಯೇ ಉದ್ಯೋಗವನ್ನು ಕೊಡುವುದಕ್ಕೆ ಬೇಕಾಗಿರುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ನಿನ್ನೆ ಕೇಂದ್ರ ಸರ್ಕಾರ ಒಂದು ಒಳ್ಳೆಯ ನಿರ್ಣಯ ಮಾಡಿದೆ. ಅದಕ್ಕೆ ನಾನು ಅಭಿನಂದಿಸುತ್ತೇನೆ. 125 ರೂಪಾಯಿಗಳಿಂದ 155 ರೂಪಾಯಿಗಳಿಗೆ ದಿನಗೂಲಿಯನ್ನು ಹೆಚ್ಚಿಸಿದೆ. ಈತ 155 ರೂಪಾಯಿಗಳನ್ನು ಮಾಡಿದ್ದಾರೆ. ಅದು ಏನೇ ಆಗಲಿ ಕೇಂದ್ರ ಸರ್ಕಾರ ಒಳ್ಳೆಯ ನಿರ್ಣಯ ಮಾಡಿದೆ. ಕೋರ್ಟಿನ ತೀರ್ಮಾನದಿಂಧ ಆದರೂ ಮಾಡಿದ್ದಾರೆ ಅದು ನಮಗೆ ಸಂತೋಷವಾಯಿತು. ಈ ವಿಚಾರವನ್ನು ನಾವು ಸ್ಮರಿಸಿಕೊಂಡು ಸರ್ಕಾರವನ್ನು ಅಭಿನಂದಿಸುತ್ತೇವೆ.

**ಶ್ರೀ ಆರ್.ವಿ.ವೆಂಕಟೇಶ್:–** ಏತಕ್ಕೆ ಅಭಿನಂದಿಸುತ್ತಿದ್ದೀರ ಎಂದು ಹೇಳಬೇಕು.

**ಉಪ ಸಭಾಪತಿಗಳು:–** ಸಚಿವರು ಅಭಿನಂದಿಸಿದ್ದಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** 125 ರೂಪಾಯಿಗಳಿಂದ 155 ರೂಪಾಯಿಗಳಿಗೆ ಹೆಚ್ಚಿಸಿದ್ದನ್ನು ಸ್ಮರಿಸಿಕೊಂಡು ಆ ವಿಚಾರವನ್ನು ಇಲ್ಲಿ ಉಲ್ಲೇಖಿಸಿ ಅಭಿನಂದಿಸುತ್ತಿದ್ದೇನೆ.

**ಶ್ರೀ ಆರ್.ವಿ.ವೆಂಕಟೇಶ್:–** ಈ ವರ್ಷ ಏನೋ ಸ್ವಲ್ಪ ವಿಳಂಬವಾಗಿದೆ. ಹಿಂದಿನ ವರ್ಷಗಳಲ್ಲಿ ಎಷ್ಟು ಹಣ ಕೇಂದ್ರಕ್ಕೆ ವಾಪಸ್ಸು ಹೋಗಿದೆ ಎನ್ನುವುದನ್ನು ಗಮನಿಸಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಗಳೇ, ಈ ಯೋಜನೆಯಲ್ಲಿಯೂ ಸಹ ನಮಗೆ 2,99,286 ಕಾಮಗಾರಿಗಳನ್ನು 24 ಜಿಲ್ಲೆಗಳಲ್ಲಿ ತೆಗೆದುಕೊಂಡಿದ್ದಾರೆ. ಇದರೊಳಗೆ 11,22,209 ಕುಟುಂಬಗಳಿಗೆ 1,671 ಕೋಟಿ ರೂಪಾಯಿಗಳ ಉದ್ಯೋಗವನ್ನು ಸೃಷ್ಟಿಸುವುದಕ್ಕೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ನಮಗೆ ಅನುಕೂಲವಾಗಿದೆ. ಈ ವಿಚಾರವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಉಲ್ಲೇಖಿಸಿದ್ದು, ನಾನು ಸಹ ಇದನ್ನು ಉಲ್ಲೇಖಿಸುವುದಕ್ಕೆ ಬಯಸುತ್ತೇನೆ. ಆದರೂ ಸಹ ಅಗತ್ಯವಿರುವ ಪ್ರಮಾಣ

ಉದ್ಯೋಗವನ್ನು ಸೃಷ್ಟಿಸಿರುವುದಿಲ್ಲ. ಅದರ ಹಿನ್ನೆಲೆಯಲ್ಲಿ ನಮ್ಮ ಸರ್ಕಾರದ ಬೇರೆ ಬೇರೆ ಯೋಜನೆಗಳನ್ನು ಸಹ ಮೊನ್ನೆಯ ಬಜೆಟ್‌ನಲ್ಲಿ ನೀವು ನೋಡಿದ್ದೀರಿ. ಉದ್ಯೋಗ ಸೃಷ್ಟಿಯಾಗುವುದಕ್ಕೆ ಬೇಕಾಗಿರುವಂತಹ ಕೆಲವಾರು ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಹೀಗೆ ಸಾಕಷ್ಟು ಉದ್ಯೋಗ ಸೃಷ್ಟಿಯಾಗುವುದಕ್ಕೂ ಸಹ ಅಗತ್ಯವಾದ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ಇದರ ಜೊತೆಯಲ್ಲಿ ನಮಗೆ ಇನ್ನೊಂದು ಮುಖ್ಯವಾದ ವಿಚಾರವೆಂದರೆ ರೈತರ ಸಾಲಗಳು ಮತ್ತು ಬೇರೆ ಬೇರೆ ರೀತಿಯ ಕಷ್ಟಗಳು ಸಹ ಇವತ್ತು ಇದೆ. ಈ ಒಂದು ರೈತರ ಕಷ್ಟಗಳಿಗೆ ಆಣೆವಾರಿ ಪ್ರಕಾರ 24 ಜಿಲ್ಲೆಗಳಲ್ಲಿ ಭೂಕಂದಾಯ ಮನ್ನಾ ಮಾಡುವುದಕ್ಕೆ ಸಹ ನಾವು ಕ್ರಮ ತೆಗೆದುಕೊಂಡಿದ್ದೇವೆ. ಇದನ್ನು ಸಹ ಬಹಳ ಪ್ರಮುಖವಾದ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಇದರ ಜೊತೆಯಲ್ಲಿ ವಿವಿಧ ಹಣಕಾಸು ಸಂಸ್ಥೆಯಿಂದ ಪಡೆದ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಮತ್ತು ಮಧ್ಯಮಾವಧಿ ಸಾಲವನ್ನು ಧೀರ್ಘಾವಧಿ ಸಾಲವನ್ನಾಗಿ ಮಾಡುವುದಕ್ಕೆ ನಾವು ಕ್ರಮವಹಿಸಿದ್ದೇವೆ. ರೈತರ ಎಲ್ಲಾ ರೀತಿಯ ಕಷ್ಟಗಳಿಗೂ ಸಹ ಸ್ಪಂದಿಸುವುದಕ್ಕೆ ನಾವು ಮುಂದಾಗಿದ್ದೇವೆ. ಹೀಗೆ ರಾಷ್ಟ್ರೀಯ ಬ್ಯಾಂಕುಗಳ ವಿಚಾರವಾಗಿ ನಿಮಗೂ ಹಾಗೂ ನಮಗೆಲ್ಲಾ ಗೊತ್ತಿದೆ. ಅದರದೇ ಆದಂತಹ ಸಮಸ್ಯೆಗಳು ಅವುಗಳಿಗಿದೆ. ನಮ್ಮ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಹಣಕಾಸು ಸಂಸ್ಥೆಗಳಲ್ಲಿಯೂ ಸಹ ನಾವು ಅಗತ್ಯವಾದಂತಹ ರೀತಿಯಲ್ಲಿ ಅವರು ಪುನಃ ಹಣ ತುಂಬುವುದಕ್ಕೆ ಅವರಿಗೆ ಪುನಃ ಸಮಯವನ್ನು ನಿಗದಿಗೊಳಿಸಿ, ಅದನ್ನು ವಿಸ್ತರಿಸುವಲ್ಲಿ ಅಗತ್ಯವಾದ ಪ್ರಯತ್ನವನ್ನು ಮಾಡಿದ್ದೇವೆ. ಅದನ್ನು ಇಲ್ಲಿ ಸ್ಪಷ್ಟಪಡಿಸಿದ್ದೇವೆ. ಇದರ ಜೊತೆಗೆ ವಿದ್ಯುತ್ತಿನ ಸಮಸ್ಯೆ ಇಡೀ ರಾಜ್ಯವನ್ನು ಅನೇಕ ವರ್ಷಗಳಿಂದ ಕಾಡುತ್ತಿರುವ ಒಂದು ಸಮಸ್ಯೆಯಾಗಿದೆ. ವಿದ್ಯುತ್ ಉತ್ಪಾದನೆಗೆ ನಮ್ಮದೇ ಆಗಿರುವಂತಹ ಕೆಲವು ಸಮಸ್ಯೆಗಳಿರುವುದರಿಂದ ಹಿಂದಿನಿಂದಲೂ ನಾವು ಅದನ್ನು ನಿರ್ಲಕ್ಷ್ಯ ಮಾಡಿಕೊಂಡು ಬಂದಿರುವುದರಿಂದಾಗಿ, ಇಡೀ ರಾಜ್ಯಕ್ಕೆ ವಿದ್ಯುತ್ತಿನ ಸಮಸ್ಯೆ ಮೊದಲಿನಿಂದಲೂ ಇದೆ.

**ಶ್ರೀ ವಿ.ಆರ್. ಸುದರ್ಶನ್:-** ರಾಜಕಾರಣದ ದೃಷ್ಟಿಯಿಂದ ಹೇಳುತ್ತಿದ್ದೀರಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ನಾನು ರಾಜಕಾರಣದ ಶಬ್ಧ ಹೇಳಲಿಲ್ಲ. ಹಾಗೆ ಹೇಳಬೇಕು ಎಂದಿದ್ದರೆ ಅದನ್ನು ನಾನು ಹೇಳಬಹುದಾಗಿತ್ತು. ನಾನು ಅದನ್ನು ಹೇಳಿಲ್ಲ. ಇಷ್ಟು smooth ಆಗಿ ಮಾತನಾಡಿದರೂ ಸಹ ಇಲ್ಲಿಯೂ ರಾಜಕಾರಣದ ವಿಷಯ ಹೇಳುತ್ತಾರೆ. ವಿದ್ಯುತ್ತಿನ ಅಭಾವವಿರುವುದನ್ನು ನಾವೆಲ್ಲರೂ ಒಪ್ಪಿಕೊಂಡಿರುವುದ ಸತ್ಯವಾದ ವಿಚಾರ. ನಮಗೆ ಸಮಸ್ಯೆಯಿದೆ. ಅದರ ಹಿನ್ನೆಲೆಯಲ್ಲಿ ಎಷ್ಟು ಪ್ರಮಾಣದ ವಿದ್ಯುತ್ತನ್ನು ಖರೀದಿ ಮಾಡುತ್ತಿದ್ದೇವೆ ಎನ್ನುವುದರ ಬಗ್ಗೆ ಮಾನ್ಯ ಇಂಧನ ಸಚಿವರಾದ ಕುಮಾರಿ ಶೋಭಾ ಕರಂದ್ಲಾಜೆಯವರು ನಿನ್ನೆ ಹೇಳುತ್ತಿದ್ದರು. ಬೆಂಗಳೂರು ನಗರಕ್ಕೆ ಬೇಸಿಗೆಯಲ್ಲಿ ಸುಮಾರು 300 ಮೆಗಾವ್ಯಾಟ್ ವಿದ್ಯುತ್ ಬೇಕಾಗಿದೆ. ಅಂದರೆ ನೀವು ಯೋಚನೆ ಮಾಡಿ. ಬಿಸಿಲಿಗೆ ಬಳಸುತ್ತಿರುವಂತಹ ವಿದ್ಯುತ್, ಅವಲಂಬಿಸುತ್ತಿರುವ ಗೃಹೋಪಯೋಗಿ ವಸ್ತುಗಳ ಬಳಕೆಗೆ ವಿದ್ಯುತ್ ಹೆಚ್ಚಾಗುತ್ತಿರುವುದು ಇತ್ಯಾದಿ ಹತ್ತಾರು ಕಾರಣಗಳಿವೆ. ಅದರ ಮಧ್ಯೆಯೂ ಸಹ ರೈತರಿಗೆ ವಿದ್ಯುತ್ತನ್ನು ಉಚಿತವಾಗಿ ಕೊಟ್ಟು ಒಂದು ಸಮರ್ಪಕವಾದಂತ ವೇಳೆಯಲ್ಲಿ ನೀರನ್ನು ಅವರು ಬಳಸಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ನೀರಿಲ್ಲ ಹಾಗೂ ಬೇರೆ ಬೇರೆ ಸಮಸ್ಯೆಗಳಿವೆ. ನಾವು 10 ಹೆಚ್.ಪಿ.ಗಳ ಪಂಪ್‌ಸೆಟ್‌ಗಳಿಗೆ ವಿದ್ಯುತ್ತನ್ನು ಉಚಿತವಾಗಿ ಕೊಟ್ಟು ಅವರ ಕಷ್ಟಗಳಿಗೆ ಸ್ಪಂದಿಸುವಂತಹ ಕೆಲಸವನ್ನು ಮಾಡಿದ್ದೇವೆ. ಆದರೆ, ಇವತ್ತು ಯಾವುದೇ ಟ್ರಾನ್ಸ್‌ಫಾರ್ಮರ್‌ಗಳು ಇಂತಹ ಸಂದರ್ಭದಲ್ಲಿ ಓವರ್ ಲೋಡ್ ಆಗುತ್ತದೆ. ಓವರ್ ಲೋಡ್ ಆದಾಗ ಹಾಳಾಗುವ ಪ್ರಮಾಣವೇ ಬೇರೆ ಬೇರೆ ಇರುತ್ತದೆ. 46,918 ಟಿ.ಸಿ.ಗಳನ್ನು ನಾವು ಬದಲಾಯಿಸಿದ್ದೇವೆ. ಈ ರೀತಿ ಓವರ್ ಲೋಡ್‌ಆಗಿ ಸುಟ್ಟು ಹಾಳಾಗಿ ತೊಂದರೆಯಾದಂತಹ ಸಂದರ್ಭದಲ್ಲಿಯೂ ಸಹ ಈ ರೀತಿಯ ಕಷ್ಟಗಳನ್ನು ತಂದಲ್ಲಿ ಅವುಗಳಿಗೆ ಸ್ಪಂದಿಸುವುದಕ್ಕೆ ನಾವು ಮುಂದಾಗಿದ್ದೇವೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ನಾನು ಹೇಳುತ್ತೇನೆ. ನಾನು ಮುಖ್ಯ ಕಾರ್ಯದರ್ಶಿಯವರಿಗೂ ಸಹ ಸ್ಪಷ್ಟವಾಗಿ ಸೂಚಿಸಿದ್ದೇನೆ. ಅವರೂ ಸಹ ಆಯಾಯ ಜಿಲ್ಲೆಗಳಿಗೆ ಅಂದರೆ 24 ಜಿಲ್ಲೆಗಳಲ್ಲಿ ವಿಶೇಷವಾಗಿ ಉಸ್ತುವಾರಿ ಕಾರ್ಯದರ್ಶಿಗಳೂ ಸಹ ಕಾಲಕಾಲಕ್ಕೆ ಭೇಟಿ ನಿಡಿ ಜಿಲ್ಲಾಧಿಕಾರಿಗಳು ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆನ್ನುವುದನ್ನು ಮೇಲುಸ್ತುವಾರಿ ಮಾಡಿ ಅಗತ್ಯವಾದ ನಿರ್ಣಯಗಳನ್ನು ಅಲ್ಲಿ ಮಾಡಿ, ಆ ಜನರ ಕಷ್ಟಗಳಿಗೆ ಸ್ಪಂದಿಸಬೇಕೆನ್ನುವ ನಿರ್ದೇಶನಗಳನ್ನು ಸಹ ಸರ್ಕಾರದಿಂದ ನಾವು ಕೊಟ್ಟಿರುವುದು ಇದೆ. ಉಸ್ತುವಾರಿ ಕಾರ್ಯದರ್ಶಿಗಳೂ ಸಹ ಅದಕ್ಕೆ ಬೇಕಾಗಿರುವ ಪ್ರಯತ್ನಗಳನ್ನು ಅಲ್ಲಿ ಮಾಡುತ್ತಿದ್ದಾರೆ. ಏಕೆಂದರೆ, ಅಲ್ಲಿ ಯಾವ ರೀತಿಯ ಸಮಸ್ಯೆಗಳಿದ್ದರೆ, ರಾಜ್ಯ ಮಟ್ಟದಲ್ಲಿ ತೆಗೆದುಕೊಳ್ಳಬೇಕಾಗಿರುವಂತಹ ನಿರ್ಣಯಗಳಿದ್ದರೆ ಉಸ್ತುವಾರಿ ಕಾರ್ಯದರ್ಶಿಗಳ ಭೇಟಿ ಮತ್ತು ಅವರು ಅಲ್ಲಿ ಬಂದು ಆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಮಾಡುವ ಪ್ರಯತ್ನವೂ ಅಷ್ಟೆ ಮಹತ್ವದ್ದು ಇದೆ. ಈ ನಿಟ್ಟಿನಲ್ಲಿ ಉಸ್ತುವಾರಿ ಕಾರ್ಯದರ್ಶಿಗಳಿಗೂ ಸಹ ನಾವು ಸೂಚಿಸಿದ್ದೇವೆ. ಅಲ್ಲಿ ಜಿಲ್ಲಾ ಮಟ್ಟದಲ್ಲಿ ಯಾವುದೇ ರೀತಿಯ ತೊಂದರೆಗಲು ಆಗದೇ ಇರುವಂತೆ ಜಿಲ್ಲಾಡಳಿತದ ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕೆ ಮತ್ತು ಉಳಿದಂತೆ ಸಂಬಂಧಪಟ್ಟಂತಹ ಎಲ್ಲಾ ಸಚಿವರು ಸಹ ಸಮರ್ಥವಾಗಿ ಈ ಕೆಲಸವನ್ನು ಮಾಡುವುದಕ್ಕೆ ನಾವೆಲ್ಲರೂ ಒಂದಾಗಿದ್ದೇವೆ. ನಿಮ್ಮೆಲ್ಲರ ಸಹಕಾರವನ್ನು ನಾನು ಕೇಳುತ್ತೇನೆ. ರಾಜ್ಯದ ಜನರ ಸಹಕಾರವನ್ನು ಸಹ ಕೇಳುತ್ತೇನೆ. ಬರ ಅಂದರೆ 40 ವರ್ಷಗಳಲ್ಲಿ ಕಾಣದೇ ಇರುವಂತಹ ಬರ ಬಂದಿದೆ ಎಂದರೆ ರಾಜ್ಯದ ಜನರ ಸಹಕಾರವೂ ಸಹ ಬೇಕಾಗುತ್ತದೆ. ಸರ್ಕಾರ ಒಂದೇ ಎಲ್ಲವನ್ನೂ ಮಾಡುತ್ತದೆ ಎಂದಲ್ಲ. ರಾಜ್ಯದ ಜನತೆಯ ಸಹಕಾರಗಳು ಬೇಕಾಗುತ್ತದೆ. ಕೇಂದ್ರ ಸರ್ಕಾರ ನಮಗೆ ಒಂದು ಒಳ್ಳೆಯ ಕೆಲಸವನ್ನು ಮಾಡಿದೆ. ಏನೆಂದರೆ, 2,607 ಕೋಟಿ ರೂಪಾಯಿಗಳು ಬೇಕೆಂದು ಏನು ವರದಿಯಲ್ಲಿ ಹೇಳಿದೆಯೋ ಆ ವರದಿಯ ಬಗ್ಗೆ ಎನ್.ಐ.ಡಿ.ಎಂ.ರವರು ಬಹಳ ವಿಸ್ತೃತವಾಗಿ ಚೆನ್ನಾಗಿ ವರದಿ ಕೊಟ್ಟಿದ್ದೀರಿ ಎಂದು ಶ್ಲಾಘನೆ ಮಾಡಿದ್ದಾರೆ, ಬಹಳ ಒಳ್ಳೆಯ ರೀತಿಯಲ್ಲಿ ವರದಿ

ಕೊಟ್ಟಿದ್ದೀರಿ ಎಂದು ನಮಗೆ ಬಹುಮಾನ ಕೊಟ್ಟಿದ್ದಾರೆ. ಆ ರೀತಿಯ ಹೆಗ್ಗಳಿಕೆಯ ಶಿಫಾರಸ್ಸನ್ನು ನಾವು ಕೊಟ್ಟಿದ್ದೇವೆ.

**ಶ್ರೀ ಯಂ.ಸಿ.ನಾಣಯ್ಯ:–** ಎನ್.ಐ.ಡಿ.ಎಂ. ಎಂದರೇನು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಎನ್.ಐ.ಡಿ.ಎಂ. ಬಗ್ಗೆ ನಾನು ವಿವರವನ್ನು ತೆಗೆದುಕೊಂಡು ಕೊಡುತ್ತೇನೆ. ನಾನು ಸಹ ಹೊಸದಾಗಿ ಈ ಶಬ್ಧವನ್ನು ಕೇಳುತ್ತಿದ್ದೇನೆ. ನಾವು ಚೆನ್ನಾಗಿ ವರದಿಯನ್ನು ಕೊಟ್ಟಿದ್ದೇವೆಂದು ಅವರು ನಮಗೆ ಪ್ರಶಸ್ತಿ ಕೊಟ್ಟು ಅಭಿನಂದಿಸಿದ್ದಾರೆ. ನಾನು ಅದರ ಬಗ್ಗೆ ವಿವರ ಕೊಡುವುದಕ್ಕೆ ಕೇಳಿದ್ದೇನೆ. ರಾಜ್ಯದ ಸಮಸ್ಯೆಯನ್ನು ಕೇಂದ್ರಕ್ಕೆ ಪರಿಣಾಮಕಾರಿಯಾಗಿ ತಿಳಿಸಿದ್ದೇವೆ ಎನ್ನುವುದಕ್ಕೆ ಅವರು ಹೇಳಿದ್ದಾರೆ. ಹಾಗಾಗಿ, ನಾವು ನಮ್ಮ ಎಲ್ಲಾ ಶಕ್ತಿಮೀರಿ ಈ ಒಂದು ಕಷ್ಟದ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಮುಂದಾಗಿದ್ದೇವೆ. ಈ ನಿಟ್ಟಿನಲ್ಲಿ ನಿಮ್ಮೆಲ್ಲರ ಮತ್ತು ರಾಜ್ಯದ ಜನತೆಯ ಸಹಕಾರವನ್ನು ಕೇಳುತ್ತೇವೆ. ಕೇಂದ್ರ ಸರ್ಕಾರದ ಸಹಕಾರ ಕೇಳುತ್ತೇವೆ. ಎಲ್ಲರೂ ಒಟ್ಟಾಗಿ ಮಾಡೋಣ. ಇನ್ನೂ ಎರಡು ತಿಂಗಳು ಇದೆ. ಈಗ ಮಾರ್ಚ್ ಮುಗಿಯಲಿದ್ದು, ಏಪ್ರಿಲ್ ಶುರುವಾಗುತ್ತದೆ. ಏಪ್ರಿಲ್, ಮೇ ಮುಗಿದ ನಂತರ ಜೂನ್‌ನಲ್ಲಿ ಮಳೆ ಶುರುವಾಗುತ್ತದೆ. ಆದರೆ, ಏಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ ಅನೇಕ ಕಡೆಗಳಲ್ಲಿ ಈ ಪರಿಸ್ಥಿತಿಯ ಗಂಭೀರತೆ ಇನ್ನೂ ತೀವ್ರಗೊಳ್ಳುವುದು ಇದೆ. ಆ ಗಂಭೀರತೆ ತೀವ್ರಗೊಳ್ಳುತ್ತದೆ ಎನ್ನುವ ಪೂರ್ಣ ಅರಿವು ನಮಗಿದೆ. ಹಾಗಾಗಿ, ನಮ್ಮೆಲ್ಲರ ಪಾಲ್ಗೊಳ್ಳುವಿಕೆಯ ವಿಚಾರದಲ್ಲಿ ರಾಜಕಾರಣದ ವಿಚಾರವನ್ನು ಬೆರೆಸದೇ, ನಾವೆಲ್ಲರೂ ಜನರ ಕಷ್ಟಗಳಿಗೆ ಸ್ಪಂದಿಸುವಲ್ಲಿ ತಮ್ಮೆಲ್ಲರ ಪಾಲ್ಗೊಳ್ಳುವಿಕೆಯನ್ನು ಸರ್ಕಾರದಿಂದ ಅಪೇಕ್ಷಿಸುತ್ತೇವೆ. ಏಕೆಂದರೆ, ಇಂತಹ ಒಂದು ಸಂದರ್ಭ ಬರಲೇಬಾರದು. ಆದರೂ ಸಹ ಬಂದಿದೆ. ಬಂದಿರುವ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವುದು ನಮ್ಮೆಲ್ಲರ ಜವಾಬ್ದಾರಿಯುತವಾದ ಕರ್ತವ್ಯಗಳಾಗಬೇಕು. ಹಾಗಾಗಿ, ಸಮಾಜದಲ್ಲಿ ಜನರ ಮಧ್ಯೆ ಸರ್ಕಾರವಾಗಿ ನಾವೆಲ್ಲರೂ ನಮ್ಮ ನಮ್ಮ ಜವಾಬ್ದಾರಿಯುತವಾದ ಸ್ಥಾನಮಾನಗಳಿಂದಾಗಿ ಜನರ ಕಷ್ಟಕ್ಕೆ ಸ್ಪಂದಿಸುವಂತಹ ಪ್ರಾಮಾಣಿಕವಾದ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ

ಎನ್ನುವಂತಹ ಸಂದೇಶವನ್ನು ಕೊಡಬೇಕು. ಅದಕ್ಕೆ ನಿಮ್ಮೆಲ್ಲರ ಸಹಕಾರವನ್ನು ನಾನು ಅಪೇಕ್ಷಿಸುತ್ತೇನೆ. ಸರ್ಕಾರದಿಂದ ಯಾವುದೇ ರೀತಿಯ ಕೊರತೆಯಾಗದಿರುವಂತೆ ನಾವು ನೋಡಿಕೊಳ್ಳುತ್ತೇವೆ. ಮುಂದಿನ ಎರಡು ತಿಂಗಳಲ್ಲಿ ಯಾವ ಪರಿಸ್ಥಿತಿ ಉದ್ಭವವಾಗಬಹುದು ಎನ್ನುವ ಬಗ್ಗೆ ಮುಖ್ಯ ಕಾರ್ಯದರ್ಶಿಯವರು ಮತ್ತು ಎಲ್ಲಾ ಇಲಾಖೆಗಳ ಕಾರ್ಯದರ್ಶಿಗಳು ಅನೇಕ ಹಂತಗಳಲ್ಲಿ, ಉನ್ನತ ಮಟ್ಟದ ಸಮಿತಿಗಳ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಕುಳಿತು ಚರ್ಚೆ ಮಾಡಿ ಅಗತ್ಯವಾದಂತಹ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಹಾಗಾಗಿ, ಎಲ್ಲಾ ರೀತಿಯ ಪ್ರಯತ್ನಗಳನ್ನು ಸಹ ನಾವು ಮಾಡುತ್ತಿದ್ದೇವೆ. ಅದನ್ನು ಮಾಡುತ್ತೇವೆ ಹಾಗೂ ಮುಂದುವರೆಸುತ್ತೇವೆ. ಹಾಗಾಗಿ, ಯಾವುದೇ ಸಂದರ್ಭದಲ್ಲಿ ಏನೇ ಪರಿಸ್ಥಿತಿ ಉದ್ಭವಿಸಿದರೂ ಸಹ ಸ್ಥಳೀಯ ಅಧಿಕಾರಿಗಳಿಗೆ ಮತ್ತು ರಾಜ್ಯ ಮಟ್ಟದ ಅಧಿಕಾರಿಗಳಿಗೆ ಸಮಸ್ಯೆಗಳ ಬಗ್ಗೆ ಮಾಹಿತಿಯನ್ನು ಕೊಟ್ಟು ನಿಮ್ಮ ಅಗತ್ಯತೆಗಳನ್ನು ಅವರಿಗೆ ತಿಳಿಸಿದರೆ ಸರ್ಕಾರದ ಮಟ್ಟದಲ್ಲಿ ನಾವು ಸ್ಪಂದಿಸುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬರ ನಿರ್ವಹಣೆಯ ಈ ಸಂದರ್ಭದಲ್ಲಿ ಯಾವುದೇ ರೀತಿಯಿಂದ ನಿರ್ಲಕ್ಷತೆ ಮಾಡುವುದಿಲ್ಲ. ಜನರ ಕಷ್ಟಗಳಿಗೆ ಸ್ಪಂದಿಸುತ್ತೇವೆ. ಅದಕ್ಕೆ ನಿಮ್ಮೆಲ್ಲರ ಸಹಕಾರವನ್ನು ಕೇಳುತ್ತೇವೆ. ಈ ವಿಷಯವನ್ನು ಇನ್ನು ಯಾವುದೇ ಉದ್ದೇಶಕ್ಕೆ ಬಳಸಿಕೊಳ್ಳುವುದಕ್ಕೆ ನಾವು ಯಾರೂ ಮುಂದಾಗುವುದಿಲ್ಲ ಎನ್ನುವಂತಹ ವಿಶ್ವಾಸವನ್ನು ವ್ಯಕ್ತಪಡಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಎಲ್ಲಾ ವಿವರಗಳನ್ನು ಸದನದ ಮುಂದೆ ಇಡುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ. . . .

**ಉಪ ಸಭಾಪತಿಗಳು:-** ದಯವಿಟ್ಟು ಸ್ವಲ್ಪ ಕುಳಿತುಕೊಳ್ಳಿ. ಈ ವಿಚಾರವನ್ನು 3 ಗಂಟೆ 45 ನಿಮಿಷಕ್ಕೆ ಪ್ರಾರಂಭ ಮಾಡಿದ್ದಾಗಿದೆ. ಅಂದರೆ ಮಧ್ಯಾಹ್ನ ಊಟಕ್ಕೆ ಮುನ್ನ ಈ ವಿಷಯ ಶುರು ಮಾಡಲಾಗಿತ್ತು. ನಂತರ ಮತ್ತು 3 ಗಂಟೆ 45 ನಿಮಿಷದಿಂದ ಈ ವಿಷಯವನ್ನು ತೆಗೆದುಕೊಂಡು

ಇದುವರೆಗೂ ಮುಂದುವರೆಸಿದ್ದೇವೆ. ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಿ ಮುಂದಿನ ವಿಷಯಕ್ಕೆ ಹೋಗೋಣವೆಂದು ನನಗನಿಸುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕಾಗಿತ್ತು.

**ಉಪ ಸಭಾಪತಿಗಳು:-** ತುಂಬಾ ಸಮಯವಾಗಿದೆ. ನಿಯಮ-68 ರಲ್ಲಿ ಈ ವಿಚಾರವನ್ನು ತೆಗೆದುಕೊಂಡು ನಾವು ಇಷ್ಟು ಸಮಯ ಚರ್ಚೆ ಮಾಡುತ್ತೇವೆ ಎಂದರೆ ಹೇಗೆ?

**ಶ್ರೀ ಎಸ್.ಆರ್. ಪಾಟೀಲ್:-** ಇದರ ಸಲುವಾಗಿ ನಾನು ಮಾತನಾಡಿಲ್ಲ. ನಾನು ಕೇವಲ ಕ್ಲಾರಿಫಿಕೇಷನ್ ಕೇಳುತ್ತೇನೆ.

**ಉಪ ಸಭಾಪತಿಗಳು:-** ನಾನು ಒಂದು ಮಾತನ್ನು ಹೇಳುತ್ತೇನೆ. ನಾನು ಏಕೆ ಇದಕ್ಕೆ ಅವಕಾಶ ಕೊಟ್ಟಿದ್ದೇನೆ ಎಂದರೆ ಈ ಸಮಸ್ಯೆ ನಿಜವಾಗಿಯೂ ರಾಜ್ಯದಲ್ಲಿ ಜ್ವಲಂತ ಸಮಸ್ಯೆಯಾಗಿದೆ. ಅದಕ್ಕಾಗಿ ನಾನು ನಿಮ್ಮೆಲ್ಲರ ಕಳಕಳಿಯನ್ನು ಮತ್ತು ಸರ್ಕಾರದ ಕಳಕಳಿಯನ್ನು ಅರ್ಥಮಾಡಿಕೊಂಡು ಮಾತನಾಡಲು ಇಷ್ಟೊಂದು ಅವಕಾಶ ಕೊಟ್ಟಿದ್ದೇನೆ. ದಯಮಾಡಿ ಮುಂದಿನ ವಿಷಯಕ್ಕೆ ಹೋಗೋಣ.

**ಶ್ರೀ ಎಸ್.ಆರ್. ಪಾಟೀಲ್:-** ಎರಡು ವಿಚಾರಗಳ ಬಗ್ಗೆ ನಾನು ಕ್ಲಾರಿಫಿಕೇಷನ್ ಕೇಳುತ್ತೇನೆ.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ. . . .

**ಉಪ ಸಭಾಪತಿಗಳು:-** ಶ್ರೀಯುತ ನಾಣಯ್ಯನವರು ಏನೋ ಹೇಳುವವರಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸದಸ್ಯರಾದ ಶ್ರೀಯುತ ನಾಣಯ್ಯನವರೆ, ನಾನು ಒಂದು ಕ್ಲಾರಿಫಿಕೇಷನ್ ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರು ತಮಗೆ ಅವಕಾಶ ಕೊಟ್ಟರೆ ನಾನು ಮಾತನಾಡುವುದಿಲ್ಲ. 4457 ಕೋಟಿ

ರೂಪಾಯಿಗಳಷ್ಟು ಹಣ ಈ ಬರದಿಂದಾಗಿ 123 ತಾಲ್ಲೂಕುಗಳಲ್ಲಿ ನಷ್ಟವಾಗಿದೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಡಿಸೆಂಬರ್ ತಿಂಗಳಿನಲ್ಲಿ ಈ ಬಗ್ಗೆ ಚರ್ಚೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಒಂದು ದೊಡ್ಡ ಹೇಳಿಕೆಯನ್ನು ಕೊಟ್ಟಿದ್ದಾರೆ. ನಾವು ಈಗ ಮಾರ್ಚ್ ತಿಂಗಳಿನಲ್ಲಿದ್ದೇವೆ. ಈಗ ಎರಡನೆ ಹೇಳಿಕೆಯನ್ನು ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮತಿ ಮೋಟಮ್ಮನವರು ಪ್ರಶ್ನೆ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಒಂದು ಉತ್ತರವನ್ನು ಕೊಟ್ಟರು. ಅದರ ಮೇಲೆ ಏನಾಯಿತು ಎಂದರೆ ಕೇಂದ್ರದಿಂದ ಒಂದು ಟೀಮ್‌ನವರು ಬಂದರು. ಅವರು ಬಂದು ಎಲ್ಲಾ ಜಾಗವನ್ನು ನೋಡಿದರು. ಅವರು ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಈಗ ನಮಗೆ ಬಂದಿರುವ 'Calamity Relief Fund' ಎನ್ನುವುದು ಬೇರೆಯಾಗುತ್ತದೆ. ಅದು ಅತಿವೃಷ್ಟಿಗೆ ಸಂಬಂಧಪಟ್ಟಂತೆ ಕೊಡಲಾಗುತ್ತದೆ. ಇದೀಗ SRDF ಎನ್ನುವುದು 'State Relief Drought Fund' ಎಂದು ಹೇಳುವಂತಹದ್ದು. ಇದರಲ್ಲಿ ಕೇಂದ್ರ ಸರ್ಕಾರ ಕೊಡಬೇಕಾದಂತಹ ಶೇರು ಯಾವುದು ಇದೆ, ಅದು ಎಲ್ಲಾ ರಾಜ್ಯಗಳಿಗೂ ನಿಗದಿ ಮಾಡಿರುವಂತಹ ಹಣವಾಗಿರುತ್ತದೆ. ಈ ವಿಚಾರವಾಗಿ ತಮಗೆಲ್ಲಾ ಗೊತ್ತಿದೆ. ಒಂದು ವರ್ಷಕ್ಕೆ ಎಲ್ಲಾ ರಾಜ್ಯಗಳಿಗೂ ನಿಗದಿ ಮಾಡಿರುವಂತಹ ಹಣ ಬಂದಾದ ಮೇಲೆ ಅದರಲ್ಲಿ ನಿಮಗೆ ಬೇರೆ ಹಣ ಕೊಡಲಿಕ್ಕೆ ಅವಕಾಶವೇ ಇಲ್ಲ. ಆದ್ದರಿಂದ, ಈ ಹಿಂದೆಯೂ ಕೂಡ ಹತ್ತಾರು ಬಾರಿ ಈ ರೀತಿಯ ಬರವೂ ಬಂದಿದೆ, ಈ ರೀತಿ ಅತಿವೃಷ್ಟಿಯೂ ಬಂದಿದೆ. ಬಹುಶಃ ನಮ್ಮ ರಾಜ್ಯ ಸರ್ಕಾರಕ್ಕೂ ಸಹ ಕೇಂದ್ರದಿಂದ 3-4 ವರ್ಷಗಳ ಹಿಂದೆ 500 ಕೋಟಿ ರೂಪಾಯಿಗಳನ್ನು ಅನುದಾನವನ್ನು ಕೊಟ್ಟಿದ್ದಾರೆ. ಈ ರೀತಿಯ ಮಾನ್ಯ ಪ್ರಧಾನ ಮಂತ್ರಿಗಳ ವಿಶೇಷವಾದ ನೆರವು ಯಾವುದು ಇದೆ ಅದನ್ನು ಕೊಟ್ಟಿದ್ದಾರೆ. ಆಂಧ್ರ ಪ್ರದೇಶಕ್ಕೆ 500 ಕೋಟಿ ರೂಪಾಯಿಗಳನ್ನು ಒಂದು ಬಾರಿ ಕೊಟ್ಟಿದ್ದಾರೆ, ತಮಿಳುನಾಡಿಗೆ 500 ಕೋಟಿ ರೂಪಾಯಿಗಳನ್ನು ಒಂದು ಬಾರಿ ಕೊಟ್ಟಿದ್ದಾರೆ. ಒರಿಸ್ಸಾ ರಾಜ್ಯಕ್ಕೆ ಒಂದು ಬಾರಿ ಕೊಟ್ಟಿದ್ದಾರೆ. ಇದಾದ ಮೇಲೆ ನೀವು ಕೇಳತಕ್ಕಂತಹ 2600 ಕೋಟಿ ರೂಪಾಯಿಗಳ

ನೆರವು ಏನಿದೆ, ಅದನ್ನು ಬರ ಪರಿಹಾರಕ್ಕಾಗಿ ಕೇಳಿದ್ದೀರಿ. ಅದರಲ್ಲಿ 700 ಕೋಟಿ ರೂಪಾಯಿಗಳನ್ನು ನೀವು ರಿಲೀಫ್ ಆಗಿ ಕೊಡಿ ಎಂದು ಕೇಳಿದ್ದೀರಿ. 2600 ಕೋಟಿ ರೂಪಾಯಿಗಳ ಮನವಿಯನ್ನು ಸಲ್ಲಿಸಿ, 760 ಕೋಟಿ ರೂಪಾಯಿಗಳನ್ನು ನಮಗೆ ಕೊಡಿ ಎಂದು ನೀವು ಕೇಳುತ್ತಿದ್ದೀರಿ. ದಯವಿಟ್ಟು ನಾನು ಹೇಳುವುದೇನೆಂದರೆ SRDF ನಲ್ಲಿ ನಿಮಗೆ ನೀವು ಕೇಳತಕ್ಕಂತಹ ಹಣ ಕೇಂದ್ರ ಸರ್ಕಾರದಿಂದ ಸಿಗುವುದಿಲ್ಲ. ಆದರೆ, Prime Minister's Special Relief Fund ಎನ್ನುವುದು ಇದ್ದು, ಅದರಲ್ಲಿ ಏನಾದರೂ ಸಿಗುವುದು ಇದ್ದರೆ ಅದರಲ್ಲಿ ನೀವು ಇದನ್ನು ಪ್ರಯತ್ನ ಮಾಡಬಹುದು. ಈ ಪ್ರಯತ್ನವನ್ನು ಮಾಡಬೇಕಾದರೆ ಏನು ಮಾಡಬೇಕಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ರಾಜ್ಯಕ್ಕೆ ಬರ ಬಂದು ಇಲ್ಲಿಗೆ ಎಷ್ಟು ತಿಂಗಳಾಗಿದೆ? ಈ ಬರ ಎನ್ನುವುದು ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಿನಿಂದ ಪ್ರಾರಂಭವಾಯಿತು. ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ಕಳೆದು ನಾವೀಗ ಮಾರ್ಚ್ ತಿಂಗಳಿನಲ್ಲಿದ್ದೇವೆ. ನೀವು ಅಕ್ಟೋಬರ್‌ವರೆಗೆ 4567 ಕೋಟ ರೂಪಾಯಿಗಳ ನಷ್ಟದ ಅಂದಾಜನ್ನು ನೀವು ಮಾಡಿದ್ದೀರಿ. ಆದರೆ, ಈ ಬರದಿಂದ ಇಲ್ಲಿಯವರೆಗೆ ಎಷ್ಟು ಕಳೆದುಕೊಂಡಿದ್ದೀರಿ ಎನ್ನುವುದರ ಮೌಲ್ಯಮಾಪನವನ್ನು ಮಾಡಿದ್ದೀರಾ? ಎಲ್ಲಾ ಕಡೆಗಳಲ್ಲಿಯೂ ಸಂಪೂರ್ಣವಾಗಿ ಬೆಳೆಯನ್ನು ಬೆಳೆದಿಲ್ಲ. ಈ ಹಿನ್ನೆಲೆಯಲ್ಲಿ ನೀವು 7 ತಿಂಗಳುಗಳಿಂದ ಅಥವಾ ಒಂದು ವರ್ಷದಿಂದ ಸರ್ಕಾರ ನಡೆದುಕೊಂಡು ಬಂದಿರುವಂತಹ ರೀತಿ ಯಾವ ರೀತಿ ಇದೆ ಎನ್ನುವುದು ಗೊತ್ತಾಗುತ್ತದೆ. ಪುನಃ ರಾಜಕಾರಣದ ವಿಷಯ ಎಂದು ಹೇಳಲಿಕ್ಕೆ ಹೋಗಬೇಡಿ. ನಿಮ್ಮ ಒಳಗಡೆ ಒಂದು ಸಮ್ಮತವಾದಂತಹ ಒಂದು ಪರಿಸ್ಥಿತಿ ನಿರ್ಮಾಣವಾಗದೆ ಸರ್ಕಾರ ಹರಾಜಕತೆ ಆಗುವಂತಹ ಸಂದರ್ಭದಲ್ಲಿ ನೀವು ಎಲ್ಲರೂ ಒಟ್ಟಾರೆ ಸೇರಿ ವಿರೋಧ ಪಕ್ಷದವರನ್ನು ಗಣನೆಗೆ ತೆಗೆದುಕೊಂಡು, ಅವರ ಜೊತೆಯಲ್ಲಿ ಚರ್ಚೆ ಮಾಡಿ ಕೇಂದ್ರಕ್ಕೆ ಹೋಗಬೇಕಾಗುತ್ತದೆ. ಅಲ್ಲಿಗೆ ಹೋಗಿ ಇಷ್ಟೊಂದು ದೊಡ್ಡ ಪ್ರಮಾಣದ ಬರ ನಮಗೆ ಬಂದಿದೆ ಎಂದು ಅವರಿಗೆ ನಾವು ಕೇಳಬೇಕಾಗುತ್ತದೆ.

ಮಾನ್ಯ ಸಭಾಪತಿಯವರೆ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಅಂದರೆ 1983–85 ರವರೆಗೆ ಸತತವಾಗಿ 2–3 ವರ್ಷಗಳ ಕಾಲ ಬರಗಾಲ ಬಂದಿತ್ತು. ಇಲ್ಲವೆಂದು ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ತದನಂತರ 1994–95ನೇ ಸಾಲಿನಲ್ಲಿಯೂ ಸಹ ಬಹಳ ದೊಡ್ಡ ಪ್ರಮಾಣದ ಅತಿವೃಷ್ಟಿ ಬಂದಿತ್ತು. ಇದೆಲ್ಲವೂ ನಡೆದು ಬಂದಿರುವಂತಹದ್ದು. ಈ ಹಿನ್ನೆಲೆಯಲ್ಲಿ ನಾನು ಕೇಳುವುದೇನೆಂದರೆ ನೀವು ಏತಕ್ಕೋಸ್ಕರ ವಿರೋಧ ಪಕ್ಷದವನ್ನು ಕರೆದು ಇದರ ಬಗ್ಗೆ ಚರ್ಚೆಯನ್ನು ಮಾಡಬಾರದು. ನೀವು ಕೇಂದ್ರ ಸರ್ಕಾರದ ಹತ್ತಿರ ಹೋಗುವಾಗ ನೀವು ಯಾರ ಜೊತೆ ಹೋಗುತ್ತೀರಿ? ಎಲ್ಲರೂ ಒಟ್ಟಾರೆ ಸೇರಿ ಹೋಗಬೇಕಾಗುತ್ತದೆ. ಇಲ್ಲಿಯವರೆಗೆ ಕೇಂದ್ರಕ್ಕೆ ಒಟ್ಟಾರೆ ಹೋಗುವಂತಹ ಒಂದು ಪರಿಸ್ಥಿತಿಯನ್ನು ಇಲ್ಲಿಯವರೆಗೆ ನೀವು ನಿರ್ಮಾಣ ಮಾಡಲಿಲ್ಲ. As a Government you have been divided. ಈ ರೀತಿಯಲ್ಲಿ division ಇದ್ದರೆ ಕೇಂದ್ರ ಸರ್ಕಾರಕ್ಕೆ ಏನು ಅನಿಸುತ್ತದೆ? ಸರ್ಕಾರವನ್ನು ನಡೆಸುವಂತಹದ್ದು ಈ ರೀತಿಯಲ್ಲಿ ಇದೆ ಎನ್ನುವಂತಹ ಪರಿಸ್ಥಿತಿ ಕೇಂದ್ರ ಸರ್ಕಾರಕ್ಕೆ ನಿರ್ಮಾಣವಾದ ಮೇಲೆ ಏನು ಮಾಡುವುದಕ್ಕಾಗುತ್ತದೆ? ನೀವು ಮೊದಲಿನಿಂದಲೂ 'ಮಲತಾಯಿ ಧೋರಣೆ' 'ಮಲತಾಯಿ ಧೋರಣೆ' ಎಂದು ಹೇಳಿಕೊಂಡು ಬಂದಿದ್ದೀರಿ.

ಮಾನ್ಯ ಮುಖ್ಯಮಂತ್ರಿಗಳಿಗೆ ಬೆಂಬಲವನ್ನು ಕೊಡಲಿಕ್ಕೆ ನಿಮ್ಮ ಸಚಿವ ಸಂಪುಟದಲ್ಲಿ ಸಚಿವರು ಯಾರ್‍ಯಾರು ಇದ್ದೀರಿ. ಎಲ್ಲಾ ಸದಸ್ಯರು ಈ ನಿಟ್ಟಿನಲ್ಲಿ ಅವರಿಗೆ ಬೆಂಬಲ ಕೊಡಿ. ಬರದ ಬಗ್ಗೆ ಆದರೂ ಒಟ್ಟಾಗಿ ಹೋಗುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡೋಣ. ಕಾವೇರಿಯ ಬಗ್ಗೆ ಮತ್ತು ನಮ್ಮ ರಾಜ್ಯದ ಸಮಸ್ಯೆಗಳು ಬಂದಾಗ ಎಲ್ಲವನ್ನೂ ಮರೆಯಿರಿ. ಇನ್ನೂ ಕೂಡ ನಾಯಕತ್ವದ ಬದಲಾವಣೆ, ನಾಯಕತ್ವದ ಬದಲಾವಣೆ ಎಂದು ಹೇಳಿಕೊಂಡು ಹೊರಟರೆ ಕೇಂದ್ರ ಸರ್ಕಾರ ಯಾರು ನಾಯಕರು ಎಂದು ತೀರ್ಮಾನ ಮಾಡಬೇಕಾಗುತ್ತದೆಂದು ನಿಮ್ಮಲ್ಲಿ ಈಗ ಹೇಳಿ.

ಮಾನ್ಯ ಮುಖ್ಯಮಂತ್ರಿಗಳು ಈಗ ಈ ಸದನಕ್ಕೆ ಬಂದಿದ್ದರೆ ಒಳ್ಳೆಯದಿತ್ತು. ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದು ಸಭೆಯನ್ನು ಕೂಡಲೇ ಕರೆಯಬೇಕು. ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗವನ್ನು ಪಕ್ಷಾತೀತವಗಿ ಹೋಗಲಿಕ್ಕೆ ಇರತಕ್ಕಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ. 700 ಕೋಟಿ ರೂಪಾಯಿಗಳನ್ನು ಕೊಡಬೇಕೆಂದರೆ ನಿಮಗೆ SRDF ನಲ್ಲಿ ಸಿಗುವುದಿಲ್ಲ. CRF ನಲ್ಲಿ ಸಿಗುವುದಿಲ್ಲ. 500 ಕೋಟಿ ರೂಪಾಯಿಗಳ ನೆರವನ್ನು ಮಾನ್ಯ ಪ್ರಧಾನ ಮಂತ್ರಿಗಳ ವಿಶೇಷ ಪರಿಹಾರ ನಿಧಿಯಿಂದ ಕೇಳತಕ್ಕಂತಹ ಪರಿಸ್ಥಿತಿಯನ್ನು ನಾವು ನಿರ್ಮಾಣ ಮಾಡೋಣ. ಆ ಹಂತಕ್ಕಾದರೂ ನೀವು ಬರುತ್ತೀರಾ ಎಂದು ಹೇಳುವಂತಹ ಒಂದು ಚಿಂತನೆ ಬಗ್ಗೆ ಕಾಗೇರಿಯವರು ತಿಳಿಸಬೇಕು. ನೀವು ಸಭಾನಾಯಕರು ಇದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಸಭಾನಾಯಕರು ಅಲ್ಲದಿದ್ದರೂ ಸಹ ನಿಮಗೆ ಈ ಸಂದರ್ಭದಲ್ಲಿ ಮಾತನಾಡಲಿಕ್ಕೆ ಅಧಿಕಾರವನ್ನು ಕೊಟ್ಟಿದ್ದಾರೆ.

**(ಈ ಹಂತದಲ್ಲಿ ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿಯವರು ಸಭಾಪೀಠವನ್ನು ಅಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ಬಹುಶಃ ನಮ್ಮ ರಾಜ್ಯ ಎದುರಿಸುತ್ತಿರುವಂತಹ ಈ ಬರ ಏನಿದೆ, ಸುಮಾರು ವರ್ಷಗಳಿಂದ ಅತಿ ದೊಡ್ಡದಾದ ಬರಗಾಲವನ್ನು ಎದುರಿಸುತ್ತಿದ್ದೇವೆ. 123 ತಾಲ್ಲೂಕುಗಳಲ್ಲಿ ಬರ ಇದೆ. ನೀವು ಕೊಟ್ಟಿರುವಂತಹ ಮಾಹಿತಿ ಪ್ರಕಾರ ಆಗಿರುವಂತಹ ನಷ್ಟದ ಅಂದಾಜು 4457 ಕೋಟಿ ರೂಪಾಯಿಗಳ ನಷ್ಟ ಕೇವಲ ಅಕ್ಟೋಬರ್ 2011 ರವರೆಗೆ ಮಾತ್ರ. ಅಕ್ಟೋಬರ್‌ನಿಂದ ಇಲ್ಲಿಯವರೆಗೆ ಯಾವುದೇ ಮಾಹಿತಿ ಅವರಿಗೆ ಸಿಕ್ಕಿಲ್ಲ. ನೀವು ಕೊಟ್ಟಿರುವಂತಹ ರಿಲೀಫ್ ಯಾವುದು? ಆನೆವಾರಿ ಡಿಕ್ಲೇರ್ ಮಾಡಿದ್ದೇವೆ, ಅವರ ಕಂದಯ ಮನ್ನಾ ಮಾಡಿದ್ದೇವೆ ಎನ್ನುವುದಾಗಿದೆ. ಒಂದು ವರ್ಷಕ್ಕೆ ನಿಮಗೆ ಎಷ್ಟು ಕಂದಾಯ ಸಿಕ್ಕುತ್ತದೆ? ಒಟ್ಟಾರೆ 123 ತಾಲ್ಲೂಕುಗಳಿಂದ ನಿಮಗೆ ಸಿಗತಕ್ಕಂತಹ ಕಂದಾಯ 2 ಲಕ್ಷ ಹೆಚ್ಚು ಅಂದರೆ 5 ಲಕ್ಷ ರೂಪಾಯಿಗಳು ಸಿಗಬಹುದು. ಮತ್ತೆ ನೀವು

ಮತ್ತೊಂದು ರಿಲೀಫ್ ಅನ್ನು ಕೊಟ್ಟಿದ್ದೀರಿ, ರೈತರು ತೆಗೆದುಕೊಂಡಿರುವ ಸಾಲ ಯಾವುದು ಇದೆ, ಆ ಸಾಲವನ್ನು ನಾವು ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ, ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾಡುತ್ತೇವೆಂದು ಹೇಳುತ್ತಿದ್ದೀರಿ. That is not the answer. ಸಾಲವಾದ ನಂತರ ಪುನಃ ಸಾಲಕ್ಕೆ ಸಿಲುಕುವಂತೆ ಮಾಡುತ್ತಿದ್ದೀರಿ. ಬಹುಶಃ ನೀವು relief ಅನ್ನು ಕೊಡುವಂತಹ ಒಂದು ಪ್ರಯತ್ನವನ್ನು ಮಾಡುವುದಾದರೆ, ರೈತರು ಸಹಕಾರ ಸಂಘಗಳಿಂದ ಪಡೆದಿರುವ ಸಾಲ ಯಾವುದೆ ಇದೆ, ಅದನ್ನು ಅವರು ಕಟ್ಟಲಿಕ್ಕೆ ಆಗದೇ ಇರತಕ್ಕಂತಹ ಪರಿಸ್ಥಿತಿ ಖಂಡಿತ ಆಗಿರುವುದು ನಿಜ. ಈ ಹಣವನ್ನು ನೀವು ಏನಾದರೂ ಮಾಡಿ ಯಾವ ಮಟ್ಟದಲ್ಲಿ ಪರಿಹಾರ ಮಾಡುತ್ತೀರಿ ಅಂದರೆ ಮನ್ನಾ ಮಾಡಿ ಎಂದು ಹೇಳಿದರೆ ಅದಕ್ಕೆ ಒಂದು ರಾಜಕೀಯ ಬಣ್ಣವನ್ನು ಬಳಿಯಬೇಡಿ. ಎಲ್ಲಿ ಈ ರೀತಿಯ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಆ ಕಾರ್ಯಕ್ರಮವನ್ನು ತೆಗೆದುಕೊಳ್ಳಲೇಬೇಕಾಗುತ್ತದೆ ಎನ್ನುವ ಪರಿಸ್ಥಿತಿ ಅನಿವಾರ್ಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮುಂಗಡಪತ್ರವನ್ನು ಮಂಡಿಸುವ ಸಂದರ್ಭದಲ್ಲಿ ಇದನ್ನು ಗಮನದಲ್ಲಿಟ್ಟುಕೊಂಡು ಯಾವುದನ್ನು ಯಾವುದಕ್ಕೆ ಹಣವನ್ನು ಒದಗಿಸಬೇಕೆಂದು ಹೇಳತಕ್ಕಂತಹ ಪರಿಸ್ಥಿತಿ ನಿರ್ಮಾಣ ಮಾಡಿಕೊಳ್ಳಬೇಕಾಗಿತ್ತು. ಈ ಬರಕ್ಕೆ 500 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಡಲಿಕ್ಕೆ ಇರತಕ್ಕಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಳ್ಳಬೇಕಾಗಿತ್ತು. ಬಹುಶಃ 76 ಕೋಟಿ, 100 ಕೋಟಿ ರೂಪಾಯಿಗಳನ್ನು ಅವರಿಗೆ ಇವರಿಗೆ ಕೊಡತಕ್ಕಂತಹದ್ದು ಒಂದು ಭಾಗವಾದರೆ ಇಂತಹ ಪರಿಸ್ಥಿತಿಯಲ್ಲಿ ನಾವು ಪಕ್ಷಭೇದವಿಲ್ಲದೇ ನಾವು ಕೆಲಸ ಮಾಡಬೇಕಾಗುತ್ತದೆ. ಇಂತಹ ಪರಿಸ್ಥಿತಿ ಬಂದಾಗ ಶಾಸಕರ ನಿಧಿ ಇದೆ. ಒಂದು ಭಾಗದಲ್ಲಿ ಬರ ಇದ್ದರೆ ಮತ್ತೊಂದು ಭಾಗದಲ್ಲಿ ಬರ ಇಲ್ಲ. ಬರ ಇರತಕ್ಕಂತಹ ಪ್ರದೇಶಕ್ಕೆ ಬರ ಇಲ್ಲದೇ ಇರತಕ್ಕಂತಹ ಪ್ರದೇಶಗಳಿಂದ ಸ್ವಲ್ಪ ಹಣವನ್ನು ಕೊಡತಕ್ಕಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡು, ನಾವು ಅದಕ್ಕೆ ಎಲ್ಲರೂ ಒಪ್ಪಿಕೊಂಡು ಕೆಲಸ ಮಾಡಬೇಕಾಗುತ್ತದೆ. ಇಲ್ಲಿಯವರೆಗೆ ಈ ಹಂತದಲ್ಲಿ ಏನಾದರೂ ಪ್ರಯತ್ನ ಮಾಡಿದ್ದೀರಾ ಎಂದು

ಹೇಳಿ. ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಚರ್ಚೆ ಮಾಡಲಿಕ್ಕೆ ನೀವು ಸಮಯವನ್ನೇ ಕೊಡುತ್ತಿಲ್ಲ. ದಿನನಿತ್ಯ ಈ ಹಿಂಸೆ, ಆ ಹಿಂಸೆ ಕಾಡಿ, ಕಾಡಿ ಮಾನಸಿಕವಾಗಿ ಸ್ಥಿರತೆ ಇಲ್ಲದೇ ಹೋದರೆ ಯಾರಿಂದ ಆಡಳಿತವನ್ನು ನಡೆಸಲಿಕ್ಕೆ ಸಾಧ್ಯವಿದೆ ಹೇಳಿ. ಇಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿರುವುದರಿಂದಲೇ ನಾವು ಈ ಹಂತಕ್ಕೆ ತಲುಪಿದ್ದೇವೆ. ಆದ್ದರಿಂದ, ಕೇಂದ್ರ ಸರ್ಕಾರ ಅದನ್ನು ಮಾಡಲಿಲ್ಲ, ಇದನ್ನು ಮಾಡಲಿಲ್ಲವೆಂದರೆ ಹೇಗೆ? ಕೇಂದ್ರ ಸರ್ಕಾರ ನಿಮಗೆ ಕೊಟ್ಟಿರುವಂತಹ ಹಣವನ್ನು ಯಾವ ರೀತಿಯಲ್ಲಿ ಖರ್ಚು ಮಾಡಿದ್ದೀರಿ ಎನ್ನುವುದಕ್ಕೆ ಬೇಕಾದಷ್ಟು ವರದಿಗಳಿವೆ.

ಮಾನ್ಯ ಸಭಾಪತಿಯವರೆ, ತಾವೇ ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಮತ್ತು ಮುಖ್ಯಮಂತ್ರಿಗಳಿಗೆ ಒಂದು ಸೂಚನೆಯನ್ನು ಕೊಡಿ. ಬರದ ಬಗ್ಗೆ, ನೀರಿನ ಸಮಸ್ಯೆ ಬಗ್ಗೆ ನಾವೆಲ್ಲರೂ ಪಕ್ಷಾತೀತವಾಗಿ ಕೆಲಸ ಮಾಡಬೇಕಾ ಗುತ್ತದೆ. ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಒಂದು ಸಭೆಯನ್ನು ಕರೆಯುತ್ತೇನೆಂದು ಹೇಳಿದ್ದಾರೆ. ಅದರಲ್ಲೂ ಕಾವೇರಿ ನೀರಿಗೆ ಸಂಬಂಧಪಟ್ಟ ಹಾಗೆ ಕರೆಯುತ್ತೇವೆಂದು ಹೇಳಿದ್ದಾರೆ. ಬರಕ್ಕೂ ಸಂಬಂಧಪಟ್ಟ ಹಾಗೆ ಸಹ ಕರೆಯಬೇಕು. ಅದರ ಬಗ್ಗೆಯೂ ಸಹ ಚರ್ಚೆ ಮಾಡೋಣ. ಈ ಸಂಬಂಧ ಅಧಿಕಾರಿಗಳು ಏನು ಹೇಳಿದರೆಂದರೆ "Beautiful memorandum, you have given the complete picture about this and I complement you ಎಂದು ಹೇಳುತ್ತಾರೆ". ಅದನ್ನು draft ಮಾಡಿದವರಿಗೆ complements ಸಿಕ್ಕಿತು ಅಷ್ಟೆ. ಹಣ ಸಿಗಬೇಕಲ್ಲವೇ? ಹಣ ಸಿಗಬೇಕಾದರೆ ಏನು ಮಾಡಬೇಕೆಂದು ಹೇಳಿ. ಮಾಡಬೇಕಾಗಿರುವುದು ಏನೆಂದರೆ, It is the question of political diplomacy. Common head of the political diplomacy meet the Prime Minister, try to go as a team. Then only you can succeed.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಈ ಹಂತದಲ್ಲಿ ನಾನು ಒಂದು ಮಾಹಿತಿಯನ್ನು ಕೊಡಲಿಕ್ಕೆ ಬಯಸುತ್ತೇನೆ. ಈ NIDM ಎಂದರೆ 'National Institute of Disaster Management' ಎಂದು. ನಮ್ಮ ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ ಏನಿದೆ, ಅದು

ಇತ್ತೀಚಿನ ವರ್ಷಗಳಲ್ಲಿ ಅದಕ್ಕೆ ಪ್ರತ್ಯೇಕವಾದಂತಹ ಒಂದು ಅಸ್ತಿತ್ವವನ್ನು ಕೊಟ್ಟು ಕೆಲಸ ಮಾಡುವುದಕ್ಕೆ ಎಲ್ಲರನ್ನೂ ತರಬೇತಿಗೊಳಿಸುತ್ತಿದೆ, ಆ ಸಂಸ್ಥೆಯಿಂದ ಒಳ್ಳೆಯ ವರದಿ ಇದೆ ಎನ್ನುವುದನ್ನು ಹೇಳಿದೆನು. ಈ NCCF ಏನಿದೆ, 'National Calamity Contingeny Fund' ಇದರಿಂದ ನಮಗೆ ಬರಬೇಕು. ಅದರಿಂದ ಬರಲಿಲ್ಲ. ಅದನ್ನು ಪ್ರಧಾನ ಮಂತ್ರಿಗಳೇ ಕೊಡಬೇಕು. ಇದನ್ನು ಹಿಂದೆ ನಮಗೆ ಕೊಟ್ಟಿದ್ದಾರೆ. ನಮಗೆ ಈ ವರ್ಷವೂ ಬರುತ್ತದೆನ್ನುವ ವಿಶ್ವಾಸ ನಮಗಿದೆ. ಆದರೆ, ಮಾನ್ಯ ಶ್ರೀ ನಾಣಯ್ಯನವರು ಹೇಳಿದ್ದನ್ನು ನಾನೂ ಸಹ ಒಪ್ಪುತ್ತೇನೆ. ನಾನು ಮುಖ್ಯಮಂತ್ರಿಗಳಿಗೂ ಸಹ ಸರ್ವಪಕ್ಷಗಳ ಸಭೆಯನ್ನು ಕರೆದು, ಕೇಂದ್ರಕ್ಕೆ ನಿಯೋಗವನ್ನು ತೆಗೆದುಕೊಂಡು ಹೋಗಬೇಕು ಎನ್ನುವಂತಹ ನಮ್ಮ ಈ ಸದನದ ಸದಸ್ಯರ ಅಭಿಪ್ರಾಯವನ್ನು ನಾನು ತಿಳಿಸುತ್ತೇನೆ. ನಿಶ್ಚಿತವಾಗಿ ಇಂತಹ ವಿಷಯಗಳಲ್ಲಿ ನಮ್ಮ ಮುಖ್ಯಮಂತ್ರಿಗಳು ಸಹ ಯಾವುದೇ ರೀತಿಯಾದಂತಹ ಬೇರೆ ಭಾವನೆ ಅಭಿಪ್ರಾಯಗಳನ್ನು ವ್ಯಕ್ತ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಸರ್ವ ಪಕ್ಷಗಳ ಸಭೆಯನ್ನು ಕರೆದು, ಕೇಂದ್ರಕ್ಕೆ ನಿಯೋಗವನ್ನು ತೆಗೆದುಕೊಂಡು ಹೋಗುವ ಬಗ್ಗೆ ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಖಂಡಿತವಾಗಿ ಈ ಕ್ರಮ ಆಗುತ್ತದೆನ್ನುವ ವಿಶ್ವಾಸ ಇದೆ. ಇದನ್ನು ಅಧಿಕೃತವಾಗಿ ಮುಖ್ಯಮಂತ್ರಿಗಳೇ ಅದನ್ನು ಘೋಷಿಸುತ್ತಾರೆನ್ನುವ ಮಾತನ್ನು ಹೇಳುತ್ತಾ, ಈ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ. ಮತ್ತೊಮ್ಮೆ ತಾವೆಲ್ಲರೂ ಬರ ಪರಿಸ್ಥಿತಿ ಬಗ್ಗೆ ಸರ್ಕಾರಕ್ಕೆ ಮನಮುಟ್ಟುವಂತೆ ರಾಜ್ಯದ ಸ್ಥಿತಿಯನ್ನು ನಮಗೆ ಹೇಳಿದ್ದೀರಿ. ಸರ್ಕಾರದಿಂದ ನಾವು ಏನು ಮಾಡುತ್ತಿದ್ದೇವೆ ಎನ್ನುವುದನ್ನು ನಾನು ನಿಮ್ಮ ಜೊತೆಯಲ್ಲಿ ಹಂಚಿಕೊಂಡಿದ್ದೇನೆ.

**ಶ್ರೀಮತಿ ಮೋಟಮ್ಮ:–** ಈ ಹಾರಿಕೆಯ ಉತ್ತರ ಸರಿಯಲ್ಲ.

**ಶ್ರೀ ಯಂ.ಸಿ. ನಾಣಯ್ಯ:–** ನಾನು ಬಂದ ಮೇಲೆ ಮಾತನಾಡಲಿಲ್ಲ.

**ಸಭಾಪತಿಯವರು:–** ನಿವು ಮಾತನಾಡಬೇಡಿ ಎಂದು ಹೇಳಿದ್ದು ಯಾರು?

**ಶ್ರೀ ಎಸ್.ಆರ್. ಪಾಟೀಲ್:-** ತಾವು ಆಗಲೇ ಪೀಠದಲ್ಲಿ ಇರಲಿಲ್ಲ. ನನಗೆ ಅವಕಾಶ ಸಿಗಲಿಲ್ಲ.

ಸಭಾಪತಿಯವರು:- ಒಬ್ಬರು ಮಾತನಾಡುತ್ತಿದ್ದಾಗ ಮಧ್ಯೆ ಇನ್ನೊಬ್ಬರು ಬಾಯಿ ಹಾಕಬೇಡಿ ಎಂದು ಆ ರೀತಿ ಹೇಳಿರಬೇಕು. ಇಷ್ಟೇ ಹೊತ್ತು ಆಗಿದೆ. 4 ಗಂಟೆಗಳ ಕಾಲ ಚರ್ಚೆ ಆಗಿದೆ ಇನ್ನು 10 ನಿಮಿಷದಲ್ಲಿ ತಾವು ಮಾತನಾಡಿ ಮುಗಿಸಿ ಬಿಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಸರ್ಕಾರದ ಪರವಾಗಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟರು. ಪ್ರತಿ ವರ್ಷ ಹೆಚ್ಚೂ ಕಡಿಮೆ ನಮ್ಮ ಬಿಜಾಪುರ ಜಿಲ್ಲೆ ಬರಗಾಲ ಪೀಡಿತ ಜಿಲ್ಲೆ ಎಂದು ಫೇಮಸ್ ಆಗಿದೆ. ಈ ಬರಕ್ಕೆ ಖಾಯಂ ಆದ ಪರಿಹಾರವನ್ನು ಕಂಡು ಹಿಡಿಯುವುದು ಬಹಳ ಮುಖ್ಯ. ಶತ ಶತಮಾನಳಿಂದ ಬರದಿಂದ ಬಳಲಿದ ಸಂದರ್ಭದಲ್ಲಿ ಎಷ್ಟೆಷ್ಟು ಹಣ ಬಿಡುಗಡೆಯಾಗುತ್ತಿದೆ ಎಂಬುದನ್ನು ನೋಡಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳಿಗೆ ಅದು ವರವಾಗುತ್ತಿರುವಂತಾದ್ದನ್ನು ನಾವು ಕಂಡಿದ್ದೇವೆ. ಎಲ್ಲಿಯಾದರೂ ಬರ ಬಂದರೆ ಜನರಿಗೆ ಅದು ಶಾಪವಾದರೆ ಅಧಿಕಾರಿಗಳಿಗೆ ಅದು ವರವಾಗಿ ಪರಿಣಮಿಸುತ್ತದೆ. ಈ ಒಂದು ವ್ಯವಸ್ಥೆ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಒಂದು ಮಾತನ್ನು ಹೇಳಿದರು. 2400 ಬೋರ್‌ವೆಲ್‌ಗಳನ್ನು ಕೊರೆದಿದ್ದೇವೆ ಎಂದು ಹೇಳಿದರು. ಇದರಲ್ಲಿ ಎಷ್ಟು ಬೋರ್‌ವೆಲ್‌ಗಳು ಯಶಸ್ವಿಯಾಗಿದೆ ಎಂಬುದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಯಾಕೆಂದರೆ, underground water is going down day by day ಈ ಬೋರ್‌ವೆಲ್‌ಗಳಿಗಾಗಿ ಹಣವನ್ನು ವಿನಿಯೋಗ ಮಾಡುತ್ತೇವೆ. ಅದರ ಜೊತೆಗೆ ಈ ಹಣವನ್ನು ಜಲಾನಯನ ಅಭಿವೃದ್ಧಿಗಾಗಿ ಖರ್ಚು ಮಾಡಬೇಕು. Underground water recharge ಮಾಡಿದರೆ water table ಮೇಲೆ ಬರುವುದಕ್ಕೆ ಸಾಧ್ಯವಿದೆ. ಮತ್ತು ಆಗ ಬೋರ್‌ವೆಲ್‌ಗಳನ್ನು ಹಾಕಿದರೆ ಆ ಬೋರ್‌ವೆಲ್‌ನಲ್ಲಿ ನೀರು ಸಿಗುತ್ತದೆ. 1000 ಅಡಿ ಬೋರ್‌ವೆಲ್ ತೆಗೆದರೂ ನೀರು ಸಿಗದಿರುವಂತಹ ಪರಿಸ್ಥಿತಿ ಉಂಟಾಗಿದೆ. ನಿಮ್ಮ ಕೋಲಾರ ಜಿಲ್ಲೆಯಲ್ಲಿ ಯಾವ ರೀತಿ ಆಗುತ್ತಿದೆ ಅದೇ

ರೀತಿಯಲ್ಲಿ ನಮ್ಮ ಬಿಜಾಪುರ ಜಿಲ್ಲೆ, ಗುಲ್ಬರ್ಗ, ಯಾದಗಿರಿ ಎಲ್ಲ ಕಡೆಗಳಲ್ಲಿ 2400 ಬೋರ್‌ವೆಲ್ ಅಲ್ಲ 10,000 ಬೋರ್‌ವೆಲ್‌ಗಳನ್ನು ಕೊರೆದರೂ ಕೂಡ ಏನೂ ಉಪಯೋಗವಾಗುವುದಿಲ್ಲ. ಬೋರ್‌ವೆಲ್ ಕೊರೆದದ್ದು ಒಂದೇ ಖರ್ಚು. 1000 ಅಡಿ ಆಳಕ್ಕೆ ಹೋದರೂ ಕೂಡ ಒಂದು ಅಡಿ ನೀರು ಸಿಗದೇ ಇರುವ ಪರಿಸ್ಥಿತಿಯನ್ನು ಈ ರಾಜ್ಯದಲ್ಲಿ ಕಾಣುತ್ತಿದ್ದೇವೆ. ಬೋರ್‌ವೆಲ್ ಕೊರೆದದ್ದಕ್ಕೆ ಸರ್ಕಾರದ ಬೊಕ್ಕಸಕ್ಕೆ ಹಣ ಖರ್ಚಾಗುತ್ತದೆ. ಎಲ್ಲೋ ಅಲ್ಪಸ್ವಲ್ಪ ನೀರು ಬಂದರೂ ಕೂಡ 4-6 ದಿವಸಕ್ಕೆ ಅದು ಬತ್ತಿ ಹೋಗುತ್ತದೆ. ಇನ್ನು ಎಷ್ಟೋ ಕಡೆಗಳಲ್ಲಿ ಒಂದು ಇಂಚು ನೀರೂ ಕೂಡ ಬಾರದಿರುವ ಸ್ಥಿತಿ ಇದೆ. ಇಂತಹ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಇದಕ್ಕೆ ಹಣವನ್ನು ಏನು ಖರ್ಚು ಮಾಡುತ್ತೇವೆ ಆ ಹಣವನ್ನು ಜಲಾನಯನ ಅಭಿವೃದ್ಧಿಗಾಗಿ ಖರ್ಚು ಮಾಡುವ ಅವಶ್ಯಕತೆ ಹೆಚ್ಚಾಗಿ ಕಂಡು ಬರುತ್ತಿದೆ. ಓಡುವ ನೀರನ್ನು ನಿಧಾನವಾಗಿ ಓಡುವಂತೆ ಮಾಡುವುದು, ನಿಧಾನವಾಗಿ ಹೋಗುವ ನೀರನ್ನು ಅಲ್ಲೇ ನಿಲ್ಲಿಸುವ ವ್ಯವಸ್ಥೆಯನ್ನು ಮಾಡುವುದು, ನಿಂತ ನೀರನ್ನು ಅಲ್ಲೇ ಹಿಂಗುವ ವ್ಯವಸ್ಥೆಯನ್ನು ಮಾಡುವಂತಹ ಕೆಲಸವನ್ನು ಮಾಡಿದ್ದೇ ಆದರೆ ಅಂತರ್ಜಲ ವೃದ್ಧಿಯಾಗುತ್ತದೆ. Water recharge ಆಗುತ್ತದೆ. ಇವೆಲ್ಲ ಕಾರ್ಯಗಳಿಂದಾಗಿ ಅದರ ಲಾಭ ನಮಗೆ ಸಿಗುತ್ತದೆ. ಇವತ್ತು ಅಂತರ್ಜಲವೇ ನಮ್ಮಲ್ಲಿ ಇಲ್ಲದಂತಾಗಿದ್ದು ಎಲ್ಲವೂ ಬತ್ತಿ ಹೋಗಿದೆ. 176 ತಾಲ್ಲೂಕುಗಳಲ್ಲಿ 123 ತಾಲ್ಲೂಕುಗಳು ಬರದಿಂದ ತತ್ತರಿಸಿ ಹೋಗಿದೆ. ಇನ್ನು 53 ತಾವೇ ಹೇಳಿದ ಹಾಗೆ ನಾಲ್ಕು ದಶಕಗಳಲ್ಲಿ ಕಂಡರಿಯದ ಬರವನ್ನು ನಾವು ಇಂದು ಎದುರಿಸುತ್ತಿದ್ದೇವೆ. ಮಾನ್ಯ ಹಿರಿಯ ಸದಸ್ಯರಾದ ನಾಣಯ್ಯನವರು ಹೇಳಿದ ಹಾಗೆ land assessment ಅನ್ನು ನಾವು ಮನ್ನಾ ಮಾಡಿದ್ದೇವೆಂದು ಹೇಳಿಬಿಟ್ಟರಿ. ನಮ್ಮ ರೈತರು ಈ land assessmentಗೆ ಕೊಡುವಂತಹ ಮೊತ್ತ ಬಹಳ ಕಡಿಮೆ ಇರುತ್ತದೆ. ಅದರಲ್ಲಿ 10-20 ರೂಪಾಯಿ ಮನ್ನಾ ಮಾಡಿದರೆ ಅದರಿಂದಾಗಿ ನಾವು ಈ ಬರವನ್ನು ಎದುರಿಸುವುದಕ್ಕೆ ಸಾಧ್ಯವಿದೆಯೇ? ಇವತ್ತು ಈ ರಾಜ್ಯದಲ್ಲಿ ದುಡಿಯುವ ವರ್ಗಕ್ಕಿಂತ ಹೆಚ್ಚಿಗೆ ರೈತರು ಗುಳೆ ಹೋಗುವುದು ಹೆಚ್ಚಾಗಿ ಕಂಡು ಬರುತ್ತಿದೆ. ಇವತ್ತು ಬೇಕಾದ ಗ್ರಾಮಕ್ಕೆ

ಹೋಗಿ 2–4–6 ಎತ್ತುಗಳ ಒಕ್ಕಲುತನ ಮಾಡುವವರು ಏನು ಇದ್ದಾರೆ ಅವರು ಇವತ್ತು ಈ ಬರದಿಂದ ತತ್ತರಿಸಿ ಹೋಗಿದ್ದಾರೆ. ದುಡಿಯುವ ಕೈಗಳಿಗೆ ಉದ್ಯೋಗ ಕೊಡುತ್ತೇವೆಂದು ಆ ಮೂಲಕ ಗುಳೆ ಹೋಗುವುದನ್ನು ಸ್ವಲ್ಪ ಮಟ್ಟಿಗಾದರೂ ತಪ್ಪಿಸುತ್ತೇವೆಂದು ನೀವು ಹೇಳಬಹುದು. ಆದರೆ ಇಂದು ಯಾರು ಗುಳೆ ಹೋಗುತ್ತಿದ್ದಾರೆ ಎಂಬುದನ್ನು ವಿಚಾರ ಮಾಡಿ ನೋಡಿದರೆ ತಿಳಿಯುತ್ತದೆ. ಗ್ರಾಮೀಣ ಭಾಗದಲ್ಲಿ ಕೃಷಿ ಕೆಲಸಕ್ಕೆ ಕೂಲಿ ಕಾರ್ಮಿಕರು ಸಿಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದನ್ನು ಇಂದು ಯಾರೂ ಹೇಳುತ್ತಿಲ್ಲ. ನಮ್ಮ ರೈತರ ಸ್ಥಿತಿ ಇವತ್ತು ಬಹಳ ಆತಂಕಕಾರಿಯಗಿದೆ ಎಂಬುದನ್ನು ನಾನು ಇಂದು ಪ್ರಾಮಾಣಿಕವಗಿ ಹೇಳುತ್ತಿದ್ದೇನೆ. ಇವತ್ತು 4 ಎತ್ತುಗಳನ್ನು ಇಟ್ಟುಕೊಂಡ ರೈತರು ಬೇರೆಯವರ ಹೊಲಕ್ಕೆ ಕೂಲಿಗೆ ಹೋಗುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಅವರ ಕುಟುಂಬ ವರ್ಗದವರು ಬಹಳ ಸ್ವಾಭಿಮಾನದಿಂದ ಇದ್ದವರು ಬಹಳ ದುಸ್ಥಿತಿಗೆ ಬಂದಿದ್ದಾರೆ. ನೂರಾರು ಜನರಿಗೆ ಕೂಲಿ ಕೊಡುತ್ತಿದ್ದವರು ಇಂದು ನಾನೇ ಬೇರೆಯವರ ಹೊಲದಲ್ಲಿ ಕೂಲಿ ಮಾಡುವ ಪರಿಸ್ಥಿತಿ ಬಂದಿದೆ ಎಂದು ಗೋಳಾಡುತ್ತಿದ್ದಾರೆ. ಇದನ್ನು ಸಹಿಸೆ ಕೆಲವರು ಉಪವಾಸದಿಂದ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿಕೊಂಡು ಮಲಗುತ್ತಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇವತ್ತು ದುಡಿಯುವ ವರ್ಗಕ್ಕಿಂತ ಅನ್ನ ಇಕ್ಕುವ ದಣಿಗಳು ಪರಿಸ್ಥಿತಿ ಅತ್ಯಂತ ದಯನೀಯವಾದ, ಶೋಚನೀಯವಾದಂತಹ ಸ್ಥಿತಿಯಲ್ಲಿ ಇದ್ದಾರೆ. ಇದರ ಬಗ್ಗೆ ಯಾರದ್ದೂ ಚಿಂತನೆ ಇಲ್ಲ. ಕಳೆದ 4 ದಶಕಗಳಲ್ಲಿ ಆಗಲಾರದ ಬರಗಾಲ ಇವತ್ತು ಬಂದಿದೆ. ಭಾರಿ ಪ್ರಮಾಣದ ಬರಗಾಲ ಬಂದಿದೆ. ಇವರಿಗೆ land assessment exempt ಮಾಡಿದರು. ಮಾನ್ಯ ನಾಣಯ್ಯನವರು ಹೇಳಿದ ಹಾಗೆ ಇಡೀ ರಾಜ್ಯದ 123 ತಾಲ್ಲೂಕುಗಳನ್ನು ಸೇರಿಸಿದರೆ ಈ land assessment 5–10 ಲಕ್ಷ ರೂಪಾಯಿ ಆಗುತ್ತದೆ. ಇನ್ನು ದೊಡ್ಡದಾಗಿ ಹೇಳುತ್ತಿದ್ದಾರೆ. ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಎಂದು ಅಲ್ಪವಧಿ ಸಾಲವನ್ನು ಮಧ್ಯಮಾವಧಿ ಸಾಲವೆಂದು ಮಾಡಿದ್ದೇವೆ ಎಂದು ಹೇಳಿದರು. ಇದು ಕೋ ಆಪರೇಟಿವ್ ಬ್ಯಾಂಕುಗಳಿಗೆ ಅನ್ವಯಿಸುತ್ತದೆ. ಈ ರೈತರನ್ನು ಸಾಲದ ಸುಳಿಯಿಂದ ಹೊರಕ್ಕೆ ತರುವುದಕ್ಕೆ

ಸಾಧ್ಯವಾಗಿಲ್ಲ. ದೇಶಕ್ಕೆ ಅನ್ನ ಇಕ್ಕುವ ರೈತನಿಗೆ ಇಂದು ತನಗೇ ತಿನ್ನಲಿಕ್ಕೆ ಅನ್ನ, ಕುಡಿಯುವುದಕ್ಕೆ ನೀರು ಇಲ್ಲದಂತಹ ಪರಿಸ್ಥಿತಿ ಬಂದಿದೆ. ವಿಶೇಷವಾಗಿ ರೈತರಿಗೆ ಏನು ವ್ಯವಸ್ಥೆ ಇದೆ ಎಂಬುದನ್ನು ಹೇಳಿ. Land assessment expempt ಮಾಡಿದ್ದೇವೆಂದು ತಾವು ಹೇಳಬಹುದು. ಕೋ ಆಪರೇಟೀವ್ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕಿನಿಂದ ತಂದಂತಹ ಸಾಲ ಇರಬಹುದು, ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ತಂದಂತಹ ಸಾಲ ಇರಬಹುದು, ಸಹಕಾರಿ ಬ್ಯಾಂಕುಗಳಿಂದ ತಂದಂತಹ ಸಾಲ ಇರಬಹುದು. ಇವುಗಳಿಗೆ ಕೊನೇ ಪಕ್ಷ ಏನಾದರೂ ಪರಿಹಾರವನ್ನು ಕಂಡು ಹಿಡಿದಿದ್ದೀರಾ? ರೈತರಿಗೆ ಏನು ಮಾಡಿದ್ದೀರಿ? ನಮ್ಮ ಉತ್ತರ ಕರ್ನಾಟಕ್ಕೆ ಬನ್ನಿ. ಯಾವುದೇ ಒಬ್ಬ ರೈತ ಕೃಷಿಯಿಂದ ಮೇಲೆ ಬಂದವರನ್ನು ಕಂಡು ಹಿಡಿಯಿರಿ ಸಾಕು. ನೀವು ಹೇಳಿದಂತೆ ನಾನು ಸಾಯುವತನಕ ಕೇಳುತ್ತೇನೆ. ಇಂದು ರೈತರು ಬಹಳ ದಯನೀಯ ಸ್ಥಿತಿಯಲ್ಲಿ ಇದ್ದಾರೆ. ಇಂತಹ ಸಂದರ್ಭದಲ್ಲಿ ಈ ರೈತರಿಗೆ ನೀವು ಏನು ಕೊಟ್ಟೇ ಇಲ್ಲ. Land assessment expempt ಮಾಡಿದ್ದೇವೆಂದು ತಾವು ಹೇಳಬಹುದು. ಒಂದು ಕುಟುಂಬಕ್ಕೆ 20 ರೂಪಾಯಿಯ ಭೂ ಕಂದಾಯವನ್ನು ಮನ್ನಾ ಮಾಡಿದ್ದೇವೆಂದು ನೀವು ಹೇಳಿ ಬಿಟ್ಟರೆ, L it is reprisal to the farming community. As our National economics remain highly dependent on agriculture. But what about the fate of agriculture. ಇಂತಹ ಭೀಕರವಾದ, ಭಯಾನಕವಾದ ಪರಿಸ್ಥಿತಿಯಲ್ಲಿರುವ ರೈತರು ಇಂದು ಹೆಚ್ಚಾಗಿ ಗುಳೆ ಹೋಗುತ್ತಿದ್ದಾರೆ. ದೂರದ ರಾಜ್ಯಗಳಿಗೆ ದೂರದ ಊರುಗಳಿಗೆ ಹೋಗಿ ತಮ್ಮ ಮಾನ ಮರ್ಯಾದೆಯನ್ನು ಉಳಿಸಿಕೊಂಡು ಅಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದಾರೆ. ಅಲ್ಲಿ ಅವರ ಇಡೀ ಕುಟುಂಬದವರು ದುಡಿಮೆ ಮಾಡುತ್ತಿದ್ದಾರೆ. ಇದ್ದ ಊರಿನಲ್ಲಿಯೇ ಕೂಲಿ ಮಾಡಿದರೆ ಬಹಳ ಅವಮಾನವಾಗುತ್ತದೆ ಎಂದು ಹೇಳಿ ದೂರದ ಊರುಗಳಿಗೆ ಹೋಗುತ್ತಿದ್ದಾರೆ, ನಾನು ಕೃಷಿ ಕುಟುಂಬದಿಂದ ಬಂದವನಾಗಿದ್ದೇನೆ. ಅವರ ಪರಿಸ್ಥಿತಿ ನನಗೆ ಚೆನ್ನಾಗಿ ಗೊತ್ತಿದೆ. ಇವತ್ತು ಅವರಿಗೆ ಅಂತಹ ಒಂದು ಪರಿಸ್ಥಿತಿ ಬಂದಿದೆ. 47,665 ಟ್ರಾನ್ಸ್‌ಫಾರ್ಮರ್‌ಗಳ ಪೈಕಿ 46,918 ಟ್ರಾನ್ಸ್‌ಫಾರ್ಮರ್ ಅನ್ನು ಸರಬರಾಜು ಮಾಡಿದ್ದೇವೆಂದು

ಹೇಳುತ್ತಿದ್ದಾರೆ. ಈಗಲೇ ಬೇಕಾದ ಗ್ರಾಮಗಳಿಗೆ ಹೋಗೋಣ. ನಮ್ಮ ಜಿಲ್ಲೆಯಲ್ಲಿ ಕಳೆದ 15 ದಿವಸಗಳಲ್ಲಿ ಒಂದು ಟ್ರಾನ್ಸ್‌ಫಾರ್ಮರ್ ಅನ್ನು ಕೂಡ ಸರಬರಾಜು ಮಾಡಿಲ್ಲ. ಕುಡಿಯುವ ನೀರಿಗೆಂದು ಹಾಕಿರುವ ಟ್ರಾನ್ಸ್‌ಫಾರ್ಮರ್ ಸುಟ್ಟರೆ 15–20 ದಿವಸ ಸುಮಾರು ಒಂದು ತಿಂಗಳತನಕ ಹಾಕುವುದಿಲ್ಲ. ಇದರ ಜೊತೆಗೆ ವಿದ್ಯುತ್ ಅರ್ಧ ಗಂಟೆ ಇದ್ದರೆ ಹೆಚ್ಚು. ಇಂತಹ ಪರಿಸ್ಥಿತಿ ಇರುವಾಗ ರೈತರು ತಮ್ಮ ಭೂಮಿಗೆ ನೀರನ್ನು ಹಾಕುವುದಾದರೂ ಹೇಗೆ ಎಂಬುದನ್ನು ವಿಚಾರ ಮಾಡಬೇಕು. ಅದರಲ್ಲೂ ರೈತರು ತಮ್ಮ ಜಮೀನಿಗೆ ನೀರನ್ನು ಹಾಕುವ ಸಂದರ್ಭದಲ್ಲಿ ತಿಂಗಳುಗಟ್ಟಲೆ ಹಾಕುವುದಿಲ್ಲ. ಇರುವ ಅಲ್ಪ ಸ್ವಲ್ಪ ಬೆಳೆಗಳಿಗೆ ಸರಿಯಾದ ರೀತಿಯಲ್ಲಿ ನೀರನ್ನು ಹಾಕಬೇಕಾಗುತ್ತದೆ. ಇನ್ನು ಒಣಭೂಮಿಯಲ್ಲಿ ಒಂದು ಕಾಳು ಬೆಳೆಯದ ಪರಿಸ್ಥಿತಿ ಇದೆ. ಏನೋ ಇರುವ ಅಲ್ಪ ಸ್ವಲ್ಪ ನೀರಿನಲ್ಲಿ ಒಕ್ಕಲುತನ ಮಾಡಬೇಕು. ಜನ ಜಾನುವಾರುಗಳನ್ನು ಬದುಕಿಸಬೇಕು. ತಮ್ಮ ಕುಟುಂಬವರ್ಗದವರನ್ನು ಪೋಷಿಸಬೇಕು ಎಂಬ ಉದ್ದೇಶವನ್ನು ಹೊಂದಿದ್ದರೆ ಅದಕ್ಕೆ ವಿದ್ಯುತ್ ಇಲ್ಲ. ಇನ್ನು ಟ್ರಾನ್ಸ್‌ಫಾರ್ಮರ್ ಸುಟ್ಟು ಹೋದರೆ ಒಂದು ತಿಂಗಳಿನವರೆಗೆ ಕೊಡುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರೈತರು ಏನು ಮಾಡಬೇಕು ಅದನ್ನು ಹೇಳಿ. ನಾನು ಅನೇಕ ಸಲ ಕೆ.ಪಿ.ಟಿ.ಸಿ.ಎಲ್. ಅಧಿಕಾರಿಗಳಿಗೆ ಫೋನ್ ಮಾಡಿ ಬೇಗನೆ ಟ್ರಾನ್ಸ್‌ಫಾರ್ಮರ್ ಕೊಡಿ ಎಂದು ಹೇಳಿದ್ದೇನೆ. ಅದಕ್ಕೆ ಅವರು ನಮ್ಮಲ್ಲಿ ಟ್ರಾನ್ಸ್‌ಫಾರ್ಮರ್ ಇಲ್ಲ ಎಲ್ಲವೂ ಸುಟ್ಟು ಹೋಗಿದೆ ಎಂದು ಹೇಳಿದರೆ ಏನು ಮಾಡುವುದು ಎಂದು ಹೇಳುತ್ತಾರೆ. ಇಲ್ಲಿ ಬರೀ 747 ಟ್ರಾನ್ಸ್‌ಫಾರ್ಮರ್ replace ಆಗಿಲ್ಲವೆಂದು ಹೇಳಿದ್ದೀರಿ. ಈ ಅಂಕಿ ಸಂಖ್ಯೆ ನನಗೆ ನಂಬಿಕೆ ಆಗುತ್ತಿಲ್ಲ. ಬರಗಾಲವನ್ನು ನಿಭಾಯಿಸುವುದಕ್ಕೆ ಎನ್.ಆರ್.ಇ.ಜಿ. ಕೆಲಸಗಳನ್ನು ಮಾತ್ರ ನಡೆಸಿ ಅದರಿಂದ ಬರವನ್ನು ನಿಭಾಯಿಸಬೇಕೆಂದು ಇದ್ದೀರಿ. ಆದರೆ ಇದಕ್ಕಾಗಿ ವಿಶೇಷವಾಗಿ ರಾಜ್ಯದಲ್ಲಿ ಉದ್ಯೋಗವನ್ನು ಸೃಷ್ಟಿ ಮಾಡುವ ಕೆಲಸ ಎಲ್ಲಿಯೂ ಕೂಡ ಆಗಿಲ್ಲ. "The Mahatma Gandhi National Rural Employment Guarantee scheme" ಏನು ಇದೆ ಅದರ ಮುಖಾಂತರ ಈ ಕೆಲಸ ನಡೆದಿದೆ. ಕೇಂದ್ರ ಸರ್ಕಾರದ ಈ ಒಂದು ಯೋಜನೆ ನಡೆದಿದೆ. ಅದರ

ಮುಖಾಂತರ ಇದನ್ನು ಮಾಡುತ್ತಿದ್ದಾರೆ. ಅದರಲ್ಲೂ ವಿಶೇಷವಾಗಿ ಉದ್ಯೋಗವನ್ನು ಸೃಷ್ಟಿ ಮಾಡುವುದಕ್ಕೆ ಯಾವ ಒಂದು ಕಾಮಗಾರಿಯನ್ನೂ ಕೂಡ ಹಳ್ಳಿಯಲ್ಲಿ ಕೈಗೆತ್ತಿಕೊಂಡಿಲ್ಲ. ಆ ಎನ್.ಆರ್.ಈ.ಜಿ. ಒಂದು ಇಲ್ಲದಿದ್ದರೆ ಇವರು ಏನು ಮಾಡುತ್ತಿದ್ದರು.

ಕೇವಲ ಎಂ.ಆರ್.ಇ.ಜಿ.ಯಲ್ಲಿ ಮಾತ್ರ ಅಲ್ಪಸ್ವಲ್ಪ ಕೆಲಸ ನಡೆಯುತ್ತಿದೆ. ನಾನು ಪ್ರತಿನಿಧಿಸುವ ಕ್ಷೇತ್ರ ಬಿಜಾಪುರ ಜಿಲ್ಲೆಯಲ್ಲಿನ ಪರಿಸ್ಥಿತಿ ನೋಡಿದರೆ ಬಹಳ ದುಃಖ ಆಗುತ್ತದೆ. ಅಲ್ಲಿ ದುಡಿಯುವವರ ವರ್ಗ ಗುಳೆ ಹೋಗುತ್ತಿಲ್ಲ. ಅಲ್ಲಿನ ರೈತ ವರ್ಗ ಗುಳೆ ಹೋಗುತ್ತಿದೆ. ಅವರೆಲ್ಲಾ ಊರು ಬಿಟ್ಟು ಹೊರಗಡೆ ಹೋಗುವುದನ್ನು ನೋಡಿದರೆ ಹೃದಯವಿದ್ರಾವಕವಾದ ಘಟನೆಯನ್ನು ನಾನು ಕಣ್ಣಾರೆ ಕಾಣುತ್ತಿದ್ದೇನೆ. ಇದನ್ನೆಲ್ಲಾ ನೋಡಿದರೆ ಬಹಳ ದುಃಖ ಅನಿಸುತ್ತಿದೆ. ದೇಶಕ್ಕೆ ಅನ್ನ ಇಟ್ಟ ಧಣಿಗಳು ಎಂದು ಅವರ ಬಗ್ಗೆ ನಾವೆಲ್ಲ ದೊಡ್ಡ ದೊಡ್ಡ ಮಾತುಗಳನ್ನು ಹೇಳುತ್ತೇವೆ, ಆದರೆ ಅಸ್ಖಲಿತವಾದಂಥ, ಸುಂದರವಾದಂಥ, ಕಲಾತ್ಮಕವಾದಂಥ ರೈತರನ್ನು ಹಾಡಿ ಹೊಗಳಿ, ಎಲ್ಲಿಲ್ಲದ ಪದ್ಯಗಳನ್ನು ಸಂಗ್ರಹ ಮಾಡಿ ನಾವು ಮಾತನಾಡುತ್ತೇವೆ. ಆದರೆ ಆ ರೈತ ಇವೊತ್ತು ತನ್ನ ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಅಳುತ್ತ ಊರು ಬಿಟ್ಟು ಹೋಗುತ್ತಿದ್ದಾರೆ. ಆ ಸಂಗತಿಯ ಬಗ್ಗೆ ನನಗೆ ಬಹಳ ನೋವು ಅನಿಸುತ್ತಿದೆ. ಬಹಳ ನೋವಿನಿಂದ ನಾನು ಈ ಮಾತನ್ನು ಹೇಳುತ್ತಿದ್ಧೇನೆ. ಅವರ ಆರ್ಥಿಕ ದುಸ್ಥಿತಿ ನೋಡಿದರೆ ಬಹಳ ನೋವು ಅನಿಸುತ್ತಿದೆ. ಅವರು ಇವೊತ್ತು ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಊರುಬಿಟ್ಟು ಹೋಗುವ ಸ್ಥಿತಿಗೆ ತಲುಪಿದ್ದಾರೆಂದರೆ ಅದರ ಬಗ್ಗೆ ನಾವೇನು ಹೇಳಬೇಕೆಂದು ನೀವೇ ಹೇಳಿ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ ಇಂತಹ ಒಂದು ಭೀಕರವಾದಂಥ ಬರಗಾಲದ ಸ್ಥಿತಿಯಲ್ಲಿ ನಾವು ಅವರ ಭೂಕಂದಾಯ ಮನ್ನಾ ಮಾಡಿದ್ದೇವೆ, ಅವರ ಅಲ್ಪಾವಧಿ ಸಾಲ ಮಧ್ಯಮಾವಧಿ ಮಾಡಿದ್ದೇವೆ, ಮಧ್ಯಮಾವಧಿ ಸಾಲ ದೀರ್ಘಾವಧಿ ಮಾಡಿದ್ದೇವೆಂದು ಹೇಳಿದರೆ ನಿಮಗೆ ದೇವರು ಮೆಚ್ಚುವುದಿಲ್ಲ. ಇನ್ನು ಅವರ ಶಾಪ ನಿಮಗೆ ತಟ್ಟುತ್ತದೆ. ಇದಕ್ಕೆ ನಾವು ಕೂಡ

ಹೊಣೆಗಾರರಾಗುತ್ತೇವೆ. ನಾವು ಬರೀ ನಿಮ್ಮ ಮೇಲೆ ಹೇಳುವುದಿಲ್ಲ. ಈ ಬರ ಪರಿಹಾರಕ್ಕೆ ನಾವು ಕೂಡ ನಿಮ್ಮೊಂದಿಗಿದ್ದೇವೆ. ನಾವು ನಿಮ್ಮೊಂದಿಗೆ ಸೇರಿ ರೈತರಿಗೆ ಏನು ತೊಂದರೆಯಾಗಿದೆ ಆ ತೊಂದರೆಯನ್ನು ಬಗೆಹರಿಸೋಣ. ಮಾನ್ಯ ಸಭಾಪತಿಯವರೆ, ಭಾರಿ ನೋವು ಆದಂಥ ಸ್ಥಿತಿಯಲ್ಲಿ ಇವೊತ್ತು ರೈತ ಇದ್ದಾನೆ. ಅದನ್ನು ನೋಡಲಿಕ್ಕಾಗುವುದಿಲ್ಲ. ಕಣ್ಣಲ್ಲಿ ನೀರು ಬರುತ್ತವೆ. ಇದರಿಂದ ನನಗೆ ಇಲ್ಲಿ ಮಾತನಾಡಲು ಕೂಡ ಬಹಳ ತೊಂದರೆಯಾಗುತ್ತಿದೆ. ಆ ದೃಷ್ಟಿಯಿಂದ ರೈತರ ಬಗ್ಗೆ ವಿಶೇಷವಾದಂಥ ಕಾಳಜಿಯನ್ನು ಈ ಸರ್ಕಾರ ವಹಿಸಬೇಕೆಂದು ಹೇಳಬಯಸುತ್ತೇನೆ. ಕೇವಲ 5–10 ರೂಪಾಯಿ ಕಂದಾಯ ಮನ್ನಾ ಮಾಡಿದರೆ ಈ ಸರ್ಕಾರಕ್ಕೆ ಶೋಭೆ ಬರುವುದಿಲ್ಲ. ಅದರ ಶಾಪದಿಂಥ ನೀವು ಈಗ ಏನು ನಾಶ ಆಗುತ್ತಿದ್ದೀರಿ, ರಾಜಕಾರಣಕ್ಕೆ ಈ ಮಾತನ್ನು ಹೇಳುತ್ತಿಲ್ಲ, ರೈತರ ಶಾಪ ತಟ್ಟಿದರೆ ನೀವು ಏನೇನು ಉದ್ಧಾರ ಆಗುವುದಿಲ್ಲ. ಅವರ ಶಾಪ ಯಾವುದಾದರು ಋಷಿಮುನಿಗಳು ಕೊಟ್ಟಂಥ ಶಾಪಕ್ಕಿಂತ ಹೆಚ್ಚು ಸಾವಿರ ಪಟ್ಟು ದೊಡ್ಡ ಶಾಪ ಆಗುತ್ತದೆ. ಆ ರೈತರ ಶಾಪ ನಿಮಗೆ ತಟ್ಟಿದರೆ ನೀವು ಎಂದೆಂದು ಉದ್ಧಾರ ಆಗುವುದಿಲ್ಲ. ನೀವು ಮುಂದೆ ಅಲ್ಲ ಕೊನೆಯವರೆಗೂ ಉದ್ಧಾರ ಆಗದ ದುಸ್ಥಿತಿಗೆ ತಲುಪುತ್ತೀರಿ. ಶೇಕಡ 99ರಷ್ಟು ನಾವು ಕೃಷಿ ಕುಟುಂಬದಿಂದ ಬಂದಿದ್ದೇವೆ. ನಾವೆಲ್ಲರೂ ಕೃಷಿ ಕುಟುಂಬದಿಂದ ಬಂದವರಾಗಿದ್ದೇವೆ. ಆ ದೃಷ್ಟಿಯಿಂದ ರೈತರಿಗಾಗಿ ವಿಶೇಷವಾದಂಥ ಒಂದು ಪ್ಯಾಕೇಜ್ ಅನ್ನು ಮಾಡಿ ಎಂದು ಹೇಳಬಯಸುತ್ತೇನೆ. ರೈತರಿಗೆ ಬರದ ಬಿಸಿ ಬಹಳ ದೊಡ್ಡ ಪ್ರಮಾಣದಲ್ಲಿ ತಟ್ಟಿದೆ. ಅದನ್ನು ಹೇಳುವುದಕ್ಕೆ ಬಹಳ ಜನರು ಹಿಂದೆ ಮುಂದೆ ನೋಡುತ್ತಾರೆ. ನನಗೇನೂ ಇಲ್ಲ. ನಾನು ಒಬ್ಬ ರೈತನ ಮಗ ಆಗಿ ಬಹಳ ಅಭಿಮಾನದಿಂದ ಹೇಳುತ್ತೇನೆ. ರೈತನಿಗೆ ಏನು ತೊಂದರೆಯಾಗಿದೆ ಅದನ್ನು ನಿಜವಾಗಿ ಇಲ್ಲಿ ಹೇಳುವಂಥ ಸಂದರ್ಭದಲ್ಲಿ ಇವೊತ್ತು 4 ಎತ್ತಿನ ಒಕ್ಕಲುತನ ಇದ್ದವರು, 6 ಎತ್ತಿನ ಒಕ್ಕಲುತನ ಇದ್ದವರು, 8 ಎತ್ತಿನ ಒಕ್ಕಲುತನ ಇದ್ದವರು ಅವರೆಲ್ಲರೂ ಒಕ್ಕಲುತನ ಬಿಟ್ಟು ಹೆಂಡತಿ ಮಕ್ಕಳನ್ನು ಬಿಟ್ಟು ಬೇರೆ ಬೇರೆ ಜಿಲ್ಲೆಗಳಿಗೆ ಹೋಗುತ್ತಿದ್ದಾರೆ. ಸ್ವಾಭಿಮಾನದ ಬದುಕನ್ನು ಬಯಸಿದಂಥ ರೈತರು, ನೂರಾರು ಜನರಿಗೆ ಉದ್ಯೋಗ ಕೊಟ್ಟಂಥ ರೈತರು ಬೇರೆ ಜಿಲ್ಲೆಗೆ,

ಬೇರೆ ರಾಜ್ಯಕ್ಕೆ ಹೋಗಿ ದುಡಿಯುವಂಥ ದುಸ್ಥಿತಿ ಬಂದಿದೆ. ಆದ್ದರಿಂದ ಈ ವಿಷಯದ ಬಗ್ಗೆ ಸರ್ಕಾರ ದಯಮಾಡಿ ಹಗುರವಾಗಿ ನೋಡಬಾರದು. ದಯಮಾಡಿ ತಮ್ಮ ಮುಖಾಂತರ ಸರ್ಕಾರಕ್ಕೆ ಕೈ ಮುಗಿದು ಕೇಳಿಕೊಳ್ಳುವುದೇನೆಂದರೆ ಇವೊತ್ತು ಏನು ಹಳ್ಳಿಯಲ್ಲಿ ರೈತರ ಸ್ಥಿತಿ–ಗತಿಗಳಿವೆ ಅದಕ್ಕೆ ದಯಮಾಡಿ ಸರ್ಕಾರ ಸ್ಪಂದನೆ ಮಾಡಬೇಕು. ಕೇವಲ ಲ್ಯಾಂಡ್ ಅಸೆಸ್ಮೆಂಟ್ ಅನ್ನು ಎಕ್ಸಂಪ್ಟ್ ಮಾಡಿದ್ದೇನೆಂದರೆ ರೈತರ ಶಾಪ ತಟ್ಟಿದರೆ ಇವರು ಸುಟ್ಟು ಸುಡಬೂದಿಯಾಗುತ್ತಾರೆ. ಇದಕ್ಕಿಂತ ಹೆಚ್ಚಿಗೆ ಹೇಳುವುದಿಲ್ಲ. ತಾವು ಇದರ ಬಗ್ಗೆ ಯೋಚನೆ ಮಾಡಿ ಇದರ ಬಗ್ಗೆ ಪರಿಹಾರ ಕಂಡುಕೊಳ್ಳಲಿಕ್ಕೆ ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಸರ್ಕಾರದಿಂದ ನಾವು ಉತ್ತರವನ್ನು ಕೇಳಿದ್ದೇವೆ. ಅವರು ಏನು ಅಂದುಕೊಂಡಿದ್ದಾರೆಂದರೆ ನಾವು ವಿರೋಧ ಪಕ್ಷದಲ್ಲಿದ್ದೇವೆ, ಬರವನ್ನು ನೀವು ನಿರ್ವಹಿಸಲಿಲ್ಲ ಎಂದು ಹೇಳಿ ನಿಮ್ಮನ್ನು ತೀವ್ರವಾಗಿ ಟೀಕಿಸಿದ್ದೇವೆನ್ನುವ ವಿಷಯ ಇಟ್ಟುಕೊಂಡು ನೀವು ಹೇಳಿಕೆಯನ್ನು ಮಾಡಿದ್ದೀರಿ. ನಾವಷ್ಟೆ ಅಲ್ಲ ಕಳೆದ ತಿಂಗಳಿಂದ ಬೇರೆ ಬೇರೆ ಪತ್ರಿಕೆಗಳಲ್ಲಿ ಬರೆದಿದ್ದನ್ನು ತಾವು ನೋಡಿ. ಅವರು ನಮ್ಮ ಪರವಾಗಿ ಎಂದು ಬರೆದಿದ್ದು ಅಲ್ಲ. ಇಲ್ಲಿ ವಿಜಯ ಕರ್ನಾಟಕದಲ್ಲಿ 7–11–2012ಕ್ಕೆ "ಜಲಕ್ಕಾಗಿ ಮತ್ತುಷ್ಟು ಬೋರ್, ಅಕ್ರಮ ಚೋರ್" ಎಂದು ಬರೆದಿದ್ದಾರೆ. ಅದರಲ್ಲಿ ಬೋರ್ ಅನ್ನು ಕೊರೆಸದೆ ಬಾರೀ ಹಣ ದುರುಪಯೋಗ ಮಾಡಿಕೊಂಡಿರುವ ಪ್ರಕರಣಗಳು ಕೋಲಾರ ಜಿಲ್ಲೆಯಲ್ಲಿ ಪತ್ತೆಯಾಗಿವೆ. ನಾಲ್ಕು ಕೋಟಿ ಅಧಿಕ ವೆಚ್ಚದಲ್ಲಿ ಕೊರೆದಿರುವ ಸಾಕಷ್ಟು ಕೊಳವೆ ಬಾವಿಗಳು ಈಗ ಖಾಲಿ ಇವೆ. ಹಾಗೆಯೇ ಕನ್ನಡಪ್ರಭದಲ್ಲಿ 7–1–2012ಕ್ಕೆ "ಬರಗಾಲಕ್ಕೆ ಬಸವಳಿದು ಕಟುಕರಿಗೆ ಬಿಕರಿ" ಅವರ ಹತ್ತಿರ ನಾವು ಹೇಳಿಕೊಟ್ಟು ಬರೆಸಿದ್ದೇವೆಯೇ/ ಮಾನ್ಯ ಎಸ್.ಆರ್.ಪಾಟೀಲ್‌ರವರು ಕಣ್ಣೀರು ಹಾಕಿರುವುದರಲ್ಲಿ ಅರ್ಥ ಇದೆ. ಕೊಪ್ಪಳ ಜಿಲ್ಲೆಯಲ್ಲಿ ಈ ತರಹದ್ದು ಜಾಸ್ತಿಯಾಗಿದೆ ಎಂದು ಆ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಹಾಗೆಯೇ ವಿಜಯ ಕರ್ನಾಟಕದಲ್ಲಿ 13–1–2012ಕ್ಕೆ "ಗುಳೆ

ಎದ್ದ ಊರು" ಉಳಿಸುವವರು ಯಾರು? ಇದನ್ನೆಲ್ಲಾ ನೀವು ನೋಡಬೇಕು. ನಾವು ಮಾತನಾಡುವುದು ಮುಖ್ಯ ಅಲ್ಲ. ಈ ರೀತಿ ಪತ್ರಿಕೆಯಲ್ಲಿ ಒಂದು ವರದಿಯಾದಾಗ, ಟೀಕೆ–ಟಿಪ್ಪಣೆ ಬಂದಾಗ ಇಲಾಖೆಯವರು ಕೂಡ ಅದರ ಬಗ್ಗೆ ಗಮನಹರಿಸಬೇಕು. ಅದಕ್ಕೆ ಬೇಕಾದ ಹಾಗೆ ಏನು ಕಾರ್ಯಕ್ರಮ ಮಾಡಬೇಕು ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಕೊಪ್ಪಳ ಜಿಲ್ಲೆಯಲ್ಲಿನ ಹಲವರು ಬಡ ಕೃಷಿಕಾರ್ಮಿಕರು ಇವೊತ್ತು ತೀವ್ರ ಬಸವಳಿದು ಗುಳೆ ಹೋಗುತ್ತಿದ್ದಾರೆ. ಅಂದರೆ ಅವರು ಹೇಳಿದ್ದರಲ್ಲಿ ಸತ್ಯ ಇದೆ ಎಂದು ಅರ್ಥ ಆಯಿತಾ. ಆಮೇಲೆ ಕನ್ನಡ ಪ್ರಭದಲ್ಲಿ 16–1–2012ರಲ್ಲಿ ಏನು ಹೇಳುತ್ತಾರೆಂದರೆ "ಸಂಕ್ರಾಂತಿ ಹಾಗೂ ಬರ" ಅಂದರೆ ಯಾವ ರೀತಿಯಲ್ಲಿ ತೀವ್ರತೆ ತೀವ್ರವಾಗಿದೆ ಎಂದು ಹೇಳುತ್ತಾರೆ. ಹಾಗೆಯೇ 12–1–2011ರಂದು ಹಿಂದೆನೆ ವಿದ್ಯುತ್ ಬರ, ಕೃಷಿಗೆ ಬರೆ ಎಂದು ಬರೆದಿದ್ದಾರೆ. ವಾಟರ್ ಸಪ್ಲೈ ಸ್ಕೀಮ್‌ಗೆ ವಿದ್ಯುತ್ ಇದ್ದರೆ ಅದು ಆನ್ ಆಗುತ್ತದೆ. ನಮಗೆ ಬರೀ ಬೆಳಕಿನ ಪ್ರಶ್ನೆ ಇಲ್ಲ. ಇಲ್ಲಿ ನೀರು ಬರಲಿಕ್ಕೂ ವಿದ್ಯುತ್ ಬೇಕಲ್ಲ. ಅದಕ್ಕೆ ಸರಿಯಾಗಿ ಅವರು ಕ್ರಮ ತೆಗೆದುಕೊಳ್ಳದಿದ್ದರೆ ಹೇಗೆ? ಅವರು ಅಷ್ಟೊಂದು ಟ್ರಾನ್ಸ್‌ಫರ್ಮರ್ ಹಾಕಿದ್ದೇವೆಂದು ಹೇಳುತ್ತಾರೆ. ಆದರೆ ಆ ಟ್ರಾನ್ಸ್‌ಫರ್ಮರ್ ಕೆಲಸ ಮಾಡಬೇಕಲ್ಲ. ಅದಕ್ಕೆ ಸರಿಯಾಗಿ ಪವರ್ ಸಪ್ಲೈ ಆದರೆ ಮಾತ್ರ ಅದು ವರ್ಕ್ ಆಗುತ್ತದೆ ಇಲ್ಲದಿದ್ದರೆ ವರ್ಕ್ ಆಗುವುದಿಲ್ಲ. ಅಂತಹ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಈಗ ಏನು ಮಾಡಿದ್ದೀರಿ? ನೀವು ಹಾರಿಕೆಯ ಉತ್ತರವನ್ನು ಕೊಟ್ಟರೆ ನಮಗೆ ಖಂಡಿತ ಅದರ ಬಗ್ಗೆ ಒಪ್ಪಿಗೆ ಇಲ್ಲ. ನಮ್ಮ ಮನಸ್ಸಿನಲ್ಲಿ ಸರ್ಕಾರದ ಬಗ್ಗೆ ಏನಿದೆ ಅಂದರೆ ಈ ಬರವನ್ನು ಅವರು ತೀವ್ರವಾಗಿ ತೆಗೆದುಕೊಂಡಿಲ್ಲ. ಈ ಬರ ನಿರ್ವಹಣೆಯ ಬಗ್ಗೆ ಅವರಿಗೆ ಕಾಳಜಿ ಇಲ್ಲ. ಇನ್ನು ಎರಡನೆಯದು ಇವರಿಗೆ ಈಗೋ ಏಕೆ? ಪೇಪರ್‌ನಲ್ಲಿ ಇಷ್ಟೆಲ್ಲಾ ಬರವಣಿಗೆಗಳು ಬಂದಿವೆ, ನಾನು ಹಾಗೂ ವಿರೋಧ ಪಕ್ಷದವರಾದ ನಾವುಗಳು ಹಿಂದಿನ ಅಧೀವೇಶನದಲ್ಲಿ ಕೂಡ ಬರಗಾಲದ ಬಗ್ಗೆ ಮಾತನಾಡಿದ್ದೇವೆ. ಅದಕ್ಕೆ ಉತ್ತರ ಹೇಳಿದ್ದಾರೆ. ನೀವು ನಮ್ಮನ್ನೊಳಗೊಂಡ ಒಂದು ಡೆಲಿಗೇಶನ್ ಅನ್ನು ದೆಹಲಿಗೆ ತೆಗೆದುಕೊಂಡು ಹೋದರೆ ಏನು ಕಳೆದುಕೊಳ್ಳುತ್ತೀರಿ? ನಾವು ನೀವು ಜನರಿಗೋಸ್ಕರ ತಾನೆ ಇರುವುದು. ಇನ್ನು

ನಿಮ್ಮ ದೆಹಲಿಯಲ್ಲಿರುವ ವಿಶೇಷ ಪ್ರತಿನಿಧಿ ಏನು ಮಾಡುತ್ತಾರೆ? ಬರೀ ಟಿ.ವಿ.ಯಲ್ಲಿ ಹೇಳಿಕೆ ಕೊಟ್ಟುಬಿಡುವುದು, ರಾಜಕೀಯವಗಷ್ಟೇ ವ್ಯವಹರಿಸುವುದೇ? ಇದರ ಬಗ್ಗೆ ಎಲ್ಲಾ ಅವರು ಏನು ಮಾಡುತ್ತಿದ್ದಾರೆ? ಅವರು ಇಲಾಖೆಗೆ ಬರೆದಿದ್ದೇವೆಂದು ಹೇಳಿದ್ದಾರಲ್ಲ ಅದರ ಬಗ್ಗೆ ಆ ವಿಶೇಷ ಪ್ರತಿನಿಧಿಯವರು ಏಕೆ ಪರ್ಸ್ಯೂ ಮಾಡಲಿಲ್ಲ? ಅದು ಅಲ್ಲದೆ ನಿಮ್ಮವರೇ ಆದ ಒಬ್ಬ ಅಧಿಕಾರಿಯಾದ ಶ್ರೀ ಬಿ.ಎನ್.ನಾಗೇಶ್‌ರವರಿದ್ದಾರೆ. ಅವರು ಕೂಡ ಒಳ್ಳೆಯ ಅಧಿಕರಿಗಳು. ಕೊನೆಯ ಪಕ್ಷ ಅವರು ಅವರಿಗೆ ಒತ್ತಾಯ ಹಾಕಿ ಕೆಲಸಗಳನ್ನು ಮಾಡಿಸಬೇಕು. ನೀವು ಯಾವಾಗ ಡೆಲಿಗೇಶನ್ ಕರೆದುಕೊಂಡು ಹೋಗುತ್ತೀರಿ ಹೇಳಿ? ಇನ್ನು ಶ್ರೀಮತಿ ಶೋಭಾ ಕರಂದ್ಲಾಜೆಯವರು ವಿದ್ಯುತ್ ಕ್ಷಾಮದ ಬಗ್ಗೆ ಮಾತನಾಡಿದಾಗ ಶ್ರೀಮತಿ ಮೋಟಮ್ಮನವರನ್ನು ಜೊತೆಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿದರು. ಆದರೆ ಒಬ್ಬೊಬ್ಬರೆ ದೆಹಲಿಗೆ ಹೋಗಿ ವಿಚಾರವನ್ನು ಸರಿಪಡಿಸಲಿಕ್ಕೆ ಹೋಗಿ ಬರುತ್ತಿದ್ದಾರೆ. ಆದರೆ ಯಾವ ವಿಚಾರ ಸರಿಪಡಿಸಲಿಕ್ಕೆ ಹೋಗುತ್ತಿದ್ದಾರೆಂದು ನಮಗೆ ಚೆನ್ನಾಗಿ ಗೊತ್ತು. ಆದ್ದರಿಂದ ನೀವು ಬರದ ಬಗ್ಗೆ ಸೀರಿಯಸ್ ಆಗಿದ್ದರೆ, ನಿಮಗೆ ಬರದ ಬಗ್ಗೆ ಕಾಳಜಿ ಇದ್ದರೆ ನೀವು ಡೆಲಿಗೇಶನ್ ತೆಗೆದುಕೊಂಡು ಹೋಗಿ. ಒಟ್ಟಾರೆ ನೀವು ಏನು ಇವೊತ್ತು ಉತ್ತರ ಹೇಳಿದ್ದೀರಿ ಅದರ ಬಗ್ಗೆ ನಮಗೆ ಸಮಾಧಾನ ಇಲ್ಲ. ನಿಜವಾಗಲೂ ಇದರ ಬಗ್ಗೆ ನನಗೆ ಆತಂಕ ಇದೆ. ಹಾಗಾಗಿ ಈ ಉತ್ತರವನ್ನು ಧಿಕ್ಕರಿಸಿ ನಾವು ವಾಕೌಟ್ ಮಾಡುತ್ತಿದ್ದೇವೆ.

(ಸದರಿ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದಿಂದ ಸಭಾತ್ಯಾಗ ಮಾಡಿದರು)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ನಾನು ಆಗಲೇ ಮಾತನಾಡುವಾಗ ಒಂದು ವಿಚಾರವನ್ನು ಹೇಳಿದ್ದೇನೆ. ನಲವತ್ತು ವರ್ಷದಲ್ಲಿ ಕಂಡಿಲ್ಲದೆ ಇರುವಂಥ ಬರಗಾಲ ನಿರ್ಮಾಣ ಆಗಿದೆ. ಅದಕ್ಕೆ ಕಾರಣ ಮಳೆಯ ಕೊರತೆಯಾಗಿದೆ. ನಾನು ಈ ಸಂದರ್ಭದಲ್ಲಿ ಒಂದೇ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಬರದ ತೀವ್ರತೆ

ಇನ್ನು ಎರಡು ತಿಂಗಳುಗಳು ಜಾಸ್ತಿಯಾಗುವುದಿದೆ ಎನ್ನುವ ಅರಿವು ನಮ್ಮ ಸರ್ಕಾರಕ್ಕೆ ಇದೆ. ಆದಕಾರಣ ನಾನು ಎಲ್ಲರ ಸಹಕಾರವನ್ನು ಕೇಳಿದ್ದೇನೆ. ಆದರೆ ಇಂತಹ ವಿಷಯಗಳಲ್ಲಿ ಈ ಪೊಲಿಟಿಕಲ್ ಮೈಲೇಜ್ ತೆಗೆದುಕೊಳ್ಳುವಂಥ ಪ್ರಯತ್ನಗಳು ಯಾರಿಂದಲೂ ಆಗುವುದು ಸರಿಯಲ್ಲ. ವಿರೋಧ ಪಕ್ಷದವರು ಸಹ ಅಷ್ಟೇ ಗೌರವಯುತವಾಗಿ ತಮ್ಮ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ನಾವು ಅದನ್ನು ಸ್ವೀಕರಿಸುತ್ತೇವೆ. ಇಂತಹ ಸಂದರ್ಭದಲ್ಲಿ ನಮಗೆ ಕೇಂದ್ರದಿಂದ ಯಾವ ರೀತಿ ಸಹಾಯ ಬರಬೇಕು. ಅದನ್ನು ಬರುವುದಕ್ಕೆ ಅವರು ಕೂಡ ಅವರದೇ ಆದಂಥ ಪ್ರಯತ್ನವನ್ನು ಮಾಡಬೇಕಾದಂಥ ಅಗತ್ಯತೆಯೂ ಇರುತ್ತದೆ. ನಾನು ಮಾನ್ಯ ನಾಣಯ್ಯನವರು ಹಾಗೂ ವಿರೋಧ ಪಕ್ಷದ ನಾಯಕಿಯಾದಂಥ ಶ್ರೀಮತಿ ಮೋಟಮ್ಮನವರು ಹೇಳಿರುವಂಥ ವಿಚಾರಗಳನ್ನು ಒಪ್ಪುತ್ತೇನೆ. ಅದರ ಬಗ್ಗೆ ನಾನು ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇನೆ. ಮುಖ್ಯಮಂತ್ರಿಗಳು ನಾಳೆ ನಾಡಿದ್ದರಲ್ಲಿ ಈ ಸರ್ವಪಕ್ಷಗಳ ಸಭೆ ಮಾಡಿ ಕೇಂದ್ರಕ್ಕೆ ನಿಯೋಗ ತೆಗೆದುಕೊಂಡು ಹೋಗುವುದಕ್ಕೆ ಸರ್ಕಾರದ ಸ್ಪಷ್ಟ ನಿರ್ಧಾರವನ್ನು ಅವರು ಹೇಳುತ್ತಾರೆ. ಇದರ ಅಗತ್ಯತೆ ಇದೆ ಎಂದು ನನ್ನ ಮತ್ತು ಇಲ್ಲಿ ಚರ್ಚೆ ಮಾಡಿರುವಂಥ ಸದಸ್ಯರ ಅಭಿಪ್ರಾಯ ಇದೆ. ನಿಮ್ಮೆಲ್ಲರ ಅಭಿಪ್ರಾಯ, ನಮ್ಮೆಲ್ಲರ ಅಭಿಪ್ರಾಯ ಸಹಜವಗಿರತಕ್ಕಂಥದ್ದು ಆಗುತ್ತದೆ. ಹಾಗಾಗಿ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಆ ಪ್ರಯತ್ನ ಮಾಡೋಣ. ನಾವೆಲ್ಲರೂ ಸಹ ಇದರೊಳಗೆ ಪಕ್ಷಾತೀತವಾಗಿ ರಾಜ್ಯದ ಜನರನ್ನು ಒಗ್ಗೂಡಿಸಿಕೊಂಡು ವಿಶ್ವಾಸದಿಂದ ಈ ಪರಿಸ್ಥಿತಿ ಎದುರಿಸುವಂಥ ವಾತಾವರಣ ನಿರ್ಮಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಮತ್ತೊಮ್ಮೆ ಮುಂದಿನ ದಿನಗಳಲ್ಲಿ ಉದ್ಭವಿಸಬಹುದಾದಂತಹ ಸಂದರ್ಭಕ್ಕೆ ನಾವು ಸರ್ಕಾರ ಯಾವುದೇ ಕಾರಣದಿಂದಲೂ ಹಣದ ಕೊರತೆಯಾಗದಂತೆ ನೋಡಿಕೊಳ್ಳುತ್ತದೆ. ಅಧಿಕಾರಿಗಳು, ಮಂತ್ರಿಗಳು, ಶಾಸಕರುಗಳು ಯಾವ್ಯಾವ ರೀತಿಯಲ್ಲಿ ಸಹಕಾರವನ್ನು ಬಯಸುತ್ತಾರೆಯೋ ಅದೆಲ್ಲವನ್ನೂ ಕೂಡ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಆ ರೀತಿಯ ಪ್ರಯತ್ನವನ್ನು ಮಾಡುತ್ತೇವೆಂದು ತಮ್ಮ ಮುಖಾಂತರ ಹೇಳುತ್ತಿದ್ದೇನೆ.

**ಸಭಾಪತಿಯವರು:–** ಈಗ ನಿಯಮ 68ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆಯನ್ನು ರಾಜ್ಯ ಬರ ಪೀಡಿತಗಳ ಪ್ರದೇಶಗಳ ಬಗ್ಗೆ ಚರ್ಚೆ ಇಲ್ಲಿಗೆ ಮುಕ್ತಾಯವಾಗಿದೆ. ಒಂದೆರಡು ಪ್ರಕಟಣೆಗಳಿವೆ.

**6. ಪ್ರಕಟಣೆ**

(i) ವಿಧಾನಸಭೆಯ ಅಧ್ಯಕ್ಷರಿಂದ ಬಂದ ಸಂದೇಶ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104 ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 27.03.2012 ರಂದು ಕರ್ನಾಟಕ ಧನ ವಿನಿಯೋಗ ವಿಧೇಯಕ 2012 ಅನ್ನು ಅಂಗೀಕರಿಸಿತ್ತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ.

(ii) ಸದನ ಕಾರ್ಯಕಲಾಪ ಸಲಹಾ ಸಮಿತಿಯ ತೀರ್ಮಾನಗಳು

**ಸಭಾಪತಿಯವರು:–**ಹಾಗೆ ಇವತ್ತು ಮಧ್ಯಾಹ್ನ ಕಾರ್ಯಕಲಾಪಗಳ ಸಲಹಾ ಸಮಿತಿ ಸೇರಿದ್ದೇವು. ಅದರ ಒಂದು ಸಣ್ಣ ವರದಿಯನ್ನು ನಾನು ಈ ಸಭೆಯ ಗಮನಕ್ಕೆ ತುರುವುದಕ್ಕೆ ಇಷ್ಟಪಡುತ್ತಿದ್ದೇನೆ. ಗಮನ ಮತ್ತು ಸದನದ ಒಪ್ಪಿಗೆಯನ್ನು ಕೂಡ ಬಯಸುತ್ತಿದ್ದೇನೆ. ಈ ದಿನ ದಿನಾಂಕ 27.03.2012 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಸದನದ ಕಾರ್ಯಕಲಾಪಗಳನ್ನು ಈ ಕೆಳಕಂಡಂತೆ ನಡೆಸಲು ತೀರ್ಮಾನಿಸಿದೆ.

ದಿನಾಂಕ 28.03.2012 ರಿಂದ ದಿನಾಂಕ 30.03.2012 ರ ವರೆಗೆ ಪ್ರತಿದಿನ ಬೆಳಿಗ್ಗೆ 10.00 ಗಂಟೆಗೆ ಸಭೆ ಸೇರುವುದು.

ದಿನಾಂಕ 28.03.2012 ರಂದು ಪ್ರಶ್ನೋತ್ತರ ಹಾಗೂ ಆಯವ್ಯಯದ ಮೇಲೆ ಚರ್ಚೆ.

ದಿನಾಂಕ 29.03.2012 ರಂದು ಪ್ರಶ್ನೋತ್ತರ ಹಾಗೂ ಆಯವ್ಯಯದ ಮೇಲೆ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.

ದಿನಾಂಕ 30.03.2012 ರಂದು ಪ್ರಶ್ನೋತ್ತರ, ಶೂನ್ಯ ವೇಳೆ, ಗಮನ ಸೆಳೆಯುವ ಸೂಚನೆ ಹಾಗೂ ನಿಯಮ 330ರ ಮೇರೆಗೆ ಚರ್ಚೆ.

ಕಾರ್ಯಕಲಾಪಗಳ ಸಲಹಾ ಸಮಿತಿಯ ಈ ವರದಿಗೆ ಸದನದ ಅಂಗೀಕಾರ ಇದೆ ಎಂದು ನಾನು ಭಾವಿಸುತ್ತೇನೆ.

**ಸಭಾಪತಿಯವರು:-** ಒಂದು ವಿಷಯದ ಬಗ್ಗೆ ಚರ್ಚೆ ಬಂದಿತ್ತು. ವಿರೋಧ ಪಕ್ಷದ ನಾಯಕರು ಮತ್ತು ಉಳಿದ ಎರಡು ಮೂರು ಜನ ಸದಸ್ಯರು ಸಹಿ ಮಾಡಿರತಕ್ಕಂತಹ ನಿಯಮ 59ರ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಲಾಗಿತ್ತು. ಅದು ಸದನ ಸಮಿತಿಯಲ್ಲಿ ಚರ್ಚೆಯಾದ ಮೇಲೆ ಇಲ್ಲಿ ಪ್ರಸ್ತಾಪ ಮಾಡೋಣವೆಂದು ನಾನು ಹೇಳಿದ್ದೆ ಅದಕ್ಕೆ ತಾವುಗಳೆಲ್ಲರೂ ಗೌರವಿಸಿದ್ದೀರಿ. ಆ ವಿಷಯದ ಬಗ್ಗೆ ವಿರೋಧ ಪಕ್ಷ ನಾಯಕರು ಅಂದರೆ ಸದನ ಸಮಿತಿಯಲ್ಲಿ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಿದರೆ ಒಳ್ಳೆಯದು.

## 7. ನಿಲುವಳಿ ಸೂಚನೆಗೆ ಅನುಮತಿ ಕೋರಿ ಪ್ರಸ್ತಾವ

ಕಾವೇರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ ತಮಿಳುನಾಡು ಸರ್ಕಾರ ಸರ್ವೋಚ್ಛ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿರುವ ಕುರಿತು.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಈ ಕಾವೇರಿ ಕಣಿವೆಯ ಭಾಗದಲ್ಲಿರುವಂತಹ ರೈತರು ಬೇಸಿಗೆ ಬೆಳೆಯನ್ನು ಬೆಳೆಯಬಾರದು ಅದರಿಂದ ನಮ್ಮ ತಮಿಳು ಪ್ರದೇಶದ ರೈತರಿಗೆ ತೊಂದರೆಯಾಗುತ್ತದೆ. ನಮ್ಮ ನಾಡಿನಲ್ಲಯೇ ಹುಟ್ಟಿ ಬೆಳೆದು ತಮಿಳು ನಾಡಿನ ಮುಖ್ಯಮಂತ್ರಿಯಾಗಿರುವ ಸಹೋದರಿಯಾದವರು ಸುಪ್ರೀಂ ಕೋರ್ಟ್‌ಗೆ ಒಂದು ಮಧ್ಯಂತರ ಅರ್ಜಿಯನ್ನು ಹಾಕಿರುವುದು ನಿಜವಾಗಿಯೂ ನಮ್ಮ ಕರ್ನಾಟಕ ಜನರ ದುರದೃಷ್ಟಕರವೆಂದು ಹೇಳಬೇಕು.

ಏಕೆಂದರೆ, ನಮ್ಮ ರಾಜ್ಯದಲ್ಲಿ ಬರಗಾಲ ಇದೆ, ಈಗತಾನೆ ಬರಗಾಲದ ಬಗ್ಗೆ ಚರ್ಚೆ ಮಾಡಿದ್ದೇವೆ. ಜನರು ಸಂಕಷ್ಟದಲ್ಲಿದ್ದಾರೆ ಜನಗಳಿಗೆ ಮತ್ತು ಜಾನುವಾರುಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಇಂತಹ ಸಂದರ್ಭದಲ್ಲಿ ಸಣ್ಣ ಕ್ಯಾತೆಯನ್ನು ತೆಗೆದ ರೀತಿಯಲ್ಲಿ ಮಾಡಿ, ಮಧ್ಯಂತರ ಅರ್ಜಿಯನ್ನು ಹಾಕಿಕೊಂಡು ಕಾವೇರಿ ಕಣಿವೆಯಲ್ಲಿರುವಂತಹ ರೈತರು ಬೇಸಿಗೆ ಬೆಳೆಯನ್ನು ಬೆಳೆಯದೇ ತಮಿಳು ನಾಡಿಗೆ ನೀರು ಕೊಡಿ ಎಂದು ಹೇಳಿರುವುದು ದುರದೃಷ್ಟಕರ ಎನ್ನುವುದನ್ನು ಹೇಳುತ್ತಿದ್ದೇನೆ. ಈಗಾಗಲೇ ಕಾವೇರಿ ನದಿ ನೀರು ನ್ಯಾಯಾಧೀಕರಣದ ಆದೇಶದ ಪ್ರಕಾರ ಯಾರ್‍ಯಾರಿಗೆ ಎಷ್ಟೆಷ್ಟು ನೀರು ಹಂಚಿಕೆಯಾಗಬೇಕು ಮತ್ತು ಕರ್ನಾಟಕ ರಾಜ್ಯದಲ್ಲಿ ತಮಿಳು ನಾಡಿಗೆ ಎಷ್ಟು ನೀರು ಬಿಡುಗಡೆ ಮಾಡಬೇಕೆಂದು ಏನು ಒಂದು yardstick ಕೊಟ್ಟಿದ್ದಾರೆ, ಅದರ ಪ್ರಕಾರವಾಗಿ ಇದುವರೆಗೆ ನಡೆದುಕೊಂಡಿದ್ದೇವೆ. ಕೇರಳ ರಾಜ್ಯಕ್ಕೆ 30 ಟಿಎಂಸಿ ನೀರು, ಕರ್ನಾಟಕ ರಾಜ್ಯಕ್ಕೆ 270 ಟಿಎಂಸಿ ನೀರು, ತಮಿಳುನಾಡಿಗೆ 419 ಟಿಎಂಸಿ ನೀರು, ಪಾಂಡಿಚೇರಿ ರಾಜ್ಯಕ್ಕೆ 7 ಟಿಎಂಸಿ ನೀರು, ಪರಿಸರ ಸಂರಕ್ಷಣೆಗೆ 10 ಟಿಎಂಸಿ, ಸಮುದ್ರಕ್ಕೆ ಪೋಲು ಆಗುವಂಥದ್ದು 4 ಟಿಎಂಸಿ. ಇದರ ಬಗ್ಗೆ ಇಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಹಾಗೆಯೇ ನಮ್ಮ ರಾಜ್ಯದಿಂದ ಈಗಾಗಲೇ ನ್ಯಾಯಾಧೀಕರಣದ ತೀರ್ಪಿನಂತೆ ನಾವು 192 ಟಿಎಂಸಿ ನೀರನ್ನು ಕೆಳಕಂಡಂತೆ ಹರಿಸಬೇಕೆಂದು ನ್ಯಾಯಾಧೀಕರಣ ಆದೇಶ ಕೊಟ್ಟಿದೆ. ಅದೇ ರೀತಿಯಲ್ಲಿ ಜೂನ್ ತಿಂಗಳಿನಲ್ಲಿ 10 ಟಿಎಂಸಿ, ಜುಲೈ ತಿಂಗಳಿನಲ್ಲಿ 34 ಟಿಎಂಸಿ, ಆಗಸ್ಟ್ ತಿಂಗಳಿನಲ್ಲಿ 50 ಟಿಎಂಸಿ, ಸೆಪ್ಟಂಬರ್ ತಿಂಗಳಿನಲ್ಲಿ 40 ಟಿಎಂಸಿ, ಅಕ್ಟೋಬರ್ ತಿಂಗಳಿನಲ್ಲಿ 22 ಟಿಎಂಸಿ, ನವೆಂಬರ್ ತಿಂಗಳಿನಲ್ಲಿ 15 ಟಿಎಂಸಿ, ಡಿಸೆಂಬರ್ ತಿಂಗಳಿನಲ್ಲಿ 8 ಟಿಎಂಸಿ, ಜನವರಿ ತಿಂಗಳಿನಲ್ಲಿ ಟಿಎಂಸಿ, ಫೆಬ್ರವರಿ ತಿಂಗಳಿನಲ್ಲಿ 2.5 ಟಿಎಂಸಿ, ಮಾರ್ಚ್ ತಿಂಗಳಿನಲ್ಲಿ 2.5 ಟಿಎಂಸಿ, ಏಪ್ರಿಲ್ ತಿಂಗಳಿನಲ್ಲಿ 2.5 ಟಿಎಂಸಿ, ಮೇ ತಿಂಗಳಿನಲ್ಲಿ 2.5 ಟಿಎಂಸಿ ನೀರನ್ನು ಏನು ಬಡುಗಡೆ ಮಾಡಬೇಕಗಿತ್ತು ಅದೇ ರೀತಿಯಲ್ಲಿ ಬಿಡುಗಡೆ ಮಾಡಿಕೊಂಡು ಬರಲಾಗಿದೆ. ತಮಿಳುನಾಡಿಗೆ ನಾವು ಯಾವುದೇ ರೀತಿಯಲ್ಲಿ ಅವರಿಗೆ ನಾವು ಅನ್ಯಾಯವನ್ನು ಮಾಡಿಲ್ಲ. ನಾವೆಲ್ಲಾ ಒಂದೇ ದೇಶಕ್ಕೆ ಸೇರಿದವರು ಅಣ್ಣ ತಮ್ಮಂದಿರ ಹಾಗೆ ಅವರು ನಮ್ಮ ನೆರೆ

ರಾಜ್ಯದವರಾಗಿರುವುದರಿಂದ ಹೊಂದಾಣಿಕೆಯನ್ನು ಮಾಡಿಕೊಂಡು ಹೋಗಬೇಕು. ಆದರೆ ನಾವು ಸಂಕಷ್ಟದಲ್ಲಿರುವಂತಹ ನೀರು ಕೊಡು ಎಂದು ಹೇಳಿ ಏನು ಸುಪ್ರೀಂ ಕೋರ್ಟ್‌ನಲ್ಲಿ ಮಧ್ಯಂತರ ಅರ್ಜಿಯನ್ನು ಹಾಕಿದ್ದಾರೆ ಅದು ಸರಿಯಾದುದ್ದಲ್ಲ. ದಯಮಾಡಿ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಈ ಭಾಗದ ನಮ್ಮ ಸಹೋದರಿಯಾದ ತಮಿಳುನಾಡಿನ ಮುಖ್ಯಮಂತ್ರಿಯವರನ್ನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದಕ್ಕೆ ಸರ್ಕಾರ ಕೂಡ ಯಾವುದೇ ಕಾರಣಕ್ಕೆ ಯೀಲ್ಡ್ ಆಗಬಾರದು. ನಮ್ಮ ಜನರ ಕಷ್ಟಕ್ಕೆ ನೀವು ಹೆಚ್ಚು ಹೊತ್ತು ಕೊಡಬೇಕು. ನಮ್ಮ ರಾಜ್ಯದ ರೈತರ ಕಷ್ಟಕ್ಕೆ ಹೆಚ್ಚು ಹೊತ್ತು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಯಂ.ಸಿ. ನಾಣಯ್ಯ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇದೇನು ಬಹಳ ವಿಸ್ತಾರವಾಗಿ ಮಾಡಬೇಕಾದಂತಹ ಅವಶ್ಯಕತೆ ಇಲ್ಲ. ಎರಡು ವಿಚಾರಗಳಿದೆ. ಒಂದು ತಮಿಳುನಾಡಿನವರು ಸುಪ್ರೀಂ ಕೋರ್ಟ್‌ನಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿದ್ದಾರೆ. ಅವರಿಗೆ ಬಿಡುಗಡೆ ಮಾಡಬೇಕಾದಂತಹ ನೀರಿನ ಪ್ರಮಾಣ ಯಾವುದಿದೆ ಆ ನೀರಿನ ಪ್ರಮಾಣವನ್ನು ನಮಗೆ ತಿಂಗಳುವಾರು ಬಿಡುಗಡೆ ಮಾಡುತ್ತಿರತಕ್ಕಂಥದ್ದರಲ್ಲಿ ಕೊರತೆ ಇರುವುದರಿಂದ ಆ ಕೊರತೆಯನ್ನು ತುಂಬಬೇಕಾಗುತ್ತದೆ. ಬಿಡುಗಡೆ ಮಾಡಬೇಕಾಗಿರುವಂತಹ ನೀರನ್ನು ಕೊಡಬೇಕೆಂದು ಒಂದು ನ್ಯಾಯಾಧೀಕರಣವರು ಒಂದು ತೀರ್ಪನ್ನು ಕೊಟ್ಟು ಬಿಟ್ಟಿದ್ದಾರೆ. ಆ ತೀರ್ಪನ್ನು ಅದನ್ನು ಇನ್ನು ನೋಟಿಫೈ ಮಾಡುವುದಕ್ಕೆ ಸಮಯ ಇದೆ. ನೋಟಿಫೈ ಆಗದೇ ಇರುವುದರಿಂದ ಬಹುಶಃ ಈ ಹಿಂದೆ ಕೊಟ್ಟಿರುವಂತಹ ಮಧ್ಯಂತರ ತೀರ್ಪು ಏನಿದೆ 205 ಟಿಎಂಸಿ ನೀರು ಮತ್ತು ಈಗ ಕೊಟ್ಟಿರುವಂತಹ ತೀರ್ಪು ಈ ಹಿನ್ನೆಲೆಯಲ್ಲಿ ಅವರು ಸುಪ್ರೀಂ ಕೋರ್ಟ್‌ಗೆ ಹೋಗಿರುವಂಥದ್ದು. ಅವರು ಕಾನೂನು ಅಡಿಯಲ್ಲಿ ಹೋಗಬೇಕಾಗಿರುವುದು ಇದೆ. ಅದನ್ನು ಅವರು ಮಾಡಿದ್ದಾರೆ. ನಾವು ಏನು ಮಾಡಬೇಕೆಂದು ಇರುವುದು. ನಾವು ಸುಪ್ರೀಂ ಕೋರ್ಟ್‌ನಲ್ಲಿ ನಮ್ಮ ವಾದವನ್ನು ಮಂಡಿಸಬೇಕಾಗಿರುವಂಥದ್ದು. ಈ ಕೆಲಸವನ್ನು ಮಾಡುವುದಕ್ಕೆ ಹಿರಿಯ

ವಕೀಲರಾಗಿರತಕ್ಕಂತಹ ಶ್ರೀ ನಾರೀಮನ್‌ರವರು ಬಹಳ ವರ್ಷಗಳಿಂದ ಮಾಡುತ್ತಾ ಬಂದಿದ್ದಾರೆ. ಬಹುಶಃ ಆ ಕೆಲಸವನ್ನು ಅವರು ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರ್ವ ಪಕ್ಷಗಳ ಸಭೆಯೊಂದನ್ನು ಕರೆಯುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಅಧಿವೇಶನ ಮುಗಿಯುವುದರೊಳಗೆ ದಯವಿಟ್ಟು ಆ ಒಂದು ಸರ್ವ ಪಕ್ಷಗಳ ಸಭೆಯನ್ನು ಕರೆಯಬೇಕು. ಅದರ ಜೊತೆಯಲ್ಲಿ ನಾನು ಬರಗಾಲದ ಬಗ್ಗೆ ಮಾತನಾಡುವಾಗ ಒಂದು ಸಲಹೆಯನ್ನೂ ಕೂಡ ಕೊಟ್ಟಿದ್ದೇನೆ. ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗ ಹೋಗಬೇಕಾಗುತ್ತದೆ. ಇಷ್ಟು ದೊಡ್ಡ ದೀರ್ಘ ಬರ ಇರುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ಇನ್ನು ಕೊಡಬೇಕಾಗಿರುವಂತಹ ಹಣ ಏನಾದರು ಇದ್ದರೆ ಅದು Prime Minister's Discretionary Funds ಎಂದು ಹೇಳುವಂಥದ್ದು ಏನಿದೆ ಅದರಿಂದ ಕೊಡಬೇಕೇ ವಿನಃ, ಬೇರೆ ಯಾವುದರಿಂದಲೂ ಹಣವನ್ನು ಕೊಡುವುದಕ್ಕೆ ಅವಕಾಶ ಇಲ್ಲ. ಅಥವಾ National Calamity Contingency Relief Fund ಎಂದು ಇದೆ. ಅದು ಏನೇ ಇರಲಿ. ಈ ಹಿಂದೆ ನಮ್ಮ ರಾಜ್ಯಕ್ಕೆ 500 ಕೋಟಿ ರೂಪಾಯಿಗಳನ್ನು ಇದರಿಂದಲೇ ಕೊಟ್ಟಿದ್ದಾರೆ. ಅದಕ್ಕಿಂತಲೂ ದೊಡ್ಡ ಪ್ರಮಾಣದ ಬರ ನಮ್ಮ ರಾಜ್ಯಕ್ಕೆ ಬಂದಿರತಕ್ಕಂಥದ್ದು. ಇವೆರಡನ್ನು ಒಟ್ಟಿಗೆ ಸೇರಿಸಿ, ಮಾನ್ಯ ಮುಖ್ಯಮಂತ್ರಿಗಳು ಒಂದು ಸರ್ವ ಪಕ್ಷಗಳ ಸಭೆಯನ್ನು ಕರೆಯಲಿ. ಅಲ್ಲಿ ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳೋಣ. ಆ ಸಭೆಯನ್ನು ಈ ಅಧಿವೇಶನ ಮುಗಿಯುವುದರೊಳಗೆ ಕರೆಯಬೇಕೆಂದು ನನ್ನ ಆಸೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಗೌರವಾನ್ವಿತ ವಿರೋಧ ಪಕ್ಷದ ನಾಯಕಿಯವರು ಮತ್ತು ಹಿರಿಯ ಸದಸ್ಯರಾದಂತಹ ಶ್ರೀಯುತ ಯಂ.ಸಿ. ನಾಣಯ್ಯನವರು ತಮಿಳು ನಾಡು ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ನೀರುನ್ನು ಬಿಡುಗಡೆ ಮಾಡಬೇಕೆಂದು ಕೇಳುತ್ತಿದೆ. ಈ ವಿಷಯದಲ್ಲಿ ವಿವರವಾಗಿ ಪ್ರಸ್ತಾಪಿಸಿದ್ದಾರೆ. ಈ ರಾಜ್ಯದ

ಹಿತವನ್ನು ಕಾಪಾಡುವುದಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ. ಈ ನೆಲ, ಜಲದ ಸಾಂಸ್ಕೃತಿಕ ವಿಶೇಷತೆಗಳು ಎಲ್ಲಾ ಸಂಗತಿಗಳನ್ನು ಉಳಿಸಿಕೊಳ್ಳುವುದಕ್ಕೆ ನಾವು ಬದ್ಧರಾಗಿದ್ದೇವೆ. ಮೊದಲಿನಿಂದಲೂ ರಾಜ್ಯದ ಜನ ಎಲ್ಲಾ ಒಟ್ಟಿಗೆ ಇದ್ದೇವೆ. ಇಂತಹ ಸಂದರ್ಭದಲ್ಲಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಉಲ್ಲೇಖಿಸಿರು ವಂತೆ ಸರ್ವಪಕ್ಷಗಳ ಸಭೆಯನ್ನು ಕರೆದು ಎಲ್ಲರ ಜೊತೆಯಲ್ಲಿ ಸಮಾಲೋಚಿಸಿಕೊಂಡು ಈ ಸದನದಲ್ಲಿ ಯಾವ ವಿಷಯಗಳನ್ನು ಪ್ರಸ್ತಾಪ ಮಾಡಬೇಕು ಮತ್ತು ಕೇಂದ್ರ ಮಟ್ಟದಲ್ಲಿ, ತಮಿಳುನಾಡು ಸರ್ಕಾರದ ಮಟ್ಟದಲ್ಲಿ ಏನೇನ್ನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ವಿಸ್ತಾರವಾಗಿ ಚರ್ಚಿಸಿದನಂತರ ಮತ್ತೆ ಈ ಸದನಕ್ಕೆ ಬರುವ ಅಗತ್ಯತೆಗಳನ್ನು ಇದ್ದರೆ ಅದರ ಮಾಹಿತಿಯನ್ನು ಒಳಗೊಂಡಂತೆ ಅವರು ಈ ಸದನಕ್ಕೆ ಉಳಿದ ವಿವರಗಳನ್ನು ಒಪ್ಪಿಸುತ್ತಾರೆ. ಈ ವಿಷಯದಲ್ಲಿ ಸರ್ಕಾರದ ಪರವಾಗಿ ತಮ್ಮ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

**ಸಭಾಪತಿಯವರು:–** ಇಲ್ಲಿಗೆ ಈ ವಿಷಯ ಮುಕ್ತಾಯವಾಯಿತು.

## 8. ಗಮನ ಸೆಳೆಯುವ ಸೂಚನೆ

(ಅ) ಕನಕಪುರ ತಾಲ್ಲೂಕಿನ ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ಕಾನೂನು ಬಾಹಿರವಾಗಿ ಗಣಿಗಾರಿಕೆ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಯು.ವಿ.ಸಿಂಗ್ ರವರು ಸಲ್ಲಿಸಿರುವ ವರದಿ ಕುರಿತು ಸರ್ಕಾರ ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದರ ಬಗ್ಗೆ.

**ಶ್ರೀ ಯಂ.ಸಿ. ನಾಣಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕನಕಪುರ ತಾಲ್ಲೂಕಿನ ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ಕಾನೂನು ಬಾಹಿರವಾಗಿ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಅರಣ್ಯ ಇಲಾಖೆಯವರು ಹಲವಾರು ಮೊಕದ್ದಮೆಗಳನ್ನು ದಾಖಲೆ ಮಾಡಿದ್ದರೂ ಸಹ ಮೊಕದ್ದಮೆಗಳಿಗೆ ಸಂಬಂಧಪಟ್ಟಂತೆ ಯಾವುದೇ

ಕ್ರಮವನ್ನು ಕೈಗೊಳ್ಳದೇ ಇರುವುದರಿಂದ ಮತ್ತು ಗ್ರಾನೈಟ್ ದಂಧೆಯಲ್ಲಿ ಅರಣ್ಯ ಇಲಾಖೆಯ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ರಾಜಕೀಯ ಪ್ರಭಾವದಿಂದ ಸಂಪೂರ್ಣವಾಗಿ ನಿಷ್ಕ್ರೀಯವಾಗಿರುವುದು ಮತ್ತು ಈ ಒಂದು ಪ್ರದೇಶದಲ್ಲಿ ನಡೆಯುತ್ತಿದೆಯೆನ್ನಲಾದ ಅಕ್ರಮ ಗಣಿಗಾರಿಕೆ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಯು.ವಿ.ಸಿಂಗ್ ರವರು ಸರ್ಕಾರಕ್ಕೆ ಒಂದು ವರದಿಯನ್ನು ನೀಡಿದ್ದರೂ ಸಹ ಆ ವರದಿಯ ಬಗ್ಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದರ ಬಗ್ಗೆ ನಾನು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

**ಶ್ರೀ ಸಿ.ಪಿ.ಯೋಗೇಶ್ವರ್ (ಅರಣ್ಯ ಸಚಿವರು):–** ಮಾನ್ಯ ಸಭಾಪತಿಯವರೇ, ಸರ್ಕಾರದ ಆದೇಶ ಸಂಖ್ಯೆ: ಅಪಜೀ 45 ಎಫ್ಎಫ್ಎಂ 2006 ಬೆಂಗಳೂರು, ದಿನಾಂಕ: 27–04–2006 ರಲ್ಲಿ ಕನಕಪುರ ತಾಲ್ಲೂಕಿನಲ್ಲಿ ನಡೆದ ಅಕ್ರಮ ಕಲ್ಲುಗಣಿಗಾರಿಕೆ ಬಗ್ಗೆ ತನಿಖೆ ನಡೆಸಿ ವರದಿ ನೀಡಲು ಡಾ: ಯು.ವಿ.ಸಿಂಗ್ ಭಾ.ಅ.ಸೇ. ಇವರ ನೇತೃತ್ವದಲ್ಲಿ ತಂಡವನ್ನು ರಚಿಸಲಾಗಿತ್ತು.

ಡಾ: ಯು.ವಿ.ಸಿಂಗ್ ಭಾ.ಅ.ಸೇ. ಇವರು ಕನಕಪುರ ತಾಲ್ಲೂಕಿನಲ್ಲಿ ನಡೆದ ಅಕ್ರಮ ಕಲ್ಲುಗಣಿಗಾರಿಕೆ ಬಗ್ಗೆ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಒಟ್ಟು 484 ಪ್ರಕರಣಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಇವುಗಳ ಪೈಕಿ 189 ಪ್ರಕರಣಗಳು ಅರಣ್ಯ ಇಲಾಖೆಗೆ ಸಂಬಂಧಿಸಿರುತ್ತವೆ.

| | | |
|---|---|---|
| 1. | ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗಣಿ ಗುತ್ತಿಗೆಗಳ ಸಂಖ್ಯೆ | 100 |
| 2. | ಅರಣ್ಯ ಗಡಿಯಿಂದ 100 ಮೀ. ವ್ಯಾಪ್ತಿಯೊಳಗೆ ಬರುವಂತಹ ಗುತ್ತಿಗೆಗಳ ಸಂಖ್ಯೆ | 89 |
| | **ಒಟ್ಟು** | **189** |

ಈ 189 ಪ್ರಕರಣಗಳಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯಿಂದ ತೆಗೆದುಕೊಂಡ ಕ್ರಮಗಳು ಕೆಳಕಂಡಂತಿರುತ್ತವೆ.

I. Cases related to Quaries within Forest land of Kanakapura Taluk.

| Sl.No. | Name of the Range | Total No. of Cases |
|---|---|---|
| 1. | Kanakpura | 77 |
| 2. | Sathanur | 21 |
| 3. | Channapatna | 2 |
| | **Total** | **100** |

a) Statement showing the Forest offence Case Booked / not booked in respect of Illegal quarry leases /encroachment in the forest area of kanakpura Taluk.

| Sl. No. | Name of the range | Total No. of FOC Booked | FOC has not been booked due to quarry not yet started | FOC has not been booked due to part of lease area falls within forest land but quarry work not yet started | Before the inspection of Dr.U.V.SINGH committee FOC already booked, hence again FOC has not booked | Total |
|---|---|---|---|---|---|---|
| 1. | Kanakpura | 59 | 11 | 4 | 3 | 77 |
| 2. | Sathanur | 18 | - | - | 3 | 21 |
| 3. | Channapatna | 2 | - | - | - | 2 |
| | **Total** | **79** | **11** | **4** | **6** | **100** |

b) Current stage of the cases in respect of quaries in Forest area of Kanakpura Taluk.

| Sl. No. | Name of the range | Total No. of FOC Booked | Total No. of charge sheet filed in JMFC | FOC withdrawn due to work not starte | FIR squashed in the court | Enqyiry report pending with RFO | Cases pending with DCF seeking permission to charge sheet | Cases pending in court for issue of cc no. | Total |
|---|---|---|---|---|---|---|---|---|---|
| 1. | Kanakpura | 59 | 27 | 6 | 1 | 3 | 20 | 2 | 59 |
| 2. | Sathanur | 18 | 7 | - | - | - | - | 11 | 18 |
| 3. | Channapatna | 2 | 2 | - | - | - | - | - | 2 |
| | **Total** | **79** | **36** | **6** | **1** | **3** | **20** | **13** | **79** |

**II. Cases related to Quarries within 100 Meters from Forest boundary but outside Reserve Forests**

a) Statement showing the quarry work done / encroadhment in the areas coming within 100 meters from the boundary of the forest of Kanakpura Taluk.

| Sl.No. | Name of the Range | Total No. of Cases |
|---|---|---|
| 1. | Kanakpura | 67 |
| 2. | Sathanur | 21 |
| 3. | Channapatna | - |
| 4. | Ramanagar | 1 |
| | **Total** | **89** |

b) Statement showing the Forest offence Case Booked / not booked in the areas coming within 100 meters from the boundary of the forest of kanakpura Taluk.

| Sl. No. | Name of the range | Total No. of FOC Booked | FOC has not been booked due to quarry not yet started | FOC has not been booked due to part of lease area falls within 100 meters from the forest boundary but quarry work not yet started | Before the inspection of Dr.U.V.SINGH committee the quarry has inactive, hence FOC has not booked | Total |
|---|---|---|---|---|---|---|
| 1. | Kanakpura | 48 | 4 | 15 | - | 67 |
| 2. | Santhanur | 16 | 3 | - | 2 | 21 |
| 3. | Channapatna | - | - | - | - | - |
| 4. | Ramanagar | - | - | 1 | - | 1 |
| | Total | 64 | 7 | 16 | 2 | 89 |

c) Current stage of the cases in the areas coming within 100 meters from the boundary of the forest of Kanakpura Taluk.

| Sl. No. | Name of the range | Total No. of FOC Booked | Total No. of charge sheet filed in JMFC | Cases pending with DCF seeking permission to charge sheet | Enquiry report pending with RFO | Cases pending in court for issue of cc no. | Total |
|---|---|---|---|---|---|---|---|
| 1. | Kanakpura | 48 | 28 | 10 | 4 | 6 | 48 |
| 2. | Sathanur | 16 | 7 | - | - | 9 | 16 |
| | **Total** | **64** | **35** | **10** | **4** | **15** | **64** |

d) ಪ್ರಕರಣಗಳು ನ್ಯಾಯಾಲಯದಲ್ಲಿ ವಿವಿಧ ಹಂತಗಳಲ್ಲಿರುವ ಬಗ್ಗೆ ವಿವರಗಳನ್ನು ಹಾಗೂ ಅರಣ್ಯ ಪ್ರದೇಶದ ಗಡಿಯಿಂದ 100 ಮೀ. ವ್ಯಾಪ್ತಿಯೊಳಗೆ ಬರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ.

**Statement showing the illegal quarry/encroachment in Forest land of Kanakpura Taluk.**

| Sl. No. | Name of the Forest | Name of the Village & Sy. No. | Name of the person | FOC No. | CC No. | Present Stage |
|---|---|---|---|---|---|---|
| 1 | 2 | 3 | 4 | 5 | 6 | 7 |
| | Kanakapura Range | | | | | |
| 1 | Muneshwarabetta SF | Kotekoppa-9 | D.K. Suresh | 4/06-07 | 67/07 | SUMMONS ISSUED |

| | | | | | | |
|---|---|---|---|---|---|---|
| 2 | Shivanahalli-sec-4 | Shivanahalli-154 | K. Srinivash Skanda | 6/06-07 | 68/07 | STAY ORDER ISSUED H.C. |
| 3 | Chikkoppa Section-4 | Chikkoppa-35 | Smt. Mamatha Vidyashankar | 9/06-07 | 129/07 | SUMMONS ISSUED |
| 4 | Ramadevarabetta SF | Salabanni-18 | C. R. Swamy | 10/06-07 | 76/07 | STAY ORDER ISSUED H.C. |
| 5 | Siddarabetta MF | Bijjahalli-27 | T.N.Chandrakala | 14/06-08 | 131/07 | ADJOURNMENT PLEA |
| 6 | Siddarabetta MF | Bommasandra Sy No.30 | Julpikar Ali | 15/06-07 | 122/07 | SUMMONS ISSUED |
| 7 | Shivanahalli-sec-4 | Shivanahalli sy No.154 | S.M.Niranjamurthi | 16/06-07 | 123/07 | ADJOURNMENT PLEA |
| 8 | Shivanahalli-sec-4 | Shivanahalli sy No.154 | M//. Lakshmi Venkateswara Granite | 17/06-07 | 161/07 | NBW ISSUED |
| 9 | Shivanahalli-sec-4 | Shivanahalli-154 | B.M. Channareddi | 25/06-07 | 127/07 | SUMMONS ISSUED |
| 10 | Siddarabetta MF | Tipptur-36 | Ikbal Husen | 30/06-07 | 94/07 | STAY ORDER ISSUED H.C. |
| 11 | Kutagale Section-4 | Kutagale-21 | H.J.S. Granite | 43/06-07 | 101/07 | SUMMONS ISSUED |
| 12 | Kutagale Section-4 | Kutagale Sy No.-21 | Trishul Granite | 46/06-07 | 227/07 | SUMMONS ISSUED |
| 13 | Kutagale Section-4 | Kutagale Sy No.-21 | B.N.Krishnamurthi | 49/06-07 | 79/07 | STAY ORDER ISSUED H.C. |

| | | | | | | |
|---|---|---|---|---|---|---|
| 14 | Kutagale Section-4 | Kutagale Sy No.-21 | Lokesh | 50/06-07 | 130/07 | ADJOURNMENT PLEA |
| 15 | Shivanahalli-sec-4 | Shivanahalli sy No.154 | U.S.A. Yan Eghms | 54/06-07 | 228/08 | SUMMONS ISSUED |
| 16 | Ramadevarabetta SF | Salabanni | B.Gopinath | 61/06-07 | 235/08 | SUMMONS ISSUED |
| 17 | Bettallivade A block | Nidagallu Sy.No.51 | Pallava Granite | 64/06-07 | 234/08 | SUMMONS ISSUED |
| 18 | Bettallivade A block | Kebbehalli Sy.No.67 | Singaiah | 67/06-07 | 233/08 | SUMMONS ISSUED |
| 19 | Muneshwarabetta SF | Chikkoppa Sy.No.35 | Smt. Mamatha Vidyashankar | 69/06-07 | 232/08 | SUMMONS ISSUED |
| 20 | Chikkoppa Section-4 | Chikkoppa-35 | Smt. Mamatha Vidyashankar | 70/06-07 | 128/07 | SUMMONS ISSUED |
| 21 | Ramadevarabetta SF | Hosadurga-49 | Rona Taluk Stone Kattarsh | 36/06-07 | 10/2010 | SUMMONS ISSUED |
| 22 | Bettallivade A block | Kebbehalli-67 | Balu S/o Narayanappa | 38/05-06 | 137/09 | SUMMONS ISSUED |
| 23 | Ramadevarabetta SF | Hosadurga-49 | Gayathri Vikram | 35/06-07 | 543/07 | SUMMONS ISSUED |
| 24 | Chikkoppa Section-4 | Chikkoppa Sy.No.35 | Narayana | 58/06-07 | 544/09 | SUMMONS ISSUED |
| 25 | Ramadevarabetta SF | Tattekere-125 | Karnataka Rere arth | 60/06-07 | 545/09 | SUMMONS ISSUED |

| | | | | | | |
|---|---|---|---|---|---|---|
| | **Sathanur Range** | | | | | |
| 26 | Arkavathi MF | Kebbehalli Sy.No.107 | Shilpa | 2/2006-07 Dt:13-4-2006 | 77/07 | SUMMONS ISSUED |
| 27 | Arkavathi MF | Kunur Sy.No.37 | Soni | 3/2006-07 Dt:14-4-2006 | 26/07 | SUMMONS ISSUED |
| 28 | Achalu SF | Puradoddi Sy.No.70 | Lepaksha | 5/2006-07 Dt:17-4-2006 | 70/07 | SUMMONS ISSUED |
| 29 | Achalu SF | Puradoddi Sy.No.70 | M.M.L. | 10/2006-07 Dt:03-8-2006 | 38308 | QUASHED |
| 30 | Achalu SF | Puradoddi Sy.No.70 | Indianrocks | 25/2006-07 dt:29-08-2006 | 71/07 | STAT ORDER ISSUED H.C. |
| 31 | Achalu SF | Puradoddi Sy.No.70 | Henrocks Pvt.Ltd. | 26/2006-07 dt:29-08-2006 | 72/07 | STAYED 6514/09 |
| 32 | Arkavathi MF | Kunur Sy. No.36 | Jayasree Dindoor | 21/2006-07 dt:21-08-2006 | 78/07 | SUMMONS ISSUED |

**Statement showing the quarry work done / encroachment in the areas coming within 100 meters from the boundary of the forest of Kanakpura Taluk**

| Sl. No. | Name of the Forest | Name of the Village & Sy. No. | Name of the person | FOC No. | CC No. | Present Stage |
|---|---|---|---|---|---|---|
| 1 | 2 | 3 | 4 | 5 | 6 | 7 |
| | **Kanakapura Range** | | | | | |
| 1 | Bettallivade A Block | Kebbehalli | Amba Granite | 74/06-07 | 138/09 | SUMMONS ISSUED TO ACCUSED |
| 2 | Bettallivade A Block | Kebbahalli | M.N.Manjunath | 76/06-07 | 231/08 | STAYED IN WP 758/07 |
| 3 | Bettallivade A Block | Nidagallu | Vijayakumar M.H. | 78/06-07 | 229/08 | Quashed |
| 4 | Bettallivade A Block | Narayanapura-61 | Rathnamma | 79/06-07 | 139/08 | SUMMONS ISSUED TO ACCUSED |
| 5 | Bilikal SF | Narayanapura | Kempiraiah | 85/06-07 | 140/09 | ADJOURNMENT FOR PLEA |
| 6 | Bilikal SF | Narayanapura | M// Kabini(S.C) Labour Contractor | 87/06-07 | 141/09 | SUMMONS ISSUED TO ACCUSED |

| | | | | | | |
|---|---|---|---|---|---|---|
| 7 | Bettallivade A Block | Kebbehalli-67 | Prabhath Granites | 88/06-07 | 142/09 | SUMMONS ISSUED TO ACCUSED |
| 8 | Ramadevarabetta SF | Hosadurga | S.Narayanareddi | 91/06-07 | 144/09 | SUMMONS ISSUED TO ACCUSED |
| 9 | Kuthagale Sec-4 | Kuthagale-20, 21 | B.N.Krishnamurthi | 108/06-07 | 547/09 | NBW To Accused |
| 10 | Bettallivade A Block | Nidagallu | Kantha D. | 77/06-07 | 230/08 | ADJOURNMENT FOR PLEA |
| 11 | Chikkoppa Section-4 | Chikkoppa-35 | Ajith MAlli | 129/06-07 | 583/09 | SUMMONS ISSUED TO ACCUSED |
| 12 | Chikkoppa Section-4 | Chikkoppa-35 | Mayamma | 82/06-07 | 11/2010 | SUMMONS ISSUED TO ACCUSED |
| 13 | Ramadevarabetta SF | Salabanni-18 | B. Gopinath | 103/06-07 | 12/10 | SUMMONS ISSUED TO ACCUSED |
| 14 | Chikkoppa Section-4 | Chikkoppa-35 | H.P.Ravi kumar | 127/06-07 | 581/09 | SUMMONS ISSUED TO ACCUSED |
| 15 | Ramadevarabetta SF | Hosadurga | Mysore Minarals Ltd. | 90/06-07 | 143/09 | SUMMONS ISSUED TO ACCUSED |
| 16 | Ramadevarabetta SF | Gattigunda | M. Lakshmana | 92/06-07 | 145/09 | SUMMONS ISSUED TO ACCUSED |

| | | | | | | |
|---|---|---|---|---|---|---|
| 17 | Ramadevarabetta SF | Gattigunda | Indian Block pravite Ltd. | 93/06-07 | 146/09 | SUMMONS ISSUED TO ACCUSED |
| 18 | Manjunatha SF | Kolagondanahalli | Mysore Minarals Ltd. | 94/06-07 | 147/09 | SUMMONS ISSUED TO ACCUSED |
| 19 | Ramadevarabetta SF | Salabanni-66 | H.K.Satyamurthi | 75/06-07 | 546/09 | SUMMONS ISSUED TO ACCUSED |
| 20 | Kuthagale Sec-4 | Kuthagale-20, 21 | B.N.Krishnamurthi | 108/06-07 | 547/09 | SUMMONS ISSUED TO ACCUSED |
| 21 | Kuthagale Sec-4 | Kuthagale-20, 21 | Siddaraju | 109/06-07 | 577/09 | SUMMONS ISSUED TO ACCUSED |
| 22 | Muneshwarabetta SF | Kotekoppa-9 | D.K. Suresh | 115/06-07 | 578/09 | SUMMONS ISSUED TO ACCUSED |
| 23 | Chikkoppa Section-4 | Chikkoppa-35 | C. Narayana | 125/06-07 | 579/09 | SUMMONS ISSUED TO ACCUSED |
| 24 | Chikkoppa Section-4 | Chikkoppa-35 | T.N.Prabhakar | 128/06-07 | 582/09 | SUMMONS ISSUED TO ACCUSED |
| 25 | Kuthagale Sec-4 | Kuthagale-20, 21 | Ravi S. | 114/06-07 | 787/11 | SUMMONS ISSUED TO ACCUSED |
| 26 | Muneshwarabetta SF | Chikkoppa | C.V.S.Granites | 105/06-07 | 790/11 | SUMMONS ISSUED TO ACCUSED |

| | | | | | | |
|---|---|---|---|---|---|---|
| 27 | Muneshwarabetta SF | Chikkoppa | C.V.S.Granites | 104/06-07 | 789/2010 | SUMMONS ISSUED TO ACCUSED |
| 28 | Muneshwarabetta SF | Chikkoppa-35 | C.V.S.Granites | 106/06-07 | 786/11 | SUMMONS ISSUED TO ACCUSED |
| | **Sathanur Range** | | | | | |
| 29 | Achalu SF | Maralebekuppe | Shiva | 35/2006-07 dt:13-11-2006 | 364/08 | Quashed CRP 4464/09 |
| 30 | Achalu SF | Maralebekuppe | Lepaksha S. | 36/2006-07 dt:15-11-2006 | 365/08 | STAYED BY H.C. |
| 31 | Achalu SF | Maralebekuppe | Indian Rocks | 37/2006-07 dt:15-11-2006 | 366/08 | Quashed H.C.-6445/09 |
| 32 | Achalu SF | Maralebekuppe | Henrocks | 38/2006-07 dt:15-11-2006 | 367/08 | STAYED CRP 6488/09 |
| 33 | Achalu SF | Yadamaranahalli | Gulshar Hunnisa | 42/2006-07 dt:16-11-2006 | 368/08 | Accused Dead |
| 34 | Achalu SF | Maralebekuppe | United Exports | 30/2006-07 dt:10-10-2006 | 453/08 | BAILABLE WARRANT ISSUED |
| 35 | Achalu SF | Maralebekuppe | Jemini Exports | 31/2006-07 dt:10-10-2006 | 454/08 | SUMMONS ISSUED TO ACCUSED |

ದಿನಾಂಕ:27.04.2006ರ ಸರ್ಕಾರದ ಆದೇಶದ ಮುಖಾಂತರ ಆ ಭಾಗದಲ್ಲಿ ನಡೆಯುತ್ತಿದೆ ಎನ್ನಲಾದ ಅಕ್ರಮ ಗಣಿಗಾರಿಕೆ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು ಆವೊತ್ತಿನ ಮುಖ್ಯಅರಣ್ಯ ಸಂರಕ್ಷಣಾಧಿಕಾರಿಗಳಾದಂತಹ ಡಾ: ಯು.ವಿ.ಸಿಂಗ್ ಅವರ ನೇತೃತ್ವದಲ್ಲಿ ಒಂದು ತಂಡವನ್ನು ರಚಿಸಲಾಗಿತ್ತು. ಡಾ: ಯು.ವಿ.ಸಿಂಗ್‌ರವರು ಕನಕಪುರ ತಾಲ್ಲೂಕಿನಲ್ಲಿ ನಡೆಯುತ್ತಿರುವಂತಹ ಅಕ್ರಮ ಕಲ್ಲುಗಣಿಗಾರಿಕೆ ಬಗ್ಗೆ ವರದಿಯನ್ನು ಸಲ್ಲಿಸಿರುತ್ತಾರೆ. ಆ ವರದಿಯಲ್ಲಿ ಒಟ್ಟು 484 ಪ್ರಕರಣಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವುಗಳ ಪೈಕಿ 189 ಪ್ರಕರಣಗಳು ಅರಣ್ಯ ಇಲಾಖೆಗೆ ಸಂಬಂಧಿಸಿರುತ್ತವೆ. 100 ಗಣಿ ಗುತ್ತಿಗೆಗಳು ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತವೆ, 89 ಗಣಿ ಗುತ್ತಿಗೆಗಳು ಅರಣ್ಯ ಗಡಿಯಿಂದ 100 ಮೀ. ವ್ಯಾಪ್ತಿಯೊಳಗೆ ಬರುತ್ತವೆ. ಹೀಗೆ ಒಟ್ಟು 189 ಪ್ರಕರಣಗಳಲ್ಲಿ ಅರಣ್ಯ ಕಾಯಿದೆ ಅಡಿಯಲ್ಲಿ ಸುಮಾರು 71 ಪ್ರಕರಣಗಳಲ್ಲಿ ಕನಕಪುರ ಜೆ.ಎಂ.ಎಫ್. ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ. ಆ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿವೆ. ಇನ್ನುಳಿದ ಪ್ರಕರಣಗಳಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ, ಅವುಗಳ ಬಗ್ಗೆ ದೋಷಾರೋಪಣಾ ಪಟ್ಟಿಯನ್ನು ಈಗ ತಯಾರಿಸಲಾಗುತ್ತಿದೆ. ದೋಷಾರೋಪಣಾ ಪಟ್ಟಿಯನ್ನು ಕೂಡಲೇ ತಯಾರಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುತ್ತೇವೆ.

ಈಗಾಗಲೇ ಈ ಅಕ್ರಮಗಳಲ್ಲಿ ಭಾಗಿಗಳಾಗಿದ್ದಾರೆ ಎನ್ನುವಂತಹ ಇಬ್ಬರು ಅಧಿಕಾರಿಗಳೇನಿದ್ದಾರೆ ಅವರಲ್ಲಿ ಒಬ್ಬರು ಆರ್.ಎಫ್.ಓ., ಮತ್ತೊಬ್ಬರು ಎ.ಸಿ.ಎಫ್. ಆಗಿದ್ದು ಇಬ್ಬರನ್ನು ಕೂಡ ಸಸ್ಪೆಂಡ್ ಮಾಡಲಾಗಿದೆ. ಅಲ್ಲದೆ ನಮ್ಮ ಗಣಿಗಾರಿಕೆ ಇಲಾಖೆಯ ಉಪ ನಿರ್ದೇಶಕರು ಕೂಡ ಅವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿದ್ದಾರೆ, ಈ ಹಿನ್ನೆಲೆಯಲ್ಲಿ ನಮ್ಮ ಇಲಾಖೆಯಿಂದ ಮಾನ್ಯ ಮುಖ್ಯಮಂತ್ರಿಯವರಲ್ಲಿ ಒತ್ತಾಯವನ್ನು ಕೂಡ ಮಾಡಿದ್ದೇವೆ. ಇನ್ನೂ 72 ಪ್ರಕರಣಗಳ ಬಗ್ಗೆ ವಿವಿಧ ಹಂತದಲ್ಲಿ ತನಿಖೆ ನಡೆಯುತ್ತಿದೆ. 2006 ರಿಂದ 2012 ರವರೆಗೆ ಮತ್ತೆ ಕಲ್ಲುಗಣಿಗಾರಿಕೆ ಅಕ್ರಮಗಳು ನಡೆದಿರುವ ಬಗ್ಗೆ

ವರದಿಯಾಗಿರುವುದರಿಂದ ಈಗ ಸರ್ಕಾರ ಅಲ್ಲಿನ ಒಬ್ಬ ಅಧಿಕಾರಿಯನ್ನು ಅಂದರೆ ರಾಮನಗರ ಜಿಲ್ಲೆಯ ಸರ್ಕಾರಿ ಕಾರ್ಯದರ್ಶಿಗಳನ್ನು ನೇಮಿಸಿ ಅವರ ಮುಖಾಂತರ ಈಗ ಹೊಸದಾಗಿ ತನಿಖೆಯನ್ನು ಕೂಡ ಪ್ರಾರಂಭ ಮಾಡಿದ್ದೇವೆ. ಜೊತೆಗೆ ನಮ್ಮ ಇಲಾಖೆಯಿಂದ ವರ್ಕಿಂಗ್ ಪ್ಲಾನ್ ಮತ್ತು ವಿಜಿಲೆನ್ಸ್‌ನಿಂದ ಎರಡು ಕಮಿಟಿಗಳನ್ನು ಮಾಡಿ ಅವರು ಕೂಡ ಈಗ ಹೊಸದಾಗಿ ತನಿಖೆಯನ್ನು ಪ್ರಾರಂಭ ಮಾಡಿದ್ದಾರೆ. ಅದರ ಜೊತೆಗೆ ಚೆಕ್‌ಪೋಸ್ಟ್‌ಗಳನ್ನು ಕೂಡ ಮಾಡಿದ್ದು ಬಂದೋಬಸ್ತ್ ಆದಂತಹ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ಕೆಲವು ದಿವಸಗಳ ಹಿಂದೆ ಮಾನ್ಯ ಮಂತ್ರಿಗಳು ಪತ್ರಿಕೆಗಳಲ್ಲಿ ಪರಾಕ್ರಮದ ಹೇಳಿಕೆಗಳನ್ನೇನು ಕೊಟ್ಟಿದ್ದಾರೆ ಅವುಗಳನ್ನು ಮತ್ತು ಅವರ ಹೇಳಿಕೆಗೆ ಪ್ರತಿಯಾಗಿ, ಯಾರ ವಿರುದ್ಧ ಅವರು ಹೇಳಿಕೆಗಳನ್ನು ಮಾಡಿದ್ದರೋ ಅವರ ಹೇಳಿಕೆಗಳನ್ನು ಸಹ ನಾನು ಗಮನಿಸಿದ್ದೇನೆ. ಇಷ್ಟೆಲ್ಲಾ ಆದ ಮೇಲೆ ನಾನು ಇವೊತ್ತು ಈ ಪ್ರಶ್ನೆಯನ್ನು ಕೇಳಿದ್ದೇನೆ. ದಯವಿಟ್ಟು ಮಾನ್ಯ ಮಂತ್ರಿಗಳಾಗಲಿ, ಸಭಾಪತಿಗಳಾಗಲಿ ನಾನು ಈ ಪ್ರಶ್ನೆಯನ್ನು ಕೇಳುವಾಗ ಯಾರ ವಿರುದ್ಧ ಸಚಿವರು ಈ ಆಪಾದನೆಗಳನ್ನು ಮಾಡಿದ್ದರು, ಯಾರ ವಿರುದ್ಧ ಇವೊತ್ತು ಡಾ: ಯು.ವಿ.ಸಿಂಗ್‌ರವರ ವರದಿ ಇದೆಯೋ ಆ ವರದಿ ಮತ್ತು ಅಂದು 2006-07ನೇ ಸಾಲಿನಲ್ಲಿ ಕೇವಲ 3 ತಿಂಗಳವರೆಗೆ ಅಲ್ಲಿ ಡಿ.ಎಫ್.ಓ. ಆಗಿ ಕೆಲಸ ಮಾಡುತ್ತಿದ್ದಂತಹವರು ಸಲ್ಲಿಸಿರುವಂತಹ ವರದಿ ಈ ಎರಡು ವರದಿಗಳು ಕೂಡ ನನ್ನ ಹತ್ತಿರ ಇವೆ. ಆ ವರದಿಗಳ ಹಿನ್ನೆಲೆಯಲ್ಲಿ ಇವರು ತೆಗೆದುಕೊಂಡಿರುವಂತಹ ಕ್ರಮಗಳು ಮತ್ತು ಇವರು ಮಾಡಬೇಕು ಎಂದುಕೊಂಡಿರುವಂತಹ ವಿಚಾರಗಳ ಆಧಾರದ ಮೇಲೆ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರ ನೀಡಿರುವಂತಹ ಉತ್ತರವನ್ನು ದಯವಿಟ್ಟು ಒಂದು ಗಳಿಗೆ ಅವಲೋಕಿಸಬೇಕೆಂದು ವಿನಂತಿಸುತ್ತೇನೆ. ಇವರು ಕೊಟ್ಟಿರುವಂತಹ ಉತ್ತರದಲ್ಲಿರುವುದಿಷ್ಟೇ, ಬಾಕಿ ಎಲ್ಲವೂ ಕೂಡ ಡಾ: ಯು.ವಿ.ಸಿಂಗ್ ಹಾಗೂ

ಅವರ ವರದಿಯಲ್ಲಿ ಕಾಣಿಸಿರುವಂತಹ ವಿಚಾರಗಳೇ ಹೊರತು ಬಾಕಿ ಏನೂ ಇಲ್ಲ. ಸರ್ಕಾರ ನೀಡಿರುವಂತಹ ಲಿಖಿತ ಉತ್ತರವನ್ನೊಮ್ಮೆ ನೋಡಿ,

**'ಉತ್ತರ: ಸರ್ಕಾರದ ಆದೇಶ ಸಂಖ್ಯೆ: ಅಪಜೀ 45 ಎಫ್‌ಎಫ್‌ಎಂ 2006 ಬೆಂಗಳೂರು, ದಿನಾಂಕ:27.04.2006ರಲ್ಲಿ ಕನಕಪುರ ತಾಲ್ಲೂಕಿನಲ್ಲಿ ನಡೆದ ಅಕ್ರಮ ಕಲ್ಲುಗಣಿಗಾರಿಕೆ ಬಗ್ಗೆ ತನಿಖೆ ನಡೆಸಿ ವರದಿ ನೀಡಲು ಡಾ: ಯು.ವಿ.ಸಿಂಗ್ ಭಾ.ಅ.ಸೇ. ಇವರ ನೇತೃತ್ವದಲ್ಲಿ ತಂಡವನ್ನು ರಚಿಸಲಾಗಿತ್ತು.**

**ಡಾ: ಯು.ವಿ.ಸಿಂಗ್ ಭಾ.ಅ.ಸೇ., ಇವರು ಕನಕಪುರ ತಾಲ್ಲೂಕಿನಲ್ಲಿ ನಡೆದ ಅಕ್ರಮ ಗಣಿಗಾರಿಕೆ ಬಗ್ಗೆ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಒಟ್ಟು 484 ಪ್ರಕರಣಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಇವುಗಳ ಪೈಕಿ 189 ಪ್ರಕರಣಗಳು ಅರಣ್ಯ ಇಲಾಖೆಗೆ ಸಂಬಂಧಿಸಿರುತ್ತವೆ.'**

ಎಂದು ತಿಳಿಸಿ ಅವುಗಳಲ್ಲಿ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗಣಿ ಗುತ್ತಿಗೆಗಳು ಮತ್ತು ಅರಣ್ಯ ಗಡಿಯಿಂದ 100 ಮೀಟರ್ ವ್ಯಾಪ್ತಿಯೊಳಗೆ ಬರುವಂತಹ ಗುತ್ತಿಗೆಗಳ ಒಟು ಗಣಿ ಗುತ್ತಿಗೆಗೆಳ ಸಂಖ್ಯೆಯನ್ನು ತಿಳೀಸಿ ಮುಂದುವರೆದು **'ಈ 189 ಪ್ರಕರಣಗಳಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯಿಂದ ತೆಗೆದುಕೊಂಡ ಕ್ರಮಗಳು ಈ ಕೆಳಕಂಡಂತಿರುತ್ತವೆ'** ಎಂದು ತಿಳಿಸಿದ್ದಾರೆ. ಅವೆಲ್ಲವೂ ಸಹ ಆ ವರದಿಯಲ್ಲಿರತಕ್ಕಂತಹ ಕ್ರಮಗಳು. ಹಾಗಾದರೆ ಸರ್ಕಾರ ಮುಂದೆ ಏನನ್ನು ಮಾಡಬೇಕೆಂದು ಬಯಸುತ್ತದೆ ಎಂಬುದು ನನ್ನ ಪ್ರಶ್ನೆ. ಮಾನ್ಯ ಮಂತ್ರಿಗಳು ಹೇಳಿಕೆ ಕೊಡುವಾಗ ಬಹಳ ದೊಡ್ಡದಾಗಿ ಹೇಳಿಕೆ ಕೊಟ್ಟು, ಈಗ ಸದನದಲ್ಲಿ ಈ ಪ್ರಶ್ನೆಯನ್ನು ಪ್ರಸ್ತಾಪಿಸಿದ ಮೇಲೆ ಈ ರೀತಿಯ ಒಂದು ಹಾರಿಕೆಯ ಉತ್ತರವನ್ನು ಕೊಟ್ಟು ಈ ಪ್ರಕರಣವನ್ನು ಅಲ್ಲಿಗೇ ಸಮಾಧಿ ಮಾಡುವಂತಹ ಪ್ರಯತ್ನ ಎಲ್ಲಿಯಾದರೂ ನಡೆಯುತ್ತಿದೆಯೇ ಎನ್ನುವಂತಹ ನೇರವಾದ ಸಂಶಯ ನನಗೆ ಬರುತ್ತಿದೆ. ಆ ರೀತಿ ಸಂಶಯ ಬರಲು ಕಾರಣವೇನೆಂದರೆ, ದಯವಿಟ್ಟು ಯಾರೂ ಸಹ ಅನ್ಯಥಾ ಭಾವಿಸಬಾರದು. ಮಾನ್ಯ ಸಚಿವರು ಯಾವಾಗ ಈ ಆಪಾದನೆಗಳನ್ನು ಮಾಡಿದರು, ಈ ಆಪಾದನೆಗಳನ್ನು ಮಾಡುವಂತಹ ಸಂದರ್ಭದಲ್ಲಿ ಅವರು ಬಹಿರಂಗವಾಗಿ ಹೇಳಿಕೆಗಳನ್ನು ಕೊಟ್ಟರು. ಅವರು

ಕೊಟ್ಟಿರುವಂತಹ ಹೇಳಿಕೆಗಳನ್ನು ನಿರಾಕರಿಸುವುದಾದರೆ, ಅವರು ನೀಡರುವಂತಹ ಪತ್ರಿಕಾ ಹೇಳಿಕೆಗಳ ಪ್ರತಿಗಳು ನನ್ನಲ್ಲಿವೆ. ಅವುಗಳ ಶೀರ್ಷಿಕೆಗಳು ಈ ರೀತಿ ಇವೆ.

**"ಡಿ.ಕೆ.ಶಿ. ವಿರುದ್ಧ ಅಗತ್ಯ ಕ್ರಮ, ಮುಖ್ಯಮಂತ್ರಿ**

**ಮುಂದುವರೆದ ಸಚಿವ ಶ್ರೀ ಸಿ.ಪಿ.ಯೋಗೇಶ್ವರ್ ಅವರ ವಾಕ್ಸಮರ, . .**

**ಕೊತ್ವಾಲ್ ಕಾಲೊತ್ತಿದ್ದವರು ಯಾರು? . . .**

**ಅಕ್ರಮ ಗಣಿಗಾರಿಕೆ ಬಗ್ಗೆ ಮಾಹಿತಿ ಸಿ.ಎಂ.**

**ಡಿ.ಕೆ.ಶಿ. ಹುತ್ತಕ್ಕೆ ಕೈಹಾಕಿದ ಯೋಗೇಶಿ . . .**

**ಡಿ.ಕೆ.ಶಿ. ಅಡ್ಡೆ ಮೇಲೆ ಯೋಗೇಶ್ವರ್ ಸವಾರಿ, . .**

**ಕನಕಪುರ ಅರಣ್ಯ ಅತಿಕ್ರಮಣ, ಬಳ್ಳಾರಿಯ ಗಣಿಯಂತೆಯೇ ಕನಕಪುರದ**

**ಕಾನನದಲ್ಲಿಯೂ ಅಕ್ರಮ"**

ಇದನ್ನೆಲ್ಲಾ ಮಾನ್ಯ ಸಚಿವರೇ ಹೇಳಿರುವಂಥದ್ದು **'ಬಳ್ಳಾರಿಯಲ್ಲಿ ಯಾವ ರೀತಿ ನಡೆದಿದೆ ಅದೇ ರೀತಿ ಕನಕಪುರದಲ್ಲಿಯೂ ನಡೆಯುತ್ತಿದೆ.'** ಅದರ ಜೊತೆಯಲ್ಲಿಯೇ **'Kanakapura is also a Republic'** ಎಂದು ಹೇಳಲಾಗಿದೆ, ಹೌದಲ್ಲವೆ. ಇವೆಲ್ಲಾ ಸಚಿವರ ಹೇಳಿಕೆಗಳೇ ಹೊರತು ನನ್ನ ಹೇಳಿಕೆಗಳಲ್ಲ. ಈ ಹೇಳಿಕೆಗಳು ಪತ್ರಿಕೆಗಳಲ್ಲೇನು ಬಂದಿವೆ ಅವುಗಳನ್ನು ಸಂಪೂರ್ಣವಾಗಿ ಕ್ರೋಢೀಕರಿಸಿ ನಾನು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ನಂತರ ಮಾನ್ಯ ಸಚಿವರು ಹೇಳಿದ್ದೇನು, 'ಇದನ್ನು ನಾವು ಸಂಪೂರ್ಣವಾಗಿ ನಿಲ್ಲಿಸಬೇಕಾಗುತ್ತದೆ' ಎಂದರು. ಈಗ ಮಾನ್ಯ ಸಚಿವರು ನೀಡಿರುವಂತಹ ಉತ್ತರವನ್ನು ನೋಡಿದ ಮೇಲೆ ಈ ಉತ್ತರದಲ್ಲಿ ತಿಳಿಸಿರುವುದೇನೆ, **'ಕ್ರಮ ಕೈಗೊಂಡಿದ್ದಾರೆ, ಪ್ರಕರಣಗಳು ದಾಖಲಾಗಿವೆ, ಮುಂದೆ ಆ ಬಗ್ಗೆ ತನಿಖೆ ನಡೆಸುತ್ತೇವೆ'** ಎಂದು ಹೇಳಿಬಿಟ್ಟರೆ ಸಾಕೇನು? ಹಾಗಾದರೆ ಈ ಹಿಂದೆ ಮಾನ್ಯ ಸಚಿವರು ಕೊಟ್ಟಿರತಕ್ಕಂತಹ ಹೇಳಿಕೆಗೂ ಇವೊತ್ತು ಸದನದಲ್ಲಿ ನಾನು ಈ ವಿಚಾರವನ್ನು ಪ್ರಸ್ತಾಪಿಸಿದ ಮೇಲೆ ಅವರು

ಕೊಟ್ಟಿರುವಂತಹ ಉತ್ತರಕ್ಕೂ ಇರುವಂತಹ ವ್ಯತ್ಯಾಸವನ್ನು ನೋಡಿದಾಗ ಬಹುಶಃ ಮಾನ್ಯ ಸಚಿವರ ಮನಸ್ಸಿನಲ್ಲಿ ಹೆದರಿಕೆ ಬಂತೇ ಎನ್ನುವಂತಹ ಸಂಶಯ ಉಂಟಾಗುತ್ತಿದೆ. ನಿಜಕ್ಕೂ ಅಲ್ಲಿ ರಿಪಬ್ಲಿಕ್ ಇದೆಯೇ, ಆದ್ದರಿಂದ ಈ ರಿಪಬ್ಲಿಕ್‌ನ ವಿರುದ್ಧ ಹೋರಾಟ ಮಾಡುವುದಕ್ಕೆ ನನಗೆ ಶಕ್ತಿ ಇಲ್ಲ, ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿ ನಾನು ಉತ್ತರವನ್ನು ಕೊಡುವಂತಹ ಪರಿಸ್ಥಿತಿಯನ್ನು ಮಾನ್ಯ ನಾಣಯ್ಯನವರು ನಿರ್ಮಾಣ ಮಾಡಿದರು, ನಾನು ಒಬ್ಬ ಮಂತ್ರಿಯಾಗಿ ನನ್ನ ಮೇಲೆಯೇ ಆಪಾದನೆ ಬಂದು, ಇದೇ ರೀತಿಯ ಪರಿಸ್ಥಿತಿ ನಿರ್ಮಾಣವಾಗಿ ನಾನು ಸಹ ಅದಕ್ಕೆ ತಲೆ ಒಡ್ಡಬೇಕಾದಂತಹ ಪರಿಸ್ಥಿತಿ ಎಲ್ಲಿಯಾದರೂ ಬಂದೀತು ಎನ್ನುವಂತಹ ಹಿನ್ನೆಲೆಯಲ್ಲಿ ಮಾನ್ಯ ಸಚಿವರು ಈ ರೀತಿಯ ಉತ್ತರವನ್ನು ಕೊಟ್ಟಿರುಬಹುದು ಎನ್ನುವಂತಹ ಸಂಶಯ ನನ್ನನ್ನು ನೇರವಾಗಿ ಕಾಡುತ್ತಿದೆ.

ಈ ಹಿನ್ನೆಲೆಯಲ್ಲಿ ನಾನು ಮಾನ್ಯ ಸಚಿವರಿಗೆ ಹೇಳ ಬಯಸುವುದೇನೆಂದರೆ, ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಪ್ರಕರಣ ಇವೊತ್ತು, ನೆನ್ನೆಯದಲ್ಲ. 2006ನೇ ಇಸವಿಯಲ್ಲಿ ಇದರ ಬಗ್ಗೆ ಪ್ರಥಮವಾಗಿ ತನಿಖೆ ನಡೆದಿರುವುದು ನಿಜ. ಆ ಸಂದರ್ಭದಲ್ಲಿ 20:20 ಸರ್ಕಾರ ಅಧಿಕಾರದಲ್ಲಿತ್ತು. ಯಾರ ಮೇಲೆ ಆಪಾದನೆಯನ್ನು ಮಾಡಿ ಈ ತನಿಖೆಯನ್ನು ಪ್ರಾರಂಭಿಸಲಾಯಿತೋ ಆ ತನಿಖೆಯನ್ನು ಪ್ರಾರಂಭಿಸಿದಂತಹ ಸಂದರ್ಭದಲ್ಲಿ ಅಂದಿನ ಮುಖ್ಯ ಮಂತ್ರಿಗಳು ಶ್ರೀಮಾನ್ ಕುಮಾರಸ್ವಾಮಿಯವರು. ಆದುದರಿಂದ ನಾನು ಈ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ, ಆ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳಾಗಿದ್ದವರು ಕುಮಾರಸ್ವಾಮಿಯವರು, ಮಾನ್ಯ ನಾಣಯ್ಯನವರು ಆ ಪಕ್ಷಕ್ಕೆ ಸೇರಿದವರಾದ್ದರಿಂದ ಅವರೇ ಇಲ್ಲಿ ಈ ಪ್ರಶ್ನೆಯನ್ನು ಎತ್ತಿದರು ಎಂಬುದಾಗಿ ತಾವು ಯಾರೂ ಭಾವಿಸಬೇಕಾದ ಅಗತ್ಯತೆ ಇಲ್ಲ. ಏಕೆಂದರೆ ಈ ಸದನದಲ್ಲಿ ಮಾನ್ಯ ಮಂತ್ರಿಗಳ ವಿರುದ್ಧ ಮಾಡಿರುವಂತಹ ಕೆಲವು ಆಪಾದನೆಗಳಿಗೆ ಸಂಬಂಧಪಟ್ಟಂತೆ ಕೂಡ ನಾನು ಇದೇ ರೀತಿ ನಿಯಮ 330ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ.

ರಾಮನಗರದಲ್ಲಿ ನಡೆಯುತ್ತಿರುವಂತಹ ಆ ದಂದೆ ಯಾವುದಿದೆ, ಅದರಲ್ಲಿ ಮಾನ್ಯ ಸಚಿವರು ಮತ್ತು ಅವರ ಸಹೋದರರ ಹೆಸರನ್ನು ಉಲ್ಲೇಖ ಮಾಡಿರುವಂತಹ ಸಂದರ್ಭದಲ್ಲಿ ಅದನ್ನು ಕೂಡ ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಬಹುಶಃ ಅದು ಇವೊತ್ತು ಅಥವಾ ನಾಳೆ ಚರ್ಚೆಗೆ ಬರಬಹುದು, ಆ ರೀತಿ ಅದು ಚರ್ಚೆಗೆ ಬಂದಂತಹ ಸಂದರ್ಭದಲ್ಲಿ ನಾನು ಆ ವಿಷಯದ ಬಗ್ಗೆ ಮಾತನಾಡುತ್ತೇನೆ.

ಇನ್ನೊಂದು ಹಗರಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಮಾನ್ಯ ಯೋಗೇಶ್ವರ್ ಅವರು ಆ ಸಂದರ್ಭದಲ್ಲಿ ಸಚಿವರಾಗಿರಲಿಲ್ಲ. ಆ ಹಗರಣದ ಬಗ್ಗೆ ಕೂಡ ನಾನು ಪ್ರಸ್ತಾಪಿಸಲಿದ್ದೇನೆ. ನನಗೆ ಬೇಕಾಗಿರುವುದೇನೆಂದರೆ, ನಾವು ವಿರೋಧ ಪಕ್ಷದಲ್ಲಿದ್ದಾಗ ನಿಷ್ಪಕ್ಷಪಾತವಾದಂತಹ ಪರಿಸ್ಥಿತಿಯಲ್ಲಿ ಈ ರಾಜ್ಯದ ಸಂಪತ್ತನ್ನು ರಕ್ಷಣೆ ಮಾಡಬೇಕಾದಂತಹ ಜವಾಬ್ದಾರಿಯನ್ನು ಹೊತ್ತು ಮಾನ್ಯ ಸಚಿವರೇನು ಆ ಸ್ಥಾನದಲ್ಲಿ ಕುಳಿತಿದ್ದಾರೆ, ಅವರು ಆ ಸ್ಥಾನದಲ್ಲಿ ಕುಳಿತ ಮೇಲೆ ಅವರ ಹೇಳಿಕೆ ಯಾವ ರೀತಿಯಾಗಿ ಬರಬೇಕಾಗಿತ್ತು? ಕೇವಲ 3 ತಿಂಗಳ ಅವಧಿಯಲ್ಲಿ ಒಬ್ಬ ಉಪ ಸಂರಕ್ಷಣಾಧಿಕಾರಿ ಅವೊತ್ತು ಆ ಜಾಗದಲ್ಲಿ ಕೆಲಸ ಮಾಡುತ್ತಿದ್ದವರು, ಅಂದಿನ ಮುಖ್ಯಮಂತ್ರಿಯವರು ಮಾಡಿರುವ ಆದೇಶದ ಹಿನ್ನೆಲೆಯಲ್ಲಿ ತಾವು ತನಿಖೆ ಮಾಡಿ ವರದಿಯನ್ನು ಸಲ್ಲಿಸಿ ಎಂದು ಹೇಳಿದರು. ಆ ತನಿಖಾ ವರದಿ ಏನಿದೆ ಅದು ಕೇವಲ 3 ತಿಂಗಳಲ್ಲಿ ಕೊಟ್ಟಿರುವಂತಹ ವರದಿ. ಆ ವರದಿಯ ಬಗ್ಗೆ ಇಷ್ಟನ್ನು ಮಾತ್ರ ನಾನು ಹೇಳುತ್ತೇನೆ, “ಆ ಪ್ರದೇಶದಲ್ಲಿ ಒಟ್ಟು 100 ಕಲ್ಲುಗಣಿಗಾರಿಕೆಗಳು ನಡೆಯುತ್ತಿವೆ, ಅವುಗಳಲ್ಲಿ ಕೇವಲ 22 ಕಲ್ಲುಗಣಿಗಾರಿಕೆಗಳಿಗೆ ಮಾತ್ರ ಸರ್ಕಾರದ ವತಿಯಿಂದ ಪರವಾನಗಿಯನ್ನು ಪಡೆಯಲಾಗಿದೆ. ಇನ್ನುಳಿದ 78 ಕಲ್ಲುಗಣಿಗಾರಿಕೆಗಳೆಲ್ಲವೂ ಸಹ ಅಕ್ರಮವಾಗಿ ನಡೆಯುತ್ತಿವೆ.” ಆ ವಿಚಾರ ಕೂಡ ವರದಿಯಲ್ಲಿದೆ, ನೀವೇ ಅವರ ಮೇಲೆ ಮೊಕದ್ದಮೆಗಳನ್ನು ದಾಖಲಿಸಿದ್ದೀರಿ, ನೀವೇ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ. “ಈ ಮೇಲಿನ 22 ಪ್ರಕರಣಗಳಲ್ಲಿ ಕನಕಪುರ ಹಾಗೂ ಸಾತನೂರು ವಲಯಗಳಲ್ಲಿ ಕ್ರಮವಾಗಿ 16 ಮತ್ತು 6 ಅರಣ್ಯ ಮೊಕದ್ದಮೆಗಳನ್ನು ಹೂಡಲಾಗಿದ್ದು 3571

ಘನ ಮೀಟರ್ ಪ್ರಮಾಣದ 420 ಅಲಂಕಾರಿಕ ಗ್ರಾನೈಟ್ ಕಲ್ಲುದಿಮ್ಮಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಇವುಗಳ ಮೌಲ್ಯ ರೂ.90.4 ಲಕ್ಷಗಳಾಗಿರುತ್ತವೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ರಹದಾರಿ ಪಡೆದು ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ, ರಹದಾರಿ ಪಡೆದಿರುವಂಥದ್ದೇ ಬೇರೆ ದಾರಿ, ಗಣಿಗಾರಿಕೆ ಮಾಡಿರುವಂಥದ್ದು ಅರಣ್ಯ ಪ್ರದೇಶದಲ್ಲಿ ಅದನ್ನು ರಹದಾರಿ ಇಲ್ಲದೆಯೇ ಸಾಗಾಣಿಕೆ ಮಾಡಲಾಗಿದೆ. 96,348 ಘನ ಮೀಟರ್ ಪ್ರಮಾಣದ 24.68 ಕೋಟಿ ರೂ. ಮೌಲ್ಯದ ಅಲಂಕಾರಿಕ ಗ್ರಾನೈಟ್ ಕಲ್ಲು ದಿಮ್ಮಿಗಳನ್ನು ಸಾಗಿಸಲಾಗಿದೆ. ಅದಾದ ನಂತರ ರಹದಾರಿಗಳಿಲ್ಲದೆ ಅರಣ್ಯ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆಯನ್ನು ನಡೆಸಿ, ರೂ.1,44,139 ಘನ ಮೀಟರ್ ಪ್ರಮಾಣದ ರೂ.37.00 ಕೋಟಿ ಮೌಲ್ಯದ ಅಲಂಕಾರಿಕ ಗ್ರಾನೈಟ್ ಕಲ್ಲುಗಳನ್ನು ಅಕ್ರಮವಾಗಿ ತೆಗೆದು ಸಾಗಿಸಲಾಗಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನನಗೆ ತಿಳಿದ ಮಟ್ಟಿಗೆ ಗಮನ ಸೆಳೆಯುವ ಸೂಚನೆಯಲ್ಲಿ ಕ್ಲಾರಿಫಿಕೇಶನ್ ಕೇಳಬಹುದೇ ವಿನಃ ಚರ್ಚೆಗೆ ಅವಕಾಶವಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:-** ಹಾಗಾದರೆ ಇದನ್ನು ಮುಚ್ಚಿ ಹಾಕುವುದಕ್ಕೆ ನಿಮ್ಮದು ಒಂದು ಪಾತ್ರವಿದೆಯೇ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ನಾನು ಮುಚ್ಚಾಕಿ ಎಂದು ಹೇಳಲೇ ಇಲ್ಲ. ಮಾನ್ಯ ಸಭಾಪತಿಯವರೇ, ತಾವು ತುಂಬಾ ದೊಡ್ಡ ಚರ್ಚೆಗೆ ಅವಕಾಶ ಕೊಡುತ್ತಿದ್ದೀರಿ, ಇದು ಗಮನ ಸೆಳೆಯುವ ಸೂಚನೆಯ ಚೌಕಟ್ಟಿನಲ್ಲಿ ಬರುವುದಿಲ್ಲ. ಅವರು ಬೇರೆ ರೂಪದಲ್ಲಿ ತಂದರೆ ನಮ್ಮದೇನು ಅಭ್ಯಂತರವಿಲ್ಲ. ಆದುದರಿಂದ ನಾನು Point of Order ಹೇಳಲಿಲ್ಲ. ಖಂಡಿತವಾಗಿ ಇದನ್ನು Point of Order ಆಗಿ ತೆಗೆದುಕೊಂಡರೆ there is no scope for discussion. ಅವರು ಕ್ಲಾರಿಫಿಕೇಶನ್ ಕೇಳಬೇಕು ಅಷ್ಟೆ. ಅವರು ಪ್ರಸ್ತಾಪ ಮಾಡಿರುವಂಥದ್ದು Calling Attention ನಲ್ಲಿ. ಆದಕಾರಣ ನಾನು Point of Order ಹೇಳಲಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:-** ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರೆ, ಈ ಸದನದಲ್ಲಿ ನಾನು ಸುಮಾರು ವರ್ಷದಿಂದ ನೋಡುತ್ತಿದ್ದೇನೆ. ಹತ್ತಾರು ವಿಷಯಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ, ಅವೆಲ್ಲವನ್ನೂ ನಿಯಮಗಳ ಅಡಿಯಲ್ಲಿಯೇ ಮಾಡಿರುವಂಥದ್ದಾ? ಸಾರ್ವಜನಿಕ ಸಮಸ್ಯೆಗಳು ಬಂದಾಗ, ರಾಜ್ಯದ ಸಮಸ್ಯೆಗಳು ಬಂದಾಗ ನಾವು ಚರ್ಚೆ ಮಾಡಲೇಬೇಕಾಗುತ್ತದೆ, ಅವಶ್ಯಕತೆ ಬಂದಾಗ ಮಾಡುತ್ತೇವೆ. ಒಂದು ವೇಳೆ ನಿಮಗೆ ಆರೂವರೆ ಗಂಟೆಯಾಗಿದೆ ಹೋಗಬೇಕು ಎಂದು ಬಯಸಿದರೆ ಮಾನ್ಯ ಸಭಾಪತಿಯವರ ಅನುಮತಿಯನ್ನು ಪಡೆದು ಹೋಗಬಹುದು. ನಾವು ಕೂಡುವುದಕ್ಕೆ ತಯಾರಿದ್ದೇವೆ. ಸರ್ಕಾರದ ವರದಿಯಲ್ಲಿ ಇರುವುದೇನೆಂದರೆ, ಈ ಮೇಲಿನ 22 ಗಣಿ ಉದ್ದಿಮೆದಾರರು ಸರ್ಕಾರಕ್ಕೆ ಒಟ್ಟು 64.15 ಕೋಟಿ ರೂ. ನಷ್ಟವನ್ನುಂಟು ಮಾಡಿದ್ದಾರೆ. ಇದು ಕೇವಲ ಮೂರು ತಿಂಗಳಿನಲ್ಲಿ ಕೊಟ್ಟಿರುವಂತಹ ವರದಿ. ಇದಾದ ಮೇಲೆ ಮಾನ್ಯ ಯು.ವಿ.ಸಿಂಗ್ ರವರು ಅಂದರೆ ಬಳ್ಳಾರಿಯಲ್ಲಿ ಈಗ ತನಿಖೆಯನ್ನು ನಡೆಸುತ್ತಿರುವಂಥ ಅಧಿಕಾರಿಯೇ ಇದಕ್ಕಿಂತ ಮುಂಚೆ ಅಂದರೆ 2006ನೇ ಇಸವಿಯಲ್ಲಿ ಇದರ ಬಗ್ಗೆ ಸಂಪೂರ್ಣವಾದಂತಹ ತನಿಖೆಯನ್ನು ಮಾಡಿ ವರದಿಯನ್ನು ಕೊಟ್ಟಿದ್ದಾರೆ. ದಯವಿಟ್ಟು ತಾವು ವರದಿಯನ್ನು ನೋಡಿದರೆ ಈ ಪ್ರದೇಶದಲ್ಲಿ 2007ರವರೆಗೆ ಎಷ್ಟು ದೊಡ್ಡ ಪ್ರಮಾಣದ ಕಲ್ಲು ಸಾಗಾಣಿಕೆ ಆಗಿದೆ ಎಂದು ತಿಳಿಯುತ್ತದೆ. ಇಲ್ಲಿ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ, ಪೂರ್ತಿ ಓದುವುದಿಲ್ಲ, ಒಂದನ್ನು ಮಾತ್ರ ಓದುತ್ತೇನೆ ಇದರಲ್ಲಿ ಹಣ ಎಷ್ಟು ದೊಡ್ಡ ಪ್ರಮಾಣದಲ್ಲಿ ದುರುಪಯೋಗ ಆಗಿರುವ ಬಗ್ಗೆ ಅವರು ಒಂದಿಷ್ಟು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರೇ ಹೋಗಿ ಸರ್ವೆ ಮಾಡಿಸಿ, Revenue Department, Mines and Geology Department and Forest Department ಈ ಎಲ್ಲಾ ಅಧಿಕಾರಗಳು ಹೋಗಿ ಸರ್ವೆ ಮಾಡಿರುವಂಥದ್ದು. ಒಟ್ಟು 484 ಗಣಿಗಾರಿಕೆಯ ಪ್ರಕರಣಗಳನ್ನು ಸರ್ವೆ ಮಾಡಿದ್ದಾರೆ. ಒಟ್ಟು ಅಳತೆ ಮಾಡಿದ ಗಣಿಗಾರಿಕೆ ವಿಸ್ತೀರ್ಣ 2,493 ಎಕರೆ ಜಮೀನು. ಅದರಲ್ಲಿ ಅರಣ್ಯ ಪ್ರದೇಶದಲ್ಲಿ ಮಾಡಿರುವಂತಹ ಅನಧಿಕೃತ ಗಣಿಗಾರಿಕೆ 471 ಎಕರೆ ಮತ್ತು ಗೋಮಾಳ ಪ್ರದೇಶದಲ್ಲಿ ಗಣಿಗಾರಿಕೆ ಮಾಡಿರುವಂಥದ್ದು 1,334

ಎಕರೆ, ಗೋಮಾಳ ಖರಾಬ್ ಪ್ರದೇಶದಲ್ಲಿ ಅತಿಕ್ರಮಣ ಗಣಿಗಾರಿಕೆ ವಿಸ್ತೀರ್ಣ 393.35 ಎಕರೆ, ಪಟ್ಟಾ ಪ್ರದೇಶದಲ್ಲಿ 687 ಎಕರೆ. ಒಟ್ಟು ವಿಸ್ತೀರ್ಣ 807.23 ಎಕರೆ. ಇದು 2007ನೇ ಇಸವಿಯವರೆವಿಗೆ ಆಗಿರುವಂಥದ್ದರಲ್ಲಿ ಒಟ್ಟಾರೆ ನಷ್ಟ ಆಗಿರುವುದು evaluate ಮಾಡಿದ್ದಾರೆ. it is more than Rs.800 Crores. ಇದು 2007 ರವರೆವಿಗೆ ಆಗಿರುವಂಥದ್ದು. 2007ರ ನಂತರ ಇದುವರೆವಿಗೆ ಅಂದರೆ 2011–12ನೇ ಸಾಲಿನವರೆಗೆ ಇವರಿಗೆಲ್ಲಾ ಲೀಸ್ ಕೊಟ್ಟಿರುವಂಥದ್ದು ಹತ್ತು ವರ್ಷ. ಬಳ್ಳಾರಿಯಲ್ಲಿ ನಮ್ಮ ಕರ್ನಾಟಕದ ಗಡಿ ಪ್ರದೇಶವನ್ನು ಆಂಧ್ರ ಪ್ರದೇಶಕ್ಕೆ ಸೇರಿರುವಂಥದ್ದು ಚರ್ಚೆ ಆಗಿದೆ. ಈಗ ಸಿ.ಬಿ.ಐ. ಅವರು ತನಿಖೆ ಮಾಡುತ್ತಿದ್ದಾರೆ. ಕರ್ನಾಟಕದ ಗಡಿ ಪ್ರದೇಶವನ್ನು ಅದರ ಎಲ್ಲಾ ಕಲ್ಲುಗಳನ್ನು ತೆಗೆದು, ಗಣಿ ಪ್ರದೇಶದಲ್ಲಿರುವಂತಹ ಸೂಚ್ಯಾಂಕಗಳನ್ನು ಸಹ ಬದಲಾವಣೆ ಮಾಡಿ ಅದನ್ನು ಆಂಧ್ರಪ್ರದೇಶದ ಒಳಗಡೆ ಸೇರಿಸಿ ಅಲ್ಲಿ ಗಣಿಗಾರಿಕೆ ಮಾಡಿ ಕೋಟ್ಯಾಂತರ ರೂಪಾಯಿ ಹಣವನ್ನು ಲಪಟಾಯಿಸಿರುವಂತಹ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಅದೇ ವಿಚಾರ ಇಲ್ಲಿಯೂ ಸಹ ನಡೆದಿರುವಂಥದ್ದನ್ನು ಇದೇ ವರದಿಯಲ್ಲಿ ಇದೇ ಯು.ವಿ.ಸಿಂಗ್‌ರವರು ನಮೂದಿಸಿದ್ದಾರೆ: "After proper survey of the boundaries, permanent carriage should be constructed. During the course of survey, it has been found that many original survey stone pillars have been shifted to the advantage of the encroachers. During investigation, some of the forest boundaries have been surveyed and marking has been done." ಯಾವುದು ಇದೆ ಅದನ್ನು shift ಮಾಡಿ ಇವರಿಗೆ ಕೊಟ್ಟಿರುವಂತಹ ಪರವಾನಗಿಯನ್ನು ಸೇರಿಸಿಕೊಂಡು ಹೊಡೆದಿರುವಂತಹ ಬಗ್ಗೆ ಇದರಲ್ಲಿ ವರದಿಯಾಗಿದೆ. ಈ ವರದಿ ನಿಮ್ಮ ಕೈಯಲ್ಲಿದೆ. ಇದಾದ ನಂತರ ಅತಿಕ್ರಮಣಕ್ಕೆ ಸಂಬಂಧಪಟ್ಟಂತಹ 22 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ನಂತರ 2007ರ ನಂತರ ಆ ಪ್ರಕರಣಗಳು ಎಲ್ಲವೂ ಸಹ ಅಲ್ಲಿಗೆ ಸತ್ತು ಹೋಯಿತು. ಯಾರೂ ಕೂಡ ಇದರ ಬಗ್ಗೆ ಗಮನ ಹರಿಸಲಿಲ್ಲ?

**ಶ್ರೀ ಸಿ.ಪಿ.ಯೋಗೀಶ್ವರ್ (ಅರಣ್ಯ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಈ ಇಲಾಖೆಯ ಸಚಿವನಾಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಎಲ್ಲಾ ಪ್ರಕರಣಗಳ ಬಗ್ಗೆ ಗಮನಹರಿಸಿ, ನ್ಯಾಯಾಲಯದಲ್ಲಿ ಪೆಂಡಿಂಗ್ ಇದ್ದಂತಹ ಮೊಕದ್ದಮೆಗಳನ್ನು ತೆಗೆದು, ಅಡ್ವೊಕೇಟ್‌ಗಳನ್ನು ನೇಮಿಸಿ ಈಗ ಅವುಗಳೆಲ್ಲವನ್ನು ಹೊರಗಡೆ ತೆಗೆಯುತ್ತಿದ್ದೇನೆ. ಹಾಗಾಗಿ ಮಾನ್ಯ ಸದಸ್ಯರು ಮಾಡುತ್ತಿರುವಂತಹ ಆಪಾದನೆ ಬಗ್ಗೆ ಒಂದು ಕ್ಲಾರಿಫಿಕೇಶನ್ ಕೊಡುವುದಕ್ಕೆ ಬಯಸುತ್ತೇನೆ. ನಮ್ಮ ಕುಟುಂಬದಲ್ಲಿ ಯಾವುದೇ ಗಣಿಗಾರಿಕೆಯನ್ನಾಗಲಿ, ಕ್ರಷರ್ ಆಗಲಿ ಮಾಡಿಲ್ಲ. ಇದರ ಅವಶ್ಯಕತೆಯೂ ನಮಗಿಲ್ಲ. ಕಾರಣ ನಾನು ಇದರ ಬಗ್ಗೆ ಮೊದಲಿನಿಂದಲೂ ವಿರೋಧವನ್ನು ಮಾಡಿಕೊಂಡು ಬಂದಿದ್ದೇನೆ. ಹಾಗಾಗಿ ನನ್ನ ಮೇಲಿರುವಂತಹ ಆರೋಪ ನಿರಾಧಾರವಾಗಿದ್ದು ಮತ್ತು ಸುಳ್ಳು ಆರೋಪ ಅದನ್ನು ಕ್ಲಾರಿಫೈ ಮಾಡುತ್ತೇನೆ. ಆದರೆ ನಾನು ಯಾವುದೋ ವೈಯಕ್ತಿಕ ಕಾರಣಕ್ಕಾಗಿ ಯಾರಿಗೋ ಹೆದರಿಕೊಳ್ಳುತ್ತಿದ್ದೇನೆ ಎನ್ನುವುದೆಲ್ಲಾ ಸುಳ್ಳು, ನನಗೆ ಆ ರೀತಿ ಯಾರದೇ ಭಯವಿಲ್ಲ. ನಾನು ಪ್ರಮಾಣ ವಚನ ಸ್ವೀಕಾರ ಮಾಡುವಾಗ ಏನು ಪ್ರಮಾಣ ಮಾಡಿದ್ದೆ ಅದೇ ರೀತಿ ಇವತ್ತು ನಿರ್ಭಯವಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದೇನೆ. ಆದರೆ ಇದು ಈಗಾಗಲೇ ನ್ಯಾಯಾಲಯದಲ್ಲಿ ಮೊಕದ್ದಮೆಗಳು ದಾಖಲಾಗಿದೆ, ಹಾಗೂ ಇನ್ನೂ ಕೆಲವು ಮೊಕದ್ದಮೆಗಳನ್ನೇ ಹಾಕಿಲ್ಲ, 72 ಕೇಸಿನಲ್ಲಿ ಮೊಕದ್ದಮೆಗಳನ್ನೇ ಹಾಕಿಲ್ಲ ಅದಕ್ಕೆ ಇಲಾಖೆಯಲ್ಲಿ ಅನುಮತಿಯನ್ನು ಕೇಳಿದ್ದಾರೆ. ಇಲಾಖೆ ಅನುಮತಿಯನ್ನು ಕೊಟ್ಟಿಲ್ಲ. ಈಗ ಎಲ್ಲವನ್ನೂ ನಾನು ತೆಗೆಯುತ್ತಿದ್ದೇನೆ. ಹಾಗಾಗಿ ಮುಂದಿನ ದಿನಗಳಲ್ಲಿ ಇದರ ಬಗ್ಗೆ ಸಮಗ್ರವಾದಂತಹ ವರದಿಯನ್ನು ಕೊಡುತ್ತೇನೆ.

**ಶ್ರೀ ಯಂ.ಸಿ. ನಾಣಯ್ಯ:-** ಸನ್ಮಾನ್ಯ ಸಭಾಪತಿಯವರೇ, ನಾನು ಇದನ್ನು ಕಳಿಸುವುದಕ್ಕೆ ಹೋಗುವುದಿಲ್ಲ. ಆದರೆ ಯಾವ ವಿಚಾರ ಬಳ್ಳಾರಿಗೆ ಸಂಬಂಧಪಟ್ಟಂತೆ ಬಂದಾಗ ಕಾಂಗ್ರೆಸ್, ಜೆಡಿಎಸ್ ಹಾಗೂ ಭಾರತೀಯ ಜನತಾ ಪಕ್ಷದವರೆಲ್ಲರೂ ನಿಸರ್ಗದ ಸಂಪತ್ತನ್ನು ಲೂಟಿ ಮಾಡುವಂತಹ

ಸಂದರ್ಭ ಬಂದಾಗ ನಾವೆಲ್ಲರೂ ಒಟ್ಟಾರೆಯಾಗಿ ಹೋರಾಟ ಮಾಡಬೇಕೆಂದು ಹೇಳಿದರು. ಆದಕಾರಣ ಮಾನ್ಯ ಸದಸ್ಯರೆಲ್ಲರಿಗೂ ತಿಳಿಸುವುದೇನೆಂದರೆ, ಇದೂ ಸಹ ನಿಸರ್ಗದ ಲೂಟಿಯೇ. ಇದು ಎಲ್ಲಿ ಬೇಕದರು ನಡೆಯಲಿ ಅಂದರೆ, ಕನಕಪುರ, ಚಾಮರಾಜನಗರ, ತುಮಕೂರು, ಚಿತ್ರದುರ್ಗ ಹಾಗೂ ಬಳ್ಳಾರಿಯಲ್ಲಿ ನಡೆಯಲಿ ಇದೆಲ್ಲಾ ನಿಸರ್ಗದ ಲೂಟಿಯೆ. ಆ ಲೂಟಿಯನ್ನು ತಡೆಗಟ್ಟಬೇಕಾದಂತಹ ಜವಾಬ್ದಾರಿ ನಮ್ಮ ಮೇಲಿದೆ. ನಾನು ನಿಮ್ಮನ್ನು (ಪಿ.ಸಿ.ಯೋಗೀಶ್ವರ್) ಮೆಚ್ಚುತ್ತೇನೆ. ಏಕೆಂದರೆ ನೀವು ಧೈರ್ಯವಾಗಿ ಈ ಕೆಲಸಕ್ಕೆ ಕೈ ಹಾಕಿದ್ದೀರಿ. ಆದರೆ ಇದು ತಾರ್ಕಿಕ ಹಂತಕ್ಕೆ ಹೋಗಬೇಕಲ್ಲವೆ, ಅಡ್ಡ ದಾರಿ ಹಿಡಿಯಬಾರದಲ್ಲವೇ? ಇನ್ನೊಂದು ವಿಷಯವೇನೆಂದರೆ, ಮಾನ್ಯ ಕಾಗೇರಿಯವರೇ, ನಿಮ್ಮನ್ನು ಸಭಾ ನಾಯಕರೆಂದು ಕರೆಯಲೆ ಅಥವಾ ಏನೆಂದು ಕರೆಯಲಿ, ಏಕೆಂದರೆ ಯಾವುದಾದರು ಒಂದು ಹುದ್ದೆ ಇರಬೇಕಲ್ಲವೆ ಅಥವಾ ತಾವು ಉಪನಾಯಕರೆ? ಉಪನಾಯಕರು ಅಲ್ಲ.

**ಸಭಾಪತಿಯವರು:–** ಈಗ ನಾವು ಒಂದು ಪ್ರಾಕ್ಟಿಕಲ್ ಅರೇಂಜ್‌ಮೆಂಟ್ ಮಾಡಿದ್ದೇವೆ. ಕಾನೂನಿನ ಪ್ರಕಾರ ನಮ್ಮ ಸದನದ ನಾಯಕರು ಮಾನ್ಯ ಮುಖ್ಯಮಂತ್ರಿಗಳು. ಆದರೆ ಅವರು ಇವತ್ತಿನ ದಿವಸ ಕೆಳಮನೆಯಲ್ಲಿ ಬಜೆಟ್ ಹಾಗು ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟಂತೆ ಇರುವ ಕಾರಣಕ್ಕಾಗಿ ಯಾರಾದರು ಒಬ್ಬ ಅವರ ಸಹದ್ಯೋಗಿ ಸಚಿವರೊಬ್ಬರಿಗೆ ವಿಧಾನ ಪರಿಷತ್ತಿನ ಕಾರ್ಯ ವಿಧಾನವನ್ನು ನಿಭಾಯಿಸುವುದಕ್ಕೆ ಹೇಳುತ್ತಾರೆ. ಆ ರೀತಿ ಈ ಸದನ ಪೂರ್ತಿ ನಮ್ಮ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ನಿಭಾಯಿಸುತ್ತಾರೆಂದು ನನಗೆ ಹೇಳಿರುತ್ತಾರೆ.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, then I will call him as the Floor Management Minister.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಹಾಗೂ ಮಾನ್ಯ ನಾಣಯ್ಯನವರೇ ತಮ್ಮಿಬ್ಬರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ,

ನಿಗಿರುವಂತಹ ಸೀನಿಯಾರಿಟಿಯಲ್ಲಿ ಇದಕ್ಕೆ ಏನು ಹೇಳಬೇಕು ಹೇಳಿ, ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಏಕೆ ಹೇಳಿದೆ ಎಂದರೆ, ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಹ ನನಗೆ ಇದರ ವರದಿ ಬಂದಿದೆ, ಇದರ ಬಗ್ಗೆ ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ. ಹಾಗಾದರೆ ಉತ್ತರದಲ್ಲಿ ಇದೆಲ್ಲವನ್ನು ತೋರಿಸಬೇಕಾಗಿತ್ತಲ್ಲವೇ? ಉತ್ತರ ಕೊಡುವ ಸಮಯದಲ್ಲಿ ಸರ್ಕಾರವು ಏನು ಮಾಡಲು ಬಯಸಿದೆ ಮತ್ತು ಏನು ಮಾಡಲು ಹೊರಟಿದೆ ಎಂಬ ಬಗ್ಗೆ ಉತ್ತರದಲ್ಲಿ ಸಂಪೂರ್ಣವಾಗಿ ತಿಳಿಸಬೇಕಾಗುತ್ತದೆ. ಉತ್ತರವನ್ನು ಅರ್ಧರ್ಧ ಏಕೆ ಕೊಡುತ್ತಾರೆ? ಈ ಉತ್ತರವನ್ನು ಓದಿದ ಮೇಲೆ ಸ್ವಲ್ಪ ಮಟ್ಟಿಗೆ ಶ್ರೀ ಯೋಗೇಶ್ವರ್‌ರವರು ಎಲ್ಲೋ ಒಂದು ಕಡೆ ಹೆದರಿಕೊಂಡಿದ್ದಾರೆ ಎಂಬ ಅನುಮಾನ ಬಂದುಬಿಟ್ಟಿದೆ. ಇಂತಹ ಅನುಮಾನ ನಮ್ಮ ಮನಸ್ಸಿನಲ್ಲಿ ಬರದಿರುವಂತಹ ಪರಿಸ್ಥಿತಿಯನ್ನು ಅವರು ನಿರ್ಮಾಣ ಮಾಡಿಕೊಳ್ಳ ಬೇಕಾಗುತ್ತದೆ. 2007ರಲ್ಲಿ ವಿಷಯವು ಗಮನಕ್ಕೆ ಬಂದಿದೆ, 10 ವರ್ಷ ಗಳವರೆಗೆ ಲೀಸ್ ಕೊಟ್ಟಿದ್ದಾರೆ. ಶ್ರೀ ಯು.ವಿ.ಸಿಂಗ್‌ರವರ ವರದಿಯಲ್ಲಿ ಎಲ್ಲವೂ ಅಕ್ರಮ ಎಂದು ಬಂದ ಮೇಲೆ ಅವೆಲ್ಲವನ್ನು 2000ನೇ ಇಸವಿಯಲ್ಲಿ ಲೀಸ್‌ಗೆ ಕೊಟ್ಟಿದ್ದಾರೆ. ಅಂದರೆ 10 ವರ್ಷಗಳು ಕಳೆದುಹೋಯಿತು. 2007 ರಿಂದ 2011 ರವರೆಗೆ ಮಾಡಿರುವ ಗಣಿ ಕೈಗಾರಿಕೆ ಮತ್ತು ಸುಮಾರು 474 ಎಕರೆ ಪ್ರದೇಶದಲ್ಲಿ ನಡೆದಿರುವ ornamental stones ನ evaluation ಇನ್ನೂ ಮಾಡಿಲ್ಲ. ಏಕೆಂದರೆ ಕೇವಲ 6 ತಿಂಗಳಲ್ಲಿ ಸುಮಾರು 76 ಕೋಟಿ ಗಣಿಗಾರಿಕೆ ನಡದಿದೆ ಎಂದು ಹೇಳಿದ ಮೇಲೆ 4 ವರ್ಷಗಳ ಗಣಿಗಾರಿಕೆಗೆ ಎಷ್ಟಾಗುತ್ತದೆ? ಶ್ರೀ ಯು.ವಿ.ಸಿಂಗ್‌ರವರ ವರದಿಯಲ್ಲಿ ಸುಮಾರು 800 ಕೋಟಿ ರೂಪಾಯಿಗಳವರೆಗೆ ತಲುಪುತ್ತದೆ ಎಂದು ಹೇಳಿದ ಮೇಲೆ 2011 ರ ಡಿಸೆಂಬರ್‌ವರೆಗೂ ಮೌಲ್ಯಮಾಪನ ಮಾಡಬೇಕಾಗುತ್ತದೆ. ಆದರೆ ಇದನ್ನು ಇಲ್ಲಿಯವರೆಗೂ ಮಾಡಿಲ್ಲ. ಕೊನೆಗೆ

ಮಾನ್ಯ ಮಂತ್ರಿಯವರು ಹೇಳರುವ ಮಾತುಗಳು ಪತ್ರಿಕೆಗಳಲ್ಲಿ ಬಂದಿದೆ. ಮಾನ್ಯ ಮಂತ್ರಿಗಳು ಆ ಸ್ಥಳವನ್ನು ಪರಿಶೀಲನೆ ಮಾಡಲು ಅಧಿಕಾರಿಗಳ ಜೊತೆ ಹೋದ ಸಂದರ್ಭದಲ್ಲಿ ಅವರ ಸರ್ಕಾರದ ಇಬ್ಬರು ಪ್ರಭಾವಿ ಮಂತ್ರಿಗಳು ದೂರವಾಣಿ ಕರೆ ಮಾಡಿ "ದಯವಿಟ್ಟು ಇದನ್ನು ಮುಂದುವರೆಸಿಕೊಂಡು ಹೋಗಬೇಡಿ, ಅದನ್ನು ಅಲ್ಲಿಗೆ ನಿಲ್ಲಿಸಿ" ಎನ್ನುವ ಮಾತುಗಳನ್ನು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಅಲ್ಲಿಗೆ ಹೋದ ಸಂದರ್ಭದಲ್ಲಿ ಅವರ ಮೇಲೆ ಹಲ್ಲೆ ಮಾಡುವ ಪ್ರಯತ್ನ ಬೇರೆ ದುಷ್ಕರ್ಮಿಗಳಿಂದ ನಡೆದಿದೆ. ಒಬ್ಬ ಮಂತ್ರಿ ಪರಿಶೀಲನೆಗೆ ಹೋದ ಸಂದರ್ಭದಲ್ಲಿ ಅವರನ್ನು ದೂರವಾಣಿ ಮುಖೇನ ಸಂಪರ್ಕ ಮಾಡಿ, ಅದನ್ನು ಮುಂದುವರೆಸಬೇಡಿ ಎಂಬ ಪರಿಸ್ಥಿತಿ ಆಡಳಿತ ಪಕ್ಷದಿಂದ ನಿರ್ಮಾಣ ವಾಗಿದ್ದರೆ, ದಯವಿಟ್ಟು ಆ ಇಬ್ಬರು ಮಂತ್ರಿಗಳು ಅಥವಾ ಪ್ರಭಾವಿಗಳ ಹೆಸರನ್ನು ಬಹಿರಂಗ ಮಾಡಬೇಕಾಗಿತ್ತು. ಅವರೂ ಕೂಡ ರಾಜೀನಾಮೆ ಕೊಡಬೇಕಾಗುತ್ತದೆ ಮತ್ತು ಅವರ ಮೇಲೆ ಮೊಕದ್ದಮ್ಮೆ ದಾಖಲು ಮಾಡಬೇಕಾಗುತ್ತದೆ. ಅವರು ಅದರಲ್ಲಿ ಶಾಮೀಲಾಗಿರಲೂಬ ಹುದು. ದೂರವಾಣಿಯಲ್ಲಿ ಮಾತನಾಡಿ ಈ ವಿಷಯವನ್ನು ಮುಂದುವರೆಸಬೇಡಿ ಎನ್ನುವ ಪರಿಸ್ಥಿತಿ ನಿರ್ಮಾಣ ಮಾಡಿದವರ ಬಗ್ಗೆ ನೇರವಾಗಿ ಹೇಳಬೇಕಾಗಿತ್ತು. ಇವತ್ತಿಗೂ ಅದನ್ನು ಸದನದಲ್ಲಿ ಹೇಳಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, with all respects to you, ಅವರು ಹೇಳಿರುವ ಮಾತುಗಳನ್ನು ಒಪ್ಪಿಕೊಂಡು, ಇಬ್ಬರ ಹೆಸರುಗಳನ್ನು ಹೇಳಬೇಕಾಗುತ್ತದೆ. I demand the Chief Minister that they should be

asked to resign straightway. They shall not remain in office even for a day, till such time the whole enquiry is over. ಇದು ನನ್ನ ಬೇಡಿಕೆಯಾಗಿದೆ ಮತ್ತು ಅಧಿಕಾರಿಗಳ ಮೇಲೆ ಹಲ್ಲೆ ಮಾಡುವ ಪ್ರಯತ್ನದ ಬಗ್ಗೆ ಕೂಡ ವರದಿಯಾಗಿದೆ. ಇದರ ಬಗ್ಗೆ ಇಲ್ಲಿಯವರೆಗೂ ಏಕೆ ಕ್ರಮ ಕೈಗೊಳ್ಳಲಿಲ್ಲ? ಅವರನ್ನು ಬಂಧಿಸುವ ಪ್ರಯತ್ನವನ್ನು ಏಕೆ ಮಾಡಲಿಲ್ಲ ಎಂದು ಕೇಳಬಯಸುತ್ತೇನೆ. 'Republic' ಎಂದರೆ ಕರ್ನಾಟಕದಲ್ಲಿ ಏನು? ಒಂದು ಕಾಲದಲ್ಲಿ ನಮಗೂ ಕೂಡ ಬಳ್ಳಾರಿಗೆ ಬನ್ನಿ ನೋಡಿಕೊಳ್ಳುತ್ತೇವೆ

ಎಂಬ ಪರಿಸ್ಥಿತಿ ನಿರ್ಮಾಣವಾಗಿದ್ದನ್ನು ಬೆಳಗಾಂ ಅಧಿವೇಶನದಲ್ಲಿ ನೋಡಿದ್ದೀರಿ. ಬಹುಶಃ ಇಂತಹ ಪರಿಸ್ಥಿತಿಯಲ್ಲಿ ಅವರೆಲ್ಲ ಎಲ್ಲಿ ಹೋಗಿ ತಲುಪಿದ್ದಾರೆ ಎಂಬುದನ್ನು ಸ್ವಲ್ಪಮಟ್ಟಿಗೆ ಗಮನದಲ್ಲಿಟ್ಟುಕೊಂಡು, ಇವರು ಯಾರೆಲ್ಲಾ ನಿಸರ್ಗದ ಸಂಪತ್ತನ್ನು ಲೂಟಿ ಮಾಡಿದ್ದಾರೆ, ಮಾನ್ಯ ಮಂತ್ರಿಗಳು ಹೇಳಿದಂತೆ ಅವರದೇ ಆದ 'republic' ಎನ್ನುವಂತಹ ಪರಿಸ್ಥಿತಿ ನಿರ್ಮಾಣ ಮಾಡಿಕೊಂಡು ಯಾರಿಗೂ ಅವಕಾಶ ಇಲ್ಲದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ.

ಇನ್ನು ಇದರ ಜೊತೆಯಲ್ಲಿ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡಲು ಅಂದರೆ ಮೀಸಲು ಅರಣ್ಯದಲ್ಲಿ ಗಣಿಗಾರಿಕೆ ಮಾಡಲು ಅವಕಾಶ ಇಲ್ಲ ಎಂದು ನಾನು ಹೇಳುತ್ತೇನೆ. ಹಾಗಾದರೆ ಅದಕ್ಕೆ ಅನುಮತಿ ನೀಡಿದವರ್‍ಯಾರು? ಮಾನ್ಯ ಸಭಾಪತಿಯವರೇ, ಅನುಮತಿಯನ್ನು ಹೇಗೆ ಕೊಟ್ಟರೆಂದರೆ, 'No Objection Certificate' ಕೊಟ್ಟರು. ಅರಣ್ಯ ಪ್ರದೇಶವನ್ನು "ಅರಣ್ಯ ಪ್ರದೇಶ ಅಲ್ಲ, this is not a forest land, as such we have no objection" ಎನ್ನುವ ಪ್ರಮಾಣ ಪತ್ರವನ್ನು ಕೊಟ್ಟಿರುವ ಬಗ್ಗೆ ಯು.ವಿ.ಸಿಂಗ್‌ರವರ ವರದಿಯಲ್ಲಿ ಬಂದಿದೆ. ಅಲ್ಲದೇ ಅರಣ್ಯ ಪ್ರದೇಶವನ್ನು ಅರಣ್ಯ ಪ್ರದೇಶ ಅಲ್ಲ ಎಂದು ಪ್ರಮಾಣ ಕೊಟ್ಟಿರುವ ಅರಣ್ಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದೂ ಸಹ ಯು.ವಿ.ಸಿಂಗ್‌ರವರ ವರದಿಯಲ್ಲಿ ಕೊಟ್ಟಿದ್ದಾರೆ. ಈ ಅಧಿಕಾರಿಗಳು ಯಾರ್‍ಯೆಂದು ಪತ್ತೆ ಹಚ್ಚಿದ್ದಾರೆಯೇ? Who are all the Officers who gave this N.O.C., in respect of the forest land alleging that this is not a forest land? ಇದರ ಜೊತೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಹಾಗೂ ಇತರ ಜನರಿಗೆ 2-3 ಎಕರೆಗಳನ್ನು grant ಮಾಡುವಾಗ, ಆ ಭೂಮಿಯೆಲ್ಲವೂ cultivable land ಆಗಿದ್ದು, ಅಲ್ಲಿ ಯಾವುದೆ ರೀತಿಯ ಗ್ರಾನೈಟ್ ಇಲ್ಲ. ಆದರೆ ಪೋಡಿ ಮಾಡುವ ಸಂದರ್ಭದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಆ ಜಾಗದ ಸರ್ವೆ ನಂಬರ್‌ಗೆ ಅರಣ್ಯ ಇಲಾಖೆಯ ಸರ್ವೆ ನಂಬರ್‌ಗಳನ್ನು ಪೋಡಿ ಮಾಡಿಸಿ, ಅದಕ್ಕೆ ಆಕಾರಬಂದನ್ನು ಮಾಡಿಬಿಟ್ಟಿದ್ದಾರೆ. ಜಾಗ ಮಂಜೂರಾಗಿರುವವರು

cultivate ಮಾಡುತ್ತಿದ್ದಾರೆ. ಆದರೆ ಅದೇ ಪ್ರದೇಶದಲ್ಲಿ ಗಣಿಗಾರಿಕೆಯೂ ಆಗುತ್ತಿದೆ. ಪೋಡಿ ಮಾಡುವಾಗ ಪ್ಲಾನ್ ಅನ್ನು ಬದಲಾವಣೆ ಮಾಡಿ ಸರ್ವೆ ನಂಬರನ್ನು ಅಳವಡಿಸಿ ಗಣಿಗಾರಿಕೆ ಮಾಡಲು ಅವಕಾಶ ಮಾಡಿದ್ದಾರೆ. ಇದನ್ನು ಕೂಡ ವರದಿಯಲ್ಲಿ ತಿಳಿಸಿದ್ದಾರೆ. ಅಂದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಶಾಮೀಲಾಗಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಳ್ಳಬೇಕಲ್ಲವೇ? ನಾನು ಒಂದನ್ನು ಹೇಳುತ್ತೇನೆ, ಅರಣ್ಯ ಇಲಾಖೆಯ ಅಧಿಕಾರಿಗಳು ಮೀಸಲು ಅರಣ್ಯ ಜಾಗವನ್ನು ಮೀಸಲು ಅರಣ್ಯ ಅಲ್ಲ ಎಂದು ಬಹುಶಃ ಅದನ್ನು ಕಂದಾಯ ಭೂಮಿ ಅಥವಾ ಪಟ್ಟಾ ಭೂಮಿ ಎಂದು ಹೇಳಿ ಪ್ರಮಾಣ ಪತ್ರಗಳನ್ನು ನೀಡಿ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡಲು ಅವಕಾಶ ಕೊಟ್ಟ ಅಧಿಕಾರಿಗಳ ವಿರುದ್ಧ ಇಲ್ಲಿಯವರೆಗೆ ಏಕೆ ಕ್ರಮ ಕೈಗೊಳ್ಳಲಿಲ್ಲ? ಯು.ವಿ.ಸಿಂಗ್‌ರವರ ವರದಿ ಬಂದು 6 ವರ್ಷಗಳು ಕಳೆದಿವೆ, 6 ವರ್ಷಗಳು ಕಳೆದರೂ ಈ ವರದಿಗೆ ಕಿಂಚಿತ್ ಬೆಲೆ ಕೊಡದಿರುವ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ. It's such a beautiful report. ಆ ವರದಿಯನ್ನು ನಾನು ನೋಡಿದ್ದು, ನಮಗಿರುವ ಅಧಿಕಾರ ಇದ್ದೇ ಇದೆ. ಮಾಹಿತಿ ಹಕ್ಕು ಕಾಯ್ದೆಯಡಿ ಎಲ್ಲವೂ ಹೊರಗಡೆ ಬಂದಿದೆ. ದಯವಿಟ್ಟು ನಾನು ಹೇಳುವುದೇನೆಂದರೆ, ಯಾವುದೇ ಕಾರಣದಿಂದ ಹತಾಶರಾಗಬಾರದು ಅವರ ಮೇಲಿನ ಆಪಾದನೆಗಳಿದ್ದರೆ ಅವುಗಳನ್ನು ಎದುರಿಸಲಿ

**ಶ್ರೀ ಸಿ.ಪಿ.ಯೋಗೇಶ್ವರ (ಅರಣ್ಯ ಸಚಿವರು):-** ಮಾನ್ಯ ಸಭಾಪತಿಯವರೇ, R.F.O., ಮತ್ತು A.C.F. ಅವರುಗಳನ್ನು ಅಮಾನತ್ತು ಮಾಡಿದ್ದೇನೆ. ಇದರ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತಿದ್ದೇನೆ ಮತ್ತು ಬಳ್ಳಾರಿಯಲ್ಲಿ ಇದ್ದ ಶ್ರೀ ಪ್ರಣಾವತ್ ಎಂಬ ದಕ್ಷ D.F.O., ಅವರನ್ನು ಹಾಕಿದ್ದೇನೆ.

**ಶ್ರೀ ಯಂ.ಸಿ.ನಾಣಯ್ಯ:-** ನಾನು ಮಾನ್ಯ ಮಂತ್ರಿಗಳನ್ನು ಕೇಳುವುದೇನೆಂದರೆ, ಈ ವಿಚಾರವನ್ನು ಅವರ ಅಧಿಕಾರಿಗಳಿಂದ ತನಿಖೆ

ಮಾಡಿಸಿದರೆ ಆಗುವುದಿಲ್ಲ. ಮಾನ್ಯ ಮಂತ್ರಿಗಳು ಹೇಳಿರುವಂತೆ ಬಳ್ಳಾರಿ ರೀತಿಯ 'Republic' ಆದರೆ ನಿಷ್ಪಕ್ಷಪಾತವಾಗಿ ತನಿಖೆ ಮಾಡಬೇಕೆಂದು ನನ್ನ ಬೇಡಿಕೆ ಇದೆ. ಬಹುಶಃ 2011ರೊಳಗೆ ಸುಮಾರು 470 ಅಥವಾ 500 ಎಕರೆಯಷ್ಟು ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡಿ, ಅದರಲ್ಲೂ ಆ ಪಿಂಕ್ ಗ್ರಾನೈಟ್ ಎಲ್ಲವೂ ಬೆಂಗಳೂರಿನಲ್ಲಿರುವ ಗ್ರಾನೈಟ್ ಪಾಲಿಷಿಂಗ್ ಸೆಂಟರ್‌ಗಳಿಗೆ ಸಾಗಾಣಿಕೆಯಾಗಿದೆ. ನಂತರ ಅಲ್ಲಿಂದ ಬೇರೆ ಕಡೆಗೆ ರಫ್ತಾಗಿದೆ. The total estimated value ಸುಮಾರು 3 ರಿಂದ 4 ಸಾವಿರ ಕೋಟಿ ರೂಪಾಯಿಗಳು ಇದೊಂದೇ ಜಾಗದಿಂದ ಆಗಿದೆ. ಆದ್ದರಿಂದ, I really feel, ಇದನ್ನು ತನಿಖೆ ಮಾಡಲು ಅವರ ಅಧಿಕಾರಿಗಳು ಅಥವಾ ಪೊಲೀಸರಿಂದ ಆಗುವುದಿಲ್ಲ ಎಂದು ನನಗೆ ಭಾಸವಾಗಿದೆ. I want the whole matter to be referred to the C.B.I., ಇದಕ್ಕೆ ಕೊಡಲು ಏಕೆ ಧೈರ್ಯ ಮಾಡುವುದಿಲ್ಲ? ಬಳ್ಳಾರಿಯಲ್ಲಿ ಸಿಬಿಐ ತನಿಖೆ ಆಗಿ ಎಲ್ಲಾ ವಿಷಯಗಳು ಹೊರಗೆ ಬಂದವು. ಅದೇ ರೀತಿ ಇದನ್ನು ಸಿಬಿಐಗೆ ರೆಫರ್ ಮಾಡಬೇಕು. ಬಹಳ ದೊಡ್ಡ ದೊಡ್ಡ ಪ್ರಭಾವಿ ಶಕ್ತಿಗಳು ಕೈಗೂಡಿದಾಗ ಯಾವುದೂ ನಡೆಯುವುದಿಲ್ಲ. ಬಹುಶಃ ಸಚಿವರು ಅದಕ್ಕೆ ತಲೆಬಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ನಾವು ನೋಡಿದ್ದೇವೆ. ಕೆಲವು ಸಂದರ್ಭದಲ್ಲಿ ವಿರೋಧ ಪಕ್ಷದಲ್ಲಿರುವವರು ಆಡಳಿತ ಪಕ್ಷದಲ್ಲಿರುವವರ ಜೊತೆ ಶಾಮೀಲಾಗಿ ಬಿಡುತ್ತಾರೆ. ಅಲ್ಲದೇ, ಆಡಳಿತ ಪಕ್ಷದವರನ್ನು ಹಾಗೂ ವಿರೋಧ ಪಕ್ಷದವರನ್ನು floor management ಮಾಡುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಬಿಟ್ಟಿದ್ದಾರೆ. ಬಹುಶಃ ಅವರು ಅಂತಹ ಪರಿಸ್ಥಿತಿಯನ್ನು ಮಾಡುವುದಿಲ್ಲ ಎಂದು ನಿರ್ಮಾಣ ಮಾಡುವುದಾದರೆ, ನಾನು ಮಾನ್ಯ ಕಾಗೇರಿಯವರನ್ನು ವಿನಂತಿಸುವುದೇನೆಂದರೆ, kindly let him convey to the Chief Minister. Let not the Chief Minister take the bad name. Let him straight away refer this matter to the C.B.I. Let the whole thing come out. This is my demand. ಸುಮಾರು 5 ಸಾವಿರ ಕೋಟಿ ರೂಪಾಯಿಗಳ ದೊಡ್ಡ ಹಗರಣವನ್ನು ಇವರಿಂದ ಪತ್ತೆ ಹಚ್ಚಲು

ಆಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದುಬಿಟ್ಟಿದ್ದೇನೆ. ಬಹುಶಃ ಎಲ್ಲೋ ಒಂದು ಕಡೆ ಅವರು ಆಂತರಿಕವಾಗಿ ಅಂತರ್ಯದಲ್ಲಿ ಹೆದರಿಕೊಂಡಿದ್ದಾರೆ. ಆದ್ದರಿಂದ ಹೆದರಿಕೆ ಬೇಡ, ಸಿಬಿಐಗೆ ಕೊಡಿ ಎಂದು ವಿನಂತಿಸುತ್ತೇನೆ.

**ಶ್ರೀ ಸಿ.ಪಿ.ಯೋಗೇಶ್ವರ್:-** ಈ ವಿಷಯವಾಗಿ ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿ, ನಾಳೆ-ನಾಳಿದ್ದರೊಳಗೆ ಸಭೆಗೆ ಉತ್ತರವನ್ನು ಕೊಡುತ್ತೇನೆ.

**(ಆ) ಕಂದಾಯ ಇಲಾಖೆಯಲ್ಲಿ ಕಳೆದ 33 ವರ್ಷಗಳಿಂದ ಗ್ರಾಮ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ 10 ಸಾವಿರಕ್ಕೂ ಹೆಚ್ಚಿನ ಸಿಬ್ಬಂದಿಗಳನ್ನು ಖಾಯಂಗೊಳಿಸುವ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಕಳೆದ 30 ವರ್ಷಗಳಿಂದ ಕಂದಾಯ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಗ್ರಾಮ ಸಹಾಯಕರು ತಮ್ಮ ಹುದ್ದೆಯ ಖಾಯಂಯಾತಿ ಮತ್ತು ಕನಿಷ್ಠ ವೇತನ ಕೂಲಿಗಾಗಿ ಆಗ್ರಹಿಸುತ್ತಲೇ ಇದ್ದಾರೆ. ಸರ್ಕಾರ ಬಡವರ ಕಲ್ಯಾಣ ಯೋಜನೆಯನ್ನು ಪ್ರತಿ ದುರ್ಬಲ ಫಲಾನುಭವಿಗೆ ತಲುಪಿಸುವಲ್ಲಿ ಮತ್ತು ಕಡು ಬಡವರನ್ನು ಗುರುತಿಸುವಲ್ಲಿ ಗ್ರಾಮ ಸಹಾಯಕರ ಪಾತ್ರ ಮಹತ್ತರವಾದುದು. ಕಂದಾಯ ಇಲಾಖೆಯ ಕಟ್ಟ ಕಡೆಯ ಸಿಬ್ಬಂದಿಯಾಗಿ ಗ್ರಾಮಗಳ ಬಡವರ ಮತ್ತು ಸರ್ಕಾರದ ಮಧ್ಯೆ ಕೊಂಡಿಯಾಗಿ ಶ್ರಮವಹಿಸಿ ದುಡಿಯುತ್ತಿರುವ ಗ್ರಾಮ ಸಹಾಯಕರ ಮೊರೆ ನಿಜಕ್ಕೂ ಅರ್ಥಪೂರ್ಣವಾಗಿದೆ. ರಾಜ್ಯದ ಸರ್ವೋಚ್ಚ ನ್ಯಾಯಾಲಯವೂ ಸದರಿ ಸಿಬ್ಬಂದಿಗಳನ್ನು ಮಾನವೀಯ ನೆಲೆಯಲ್ಲಿ ಖಾಯಂಗೊಳಿಸಲು ಸೂಚಿಸಿದೆ. ದುರಾದೃಷ್ಟಕ್ಕೆ ರಾಜ್ಯದ 10,450 ಗ್ರಾಮ ಸಹಾಯಕರ ಬದುಕು ಸರ್ಕಾರಿ ಜೀತದಾಳುಗಳಂತಾಗಿದೆ ಎಂದು ಮಾಧ್ಯಮಗಳು ಬಣ್ಣಿಸಿವೆ. ರಾಜ್ಯ ಸರ್ಕಾರ ಕಳೆದ ವರ್ಷದ ಬಜೆಟ್‌ನಲ್ಲಿ ಗ್ರಾಮ ಸಹಾಯಕರ ಮಾಸಿಕ ವೇತನವನ್ನು 3,000 ರೂಪಾಯಿಗಳಿಂದ 3,500 ರೂಪಾಯಿಗಳಿಗೆ ಹೆಚ್ಚಿಸಿದ್ದು ಬಿಟ್ಟರೆ ಈ ನತದೃಷ್ಟ ಸಿಬ್ಬಂದಿಗಳ ಬದುಕಿಗೆ ಯಾವುದೇ ಭದ್ರತೆಯನ್ನು ನೀಡಿಲ್ಲ. ಕೆಲವು ಜಿಲ್ಲೆಗಳಲ್ಲಂತೂ ಇಲಾಖೆಗಳ ಹಿರಿಯ

ಅಧಿಕಾರಿಗಳ ಮನೆ ಕೆಲಸಕ್ಕೂ ಈ ಬಡ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತದೆ ಎಂಬ ಕಳವಳಕಾರಿ ದೂರುಗಳು ಬರುತ್ತವೆ. ಈ ಮಧ್ಯೆ ತಮ್ಮ ಕರ್ತವ್ಯದ ಅವಧಿಯಲ್ಲೇ ದುರ್ಮರಣಕ್ಕೀಡಾದ ಸಿಬ್ಬಂದಿಗಳಿಗೆ ಸರ್ಕಾರದಿಂದ ಯಾವ ಸಹಾಯವೂ ಸಿಕ್ಕಿಲ್ಲವೆಂದು ಗ್ರಾಮ ಸಹಾಯಕರು ಕೊರಗುತ್ತಾರೆ.

ಮಾನ್ಯ ಸಭಾಪತಿಯವರೇ, ದಯವಿಟ್ಟು ಗಮನಿಸಿ, ತಪ್ಪಾಗಿ ಭಾವಿಸಬೇಡಿ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ದುಡಿಯುವ ಕೂಲಿ ಕಾರ್ಮಿಕರ ಸಂಬಳಕ್ಕಿಂತಲೂ ಗ್ರಾಮ ಸಹಾಯಕರ ವೇತನ ಕಡಿಮೆ ಇದೆ ಎಂಬುದನ್ನು ಸರ್ಕಾರ ಗಮನಿಸಬೇಕು. ಜಿಲ್ಲಾಧಿಕಾರಿಯಿಂದ ಪ್ರಾರಂಭವಾಗಿ ಗ್ರಾಮ ಲೆಕ್ಕಿಗನವರೆಗೆ ಎಲ್ಲಾ ಅಧಿಕಾರಿಗಳು ಹೇಳಿದ ಚಾಕರಿ ಮಾಡುತ್ತಾ ದಿನದ ಪೂರ್ಣ ಹೊತ್ತು ಕಡುಬಡವರ ಮಧ್ಯೆ ಸರ್ಕಾರದ ಸಂಪರ್ಕ ಕೊಂಡಿಯಂತೆ ಬದುಕುವ ಗ್ರಾಮ ಸಹಾಯಕರನ್ನು ಖಾಯಂಗೊಳಿಸಿ ಕನಿಷ್ಠ ವೇತನಕ್ಕೊಳಪಡಿಸಿ ಅವರ ಬದುಕಿಗೆ ಭದ್ರತೆ ಒದಗಿಸಬೇಕೆಂದೂ, ಸರಕಾರದ ಅನ್ಯ ಸಿಬ್ಬಂದಿಗಳಿಗೆ ಸಿಗುವ ಪೂರ್ಣ ಸವಲತ್ತುಗಳನ್ನು ಬಡ ಗ್ರಾಮ ಸಹಾಯಕರಿಗೂ ಒದಗಿಸಬೇಕೆಂದು ಈ ಮೂಲಕ ಸರ್ಕಾರವನನ್ನು ಆಗ್ರಹಿಸುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಮುಖ್ಯಮಂತ್ರಿಗಳ ಪರವಾಗಿ):–** ಸನ್ಮಾನ್ಯ ಸಭಾಪತಿಯವರೇ, ಶ್ರೀಯುತ ಕೋಟಾ ಶ್ರೀನಿವಾಸ ಪೂಜಾರಿಯವರು ನಿಯಮ 72ರಡಿ ಮಂಡಿಸಿರುವಂತಹ ಗಮನಸೆಳೆಯುವಂತಹ ಸೂಚನೆಗೆ ಲಿಖಿತವಾಗಿರು ವಂತಹ ಉತ್ತರವನ್ನು ಒದಗಿಸಿದೆ. ನಾನು ಅದನ್ನು ಓದುವುದಕ್ಕೆ ಹೋಗುವುದಿಲ್ಲ. ಓದಬೇಕು ಎಂದರೆ ಓದುತ್ತೇನೆ. ಆದರೆ, ಮುಖ್ಯವಾಗಿರು ವಂತಹ ವಿಷಯವನ್ನು ಹೇಳುವುದು ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ. ಏಕೆಂದರೆ ಉತ್ತರ ದೀರ್ಘವಾಗಿದೆ.

**ಶ್ರೀ ಯಂ.ಸಿ.ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಮುಖ್ಯವಾದ ಅಂಶಗಳನ್ನು ಹೇಳಿಬಿಡಲಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಬ್ರಿಟೀಷ್‌ರ ಆಡಳಿತ ಕಾಲದಲ್ಲಿ ಪಟೇಲರು, ಶ್ಯಾನುಭೋಗರು, ಪೋಲೀಸ್ ಪಟೇಲರು, ತೋಟಿಗಳು, ತಳವಾರರು, ಎಂದು ಬೇರೆ ಬೇರೆ ಹೆಸರುಗಳಲ್ಲಿ ನಮ್ಮ ಸರ್ಕಾರದ ಕಂದಾಯ ಇಲಾಖೆಗೆ ಸಹಾಯ ಮಾಡುವುದಕ್ಕೋಸ್ಕರ ವಾಗಿ ಈ ಎಲ್ಲ ಹೆಸರುಗಳಲ್ಲಿ ಕೆಲಸ ಕಾರ್ಯ ಮಾಡುತ್ತಿದ್ದವರು ಇದ್ದರು.

**Sri. S.R.PATIL:-** They are inferior and superior village officers.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಇವರು ಬಹಳ ಕೆಳಸ್ತರದಲ್ಲಿ......

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಕೆಳಸ್ತರದಲ್ಲಿ ಇರುವವರು inferior officer, ಮೇಲ್ವರ್ಗದಲ್ಲಿ ಇರುವವರನ್ನು ಪೋಲೀಸ್ ಪಾಟೀಲ್ ಅಥವಾ ಮುಲ್ಕಿ ಪಾಟೀಲ್ ಎಂದು ಹೇಳುತ್ತೇವೆ ಅವರು superior officers of the village.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಆ ಕಾಲದಲ್ಲಿ ಅದು ಇತ್ತು. ಆದರೆ, 1961ನೇ ಇಸವಿಯಲ್ಲಿ ಸರ್ಕಾರದ ಕಂದಾಯ ಇಲಾಖೆಯಲ್ಲಿ ಅಧಿಕಾರಿಗಳಿಗೆ ಸಹಾಯ ಮಾಡುವುದಕ್ಕಾಗಿ ಇದ್ದಂತಹ ಪಟೇಲರು, ಶ್ಯಾನುಭೋಗರು, ಪೋಲೀಸ್ ಪಟೇಲರು, ತೋಟಿಗಳು, ತಳವಾರರು, ಈ ಹುದ್ದೆಗಳನ್ನು ರದ್ದುಗೊಳಿಸುವಂತಹ Karnataka Village Offices Abolition Act ಎನ್ನುವ ಕಾಯ್ದೆಯನ್ನು ರಾಜ್ಯದಲ್ಲಿ ಪಾಸ್ ಮಾಡುವ ಮೂಲಕ ಅದನ್ನು ತೆಗೆದು ಹಾಕಿದ್ದೇವೆ. ವಿವರಗಳನ್ನು ಲಿಖಿತ ರೂಪದ ಉತ್ತರದಲ್ಲಿ ಕೊಟ್ಟಿದ್ದೇನೆ. ಇದನ್ನು 1961ರಲ್ಲಿ ರದ್ದುಗೊಳಿಸುವ ಆಕ್ಟ್ ಬಂತು. ಆದರೆ, 1963ರಲ್ಲಿ ಅದನ್ನು ಅನುಷ್ಠಾನಗೊಳಿಸಲಾಯಿತು. ಇವತ್ತಿನಿಂದಲೂ ಈ ವಿಚಾರ ಬಹಳ ಚರ್ಚೆಯಲ್ಲಿದೆ. ಗ್ರಾಮ ಲೆಕ್ಕಿಗರಿಗೆ ಈ ಗ್ರಾಮ ಸಹಾಯಕರ ಅಗತ್ಯ ಇದೆ ಎನ್ನುವುದು ತಾತ್ವಿಕವಾಗಿ ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದರೆ, 1995ರಲ್ಲಿ

K.A.T. ಯಲ್ಲಿ ಒಂದು ತೀರ್ಪನ್ನು ನೀಡಲಾಯಿತು, ಆ ನಂತರ ಹೈಕೋರ್ಟಿನ ತೀರ್ಮಾನ ಹೊರ ಬಂತು, ಇದರ ನಂತರ ಸುಪ್ರೀಂ ಕೋರ್ಟಿನ ತೀರ್ಪು ಹೊರಬಂತು. ಆ ನಂತರ ನಾವು ಸುಪ್ರೀಂ ಕೋರ್ಟಿಗೆ Review Petition ಹಾಕಿದ ನಂತರ ಸುಪ್ರೀಂ ಕೋರ್ಟ್ ಒಂದು ಜಡ್ಜ್‌ಮೆಂಟ್ ನೀಡಿತು. ಅದು ಸಹ ರಾಜ್ಯ ಸರ್ಕಾರದ Karnataka Village Offices Abolition Act ನ ನಿಲುವನ್ನು, ಅಂದರೆ ಈ ಯಾವ ಹುದ್ದೆಗಳು ಇರುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ಎತ್ತಿ ಹಿಡಿದಿದೆ. ಸರ್ಕಾರದ ಅನೇಕ ಕೆಲಸ ಕಾರ್ಯಗಳಿಗೆ ಗ್ರಾಮ ಸಹಾಯಕರ ಹುದ್ದೆಗಳ ಅಗತ್ಯ ಇರುವುದರಿಂದ, ಉನ್ನತ ಮಟ್ಟದ ಸಮಿತಿಯಲ್ಲಿ ಇದರ ಬಗ್ಗೆ ಚರ್ಚೆಯಾಗಿ, ಆರ್ಥಿಕ ಮಿತವ್ಯಯದ ನಡುವೆಯೂ ಈ 10,450 ಹುದ್ದೆಗಳು ಬೇಕು ಎನ್ನುವಂತಹ ನಿರ್ಣಯಕ್ಕೆ ಬರಲಾಯಿತು. ಇವರಿಗೆ ಗೌರವಧನದ ರೂಪದಲ್ಲಿ ಮೊದಲಿಗೆ 3000 ರೂಪಾಯಿಗಳ ಸಂಭಾವನೆಯನ್ನು ನೀಡಲಾಗುತ್ತಿತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಾವು ಗೌರವಧನವನ್ನು ತಿಂಗಳಿಗೆ 3500 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

**ಶ್ರೀ ಯಂ.ಸಿ.ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಕಾಲದಲ್ಲಿ ಅಂದರೆ 1978ರಲ್ಲಿ ಬಹಳ ಕಡಿಮೆ ಸಂಭಾವನೆಯನ್ನು ನೀಡಲಾಗುತ್ತಿತ್ತು. ಈಗ ದಿನೇ ದಿನೇ ಅದನ್ನು ಹೆಚ್ಚು ಮಾಡಿಕೊಂಡು ಬಂದು ಈಗ 3,500 ರೂಪಾಯಿಗಳಿಗೆ ನಿಂತಿದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಮೊದಲು 100 ರೂಪಾಯಿಗಳ ಗೌರವಧನವನ್ನು ನೀಡಲಾಗುತ್ತಿತ್ತು. ನಾನು ಅದರ ಇತಿಹಾಸಕ್ಕೆ ಹೋಗುವುದಿಲ್ಲ. 1978 ರಲ್ಲಿ 100 ರೂಪಾಯಿಗಳ ಗೌರವಧನದಿಂದ ಪ್ರಾರಂಭವಾಗಿ 3,000 ರೂಪಾಯಿಗಳಿಗೆ ಬಂದು ನಿಂತಿತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ 2011ರಲ್ಲಿ ಈ ಮೊತ್ತವನ್ನು 3,500 ರೂಪಾಯಿಗಳಿಗೆ ಹೆಚ್ಚಿಸಲಾಯಿತು. ಇವರನ್ನು ಸರ್ಕಾರದಲ್ಲಿ ಖಾಯಂಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಎಲ್ಲ ಹಂತಗಳಲ್ಲಿ ತೀರ್ಮಾನವಾಗಿದೆ. ಆದರೆ, ಗ್ರಾಮ ಲೆಕ್ಕಿಗರಿಗೆ ಕಂದಾಯ

ವಸೂಲಾತಿ ಮಾಡುವುದಕ್ಕೆ, ಜನನ ಮರಣ ದಾಖಲಾತಿ ಮಾಡುವುದಕ್ಕೆ, ಪ್ರಕೃತಿ ವಿಕೋಪದ ಕೆಲಸಗಳನ್ನು ಸಹಕರಿಸುವುದಕ್ಕೆ ಅಥವಾ ಸರ್ಕಾರದ ಎಲ್ಲ ಯೋಜನೆಗಳನ್ನು ಫಲಪ್ರದವಾಗಿ ಅನುಷ್ಠಾನಗೊಳಿಸುವಲ್ಲಿ ಮಾಹಿತಿಗಳನ್ನು ಜನರಿಗೆ ನೀಡುವುದಕ್ಕೆ ಇವರ ಸೇವೆ ಅಗತ್ಯವಿದೆ ಎನ್ನುವುದು ಹಿಂದಿನ ಸರ್ಕಾರಗಳಲ್ಲಿಯೂ ನಿರ್ಣಯವಾಗಿದೆ. ಹಾಗಾಗಿ ಈಗಾಗಲೇ ಕೆಲಸವನ್ನು ಮಾಡುತ್ತಿರುವಂತಹ 10,450 ಗ್ರಾಮ ಸಹಾಯಕರು ಯಾರಿದ್ದಾರೆ ಅವರನ್ನು ಖಾಯಂಗೊಳಿಸುವುದಕ್ಕೆ ಸಾಧ್ಯವಿಲ್ಲ. ಆದರೆ, ಅವರಿಗೆ ಗೌರವಧನವನ್ನು 500 ರೂಪಾಯಿಗಳಷ್ಟು ಹೆಚ್ಚಿಸುವುದರ ಮೂಲಕ ಅವರಿಗೆ ಅಗತ್ಯವಾಗಿರುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಯಾವ ಗ್ರಾಮ ಸಹಾಯಕ ನಿವೃತ್ತನಾಗುತ್ತಾನೆ, ಅವನ ಕುಟುಂಬದಲ್ಲಿ ಇರುವಂತಹ ಅರ್ಹ ಅಭ್ಯರ್ಥಿಯನ್ನು ತೆಗೆದುಕೊಳ್ಳುವುದೇ ರೂಢಿಯಾಗಿದೆ ಅದನ್ನೇ ಪದ್ಧತಿಯನ್ನಾಗಿ ಅನುಸರಿಸಿಕೊಂಡು ಬರಲಾಗಿದೆ. ಅಂಥವರು ಇಲ್ಲವೆಂದರೆ, ಜಿಲ್ಲಾ ಮಟ್ಟದಲ್ಲಿ ಒಂದು ಕಮಿಟಿ ಇದೆ, ಆ ಕಮಿಟಿಯಲ್ಲಿ ಆಯ್ಕೆ ಮಾಡಲಾಗುತ್ತದೆ. ಅವರಿಗೆ ಕೊಡುತ್ತಿರುವ ಗೌರವಧನ ಕಡಿಮೆಯಾಗಿದೆ, ಅವರಿಗೆ ಉಳಿದ ಎಲ್ಲ ಸೌಲಭ್ಯಗಳನ್ನು ನೀಡಬೇಕು ಇತ್ಯಾದಿ ಬೇಡಿಕೆಗಳನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ, ಆದರೆ ಅವರನ್ನು ಖಾಯಂಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಗ್ರೂಪ್ 'ಡಿ' ಹುದ್ದೆ ಎಂದು ಪರಿಗಣಿಸಿ, ಅವರಿಗೆ ಆ ಹುದ್ದೆಯ ವೇತನ ಶ್ರೇಣಿಯನ್ನು ಕೊಡಬೇಕು ಎನ್ನುವ ಬೇಡಿಕೆಯನ್ನು ಪರಿಗಣಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸ್ಥಳೀಯವಾಗಿ ಅವರು ನಮಗೆ ಸಹಾಯ ಮಾಡುತ್ತಿದ್ದಾರೆ ಎನ್ನುವ ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಅವರದು ಸೃಷ್ಟಿಯಾದ ಹುದ್ದೆಯೂ ಅಲ್ಲ ಮತ್ತು ಪೂರ್ಣ ಪ್ರಮಾಣದ ಸಹಾಯವೂ ಅಲ್ಲ. ಅವರ ಇನ್ನುಳಿದ ಬೇಡಿಕೆಗಳನ್ನು ನಾವು ಪರಿಶೀಲಿಸುತ್ತೇವೆ. ಅವರನ್ನು ಖಾಯಂಗೊಳಿಸುವುದಕ್ಕೆ ಮತ್ತು 'ಡಿ' ದರ್ಜೆಯ ಹುದ್ದೆಯನ್ನು ನೀಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಉಳಿದಂತೆ ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ಸಹಕರಿಸಬೇಕಾಗುತ್ತದೆ. ಈಗ ಹೇಗೆ 500 ರೂಪಾಯಿಗಳ ಗೌರವಧನವನ್ನು ಹೆಚ್ಚು ಮಾಡಲಾಗಿದೆಯೋ

ಹಾಗೆಯೇ ಅವರ ಉಳಿದ ಬೇಡಿಕೆಗಳನ್ನು ಸಹಾನುಭೂತಿಯಿಂಧ ಪರಿಶೀಲಿಸಲಾಗುವುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಗ್ರಾಮಾಂತರ ಪ್ರದೇಶದಲ್ಲಿ ಕಟ್ಟ ಕಡೆಯ ಆಡಳಿತ ಕೊಂಡಿಯಾಗಿ ಕೆಲಸ ಮಾಡುವವರ ಬಗ್ಗೆ ಮಾನ್ಯ ಶ್ರೀನಿವಾಸ ಪೂಜಾರಿಯವರು ಉಲ್ಲೇಖ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಅವರು ನಿರ್ವಹಿಸುವ ಕೆಲವು ಕಾರ್ಯಗಳನ್ನು ಉಲ್ಲೇಖ ಮಾಡಿದರು. ನಾವು ಬೇರೆ ಏನೂ ಹೇಳುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಅವರು ಏನು ಕೆಲಸ ಮಾಡುತ್ತಾರೆ ಎನ್ನುವ ಪಟ್ಟಿಯನ್ನು ಓದಿ ಹೇಳುತ್ತೇನೆ. ಅವರು ಅಷ್ಟೊಂದು ಕೆಲಸವನ್ನು ಮಾಡುತ್ತಾರೆ. ಆ ಪಟ್ಟಿ ಈ ಕೆಳಕಂಡಂತಿದೆ;

1. ಮುಖ್ಯವಾಗಿ ಗ್ರಾಮದಲ್ಲಿ ಜನನ ಮರಣ ಮಾಹಿತಿ ಪಡದು ಮೇಲಾಧಿಕಾರಿಗಳಿಗೆ ತಿಳಿಸುವುದು.
2. ಬೆಂಕಿ ಅನಾಹುತಗಳು, ಪ್ರವಾಹಗಳು, ಸಮುದ್ರ ಕೊರೆತಗಳಿಂದ ಪ್ರಕೃತಿ ವಿಕೋಪಗಳು, ಮತೀಯ ಗಲಭೆಗಳು, ಕಾನೂನು ಹಾಗೂ ಶಿಸ್ತು ಉಲ್ಲಂಘನೆ, ವಿಶೇಷ ರೀತಿಯ ಕಾಯಿಲೆಗಳು ಪ್ರಾರಂಭವಾದಾಗ, ವರದಕ್ಷಿಣೆ ಕಿರುಕಳದಿಂದ ಸಾವು ಸಂಭವಿಸಿದ ಸಂದರ್ಭದಲ್ಲಿ ಮೇಲಾಧಿಕಾರಿಗಳಿಗೆ ಮಾಹಿತಿ ನೀಡುವುದಕ್ಕೆ ಸಹಕರಿಸುವುದು.
3. ಸರ್ಕಾರಿ ಬಾಕಿ, ವಸೂಲಿ, ಕಂದಾಯ ವಸೂಲಿ, ಬ್ಯಾಂಕ್ ಸಾಲ ವಸೂಲಾತಿ ವಾಣಿಜ್ಯ ತೆರಿಗೆ ವಸೂಲಿ ಬಾಕಿ, ದೂರ ಸಂಪರ್ಕ ಇಲಾಖೆಯ ಬಾಕಿ ವಸೂಲಿ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮುದ್ರಾಂಕ ಶುಲ್ಕ ನ್ಯಾಯಾಲಯ ದಂಡನೆ ವಸೂಲಿ ವಿವಾಹ ವಿಚ್ಛೇದನ ವಸೂಲಿ, ಮಾರಾಟ ತೆರಿಗೆ ವಸೂಲಿ ಇಂತಹ ಹಲವಾರು ಬಾಕಿ ವಸೂಲಿ ಮಾಡುವುದಕ್ಕೆ ಮೇಲಾಧಿಕಾರಿಗಳಿಗೆ ಸಹಕರಿಸುವುದು.
4. ಶಿಷ್ಟಾಚಾರದ ವ್ಯವಸ್ಥೆಯಲ್ಲಿ ಸಹಕರಿಸುವುದು.

5. ಖಾತೆ ಬದಲಾವಣೆ ಬಗ್ಗೆ ನೋಟೀಸ್ ಜಾರಿ ಮಾಡುವುದು. ಬೆಳೆ ಕಟಾವು ಸಂದರ್ಭದಲ್ಲಿ ಕೃಷಿ ಸಹಾಯಕರಿಗೆ ಸಹಕರಿಸುವುದು.
6. ಇತರೆ ಇಲಾಖೆಯ ಬೇರೆ ಬೇರೆ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡುವಾಗ ಸಹಕರಿಸುವುದು.
7. ಚುನಾವಣೆ ಕರ್ತವ್ಯದಲ್ಲಿ ಮತದಾರರ ಪಟ್ಟಿ ತಯಾರಿಸಲು ಸಹಕರಿಸುವುದು.
8. ಮತದಾರರ ಪಟ್ಟಿಯಲ್ಲಿ ಮೃತರ ಹಾಗೂ ವಾಸವಿಲ್ಲದವರ ಹೆಸರು ತೆಗೆಯಲು ಮಾಹಿತಿ ನೀಡುವುದು.
9. ಭಾವಚಿತ್ರ ತೆಗೆಯುವ ಸಮಯದಲ್ಲಿ ನೋಟೀಸ್ ಜಾರಿ ಮಾಡಿ ಭಾವಚಿತ್ರ ತೆಗೆಯಲು ಸಹಕರಿಸುವುದು.
10. ಚುನಾವಣಾ ದಿನದ ಪೂರ್ವ ತಯಾರಿ ಸಂದರ್ಭದಲ್ಲಿ ಮೇಲಾಧಿಕಾರಿಗಳಿಗೆ ಸಹಕರಿಸುವುದು.
11. ಚುನಾವಣಾ ಮಸ್ಟರಿಂಗ್ ಸಮಯದಲ್ಲಿ ಮತಗಟ್ಟೆ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಚುನಾವಣೆ ವಾಹನದಲ್ಲಿ ಕುಳ್ಳರಿಸಿ ಮತದಾರರ ಕೇಂದ್ರಕ್ಕೆ ಕರೆದೊಯ್ಯುವ ರೂಟ್ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುವುದು.
12. ಮತದಾನ ಕೇಂದ್ರಕ್ಕೆ ಪೀಠೋಪಕರಣಗಳ ವ್ಯವಸ್ಥೆ ಹಾಗೂ ಮತದಾನ ಸಿಬ್ಬಂದಿಗಳಿಗೆ ಊಟೋಪಚಾರದ ವ್ಯವಸ್ಥೆ ಮಾಡುವುದು ಹಾಗೂ ಮತದಾನ ಕೇಂದ್ರದಿಂದ 'ಡಿ' ಮಸ್ಟರಿಂಗ್ ಸ್ಥಳಕ್ಕೆ ಚುನಾವಣಾ ಸಿಬ್ಬಂದಿಗಳನ್ನು ಕರೆ ತರುವುದು.
13. ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸುವುದಕ್ಕೆ ಮಾಹಿತಿ ಸಂಗ್ರಹಿಸಿ ಮೇಲಾಧಿಕಾರಿಗಳಿಗೆ ನೀಡುವುದು.
14. ಜನಗಣತಿ ಕೆಲಸದಲ್ಲಿ ಸಹಕರಿಸುವುದು.
15. ಪಡಿತರ ಚೀಟಿ ತೆಗೆಯಲು ಹಾಗೂ ವಿತರಿಸಲು ಸಹಕರಿಸುವುದು.
16. ಜನಸ್ಪಂದನ ಕಾರ್ಯಕ್ರಮದಲ್ಲಿ ಫಲಾನುಭವಿಗಳನ್ನು ಕರೆಸುವುದಕ್ಕೆ ಸಹಕರಿಸುವುದು.

17. ವಿಧವಾ, ಅಂಗವಿಕಲ, ವೃದ್ಧಾಪ್ಯ ಹಾಗೂ ಸಂಧ್ಯಾ ಸುರಕ್ಷಾ ವೇತನಗಳ ಫಲಾನುಭವಿಗಳ ಮಾಹಿತಿ ಪಡೆದು ಮಂಜೂರಾಗಿ ಆದೇಶ ತಲುಪಿಸಿ ಮೃತಪಟ್ಟ ಫಲಾನುಭವಿಗಳ ಹೆಸರನ್ನು ರದ್ದುಗೊಳಿಸುವುದಕ್ಕೆ ಮಾಹಿತಿ ನೀಡುವುದು. ಈ ಎಲ್ಲಾ ವೇತನದಾರರ ಡಾಟಾ ಶೀಟ್ ದಾಖಲಿಸಲು ಸಹಕರಿಸುವುದು.
18. ರಾಷ್ಟ್ರೀಯ ಕುಟುಂಬ ಸಹಾಯಧನ ಯೋಜನೆ, ಶವ ಸಂಸ್ಕಾರದ ಪರಿಹಾರ ಪಡೆಯುವ ಫಲಾನುಭವಿಗಳನ್ನು ಗುರುತಿಸುವುದಕ್ಕೆ ಸಹಕರಿಸುವುದು.
19. ಗ್ರಾಮ ಮಟ್ಟದಲ್ಲಿ ಪರಿಸರ ನೈರ್ಮಲ್ಯದ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ಮಾಹಿತಿ ನೀಡುವುದು.
20. ಬೇರೆ ಬೇರೆ ಇಲಾಖೆಯಿಂದ ಬರುವ ನೋಟೀಸ್‌ಗಳನ್ನು ಜಾರಿ ಮಾಡುವುದು.
21. 11ಇ ನಕ್ಷೆ ತಯಾರಿಸುವುದಕ್ಕೆ ಮೋಜಣಿದಾರರೊಂದಿಗೆ ಸ್ಥಳ ಪರಿಶೀಲನೆ ಸಹಕರಿಸುವುದು ಹಾಗೂ ಸಿಟಿ ಸರ್ವೆ ಬಗ್ಗೆ ಮೋಜಣಿದಾರರಿಗೆ ಸಹಕರಿಸುವುದು.

ಇದು ಅವರು ಮಾಡುವಂತಹ ಕೆಲಸವನ್ನು ಪಟ್ಟಿ ಮಾಡಲಾಗಿದೆ.

**ಸಭಾಪತಿಯವರು:–** ಯಾವುದನ್ನೋ ಮಾರೆತಿರುವಿರಂತೆ ನೋಡಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಯಾವುದಾದರು ಮರೆತಿದ್ದರೆ ನನಗೆ ಗೊತ್ತಿಲ್ಲ. ಅವರು ಇಷ್ಟು ಕೆಲಸವನ್ನು ಮಾಡುತ್ತಿದ್ದಾರೆ. ಇದರಲ್ಲಿ ಕೆಲವು ಸಂಗತಿಗಳನ್ನು ಉಲ್ಲೇಖ ಮಾಡುವುದಕ್ಕೆ ಆಗುವುದಿಲ್ಲ. ಗ್ರಾಮ ಸಹಾಯಕರ ಕೆಲಸ ಗ್ರಾಮಾಂತರ ಪ್ರದೇಶದಲ್ಲಿ ಆಗದೇ ಹೋದರೆ, ಅಲ್ಲಿಯ ಗ್ರಾಮ ಲೆಕ್ಕಿಗ ಬೇರೆ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವನು ಈಗ ದೊಡ್ಡ ಅಧಿಕಾರಿ ಆಗಿಬಿಟ್ಟಿದ್ದಾನೆ. ಆಡಳಿತದ ಕೊನೆಯ ಕೊಂಡಿ ಆಗಿರುವ ಮತ್ತು ಪ್ರಾಮಾಣಿಕವಾಗಿ ಮನೆ ಮನೆಗೆ ಸಂಪರ್ಕ ಮಾಡಿಕೊಂಡು ಕೆಲಸ ಮಾಡುವಂತಹ ಕಾರ್ಯವನ್ನು ಗ್ರಾಮ ಸೇವಕನೇ ಮಾಡುತ್ತಿದ್ದಾನೆ.

ಇವತ್ತಿನ ಕಾನೂನಿನ ಚೌಕಟ್ಟಿನಲ್ಲಿ ಏನು ಅವಕಾಶವಿದೆ, ಆ ವರದಿ ಏನಾಯಿತು ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಮ್ಮ ಸರ್ಕಾರದ ಎಲ್ಲಾ ಯೋಜನೆಗಳು ಪ್ರಾಮಾಣಿಕವಾಗಿ ಗ್ರಾಮಾಂತರ ಪ್ರದೇಶದ ಜನರಿಗೆ ಮುಟ್ಟಬೇಕಾದರೆ ಕೆಲಸ ಮಾಡುತ್ತಿರುವ ಗ್ರಾಮ ಸಹಾಯಕರಿಗೆ ಕೇವಲ 3,500 ರೂಪಾಯಿಗಳ ಸಂಬಳವನ್ನು ಕೊಡುತ್ತೇವೆಂದರೆ ಅದು ಕನಿಷ್ಟ ವೇತನಕ್ಕೂ ಸಹ ಬರುವುದಿಲ್ಲ. ನಮ್ಮ ರಾಜ್ಯದಲ್ಲಿ ಕನಿಷ್ಟ ವೇತನದ ಕಾಯ್ದೆ ಇದೆ. ಆದರೆ ಸರ್ಕಾರ ಇವರಿಗೆ ಅದನ್ನು ಸಹ ಕೊಡುತ್ತಿಲ್ಲ. ಗೌರವಧನ ಕೊಡುತ್ತೇವೆಂದು ನಾವುಗಳು ಅವರ ಹತ್ತಿರ ಇಷ್ಟೊಂದು ಕೆಲಸವನ್ನು ಮಾಡಿಸುತ್ತೇವೆ. ಎಲ್ಲೋ ಒಂದು ಮಾನವೀಯತೆಯ ದೃಷ್ಟಿಯಿಂದ ನಾವು ಸ್ಪಂದಿಸಬೇಕಾದ ಅವಶ್ಯಕತೆ ಇದೆ. ನಾವು ಅವರಿಗೆ ಕೊಡುವಂಥ ಸಂಬಳ ಯಾವುದಕ್ಕೂ ಸಾಲುವುದಿಲ್ಲ. ಯಾವ ಕಾನೂನಿನ ಚೌಕಟ್ಟಿನಲ್ಲಿ ಇವರನ್ನು ರೆಗ್ಯುಲರೈಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅವರ ಸಮಸ್ಯೆಯನ್ನು ಬಗೆಹರಿಸುವಂಥ ಒಂದು ಕೆಲಸವನ್ನು ಸರ್ಕಾರ ಮಾಡಬೇಕೆಂದು ಅಷ್ಟೇ ನಾನು ವಿನಂತಿ ಮಾಡಲಿಕ್ಕೆ ಬಯಸುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:- (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕಾನೂನು ಮಂತ್ರಿಯಾಗಿದ್ದಾಗ ನಮ್ಮ ಸರ್ಕಾರದಲ್ಲಿಯೂ ಸಹ ಈ ಒಂದು ಪ್ರಶ್ನೆ ಬಂದಿತ್ತು. ಅವರನ್ನು ಖಾಯಂ ನೇಮಕಾತಿ ಮಾಡಬೇಕು ಎಂದು ಹೇಳುತ್ತಿರುವುದಕ್ಕೆ ಬಹಳ ಪ್ರಬಲವಾದ ಒತ್ತಡಗಳು ಬಂತು. ಆದರೆ ನಾವು ಈ The Karnataka Village Offices Abolition Act ಎಂದು ಇದೆಯಲ್ಲಾ, ಅದನ್ನು ನೀವು ಸುಪ್ರೀಂ ಕೋರ್ಟ್‌ಗೆ ಕಳುಹಿಸಿರತಕ್ಕಂಥಾದ್ದು ಮತ್ತು ಸುಪ್ರೀಂ ಕೋರ್ಟ್ ಅದನ್ನು ಒಪ್ಪಿರತಕ್ಕಂಥಾದ್ದು ಮತ್ತು ನಮ್ಮ ಈ ಗ್ರಾಮ ಸಹಾಯಕರಿಗೆ ಸಂಬಂಧಪಟ್ಟ ಹಾಗೆ ಹೇಳುತ್ತೇನೆ. ಅದಕ್ಕೆ ಬಹಳ ಲಿಂಕ್ ಇಲ್ಲ. ಆದರೂ ಅದನ್ನು ತೆಗೆದುಕೊಂಡರು. ಸುಪ್ರೀಂಕೋರ್ಟ್‌ನವರು ಕಡೆಗೆ ಕೆಎಟಿ ಯಲ್ಲಿ ಬಂದಾಗ ನಮ್ಮ ಸರ್ಕಾರದ ಎದುರುಗಡೆ ಬಂದಾಗ ಏನು ಪ್ರಶ್ನೆ ಬಂದಿತ್ತು ಎಂದರೆ

ಇವರು 10,000 ಜನರಿದ್ದಾರೆ ಮತ್ತು ಅದರ ಜೊತೆಯಲ್ಲಿ Motivators in the Forest Department ಅವರು ಸುಮಾರು 12,000 ಜನರಿದ್ದರು. ಉಳಿದ ಇಲಾಖೆಗಳಲ್ಲಿ ಕೆಲಸ ಮಾಡತಕ್ಕಂಥ ತಾತ್ಕಾಲಿಕವಾಗಿ more than about five, six or eight years ಕೆಲಸ ಮಾಡುತ್ತಿರುವವರು ಸುಮಾರು 10,000 ಜನರಿದ್ದರು. ಸುಮಾರು 26,000 ದಿಂದ 28,000 ಜನ ನೌಕರಿಯನ್ನು ಖಾಯಂ ಮಾಡಿದರೆ ಅವರನ್ನು ಮಾಡಬೇಕಾಗಿರ ತಕ್ಕಂಥ ಪರಿಸ್ಥಿತಿ ಬಂತು ಆ ಹಿನ್ನೆಲೆಯಲ್ಲಿ ಅವರನ್ನು ಮಾಡಿದರೆ ಅವರನ್ನು ಮಾಡಬೇಕಾಗಿರತಕ್ಕಂಥ ಪರಿಸ್ಥಿತಿ ಬಂತು ಆ ಹಿನ್ನೆಲೆಯಲ್ಲಿ ಅವರನ್ನು ಮಾಡಿದರೆ ಬಾಕಿಯವರಿಗೆ ಅನಿವಾರ್ಯವಾಗಿ ನಾವು ಖಾಯಂ ಮಾಡಲೇಬೇಕಾದ ಪರಿಸ್ಥಿತಿ ಬಂದರೆ ನಾನು ಹೇಳುವುದೇನೆಂದರೆ, the financial burden on the State Government would have been straightaway more than about 30% of the then existing cost. ಅದನ್ನು bear ಮಾಡಲಿಕ್ಕೆ ಸಾಧ್ಯವೇ ಇರಲಿಲ್ಲ. ಆ ಸಂದರ್ಭದಲ್ಲಿ ಕಡೆಗೆ ಅವರ್ನು ಇಟ್ಟುಕೊಳ್ಳಲೇಬೇಕಾಗುತ್ತದೆ. ಆದರೆ ಖಾಯಂ ಮಾಡುವುದಕ್ಕಾಗುವುದಿಲ್ಲವೆಂದು ಕಡೆಗೆ ಸುಪ್ರಿಮ್ ಕೋರ್ಟ್‌ಗೆ ಹೋಗಿ ಬಂದಾದ ನಂತರ ಅಂತಿಮವಾಗಿ ಆ ಒಂದು ನಿರ್ಣಯವಾಯಿತು. ನಾನು ಸರ್ಕಾರವನ್ನು ಇಷ್ಟನ್ನು ಮಾತ್ರ ಕೇಳುತ್ತೇನೆ. ಅವರನ್ನು ಬಿಡುಗಡೆ ಮಾಡುವ ಪರಿಸ್ಥಿತಿ ನಿರ್ಮಾಣವಾದರೆ ಕಂದಾಯ ಇಲಾಖೆಯಲ್ಲಿ ಬಹಳಷ್ಟು ಕೆಲಸಗಳು ಆಗುವುದಿಲ್ಲ. ಇದೊಂದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಲಿ. ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರು ಮಾಡುತ್ತಿರುವ ಕೆಲಸ, ಅವರನ್ನು ಸರ್ಕಾರ ಎಲ್ಲಾದರು displace ಮಾಡಿದರೆ ಸರ್ಕಾರದ ಯಾವ ಕಾರ್ಯಕ್ರಮವೂ ಇವತ್ತು ನಡೆಯುವುದಿಲ್ಲ. This is a fact. ಈ ಹಿನ್ನೆಲೆಯಲ್ಲಿ ನಾವು ಅವರನ್ನು ಖಾಯಂ ಮಾಡಬೇಕಾದ ಪರಿಸ್ಥಿತಿ ಇದೆ. ಸರ್ಕಾರಕ್ಕೆ ಬೇಕಾದಷ್ಟು ಅಡೆತಡೆ ಇದೆ. ಇತ್ತೀಚೆಗೆ ಸರ್ಕಾರ ಶೇಕಡ 22.5 organized sector employees ಗೆ ಕೊಟ್ಟಿದೆ. The DA was merged with the Basi Pay. ಶೇಕಡ 22.5ರಲ್ಲಿ ಶೇಕಡ 15ರಷ್ಟನ್ನು ಮೊದಲೇ ಕೊಡಲಾಗಿತ್ತು. ಇನ್ನುಳಿದ ಶೇಕಡ 7.5 ರಷ್ಟನ್ನು ಸರ್ಕಾರ ಕೊಡಬೇಕಾಗುತ್ತದೆ. Now the total burden on the State Government is

about R.4450 crores. 1% of the permanent government employees as against the total population, now they draw as much as about 46% of our revenue by way of pension, gratuity and others things. It is all known. ಈಗ ನಾನು ಸರ್ಕಾರವನ್ನು ಕೇಳುತ್ತಿರುವುದೇನೆಂದರೆ, ಈ 10,000 ಜನ ಮಾಡುತ್ತಿರುವ ಕೆಲಸ ಯಾವುದಿದೆ, ಖಾಯಂ ಅಟೆಂಡರ್ ಮಾಡುತ್ತಿರುವ ಕೆಲಸಕ್ಕಿಂತಲೂ ಹೆಚ್ಚಾಗಿ ಕೆಲಸ ಮಾಡುವ ಜನ ಇವರು. ಉದಾಹರಣೆಗೆ ಹೇಳುವುದಾದರೆ, ಈಗ ಸರ್ಕಾರ ಖಾಲಿ ಇರುವ ಹುದ್ದೆಗೆ ಒಬ್ಬರನ್ನು ಅಟೆಂಡರ್ ಆಗಿ ನೇಮಕ ಮಾಡುತ್ತದೆ. Automatically he drawd nearly about Rs.9000/- salary. A Village Accountant draws a salary of Rs.13000/-. But these people have been working for more than about 20, 30 and 33 years. Few of them will retire within a short time and will go away. ಈಗ ನಾನು ಸರ್ಕಾರವನ್ನು ಇಷ್ಟನ್ನು ಮಾತ್ರ ಕೇಳುತ್ತೇನೆ. ಅಂಗನವಾಡಿ ಶಿಕ್ಷಕಿಯರಿಗೆ ಯಾವ ರೀತಿಯಾಗಿ ಅವರು ನಿವೃತ್ತಿಯಾದ ನಂತರ lump sum ಹಣ ಕೊಡುವ ಒಂದು ಕಾರ್ಯಕ್ರಮವನ್ನು ಮಾಡಿದ್ದೇವಲ್ಲಾ. ಇದಕ್ಕೆ ಆಂಧ್ರಪ್ರದೇಶ ಅಥವಾ ಯಾರನ್ನು ಕೇಳಬೇಡಿ. ಇದು ಕೇಳುತ್ತಿರುವ ಪರಿಸ್ಥಿತಿ ಅಲ್ಲ. ಅಂಗನವಾಡಿ ಶಿಕ್ಷಕಿಯರಿಗೂ, ಸಹಾಯಕರಿಗೂ ನಾವು ಯಾವ ರೀತಿಯ ಒಂದು ಕಾರ್ಯಕ್ರಮವನ್ನು ಹಾಕಿದ್ದೇವೆಂದರೆ, ಪೆನ್‌ಶನ್ ಸ್ಕೀಂನ್ನು ನಾವು ಜಾರಿಗೆ ತಂದಿರತಕ್ಕಂಥಾದ್ದಿದೆ. ಅದೇ ರೀತಿ ಇದು ಕೂಡ ಹಲವಾರು ವರ್ಷಗಳ ಒಂದು ಹೋರಾಟವಾಗಿದೆ. ಈ ಹಿನ್ನೆಲೆಯಲ್ಲಿ ಪಾಪದ ಈ ಜನ ಯಾರಿದ್ದಾರೆ ಅವರನ್ನು ನೋಡಿದರೆ ನಮಗೆ ನಿಜವಾಗಿಯೂ ಬೇಸರವಾಗುತ್ತದೆ. ತಾಲ್ಲೂಕು ಕಛೇರಿಗಳು ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್ ಇರುವ ಕಂದಾಯ ಇಲಾಖೆಯ ಕಛೇರಿ ಕೆಲಸಗಳು ನಡೆಯಬೇಕಾದರೆ ಖಂಡಿತವಾಗಿಯೂ ಇವರುಗಳು ಇಲ್ಲದೇ ಹೋದರೆ ಕೆಲಸ ನಡೆಯುವುದಿಲ್ಲ. ಸರ್ಕಾರ ಈ ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಗ್ರಾಮ ಸಹಾಯಕರಿಗೆ ನಾವು 3,500 ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದೇವೆ. ಇದನ್ನೇ ನಾನು ಹೇಳುತ್ತಿದ್ದೇನೆ. Now why should you not increase it?

ಒಂದೇ ಸಾರಿ increase ಮಾಡಿ ಎಂದು ಹೇಳಲಿಕ್ಕೆ ನಾನು ತಯಾರಿಲ್ಲ. 6ನೇ ವೇತನ ಆಯೋಗ ವರದಿಯನ್ನು ಕೊಟ್ಟಿದೆ ಎಂದು ಸರ್ಕಾರ ನೌಕರರಿಗೆ ಶೇಕಡ 22.5 ರಷ್ಟನ್ನು ಒಂದು ಲಕ್ಷದ ಇಪ್ಪತ್ತು ಸಾವಿರ ಸರ್ಕಾರಿ ನೌಕರರಿಗೆ ಸರ್ಕಾರ 4,500 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಅವರು ಮಾಡುತ್ತಿರುವ ಕೆಲಸವು, ಇವರು ಮಾಡುತ್ತಿರುವ ಕೆಲಸವು ಆ ಹುದ್ದೆಗೆ ಸಮಾನಾಂತರವಾಗಿ ಒಂದೇ ಆಗಿದೆ. ಇವರೂ ಸಹ 8 ರಿಂದ 12 ಗಂಟೆಗಳವರೆವಿಗೂ ಕೆಲಸವನ್ನು ಮಾಡುವವರೆ. ಆದರೆ ಇವರಿಗೆ ಕೊಡುತ್ತಿರುವ ಸಂಬಳ ಕೇವಲ 3,500 ರೂಪಾಯಿ ಮಾತ್ರ. ಈ ಸಂಬಳದ ಹಣವನ್ನು ನಾವು ಏರಿಸಲೇಬೇಕು. Kindly think of it now. ಈ ಬಜೆಟ್‌ನಲ್ಲಿ ಇಷ್ಟು ದೊಡ್ಡ ಪ್ರಮಾಣದ ಹಣವನ್ನು ಕೊಡುವಾಗ ಇವರ ಸಂಬಳವನ್ನು ಸುಮಾರು 5,000 ರೂಪಾಯಿಗೆ ಏರಿಸಿದರೆ ಒಳ್ಳೆಯದು. ಇವತ್ತು ಅವರಿಗೆ ಕನಿಷ್ಟ ವೇತನವೂ ಸಹ ಸಿಗುತ್ತಿಲ್ಲ. ಕನಿಷ್ಟ ವೇತನ 155 ರೂಪಾಯಿ. You have fixed the minimum wages at Rs.155/-. ಅದನ್ನು 365 ದಿವಸಗಳಿಗೆ ಲೆಕ್ಕ ಹಾಕಿಕೊಳ್ಳಿ. That works out to nearly about Rs.5,000/-. ಕನಿಷ್ಟ ವೇತನಕ್ಕಿಂತಲೂ ಇವರು ದೊಡ್ಡ ಪ್ರಮಾಣದ ಕೆಲಸವನ್ನು ಮಾಡುತ್ತಿಲ್ಲವೇನು? ಅದಕ್ಕೆ ನಾನು ಒಂದು ಸಲಹೆಯನ್ನು ನೀಡಿದೆ ಅಷ್ಟೇ. ಸರ್ಕಾರ 1,500 ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಟ್ಟರೆ 10,000 ಜನ ನೌಕರರಿಗೆ ಸರ್ಕಾರ ಕೊಡುವ ಹಣ ಎಷ್ಟಾಗುತ್ತದೆ.

How much it will come to? You work it out. 1500x10000 – probably it works out to about Rs.22.5 crores. ಸರ್ಕಾರಿ ನೌಕರರಿಗೆ ಶೇಕಡ 22.5ರಷ್ಟು ಹೆಚ್ಚು ಮಾಡಿ 4,500 ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕಂಥ ಸಂದರ್ಭದಲ್ಲಿ ಗ್ರಾಮ ಸಹಾಯಕರು ಸಹ ಅದೇ ರೀತಿಯಲ್ಲಿ ಕೆಲಸವನ್ನು ಮಾಡುವಾಗ ನಾವು ಅವರಿಗೆ ಕನಿಷ್ಟ ವೇತನವನ್ನು ಕೊಡುವ ಪರಿಸ್ಥಿತಿಯನ್ನು ನಿರ್ಮಾಣ ಮಾಡದೇ ಹೋದರೆ, ನಾನು ಹೇಳುತ್ತೇನೆ, We are doing the greatest injustice. ದಯಮಾಡಿ ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿ. ಈ ಬಜೆಟ್‌ನಲ್ಲಿ you kindly give them. ಅವರು ಮಾಡುತ್ತಿರುವ ಕೆಲಸದ ಬಗ್ಗೆ ಹೇಳುತ್ತಿದ್ದೇನೆ. ಕೆಲವು ಜನ 32

ರಿಂದ 33 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ. ಇವರುಗಳು ಇನ್ನೇನು ನಿವೃತ್ತಿಯನ್ನು ಹೊಂದುತ್ತಾರೆ. ನಿವೃತ್ತಿಯಾದ ನಂತರ ಅವರ ಗತಿ ಏನು? ಅವರುಗಳು ಪಾಪ ಎಲ್ಲಿಗೆ ಹೋಗಬೇಕು? ಇದನ್ನು ಯೋಚನೆ ಮಾಡಿ ನಾವು ಅಂಗನವಾಡಿ ಶಿಕ್ಷಕಿಯರಿಗೆ ನಿವೃತ್ತಿಯಾದ ಸಂದರ್ಭದಲ್ಲಿ ಒಂದು lump sum ಹಣವನ್ನು ಕೊಡಲಿಕ್ಕೆ ಯಾವ ರೀತಿಯಾಗಿ ಏರ್ಪಾಡು ಮಾಡಿದ್ದೇವೆಯೋ, ಅದೇ ರೀತಿ ಸರ್ಕಾರ ಈ ಗ್ರಾಮ ಸಹಾಯಕರ ಬಗ್ಗೆಯೂ ಸಹ ಯೋಚನೆ ಮಾಡಲಿ. ಗ್ರಾಮ ಸಹಾಯಕರ ಸಂಬಳದಲ್ಲಿ 1,500 ರೂಪಾಯಿಗಳನ್ನು ಏರಿಕೆ ಮಾಡಿದರೆ ಸರ್ಕಾರಕ್ಕೆ ಇದರಿಂದ ಆಗುತ್ತಿರತಕ್ಕಂಥ ಹೊರೆ ಸುಮಾರು 22.5 ಕೋಟಿ ರೂಪಾಯಿ. ಈ ಆರ್ಥಿಕ ಹೊರೆಯನ್ನು ಸರ್ಕಾರ ಹೊರಲಿಕ್ಕೆ ಸಾಧ್ಯವಿದೆ. ಸರ್ಕಾರ ಮಠಗಳಿಗೆ ಸುಮಾರು 76 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲವೇ? ಮುಂದುವರೆದ ಮಠಗಳಿಗೆ ಕೊಟ್ಟಾಗ ಹಿಂದುಳಿದ ಮಠಗಳಿಗೂ ಸಹ ಹಣವನ್ನು ಕೊಟ್ಟರು. ಇದು ತಪ್ಪಲ್ಲ, ನಾನದನ್ನು ಮೆಚ್ಚುತ್ತೇನೆ. ತಪ್ಪಿಲ್ಲ, ಎಲ್ಲರಿಗೂ ಸಿಗಲಿ. 'ಸಮಪಾಲು, ಸಮಬಾಳು' ಇರಬೇಕು. ಮಾನ್ಯ ಸದಾನಂದ ಗೌರಡು ಬಹಳ ಚೆನ್ನಾಗಿ ಕೆಲಸವನ್ನು ಮಾಡಿದ್ದಾರೆ. ನಾನದನ್ನು ಮೆಚ್ಚುತ್ತೇನೆ. ಏಕೆ ಕೊಡಬೇಕು ಎಂದರೆ ಮುಂಚೆ ಕೊಟ್ಟಿದ್ದಾರೆ. ದೊಡ್ಡವರಿಗೆ ಕೊಡುವಾಗ ಚಿಕ್ಕವರಿಗೆ ಏಕೆ ಕೊಡಬಾರದು? ಕೊಟ್ಟಿದ್ದನ್ನು ನಾನು ಒಪ್ಪಿಕೊಂಡ. ಈಗ ಅದನ್ನು ಮಾಡಿ. ಅದೇ ಸಂದರ್ಭದಲ್ಲಿ ಸರ್ಕಾರದ ಕೆಲಸವನ್ನು ಮಾಡುತ್ತಿರತಕ್ಕಂಥ 10,000 ಜನ ಯಾರಿದ್ದಾರೆ, ಇವರುಗಳು ನಾವು ಕೆಲಸ ಮಾಡುವುದಿಲ್ಲ ಹೊರಗಡೆ ಹೋಗುತ್ತೇವೆಂದರೆ ಸರ್ಕಾರದ ಇಲಾಖೆಗಳು ಬಂದ್ ಆಗುತ್ತವೆ. ಆದ್ದರಿಂದ ಈ 10,000 ಜನರಿಗೆ 1,500 ರೂಪಾಯಿಗಳನ್ನು ಏರಿಕೆ ಮಾಡಿದರೆ ಸರ್ಕಾರದ ಮೇಲೆ ಬೀಳುವ 22.5 ಕೋಟಿ ರೂಪಾಯಿಗಳ ಹೊರೆಯನ್ನು ಭರಿಸಲಿಕ್ಕೆ ಖಂಡಿತವಾಗಿ ಸರ್ಕಾರಕ್ಕೆ ಶಕ್ತಿ ಇದೆ. ಆ ಕೆಲಸವನ್ನು ಮಾಡಿ ಎಂದು ನಾನು ಸರ್ಕಾರವನ್ನು ಈ ಸಂದರ್ಭದಲ್ಲಿ ಕೇಳಿಕೊಂಡು ಈ ಬಜೆಟ್ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಾಡಿದ್ದು ಉತ್ತರವನ್ನು ಹೇಳುವಾಗ ಇದನ್ನು ಸಹ ಘೋಷಣೆ ಮಾಡಬೇಕು. ನಾವು ಇದನ್ನು ಒತ್ತಾಯ ಮಾಡಿ ಕೇಳುವವರೆ.

ಇಲ್ಲದೇ ಹೋದರೆ ಇಲಾಖೆಯಲ್ಲಿ ಕೆಲಸ ಮಾಡುವ ಜನರಿಗೆ ನೇರವಾಗಿ ನ್ಯಾಯವನ್ನೊದಗಿಸಿದಂತೆ ಆಗುವುದಿಲ್ಲ. ಆ ಕೆಲಸವನ್ನು ಸರ್ಕಾರ ಮಾಡಲಿ ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಶಿವರಾಂ ಪಟೇಲ್‌ರವರೆ, ನಿಮಗೆ ವಿಷಯ ಗೊತ್ತಿದೆ. ಈಗಾಗಲೇ ಸಮಯ ಆಗಿದೆ. To the point ಮಾತನಾಡಿ. ನಾನು ಮೂರ್‍ನಾಲ್ಕು ಜನರಿಗೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಚಿವರು ಗ್ರಾಮ ಸಹಾಯಕರಿಗೆ ತಾಂತ್ರಿಕವಾಗಿ ಅವರನ್ನು ಖಾಯಂ ಮಾಡತಕ್ಕಂಥಾದ್ದು ಸಾಧ್ಯವಿಲ್ಲ, ನ್ಯಾಯಾಲಯದಲ್ಲಿ, ಕೆಎಟಿಯಲ್ಲಿ ತೀರ್ಮಾನವಾಗಿದೆ ಎಂದು ಹೇಳಿದ್ದಾರೆ. ಬಹುಶಃ ನಾಣಯ್ಯನವರು ಅದಕ್ಕೆ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ನೀವು ಈ ರೀತಿ ಮಾಡುವುದರಿಂದ ಅವರಿಗೆ ಸ್ವಲ್ಪ ಅನುಕೂಲವಾಗುತ್ತದೆ, ನಿವೃತ್ತಿಯ ನಂತರವೂ ಅವರಿಗೆ ಕೆಲವು ಸವಲತ್ತುಗಳನ್ನು ಕೊಡತಕ್ಕಂಥ ಅವಕಾಶವಾಗುತ್ತದೆ ಎನ್ನತಕ್ಕಂಥಾದ್ದನ್ನು ಹೇಳಿದರು. ಕಾರಣವೇನೆಂದರೆ, 1961–62ರ ಸಂದರ್ಭದಲ್ಲಿ ಬರಾವರ್ದ್ (ವಂಶಪಾರಂಪರ್ಯ) ಆಗಿ ಇತ್ತು. ಪಟೇಲರಿಗಾಗಲಿ ಕುಳವಾಡಿಗಳಿಗಾಗಲಿ, ಶಾನುಭೋಗರಿಗಾಗಲಿ ಅದನ್ನು ತೆಗೆದು ಹಾಕಿದರು. ಅದನ್ನು ತೆಗೆದು ಹಾಕಿದ ನಂತರ ಯಾರೂ ಕೂಡ ಕೆಲಸ ಮಾಡುವ ಸ್ಥಿತಿಯಲ್ಲಿ ಇಲ್ಲವೆಂದು ಈ ಗ್ರಾಮ ಸಹಾಯಕರನ್ನು ನೇಮಕ ಮಾಡಿಕೊಂಡರು. ಈಗ ಅಂಗನವಾಡಿ ಶಿಕ್ಷಕಿಯರಿಗೆ ನಿವೃತ್ತಿಯ ನಂತರವೂ ಕೂಡ ಏನಾದರೂ ಸವಲತ್ತುಗಳನ್ನು ಕೊಡತಕ್ಕಂಥ ವ್ಯವಸ್ಥೆಯಾಗಿದೆ. ಹಿಂದೆ ಅಂಗನವಾಡಿ ಕಾರ್ಯಕರ್ತೆಯರು ನೇಮಕವಾದಾಗಲೂ ಕೂಡ 100 ರೂಪಾಯಿಗಳನ್ನು ಕೊಡತಕ್ಕಂಥಾದ್ದು ಇತ್ತು. ಇವತ್ತು ಅವರ ಸಹಾಯಧನವನ್ನು ಹೆಚ್ಚು ಮಾಡಿರತಕ್ಕಂಥಾದ್ದು ಇದೆ. ಆ ಕಾರಣದಿಂದ ಬರಾವರ್ದಾರಿಕೆಯನ್ನು ತೆಗೆದ ಮೇಲೆ ಕುಳುವಾಡಿಕೆ, ಪಟೇಲಿಕೆ ಇವೆಲ್ಲವೂ ಸಹ ಹೋಗಿದ್ದಾವೆ. ಕೊನೆಗೆ ಇದು ಇಲ್ಲವೆಂದಾಗ

1962ರ ನಂತರ ಗುಮಾಸ್ತಿಕೆ ಪಟೇಲರನ್ನು ನೇಮಕ ಮಾಡಿಕೊಳ್ಳುವ ಒಂದು ಕೆಲಸವಾಯಿತು. ಅವರಿಗೂ ಕೂಡ ಕೆಲವು ಸಹಾಯಗಳನ್ನು ಕೊಡುವುದಕ್ಕೆ ಆಗಲಿಲ್ಲ. ಈಗ ಇವರಲ್ಲಿ ಕೆಲವು ಜನ ಸತ್ತು ಹೋಗಿದ್ದಾರೆ. ಕೆಲವರು ನಿವೃತ್ತಿ ಹೊಂದಿದ್ದಾರೆ. ಇವರ ಸಹಾಯಕ್ಕೆ ಸರ್ಕಾರ ಮುಂದೆ ಬರಬೇಕು. ಇವರನ್ನು ಖಾಯಂ ಮಾಡಿಕೊಳ್ಳುವುದಕ್ಕೆ ಬರದೇ ಇದ್ದರೂ, ಮಾನ್ಯ ನಾಣಯ್ಯನವರು ಕೊಟ್ಟ ಸಲಹೆಯನ್ನು ಸರ್ಕಾರ ಪರಿಗಣಿಸುವ ನಿಟ್ಟಿನಲ್ಲಿ ಯೋಚಿಸಬೇಕು. ನಿವೃತ್ತಿ ನಂತರ ಅವರಿಗೆ ಸಹಾಯ ನೀಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಕೋಟಾ ಶ್ರೀನಿವಾಸ್‌ರವರು ಸರ್ಕಾರದ ಗಮನಕ್ಕೆ ಒಳ್ಳೆಯ ವಿಷಯವನ್ನು ತಂದಿದ್ದಾರೆ. ನಿಜವಾಗಲೂ ಈ ಗ್ರಾಮ ಸಹಾಯಕರು ಮಾಡುವ ಕೆಲಸದ ಬಗ್ಗೆ ವಿಚಾರ ಮಾಡಿದಾಗ ಅವರ ಶ್ರಮಕ್ಕೆ ನಾವು ಕೊಡುವುದು ಏನೇನು ಸಾಲದು. ಐಎಎಸ್ ಅಧಿಕಾರಿಗಳು ತಲೆ ಉಪಯೋಗಿಸಿ ಕೆಲಸ ಮಾಡುತ್ತಾರೆ ಮತ್ತು ಅವರಿಗೆ ಸಾವಿರಾರು ರೂಪಾಯಿಗಳನ್ನು ಕೊಡುತ್ತೇವೆ. ಆದರೆ ಗ್ರಾಮ ಸೇವಕರು ದೈಹಿಕ ಶ್ರಮದಿಂದ ಕೆಲಸ ಮಾಡುತ್ತಾರೆ, ಇವರಿಗೆ ನಾವು ಕೊಡುತ್ತಿರುವ ಹಣ ಏನೇನು ಸಾಲದು. ಆರ್ಥಿಕ ಇಲಾಖೆಯವರು ಅಥವಾ RDPR ಇಲಾಖೆಯವರು ಇಂಥವರ ಬಗ್ಗೆ ಗಮನ ಕೊಡಬೇಕಾಗುತ್ತದೆ, ಅವರ ಬದುಕಿನ ಬಗ್ಗೆ ಚಿಂತೆ ಮಾಡಬೇಕಾಗುತ್ತದೆ. ದೈಹಿಕವಾಗಿ ಶ್ರಮ ಪಡುವ ವ್ಯಕ್ತಿಗೆ ಸೂಕ್ತ ನ್ಯಾಯ ಒದಗಿಸುವ ನಿಟ್ಟಿನಲ್ಲಿ ತೀರ್ಮಾನ ತೆಗೆದುಕೊಂಡರೆ ಅವರಿಗೂ ಶ್ರೇಯಸ್ಸು ಸಿಗುತ್ತದೆ. ಹಿಂದೆ ಅಂಗನವಾಡಿ ಶಿಕ್ಷಕರು ಫೈಟ್ ಮಾಡಿದಾಗ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಒಂದು consolidated pay ಅನ್ನು ಐದು ಸಾವಿರ ರೂಪಾಯಿಯಷ್ಟು ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೆ ಮತ್ತು ಇಲ್ಲೂ ಅವರಿಗೆ ಹೆಚ್ಚುವರಿಯಾಗಿ ಕೊಟ್ಟು 20 ಸಾವಿರ ರೂಪಾಯಿಗಳ ಒಂದು “ಆಪತ್ತು ನಿಧಿ” ಎಂದು ನಿಧಿಯನ್ನು ಮಾಡಿದ್ದೆವು. ಇದರಿಂದ, ಅವರಿಗೆ

ಮಾರಕ ರೋಗ ಬಂದರೆ ಅದರ ಚಿಕಿತ್ಸೆಗೆ ಸಹಾಯವಾಗುತ್ತದೆ. ಬಡತನದಿಂದ ನರಳುವಂತಹ ಇಂತಹ ಮನೆಗಳಲ್ಲಿ ಅಕಸ್ಮಾತ್ ಸಾವು ಸಂಭವಿಸಿದರೆ ಅವರ ಬಳಿ ಶವ ಸಂಸ್ಕಾರ ಮಾಡುವುದಕ್ಕೂ ದುಡ್ಡು ಇರುತ್ತಿರಲಿಲ್ಲ. ಮಾನ್ಯ ನಾಣಯ್ಯನವರು ಏನು ಸಲಹೆ ಕೊಟ್ಟಿದ್ದಾರೋ ಅದಕ್ಕೆ ನನ್ನ ಬೆಂಬಲ ವ್ಯಕ್ತಪಡಿಸುತ್ತೇನೆ. ಗ್ರಾಮ ಸಹಾಯಕರ ಹಿತದೃಷ್ಟಿಯಿಂದ ಆಪತ್ತು ಹಣವೆಂದು 25 ಸಾವಿರ ರೂಪಾಯಿಗಳನ್ನು ಡಿಕ್ಲೇರ್ ಮಾಡಬೇಕು. ಇವರಿಗೆ ಮಾರಕ ರೋಗಗಳು ಬಂದಾಗ ಆಸ್ಪತ್ರೆ ಖರ್ಚಿಗೆಂದು ಈ ಹಣವನ್ನು ಬಳಸಿಕೊಳ್ಳಬಹುದು. ಇವರ ಮನೆಯಲ್ಲಿ ಏನಾದರೂ ಸಾವು ಸಂಭವಿಸಿದರೆ ಅವರಿಗೆ ಪರಿಹಾರ ರೂಪದಲ್ಲಿ ಈ ಒಂದು ಹಣವನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಿದ್ದೇಯಾದರೆ ನಿಜವಾಗಲೂ ಸರ್ಕಾರಕ್ಕೂ ಮತ್ತು ಇಲಾಖೆಯ ಅಧಿಕಾರಿಗಳಿಗೆ ಪುಣ್ಯ ಬರುತ್ತದೆ. ಅವರಿಗೆ ಹತ್ತು ಸಾವಿರ ರೂಪಾಯಿಗಳ consolidated salary ಮಾಡಿಬಿಡಿ. ಹಿಂದೆ ಮಾನ್ಯ ಬಸವಲಿಂಗಪ್ಪನವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ, ಪಟೇಲರು, ಶ್ಯಾನುಭೋಗರ ಹುದ್ದೆಗೆ recognition ತೆಗೆದರು. ಕುಳವಾಡಿಗಳು, ತಳವಾರರು ಇವರು ಹಿಂದೆ ಸಾರುವುದು ಇತ್ಯಾದಿ ಕೆಲಸ ಮಾಡುತ್ತಿದ್ದರು ಈಗ ಇವರ ಮೇಲೆ ಹೆಚ್ಚು ಕೆಲಸ ಹೊರಿಸಿದ್ದೇವೆ. ಆವೊತ್ತು ಅವರಿಗೆ ಕೊಡುತ್ತಿದ್ದ ನೂರು ರೂಪಾಯಿಗಳು ಹತ್ತು ಸಾವಿರ ರೂಪಾಯಿಗೆ ಸಮಾನವಾಗಿತ್ತು. ಈಗ ನಾವು, ಇಷ್ಟು ಮೊತ್ತವನ್ನು ಹೆಚ್ಚಿಸಿದ್ದೇವೆ, ಅಷ್ಟು ಹಣವನ್ನು ಹೆಚ್ಚಿಸಿದ್ದೇವೆ ಎಂದು ಏನು ಹೇಳುತ್ತೇವೆಯೋ ಅದಕ್ಕೆ ಅರ್ಥವಿಲ್ಲ. ಏಕೆಂದರೆ ಈಗ ದುಡ್ಡಿಗೆ ಬೆಲೆಯಿಲ್ಲ. ಆಗ ಐವತ್ತು ರೂಪಾಯಿಗೂ ಬೆಲೆ ಇತ್ತು, ಒಂದು ರೂಪಾಯಿಗೂ ಬೆಲೆ ಇತ್ತು. ನೂರು ರೂಪಾಯಿಗೂ ಅಷ್ಟೇ ಬೆಲೆ ಇತ್ತು. ಆದ್ದರಿಂದ ಇವರಿಗೆ ಹತ್ತು ಸಾವಿರ ರೂಪಾಯಿ ಕನ್ಸಾಲಿಡೇಟ್ ಸ್ಯಾಲರಿ ಮಾಡಿ. ಅಂಗನವಾಡಿ ಶಿಕ್ಷಕಿಯರಿಗೆ ಪೆನ್‌ಷೆನ್ ಎಂದೇನು ಕೊಡುತ್ತಿದ್ದಾರೋ . . ಅದು ಪೆನ್‌ಷನ್ ಅಲ್ಲ, ಪರಿಹಾರ ಹಣ. ಇದೇರೀತಿ, ಗ್ರಾಮ ಸಹಾಯಕರಿಗೆ ಕ್ಯಾನ್ಸರ್, ಕಿಡ್ನಿ ಸಮಸ್ಯೆಯಂತೆ ಕಾಯಿಲೆ ಬಂದಾಗ ಈ ಆಪತ್ತು ನಿಧಿಯಿಂದ ಹಣ ಕೊಡುವ ವ್ಯವಸ್ಥೆ ಮಾಡಿದರೆ ದೊಡ್ಡ ಪುಣ್ಯದ ಕೆಲಸ ಮಾಡಿದ ಹಾಗಾಗುತ್ತದೆ.

ಸದನದಲ್ಲಿ ಆರ್ಥಿಕ ಇಲಾಖೆಯ ಅಧಿಕಾರಿಗಳು ಕುಳಿತಿದ್ದಾರೆ, ಸರ್ಕಾರ ಕೂಡ ಇದರ ಬಗ್ಗೆ ವಿಚಾರ ಮಾಡಿ ಸಹಾಯ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಚಿಕ್ಕಮಾದು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಗ್ರಾಮ ಸಹಾಯಕರ ದಿನನಿತ್ಯ ಭತ್ಯೆಯ ಹೆಚ್ಚಳದ ಬಗ್ಗೆ ಸದನದ ಅನೇಕ ಜನ ಹಿರಿಯ ಸದಸ್ಯರು ಸರ್ಕಾರಕ್ಕೆ ಸಲಹೆಗಳನ್ನು ಕೊಟ್ಟಿದ್ದಾರೆ. ಒಂದಂಶವನ್ನು ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ಈ ಕಾರ್ಯವನ್ನು ಮಾಡುವಂಥ ಜನ ಯಾವ ವರ್ಗಕ್ಕೆ ಸೇರಿದವರಾಗಿರುತ್ತಾರೆ ಎನ್ನುವುದು ಇಲ್ಲಿ ಪ್ರಮುಖವಾದ ವಿಚಾರ. ಗ್ರಾಮ ಸಹಾಯಕರ ಹುದ್ದೆ ಜಾರಿ ಬರುವುದಕ್ಕೆ ಮುನ್ನಾ, ನಾವೆಲ್ಲರೂ ಚಿಕ್ಕ ಹುಡುಗರಾಗಿದ್ದಾಗ, ಕುಳವಾಡಿ ಎಂದು ಕರೆಯುವವನ ವೃತ್ತಿ ಏನು ಎಂದರೆ, ಯಾರಾದರೂ ಊರಿನ ಕೆರೆ ಅಥವಾ ಹೊಳೆಯಲ್ಲಿ ಬಿದ್ದು ಸತ್ತರೆ, ಸಂಬಂಧಪಟ್ಟ ಅಧಿಕಾರಿಗಳು ಬರುವ ತನಕ ಹಗಲು-ರಾತ್ರಿ ಆ ಶವವನ್ನು ಅವರೇ ಕಾಯುತ್ತಿದ್ದರು, ಅದು ಅವರ ಜವಾಬ್ದಾರಿ ಆಗಿತ್ತು. ಅದನ್ನು ಕುಳವಾಡಿಕೆ ಎಂದು ತಳವಾರಿಕೆ ಎಂದು ಕರೆಯುತ್ತಿದ್ದರು. ಈ ವೃತ್ತಿಯನ್ನು ನಿರ್ವಹಿಸುತ್ತಿರುವವರು ಇವತ್ತಿಗೂ ಕೂಡ 90% of them belong to Scheduled Castes and Scheduled Tribes. ಸಮಾಜದಲ್ಲಿ ಶೋಷಣೆಗೆ ಒಳಗಾದಂತಹ ಅತ್ಯಂತ ಕೆಳವರ್ಗದ ಜನ ಈ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಬೇರೆ ಯಾರೂ ಈ ಕಾರ್ಯವನ್ನು ನಿರ್ವಹಿಸಲು ಮುಂದೆ ಬರುವುದಿಲ್ಲ. ಇವರು ತಮ್ಮ ಬದುಕಿಗೋಸ್ಕರ, ಅನ್ನ-ಬಟ್ಟೆಗೋಸ್ಕರ ಯಾವುದೇ ಕೆಲಸ ಇರಲಿ ಮಾಡೋಣ ಎನ್ನುವ ಮನೋಭಾವದಿಂದ ಈ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಸರ್ಕಾರ ಇಂತಹ ಸಮಾಜದ ಬಗ್ಗೆ ಅತ್ಯಂತ ಕಳಕಳಿಯನ್ನು ವಹಿಸಿಕೊಳ್ಳಬೇಕು. ಕಾನೂನಿನ ಪ್ರಕಾರ ಅವರಿಗೆ ಶಾಶ್ವತ ನೌಕರರು ಎಂದು ಮಾಡುವುದಕ್ಕೆ ಬರದೇ ಇದ್ದರೂ ಸಹ ಅವರಿಗೆ ಕೊಡುತ್ತಿರುವ ಗೌರವ ಧನವನ್ನು ಹೆಚ್ಚಿಗೆ ಮಾಡುವ ಅವಕಾಶ ಸರ್ಕಾರಕ್ಕಿದೆ. ಮಾನ್ಯ ನಾಣಯ್ಯನವರು ಹೇಳಿದ ಹಾಗೆ, ಈ ಕೆಲಸವನ್ನು ಮಾಡಿದರೆ

ಸರ್ಕಾರಕ್ಕೆ ಹೆಚ್ಚು ಹೊರೆ ಆಗುವುದಿಲ್ಲ. ವಿನಾ ಕಾರಣ ಸರ್ಕಾರದ ಹಣ ಕೋಟಿಗಟ್ಟಲೆ ಹೋಗುತ್ತಿರುತ್ತದೆ. ನೊಂದಂಥ ಸಮಾಜದ ಬಗ್ಗೆ ಸರ್ಕಾರ ಸ್ಪಂದಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ವಿ.ಆರ್.ಸುದರ್ಶನ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಸರ್ಕಾರಕ್ಕೆ ಕಾನೂನುಗಳು ಇರಬೇಕಾಗುತ್ತದೆ, ನಿಯಮಗಳೂ ಇರಬೇಕಾಗುತ್ತದೆ. ಅದರ ಜೊತೆ ಮಾನವೀಯ ಮುಖ ಕೂಡ ಇರಬೇಕು. 1978ರಲ್ಲಿ ಈ ಹುದ್ದೆಗಳನ್ನು ಸೃಷ್ಟಿ ಮಾಡಿದ್ದೇ ಸರ್ಕಾರ. ಕಾರಣವೇನೆಂದರೆ, ಕೆಳಹಂತದಲ್ಲಿ ರೆವಿನ್ಯೂ ಅಧಿಕಾರಿಗಳಿಗೆ ಸಹಾಯ ಮಾಡಲು ಮತ್ತು ಜನರ ಮಧ್ಯೆ ಕೊಂಡಿಯಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಹುದ್ದೆಗಳನ್ನು ಸೃಷ್ಟಿಸಲಾಗಿತ್ತು. ಆ ಸಂದರ್ಭದಿಂದ ಹಿಡಿದು ಇವತ್ತಿನವರೆಗೂ ಇದನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಮಾನ್ಯ ಸಭಾಪತಿಗಳೆ, ಮಾನ್ಯ ನಾಣಯ್ಯ 1995-96 ರಲ್ಲಿ ಸಭಾನಾಯಕರು ಮತ್ತು ಕಾನೂನು ಸಚಿವರಾಗಿದ್ದರು. ಆಗಲೂ ಇವರನ್ನು ಖಾಯಂ ಮಾಡಬೇಕು ಎನ್ನುವ ವಿಷಯ ಬಂತು. ಈಗ ಮಾನ್ಯ ನಾಣಯ್ಯನವರು ಮಾತನಾಡುತ್ತಾ 18 ಸಾವಿರ ರೂಪಾಯಿಗಳನ್ನು ಕೊಡಿ, ಸರ್ಕಾರಕ್ಕೆ ಹೊರೆಯಾಗುವುದಿಲ್ಲ ಎಂದು ಹೇಳಿದರು. ಕೊಡಬೇಕು ಎಂತಲೇ ನಮ್ಮ ಒತ್ತಾಯ ಕೂಡ. ಅವರು ಕೆಳವರ್ಗದಿಂದ ಬಂದಿದ್ದಾರೆ, ಬಡತನದಿಂದ ಬಂದಿದ್ದಾರೆ, ಅಸಹಾಯಕರಾಗಿದ್ದಾರೆ, ನೋವಿನಲ್ಲಿದ್ದಾರೆ. ಅವರ ಶ್ರಮಕ್ಕೆ ಸರ್ಕಾರ ಮಾನವೀಯತೆಯ ದೃಷ್ಟಿಯಿಂದ ಸ್ಪಂದಿಸಬೇಕು. ಅವರಿಗೆ ಪರ್ಯಾಯವಾದಂತಹ ಒಂದು ವ್ಯವಸ್ಥೆ ಆಗಬೇಕು, ಅವರ ಬದುಕಿಗೆ ಭದ್ರತೆ ಸಿಗಬೇಕು. ಆದರೆ ಮಾನ್ಯ ನಾಣಯ್ಯನವರು ಸಭಾನಾಯಕರಾಗಿದ್ದಾಗ ಮಂಡಿಸಿದ ತರ್ಕವೇನೆಂದರೆ, ಇಂಥದ್ದನ್ನೆಲ್ಲಾ ಮಾಡುವುದಕ್ಕೆ ಹೊರಟರೆ ಅರಣ್ಯ ಇಲಾಖೆಯಲ್ಲಿರುವ Motivators ಹಾಗೂ ಬೇರೆ ಬೇರೆ ಇಲಾಖೆಯಲ್ಲಿರುವ ಇಂತಹ ನೌಕರರನ್ನು ಖಾಯಂ ಮಾಡಬೇಕಾಗುತ್ತದೆ, ಅದು ಸಾಧ್ಯವಾಗುವುದಿಲ್ಲ ಎನ್ನುವುದು.

**Sri M.C. NANAIAN:-** As a Government, naturally we had to look into that. ಸರ್ಕಾರ ಕೊಡುತ್ತಿರುವಂತಹ ಸಂಬಳದಲ್ಲಿ ಶೇಕಡ 30 ರಷ್ಟು ಜಾಸ್ತಿಯಾದರೆ the Government can't function.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ನಾನು ತಮ್ಮಿಬ್ಬರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ವ್ಯವಸ್ಥೆಯಲ್ಲಿ ಅನೇಕ ರೀತಿಯ ವಿಪರ್ಯಾಸಗಳನ್ನು ಕಾಣುತ್ತಿರುತ್ತೇವೆ. ಆದರೆ ಆಯಾ ಜವಾಬ್ದಾರಿಗಳನ್ನು ನಿರ್ವಹಿಸುವುದೂ ಕೂಡ ಅಷ್ಟೇ ಮಹತ್ವದ್ದಾಗಿರುತ್ತದೆ. ಸರ್ಕಾರದಲ್ಲಿದ್ದಾಗ ಅಲ್ಲಿನ ಪಾತ್ರ ನಿರ್ವಹಿಸಬೇಕಾಗುತ್ತದೆ, ಅದೇ ರೀತಿ ಜನಪರವಾದ ಧ್ವನಿಯನ್ನು ಹೇಳಬೇಕಾಗುತ್ತದೆ. ಇಲ್ಲಿ ಆಡಳಿತ ನಡೆಸುವಂಥವರು ನಾವಿರಲಿ ಅಥವಾ ನೀವಿರಲಿ ಆಡಳಿತಾತ್ಮಕವಾಗಿ ಅದರ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಹಾಗಾಗಿ, ಇದು ಪರಸ್ಪರ ಆರೋಪ–ಪ್ರತ್ಯಾರೋಪಕ್ಕಲ್ಲದೇ ವಸ್ತು ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಾವು ಒಟ್ಟಾಗಿ ಜನಪರ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಅದಕ್ಕೆ ಸಂದರ್ಭ ಬರಬೇಕಷ್ಟೇ.

**ಕ್ಯಾ. ಗಣೇಶ್ ಕಾರ್ಣಿಕ್:–** ಮಾನ್ಯ ನಾಣಯ್ಯನವರು ವಕೀಲರು. ಅವರು ಸಂದರ್ಭ ನೋಡಿಕೊಂಡು ವಾದ ಮಾಡುತ್ತಾರೆ. (ಸದನದಲ್ಲಿ ನಗು)

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಗಳೆ, ನಾವು ಆ ಸಂದರ್ಭದಲ್ಲಿ ಅವರನ್ನು ಇಟ್ಟುಕೊಳ್ಳಲೇಬೇಕೆಂದು ಐದು ವರ್ಷದ ಅವಧಿಯಲ್ಲಿ ಒಂದು ಸಾವಿರ ರೂಪಾಯಿ ಸಂಬಳ ಜಾಸ್ತಿ ಮಾಡಿದಂಥದ್ದು ನಿಜ. ಇದು 1996–97ರ ಕತೆ. ಈಗ ನಾವು 2012ರಲ್ಲಿದ್ದೇವೆ. ರೂ.1500 ಗಳನ್ನು ಜಾಸ್ತಿ ಮಾಡಿ ಎಂದು ಕೇಳುತ್ತಿದ್ದೇವೆ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಗಳೆ, ಸರ್ಕಾರ ಗ್ರಾಮ ಸಹಾಯಕರ ನೆರವಿಗೆ ಹೋಗಬೇಕು, ಅವರಿಗೆ ಭದ್ರತೆ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ.

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, 1978ರಲ್ಲೇ ಇವರು ನೇಮಕರಾದವರಲ್ಲ, ನಮ್ಮ ಕಡೆ ಇವರನ್ನು ವಾಲೀಕಾರರು ಎಂದು ಕರೆಯುತ್ತಾರೆ. ಕೂಲಿ ಸಮಾಜದ ಜನ ಇದರಲ್ಲಿ ಹೆಚ್ಚು. 1978ರ ಪೂರ್ವದಲ್ಲಿ, ಗ್ರಾಮಗಳಿಗೆ ಅಧಿಕಾರಿಗಳು ಬರಲಿ, ತಹಸೀಲ್ದಾರರು ಬರಲಿ, Village Accountant ಬರಲಿ ಇವರ ಜೊತೆ ಇರುತ್ತಿದ್ದರು. ಇವರು ಪುಗ್ಸಟ್ಟೆ ಕೆಲಸ ಮಾಡುತ್ತಿದ್ದರು, ಇವರಿಗೆ ನೂರು ರೂಪಾಯಿ ಕೂಡ ಕೊಡುತ್ತಿರಲಿಲ್ಲ. ಯಾರಾದರೂ gift ಕೊಟ್ಟರೆ ಅದನ್ನು ತೆಗೆದುಕೊಂಡು ಕೆಲಸ ಮಾಡುತ್ತಿದ್ದರು. ಇವರು ಬಹಳ ಕಷ್ಟದಿಂದ ಬಂದಿರತಕ್ಕಂಥವರು. ಇವರು ಯಾವುದೇ ಜಮೀನನ್ನು ಹೊಂದಿಲ್ಲ. ಬಹಳಷ್ಟು ಜನರಿಗೆ ಮನೆಗಳು ಕೂಡ ಇಲ್ಲ. ಸದನದಲ್ಲಿ ಮಾನ್ಯ ನಾಣಯ್ಯನವರು, ಎಲ್ಲಾ ಶಾಸಕರು ಮನವಿಯನ್ನು ತಮ್ಮಲ್ಲಿ ತೋರಿಕೊಂಡಿದ್ದಾರೆ. ಸರ್ಕಾರಕ್ಕೆ ತಮ್ಮ ಮೂಲಕ ಕಳಕಳಿಯ ವಿನಂತಿ ಏನೆಂದರೆ, ದಯಮಾಡಿ ಎಲ್ಲಕ್ಕಿಂತ ಮೂಲವಾಗಿ ಏನು ತಮ್ಮ ದಕ್ಷತೆ, ನಿಷ್ಠೆಯಿಂದ ಈ ಸಮಾಜದ ಏಳಿಗೆಗಾಗಿ ಕೆಲಸ ಮಾಡತಕ್ಕಂಥ ನಿಷ್ಠಾವಂತ ಸಹಾಯಕರಿಗೆ ಪಗಾರ ಜಾಸ್ತಿ ಮಾಡಬೇಕು. ಅದರ ಜೊತೆಗೆ ಇವತ್ತು ಸಾಕಷ್ಟು ಬಸವ, ಇಂದಿರಾ ಆವಾಸ್ ಮನೆಗಳು ಬಂದಿವೆ. ಅವರಿಗೆ ಒಂದು ಮನೆಯನ್ನು ಕೊಟ್ಟು ಸರ್ಕಾರ ತನ್ನ ಘನತೆಯನ್ನು ಹೆಚ್ಚು ಮಾಡಿಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ನಾನು ವಿನಂತಿ ಮಾಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಈಗ ಕೊಡುತ್ತಿರುವುದು ಕೇವಲ ಗೌರವಧನ ಮಾತ್ರ. ಅದರ ಜೊತೆಗೆ ಕುಟುಂಬಕ್ಕೆ ಅನ್ವಯವಾಗುವಂಥ ಒಂದು comprehensive insurance policy ಕೊಟ್ಟರೆ ಅವರಿಗೆ ಸಹಾಯವಾಗುತ್ತದೆ. ಮಾನ್ಯ ಸಚಿವರೆ, ತಾವು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿಕೊಂಡು ಇದರ ಜೊತೆಗೆ ಕುಟುಂಬಕ್ಕೆ ಅನ್ವಯವಾಗುವಂತಹ ಒಂದು comprehensive insurance

policy ಕೊಡುವಂತಹ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಎಸ್.ಆರ್.ಪಾಟೀಲ್‌ರವರು ಮಾತನಾಡುವುದಕ್ಕಿಂತ ಮುಂಚೆ ನಾನು ಒಂದು ವಿಚಾರವನ್ನು ಹೇಳಬಯಸುತ್ತೇನೆ. ನನಗೆ ಭಾವನೆಗಳು ಅರ್ಥವಾಗುತ್ತದೆ. ಇವತ್ತೇನು ಸಭಾಪತಿಯವರು ಎಲ್ಲರಿಗೂ ಅವಕಾಶ ಕೊಡುತ್ತಿದ್ದಾರೆ, ಅವಕಾಶ ಕೊಡುವುದಿಲ್ಲ ಎಂದು ಹೇಳುತ್ತಿದ್ದರು ಎಂಬ ಭಾವನೆಗಳು ಬರುತ್ತದೆ. ಆದರೆ, ನನ್ನ ಮನಸ್ಸಿನಲ್ಲಿರುವುದನ್ನೂ ನಾನು ಹೇಳುತ್ತೇನೆ. ಇಷ್ಟು ಹೊತ್ತಾದರೂ ಸದನದಲ್ಲಿ ಕುಳಿತವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ನೀವೆಲ್ಲಾ ಒಪ್ಪುವುದಾದರೆ ಇಷ್ಟು ಹೊತ್ತು ಈಗಾಗಲೇ ಆಬ್‌ಸೆಂಟ್ ಆಗಿರುವವರಿದ್ದಾರಲ್ಲಾ ಅವರಿಗೆ ನಾಳೆ ನಾಳಿದ್ದು ಬಾಯಿಗೆ ದಿಗ್ಭಂಧನ ಹಾಕಿಬಿಡೋಣವೇ? ಅವರು ಮಾತನಾಡುವ ಹಾಗೆ ಇಲ್ಲ. ಏಕೆಂದರೆ, ಅವರು ಸದನದಲ್ಲಿ ಕುಳಿತಿರಬೇಕು, ಬೇರೆಯವರು ಮಾತನಾಡುವುದನ್ನು ಕೇಳಬೇಕು, ಅವಕಾಶ ಸಿಕ್ಕಾಗ ನಾವು ಮಾತನಾಡಬೇಕು. ಈಗ ಕುಳಿತಿರುವುದಕ್ಕಾಗಿ ಎಲ್ಲರಿಗೂ ಅವಕಾಶ ಸಿಗುತ್ತಿದೆ. ಕುಳಿತುಕೊಳ್ಳದಿದ್ದರೆ ನಾನು ಯಾರಿಗೆ ಅವಕಾಶ ಕೊಡುವುದು? ಕುಳಿತವರಿಗೇ ಬುದ್ಧಿ ಹೇಳಿದ ಹಾಗೆ ಆಗುತ್ತದೆ.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ಪ್ರಥಮ ಬಾರಿಗೆ ಆಯ್ಕೆಯಾಗಿ ಬಂದಿರುತ್ತಾರಲ್ಲಾ ಅವರೆಲ್ಲರಿಗೂ ನಾವು ಹೇಳಿ, ಹೇಳಿ ಸುಸ್ತಾಗಿದ್ದೇವೆ. ಸದನದಲ್ಲಿ ಕುಳಿತುಕೊಳ್ಳಬೇಕೆನ್ನುವ ಅಭಿಲಾಷೆ ಬಹಳಷ್ಟು ಜನರಿಗೆ ಇಲ್ಲ. ಸದನದಲ್ಲಿ ಕುಳಿತುಕೊಳ್ಳಬೇಕೆನ್ನುವಂತಹ ಯಾವುದೇ ಒಂದು ವಿಚಾರ ಬರುತ್ತದೆ. ಆ ವಿಚಾರದ ಮೇಲೆ ಬೆಳಕು ಚೆಲ್ಲುವಂತಹದ್ದನ್ನು ಕಲಿಯಬೇಕಾಗುತ್ತದೆ. ಕುಳಿತುಕೊಳ್ಳಬೇಕೆನ್ನುವ ಕೆಲವು ಜನರಿದ್ದಾರೆ. ಇಲ್ಲ ಎಂದು ಹೇಳುವುದಿಲ್ಲ. ನಾವು ಸದನದಲ್ಲಿ ಕುಳಿತುಕೊಳ್ಳುವುದು ಏಕೆಂದರೆ ನನಗಿಂತ ಕಿರಿಯರಾಗಿರುವಂಥವರು ಕೆಲವು ವಿಚಾರಗಳನ್ನು ಹೇಳುತ್ತಾರೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಈ ವಿಚಾರವನ್ನು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ನಾನು ಸಹ ಈ ವಿಚಾರವನ್ನು ಚರ್ಚೆ

ಮಾಡಬೇಕೆಂದು ಬಯಸಿ ಒಂದು ನೋಟಿಸ್‌ನ್ನು ಕಳುಹಿಸಿದ್ದೆ. ಕಡೆಗೆ ಇವತ್ತು ಈ ವಿಚಾರ ಚರ್ಚೆಗೆ ಬಂದಾಗ ನಾನು ಅವರಿಗೆ ಹೇಳಿದೆ, ಈ ವಿಚಾರದ ಬಗ್ಗೆ ಚರ್ಚೆ ಆಗುವವರೆಗೂ ನಾನು ಸದನದಲ್ಲಿ ಕುಳಿತುಕೊಳ್ಳಲೇ ಬೇಕಾಗುತ್ತದೆ, ನಮ್ಮ ವಿಚಾರಗಳನ್ನು ಹೇಳಲೇಬೇಕಾಗುತ್ತದೆ ಎಂದು ಹೇಳಿದೆ. ಈ ರೀತಿಯ ಭಾವನೆ ನಮ್ಮೆಲ್ಲರಲ್ಲೂ ಬಂದರೆ ಸದನಕ್ಕೂ ಗೌರವ ಬರುತ್ತದೆ.

**ಶ್ರೀ ಎಸ್.ಆರ್.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಳ್ಳಿಯಲ್ಲಿ ಮುಂಚೆ superior officers and inferior officers ಎಂದು ಕರೆಯಲ್ಪಡುವ ಅಧಿಕಾರಿ ನೌಕರರಿದ್ದರು. ಮುಲ್ಕಿ ಪಾಟೀಲ್, ಪೊಲೀಸ್ ಪಾಟೀಲ್, ಕುಲಕರ್ಣಿ, ದೇಶಪಾಂಡೆ, ಇವರೆಲ್ಲಾ ಸುಪೀರಿಯರ್ ಆಫೀಸರ್ಸ್ ಆಗಿದ್ದರು. ಅವರ ಕೆಳಗೆ ತಳವಾರ, ಕಂಟಿ, ನೀರಗಂಟಿ ಎಂದು inferior officers ಇದ್ದರು. Village Offices Abolition Act ಜಾರಿಗೆ ಬಂದ ಮೇಲೆ ಎಲ್ಲರೂ ಮನೆಗೆ ಹೋದರು. ಸರ್ಕಾರ ಅವರಿಗೆ ಈಗ ಜುಜುಬಿ ಪೆನ್‌ಷನ್ ಕೊಡುತ್ತಿದೆ. ನಿವೃತ್ತಿ ಹೊಂದಿದಂತಹ ಒಂದಷ್ಟು ಜನ ಪೊಲೀಸ್ ಪಾಟೀಲರು ಮೊನ್ನೆ ನನ್ನ ಹತ್ತಿರ ಬಂದು ನಮ್ಮ ಪೆನ್‌ಷನ್ ಹೆಚ್ಚು ಮಾಡಿಸಿ ಎಂದು ಕೇಳಿಕೊಂಡರು. ಪ್ರಸಂಗ ಬಂದಾಗ ಆ ಬಗ್ಗೆ ಹೇಳುತ್ತೇನೆ, ಈಗ ಬೇಡ. Village Offices Abolition Act ಜಾರಿಗೆ ಬಂದ ನಂತರ ಆ ಎಲ್ಲಾ ಪೋಸ್ಟ್‌ಗಳು ಅಬಾಲಿಶ್ ಆಗಿವೆ. ಗೌಡರಿಗೆ, ಪೊಲೀಸ್ ಪಾಟೀಲ್‌ರಿಗೆ ಬ್ರಿಟಿಷ್ ಸರ್ಕಾರದವರು ಜಮೀನು ಕೊಟ್ಟಿದ್ದರು. ತಳವಾರ, ವಾಲೀಕಾರ್‌ರವರಿಗೆ ವಾಲಿಕಾರಿಕೆ ಜಮೀನು ಎಂದು ಕೊಟ್ಟಿದ್ದರು. ನನ್ನ ಊರಿನಲ್ಲೇ ನಾನು ನೋಡುತ್ತಿದ್ದೇನೆ. ಬ್ರಿಟಿಷರು ಪೊಲೀಸ್ ಪಾಟೀಲರಿಗೂ ಜಮೀನು ಕೊಟ್ಟಿದ್ದರು. ಆಮೇಲೆ inferior officers ಆದಂತಹ ತಳವಾರ, ಕಂಟಿ, ನೀರ್‌ಗಂಟಿ ಅವರಿಗೂ Service Inam Land ಎಂದು ಜಮೀನು ಕೊಟ್ಟಿದ್ದರು. ಆದರೆ, ಅವರ ಹುದ್ದೆಗಳೆಲ್ಲಾ Village Offices Abolition Act 6(ಬಿ) ಕೆಳಗೆ ಅಬಾಲಿಶ್ ಆದ ಮೇಲೆ ಸರ್ಕಾರ ಗ್ರಾಮ ಸಹಾಯಕರನ್ನು ಅಪಾಯಿಂಟ್ ಮಾಡಿತು. ಯಾರಾದರೊಬ್ಬ ಸರ್ಕಾರಿ ಅಧಿಕಾರಿ ಗ್ರಾಮಕ್ಕೆ ಬಂದರೆ ಊರಿನಲ್ಲಿರತಕ್ಕಂಥ ಪೊಲೀಸ್

ಪಾಟೀಲ್‌ರು ಅವರನ್ನು ಕರೆದುಕೊಂಡು ಹೋಗಿ ಅವರ ಮನೆಯಲ್ಲಿ ಊಟ ಮಾಡಿಸುವುದು, ಟೀ, ಕಾಫಿ ಕೊಡಿಸುವಂತಹ ವ್ಯವಸ್ಥೆ ಇತ್ತು. ಈಗ ಅವೆಲ್ಲಾ ಅಬಾಲಿಶ್ ಮಾಡಿದ ಕೂಡಲೇ ನಮ್ಮನ್ನೆಲ್ಲಾ ತೆಗೆದು ಹಾಕಿದ್ದಾರೆ ಎಂದು ಅವರು ಹೇಳಿಬಿಟ್ಟರು. ಆಗ ಸರ್ಕಾರಕ್ಕೆ ತೊಂದರೆಯಾಗಿ ಗ್ರಾಮ ಸಹಾಯಕರನ್ನು ನೇಮಿಸಿದರು. ಆದರೆ, ಅವರಿಗೆ ಕೊಡುವಂತಹ ಹಣ ಬಹಳ ಜುಜುಬಿ ಹಣ. ಈಗ 3000 ರೂಪಾಯಿ ಇದ್ದದ್ದನ್ನು 3500 ರೂಪಾಯಿ ಮಾಡಿದ್ದಾರಂತೆ. ಇವತ್ತು Mahatma Gandhi Rural Employment Generation Scheme ಏನಿದೆ, ಅದರ ಅಡಿಯಲ್ಲಿ ಅವರಿಗೆ 155 ರೂಪಾಯಿ ಪ್ರತಿ ದಿವಸ ಸಂಬಳ ಆಗಿದೆ. ದಿನಗೂಲಿ ಮಾಡುವವರಿಗೆ ಪ್ರತಿ ದಿವಸ 155 ರೂಪಾಯಿ ಎಂದರೆ ತಿಂಗಳಿಗೆ 4650 ರೂಪಾಯಿ ಆಯಿತು. ಅವರು ಎಂಟು ಗಂಟೆ ಕೆಲಸ ಮಾಡುತ್ತಾರೆಯೋ, ನಾಲ್ಕು ಗಂಟೆ ಕೆಲಸ ಮಾಡುತ್ತಾರೆಯೋ ಗೊತ್ತಿಲ್ಲ. I do not want to comment on that. ಇವರಿಗೆ 155 ರೂಪಾಯಿ ಕೊಟ್ಟರೆ ತಿಂಗಳಿಗೆ 4650 ರೂಪಾಯಿ ಆಯಿತು. ಈಗಿರುವ ಗ್ರಾಮ ಸಹಾಯಕರು, ಹಿಂದೆ ಇದ್ದಂತಹ ಸುಪೀರಿಯರ್ ಆಫೀಸರ್ ಅವರ ಕೆಲಸವನ್ನೂ ಮಾಡಬೇಕು ಮತ್ತು inferior officers ಅವರ ಕೆಲಸವನ್ನೂ ಮಾಡಬೇಕು. ಹಿಂದೆ ಇದ್ದಂತಹ ಪೊಲೀಸ್ ಪಾಟೀಲರ್, ತಳವಾರರ, ವಾಲಿಕಾರರ ಕೆಲಸ ಈಗಿರುವ ಗ್ರಾಮ ಸಹಾಯಕರು ಮಾಡಬೇಕಾಗಿದೆ. ಎಲ್ಲರ ಕೆಲಸ ಸೇರಿ ಒಬ್ಬ ಗ್ರಾಮ ಸಹಾಯಕರನ್ನು ನೇಮಕ ಮಾಡಿಬಿಟ್ಟಿದ್ದಾರೆ. ಇವರಿಗೆ ಎರಡೂ ಬರ್ಡನ್ ಆಗಿದೆ. ಸುಪೀರಿಯರ್ ಆಫೀಸರ್ ಮತ್ತು inferior officers ಎಲ್ಲಾ ಕೆಲಸ ಇವರೇ ನಿಭಾಯಿಸಬೇಕು. ಅಧಿಕಾರಿಗಳು ಬಂದಾಗ ಅವರಿಗೆ ಟೀ, ಕಾಫಿ ತರುವುದು, ಅಷ್ಟೆಲ್ಲಾ ಅವರ ಸ್ವಂತ ಖರ್ಚಿನಲ್ಲಿ ಮಾಡುವಂತಹ ಪರಿಸ್ಥಿತಿ ಇದೆ. ಊರಿನ ಸಾಹುಕಾರರು, ಪೊಲೀಸ್ ಪಾಟೀಲ್‌ರು ಗ್ರಾಮಕ್ಕೆ ಬಂದಂತಹ ಅಧಿಕಾರಿಗಳನ್ನು ಮನೆಗೆ ಕರೆಯಲಿಲ್ಲವೆಂದರೆ ಆ ಗ್ರಾಮ ಸಹಾಯಕನೇ ವ್ಯವಸ್ಥೆ ಮಾಡಬೇಕು. ಈ 3500 ರೂಪಾಯಿ ಜುಜುಬಿ ಹಣ ಕೊಡುತ್ತಿದ್ದಾರೆ. ಇವತ್ತು ದಿನಗೂಲಿ ಪ್ರತಿ ದಿವಸ 155 ರೂಪಾಯಿ ಎಂದರೆ, ತಿಂಗಳಿಗೆ 4650 ರೂಪಾಯಿ ಆಯಿತು. ಇವರಿಗೆ ನಾವು ಹೆಚ್ಚು ಮಾಡದಿದ್ದರೆ

ಹೇಗೆ? ಸರ್ಕಾರಿ ನೌಕರರನ್ನು ಆದರ ಆತಿಥ್ಯ ಮಾಡುವವರು ಇವರು. ಅವರನ್ನು ಅತಿಥಿಯಂತೆ ಸ್ವೀಕಾರ ಮಾಡಿ ಏನು ಮಾಡಬೇಕು ಅದೆಲ್ಲ ಆ ಮಾಡುತ್ತಾರೆ. ಅಂತಹ ಗ್ರಾಮ ಸಹಯಕರು ಇವತ್ತು ಎರಡು ಜವಾಬ್ದಾರಿಯನ್ನು ಹೊತ್ತಿದ್ದಾರೆ. ಪೊಲೀಸ್ ಪಾಟೀಲ್‌ರ ಜವಾಬ್ದಾರಿ ಅವರದ್ದೇ, ಗ್ರಾಮದಲ್ಲಿರತಕ್ಕಂಥ inferior officers ಜವಾಬ್ದಾರಿ ಅವರದ್ದೇ. ಇಷ್ಟು ಗುರುತರವಾದಂತಹ ಜವಾಬ್ದಾರಿಯನ್ನು ಹೊತ್ತಿರುವಂತಹ ಅವರಿಗೆ ದಿನಗೂಲಿ ನೌಕರರಿಗೆ ಎನ್.ಆರ್.ಇ.ಜಿ. ಯೋಜನೆಯ ಅಡಿಯಲ್ಲಿ ಕೊಡುವಷ್ಟು ದಿನಗೂಲಿ ಕೊಡುವುದಿಲ್ಲವೆಂದರೆ ಬಹಳ ನೋವಿನ ಸಂಗತಿ. ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. 1000 ರೂಪಾಯಿಯನ್ನು ಹೆಚ್ಚು ಮಾಡಿದರೆ ಒಟ್ಟು 12 ಕೋಟಿ ರೂಪಾಯಿ ಸರ್ಕಾರದ ಮೇಲೆ ಹೊರೆ ಆಗುತ್ತದೆ. 3500 ರೂಪಾಯಿ ಇದ್ದದ್ದನ್ನು........

**ಶ್ರೀ ಶಿವರಾಜ ಸಜ್ಜನರ್:–** ತಿಂಗಳಿಗೆ ಅವರ ಸಂಬಳ 5000 ರೂಪಾಯಿ ಮಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಅದನ್ನು ನಾನು ಹೇಳುತ್ತೇನೆ. ಅದನ್ನು ಹೇಳುವುದಕ್ಕೆ ನಾನು ಇನ್ನು ಬಂದಿಲ್ಲ. ಮಾನ್ಯ ಶಿವರಾಜ ಸಜ್ಜನ್‌ರವರೇ, 1000 ರೂಪಾಯಿಯನ್ನು ಹೆಚ್ಚು ಮಾಡಿದರೆ.........

**ಶ್ರೀ ಶಿವರಾಜ ಸಜ್ಜನರ್:–** 1000 ರೂಪಾಯಿಯನ್ನು ಹೆಚ್ಚು ಮಾಡಿದರೆ 12 ಕೋಟಿ ರೂಪಾಯಿಗಳಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** 1000 ರೂಪಾಯಿಯನ್ನು ಹೆಚ್ಚು ಮಾಡಿದರೆ 12 ಕೋಟಿ ರೂಪಾಯಿಗಳಾಗುತ್ತದೆ. 1500 ರೂಪಾಯಿ ಹೆಚ್ಚು ಮಾಡಿದರೆ 18 ಕೋಟಿ ರೂಪಾಯಿಗಳಾಗುತ್ತದೆ. 3500 ರೂಪಾಯಿಗಳನ್ನು ಕನಿಷ್ಟ 5000. It is an honorarium. ಅವರಿಗೆ ಸಂಬಳ ಅಲ್ಲ. ಅದಕ್ಕೆ ಗೌರವಧನ ಎಂದು ಹೇಳಬೇಕು. ಅದೂ ಕೂಡ ಜುಜುಬಿ ಹಣ. ಇವತ್ತು 5000 ರೂಪಾಯಿಯಲ್ಲಿ ಏನು ಬರುತ್ತದೆ? ಒಂದು ಲಕ್ಷದ ಮೂರು ಸಾವಿರ ಕೋಟಿ ಬಜೆಟ್‌ನಲ್ಲಿ ಇಷ್ಟು ಕೊಡುವುದಿಲ್ಲವೆಂದರೆ ಹೇಗೆ? ಮಾನ್ಯ

ಸದಾನಂದಗೌಡರು ಒಂದು ಲಕ್ಷ ಕೋಟಿ ಬೇಡ ಎಂದು ಇನ್ನೂ ಎರಡು– ಮೂರು ಸಾವಿರ ಹೆಚ್ಚಿಗೆ ಮಾಡೋಣವೆಂದು ಒಂದು ಲಕ್ಷದ ಮೂರು ಸಾವಿರ ಕೋಟಿಯ ಬಜೆಟ್ ಮಂಡಿಸಿದ್ದಾರೆ. ಇಡೀ ರಾಜ್ಯದಲ್ಲಿರತಕ್ಕಂಥ ಎಲ್ಲಾ ಗ್ರಾಮೀಣ ವ್ಯವಸ್ಥೆಯಲ್ಲಿ ಬರತಕ್ಕಂಥ ಎಲ್ಲಾ ಹಿರಿಯ ಐ.ಎ.ಎಸ್. ಅಧಿಕಾರಿಯಿಂದ ಹಿಡಿದು ಎಲ್ಲಾ ಅಧಿಕಾರಿಗಳಿಗೂ ಇವರು ಸೇವೆಯನ್ನು ಮಾಡಬೇಕು. ಅವರಿಗೆ ಗೌರವಯುತವಾಗಿ ಅತಿಥಿ ಸತ್ಕಾರ ಏನು ಮಾಡಬೇಕು ಅವೆಲ್ಲಾ ಮಾಡಬೇಕು. ನನ್ನ ದೃಷ್ಟಿಯಲ್ಲಿ ಅಂಥವರಿಗೆ 5,000 ಅಲ್ಲ, 10,000 ರೂಪಾಯಿ ಕೊಟ್ಟರೂ ಕಡಿಮೆ. ಮಾನ್ಯ ಕಾಗೇರಿಯವರೇ, 10,000 ರೂಪಾಯಿಯಲ್ಲಿ ಏನಿದೆ. now-a-days what is the value of ten thousand rupees? ಅದರಲ್ಲಿ ಏನು ಇಲ್ಲವೇ ಇಲ್ಲ. ಅವರು ಮಾಡುತ್ತಿರುವ ಸೇವೆಗೆ ಹೋಲಿಸಿದರೆ ಈ ಹಣ ಕೂಡ ಕಡಿಮೆಯೆಂದು ಹೇಳಬಹುದು. ಊರಿಗೆ ಬಂದಂತಹ ಅತಿಥಿಗಳನ್ನು ಸತ್ಕಾರ ಮಾಡಬೇಕು. ಈಗ ಯಾವುದಾದರೊಂದು ಹಳ್ಳಿಗೆ ಹೋದರೆ, ನಮ್ಮ ಗೌಡಕಿಯನ್ನು ತೆಗೆದು ಬಿಟ್ಟಿದ್ದೀರಿ, ನಮ್ಮ ಪೊಲೀಸ್ ಪಾಟೀಲ್‌ರ ಕೆಲಸವನ್ನು ಕಸಿದುಕೊಂಡುಬಿಟ್ಟಿದ್ದೀರಿ, ಹೋಗಿ ಮತ್ತೆ ಅದೆಲ್ಲಿ ಹೋಗುತ್ತೀರಿ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ನಾನು ಒಂದು ಕುಗ್ರಾಮದ ಹಳ್ಳಿಯಲ್ಲಿರುವವನು. ಅಲ್ಲಿರುವ ವ್ಯವಸ್ಥೆಯನ್ನು ನೋಡಿ ನಾನು ಹೇಳುತ್ತಿದ್ದೇನೆ. ಯಾವನೋ ಗ್ರಾಮ ಸಹಾಯಕನನ್ನು ಅಪಾಯಿಂಟ್ ಮಾಡಿದ್ದೀರಲ್ಲಾ ಅವನ ಮನೆಗೆ ಹೋಗಿ ಅಲ್ಲೆ ಚಹಾ ಕುಡಿಯಿರಿ ಎಂದು ಹೇಳುವಂತಹ ಪರಿಸ್ಥಿತಿ ಬಂದಿದೆ. ಆ ದೃಷ್ಟಿಯಿಂದ ತಮ್ಮ ಮುಖಾಂತರ ನಾನು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಸರ್ಕಾರದ ಗಮನವನ್ನು ಸೆಳೆಯುವಂತಹ ಸೂಚನೆ ಮುಖಾಂತರ ಈ ರಾಜ್ಯದಲ್ಲಿರತಕ್ಕಂಥ 10,000 ಗ್ರಾಮ ಸಹಾಯಕರಿಗೆ ಅವರ ಗೌರವಧನವನ್ನು ಹೆಚ್ಚು ಮಾಡುವುದಕ್ಕೆ ಏನು ಮನವಿ ಮಾಡಿದ್ದಾರೆ ಅದು ಬಹಳ ಯೋಗ್ಯವಾದದ್ದು. ಕನಿಷ್ಟ 5,000 ರೂಪಾಯಿಗಳನ್ನು ಅವರಿಗೆ ಕೊಡಬೇಕು. ಈ ಸರ್ಕಾರಕ್ಕೆ ಹೃದಯ ವೈಶಾಲ್ಯತೆ ಎಷ್ಟಿದೆ ಅದರ ಮೇಲೆ ನಿರ್ಣಯ ತೆಗೆದುಕೊಳ್ಳಿ.

**ಸಭಾಪತಿಯವರು:–** ಮಾನ್ಯ ಶಿವರಾಜ ಸಜ್ಜನರ್‌ರವರೇ, ತಾವು ಎರಡು ನಿಮಿಷದಲ್ಲಿ ಮುಗಿಸಬೇಕು.

**ಶ್ರೀ ಶಿವರಾಜ ಸಜ್ಜನರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಗ್ರಾಮೀಣ ಭಾಗದಲ್ಲಿ ಗ್ರಾಮ ಸಹಾಯಕರ ಸೇವೆ ಬಹಳ ಪ್ರಮುಖವಾಗಿರುವಂಥದ್ದು. ಅನೇಕ ವರ್ಷಗಳಿಂದ ನಮ್ಮ ಊರಿನಲ್ಲಿ ಚಾಕ್ರೀ ಮನೆತನ ಎಂದು ಇತ್ತು. ಅವನು ಗ್ರಾಮ ಸಹಾಯಕನಾಗಿದ್ದ. ಅಂದರೆ, ಮಂದಿಯ ಚಾಕ್ರೀ ಮಾಡುವುದೇ ಅವರ ಉದ್ಯೋಗ. ಅಂದರೆ, ಅವನ ಹೆಸರು ಅಡ್ರೆಸ್ ಕೂಡ ಚಾಕ್ರೀ ಎಂದು ಇತ್ತು. ಹೀಗಾಗಿ ಈ ಗ್ರಾಮ ಸಹಾಯಕರು ಗ್ರಾಮೀಣ ಭಾಗದಲ್ಲಿ ಸರ್ಕಾರಿ ಕೆಲಸದಲ್ಲಿ ಸಂಪೂರ್ಣವಾದಂತಹ ದೊಡ್ಡ ಸಹಾಯವನ್ನು ಇವತ್ತಿಗೂ ಕೂಡ ಮಾಡುತ್ತಿದ್ದಾರೆ. ಅವರ ಬದುಕು ಬಹಳ ಕೆಳಮಟ್ಟದಲ್ಲಿದೆ. ನಮ್ಮ ಶಾಸಕರು ಹೇಳಿದ ಹಾಗೆ ಇವತ್ತು ಬಹುತೇಕವಾಗಿ ಈ ಗ್ರಾಮ ಸಹಾಯಕರ ಹುದ್ದೆಗೆ ಎಸ್.ಸಿ. ಮತ್ತು ಎಸ್.ಟಿ. ಜನಂಗದವರು ನೇಮಿಸಲ್ಪಟ್ಟಿದ್ದಾರೆ. ಎಸ್.ಟಿ. ಜನಾಂಗದವರು ಹೆಚ್ಚಿಗೆ ಅಲ್ಲಿದ್ದಾರೆ. ಹಾಗಾಗಿ ಅವರ ಆರ್ಥಿಕ ಸುಧಾರಣೆ ಆಗಬೇಕೆಂದರೆ ಅವರು ಐದು ಸಾವಿರ, ಹತ್ತು ಸಾವಿರ ಎಂದು ಹೇಳಿದ್ದಾರೆ. ಆದರೆ ಅವರ ಆರ್ಥಿಕ ಸುಧಾರಣೆ ಆಗಲು ಕನಿಷ್ಟ ಐದು ಸಾವಿರ ಆಗಲೇಬೇಕು. ಏಕೆಂದರೆ ಮೂರುವರೆ ಸಾವಿರ ರೂಪಾಯಿಗಳಲ್ಲಿ ಯಾವುದೇ ಮನೆತನ ನಿರ್ವಹಣೆ ಮಾಡಲು ಸಾಧ್ಯವಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಒಬ್ಬ ಕೂಲಿಕಾರ ಕನಿಷ್ಟ ಪಗಾರ 200 ರೂಪಾಯಿಗಳನ್ನು ಪಡೆದುಕೊಳ್ಳುತ್ತಿದ್ದಾನೆ. ಕೆಲವು ಸಂದರ್ಭದಲ್ಲಿ 300–400 ರೂಪಾಯಿಗಳು ಸಿಗುತ್ತಿದೆ. ಒಂದು ಟನ್ ಕಬ್ಬು ಕಟಾವು ಮಾಡಿದರೆ 400–450 ರೂಪಾಯಿಗಳು ಸಿಗುತ್ತಿದೆ. ಕನಿಷ್ಟ ವೇತನವೇ 4560 ರೂಪಾಯಿಗಳು ಇರುವುದರಿಂದ, ಗ್ರಾಮ ಸಹಾಯಕರಿಗೆ 5 ಸಾವಿರ ರೂಪಾಯಿ ಮಾಡಬೇಕು. ಅವರು ನಿವೃತ್ತಿ ಹೊಂದಿದಾಗ 1 ಲಕ್ಷ ರೂಪಾಯಿಗಳು ಮುಂದಿನ ಕುಟುಂಬದ ನಿರ್ವಹಣೆಗೆ ಸಿಗುವಂತಾಗಬೇಕು. ಮಾನ್ಯ ಸಭಾನಯಕರು ಇಲ್ಲಿ ಇಲ್ಲ. ಅವರ ಪರವಾಗಿ ಮಾನ್ಯ ಕಾಗೇರಿಯವರು ಇದ್ದಾರೆ. ಇದನ್ನು ಈಗಲೇ ಘೋಷಣೆ ಮಾಡಬೇಕು.

ಅವರ ವೇತನ 5 ಸಾವಿರ ರೂಪಾಯಿಗಳು ಆಗಬೇಕು ಮತ್ತು ನಿವೃತ್ತಿ ಹೊಂದಿದ ತಕ್ಷಣ 1 ಲಕ್ಷ ರೂಪಾಯಿಗಳು ಸಿಗುವಂತೆ ಆಗಬೇಕು. ಇದರ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ, ಮಾನ್ಯ ಸಭಾಪತಿಯವರು ಎಲ್ಲರಿಗೂ ಅವಕಾಶ ಕೊಟ್ಟಿದ್ದಾರೆ. ಇಷ್ಟೆಲ್ಲಾ ಜನರಿಗ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಸಚಿವರು ಈಗಲೇ ಘೋಷಣೆ ಮಾಡಬೇಕೆಂದು ವಿನಂತಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರೆಲ್ಲರೂ ಮಾತನಾಡಿದ್ದು, ನಾನು ಒಬ್ಬ ವಿಧಾನ ಪರಿಷತ್ ಸದಸ್ಯನಾಗಿ ಮಾತನಾಡು ಎಂದಿದ್ದರೆ ನಾನೂ ಅವರ ಜೊತೆ ಅದೇ ರೀತಿ ಮಾತನಾಡುತ್ತಿದ್ದೆನು. ಎಲ್ಲರ ಅಭಿಪ್ರಾಯವೂ ಒಂದೇ ಇದೆ. ಈ ರೀತಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗಗಳಿಗೆ ಮಾನವೀಯತೆ ಕಾರಣದಿಂದ ಸ್ಪಂದಿಸಲೇಬೇಕಾದ ಅಗತ್ಯತೆ ಇದೆ ಎಂಬುದರಲ್ಲಿ ಎರಡು ಮಾತೇ ಇಲ್ಲ. ಅದರ ಬಗ್ಗೆ ಪ್ರಶ್ನೆಯೇ ಇಲ್ಲ. 10,450 ಜನ ಗ್ರಾಮ ಸೇವಕರು ಶ್ರಮ ವಹಿಸಿ ಕಷ್ಟದ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರು ಸಾಮಾಜಿಕ ಮತ್ತು ಆರ್ಥಿಕವಾಗಿ ಬಡತನದಲ್ಲಿದ್ದಾರೆ. ನಾವೆಲ್ಲರೂ ಅವರ ಕಷ್ಟಗಳನ್ನು ಅರಿತಿದ್ದು, ಸಹಜವಾಗಿ ಅವರ ಪರವಾದ ನಿರ್ಣಯ ತೆಗೆದುಕೊಳ್ಳಬೇಕೆಂಬ ಇದೀಚ್ಛೆ ನಮ್ಮೆಲ್ಲರಲ್ಲಿಯೂ ಇದ್ದೇ ಇರುತ್ತದೆ. ನಾವು ಈಗ ಗ್ರಾಮ ಸೇವಕರ ಬಗ್ಗೆ ಮಾತನಾಡಿದಂತೆ ನಾಳೆ ಇನ್ನೊಂದು ರೂಪದಲ್ಲಿ ಇದೇ ರೀತಿ ಕೆಲಸ ಮಾಡುವವರು ಇದ್ದಾರೆ. ಈಗ ಬಿಸಿ ಊಟದ ಸಹಾಯಕ ಅಡುಗೆಯವರ ಬಗ್ಗೆ ಯಾರಾದರೂ ವಿಷಯವನ್ನು ಪ್ರಸ್ತಾಪಿಸಿದ್ದಾರೆಯೇ? ನನ್ನ ಇಲಾಖೆಯಲ್ಲಿ ಒಂದು ಲಕ್ಷ ಜನ ಅಡುಗೆಯವರಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಬಿಸಿಯೂಟ ಪ್ರಾರಂಭವಾಗಿ 33 ವರ್ಷಗಳು ಕಳೆದಿಲ್ಲ. ಇದು ಬಹಳ ಹಿಂದಿನ ಘಟನೆ.

**ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ:–** 13 ಸಾವಿರ ದಿನಗೂಲಿ ನೌಕರರ ಸಮಸ್ಯೆ ಎಷ್ಟಿದೆ ಎಂದು ಎಲ್ಲರಿಗೂ ಗೊತ್ತು. ಅಂಗನವಾಡಿ ಕೆಲಸ

ಮಾಡುವವರು ಇದ್ದಾರೆ. ನಾವು ಬೇಸಿಕ್ ಎಲ್ಲವನ್ನು ಸೇರಿಸಿಕೊಂಡು ಸುಮಾರು 4 ಸಾವಿರ ಎಂದು ಮಾಡಿದ್ದಾಗಿದೆ. ಅವರ ಬೇಸಿಕ್ ಮೂರುವರೆ ಸಾವಿರ ರೂಪಾಯಿಗಳು ಇದೆ. ಮಾನ್ಯ ನಾಣಯ್ಯನವರು ಸರಿಯಾದ ರೀತಿಯಲ್ಲಿ ಹೇಳಿದರು. ಮೊನ್ನೆ ಶೇಕಡ 22 ಎಂದು 6 ವೇತನ ಆಯೋಗ ಎಂದು ಸರಳವಾಗಿ ಆಗುತ್ತದೋ, ಆ ರೀತಿ ಧ್ವನಿ ಇವರಿಗೆ ಇಲ್ಲ. ಆ ಧ್ವನಿಯಿಲ್ಲದವರಿಗೆ ಧ್ವನಿ ಕೊಡಬೇಕಾದ್ದು ನಮ್ಮೆಲ್ಲರ ಜವಾಬ್ದಾರಿ ಆಗಬೇಕೆಂದು ಅನೇಕ ಸಾರಿ ಹೇಳಿದ್ದೇನೆ. ನಮಗೆ ವ್ಯವಸ್ಥೆಯಲ್ಲಿ ಅನೇಕ ಕಷ್ಟಕಾರ್ಪಣ್ಯಗಳು ಇವೆ ಎಂದು ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ನಾವೆಲ್ಲರೂ ಒಟ್ಟಾದಂತಹ ನಮ್ಮಗಳ ಧ್ವನಿಯನ್ನು ಕ್ರೋಢೀಕರಿಸಿ, ಧ್ವನಿಯಿಲ್ಲದೇ ಕೆಲಸ ಮಾಡುತ್ತಿರುವವರಿಗೆ ಧ್ವನಿ ಕೊಡಬೇಕಾದ ಅವಶ್ಯಕತೆ ಇದೆ ಮತ್ತು ಅವರಿಗೆ ಮಾನವೀಯ ಕಾರಣದಿಂದ ಹಾಗೂ ಅವರ ಕೌಟುಂಬಿಕ, ಸಾಮಾಜಿಕ ಹಿನ್ನೆಲೆಯಲ್ಲಿ ಅವರ ಬಗ್ಗೆ ತೆಗೆದುಕೊಳ್ಳಬೇಕಾದ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿರುವುದು ಇದ್ದೇ ಇದೆ. ಕಷ್ಟದ ಬಗ್ಗೆ ನಾನು ಹಿಂದಿನ ಸರ್ಕಾರ ಮತ್ತು ಈಗಿನ ಸರ್ಕಾರ ಎಂದು ಹೇಳುವುದಿಲ್ಲ. ಹಿಂದೆ ನೂರು ಅಥವಾ ಇನ್ನೂರು ರೂಪಾಯಿಗಳಿಂದ 2007ರಲ್ಲಿ 2 ಸಾವಿರ ರೂಪಾಯಿಗಳನ್ನು ಹೆಚ್ಚಿಸಿದ್ದು, 2009ರಲ್ಲಿ 3 ಸಾವಿರ ರೂಪಾಯಿಗಳು ಹೆಚ್ಚಾಗಿದೆ. ಅಂದರೆ ಹಿಂದಿನ ಸರ್ಕಾರ ಹಾಗೂ ನಾವು ಹೇಗೆ ಸ್ಪಂದಿಸಿಕೊಂಡು ಬಂದಿದ್ದೇವೆ ಎಂಬ ಬಗ್ಗೆ ಹೇಳುತ್ತಿದ್ದೇನೆ. 2011ರಲ್ಲಿ ಮೂರುವರೆ ಸಾವಿರ ರೂಪಾಯಿಗಳು ಹೆಚ್ಚಾಗಿದೆ. ಅದನ್ನು 500 ರೂಪಾಯಿ, 1000 ರೂಪಾಯಿ ಹೆಚ್ಚು ಮಾಡಬೇಕೋ ಎಂಬುದರಲ್ಲಿ ಭಿನ್ನಾಭಿಪ್ರಾಯ ಬರುವುದಕ್ಕೆ ಸಾಧ್ಯವಿಲ್ಲ. ಈ ಎಲ್ಲಾ ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಇಂತಹ ವಿಷಯಗಳಲ್ಲಿ ಅವರು ಯಾವುದೇ ರೀತಿಯ ಭಿನ್ನಾಭಿಪ್ರಾಯದ ಮಾತುಗಳನ್ನು ಆಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಸ್ವತಃ ಹಣಕಾಸಿನ ಸಚಿವರಾಗಿ ಲಕ್ಷದ ಎರಡು ಸಾವಿರ ಕೋಟಿಗೂ ಮೀರಿ ಬಜೆಟ್ ಮಂಡಿಸಿರುವವರಾಗಿದ್ದಾರೆ. ಹಾಗಾಗಿ ನಿಶ್ಚಿತವಾಗಿ ಈ ರೀತಿಯ ಸಮೂಹಕ್ಕೆ ಸಹಾಯ ಮಾಡಲು ಮುಕ್ತ ಮನಸ್ಸಿನಿಂದ ಮಾತನಾಡುತ್ತೇನೆ. ಅವರು

ಹಣಕಾಸಿನ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡುತ್ತಾರೆ. ನಾವು ನಿಶ್ಚಿತವಾಗಿ ಇಂತಹವರಿಗೆ ಧ್ವನಿಯಾಗಲು ಪ್ರಯತ್ನ ಮಾಡುತ್ತೇವೆ. ಇದನ್ನು ಇಲ್ಲಿಗೆ ಹೇಳಿ, ಇನ್ನೊಂದು ಸಂಗತಿಯನ್ನು ನಾವು ಯೋಚಿಸಬೇಕಾದ ಅಗತ್ಯತೆ ಇದೆ. ಅದೇನೆಂದರೆ ನಮ್ಮ ಆಡಳಿತಾತ್ಮಕ ಒಟ್ಟು ವೆಚ್ಚ ಎಷ್ಟಾಗುತ್ತಿದೆ? ಇದನ್ನು ಯೋಚಿಸಿದಾಗ ಜನಪರವಾದ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಏನು ಮಾಡಬೇಕು? ಅದಕ್ಕೆ ಯಾವ್ಯಾವ ರೀತಿ ತೊಂದರೆ ತೊಡಕುಗಳು ಆಗುತ್ತಿವೆ ಎಂದು ಯೋಚಿಸಬೇಕಾಗುತ್ತದೆ. ಇದನ್ನು ಹೆಚ್ಚು ಮಾಡಲೇಬೇಕಾದದ್ದು. ಆದರೆ ಇನ್ನೆಲ್ಲಿ ಸ್ವಲ್ಪ ತಡೆದುಕೊಳ್ಳಬಹುದು, ಅಂತಹ ಸಮೂಹದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರ ಬಗ್ಗೆ ಯೋಚಿಸಬೇಕಾದ ಅವಶ್ಯಕತೆ ಇದೆ. ಆ ವಿಷಯ ಈಗ ಪ್ರಸ್ತುತ ಅಲ್ಲ. ಆದರೆ ಗ್ರಾಮ ಸಹಾಯಕರು ಬಹಳ ಒಳ್ಳೆಯ ಕೆಲಸಗಳನ್ನು ನೆಲಮಟ್ಟದಲ್ಲಿ ಮಾಡುತ್ತಿದ್ದಾರೆ. ಸರ್ಕಾರದ ಕೆಲಸ ಕಾರ್ಯಗಳನ್ನು ಮಾಡುತ್ತಿರುವವರಿಗೆ ಗೌರವ ಪೂರ್ವಕವಾಗಿ ಅಭಿನಂದಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇನೆ, ಅವರೂ ಸಹ ಹಣಕಾಸಿನ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡಬೇಕಾಗುತ್ತದೆ. ಈ ವರ್ಷ ಎಷ್ಟು ಹೆಚ್ಚಿಸಲು ಸಾಧ್ಯವಿದೆ, ಇತ್ಯಾದಿಗಳ ಬಗ್ಗೆ ಸಮಾಲೋಚನೆ ಮಾಡಿಕೊಂಡು ಬಜೆಟ್ ಉತ್ತರವನ್ನು ಕೊಡುವಾಗ ಅಥವಾ ಮುಂದಿನ ದಿನಗಳಲ್ಲಿ ಸೂಕ್ತವಾದ ನಿರ್ಣಯ ತೆಗೆದುಕೊಳ್ಳಲು ಪ್ರಾಮಾಣಿಕವಾಗಿ ಮಾಡುತ್ತೇನೆ. ಮಾನ್ಯ ಸಭಾಪತಿಯವರು ಅವರ ಧ್ವನಿಯನ್ನು ಸೇರಿಸಿ ಹೇಳಿದ್ದಾರೆ. ನಮ್ಮೆಲ್ಲರ ಪ್ರಯತ್ನವನ್ನು ಆ ದಿಕ್ಕಿನಲ್ಲಿ ಮಾಡೋಣ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು. ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಯವರೆಗೆ ಮುಂದೂಡುತ್ತೇನೆ.

**(ಸದನವು ಸಂಜೆ 7 ಗಂಟೆ 37 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 28ನೇ ಮಾರ್ಚ್ ಮಾಹೆ 2012ರ ಬುಧವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)**